ಕನ್ನಡದಲ್ಲಿ ಮಕ್ಕಳ ಸಾಹಿತ್ಯ:
ಅಭಿವ್ಯಕ್ತಿಯ ತಾತ್ವಿಕ ಸ್ವರೂಪ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಪಿಎಚ್.ಡಿ.
ಪದವಿಗಾಗಿ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು

ೇಡಿದಾರ ಗುರುರಾಜ ಗಂಗಪ್ಪ

ರ ಪದವಿ ಪೂರ್ವ ಮಹಾವಿದ್ಯಾಲಯ,
ತಾ॥ ಸಿಂದಗಿ ಜಿ॥ ವಿಜಯಪುರ
ರಣಿ ಸಂಖ್ಯೆ : 141301020014

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ಮುಖ್ಯಸ್ಥರು, ಕನ್ನಡ ವಿಭಾಗ
ನಿರ್ದೇಶಕರು, ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ. ತಾ. ರಾಯಬಾಗ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ
ನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೯

ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ಸ್ವರೂಪ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಪಿಎಚ್.ಡಿ.
ಪದವಿಗಾಗಿ ಸಾದರಪಡಿಸಿದ ಸಂಶೋಧನ ಮಹಾಪ್ರಬಂಧ

ಸಂಶೋಧಕರು

ಮೇಡಿದಾರ ಗುರುರಾಜ ಗಂಗಪ್ಪ

ಶ್ರೀ ಬಸವೇಶ್ವರ ಪದವಿ ಪೂರ್ವ ಮಹಾವಿದ್ಯಾಲಯ,
ಕಲಕೇರಿ ತಾ॥ ಸಿಂದಗಿ ಜಿ॥ ವಿಜಯಪುರ
ನೋಂದಣಿ ಸಂಖ್ಯೆ : 141301020014

ಮಾರ್ಗದರ್ಶಕರು

ಡಾ. ವ್ಹಿ. ಎಸ್. ಮಾಳಿ

ಮುಖ್ಯಸ್ಥರು, ಕನ್ನಡ ವಿಭಾಗ
ನಿರ್ದೇಶಕರು, ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ. ತಾ. ರಾಯಬಾಗ ಜಿ. ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೯

ಪ್ರಮಾಣ ಪತ್ರ

'ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ಸ್ವರೂಪ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ವ್ಹಿ. ಎಸ್. ಮಾಳಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. **ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 25-11-2019

ಮೇಡಿದಾರ ಗುರುರಾಜ ಗಂಗಪ್ಪ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ.

ದೃಢೀಕರಣ ಪತ್ರ

ಮೇಟಿದಾರ ಗುರುರಾಜ ಗಂಗಪ್ಪ ಇವರು **'ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ಸ್ವರೂಪ'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ **ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : 25-11-2015

ಡಾ. ವ್ಹಿ. ಎಸ್. ಮಾಳಿ
ಮಾರ್ಗದರ್ಶಕರು,
ಶ್ರೀ ಬಿ. ಆರ್. ದರೂರ
ಸಂಶೋಧನ ಕೇಂದ್ರ, ಹಾರೂಗೇರಿ

• ಪರಿವಿಡಿ •

ಅಧ್ಯಾಯ : ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ – ೧
ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧ ಪ್ರವೇಶ :

ವೇದಗಳ ಕಾಲದಲ್ಲಿ ಮಕ್ಕಳ ಬದುಕನ್ನು ಕಟ್ಟಿಕೊಡುವ, ರೂಪಿಸುವ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನು ಪೂರ್ಣಗೊಳಿಸುವ ಸಮಯವಾಗಿತ್ತು. ಸ್ವತಂತ್ರ ಜೀವನ, ವಿಶಾಲದೃಷ್ಟಿ, ತತ್ವಜ್ಞಾನಗಳಂತಹ ಗಂಭೀರ ವಿಷಯಗಳಿಗೆ ಸತ್ಯಕಾಮ, ನಚಿಕೇತರಂತಹ ಮಕ್ಕಳನ್ನು ಉದಾಹರಣೆಯಾಗಿ ನೋಡಬಹುದು. ಇಲ್ಲಿಯೂ ಮಕ್ಕಳು ಸಹ ಜಿಜ್ಞಾಸೆ, ದಿವ್ಯಜ್ಞಾನದ ಬೆಳಕಿನಲ್ಲಿ ತಾತ್ವಿಕ ವಿಷಯಗಳ ಪ್ರತಿಪಾದಕರಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ. ಸಾಮಾಜಿಕ ಮತ್ತು ಕೌಟುಂಬಿಕ ಪ್ರಸಂಗಗಳಲ್ಲಿ ಮಗು ನಿರ್ವಹಿಸಬೇಕಾದ ಕೆಲಸ ಕಾರ್ಯಗಳನ್ನು ತಿಳಿಯಪಡಿಸುವ ಮೂಲಕ ಮಕ್ಕಳ ಮನಸ್ಸನ್ನು ಅರಳಿಸಿ, ಮಕ್ಕಳ ವ್ಯಕ್ತಿತ್ವ ನಿರ್ಮಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿರುವುದು ಮಕ್ಕಳ ಸಾಹಿತ್ಯ. ಇದು ಮಾನವನ ಚರಿತ್ರೆಯಲ್ಲಿ ಪೂರ್ಣವಾಗಿ ವ್ಯಾಪಿಸಿಕೊಂಡು ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಾಹಿತ್ಯ ಎಂಬ ಹೆಸರಿನಲ್ಲಿ ಸಾಹಿತ್ಯ ರೂಪತಾಳಿ ಬೆಳೆದುಬರುತ್ತಿರುವುದು, ತಮ್ಮನ್ನು ಮಕ್ಕಳ ಕವಿಯೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕವಿವರ್ಗ ಸೃಷ್ಟಿಯಾಗಿರುವುದು ಆರೋಗ್ಯಕರ ಲಕ್ಷಣವಾಗಿದೆ. ಇದು ಮಕ್ಕಳ ಸಾಹಿತ್ಯದ ದೃಷ್ಟಿಯಿಂದ ಉತ್ತಮವಾದುದು. ಆಧುನಿಕ ಸಾಹಿತ್ಯದ ಉಗಮದೊಂದಿಗೆ ಕನ್ನಡ ಸಾಹಿತ್ಯದಲ್ಲಿ ಅನೇಕ ಸಾಹಿತ್ಯ ರೂಪಗಳು ಜನ್ಮ ತಳೆದಿವೆ. ಅವುಗಳಲ್ಲಿ ಮಕ್ಕಳ ಸಾಹಿತ್ಯವು ಒಂದು. ಮಗುವಿನ ಮುಗ್ಧ ಮನಸ್ಸನ್ನು ಹೂವಿನಂತೆ ಅರಳಿಸಿ ಸಮಾಜದಲ್ಲಿ ಅವರ ವ್ಯಕ್ತಿತ್ವವನ್ನು ಸ್ಥಾಪಿಸುವಲ್ಲಿ ಮಕ್ಕಳ ಸಾಹಿತ್ಯವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಮಗುವಿನ ವ್ಯಕ್ತಿತ್ವ ವಿಕಸನ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುವುದು. ಮಕ್ಕಳ ಸಾಹಿತ್ಯ ಕನ್ನಡದಲ್ಲಿ ಯುರೋಪಿಯನ್ನರ ಆಗಮನ ಮತ್ತು ಪ್ರಭಾವ ಬೀರುವ ಮೊದಲು ವೇದ, ಉಪನಿಷತ್ತು, ರಾಮಾಯಣ, ಮಹಾಭಾರತಗಳಲ್ಲಿ ಕಂಡುಬರುವ ಘಟನೆಗಳನ್ನು ಮಕ್ಕಳಿಗೆ ಕಥೆಗಳಾಗಿ ಹೇಳಲಾಗುತ್ತಿತ್ತು. ಅದೇ ರೀತಿಯಾಗಿ ಮೌಖಿಕ ಪರಂಪರೆಯಲ್ಲಿದ್ದ ಜನಪದ ಕಥೆಗಳನ್ನು ಮಕ್ಕಳಿಗೆ ಹೇಳಿಕೊಡುವ ಪ್ರಸಂಗಗಳು ಹೇರಳವಾಗಿ ಸಿಗುತ್ತವೆ. ಪ್ರಾಚೀನ ಕಾಲದಲ್ಲಿ ಮಕ್ಕಳ ಸಾಹಿತ್ಯ ರಚನೆಗೊಂಡಿದ್ದರೂ ಅದನ್ನೊಂದು

ವಿಭಿನ್ನ ರೂಪವಾಗಿ ನೋಡಲಾಗಲಿಲ್ಲ. ಪಾಶ್ಚಿಮಾತ್ಯರ ಆಗಮನದಿಂದ ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ದೊರೆಯಿತೆಂದು ಹೇಳಲೇಬೇಕು.

ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಪಡೆದುದು ಸಣ್ಣ ಕಥೆಗಳು. ನೀತಿ ಕಥೆಗಳು ಪ್ರಾಚೀನ ಕಾಲದಲ್ಲಿ ನಿರೂಪಿಸಲ್ಪಟ್ಟವು ಎಂಬುದು ಗಮನಿಸಬೇಕಾದ ಸಂಗತಿ. ಪಾಶ್ಚಾತ್ಯರು ನಮ್ಮ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರಿ ಕೆಲವೊಂದು ಬದಲಾವಣೆಗಳನ್ನು ತಂದರು. ಇದರಿಂದಾಗಿ ಮಕ್ಕಳ ಸಾಹಿತ್ಯದಲ್ಲಿ ಹೊಸ ಶಿಕ್ಷಣ ನೀತಿ, ಕ್ರಮಗಳು ಜಾರಿಗೆ ಬಂದವು. ಭಾರತವನ್ನು ಬ್ರಿಟೀಷರು ತಮ್ಮ ಹಿಡಿತದಲ್ಲಿ ತೆಗೆದುಕೊಂಡು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಗಳನ್ನು ಮಾಡಿದರು. ಮಕ್ಕಳಿಗಾಗಿ ಪ್ರತ್ಯೇಕವಾಗಿ ಶಾಲೆಗಳು, ಪಠ್ಯ-ಪುಸ್ತಕಗಳು ರಚನೆಯಾಗತೊಡಗಿದವು. ಶಿಕ್ಷಕರು, ಲೇಖಕರು ಮಕ್ಕಳಿಗಾಗಿಯೇ ಉತ್ತಮ ಪುಸ್ತಕಗಳನ್ನು ರಚಿಸಲು ಪ್ರಯತ್ನಿಸಿದರು. ಇದರಿಂದಾಗಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಹಲವಾರು ಮಹನೀಯರು ಉತ್ತಮ ಕೆಲಸ ಮಾಡಿದ್ದಾರೆ. ಅಂಥವರಲ್ಲಿ ಚ. ವಾಸುದೇವಯ್ಯ, ಎಂ. ಎಸ್. ಪುಟ್ಟಣ್ಣ, ಎಸ್. ಜಿ. ನರಸಿಂಹಾಚಾರ್, ಶಾಂತಕವಿಗಳು, ವೆಂಕಟರಂಗೋ ಕಟ್ಟಿ, ಡೆಪ್ಯೂಟಿ ಚನ್ನಬಸಪ್ಪ, ಗೋವಿಂದ ಪೈ, ಕಡಂಗೋಡ್ಲು ಶಂಕರಭಟ್ಟ, ಶಿವರಾಮ ಕಾರಂತ, ಪಂಜೆಮಂಗೇಶರಾಯ ಮೊದಲಾದವರು. ಈ ಎಲ್ಲ ಮಹನೀಯರ ಬರಹಗಳು ಪಠ್ಯ ರೂಪದಲ್ಲಿ ಬಳಕೆಯಲ್ಲಿ ಬಂದವು. ಕ್ರೈಸ್ತ ಮಿಶನರಿಗಳು ತಮ್ಮ ಕ್ರೈಸ್ತ ಧರ್ಮ ಪ್ರಚಾರಕ್ಕಾಗಿ ಶಿಕ್ಷಣವನ್ನು ಮಾಧ್ಯಮವನ್ನಾಗಿ ಬಳಸಿಕೊಂಡರು. ಬೈಬಲ್ಲಿನಲ್ಲಿಯ ಸಣ್ಣ ಕಥೆಗಳನ್ನು, ಪ್ರಾರ್ಥನಾ ಗೀತೆಗಳನ್ನು ಪಠ್ಯದಲ್ಲಿ ಅಳವಡಿಸಿದರು. ಇವೇ ಮುಂದೆ ಮಕ್ಕಳ ಸಾಹಿತ್ಯಕ್ಕೆ ಪ್ರೇರಣೆ ನೀಡಿದವು. ಮಕ್ಕಳಿಗೆ ಪ್ರತ್ಯೇಕವಾದ ಶಾಲೆಗಳು ಸ್ಥಾಪನೆಗೊಂಡವು. ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಪುಸ್ತಕಗಳು ರಚನೆಯಾದವು. ಸಾಹಿತಿಗಳು ಮಕ್ಕಳಿಗಾಗಿ ಸಾಹಿತ್ಯ ಕೃತಿಗಳನ್ನು ರಚಿಸತೊಡಗಿದರು. ಮಕ್ಕಳ ಕವಿತೆಗಳನ್ನು ಮೊದಲು ರಚಿಸಿದವರಲ್ಲಿ ಕವಿ ಪಂಜೆಮಂಗೇಶರಾಯರು ಪ್ರಮುಖರು.

೧.೨ ಅಧ್ಯಯನದ ಉದ್ದೇಶ :

ಪರಕೀಯರ ದಾಳಿಯಿಂದ ನಮ್ಮ ಸಂಸ್ಕೃತಿಯ ಮುಖ್ಯ ನೆಲೆಗಳು ತೀವ್ರವಾದ ಬದಲಾವಣೆಗೆ ಒಳಗಾಗಿರುವುದು ಸಹಜ. ಇದನ್ನು ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳಲ್ಲಿ ಕಾಣುತ್ತೇವೆ. ಹೊಸ ಪರಿಸರ ನಮ್ಮನ್ನು ಆವರಿಸಿರುವ ಸಂದರ್ಭ, ಎದುರಿಸಿದ ಸವಾಲುಗಳು ಸ್ಥಳೀಯ ಸಂಸ್ಕೃತಿಯ ನೆಲೆಗಳನ್ನು ಭದ್ರಪಡಿಸಿಕೊಳ್ಳಲು ದಾರಿ ಮಾಡಿಕೊಟ್ಟವು. ಇಂಥ ಸಮಯದಲ್ಲಿ ಬೆಳೆದುಬಂದ ಸಾಹಿತ್ಯ, ಆತ್ಮವಿಶ್ವಾಸದ ಅಭಿವ್ಯಕ್ತಿಯ ನೆಲೆಯಾಗಿ ನಿಂತಿದೆ. ಸ್ವಹಿತದ ಜೊತೆಗೆ ಸಾರ್ವಜನಿಕ ಹಿತ ಸಾಧಿಸುವುದೇ ಸಾಹಿತ್ಯವಾಗಿದೆ. ತಮ್ಮ ಅನಿಸಿಕೆ, ಅನುಭವಗಳನ್ನು ಬರವಣಿಗೆಯಲ್ಲಿ ಹಿಡಿದಿಡುವಲ್ಲಿ ಸಾಹಿತ್ಯದ ಸೃಷ್ಟಿ ಅವಶ್ಯಕವಾಯಿತು. 'ಸಾಹಿತ್ಯ ಎನ್ನುವುದು ತನ್ನ ಸೃಜನೆಯ ಕಾಲಮಾನದ ಹಂಬಲಗಳನ್ನು ಪೂರೈಸಲು ತೊಡುಗವ ಹಾಗೆಯೇ, ಕಾಲಕ್ರಮದಲ್ಲಿ ಹೊಸ ಹೊಸ

ಸವಾಲುಗಳನ್ನು ಎದುರಿಸುತ್ತ ಪುನರ್ ಪರಿಶೀಲನೆಗೆ ಬಿಚ್ಚಿಕೊಳ್ಳುತ್ತಿರುತ್ತವೆ. ಆದ್ದರಿಂದ ಸಾಹಿತ್ಯ ಅಭಿವ್ಯಕ್ತಿ ಕೇವಲ ಭಾಷಿಕವಾದುದಲ್ಲ. ಅದು ಸಾಂಸ್ಕೃತಿಕವಾದದ್ದು, ಹತ್ತೊಂಭತ್ತನೆಯ ಶತಮಾನ ಕನ್ನಡ ಸಾಹಿತ್ಯದ ಪುನರುಜ್ಜೀವನ ಕಾಲ. ಈ ಸಮಯದಲ್ಲಿ ಬ್ರಿಟಿಷರ ಆಗಮನ. ಆಧುನಿಕ ಶಿಕ್ಷಣದಿಂದಾಗಿ ಮನುಷ್ಯನ ಮನೋಭೂಮಿಕೆಯಲ್ಲಿ ಅನೇಕ ಬದಲಾವಣೆಗಳಾದವು. ವಸಾಹತುಶಾಹಿಯ ಪರಿಣಾಮ ಆಧುನಿಕ ಸಾಹಿತ್ಯದ ಉದಯ. ಅದು ಹೊಸ ಅನುಭವ ಮತ್ತು ಅಭಿವ್ಯಕ್ತಿಗೆ ದಾರಿಮಾಡಿಕೊಟ್ಟಿತು[೧].

ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಸಾಂಸ್ಕೃತಿಕ, ಸಾಮಾಜಿಕ ಪರಿಸರವನ್ನು ತಿಳಿಯುವುದು ಅವಶ್ಯಕವಾಗಿದೆ. ಬರವಣಿಗೆಯಲ್ಲಿ ಅಭಿವ್ಯಕ್ತಗೊಳ್ಳುವ ಸಂವೇದನೆಗಳು ಪ್ರತಿಯೊಬ್ಬ ಬರಹಗಾರರಲ್ಲಿಯೂ ಭಿನ್ನತೆಯನ್ನು ಕಾಣುತ್ತೇವೆ. ಅವರ ಆಶಯ ಮತ್ತು ಅನುಭವದ ಗ್ರಹಿಕೆಗಳು ಆಯಾ ಸಾಮಾಜಿಕ ಪರಿಸರವನ್ನು ಅವಲಂಬಿಸಿರುತ್ತವೆ. ಇದರಿಂದಾಗಿ ಮಕ್ಕಳ ಸಾಹಿತ್ಯ ಮತ್ತು ಪ್ರೌಢ ಸಾಹಿತ್ಯ ಬೇರೆ-ಬೇರೆಯಾದ ಅನುಭೂತಿಯನ್ನು ನೀಡುತ್ತವೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಮಕ್ಕಳ ಬದುಕನ್ನು ಹೇಗೆ ರೂಪಿಸಿವೆ ಎಂಬುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯವನ್ನು ಪ್ರತ್ಯೇಕವಾಗಿ ಗಮನಿಸಿ, ಮಕ್ಕಳ ಸಾಹಿತ್ಯದ ಕೃತಿಗಳನ್ನು ಹೊಸ ಸಾಧ್ಯತೆಗಳಿಂದ ಶೋಧನೆಗೆ ಒಳಪಡಿಸಿಕೊಳ್ಳುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ. ಮಕ್ಕಳ ಸಾಹಿತ್ಯ ಕೃತಿಗಳಲ್ಲಿರುವ ಸ್ವರೂಪವನ್ನು ತಾತ್ವಿಕ ದೃಷ್ಟಿಯಿಂದ ಶೋಧನೆಗೆ ಒಳಪಡಿಸುವ ಉದ್ದೇಶದೊಂದಿಗೆ ಅಧ್ಯಯನಕ್ಕೆ ತೊಡಗಲು ಅಭಿವ್ಯಕ್ತಿಯನ್ನು ಪ್ರಧಾನವಾಗಿಟ್ಟುಕೊಂಡಿದೆ. ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ಕವಿಗಳು ತಮ್ಮ ಧೋರಣೆ-ಪ್ರೇರಣೆಗಳನ್ನು ವ್ಯಕ್ತಪಡಿಸುವಾಗ ಯಾವ-ಯಾವ ವಿಧಾನಗಳನ್ನು ಅನುಸರಿಸಿರುವರು ಎಂಬುದು ಗಮನಿಸಬೇಕಾದ ಸಂಗತಿ. ಕೃತಿಯ ವಸ್ತು, ಆಶಯ, ನಿರೂಪಣಾ ಶೈಲಿ, ತಂತ್ರಗಳನ್ನು ಆಧರಿಸಿ ಮಕ್ಕಳ ಸಾಹಿತ್ಯದ ನೆಲೆಗಳನ್ನು ಗುರುತಿಸಿ ಅಧ್ಯಯನ ಮಾಡಲಾಗಿದೆ.

ಕೆಲವು ಕವಿಗಳು ಪ್ರೌಢ ಸಾಹಿತ್ಯದ ಜೊತೆಗೆ ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿಕೊಂಡು ಉತ್ಕೃಷ್ಟ ಸಾಹಿತ್ಯ ನಿರ್ಮಿಸಿದ್ದಾರೆ. ಈ ಕಾರಣದಿಂದ ಮಕ್ಕಳ ಸಾಹಿತ್ಯ ಬರವಣಿಗೆಯಲ್ಲಿ ಕವಿಗಳಿಂದ ಕವಿಗಳಿಗೆ ವಿಭಿನ್ನವಾದ ಆಲೋಚನಾ ಕ್ರಮಗಳಿರುವುದನ್ನು ಗ್ರಹಿಸುವುದು ಅಧ್ಯಯನದ ಉದ್ದೇಶ. ಮಕ್ಕಳ ಸಾಹಿತ್ಯ ಸಾಮಾಜಿಕ ಘಟಕಗಳೊಂದಿಗೆ ಹೊಂದಿದ ಸಂಬಂಧದಿಂದ ಪ್ರೇರಿತವಾಗಿ ಸೃಷ್ಟಿಯಾಗಿದೆ. ಪ್ರತಿಯೊಬ್ಬ ಕವಿಯ ಕೃತಿಗಳಲ್ಲಿ ಕೇಂದ್ರಬಿಂದುವಾಗಿ ಅಭಿವ್ಯಕ್ತಗೊಂಡ ಮಗುವಿನ ಆಶಯ, ಅನುಭವ, ಆನಂದ, ನಿರಾಸೆ, ಅಸಹಾಯಕತೆ ಮೊದಲಾದವುಗಳನ್ನು ಶೋಧನೆಗೆ ಒಳಪಡಿಸಲಾಗಿದೆ. ರಾಷ್ಟ್ರೀಯತೆ, ಸಂಪ್ರದಾಯ, ಧಾರ್ಮಿಕತೆ, ಶೈಕ್ಷಣಿಕ ಸಂದರ್ಭಗಳು ಕವಿಗಳ ಕೃತಿಗಳಲ್ಲಿ ಅಗಾಧವಾದ ಬದಲಾವಣೆಯನ್ನು ಉಂಟು ಮಾಡಿದವು. ಜೊತೆಗೆ ಅಂದಿನ ಸಾಂಸ್ಕೃತಿಕ ಪರಿಸರ

ಮಕ್ಕಳ ಸಾಹಿತಿಗಳನ್ನು ಹೇಗೆ ರೂಪಿಸಿವೆ ಎಂಬುದು ಅಧ್ಯಯನದ ವಿಶೇಷತೆಗಳಲ್ಲಿ ಒಂದಾಗಿದೆ. ಪ್ರಾರಂಭದಲ್ಲಿ ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿಸಿಕೊಂಡ ಕವಿಗಳ ಅಭಿವ್ಯಕ್ತಿಯ ರೂಪ, ನಂತರದಲ್ಲಿ ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿದ ಮಕ್ಕಳ ಸಾಹಿತಿಗಳ ಅಭಿವ್ಯಕ್ತಿಯ ರೂಪ, ಮಾಧ್ಯಮ ಮತ್ತು ವಸ್ತು-ವಿಷಯಗಳು ಹೇಗೆ ಬದಲಾವಣೆಗೊಂಡಿವೆ ಎಂಬುದನ್ನು ಗುರುತಿಸುವ ಕ್ರಮ ಈ ಅಧ್ಯಯನವಾಗಿದೆ.

ಇದುವರೆಗೂ ಮಕ್ಕಳ ಸಾಹಿತ್ಯವನ್ನು ಇಡಿಯಾಗಿ ಅಧ್ಯಯನಕ್ಕೆ ತೊಡಗದೆ, ಆಯ್ದ ಕೆಲವು ಕವಿಗಳ ಬದುಕು-ಬರಹವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಇದಕ್ಕೆ ಭಿನ್ನವಾಗಿ ಕೆಲವು ಪ್ರಮುಖ ಕವಿಗಳ ಮಕ್ಕಳ ಕೃತಿಗಳಲ್ಲಿಯ ಅಭಿವ್ಯಕ್ತಿಯ ತಾತ್ವಿಕ ಸ್ವರೂಪಗಳನ್ನು ಗುರುತಿಸಿಕೊಂಡು ಹೊಸ ಸಾಧ್ಯತೆಗಳಲ್ಲಿ ಪ್ರಬಂಧ ಕಟ್ಟಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ :

ಪುರಾಣ ಇತಿಹಾಸಗಳಲ್ಲಿ ಮಕ್ಕಳ ವ್ಯಕ್ತಿತ್ವ ರೂಪಿಸುವ ಸಾಹಿತ್ಯ ಕಾಣಿಸಿಕೊಂಡಿದ್ದರೂ ಮಕ್ಕಳಿಗಾಗಿಯೇ ಇರುವ ಮಕ್ಕಳ ಸಾಹಿತ್ಯ ಎಂದು ಪ್ರತ್ಯೇಕವಾಗಿ ಸೃಷ್ಟಿಯಾಗಿರುವುದಿಲ್ಲ. ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸಾಹಿತ್ಯ ಎಂಬ ಹೆಸರಿನಿಂದ ಸಾಹಿತ್ಯ ನಿರ್ಮಾಣ ನಡೆದಿರುವುದು. ಇದು ಆರೋಗ್ಯಕರ ಬೆಳವಣಿಗೆಯೂ ಹೌದು. ಈ ಹಿನ್ನೆಲೆಯಲ್ಲಿ ಮಕ್ಕಳಿಗಾಗಿ ಸೃಷ್ಟಿಯಾದ ಸಾಹಿತ್ಯದ ವಿಭಿನ್ನ ನೆಲೆಗಳನ್ನು ಸೂಕ್ಷ್ಮವಾಗಿ ಗಮನಿಸಿ ವಿಶ್ಲೇಷಣೆಗೆ ಒಳಪಡಿಸುವುದು ಈ ಅಧ್ಯಯನದ ಕ್ರಮವಾಗಿದೆ.

ಪ್ರತಿ ಮಗುವು ದೇವರ ಸಮಾನ, ದೇವರ ಪ್ರತೀಕ ಎಂಬ ನಂಬಿಕೆ ನಮ್ಮ ಪರಂಪರೆಯದು. ನಾವು ಮಗುವಿನ ಹಂಬಲವುಳ್ಳವರು. ಮಗುವಿನ ಪೋಷಣೆಗೆ ಮಹತ್ವ ನೀಡಿದವರು. ಹುಟ್ಟಿದ ಪ್ರತಿ ಮಗು ಬದುಕಿ-ಬಾಳಲೆಂದು ಜೀವನವನ್ನು ಮುಡಿಪಾಗಿಟ್ಟವರು. ಅದಕ್ಕಾಗಿ ಹೇಳುತ್ತಾರೆ 'ಮಗು ಮನುಕುಲದ ಅಮೂಲ್ಯ ನಿಧಿ' ಎಂದು. ಮಕ್ಕಳು ಇದ್ದರೆ ಮನೆ ಚಂದ ಎನ್ನುವ ಮಾತು ಜನಜನಿತವಾಗಿದೆ. ಮಗು ಅಕ್ಕರೆಯ ಆಗರ. ಮಗುವನ್ನು ಕುರಿತು ಜನಪದ ಗರತಿ ಹೇಳುವುದು ಹೀಗೆ;

ತಾಯಿದ್ರ ತವರ್‍ಹೆಚ್ಚು ತಂದಿದ್ರ ಬಳಗ್ಹೆಚ್ಚು
ಸಾವಿರಕೆ ಹೆಚ್ಚು ಪತಿ ಪುರುಷ । ಹೊಟ್ಟೆಯ
ಮಾಣಿಕದ ಹರಳು ಮಗು ಹೆಚ್ಚು ॥

ಮಗು ಒಂದು ಮಾಣಿಕ್ಯದ ಹರಳು ಇದ್ದಂತೆ. ತಾಯಿ, ತಂದೆ, ಪತಿ ಇವರೆಲ್ಲರಕ್ಕಿಂತಲೂ ಮಗು ಮಿಗಿಲಾದುದು ಎನ್ನುವ ಅಭಿಮತ ಗರತಿಯದು. ಈ ಭೂಮಿಯ ಅಪರೂಪದ ಅತಿಥಿ ಮಗು. ಇದರ ಪಾಲನೆ ಭೂ ತಾಯಿಗೂ ಸೇರಿದೆ.

ಸಮಯಕ್ಕೆ ಸರಿಯಾಗಿ ಮಳೆ-ಬೆಳೆ, ಹಣ್ಣು-ಹಂಪಲ, ನೀರು, ಆಶ್ರಯ ನೀಡಿದ ಪ್ರಕೃತಿಯ ಆಟವೆಲ್ಲವೂ ಮಕ್ಕಳಿಗಾಗಿಯೇ ಎನ್ನಬಹುದು. ತಾಯಿಯ ಹೃದಯ ಮಕ್ಕಳ ಆಶೋತ್ತರಗಳನ್ನು ಪೂರೈಸುವ ಕಣಜವಾಗಿದೆ. ತಾಯಿಯ ವಾತ್ಸಲ್ಯ ಪರ್ವತಕ್ಕಿಂತ ಎತ್ತರ ಆಕಾಶಕ್ಕಿಂತಲು ವಿಶಾಲವಾಗಿದೆ. ತಾಯಿಗೆ ಮಗು ಏನು ಮಾಡಿದರೂ ಎಲ್ಲವೂ ಚಂದವೇ ಕಾಣುತ್ತದೆ. ತಾಯಿ ಮಗುವಿನ ಜೀವಾಳ, ಮಗು ತಾಯಿಗೆ ಜೀವಾಳ ಎಂಬ ಅವಿನಾಭಿವ ಸಂಬಂಧ ಮೂಡಿರುವುದು ಮಕ್ಕಳ ಸಾಹಿತ್ಯದಲ್ಲಿ.

ಮಕ್ಕಳ ಸಾಹಿತ್ಯ ರಚನೆಯಿಂದ ಮಕ್ಕಳನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ವೈಜ್ಞಾನಿಕವಾಗಿ, ವೈಚಾರಿಕವಾಗಿ, ನೈತಿಕತೆಯ ಪ್ರಜ್ಞೆಯೊಂದಿಗೆ ಮಾನವೀಯ ಅಂತಃಕರಣ, ದಯೆ, ಸಹಕಾರ, ಸಂವೇದನಶೀಲತೆ ಬೆಳೆಸುವ ಸರಳ ಮಾರ್ಗವಾಗಿದೆ. ಮಕ್ಕಳ ಭಾವನೆಗಳ ವಿವಿಧತೆಗಳನ್ನು ಅರಿತುಕೊಳ್ಳುವ ನೆಲೆಗಳನ್ನು ಮಕ್ಕಳ ಸಾಹಿತ್ಯ ಒದಗಿಸುತ್ತದೆ. ಇದೊಂದು ಬದುಕಿನ ಅಂಗವೆನಿಸಿದೆ. ಈ ಹೊತ್ತು ಮನುಷ್ಯನ ತುಡಿತ, ಮಿಡಿತ, ಚಲ್ಲಾಟ, ಚಂಚಲತೆ, ಮುಗ್ಧತೆ, ಅಜ್ಞಾನತೆ, ಪರಾಕ್ರಮ, ಬಿಕ್ಕಟ್ಟು, ಮೊದಲಾದ ತಲ್ಲಣಗಳನ್ನು ಆವರಿಸಿಕೊಂಡಿರುವ ಮಕ್ಕಳ ಸಾಹಿತ್ಯ ಎಲ್ಲೆಡೆಯಲ್ಲೂ ತನ್ನ ಹೆಜ್ಜೆಗಳನ್ನು ಮೂಡಿಸಿದೆ. ಸಾಹಿತ್ಯವನ್ನು ಸಹೃದಯರ ಸಾಹಿತಿಗಳ, ಸೃಜನಶೀಲರ ಸೂಕ್ಷ್ಮ ಮನಸುಗಳು ಮಾನವ ಬದುಕನ್ನು ರೂಪಿಸುವ ರಸವೆತ್ತ ಕಾರ್ಯವೆಂದು ಹೇಳಿದ್ದಾರೆ. ಇಂದು ಸಾಹಿತ್ಯದಲ್ಲಿ ವಿವಿಧ ಪ್ರಕಾರಗಳು ರೂಪತಾಳಿವೆ. ಪ್ರೌಢ ಸಾಹಿತ್ಯ, ಮಹಿಳಾ ಸಾಹಿತ್ಯ, ಚುಟುಕು ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ದಲಿತ ಸಾಹಿತ್ಯ, ಸಿನಿಮಾ ಸಾಹಿತ್ಯ ಮೊದಲಾದ ಪ್ರಕಾರಗಳು ಇಂದು ಪ್ರಚಲಿತದಲ್ಲಿವೆ. ಈ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಮಕ್ಕಳ ಸಾಹಿತ್ಯ ತನ್ನ ವಿಶೇಷತೆಯಿಂದ ಮುಂದೆ ಸಾಗುತ್ತ ಬಂದಿದೆ.

ಪ್ರಸ್ತುತ ಪ್ರಬಂಧದ ವಿಷಯ 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ಸ್ವರೂಪ'. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದ ಆರಂಭದ ಕಾಲದಿಂದಲೂ ರೂಪಿತವಾದ ಸಾಹಿತ್ಯವಿದು. ಜನಪದ ಮತ್ತು ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವ ಮತ್ತು ಮಕ್ಕಳ ಬದುಕಿಗೆ ಪೂರಕವಾದ ಅಂಶಗಳನ್ನು ಒಳಗೊಂಡ ಕೃತಿಗಳು, ಮುಖ್ಯವಾಗಿ ಮಕ್ಕಳಿಗಾಗಿ ರಚಿತವಾದ ಮಕ್ಕಳ ಸಾಹಿತ್ಯ ಕುರಿತು ಅಧ್ಯಯನದ ವ್ಯಾಪ್ತಿಯನ್ನು ಹೊಂದಿದೆ. ಪ್ರಾಚೀನ ಕಾಲದಲ್ಲಿ ಮಕ್ಕಳ ಬದುಕನ್ನು ರೂಪಿಸಿದ ಸಾಹಿತ್ಯಕ್ಕೆ ಮಕ್ಕಳ ಸಾಹಿತ್ಯ ಎನ್ನಬೇಕೆ?, ಬೇಡವೋ ಎಂಬುದು ಚರ್ಚಿತವಾದ ಸಂಗತಿ. ಇತ್ತೀಚೆಗೆ ಮಕ್ಕಳಿಗಾಗಿಯೇ ಮಕ್ಕಳ ಸಾಹಿತ್ಯ ಎಂಬ ಹೆಸರಿನಲ್ಲಿ ಬೆಳೆದುಬಂದ ಸಾಹಿತ್ಯ ಸಮರ್ಪಕವಾಗಿದೆಯೋ ಅಥವಾ ಇಲ್ಲವೋ ಎಂಬುದು ಕೂಡಾ ಚರ್ಚಿತ ಸಂಗತಿ. ಹೀಗಾಗಿ ದೊರೆತ ಆಧಾರ ಸಾಮಾಗ್ರಿಗಳನ್ನು ಬಹು ಎಚ್ಚರಿಕೆಯಿಂದ ಗಮನಿಸಿ ಕನ್ನಡ ಮಕ್ಕಳ ಸಾಹಿತ್ಯದ ತಾತ್ವಿಕ ಸ್ವರೂಪ ಅರಿಯಲು ರೂಪಿಸಲಾಗಿದೆ.

ಮಕ್ಕಳ ಸಾಹಿತ್ಯವನ್ನು ಅನುಲಕ್ಷಿಸಿ ಮಕ್ಕಳ ಮಾನಸಿಕ ಸ್ಥಿತಿ, ಬೌದ್ಧಿಕ ಬೆಳವಣಿಗೆಯನ್ನು ಗಮನಿಸಿ ಪ್ರಬಂಧವನ್ನು ರೂಪಿಸಲಾಗಿದೆ. ಮಕ್ಕಳಿಗಾಗಿ ರಚಿಸಿದ ಸಾಹಿತ್ಯ ಸ್ವರೂಪ, ಲಕ್ಷಣಗಳನ್ನು ಮತ್ತು ಮಕ್ಕಳ ಮನೋಧರ್ಮವನ್ನು ವಿಸ್ತರಿಸುವ ಅಂಶಗಳನ್ನು ಗುರುತಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಕಾವ್ಯಗಳಿಂದ ಆಯ್ದ ಕೆಲವು ಭಾಗಗಳನ್ನು ಮಕ್ಕಳ ಮನೋಮಾನ ಹಾಗೂ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಕಲಿಸಿಕೊಡಲಾಗುತ್ತಿತ್ತು. ಇಲ್ಲಿಯ ಕೆಲವು ಭಾಗಗಳು ಮಕ್ಕಳಿಗೆ ತಿಳಿಯುತ್ತಿರಲಿಲ್ಲ. ಆದ್ದರಿಂದ ಅವರಿಗೆ ಅರ್ಥವಾಗುವಂತೆ ತಿಳಿಸಿ ಹೇಳಿಕೊಡುವ ಮೂಲಕ ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ ಮೂಡಿಸಲಾಗುತ್ತಿತ್ತು. ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ವ್ಯಕ್ತವಾಗಿರುವ ರಾಮ-ಲಕ್ಷಣ, ಲವ-ಕುಶರ ಬಾಲ್ಯ, ಕೃಷ್ಣನ ಬಾಲಲೀಲೆಗಳು, ಕೌರವ-ಪಾಂಡವರ ಬಾಲ್ಯ ಜೀವನದ ಘಟನಾವಳಿಗಳು ಮಕ್ಕಳ ಸಾಹಿತ್ಯದ ಪ್ರತಿನಿಧಿಯಾಗಿ ನಿಲ್ಲುತ್ತವೆ. ಪಂಪ ಭಾರತದಲ್ಲಿಯ ಅಭಿಮನ್ಯು, ರನ್ನನ ಗದಾಯುದ್ಧದಲ್ಲಿ ಲಕ್ಷ್ಮಣ ಕುಮಾರನ ಬಾಲ ಪಾತ್ರ ಪ್ರಮುಖ ನಿದರ್ಶನವಾಗಿ ಅಭಿವ್ಯಕ್ತಗೊಂಡಿದೆ. ಜನ್ನನ ಅಭಯಮತಿ ಮತ್ತು ಅಭಿಯರುಚಿ, ಕುಮಾರವ್ಯಾಸನ ಉತ್ತರಕುಮಾರ, ಲಕ್ಷ್ಮೀಶನ ಚಂದ್ರಹಾಸ; ಬಬ್ರುವಾಹನ, ರಾಘವಾಂಕನ ಲೋಹಿತಾಶ್ವ, ಹರಿಹರನ ಕಾವ್ಯದಲ್ಲಿ ಬರುವ ಬಾಲ ಶರಣರು, ದಾಸರ ಹಾಡುಗಳಲ್ಲಿ ಬರುವ ಕೃಷ್ಣನ ವರ್ಣನೆಗಳು ಮೊದಲಾದವು ಮಕ್ಕಳ ಸಾಹಿತ್ಯದ ಹೆಜ್ಜೆಗಳು ಎಂದರೆ ತಪ್ಪಾಗಲಾರದು.

ಹತ್ತೊಂಬತ್ತನೆಯ ಶತಮಾನದಲ್ಲಿ ಆಂಗ್ಲರ ಆಳ್ವಿಕೆಯಲ್ಲಿ ಪ್ರಾರಂಭಗೊಂಡ ಸಾರ್ವಜನಿಕ ಶಿಕ್ಷಣ ಪದ್ಧತಿ ಮಕ್ಕಳ ಸಾಹಿತ್ಯ ಸೃಷ್ಟಿಯಲ್ಲಿ ಮಹತ್ವದ ಪಾತ್ರವಹಿಸಿದೆ. ಕ್ರೈಸ್ತ ಮಿಶನರಿಗಳು ಮಕ್ಕಳಿಗೆ ಬೈಬಲ್ ಗೀತೆಗಳನ್ನು ಮಕ್ಕಳ ಮಟ್ಟವನ್ನು ಮತ್ತು ಮನೋಧರ್ಮವನ್ನು ಆಧರಿಸಿ 'ಕ್ರೈಸ್ತ ಗೀತೆಗಳು' ಎಂಬ ಹೆಸರಿನಿಂದ ಪ್ರಕಟಿಸಲಾಯಿತು. ಆ ಹೊತ್ತಿನಿಂದ ಇಂದಿನವರೆಗೂ ಮಕ್ಕಳ ಸಾಹಿತ್ಯ ಹತ್ತು ಹಲವು ಆಯಾಮಗಳನ್ನು ಪಡೆದುಕೊಂಡು ಬೆಳೆದಿದೆ. ಆದರೆ ಇಂಥ ಮಹತ್ವಪೂರ್ಣ ಸಾಹಿತ್ಯ ಪ್ರಕಾರವನ್ನು ಗಂಭೀರವಾಗಿ ಪರಿಗಣಿಸಿ ನೋಡಲಾಗಿಲ್ಲ. ಈ ಸಾಹಿತ್ಯದ ಮೇಲೆ ವಿಮರ್ಶೆಯ ಧೋರಣೆ ಅನುಸರಿಸದೇ ಇರುವುದು ವಿಷಾದನೀಯ. ಈ ಕೊರತೆಯನ್ನು ಸ್ವಲ್ಪವಾದರೂ ತುಂಬಿಕೊಡುವ ಹಂಬಲದಿಂದ ಈ ಅಧ್ಯಯನವನ್ನು ಆಯ್ದುಕೊಳ್ಳಲಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಕವಿತೆ, ಕಥೆ, ನಾಟಕ, ಪ್ರವಾಸ ಸಾಹಿತ್ಯ ಮೊದಲಾದ ಪ್ರಕಾರಗಳು ರಸಾನುಭವದಿಂದ ಕೂಡಿ ಅಭಿವ್ಯಕ್ತಗೊಂಡಿವೆ. ಆದ್ದರಿಂದ ವಿವಿಧ ಕವಿಗಳ ಕೃತಿಗಳ ಮೂಲಕ ಮಕ್ಕಳ ಸಾಹಿತ್ಯದಲ್ಲಿ ವ್ಯಕ್ತಗೊಂಡ ಸಮಕಾಲೀನ ಸಂವೇದನೆ, ಅಭಿರುಚಿ, ವೈಚಾರಿಕ ಮನೋಭಾವ, ನೈತಿಕ ಮೌಲ್ಯಗಳು ಮುಂತಾದವುಗಳನ್ನು ಕಂಡುಕೊಳ್ಳುವ ಪ್ರಯತ್ನ ಇದಾಗಿದೆ.

'ಕನ್ನಡದಲ್ಲಿ ಮಕ್ಕಳ ಸಾಹಿತ್ಯ' ಮತ್ತು 'ಅಭಿವ್ಯಕ್ತಿಯ ತಾತ್ವಿಕ ಸ್ವರೂಪ' ಎಂಬ ಎರಡು ಮುಖ್ಯ ಭಾಗಗಳನ್ನು ಈ ಅಧ್ಯಯನ ಹೊಂದಿದೆ. 'ಅಭಿವ್ಯಕ್ತಿ'ಯ ಬಗ್ಗೆ ಇದುವರೆಗೂ ನಡೆದ ಮಕ್ಕಳ ಸಾಹಿತ್ಯದ ನೆಲೆಗಳನ್ನು ಪ್ರಭಾವಿಸುವ ರೀತಿಗಳಾವವು ಎಂಬುದಾಗಿದೆ. ಅಭಿವ್ಯಕ್ತಿಯ ಪರಿಕರಗಳ ಬಗ್ಗೆ ಆಲೋಚಿಸಲಾಗಿದೆ. ಅಭಿವ್ಯಕ್ತಿಯು ಕವಿಯ ಭಾವನೆ, ವ್ಯಕ್ತಿತ್ವದ ನೆಲೆ, ವಸ್ತು-ವಿಷಯ, ಧೋರಣೆ-ಪ್ರೇರಣೆಗಳ ನೆಲೆಯಲ್ಲಿ ಬಳಕೆಯಾದ ಭಾಷೆ ಮತ್ತು ತಂತ್ರಗಳ ನಿರೂಪಣೆಯಲ್ಲಿ ಪ್ರಬಂಧ ಕಟ್ಟಿಕೊಳ್ಳಲಾಗಿದೆ.

ಮಹಾಪ್ರಬಂಧದ ಮುಖ್ಯ ಸಿದ್ಧಾಂತವನ್ನು ಕಟ್ಟಿಕೊಳ್ಳಲು ಕವಿಗಳ ಕೃತಿಯ ವಸ್ತು, ಆಶಯ, ನಿರೂಪಣಾ ಶೈಲಿ, ತಂತ್ರಗಳನ್ನು ಆಧರಿಸಿದ ಕೆಲವು ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲಾಗಿದೆ. ಮಕ್ಕಳ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿದ ನಂತರ ಅಭಿವ್ಯಕ್ತಿಯ ತಾತ್ವಿಕ ಸ್ವರೂಪವನ್ನು ವ್ಯಾಖ್ಯಾನಿಸಲಾಗಿದೆ. ಆ ನೆಲೆಯಲ್ಲಿ ಕೃತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಮಕ್ಕಳ ಸಾಹಿತ್ಯದ ತಾತ್ವಿಕ ಸ್ವರೂಪವನ್ನು ಅಧ್ಯಯನ ಮಾಡಲು ವಿವಿಧ ಅಧ್ಯಯನಗಳ ಫಲಿತಗಳನ್ನು ಗಮನಿಸಲಾಗಿದೆ. ಕವಿತೆ, ಕಥೆ, ನಾಟಕ ಮೊದಲಾದ ಪ್ರಕಾರಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿದೆ. ಅಧ್ಯಯನದ ವ್ಯಾಪ್ತಿಗೆ ಅನುಗುಣವಾಗಿ ಕೆಲವು ಪ್ರಮುಖ ಕೃತಿಗಳನ್ನು ಮೂಲ ಆಕರಗಳಾಗಿ ಬಳಸಿಕೊಂಡಿದೆ. ಸಂಬಂಧಿಸಿದ ವಿಮರ್ಶಾ ಲೇಖನಗಳು, ಬಿಡಿ ಬರಹಗಳು, ಪತ್ರಿಕೆಗಳನ್ನು ಪೂರಕವಾಗಿ ನೋಡಲಾಗಿದೆ.

ಕನ್ನಡ ನಾಡು ವಿಶಾಲವಾಗಿ ವ್ಯಾಪಿಸಿರುವುದು ನಮಗೆಲ್ಲ ಗೊತ್ತು. ಪ್ರಾದೇಶಿಕವಾಗಿ ವಿವಿಧತೆಯಿಂದ ಕೂಡಿದ ಈ ನಾಡಿನ ಪ್ರಮುಖ ಕವಿಗಳಾದ ಪಂಜೆಮಂಗೇಶರಾಯ, ದಿನಕರ ದೇಸಾಯಿ, ಕುವೆಂಪು, ಪಳಕಳ ಸೀತಾರಾಮಭಟ್ಟ ಮತ್ತು ಕಂಚ್ಯಾಣಿ ಶರಣಪ್ಪನವರ ಮಕ್ಕಳ ಸಾಹಿತ್ಯ ಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಡಿಟಿಪ್ಪಣಿ :

೧) ಗಿರಡ್ಡಿ ಗೋವಿಂದರಾಜು (ಸಂ.) : 'ಕನ್ನಡ ನವೋದಯ ಕಾವ್ಯ' : ಪು.೩

❑❑❑❑❑

ಅಧ್ಯಾಯ : ೨

ಅಧ್ಯಯನ ಪೂರ್ವ ಸಮೀಕ್ಷೆ

ಅಧ್ಯಾಯ - ೨
ಅಧ್ಯಯನ ಪೂರ್ವ ಸಮೀಕ್ಷೆ

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಕುರಿತು ವಿಮರ್ಶೆಗಳು, ಸಂಶೋಧನೆಗಳು ನಡೆದಿರುವುದು ಕಡಿಮೆ. ಪ್ರೌಢ ಸಾಹಿತ್ಯದಂತೆ ಮಕ್ಕಳ ಸಾಹಿತ್ಯ ಮುಖ್ಯವೆನಿಸದಿರಲು ಕಾರಣವೆಂದರೆ ಉಪೇಕ್ಷೆಯ ಮನೋಭಾವ. ಈ ಸಾಹಿತ್ಯದ ಬಗ್ಗೆ ಅನಾದರ, ಕೀಳರಿಮೆ ಹಲವಾರು ಬರಹಗಾರರಲ್ಲಿ ಕಂಡುಬರುತ್ತದೆ. ಇಂಥ ಅನಾದರದ ನಡುವೆ ಮಹಾನ್ ಕವಿಗಳು ಮಕ್ಕಳಿಗಾಗಿ ಕೃತಿಗಳನ್ನು ರಚಿಸಿರುವುದು ನೋಡುತ್ತೇವೆ. ಅಲ್ಲಿ ಅಭಿವ್ಯಕ್ತಿಯು ಬುದ್ಧಿ ಮತ್ತು ಭಾವಗಳಿಂದ ಕೂಡಿ ಅನಾವರಣಗೊಳ್ಳುತ್ತದೆ. ಇದರಿಂದಾಗಿ ಬರಹಗಾರರ ಸೂಕ್ಷ್ಮ ಗ್ರಹಿಕೆ ಮತ್ತು ಅನುಭವ ಮುಖ್ಯವೆನಿಸುತ್ತದೆ. ನವೋದಯದ ಕವಿಗಳು ಇಂತಹ ಹೊಸತನಕ್ಕೆ ಧಾರಾಳವಾಗಿ ತೆರೆದುಕೊಂಡವರು ಇವರ ಕೃತಿಗಳ ಭಾಷೆ, ವಸ್ತು, ರಚನೆ ಹಲವು ಬಗೆಯಾದರೂ ಅವು ಮಕ್ಕಳ ಮನವನ್ನು ತಟ್ಟುವಂತಹವು. ಕವಿಯಿಂದ ಕವಿಗೆ ಅವನ ವ್ಯಕ್ತಿತ್ವ, ದೃಷ್ಟಿಕೋನ, ಭಾಷೆ ಮೊದಲಾದ ವೈವಿಧ್ಯತೆಗಳಿಂದ ಅಭಿವ್ಯಕ್ತಿಯಲ್ಲಿ ಬೇರೆ-ಬೇರೆಯಾಗಿ ಕಂಡರೂ ಅಲ್ಲಿಯ ಸ್ವಭಾವ, ವರ್ತನೆ, ಆಶೆ-ಆಕಾಂಕ್ಷೆಗಳು ಮಕ್ಕಳದ್ದು ಎಂಬುದು ಮರೆಯಬಾರದು.

ಮಕ್ಕಳ ಸಾಹಿತ್ಯದ ಮೂಲವನ್ನು ಹುಡುಕುತ್ತ ಹೋದರೆ ಭಾರತದಲ್ಲಿ ಎರಡನೆಯ ಶತಮಾನದಲ್ಲಿ ಗುರುತಿಸಲ್ಪಟ್ಟ ಪಂಚತಂತ್ರದ ಕಥೆಗಳೇ ಶಿಷ್ಟ ಪ್ರಕಾರದ ಮಕ್ಕಳ ಸಾಹಿತ್ಯದ ಮೂಲ ಎನ್ನಬಹುದು. ಇದು ರಾಜಮಾರರಿಗೆ ರಾಜನೀತಿಯನ್ನು ಬೋಧಿಸುವ ವಿಷಯಗಳ ನ್ನೊಳಗೊಂಡ ಗ್ರಂಥವಾದರೂ ಅದು ಜೀವನ ಮೌಲ್ಯದ ವಿವಿಧ ಮಾರ್ಗಗಳನ್ನು ನಿರೂಪಿಸುವಂತಹದ್ದು ಎಂದು ಹಲವರು ಅಭಿಮತ ವ್ಯಕ್ತಪಡಿಸುತ್ತಾರೆ. ಇಲ್ಲಿಯ ವಸ್ತುಗಳ ಆಯ್ಕೆ, ನಿರೂಪಣೆ, ಹೇಳುವ ಶೈಲಿ ಮಕ್ಕಳ ಮನೋವಿಕಾಸಕ್ಕೆ ಮೂಲ ಸಾಮಗ್ರಿಗಳಾದವು. ಮಕ್ಕಳ ಮನ ತಣಿಸಲು, ಮುದಗೊಳಿಸಲು, ರೋಮಾಂಚಿತರಾಗಲು ಇವು ಪೂರಕವೆನಿಸಿದವು. ರಾಜ-ರಾಣಿಯರ, ಭೂತ-ಪ್ರೇತಗಳ, ಮಾಟ-ಮಂತ್ರಗಳ, ಅದ್ಭುತ ಕಲ್ಪನೆಯ ಕಥೆಗಳು ಬೆಳೆದು ಬಂದವು.

'ಶಿಶುಗೀತೆಗಳು ಅನಾಥ ಮಗುವಿನ ರೋಧನ. ಇವು ಔದ್ಯೋಗಿಕ ಕ್ರಾಂತಿಯ ಕೂಸಿನ ಹಾಡು, ಗಂಡಿನ ಜೊತೆ ಹೆಣ್ಣು ದುಡಿಯಲು ಹೊರಟಾಗ ನಿರ್ಮಾಣಗೊಂಡ ಅನಾಥ ಮಕ್ಕಳ ಸಂಸ್ಥೆ (Orphons Institute)ಗಳಲ್ಲಿ, ಅಂಬೆಗಾಲಿಟ್ಟ ಈ ಸಾಹಿತ್ಯ ಪ್ರಕಾರವು ಮುಂದೆ ಮಕ್ಕಳ ಮನರಂಜನೆಗಾಗಿ ನೆಲೆ ನಿಂತಂತೆ ತೋರುತ್ತದೆ. ೧೮ನೆಯ ಶತಮಾನದ ಹೊತ್ತಿಗೆ ಗಟ್ಟಿಮುಟ್ಟಾದ, ೧೯ನೆಯ ಶತಮಾನದ ನಡುಭಾಗದಲ್ಲಿ ಮಿಷನರಿಗಳ ಜೊತೆ ನಮ್ಮ ನಾಡಿಗೆ ಬಂತು'[೭].

ನವೋದಯ ಸಾಹಿತ್ಯ ಸಂದರ್ಭದಲ್ಲಿ ಮಕ್ಕಳಿಗೆ ಅತಿ ಹತ್ತಿರವಾದ ಅನುಭವದ ವಸ್ತುವನ್ನು ಆಧರಿಸಿ ಕೃತಿ ರಚನೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಇಂಗ್ಲೀಷರ ಆಳ್ವಿಕೆಯ ಪ್ರಭಾವದಿಂದ ಶಿಕ್ಷಣ ಕ್ರಮದಲ್ಲಿ ಪಠ್ಯಪುಸ್ತಕಗಳ ಮೂಲಕ ಮಕ್ಕಳ ಸಾಹಿತ್ಯ ರೂಪುಗೊಂಡಿತು. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ದೇಶಪ್ರೇಮ, ದೈವಭಕ್ತಿ, ಒಳಿತು-ಕೆಡಕುಗಳ ಕಲ್ಪನೆ, ಚರಿತ್ರೆಯ ವಿಷಯಗಳು ಮುಂತಾದ ಆದರ್ಶ ಗುಣಗಳನ್ನು ಹೊಂದಿರುವ, ಮಕ್ಕಳಿಗಾಗಿ ರಚಿತವಾದ ಸಾಹಿತ್ಯ ಕಾಣಬಹುದು.

ಮಕ್ಕಳ ಸಾಹಿತ್ಯದ ವಿವಿಧ ಆಯಾಮಗಳ ಅಧ್ಯಯನ ಅನೇಕ ವಿಶ್ವವಿದ್ಯಾಲಯಗಳಲ್ಲಿ ನಡೆಯದಿರುವುದು ಕಂಡುಬರುತ್ತದೆ. ಇತ್ತೀಚಿನ ಸಮಯದಲ್ಲಿ ಮಕ್ಕಳ ಸಾಹಿತ್ಯ ಕಥೆ, ಕವಿತೆ, ನಾಟಕ, ಪ್ರವಾಸ ಕಥನ, ಕಥನ ಕವನ ಮುಂತಾದ ರೂಪಗಳಲ್ಲಿ ಹುಲುಸಾಗಿ ಬೆಳೆಯುತ್ತಲಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯದ ವಿಮರ್ಶೆ ಮತ್ತು ಸಂಶೋಧನೆಗಳು ಆಯಾ ಕವಿಯ ಬದುಕು-ಬರಹವನ್ನು ಗಮನಿಸಿ, ಮಕ್ಕಳ ಸಾಹಿತ್ಯವನ್ನು ಗೌಣವಾಗಿ ನೋಡುವ ಕ್ರಮ ಹೆಚ್ಚಾಗಿರುವುದು ನನ್ನ ಗಮನಕ್ಕೆ ಬಂದಿದೆ. ಅಂತಹ ಅಧ್ಯಯನಗಳ ಸಮೀಕ್ಷೆ ಇಲ್ಲಿ ವಿವರಿಸಲಾಗಿದೆ.

ಮಕ್ಕಳ ಸಾಹಿತ್ಯ ಕೃತಿಗಳನ್ನು ರಚಿಸಿದ ಸಾಹಿತಿಗಳಾದ ಪಂಜೆಮಂಗೇಶರಾಯ, ಗೋವಿಂದ ಪೈ, ಕುವೆಂಪು, ಹರ್ಡೇಕರ ಮಂಜಪ್ಪ, ಶಿವರಾಮ ಕಾರಂತ, ಜಿ. ಪಿ. ರಾಜರತ್ನಂ, ದಿನಕರ ದೇಸಾಯಿ, ಸಿದ್ದಯ್ಯ ಪುರಾಣಿಕ, ಶಂ. ಗು. ಬಿರಾದಾರ, ಸಿಸು ಸಂಗಮೇಶ, ಪಳಕಳ ಸೀತಾರಾಮ ಭಟ್, ನಾ. ಡಿಸೋಜಾ, ಕಂಚ್ಯಾಣಿ ಶರಣಪ್ಪ ಮೊದಲಾದವರ ಬದುಕು-ಬರಹವನ್ನು ಕುರಿತು ಅಧ್ಯಯನಗಳು ನಡೆದಿವೆ. ಆದರೆ ಇಲ್ಲಿ ಬದುಕನ್ನು ವೈಭವಿಕರಿಸಿ, ಮಕ್ಕಳ ಸಾಹಿತ್ಯ ಕುರಿತಾದ ಬರಹ ಸಂಕ್ಷಿಪ್ತಗೊಳಿಸಿರುವುದು ಎದ್ದು ತೋರುತ್ತದೆ.

ಮಕ್ಕಳ ಸಾಹಿತ್ಯದ ಉದಯ ಕಾಲದಿಂದ ಇಲ್ಲಿಯವರೆಗಿನ ಕೃತಿಗಳು ಹೆಚ್ಚಿನ ಪ್ರಮಾಣದ ಅಧ್ಯಯನ ಹಾಗೂ ವಿಮರ್ಶೆಗೆ ಒಳಗಾಗಿಲ್ಲದಿರುವುದು ಕಂಡುಬರುತ್ತದೆ. ಸಾಹಿತ್ಯ ಸಮ್ಮೇಳನಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಮಕ್ಕಳ ಸಾಹಿತ್ಯ ಪ್ರಕಾರದ ಕೃತಿಗಳು

ವಿಮರ್ಶೆಗೆ ಒಳಗಾಗುವ ಸಂದರ್ಭಗಳು ಬಲು ಕಡಿಮೆ. ಮಕ್ಕಳ ಸಾಹಿತ್ಯದ ನೆಲೆ, ವಸ್ತು, ವಿನ್ಯಾಸ, ಪರಿಣಾಮ, ಪ್ರಕ್ರಿಯೆಗಳು ತುಲನೆಗೆ ಒಳಗಾಗಬೇಕಿತ್ತು. ಆದರೆ ಮಕ್ಕಳ ಸಾಹಿತ್ಯದ ಅವಲೋಕನ, ಪರಿಚಯಗಳನ್ನು ಬಿಟ್ಟರೆ ಗಂಭೀರ ಅಧ್ಯಯನಕ್ಕೆ ಒಳಗಾಗಿಲ್ಲ. ಮಕ್ಕಳ ಸಾಹಿತ್ಯದ ವಾತಾವರಣ ಇನ್ನೂ ಉತ್ತಮ ರೀತಿಯಲ್ಲಿ ನಿರ್ಮಾಣವಾಗಬೇಕಿದೆ. ಮಕ್ಕಳ ಲೋಕವನ್ನು ಅದರದಿಂದ ನೋಡುವ ನವೋದಯ ಕಾಲದ ಸಮಗ್ರ ನೋಟ ಮತ್ತೆ ತೆರೆದುಕೊಳ್ಳಬೇಕಾದ ಅವಶ್ಯಕತೆಯಿದೆ. ಕಾಲಕ್ಕೆ ಅನುಗುಣವಾಗಿ ವಿಚಾರಗಳ ಚಿಂತನ, ಅಧ್ಯಯನ, ವಿಮರ್ಶೆ, ಪ್ರತಿಕ್ರಿಯೆ ಇತ್ಯಾದಿ ಚಟುವಟಿಕೆಗಳು ನಡೆಯುತ್ತಿದ್ದರೆ ಮಕ್ಕಳ ಸಾಹಿತ್ಯಕ್ಕೂ ಒಂದು ಸಂಚಲನ ಉಂಟಾಗುತ್ತದೆ. ಅಂಥ ವಾತಾವರಣ ಇಂದು ಮೂಡುತ್ತಿರುವುದು ಆಶಾದಾಯಕ ಸಂಗತಿಯಾಗಿದೆ.

ಮಕ್ಕಳ ಸಾಹಿತ್ಯ ಹಾಗೂ ಸಿಸು ಸಂಗಮೇಶ :

ರಾಜೇಂದ್ರ ಗಡಾದರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ, ೨೦೦೯ ರಲ್ಲಿ ಗದುಗಿನ ಸಂಗಮ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಅಧ್ಯಯನದಲ್ಲಿ ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯ ಮತ್ತು ಕನ್ನಡ ಮಕ್ಕಳ ಸಾಹಿತ್ಯ ಪರಂಪರೆ ಸಿಸು ಸಂಗಮೇಶರ ಜೀವನ – ಸಾಧನೆ, ಅವರ ಕೃತಿಗಳ ವಿಶ್ಲೇಷಣೆ, ಅವುಗಳ ಭಾಷೆ, ಶೈಲಿ, ತಂತ್ರ ಹಾಗೂ ಮಕ್ಕಳ ಸಾಹಿತ್ಯಕ್ಕೆ ಸಿಸು ಅವರ ಕೊಡುಗೆ. ಹೀಗೆ ಐದು ಅಧ್ಯಾಯಗಳಲ್ಲಿ ವಿಂಗಡಿಸಿ ಸಿಸು ಸಂಗಮೇಶರ ವ್ಯಕ್ತಿಗತ ಜೀವನಕ್ಕೆ ಮತ್ತು ಅವರ ಕೃತಿಗಳಿಗೆ ಮಹತ್ವ ನೀಡಿದ್ದಾರೆ. ಕನ್ನಡ ನಾಡಿನಲ್ಲಿ ಮಕ್ಕಳ ಸಾಹಿತ್ಯ ಕುರಿತು ಚಳುವಳಿಯನ್ನು ನಡೆಸಿದ ಸಿಸು ಸಂಗಮೇಶರ ಬರಹ–ಬದುಕು ಮತ್ತು ಹೋರಾಟಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಒಳಗೊಂಡಿದೆ.

ಮಕ್ಕಳ ರಂಗಭೂಮಿ – ಪ್ರದರ್ಶನ, ಪ್ರಕ್ರಿಯೆ :

ನಿಂಗು ಸೊಲಗಿಯವರು ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಗೆ ಸಲ್ಲಿಸಿದ ಮಹಾಪ್ರಬಂಧ. ೨೦೧೩ರಲ್ಲಿ ಧಾರವಾಡದ ಚಿಲಿಪಿಲಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಕನ್ನಡ ಮಕ್ಕಳ ರಂಗಭೂಮಿಯನ್ನು ಇಡಿಯಾಗಿ ಅವಲೋಕಿಸುತ್ತಾ ಮನೆಯಲ್ಲಿ ಮಕ್ಕಳಾಟ, ಸೃಜನಾತ್ಮಕ ಆಟ, ಸ್ವಪ್ನ ಹಾಗೂ ವಾಸ್ತವ ನಾಟಕ, ರಂಗಭೂಮಿಯ ವಸ್ತು ವೈವಿಧ್ಯತೆ, ರೂಪಕ, ಪ್ರಹಸನ, ಬೀದಿನಾಟಕ, ಅಣಕು ನಾಟಕ, ರಂಗತಂಡದ ಚಟುವಟಿಕೆ ಮುಂತಾದವುಗಳನ್ನು ವಿಶ್ಲೇಷಿಸುವ ಮೂಲಕ ರಂಗಭೂಮಿಯ ವಿವಿಧ ಸಾಧ್ಯತೆಗಳನ್ನು ಕಟ್ಟಿಕೊಟ್ಟಿದ್ದಾರೆ. ನಾಟಕ ಎಂತಹ ರೂಪಗಳನ್ನು ಹೊಂದಿದೆ. ಅದಕ್ಕೆ ಎಷ್ಟು ಪರಿಶ್ರಮ, ತಾಳ್ಮೆಬೇಕು, ನಾಟಕ ಎಂತಹ ಪ್ರತಿಭೆಗಳನ್ನು ಹೊರಹಾಕಬಹುದು, ಇವೆಲ್ಲ ಪರಿಣಾಮಗಳಿಂದ ಮಕ್ಕಳ ಮನಸ್ಸು ಹೇಗೆ ವಿಕಸನ ಹೊಂದಬಹುದೆಂಬುದನ್ನು ನಿಂಗು ಸೊಲಗಿಯವರು ಅಧ್ಯಯನದ ಮೂಲಕ ವ್ಯಕ್ತಗೊಳಿಸಿದ್ದಾರೆ.

ಕನ್ನಡ ಮಕ್ಕಳ ನಾಟಕ :

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಗೆ ಸಲ್ಲಿಸಿದ ಮಹಾಪ್ರಬಂಧ. ಗಜಾನನ ಶರ್ಮರವರು ಮಕ್ಕಳ ನಾಟಕ ಪರಂಪರೆ, ಮಕ್ಕಳ ನಾಟಕ ನಡೆದು ಬಂದ ದಾರಿ, ಮಕ್ಕಳ ರಂಗ ಚಟುವಟಿಕೆಗಳು ಮತ್ತು ಮಕ್ಕಳ ನಾಟಕಗಳ ವೈಶಿಷ್ಟ್ಯವನ್ನು ಕುರಿತು ವಿಸ್ತಾರವಾದ ಅಧ್ಯಯನ ಕಟ್ಟಿಕೊಟ್ಟಿದ್ದಾರೆ. ಅಧ್ಯಯನದಲ್ಲಿ ಮುಖ್ಯವಾಗಿ ಮಕ್ಕಳ ನಾಟಕದ ಗುಣಲಕ್ಷಣಗಳನ್ನು, ಮಕ್ಕಳಿಗೇಕೆ ನಾಟಕ, ಮಕ್ಕಳ ನಾಟಕದ ಭಾಷೆ, ನಾಟಕಗಳಲ್ಲಿ ಸೃಜನಶೀಲತೆ, ಮಕ್ಕಳ ರಂಗಭೂಮಿಗೆ ಕಂಪನಿಗಳ ಕೊಡುಗೆ ಮುಂತಾದ ವಿಷಯಗಳನ್ನು ಮಕ್ಕಳ ನಾಟಕ ಮತ್ತು ರಂಗಭೂಮಿಯ ಕುರಿತು ಆರಂಭ ಕಾಲದಿಂದ ಮೂಡಿಬಂದಿದೆ. ಗಜಾನನ ಶರ್ಮರವರು ಹೇಳುವಂತೆ, ಕನ್ನಡದ ಸಂದರ್ಭದಲ್ಲಿ ಇಂದಿನ ಅಗತ್ಯಗಳಿಗೆ ತಕ್ಕ ಪ್ರಮಾಣದಲ್ಲಿ ಮಕ್ಕಳ ನಾಟಕ ಕ್ಷೇತ್ರ ಬೆಳೆದಿಲ್ಲವೆಂಬ ಅಭಿಪ್ರಾಯವನ್ನು ಮನ್ನಿಸುತ್ತಲೇ, ಅದೊಂದು ಪ್ರತ್ಯೇಕ ಘಟಕವಾಗಿ ಅಸ್ತಿತ್ವದಲ್ಲಿರುವ ಸತ್ಯವನ್ನು ಒಪ್ಪಿಕೊಳ್ಳಬೇಕಾಗಿದೆ. ಮಕ್ಕಳ ನಾಟಕಗಳನ್ನು ದೊಡ್ಡವರ ನಾಟಕಗಳಿಂದ ಭಿನ್ನವಾಗಿಸುವ ಅಂಶಗಳಾವವು; ಮಕ್ಕಳ ನಾಟಕ ಹೇಗೆ ತನ್ನ ಪ್ರತ್ಯೇಕತೆ ಕೇವಲ ಪರಿಗಣನೆಯೋ ಅಥವಾ ವಾಸ್ತವವೋ ಎಂಬ ಪ್ರಶ್ನೆಗಳನ್ನು ಎತ್ತಿಕೊಂಡು ನಾವು ಮಕ್ಕಳ ನಾಟಕಗಳತ್ತ ಗಮನಹರಿಸೋಣ, ಎನ್ನುವ ಮಾತುಗಳು ಮಕ್ಕಳ ನಾಟಕ ಸಾಹಿತ್ಯದ ಮೌಲ್ಯವನ್ನು ತಿಳಿಸುತ್ತವೆ.

ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ :

ಡಾ. ನಿರುಪಮಾರವರು ಈ ಕೃತಿಯಲ್ಲಿ ಭಾರತೀಯ ಭಾಷೆಗಳಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆಯ ಕ್ರಮವನ್ನು ವಿವರಿಸಿದ್ದಾರೆ. ೨೦೦೪ ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿಯಿಂದ ಪ್ರಕಟಗೊಂಡಿದೆ. ಗುಜರಾತಿ, ಕೊಂಕಣಿ, ಕಶ್ಮೀರಿ, ಉರ್ದು, ಅಸ್ಸಾಮಿ, ತೆಲಗು, ತಮಿಳು, ಕನ್ನಡ, ಪಂಜಾಬಿ, ಮರಾಠಿ, ಬಂಗಾಲಿ, ಮಲಿಯಾಳಿ, ಹಿಂದಿ ಮೊದಲಾದ ಭಾಷೆಗಳಲ್ಲಿ ನಡೆದಿರುವ ಬಾಲ ಸಾಹಿತ್ಯದ ಬೆಳವಣಿಗೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಡಾ. ನಿರುಪಮಾ ಅವರು ಮಾಡಿದ್ದಾರೆ. ವಿಷಯ ಸಂಗ್ರಹದೊಂದಿಗೆ ಕೃತಿ ಮೌಲಿಕವೆನಿಸುತ್ತದೆ. ಇದು ಪ್ರಾದೇಶಿಕ ಭಾಷೆಗಳಲ್ಲಿ ಬಾಲ ಸಾಹಿತ್ಯದ ಕುರಿತು ನಡೆದಿರುವ ಕೆಲಸವನ್ನು ತಿಳಿದುಕೊಳ್ಳಲು ಸಾಮಗ್ರಿಯನ್ನು ಒದಗಿಸುತ್ತದೆ.

ಈಶ್ವರ ಕಮ್ಮಾರ ಅವರ ಮಕ್ಕಳ ಕವಿತೆಗಳು :

ಕೆ. ಮೀರಾಬಾಯಿಯವರು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್. ಪ್ರಬಂಧ. ೨೦೧೧ರಲ್ಲಿ ಮೈಸೂರಿನ ವೀಣಾ ಪ್ರಕಾಶನದಿಂದ ಪ್ರಕಟಗೊಂಡಿದೆ. ಕಮ್ಮಾರರು ಉತ್ತರ ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ ನೆಲೆಗೊಳ್ಳಲು ಬಲು ಪರಿಶ್ರಮ ಪಟ್ಟಿರುವುದು ಕಂಡುಬರುತ್ತದೆ. ಧಾರವಾಡ ಭಾಷೆಯ ಸೊಗಡಿನಿಂದ ಇರುವ ಅವರ ಕವಿತೆಗಳನ್ನು ಮೀರಾಬಾಯಿಯವರು ಸುಂದರವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ನವೋದಯ ಸಂದರ್ಭದ ದೇಶಾಭಿಮಾನ ಮೂಡಿಸುವಂತಹ ಧೋರಣೆ-ಪ್ರೇರಣೆಗಳು ಕವಿತೆಗಳಲ್ಲಿ ಕಾಣಬಹುದು. ಇದು ಈಶ್ವರ ಕಮ್ಮಾರರ ಸಮಗ್ರ ಸಾಹಿತ್ಯ ಅಧ್ಯಯನಕ್ಕೆ ಮಾರ್ಗದರ್ಶಿಯಾಗಿದೆ ಎಂದು ಹೇಳಬಹುದು.

ಕಂಚ್ಯಾಣಿಯವರ ಶಿಶು ಕಾವ್ಯ :

ಗುರುರಾಜ ಮೇಡಿದಾರ ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಗೆ ಸಲ್ಲಿಸಿದ ಎಂ.ಫಿಲ್. ಪ್ರಬಂಧ. ೨೦೧೦ ರಲ್ಲಿ ಸಂಕ್ರಾಂತಿ ಪ್ರಕಾಶನ, ವಿಜಯಪುರ ಇವರಿಂದ ಪ್ರಕಟಗೊಂಡಿದೆ. ಕಂಚ್ಯಾಣಿ ಶರಣಪ್ಪನವರ ಮಕ್ಕಳ ಸಾಹಿತ್ಯವನ್ನು ಸಮಗ್ರವಾಗಿ ಅವಲೋಕಿಸುವ ಕೃತಿ. ಕಂಚ್ಯಾಣಿಯವರ ಬಾಲ್ಯದ ಸಂವೇದನೆಗಳನ್ನು, ಶಿಕ್ಷಕ ವೃತ್ತಿಯ ಅನುಭವ, ಪ್ರಾದೇಶಿಕ ನೆಲೆಯ ಆಗು-ಹೋಗುಗಳನ್ನು, ನಾಡಿನ ಗೌರವ, ದೇಶಾಭಿಮಾನ, ಭಾವೈಕ್ಯತೆ, ಪರಿಸರ ಕಾಳಜಿ ಮೊದಲಾದ ವಸ್ತುವನ್ನು ಆಯ್ದುಕೊಂಡು ರಚನೆಯಾದ ಶಿಶು ಕಾವ್ಯವನ್ನು ಗುರುರಾಜ ಮೇಡಿದಾರರು ವಿಮರ್ಶನಕ್ಕೆ ಒಳಪಡಿಸಿ ಮಕ್ಕಳ ಕಾವ್ಯದ ವೈವಿಧ್ಯತೆಯನ್ನು ಅನಾವರಣಗೊಳಿಸಿದ್ದಾರೆ. ಇದು ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಮಾರ್ಗದರ್ಶಿಯಾಗಿದೆ.

ವಿಜಯಪುರ ಜಿಲ್ಲೆಯ ಮಕ್ಕಳ ಸಾಹಿತ್ಯ :

ಕಾಂಬಳೆ ರಜನಿ ತುಕಾರಾಮರವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ. ವಿಜಯಪುರ ಜಿಲ್ಲೆಯ ಮಕ್ಕಳ ಸಾಹಿತಿಗಳನ್ನು ಕುರಿತು ನಡೆದ ಅಧ್ಯಯನವಾಗಿದ್ದು, ಮಕ್ಕಳ ನೆಲೆಗಳನ್ನು ಕುರಿತು ಡಾ. ರಜನಿ ಕಾಂಬಳೆಯವರು ವಿಶ್ಲೇಷಣೆಗೆ ತೊಡಗಿರುವುದು ಮೌಲಿಕವಾದ ಸಂಗತಿ. ಸೀಮಿತವಾದ ಅಧ್ಯಯನವಾದರೂ ಕೆಲವು ರೀತಿಯಿಂದ ಅಧ್ಯಯನ ಗಮನ ಸೆಳೆಯುತ್ತದೆ. ಮಕ್ಕಳ ಕವಿತೆ, ಕಥೆ, ಜೀವನ ಚರಿತ್ರೆ ಇವುಗಳನ್ನು ಗಮನಿಸಿ ಅಧ್ಯಯನ ರೂಪಗೊಂಡಿದೆ. ನನ್ನ ಅಭಿಪ್ರಾಯದಂತೆ ಡಾ. ರಜನಿ ತುಕಾರಾಮರು ವಿಜಯಪುರ ಜಿಲ್ಲೆಯ ಮಕ್ಕಳ ಸಾಹಿತ್ಯದ ರೂಪಗಳನ್ನು ಕೆಲವು ಕವಿಗಳನ್ನು ಗುರುತಿಸಿಕೊಂಡು ಕಟ್ಟಿಕೊಟ್ಟಿರುವುದು ಕಂಡುಬರುತ್ತದೆ. ವಿವರಣೆಯೊಂದಿಗೆ ಸಾಗುವ ಈ ಪ್ರಬಂಧ ಮಕ್ಕಳ ಸಾಹಿತ್ಯದ ಅಧ್ಯಯನಕ್ಕೆ ಸಹಕಾರಿಯಾಗಿದೆ.

ಈ ರೀತಿಯ ಕೆಲವು ಅಧ್ಯಯನಗಳನ್ನು ನಾನು ಗಮನಿಸಿರುವೆನು. ಇನ್ನೂ ಕೆಲವು ಬರಹಗಾರರು ತಮ್ಮ ಅನುಭವದಿಂದ ಮಕ್ಕಳ ಸಾಹಿತ್ಯ ಕುರಿತು ಕೃತಿಗಳನ್ನು, ಬಿಡಿ ಲೇಖನಗಳನ್ನು ರಚಿಸಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಈ ಮುಂದಿನಂತಿವೆ.

ಮಕ್ಕಳ ಸಾಹಿತ್ಯ ಶತಮಾನ :

ಆನಂದ ಪಾಟೀಲ ಹಾಗೂ ನ. ರವಿಕುಮಾರರವರು ಸಂಪಾದಿಸಿದ ಕೃತಿ. ೨೦೦೧ ರಲ್ಲಿ ಬೆಂಗಳೂರಿನ ಅಭಿನವ ಪ್ರಕಾಶನದಿಂದ ಪ್ರಕಟಗೊಂಡಿದೆ. ಮಕ್ಕಳ ಸಾಹಿತ್ಯ ಕುರಿತಾದ ಉಪನ್ಯಾಸ ಮಾಲೆಯಾದ ಕೃತಿ ಒಟ್ಟು ಹನ್ನೆರಡು ಮೌಲಿಕ ಲೇಖನಗಳನ್ನು ಒಳಗೊಂಡಿದೆ. ನವೋದಯ ಕಾಲದಿಂದ ಮಕ್ಕಳ ಸಾಹಿತ್ಯವನ್ನು ಕಟ್ಟಿಕೊಟ್ಟ ಮಹನಿಯರನ್ನು

ಗುರುತಿಸಿ, ಅವರ ಸಾಹಿತ್ಯ ಮಾದರಿಗಳನ್ನು ಹೊರತರುವ ಉದ್ದೇಶ ಇಲ್ಲಿದೆ. ಮಕ್ಕಳ ಸಾಹಿತ್ಯದಲ್ಲಿ ಹೊಸಗಾಲ, ನಾಟಕ ಮತ್ತು ಸಿನೇಮಾಗಳಲ್ಲಿ ಮಕ್ಕಳ ಸಾಹಿತ್ಯ, ಕನ್ನಡಕ್ಕೆ ಬಂದ ಅನ್ಯಭಾಷೆ ಸಾಹಿತ್ಯ ಮೊದಲಾದ ಲೇಖನಗಳು ಮೌಲಿಕವಾಗಿವೆ. ಎನ್. ಶ್ರೀನಿವಾಸ ಉಡುಪ, ಟಿ. ಎಸ್. ನಾಗರಾಜ ಶೆಟ್ಟಿ, ಡಾ. ಶ್ರೀಪಾದ ಶೆಟ್ಟಿ, ಆರ್. ಪಿ. ಭಂಡಾರಿ, ಆನಂದ ಪಾಟೀಲ, ಬಸು ಬೇವಿನಗಿಡದ, ರಾಮಮೂರ್ತಿ ಕೆರೆಮನೆ, ಆರ್. ಕೆ. ಶಾನಭೋಗ, ಎನ್. ಶಂಕರನಾರಾಯಣ ಇವರು ಮಕ್ಕಳ ಸಾಹಿತ್ಯದ ಹಲವು ಮಜಲುಗಳನ್ನು ತಮ್ಮ ಉಪನ್ಯಾಸಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಮಕ್ಕಳ ಸಾಹಿತ್ಯ ಚಿಂತನ :

ಶಿವಶಂಕರ ಹಿರೇಮಠ ಮತ್ತು ಈಶ್ವರ ಕಮ್ಮಾರರವರು ಸಂಪಾದಿಸಿದ ಮಕ್ಕಳ ಸಾಹಿತ್ಯ ಕೃತಿ. ೧೯೮೯ ರಲ್ಲಿ ಧಾರವಾಡದ ಮಕ್ಕಳ ಮನೆ ಪ್ರಕಾಶನದಿಂದ ಪ್ರಕಟಗೊಂಡಿದೆ. ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಕಮ್ಮಟದಲ್ಲಿ ವಿದ್ವಾಂಸರು ನೀಡಿದ ಉಪನ್ಯಾಸಗಳ ಸಂಪುಟವೇ ಈ ಕೃತಿ. ೧೯೮೫ ರಲ್ಲಿ ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡಮಿಯ ಸಹಯೋಗದಿಂದ ಧಾರವಾಡದಲ್ಲಿ ಮಕ್ಕಳ ಸಾಹಿತ್ಯ ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ, ಮಕ್ಕಳ ಸಾಹಿತ್ಯಕ್ಕೆ ಉತ್ತಮ ಬೆಳವಣಿಗೆ ಅವಶ್ಯಕವೆಂದು ಭಾವಿಸಿ ಹತ್ತು ದಿವಸ ಮಕ್ಕಳ ಸಾಹಿತ್ಯ ಕಮ್ಮಟ ಏರ್ಪಡಿಸಿ, ಹಲವು ವಿದ್ವಾಂಸರಿಂದ ಸಂಪಾದನೆಗೊಂಡ ಉಪನ್ಯಾಸಗಳು ಒಳಗೊಂಡಿವೆ. ಸುಮಾರು ಮೂವತ್ತು ಜನ ಮಕ್ಕಳ ತಜ್ಞರು ಮಂಡಿಸಿದ ಸಾಹಿತ್ಯ ಮಾಲೆ ಮಕ್ಕಳ ಸಾಹಿತ್ಯ ಚಿಂತನ. ಮಕ್ಕಳ ಸಾಹಿತ್ಯ-ಶಿಕ್ಷಣ ಶಾಸ್ತ್ರ, ಸಮೂಹ ಮಾಧ್ಯಮಗಳು ಮತ್ತು ಮಕ್ಕಳ ಸಾಹಿತ್ಯ. ಮಕ್ಕಳ ಸಾಹಿತ್ಯ ಮತ್ತು ಭಾಷಿಕ ಅಧ್ಯಯನ, ಮಕ್ಕಳ ಸಾಹಿತ್ಯ ಮತ್ತು ದರ್ಶನಶಾಸ್ತ್ರ, ಮಕ್ಕಳ ಸಾಹಿತ್ಯದಲ್ಲಿ ಕಥೆ ಕಾದಂಬರಿಗಳು, ನಾಟಕ ವಸ್ತು ಮತ್ತು ತಂತ್ರ, ಮಕ್ಕಳ ಸಾಹಿತ್ಯ ಸಾಮಾಜಿಕ ಸಾಂಸ್ಕೃತಿಕ ಹಿನ್ನೆಲೆ, ಕನ್ನಡದಲ್ಲಿ ಮಕ್ಕಳ ಪ್ರವಾಸ ಸಾಹಿತ್ಯ, ಮಕ್ಕಳ ಕವನಗಳ ವಸ್ತು, ಮೊದಲಾದ ವಿಷಯಗಳನ್ನು ಮಕ್ಕಳ ಸಾಹಿತಿಗಳು ತಮ್ಮ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಹಿರಿಯ ಸಾಹಿತಿಗಳಾದ ದು. ನಿಂ. ಬೆಳಗಲಿ, ಎ. ಕೆ. ರಾಮೇಶ್ವರ, ಈಶ್ವರಚಂದ್ರ ಚಿಂತಾಮಣಿ, ಸಂಗಮೇಶ ಸವದತ್ತಿಮಠ, ಅಬ್ದುಲ್ ರಹಮಾನ ಪಾಷಾ, ವಾಮನ ಬೇಂದ್ರೆ, ಪರಶುರಾಮ ಚಿತ್ರಗಾರ, ಶಂ. ಗು. ಬಿರಾದಾರ, ಈಶ್ವರ ಕಮ್ಮಾರ, ಶಿವಶಂಕರ ಹಿರೇಮಠ ಮೊದಲಾದ ತಜ್ಞರು ಭಾಗವಹಿಸಿರುವುದು ಹೆಮ್ಮೆಯ ಸಂಗತಿ. ಇದೊಂದು ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಉತ್ತಮ ಮಾರ್ಗದರ್ಶಿ ಕೃತಿಯಾಗಿದೆ.

ಮಕ್ಕಳ ಸಾಹಿತ್ಯ ಸಂಪದ :

ಈಶ್ವರ ಕಮ್ಮಾರ ಅವರು ಮಕ್ಕಳ ಸಾಹಿತ್ಯದ ಕುರಿತು ಅಪಾರವಾದ ಹಂಬಲವುಳ್ಳವರು ಮತ್ತು ಈ ಕ್ಷೇತ್ರದಲ್ಲಿ ವಿವಿಧ ಬಗೆಯಲ್ಲಿ ತೊಡಗಿಕೊಂಡವರು. ತಮ್ಮ ಬದುಕಿನುದ್ದಕ್ಕೂ ವಿಚಾರ ಗೋಷ್ಠಿ, ಸಾಹಿತ್ಯ ಕಮ್ಮಟಗಳಲ್ಲಿ ಭಾಗವಹಿಸಿ ಮಕ್ಕಳ

ಸಾಹಿತ್ಯದ ಕುರಿತು ಉಪನ್ಯಾಸ ನೀಡಿರುವರು. ಆ ಉಪನ್ಯಾಸಗಳ ಮಾಲಿಕೆಯೇ ಈ ಕೃತಿ. ೨೦೧೧ ರಲ್ಲಿ ಬೆಳಗಾವಿಯ ಆದಿತ್ಯಾ ಪಬ್ಲಿಕೇಷನದಿಂದ ಪ್ರಕಟಗೊಂಡಿದೆ. ಈಶ್ವರ ಕಮ್ಮಾರರು ಹೇಳುವಂತೆ, ಮಕ್ಕಳ ಸಾಹಿತ್ಯ ಸಂಪದವೆಂದರೆ ಇದು ಮಕ್ಕಳ ಸಾಹಿತ್ಯ ಚರಿತ್ರೆಯೆಂದು ಯಾರೂ ಭಾವಿಸಬೇಕಾಗಿಲ್ಲ. ಮಕ್ಕಳ ಸಾಹಿತ್ಯ ಹೇಗೆ ಹರಿದು ಬಂದಿತೆಂಬುದರ ಸುಳಿವು ಇಲ್ಲಿರುವುದು. ಸಮಗ್ರ ಮಕ್ಕಳ ಸಾಹಿತಿಗಳ ಮಾಹಿತಿ ಇಲ್ಲಿಲ್ಲ. ಯಾಕೆಂದರೆ ದಕ್ಷಿಣ ಕರ್ನಾಟಕ ಭಾಗದ ಆದೆಷ್ಟೋ ಮಕ್ಕಳ ಸಾಹಿತಿಗಳ ಪರಿಚಯವಾಗಲಿ, ಅವರ ಕೃತಿಗಳ ಮಾಹಿತಿಯಾಗಲಿ ನನಗೆ ಲಭ್ಯವಿಲ್ಲ. ಅದಕ್ಕಾಗಿ ಅಂಥ ಬಹಳ ಜನರ ಪ್ರಸ್ತಾಪವಾಗಿಲ್ಲ. ಮಕ್ಕಳ ಸಾಹಿತ್ಯ ಅಧ್ಯಯನ ಕೈಗೊಳ್ಳುವವರಿಗೆ ಇದೊಂದು ಮಾರ್ಗತೋರುವ ಕೃತಿ ಎನ್ನಬಹುದು.

ಮಕ್ಕಳ ಸಾಹಿತ್ಯ ಚಿಂತನ – ಸಂ. ಶಂ. ಗು. ಬಿರಾದಾರ :

ಶಂ. ಗು. ಬಿರಾದಾರ ಅವರು ಸಂಪಾದಿಸಿದ ಮಕ್ಕಳ ಸಾಹಿತ್ಯ ಚಿಂತನ ಕೃತಿ ಕೆಲವು ಉಪನ್ಯಾಸಗಳ ಮಾಲೆಯಾಗಿದೆ. ವಿಜಯಪುರ ಜಿಲ್ಲೆಯಲ್ಲಿ ನಡೆದಿರುವ ಮಕ್ಕಳ ಸಾಹಿತ್ಯ ಕಮ್ಮಟಗಳಲ್ಲಿ ಮಂಡಿಸಿದ ಉಪನ್ಯಾಸಗಳು ಇಲ್ಲಿವೆ. ೨೦೦೯ ರಲ್ಲಿ ವಿಜಯಪುರದ ಮಕ್ಕಳ ಸಾಹಿತ್ಯ ಸಂಗಮ ಪ್ರಕಾಶನದಿಂದ ಪ್ರಕಟಗೊಂಡಿದೆ. ಮಕ್ಕಳ ಜನಪದ ಹಾಡುಗಳು, ಮಕ್ಕಳ ಕಥಾಲೋಕ, ಮಕ್ಕಳ ಚಿತ್ರಕಲೆಯ ಬೆಳವಣಿಗೆ, ನಾವು–ನಮ್ಮ ಮಕ್ಕಳು, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳ ಪಾತ್ರ, ಮಕ್ಕಳ ನಾಟಕ ಸಾಹಿತ್ಯ, ಶಿಸು ಪ್ರಾಸಗಳು ಹೀಗೆ ಮಕ್ಕಳ ಸಾಹಿತ್ಯದ ಚಿಂತನೆಗಳು ಈ ಕೃತಿಯಲ್ಲಿ ಮೂಡಿಬಂದಿವೆ. ಮಕ್ಕಳ ಸಾಹಿತ್ಯದ ಕುರಿತು ಶಂ. ಗು. ಬಿರಾದಾರ, ಕಾಡಣ್ಣ ಹೊಸಟ್ಟಿ, ಆನಂದ ಪಾಟೀಲ, ಅಶೋಕ ಚೋಳಚಗುಡ್ಡ, ಚಂದ್ರಕಾಂತ ಕರದಳ್ಳಿ, ಜಯವಂತ ಕಾಡದೇವರ, ಹ. ಮ. ಪೂಜಾರ, ಶರಣಪ್ಪ ಕಂಚ್ಯಾಣಿ ಮೊದಲಾದವರು ನೀಡಿದ ಉಪನ್ಯಾಸಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಮಕ್ಕಳ ವಿವಿಧ ಮನೋಧರ್ಮದ ಕುರಿತು ಅವಲೋಕಿಸಿರುವುದು ಕಂಡುಬರುತ್ತದೆ.

ಮಕ್ಕಳ ಸಾಹಿತ್ಯ :

ಡಾ. ಬಸು ಬೇವಿನಗಿಡದ ಅವರು ಸಂಪಾದಿಸಿರುವ ಮಕ್ಕಳ ಸಾಹಿತ್ಯ ಕೃತಿ. ೨೦೧೫ ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಇವರಿಂದ ಪ್ರಕಟಗೊಂಡಿದೆ. ಮಕ್ಕಳ ಸಾಹಿತ್ಯ ಚರಿತ್ರೆಯನ್ನು ಮೊದಲ ಬಾರಿಗೆ ಕಟ್ಟಿಕೊಡುವ ಪ್ರಯತ್ನ ಇದಾಗಿದೆ. ಹದಿನೆಂಟು ಅಧ್ಯಾಯಗಳಲ್ಲಿ ಕೃತಿಯನ್ನು ವಿಂಗಡಿಸಿ, ಪ್ರಮುಖವಾಗಿ ಕಾಣುವ ಆರಂಭಿಕ ಮಕ್ಕಳ ಬರಹಗಾರದಿಂದ ಹೊಸ ತಲೆಮಾರಿನ ಬರಹಗಾರರ ಸಂವೇದನೆಗಳು ಇಲ್ಲಿ ಅಭಿವ್ಯಕ್ತಗೊಂಡಿವೆ. ಬಾಲ್ಯದ ಸಂವೇದನೆ, ಮಕ್ಕಳ ಸಾಹಿತ್ಯ ಸಂಕಲನಗಳು, ಮಕ್ಕಳ ಸಾಹಿತ್ಯ ವಿಮರ್ಶೆ ಕುರಿತು ಡಾ. ಬಸು ಬೇವಿನಗಿಡದ ಅವರ ಕೆಲಸ ಹಿರಿದಾದುದು. ಈ ಕೃತಿಯು ಮುಖ್ಯವಾಗಿ ವಿವಿಧ ಲೇಖಕರು ತಮ್ಮ ನೆಲೆಯಲ್ಲಿ ಕಂಡುಕೊಂಡ ಮಕ್ಕಳ ಸಾಹಿತ್ಯದ ಕುರಿತು ಅವಲೋಕನ ಮಾಡಿರುವುದು ಕಂಡುಬರುತ್ತದೆ. ಘಟಾನುಘಟಿ

ಮಕ್ಕಳ ತಜ್ಞರಾದ ಡಾ. ಆನಂದ ಪಾಟೀಲ, ಡಾ. ಬಸು ಬೇವಿನಗಿಡದ, ಡಾ. ಚಿಂತಾಮಣಿ ಕೊಡ್ಲೆಕೆರೆ, ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಡಾ. ರಾಜೇಂದ್ರ ಗಾಡದ ಇವರ ಲೇಖನಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಶಿಕ್ಷಕ ಸಾಹಿತಿಗಳ ಗಮನಾರ್ಹ ಕೊಡುಗೆ, ಮಕ್ಕಳ ರಂಗಭೂಮಿ, ಕನ್ನಡ ಪಠ್ಯಪುಸ್ತಕಗಳು ಮತ್ತು ಮಕ್ಕಳ ಸಾಹಿತ್ಯದ ವಿಕಾಸ, ಮಕ್ಕಳ ಸಾಹಿತ್ಯದಲ್ಲಿ ವೈಚಾರಿಕ ನಿಲವುಗಳು, ಮಕ್ಕಳ ಸಾಹಿತ್ಯ ಮತ್ತು ವಿದ್ಯುನ್ಮಾನ ಮಾಧ್ಯಮ ಇನ್ನೂ ಹಲವು ಮೌಲಿಕವಾದ ವಿಷಯಗಳನ್ನು ಈ ಗ್ರಂಥ ಒಳಗೊಂಡಿದೆ.

ತಟ್ಟು ಚಪ್ಪಾಳೆ ಪುಟ್ಟ ಮಗು :

ಬೋಳುವಾರು ಮಹಮ್ಮದ ಕುಂಞ ಅವರು ಸಂಪಾದಿಸಿರುವ 'ತಟ್ಟು ಚಪ್ಪಾಳೆ ಪುಟ್ಟ ಮಗು' ಕೃತಿಯಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆಯನ್ನು ಕುರಿತು ಕಟ್ಟಿಕೊಟ್ಟಿದ್ದಾರೆ. ೧೮೭೫ ರಿಂದ ೧೯೭೫ ರವರೆಗಿನ ಕನ್ನಡದ ಪ್ರಮುಖ ಬರಹಗಾರರ ಮಕ್ಕಳ ಕವಿತೆಗಳನ್ನು ಒಳಗೊಂಡಿದೆ. ಹಾಗೆಯೇ ಮಕ್ಕಳ ಸಾಹಿತ್ಯ ರಚನೆಯ ತೊಡಕುಗಳನ್ನು ಕುರಿತು ಬೋಳುವಾರರು ನೀಡಿರುವ ಸಲಹೆಗಳು ಪ್ರಾಸ್ತಾವಿಕವಾಗಿ ವ್ಯಕ್ತಗೊಂಡಿವೆ. "ಇಪ್ಪತ್ತನೆಯ ಶತಮಾನದ ಆದಿಯಿಂದ ರಚನೆಗೊಂಡ ವಿವಿಧ ಬಗೆಯ ಶಿಸು ಗೀತೆಗಳು ಕೇಳುವವರಿಲ್ಲದೇ ಮಾಯವಾಗುತ್ತಿರುವ ಕಾಲದಲ್ಲಿ ಅವುಗಳನ್ನು ಸಂಪಾದಿಸಿದ ಬೋಳುವಾರು ಅವರ ಶ್ರಮ ಸಾರ್ಥಕವಾಗಬೇಕಾದರೆ ಈ ಗೀತೆಗಳನ್ನು ತಮ್ಮ ಮಕ್ಕಳು ಸವಿಯಲಿ ಎಂದು ಚಿಂತಿಸುವ ಹಿರಿಯರು ಬೇಕು. ಮಕ್ಕಳ ಸಹಜ ವಿಕಾಸಕ್ಕೆ ಹಾತೋರಿಯುವ ಶಿಕ್ಷಕರು ಬೇಕು ಹಾಗೂ ಶಿಕ್ಷಣ ಇಲಾಖೆಯು ಬೇಕು. ಇದು ನಮ್ಮ ಮಕ್ಕಳಿಗೆ ಹಿರಿಯರು ಸಲ್ಲಿಸಲೇಬೇಕಾದ ಋಣ" ಎನ್ನುವ ಶಿವರಾಮ ಕಾರಂತರ ಮುನ್ನುಡಿ ಕೃತಿಯ ಹೂರಣ ಬಿಚ್ಚಿಡುತ್ತದೆ. ಶತಮಾನದಿಂದ ಮಕ್ಕಳಿಗೆ ನಾವೇನು ಕೊಟ್ಟಿದ್ದೇವೆ ಎಂಬುದರ ಸಾಕ್ಷಿ ಈ ಕೃತಿ ಎಂದು ಡಾ. ಕೀರ್ತಿನಾಥ ಕುರ್ತಕೋಟಿಯವರು ವ್ಯಕ್ತಪಡಿಸಿದ ನುಡಿಗಳನ್ನು ನೆನೆಯಲೇಬೇಕು.

ಹೀಗೆ ಕೆಲವು ಕೃತಿಗಳು, ಮಕ್ಕಳ ಸಾಹಿತಿಗಳ, ಬರಹಗಾರರ ಬದುಕು ಮತ್ತು ಬರಹ ಕುರಿತಾಗಿ ಹೊರಬಂದಿವೆ. ಆದರೆ ನಿರ್ದಿಷ್ಟವಾಗಿ ಮಕ್ಕಳ ಸಾಹಿತ್ಯ ಅಧ್ಯಯನ ಕಡಿಮೆ ಎನ್ನಬಹುದು. ಈ ಹಿನ್ನೆಲೆಯಾಗಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯ; ಅಭಿವ್ಯಕ್ತಿಯ ತಾತ್ವಿಕ ಸ್ವರೂಪ ಎಂಬ ವಿಷಯ ಅಧ್ಯಯನಕ್ಕೆ ಬಳಸಿಕೊಂಡು ನಿರೂಪಿಸಲಾಗಿದೆ.

ಅಡಿಟಿಪ್ಪಣಿ :

೧) ಬೋಳುವಾರು ಮ. ಕುಂಞ (ಸಂ) : 'ತಟ್ಟು ಚಪ್ಪಾಳೆ ಪುಟ್ಟ ಮಗು' – ಪು.೩೩

❑❑❑❑❑

ಅಧ್ಯಾಯ : ೨

ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಪರಂಪರೆ

ಅಧ್ಯಾಯ – ೩
ಕನ್ನಡದಲ್ಲಿ ಮಕ್ಕಳ ಸಾಹಿತ್ಯ: ಪರಂಪರೆ

ಪ್ರವೇಶ :

ಭಾರತೀಯ ಇತಿಹಾಸ ಪರಂಪರೆಯಲ್ಲಿ ಮಾನವನ ಬದುಕು ವಿವಿಧ ಮುಖಗಳಿಂದ ಬದಲಾಗುತ್ತ ನಾಗರಿಕ ಹಂತಕ್ಕೆ ಬಂದು ತಲುಪಿರುವುದು ನಮಗೆ ತಿಳಿದ ಸಂಗತಿ. ವೇದಕಾಲ ಮಕ್ಕಳ ಬದುಕನ್ನು ರೂಪಿಸುವ, ಸರ್ವತೋಮುಖ ಅಭಿವೃದ್ಧಿಯನ್ನು ಹೊಂದುವ ಸಮಯವಾಗಿತ್ತು. ಮಕ್ಕಳ ಸಾಹಿತ್ಯ ಔದ್ಯೋಗಿಕ ಕ್ರಾಂತಿಯ ಫಲವಾಗಿ ಜನ್ಮತಾಳಿದೆ ಎಂದು ಹೇಳಿದರೆ ತಪ್ಪಾಗಲಾರದು. ಪತಿ–ಪತ್ನಿಯರು ಇಬ್ಬರೂ ಉದ್ಯೋಗದಲ್ಲಿ ನಿರತರಾದ ಸಮಯದಲ್ಲಿ ಮಕ್ಕಳ ಪೋಷಣೆಗಾಗಿ ಹದಿನೇಳನೆಯ ಶತಮಾನದಲ್ಲಿ 'ಅನಾಥ ಮಕ್ಕಳ ಸಂಸ್ಥೆಗಳು' ಜಗತ್ತಿನ ಕೆಲವು ರಾಷ್ಟ್ರಗಳಲ್ಲಿ ಪ್ರಾರಂಭಗೊಂಡಿದ್ದವು. ಈ ಸಂಸ್ಥೆಗಳ ಪ್ರಭಾವದಿಂದ ಮುಂದೆ ಮಕ್ಕಳ ಮನರಂಜನೆಗಾಗಿ ಹೊಸ ರೂಪ ತಾಳಿ ಹತ್ತೊಂಭತ್ತನೆಯ ಶತಮಾನದ ವೇಳೆಗೆ ಕ್ರೈಸ್ತ ಮಿಶನರಿಗಳ ಮೂಲಕ ನಮ್ಮ ನಾಡಿಗೂ ಕಾಲಿಟ್ಟಿತು. 'ಕ್ರೈಸ್ತ ಮಿಶನರಿಗಳು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕ್ರಮಿಕ ಪುಸ್ತಕಗಳನ್ನು ಮುದ್ರಿಸಲು ತೊಡಗಿತು. ಈ ಪುಸ್ತಕಗಳು ಮೊದಲಿಗೆ ಪಾಠಾವಳಿಗಳೇ ಆಗಿದ್ದಂತೆ ಕಂಡುಬರುತ್ತವೆ. ಏಕೆಂದರೆ ಈಗ ನಾವು ಮಕ್ಕಳ ಪದ್ಯವೆಂದು ಕರೆಯುವ ಪದ್ಯದ ರೂಪ–ಲಕ್ಷಣಗಳು ಅವುಗಳಲ್ಲಿ ಇರಲಿಲ್ಲವೆಂದು ಹೇಳಬಹುದು. ಆಗ ಬೇರೆ ಬಗೆಯ ಪುಸ್ತಕಗಳ ಕವಿತೆಗಳನ್ನು ಮಕ್ಕಳಿಗೆ ಕಲಿಸಲಾಗುತ್ತಿತ್ತು – ಎಂದು ಬೋಳುವಾರರು 'ತಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ. ಬಹುಶಃ ಗಂಗಾಧರ ಮಡಿವಾಳೇಶ್ವರ ತುರಮುರಿ ಹಾಗೂ ಚ. ವಾಸುದೇವಯ್ಯ ಇವರೇ ಮೊದಲಿಗೆ ಪ್ರಾಥಮಿಕ ಮಕ್ಕಳ ಕ್ರಮಿಕ ಪುಸ್ತಕಗಳಲ್ಲಿ ಪದ್ಯಗಳನ್ನು ಸೇರಿಕೊಂಡವರು ಎಂದು ಅವರೇ ನಮೂದಿಸಿದ್ದಾರೆ'[೧].

ಕನ್ನಡ ನವೋದಯ ಪೂರ್ವದ ಮಕ್ಕಳ ಸಾಹಿತ್ಯದಲ್ಲಿ ಕೆಲಸ ಮಾಡಿರುವ ಬಹುದೊಡ್ಡ ಹೆಸರು ಶ್ರೀ ಎಸ್. ಜಿ. ನರಸಿಂಹಾಚಾರ್ಯರದು. ಅವರು ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಿಕ್ಷಣದ ವಿದ್ಯಾರ್ಥಿಗಳಿಗಾಗಿ ಸಿದ್ಧಗೊಳಿಸಿದ ಕನ್ನಡ

ಬಾಲಬೋಧೆಗಳು, ಪದ್ಯಸಾರ ಮೊದಲಾದ ಕೃತಿಗಳ ಪಠ್ಯ ಮಂಡಳಿಗಳ ಸದಸ್ಯರಾಗಿದ್ದರು. ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ಅಂದಿನ ಮೈಸೂರು ಸಂಸ್ಥಾನದ ಬಾಲಬೋಧೆಗಳಲ್ಲಿ ಸೇರಿಸಲ್ಪಟ್ಟ ಇಂಗ್ಲೀಷ ಪದ್ಯಗಳ ಅನುವಾದ ಕಾರ್ಯದಲ್ಲಿ ಎಸ್. ಜಿ. ನರಸಿಂಹಚಾರ್ಯರದು ಪ್ರಮುಖ ಪಾತ್ರವಾಗಿತ್ತು. ಅದೇ ರೀತಿಯಾಗಿ ನವೋದಯ ಪೂರ್ವ ಮಕ್ಕಳ ಸಾಹಿತ್ಯ ಸಮೀಕ್ಷೆಯಲ್ಲಿ ಮರೆಯಲಾರದ ಅನೇಕ ಮಹತ್ವದ ಬರಹಗಾರರು ಕಂಡುಬರುತ್ತಾರೆ. ಪ್ರಸಿದ್ಧ 'ಬಾಲಬೋಧೆ'ಯ ಕರ್ತೃ ಚ. ವಾಸುದೇವಯ್ಯ, 'ನೀತಿ ಚಿಂತಾಮಣಿ'ಯ ರೂಪದ ಕಥಾಮಂಜರಿಯನ್ನು ನಿರ್ಮಿಸಿದ ಎಂ. ಎಸ್. ಪುಟ್ಟಣ್ಣ, ಕನ್ನಡ ಶಿಶು ಸಾಹಿತ್ಯದ ಪಿತಾಮಹರೆಂದು ಪ್ರಸಿದ್ಧಿ ಹೊಂದಿರುವ ಪಂಜೆಮಂಗೇಶರಾಯರು, ಮಕ್ಕಳ ನಾಟಕಗಳನ್ನು ಬರೆದ ಎಂ. ಎನ್. ಕಾಮತ್, ಮಕ್ಕಳಿಗಾಗಿ ೧೪೦ ಪುಣ್ಯ ಪುರುಷರ ಜೀವನ ಚರಿತ್ರೆಗಳನ್ನು ಬರೆದಂತಹ ಸುಬೋಧ ರಾಮರಾಯರು, ಮಕ್ಕಳ ಸಾಹಿತ್ಯಕ್ಕಾಗಿ – ಇಡೀ ಬದುಕನ್ನು ಸವೆಸಿದ ಹೊಯ್ಸಳ ಲಕ್ಷ್ಮಣರಾವ್, ಗಂಗಾಧರ ಮಡಿವಾಳೇಶ್ವರ ತುರಮುರಿ, ಶಿವರುದ್ರಪ್ಪ ಸೋ. ಕುಲಕರ್ಣಿ ಮೊದಲಾದವರು ಮಕ್ಕಳ ಸಾಹಿತ್ಯದ ಹೆಜ್ಜೆಗಳನ್ನು ಗುರುತಿಸಿದ ಮೊದಲಿಗರು ಎಂದರೆ ತಪ್ಪಾಗಲಾರದು. ಹತ್ತೊಂಭತ್ತನೆಯ ಶತಮಾನದ ಉತ್ತರಾರ್ಧದ ಸಮಯದಲ್ಲಿ ನಾಡಿನ ಬೇರೆ–ಬೇರೆ ಕಡೆಗಳಲ್ಲಿ ಮಕ್ಕಳ ಸಾಹಿತ್ಯದ ಚಟುವಟಿಕೆಗಳು ಕಂಡುಬರುತ್ತವೆ. ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರು, ಧಾರವಾಡ ಮೊದಲಾದ ಭಾಗಗಳಲ್ಲಿ ಗಟ್ಟಿಯಾದ ಮಕ್ಕಳ ಸಾಹಿತ್ಯದ ಧ್ವನಿ ಮೊಳಗಲು ಪ್ರಾರಂಭಗೊಂಡಿತು.

ನವೋದಯದ ಸಂದರ್ಭದಲ್ಲಿ ಮಕ್ಕಳಿಗಾಗಿ ಪಠ್ಯಪುಸ್ತಕ ರಚಿಸುವ ಪ್ರಯತ್ನಗಳು ನಡೆದಿರುವುದು ಕಂಡುಬರುತ್ತದೆ. ಮಕ್ಕಳಿಗಾಗಿರುವ ಸಾಹಿತ್ಯ ಹೇಗೆ ಇರಬೇಕು ಎಂಬುದರ ಕಲ್ಪನೆಯನ್ನು ಬರಹಗಾರ ಕೃತಿಗಳಲ್ಲಿ ಕಾಣಬಹುದಾಗಿದೆ. ಕೆಲವರಲ್ಲಿ ಭಿನ್ನ–ಭಿನ್ನವಾದ ಅಭಿಪ್ರಾಯಗಳು, ದೃಷ್ಟಿಗಳು ಇರುವುದು ಸಹಜವಾಗಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ವಿ. ಕೆ. ಗೋಕಾಕರು, 'ಇಂಥ ಸಾಹಿತ್ಯದಲ್ಲಿಯೂ ಮುಖ್ಯವಾಗಿ ಬೇಕಾದದ್ದು ಸಾಹಿತ್ಯ ಗುಣವೆಂಬುದನ್ನು ನಾವು ಒಮ್ಮೊಮ್ಮೆ ಮರೆಯುತ್ತೇವೆ. ಸುಲಭ ಭಾಷೆ, ವಿಷಯವು ಎಷ್ಟು ಕಠಿಣವಾದರೂ ಅದನ್ನು ಸಜೀವವಾಗಿಸಿ ಅರ್ಥದ ವಿವಿಧ ಸ್ತರಗಳನ್ನು ಕಲ್ಪಿಸಿಕೊಡುವ ರೂಪಕತೆ, ಪ್ರಸಾದ ಗುಣ, ಇವು ಬಾಲಸಾಹಿತ್ಯದಲ್ಲಿ ಅವಶ್ಯಕವಾಗಿ ಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಕ್ಕಳ ಸಾಹಿತ್ಯ ಪರಂಪರೆ :

ಜಗತ್ತಿನಲ್ಲಿ ಮಕ್ಕಳ ಸಾಹಿತ್ಯ ಔದ್ಯೋಗಿಕ ಕ್ರಾಂತಿಯ ಪರಿಣಾಮದಿಂದ ಜನ್ಮತಾಳಿದ್ದು, ಹತ್ತೊಂಭತ್ತನೆಯ ಶತಮಾನದ ವೇಳೆಗೆ ಕ್ರೈಸ್ತ ಮಿಷನರಿಗಳ ಮೂಲಕ ಕನ್ನಡ ನಾಡಿನಲ್ಲಿಯೂ ನೆಲೆಯೂರಿತೆಂದು ಹೇಳುವವರಾದರೂ ಅದರ ಮೂಲ ಬೇರುಗಳ ಆಳವನ್ನು ತಿಳಿಯಲಾಗದು. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ

ಕನ್ನಡ ಸಾಹಿತ್ಯ ವೈವಿಧ್ಯಮಯವಾಗಿ ಬೆಳೆದುಬಂದಿದೆ. ಅವುಗಳಲ್ಲಿ ಮಕ್ಕಳ ಸಾಹಿತ್ಯ ಒಂದು. ಜನಪದ ಸಾಹಿತ್ಯ ಎಲ್ಲ ಸಾಹಿತ್ಯಕ್ಕೂ ಮೂಲವಾಗಿದೆ. ಮಾನವನ ಹುಟ್ಟಿನೊಂದಿಗೆ ಮಕ್ಕಳಿಗಾಗಿರುವ ಸಾಹಿತ್ಯ ಸೃಷ್ಟಿಯಾಗಿದೆ ಎನ್ನಬಹುದು. ಮಗು ಅಳುವಾಗ, ಹಟಮಾಡುವಾಗ, ತುಂಟತನ ಮಾಡುವಾಗ ನಿರ್ಮಾಣಗೊಂಡ ಸಾಹಿತ್ಯ ನಾದಮಯವಾದ, ಲಯಬದ್ಧವಾದ ಸಾಹಿತ್ಯವು ಪ್ರತಿಯೊಂದು ಪ್ರದೇಶದ ಜನರ ಭಾಷೆಯಲ್ಲಿ ಮೂಡಿದೆ. ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ತೂಗುತ್ತ ತಾಯಿಯ ಕಂಠದಿಂದ ಇಂಪಾದ ಲಾಲಿ ಪದಗಳು, ಜೋಗುಳ ಹಾಡುಗಳು ಹೊರಹೊಮ್ಮುತ್ತಿದ್ದವು.

ಉದಾಹರಣೆಯಾಗಿ :

'ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿಹುಬ್ಬು ಬೇವಿನೆಸಳ್ಹಾಂಗ ಕಣ್ಣೋಟ
ಶಿವನ ಕೈಯಲಗು ಹೊಳೆದಾಂಗ'

ಇಲ್ಲಿ ಮಗುವಿನ ಚಿತ್ರಣವನ್ನು ಸುಂದರವಾಗಿ ಅಭಿವ್ಯಕ್ತಗೊಳಿಸುವುದರೊಂದಿಗೆ ಕಂದನ ಅಳುವಿಕೆ, ನೋಟ-ಮಾಟಗಳು ಬೆರಗುಗೊಳಿಸುತ್ತವೆ. ಅದೇ ರೀತಿ ಜನಪದ ಗರತಿ ಮಗುವಿನ ಅಳುವಿಕೆಯ ಧ್ವನಿಯನ್ನು ಕುರಿತು,

'ಅಳುವ ಕಂದನ ಧ್ವನಿಯು ಅರಗಿಳಿಯು ನಕ್ಕಂಗ
ಮಲ್ಲಿಗೆಯ ವನದಿ ಜೇನಿದ್ದು । ನಾದಗೈದಂಗ
ಕೋಗಿಲೆಯು ರಾಗ ತೆಗೆದಂಗ'

ಎಂದು ನಿಸರ್ಗದ ಪಕ್ಷಿಗಳ ನಿನಾದ, ಜೇನಿನ ಝೇಂಕಾರ, ಕೋಗಿಲೆಯ ಇಂಪಾದ ಧ್ವನಿ ಮಗುವಿನಲ್ಲಿ ಕಾಣುವುದು ವಿಶಿಷ್ಟವಾಗಿದೆ. ಹಾಗೆಯೇ ಮುಂದುವರೆದು ಜನಪದ ಗರತಿ;

'ಅತ್ತುಕಾಡುವವನಲ್ಲ ಮತ್ತೆ ಬೇಡುವವನಲ್ಲ
ಎತ್ತಿಕೊಳ್ಳೆಂಬ ಹಟವಿಲ್ಲ । ನಿನ್ನಂಥ
ಮಕ್ಕಳಿರಲೆವ್ವ ಮನೆತುಂಬ'.

ಇದು ಹೆತ್ತ ತಾಯಿಯ ಅಭಿವ್ಯಕ್ತಿ. ಮಗು ಹೇಗಿದ್ದರೂ ಸುಂದರವಾಗಿ ಕಾಣುವುದು 'ಹೆತ್ತವರಿಗೆ ಹೆಗ್ಗಣ ಮುದ್ದು' ಎನ್ನುವಂತೆ ಮಗುವಿನ ಹಾವ-ಭಾವ-ಭಂಗಿಗಳನ್ನು ವರ್ಣಿಸುವುದು ಜನಪದದಲ್ಲಿ ಕಂಡುಬರುತ್ತದೆ. ಪ್ರೌಢಸಾಹಿತ್ಯಕ್ಕೆ ಜಾನಪದ ಸಾಹಿತ್ಯ ಮೂಲವಾಗಿ ಪರಿಣಮಿಸಿದ್ದರೆ, ಮಕ್ಕಳ ಪದ್ಯಸಾಹಿತ್ಯಕ್ಕೂ ಜಾನಪದ ರೂಪದ ಲಾಲಿ ಹಾಡುಗಳು ಮೂಲವಾಗಿವೆ. ಆದ್ದರಿಂದಲೇ ಮಕ್ಕಳ ಪದ್ಯಗಳು ಮನುಕುಲದಷ್ಟೇ ಪ್ರಾಚೀನವಾಗಿವೆ.

'ಕಾಗವ್ವ ಕಟಗಿ ತಾರ । ಗುಬ್ಬವ್ವ ಬೆಂಕಿತಾರ ।
ಜಾನಕಿ ತಾರ ಚಿಪ್ಪಾಟಿ' ॥

'ದಟ್ಟಾ ದಟ್ಟಾ ದಡಸಾಲಿ ದಡಸಾಲಿ ।
ಪಾಪನ ಕಾಲಾಗ ಹುಲಿಗೆಜ್ಜಿ ಹುಲಿಗೆಜ್ಜಿ' ॥

ಇಂಥ ಹಾಡುಗಳು ಮಕ್ಕಳ ಆಟಗಳಿಂದಲೇ ಸಹಜವಾಗಿ ಹುಟ್ಟಿಕೊಂಡಂಥವುಗಳು. ಇವು ಪ್ರಾಸದಿಂದ ಕೂಡಿದ್ದರೂ ಸ್ಪಷ್ಟವಾದ ಅರ್ಥವನ್ನು ಹೊಂದಿರುವುದಿಲ್ಲ ಎಂದು ಹೇಳಬಹುದು.

ಕೆಲವು ಹಾಡುಗಳು ಅರ್ಥವಂತಿಕೆಯಿಂದ ಕೂಡಿರುವುದು ಕಾಣುತ್ತೇವೆ.

'ಅತ್ತೆತ್ತಿ ಬಿದ್ದೆ
ಹ್ಯಾಂಗ್ಯಾಂಗ ಬಿದ್ದಿ ?
ಕಾಲುಜಾರಿಬಿದ್ದೆ ॥
ಏನೇನು ಕಳದಿ ?
ಹವಳಾ ಮುತ್ತು ಕಳೆದೆ ।
ಗಂಡನ್ನ ಕರೀಲೋ ಮಾವನ್ ಕರೀಲೋ ?
ಅತ್ತೆತ್ತಿ ಸಿಕ್ಕಿತು' ॥

ಇದು ಅತ್ತೆ–ಸೊಸೆಯರ ಮಧ್ಯೆ ನಡೆಯುವ ಸಂಭಾಷಣೆ ಎಂದು ತೋರುತ್ತದೆ. ಮೈಗಳ್ಳ ಸೊಸೆಯ ಮನೋಭಾವ ಇಲ್ಲಿ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಇವು ಜೀವನದ ನೋವು–ನಲಿವು, ಸರಸ–ವಿರಸಗಳನ್ನು ಸುಂದರವಾಗಿ ಅಭಿವ್ಯಕ್ತಗೊಳಿಸುತ್ತವೆ.

'ಗಣೇಶ ಬಂದ
ಕಾಯಿ ಕಡಬ ತಿಂದ
ಬಾವೇಲಿ ಬಿದ್ದ
ಮುಣುಗಿ ಮುಣುಗಿ ಎದ್ದ' ।

ಎನ್ನುವ ಮಕ್ಕಳ ಆಟಕ್ಕೆ ಸಂಬಂಧಿಸಿ ವ್ಯಕ್ತವಾದವುಗಳು

'ಗುಡು ಗುಡು ಮುತ್ಯಾ ಬಂದಾನ
ಬೆಣ್ಣಿ ರೊಟ್ಟಿ ತಂದಾನ
ಮಾಡಿನ್ಯಾಗ ಇಟ್ಟಾನ
ಬೇಡಿದಾಗ ಕೊಟ್ಟಾನ'

ಇಂಥ ಅನೇಕ ಪದ್ಯಗಳು ಜನಪದ ಸಾಹಿತ್ಯದಲ್ಲಿ ಕಂಡುಬರುತ್ತವೆ.

'ಮುದುಕಾ ಮುದುಕಿ ಕೂಡಿ ಮುದಗಲ್ ಜಾತ್ರೆಗೆ ಹೋಗಿ
ಮುದುಕಾ ಬೇಡ್ಯಾನೊ ಚಿಣಿಬಗರಿ ।
ಮುದಕೆವ್ವಾ ಗಿಲಗಂಚಿ ಬೇಡಿ ಹಟಮಾಡಿ ॥

ಇವು ಮಕ್ಕಳಲ್ಲಿ ರಂಜನೆಯ ಜೊತೆಗೆ ಕುತೂಹಲ ಕೆರಳಿಸುತ್ತವೆ.

ಕನ್ನಡ ಸಾಹಿತ್ಯದ ಪ್ರತಿಯೊಂದು ಕಾಲಘಟ್ಟದಲ್ಲಿ ಮಕ್ಕಳ ಮನೋವಿಕಾಸಕ್ಕೆ ತಕ್ಕಂತಹ ಕಥೆಗಳನ್ನು ಪದ್ಯಗಳನ್ನು ಗುರುತಿಸುತ್ತೇವೆ. ಹಳಗನ್ನಡದಲ್ಲಿ ಪಂಪನ ಕಾವ್ಯದಲ್ಲಿ, ರನ್ನನ ಗದಾಯುದ್ಧ ಕಾವ್ಯದಲ್ಲಿ, ಜನ್ನನ ಯಶೋಧರ ಚರಿತೆಯಲ್ಲಿ, ವಡ್ಡಾರಾಧನೆಯಲ್ಲಿ ಮಕ್ಕಳ ಸಾಹಸದ ಕಥೆಗಳನ್ನು ಗುರುತಿಸುತ್ತೇವೆ. ಹಾಗೆಯೇ ನಡುಗನ್ನಡ ಸಾಹಿತ್ಯದ ಶಿವಶರಣರ ವಚನಗಳು ಮಕ್ಕಳಲ್ಲಿ ಆದರ್ಶ-ಗುಣಗಳನ್ನು ಬಿತ್ತುವಲ್ಲಿ ಸಹಾಯಕಾರಿಯಾದ ಅಂಶಗಳು ಇರುವುದು ಕಂಡುಬರುತ್ತವೆ. ಕುಮಾರವ್ಯಾಸನಲ್ಲಿಯೂ, ಷಡಕ್ಷರ ದೇವನ 'ರಾಜಶೇಖರ ವಿಳಾಸ'ದಲ್ಲಿ, ಪುರಂದರದಾಸರ, ಕನಕದಾಸರ ಕೀರ್ತನೆಗಳಲ್ಲಿಯೂ ಮಕ್ಕಳಿಗೆ ಮಾರ್ಗದರ್ಶಿಯಾದ ಪದ್ಯಗಳಿರುವುದು ಕಾಣುತ್ತೇವೆ. ಈ ಎಲ್ಲ ಅಂಶಗಳು ಹೊಸಗನ್ನಡ ಸಾಹಿತ್ಯ ಉದಯವಾಗುವುದಕ್ಕಿಂತ ಮೊದಲಿಗೆ ಕಂಡುಬರುವ ಸುಳಿವುಗಳೆಂದು ಹೇಳಬಹುದು. ಪಂಚತಂತ್ರದ ಕಥೆಗಳಾಗಲಿ, ವಡ್ಡಾರಾಧನೆಯ ಕಥೆಗಳಾಗಲಿ ಮಕ್ಕಳಿಗಾಗಿ ರಚಿತವಾದ ಕೃತಿಗಳಲ್ಲ. ಆದರೆ ಅಲ್ಲಿ ಕಥೆಯ ಮೂಲಕ ಮಕ್ಕಳ ಬುದ್ಧಿಯನ್ನು ಚುರುಕುಗೊಳಿಸುವ ಪ್ರಧಾನ ಅಂಶಗಳಿರುವುದು ಗುರುತಿಸಲು ಸಾಧ್ಯವಿದೆ.

'ಆರಂಭದ ಕ್ರಮಿಕ ಪುಸ್ತಕಗಳಲ್ಲಿ ಗದ್ಯಪಾಠಗಳು ಇದ್ದವೇ ಹೊರತು ಪದ್ಯಪಾಠಗಳಿರಲಿಲ್ಲ. ಮಕ್ಕಳಿಗೆ ಶಿಶುಗೀತೆಗಳಾಗಿ ಬೇರೆ ಬಗೆಯ ಪದ್ಯಗಳನ್ನು ಕಲಿಸಲಾಗುತ್ತಿತ್ತು. ಪ್ರಾಥಮಿಕ ಕ್ರಮಿಕ ಪುಸ್ತಕಗಳಲ್ಲಿಯೇ ಪದ್ಯಗಳನ್ನು ಸೇರಿಸಿಕೊಂಡವರಲ್ಲಿ ಬಹುಶಃ ಗಂಗಾಧರ ಮಡಿವಾಳೇಶ್ವರ ತುರಮುರಿ ಹಾಗೂ ಚ. ವಾಸುದೇವಯ್ಯ ಇವರೇ ಮೊದಲಿಗರಿದ್ದರಬೇಕು'[೨]. ಕ್ರಿ.ಶ. ೧೮೭೮ರ ಸಮಯದಲ್ಲಿ ಚ. ವಾಸುದೇವಯ್ಯ ಅವರು ಹೊರತಂದ 'ಬಾಲಬೋಧೆ', 'ಒಂದನೆಯ ಪುಸ್ತಕ', 'ಎರಡನೆಯ ಪುಸ್ತಕ', ಎಂ. ಎಸ್. ಪುಟ್ಟಣ್ಣನವರ 'ನೀತಿ ಚಿಂತಾಮಣಿ', ಜಯರಾಮಾಚಾರ್ಯರ 'ಅನುಕರಣಗೀತ ಲಹರಿ' ಮೊದಲಾದ ಕೃತಿಗಳು ಮಕ್ಕಳ ಸಾಹಿತ್ಯಕ್ಕೆ ಉತ್ತಮವಾದ ನೆಲೆಯನ್ನು ಒದಗಿಸಿದವು. ಸರಕಾರವು ಪ್ರಾಥಮಿಕ ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸಿತು. ಶಿಕ್ಷಣ ಕ್ರಮವು ಸಹ ಉತ್ತಮ ರೀತಿಯಲ್ಲಿ ಬೆಳೆಯುತ್ತ ಬಂದಿತು. ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವವರು ಮಕ್ಕಳಿಗಾಗಿ ಪಠ್ಯಪುಸ್ತಕಗಳ ರಚನೆಗೆ ತೊಡಗಿದರು. ಈ ಸಮಯದಲ್ಲಿಯೇ ಸರಳ ಪದ್ಯಗಳು, ಕಥೆಗಳು, ಮಕ್ಕಳಿಗಾಗಿ ಬರೆಯಲ್ಪಟ್ಟವು. ಹೀಗಾಗಿ ಮಕ್ಕಳ ಸಾಹಿತ್ಯ ಗಟ್ಟಿಯಾಗಿ ಬೆಳೆಯಲು ಸಾಧ್ಯವಾಯಿತು.

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ವಿಕಾಸ ಘಟ್ಟಗಳು :

ಕನ್ನಡ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಬೇರೆ-ಬೇರೆ ಕಾಲಘಟ್ಟಗಳಾಗಿ ವಿಂಗಡಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಕನ್ನಡ ಸಾಹಿತ್ಯದ ಜೊತೆಯಲ್ಲಿ ಬೆಳೆದು ಬಂದ ಕನ್ನಡ ಮಕ್ಕಳ ಸಾಹಿತ್ಯದ ಹೆಜ್ಜೆ ಗುರುತುಗಳನ್ನು ವಿವಿಧ ಹಂತಗಳಲ್ಲಿ ಗುರುತಿಸುವುದು ಅಗತ್ಯವೆನಿಸುತ್ತದೆ. ಬ್ರಿಟೀಷರ ಪ್ರಭಾವಕ್ಕೆ ಒಳಗಾದ ಮಕ್ಕಳ ಸಾಹಿತ್ಯ ಅಂದಿನ ಕಾಲಕ್ಕೆ

ಅನುಗುಣವಾಗಿ, ಪರಿಸರಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತ ಬಂದಿದೆ. ಇಂಥ ಸಮಯದಲ್ಲಿ ಸೃಷ್ಟಿಯಾದ ಮಕ್ಕಳ ಸಾಹಿತ್ಯವನ್ನು ಮೊದಲ ತಲೆಮಾರಿನ ಬರಹಗಾರರು, ಎರಡನೆಯ ತಲೆಮಾರಿನ ಬರಹಗಾರರು ಮತ್ತು ಮೂರನೆಯ ತಲೆಮಾರಿನ ಬರಹಗಾರರು ಎಂದು ವಿಭಾಗಿಸಿಕೊಂಡು ಅವರ ಕೊಡುಗೆ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಏನು? ಎಂಬುದು ನೋಡೋಣ.

ಮೊದಲ ತಲೆಮಾರಿನ ಬರಹಗಾರರು : (೧೮೫೦-೧೯೪೭)

ಹೊಸಗನ್ನಡ ಸಾಹಿತ್ಯದ ಅರುಣೋದಯ ಕಾಲದಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ತೊಡಗಿದ ವಿದ್ವಾಂಸರು, ಬರಹಗಾರರು, ಸಾಹಿತಿಗಳು ಮಕ್ಕಳ ಸಾಹಿತ್ಯದ ನೆಲೆಯನ್ನು ಸುಭದ್ರಗೊಳಿಸಿದರು.

ಗಂಗಾಧರ ಮಡಿವಾಳೇಶ್ವರ ತುರಮುರಿ ಇವರು ಮಕ್ಕಳ ಸಾಹಿತ್ಯದ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ತುರಮುರಿಯಲ್ಲಿ ಜನಿಸಿದವರು. ಕನ್ನಡ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿದವರು. ಕನ್ನಡ ಮತ್ತು ಸಂಸ್ಕೃತದಲ್ಲಿ ಅಗಾಧವಾದ ಪಾಂಡಿತ್ಯವನ್ನು ಹೊಂದಿದ್ದರು. ಮಕ್ಕಳಿಗಾಗಿ ಉತ್ತಮವಾದ ಪುಸ್ತಕಗಳನ್ನು ರಚಿಸಿದ್ದಾರೆ. 'ಕನ್ನಡ ಐದನೆಯ ಪುಸ್ತಕ' ರಚಿಸಿದ ಕೀರ್ತಿ ತುರಮುರಿಯವರಿಗೆ ಸಲ್ಲುತ್ತದೆ. ಶಬ್ದಮಂಜರಿ, ಶಬ್ದಮಣಿದರ್ಪಣ ವ್ಯಾಖ್ಯಾನ, ಬಾಣ ಕಾದಂಬರಿಯ ಅನುವಾದ ಮೊದಲಾದ ಪ್ರೌಢ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ವೆಂಕಟ ರಂಗೋ ಕಟ್ಟಿರವರು ಬೆಳಗಾವಿ ಜಿಲ್ಲೆಯ ಬಟಕುರ್ಕಿ ಗ್ರಾಮದವರು. ಧಾರವಾಡದ ಟ್ರೆನಿಂಗ ಕಾಲೇಜಿನ ಹಾಗೂ ಪುಣೆಯ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರಾಚಾರ್ಯರಾಗಿ ಸೇವೆಸಲ್ಲಿಸ್ಸಿದ್ದಾರೆ. ಮೊದಲ ಬಾರಿಗೆ 'ಅಖಂಡ ಕರ್ನಾಟಕದ ಭೂಪಟವನ್ನು' ನಿರ್ಮಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಮಕ್ಕಳಿಗಾಗಿ ರಚಿಸಿದ 'ಕನ್ನಡ ಐದನೆಯ ಪುಸ್ತಕ' ಮತ್ತು 'ಆರನೆಯ ಪುಸ್ತಕ' ಮಕ್ಕಳ ಬೆಳವಣಿಗೆಗೆ ಮಹತ್ವದ್ದಾಗಿ ಪರಿಣಮಿಸಿದೆ. 'ಶಾಲಾ ಪತ್ರಕ', 'ಲೋಕಶಿಕ್ಷಣ' ಮತ್ತು 'ಕರ್ನಾಟಕ ಪತ್ರ' ಎಂಬ ಪತ್ರಿಕೆಗಳನ್ನು ಆರಂಭಿಸುವುದರೊಂದಿಗೆ ಅದರ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಮಕ್ಕಳಿಗಾಗಿ ರಚಿಸಲ್ಪಟ್ಟ ಇವರ ಪುಸ್ತಕಗಳಲ್ಲಿ ವಿಜ್ಞಾನ, ಸಾಹಿತ್ಯ, ತತ್ವಜ್ಞಾನ, ದೈಹಿಕ ಶಿಕ್ಷಣ ಮೊದಲಾದ ಅಂಶಗಳಿರುವುದನ್ನು ಕಾಣುತ್ತೇವೆ. ಕರ್ನಾಟಕ ಗ್ಯಾಝಿಟಿಯರ್, ಸಟೀಕ ಜೈಮಿನಿ, ಆರು ಬೆರಳಿನ ಕುರುಹ ಮೊದಲಾದವು ಇವರ ಪ್ರಮುಖವಾದ ಕೃತಿಗಳಾಗಿವೆ.

ಚ. ವಾಸುದೇವಯ್ಯರವರು 'ಕನ್ನಡ ಬಾಲಬೋಧೆ'ಯನ್ನು ಕನ್ನಡ ಮಕ್ಕಳ ಸಾಹಿತ್ಯಕ್ಕೆ ನೀಡಿದ ಅಪರೂಪದ ಕೃತಿಯಾಗಿದೆ. ಮಕ್ಕಳಿಗೆ ಅಷ್ಟೇ ಅಲ್ಲ ಹಿರಿಯರು

ಮೆಚ್ಚುವಂತಹ ಪುಸ್ತಕವೆಂದರೆ ತಪ್ಪಾಗಲಾರದು. ತಂದೆ-ತಾಯಿ, ಇಲಿ, ಹುಲಿ, ಬಾಳೆಯ ತೋಟ, ಬುತ್ತಿ ಚೆಂಡು ಮೊದಲಾದ ಸಣ್ಣ ಪದಗಳಿಂದ ಕೂಡಿದ ಈ ಪುಸ್ತಕ ಬಹುಕಾಲದವರೆಗೆ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಪಠ್ಯಪುಸ್ತಕವಾಗಿತ್ತು. 'ಛತ್ರಪತಿ ಶಿವಾಜಿ', 'ಸರಳಾರೋಗ್ಯ', ಭೀಷ್ಮ ಚರಿತೆ' ಇವರ ಇತರ ಕೃತಿಗಳಾಗಿವೆ. ಚ. ವಾಸುದೇವಯ್ಯ ಅವರು ಆ ಸಮಯದಲ್ಲಿ ಜನಪ್ರಿಯವಾದ ಜನಪದ ಕಂದ ಪದ್ಯಗಳನ್ನು ಬಳಸಿಕೊಂಡು ಮಕ್ಕಳಿಗೆ 'ಬಾಲಬೋಧೆ'ಯನ್ನು ನೀಡಿದ್ದು ವಿಶೇಷ.

ಮೈಸೂರಿನವರಾದ ಎಂ. ಎಸ್. ಪುಟ್ಟಣ್ಣನವರು ಮಕ್ಕಳ ಸಾಹಿತ್ಯದ ಹಿರಿಯ ಪ್ರವರ್ತಕರಲ್ಲಿ ಒಬ್ಬರು. ಇವರ ಕನ್ನಡ ಒಂದನೆಯ ಪಠ್ಯಪುಸ್ತಕ ಬಹು ಜನಪ್ರಿಯವಾಗಿತ್ತು ಮತ್ತು ಹಲವಾರು ವರ್ಷ ಪಠ್ಯವಾಗಿತ್ತು. ರಾಮಾಯಣ, ಭಗವದ್ಗೀತೆ, ದಾಸರಪದ, ಸರ್ವಜ್ಞನ ಪದಗಳನ್ನು ಬಳಸಿಕೊಂಡು ಕವಿತೆ, ಕಥೆಗಳನ್ನು ರಚಿಸಿದರು. ಪ್ರತಿಯೊಂದು ವಿಷಯವು ನೀತಿಯನ್ನು ಅಭಿವ್ಯಕ್ತಗೊಳಿಸುತ್ತವೆ ಎನ್ನಬಹುದು. ಇಂತಹವು ಮಕ್ಕಳಿಗೆ ಪರಿಣಾಮಕಾರಿಯಾಗಿ ಮನದೊಳಗೆ ಉಳಿಯಲು ಸಾಧ್ಯವಿದೆ. ಇವರು ರಚಿಸಿದ ಮತ್ತು ಸಂಗ್ರಹಿಸಿದ 'ನೀತಿ ಚಿಂತಾಮಣಿ' ೧೫೦ ಕಥೆಗಳನ್ನು ಒಳಗೊಂಡ ಸಂಗ್ರಹ ಮಕ್ಕಳ ಸಾಹಿತ್ಯಕ್ಕೆ ಮೈಲುಗಲ್ಲಾಗಿ ನಿಂತಿದೆ.

ಮಕ್ಕಳ ಸಾಹಿತ್ಯದಲ್ಲಿ ಪ್ರಮುಖವಾಗಿ ಕಂಡುಬರುವ ಹೆಸರು 'ಶಾಂತಕವಿ'. ಕಾವ್ಯನಾಮದ ಬಾಳಾಚಾರ್ಯ ಗೋಪಾಲಚಾರ್ಯ ಸಕ್ಕರಿ ಅವರು. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಭಾರತೀಯರಲ್ಲಿ ಮತ್ತು ಕನ್ನಡ ನಾಡಿನಲ್ಲಿ ಸ್ವಾಭಿಮಾನದ, ರಾಷ್ಟ್ರ ಅಭಿಮಾನದ ಅರಿವನ್ನು ಮೂಡಿಸಿದ ಗಣ್ಯರು. ಮಕ್ಕಳಿಗಾಗಿ ೩೨ ನಾಟಕಗಳನ್ನು ರಚಿಸಿದರು. ಅಲ್ಲದೆ ಕೀರ್ತನೆ ಸಾಹಿತ್ಯ, ಶಾಸ್ತ್ರ ಸಾಹಿತ್ಯದ ಕುರಿತಾದ ಕೃತಿಗಳನ್ನು ಪ್ರಕಟಿಸಿದರು. ಮಕ್ಕಳಿಗಾಗಿ ಪುತ್ಥಳಿ ಕತೆ, ಸಿಂಹಾಸನ ಬತ್ತೀಸ, ಕವಿಕಂಠ ಕುಠಾರ, ಅಡ್ಡ ಕತೆಗಳ ಬುಕ್ಕು ಎನ್ನುವ ಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ನಾಡಗೀತೆಗಳ ರೂಪಗಳಲ್ಲಿರುವ ಪದ್ಯಗಳು ಬಲು ಆಕರ್ಷಣೀಯವಾಗಿದ್ದವು.

ಉತ್ತರ ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯದ ಭದ್ರವಾದ ನೆಲೆಯನ್ನು ಮೂಡಿಸಿದವರಲ್ಲಿ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿಯವರು. 'ಗೌರೀಶ' ಕಾವ್ಯನಾಮದಿಂದ ಪ್ರಸಿದ್ಧಿ ಹೊಂದಿದವರು. ಗೌರೀಶ ಗ್ರಂಥಮಾಲೆಯ ಮೂಲಕ ಅನೇಕ ಮಕ್ಕಳ ಕೃತಿಗಳನ್ನು ಹೊರತಂದರು. ಇವರ 'ಕಂದನಕಾವ್ಯ' ಬಲು ಜನಪ್ರಿಯವಾದ ಸಂಕಲನ.

ಗದಿಗೆಯ್ಯ ಹುಚ್ಚಯ್ಯ ಹೊನ್ನಾಪೂರಮಠರ ವೃತ್ತಿ ವಕೀಲುತನ. ಪ್ರವೃತ್ತಿ ಮಕ್ಕಳ ಸಾಹಿತ್ಯ ರಚನೆ. ವಕೀಲರಾದರೂ ಮಕ್ಕಳ ಸಾಹಿತ್ಯದ ಒಲವು ಹೆಚ್ಚು. ಇವರ ಪ್ರಮುಖ ಕೃತಿ 'ನೀತಿಮಂಜರಿ' ಕಥಾಸಂಕಲನ. ಇದರಲ್ಲಿ ಪರೋಪಕಾರ, ಅಭಿಮಾನ, ಸ್ವಶಿಕ್ಷಣ,

ಲೌಕಿಕ ಜ್ಞಾನ, ಮನುಷ್ಯ ಜನ್ಮ, ಮರಣ, ನಗೆ, ತಾರುಣ್ಯ, ಆಶೆ, ಶಾಂತಿ, ಸುಖ, ಭಕ್ತಿ ಮತ್ತು ಬ್ರಹ್ಮಚರ್ಯೆ ಮೊದಲಾದ ಕಥೆಗಳನ್ನು 'ನೀತಿಮಂಜರಿ' ತಿಳಿಸಿಕೊಡುತ್ತದೆ. ಮಕ್ಕಳು ಅನುಕರಣೆಯಿಂದ ಕಲಿಯುತ್ತಾರೆ. ಕಾರಣ ನೇರವಾಗಿ ನೀತಿಯನ್ನು ಭೋದಿಸದೇ ಅಪ್ರತ್ಯಕ್ಷವಾಗಿ ಘಟನೆ, ಉದಾಹರಣೆಗಳ ಮೂಲಕ ನಿರೂಪಿಸಬೇಕೆಂದು ಹೊನ್ನಾಪೂರಮಠ ಅವರ ಅಭಿಪ್ರಾಯವಾಗಿತ್ತು. ಸುಧಾಮ ಚರಿತ್ರೆ, ಕೃಷ್ಣ ಚರಿತ್ರೆ, ಬಸವೇಶ್ವರ ಚರಿತ್ರೆ, ವೀರವಿಮಲಾ, ಸಾವಿತ್ರಿ ಚರಿತ್ರೆ, ಧ್ರುವ ಚರಿತ್ರೆ, ಬಲ್ಲಾಳ ಚರಿತ್ರೆ, ಸಚಿತ್ರ ಬಾಲರಾಮಾಯಣ, ಸಚಿತ್ರ ಬಾಲ ಭಾಗವತ, ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು, ಅದ್ಭುತ ಪ್ರೇಮ, ಶ್ರೀ ರಾಮಕೃಷ್ಣ ಪರಮಹಂಸರ ಸತ್ಯಕಥೆಗಳು, ಶ್ರೀ ಸ್ವಾಮಿ ರಾಮತೀರ್ಥ ಚರಿತ್ರೆ ಮೊದಲಾದವು ಇವರ ಪ್ರಮುಖ ಕೃತಿಗಳಾಗಿವೆ.

ಪಂಜೆ ಮಂಗೇಶರಾಯರು ಆಧುನಿಕ ಕನ್ನಡ ಸಾಹಿತ್ಯದ ಆಚಾರ್ಯ ಪುರುಷರೆಂದು ಪ್ರಸಿದ್ಧಿ ಹೊಂದಿದವರು. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಇವರು ಜನಿಸಿದರು. ಕವಿಶಿಷ್ಯರೆಂದು ಪ್ರಸಿದ್ಧಿಪಡೆದ ಇವರು ಬಾಲ ಸಾಹಿತ್ಯದ ಪ್ರವರ್ತಕರಾಗಿದ್ದಾರೆ. ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ, ಶಾಲಾ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿದವರು. ಮಕ್ಕಳ ಮನೋಭಾವಕ್ಕನುಗುಣವಾಗಿ ಸಾಹಿತ್ಯ ರಚಿಸುವ ಮೂಲಕ ಮಕ್ಕಳ ಸಾಹಿತ್ಯಕ್ಕೆ ಗಟ್ಟಿಯಾದ ನೆಲೆಯನ್ನು ಹಾಕಿಕೊಟ್ಟರು. ಮಕ್ಕಳಿಗೆ ಕಥೆಗಳನ್ನು, ಕವಿತೆಗಳನ್ನು ರಚಿಸಿದವರಲ್ಲಿ ಪಂಜೆಮಂಗೇಶರಾಯರು ಮೊದಲಿಗರಾಗಿದ್ದಾರೆ. ಮಕ್ಕಳ ಅನುಭವಕ್ಕೆ ನಿಲುಕುವ ಮತ್ತು ಪರಿಚಿತವಾದ ವಸ್ತುಗಳ ಆಯ್ಕೆ, ಸರಳ ಶೈಲಿಯ ಸಂಭಾಷಣೆ, ಪುನರುಕ್ತಿಗಳ ಬಳಕೆ, ಅಂದವಾದ ಮುದ್ರಣ, ಚಿತ್ರಗಳು, ದೊಡ್ಡ ಅಕ್ಷರಗಳು ಇವು ಪಂಜೆಮಂಗೇಶರಾಯರ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಗುಣಲಕ್ಷಣಗಳು. ಮಕ್ಕಳ ಸಾಹಿತ್ಯಕ್ಕೆ ಮಾತ್ರ ಮೀಸಲಾದ 'ಬಾಲ ಸಾಹಿತ್ಯ ಮಂಡಲ' ಎಂಬ ಪ್ರಕಾಶನ ಸಂಸ್ಥೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಿ ಹಲವಾರು ಕೃತಿಗಳನ್ನು ಈ ಸಂಸ್ಥೆಯ ಅಡಿಯಲ್ಲಿ ಪ್ರಕಟಿಸಿದರು.

ಕನ್ನಡ ಸಣ್ಣ ಕಥೆಗಳ ಜನಕರಾಗಿರುವ ಪಂಜೆಮಂಗೇಶರಾಯರು ಕನ್ನಡದ ಮಕ್ಕಳ ಸಾಹಿತ್ಯಕ್ಕೂ ಜನಕರಾಗಿದ್ದಾರೆ. ಮಕ್ಕಳ ಮನಸ್ಸನ್ನು ಅರಿತು, ಅವರಿಗೆ ಅಗತ್ಯವಾದ ಸಾಹಿತ್ಯ ರಚನೆಗೆ ತೊಡಗಿದವರು ಪಂಜೆಮಂಗೇಶರಾಯರು. ಬಿ. ಶಂಕರಭಟ್ ಹಾಗೂ ಬಿ. ಎಂ. ಶರ್ಮಾ ಅವರು ಹೇಳುವಂತೆ 'ಸಂದರ್ಭಕ್ಕೆ ಗಂಟುಬೀಳದ ಬುದ್ಧಿವಾದಗಳನ್ನೋ, ನೀತಿ ಬೋಧನೆಗಳನ್ನೋ ಎಳೆತಂದು ವಿಷಯದ ಉದ್ದೇಶಕ್ಕೆ ಭಂಗ ತಂದುದು ಎಲ್ಲಿಯೂ ಅವರ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಮನೋರಂಜನೆಯೊಂದಿಗೆ ನೀತಿ ಶಿಕ್ಷಣವೂ ಅಲ್ಲಲ್ಲಿ ಹಾಸುಹೊಕ್ಕಾಗಿದ್ದು ಮಗುವಿಗೆ ತಿಳಿಯದಂತೆಯೇ ಅದು ಮನಸ್ಸಿಗೆ ಅಂಟಿಕೊಳ್ಳುತ್ತದೆ. ಬಾಲ ಸಾಹಿತ್ಯದಲ್ಲಿರಬೇಕಾದ ಮುಖ್ಯ ಗುಣಗಳಲ್ಲಿ ಇದೂ ಒಂದು. ಮಕ್ಕಳಲ್ಲಿ ಸಾಹಿತ್ಯಾಭಿರುಚಿ ಉಂಟು ಮಾಡುವ ಬಗೆ ಹೇಗೆಂದು ಕೃತಿಯಿಂದ ತೋರಿಸಿಕೊಟ್ಟವರು'. ಒಟ್ಟಿನಲ್ಲಿ ಪಂಜೆಮಂಗೇಶರಾಯರು ನೀಡಿದ ಕೊಡುಗೆ ಅಪಾರವಾದುದು.

ಎಸ್. ಜಿ. ನರಸಿಂಹಚಾರ್ಯ ಕನ್ನಡ ಮಕ್ಕಳ ಸಾಹಿತ್ಯ ಕೃಷಿಯಲ್ಲಿ ತೊಡಗಿದ ಮೊದಲಿಗರಲ್ಲಿ ಇವರು ಒಬ್ಬರು. ಬಾಲ ಸಾಹಿತ್ಯ ಪ್ರಕಟಣೆಯ 'ಪಠ್ಯ ನಿಯಮಕ ಸಮೀತಿ'ಯ ಸದಸ್ಯರಾಗಿದ್ದರು. ಗೋವಿನ ಚರಿತ್ರೆ, ಚಂದ್ರ, ಹೊಗೆಯ ಗಾಡಿ ಮೊದಲಾದ ಕವಿತೆಗಳ ಮೂಲಕ ಪ್ರಸಿದ್ಧಿ ಪಡೆದವರು. 'ಕನ್ನಡ ಒಂದನೆಯ ಪುಸ್ತಕ'ದಲ್ಲಿರುವ 'ಗೋವಿನ ಚರಿತ್ರೆ' ಹಾಗೂ 'ಚಂದ್ರ' ಕವಿತೆಗಳು ಮಕ್ಕಳ ಗಮನಸೆಳೆಯುತ್ತವೆ. ಇದನ್ನು ಸೂಚಿಸುತ್ತ ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಅವರು, 'ಎಸ್. ಜಿ. ನರಸಿಂಹಾಚಾರ್ಯರು ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ತಳೆದ ಅಕ್ಕರ ಆಸ್ಥೆಗಳು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಅವರನ್ನು ಒಂದು ಉಜ್ವಲ ನಕ್ಷತ್ರವನ್ನಾಗಿ ಮಾಡಿದೆ. ಅವರು ಕನ್ನಡ ಭಾಷೆಯ ಮಕ್ಕಳ ಸಾಹಿತ್ಯದ ಆದ್ಯ ಕೃಷಿಕರಲ್ಲಿ ಒಬ್ಬರು ಗಣ್ಯರು' ಎಂದು ಮುಕ್ತಕಂಠದಿಂದ ಮೆಚ್ಚಿಕೊಂಡಿದ್ದಾರೆ.

ಎಂ. ಎನ್. ಕಾಮತ್‌ರವರು ವಿಶೇಷವಾಗಿ ಮಕ್ಕಳ ನಾಟಕ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದವರು. ಭೂಗೋಳ ವಿಷಯದ ಅಧ್ಯಾಪಕರಾಗಿದ್ದರೂ ಕನ್ನಡ ನುಡಿಯ ಮೇಲೆ ಬಲು ಅಭಿಮಾನ ಮತ್ತು ಪ್ರೀತಿ ಹೊಂದಿದ್ದರು. ಹೀಗಾಗಿ ಇವರನ್ನು ಬಹುಮುಖ ಪ್ರತಿಭೆಯುಳ್ಳವರು ಎಂದು ಕರೆಯಲಾಗುತ್ತದೆ. ಇವರು ಒಂದನೆಯ ತರಗತಿಯಿಂದ ಎಂಟನೆಯ ತರಗತಿಯವರೆಗೆ ಪಠ್ಯಪುಸ್ತಕಗಳನ್ನು ರಚಿಸಿದ್ದಾರೆ. ಕೃಷ್ಣ ಸಂಧಾನ, ಮೌರ್ಯ ಸಿಂಹಾಸನ, ಕ್ಷಾತ್ರತೇಜ, ಅರ್ಜುನನ ಚಾತುರ್ಮಾಸ, ಪ್ರತಾಪಸಿಂಹ, ಚಂದ್ರಹಾಸನ ಕಥೆ, ಕುಮಾರ ಭೀಮಸಿಂಹ, ಅಶ್ವತ್ಥಮೃಗ, ಉದ್ಧಾರಾನಂದ ಮೊದಲಾದ ನಲವತ್ತು ನಾಟಕಗಳನ್ನು ಬರೆದಿದ್ದಾರೆ. 'ಬಾಲಕಳೆದ ನರಿಯ ಉಪದೇಶ', 'ಸಂತೆಯ ಕುರುಡನ ಹಾಡು', 'ಬೀಡಿ ಸೇದ ಬೇಡಿ' ಕಾಮತ್‌ರ ಪ್ರಮುಖ ಹರಟೆ ಸಂಕಲನಗಳಾಗಿವೆ. ಹೀಗೆ ಕತೆ, ಕವನ, ಗದ್ಯ ಕೃತಿಗಳನ್ನು ರಚಿಸಿದ ಎಂ. ಎನ್. ಕಾಮತ್‌ರು ಪತ್ರಿಕೋದ್ಯಮದಲ್ಲಿ ಕೆಲಸ ಮಾಡಿದ್ದಾರೆ.

'ಕರ್ನಾಟಕ ಗಾಂಧಿ' ಎಂದು ಪ್ರಸಿದ್ಧರಾದ ಹರ್ಡೇಕರ ಮಂಜಪ್ಪನವರು ಅಪ್ಪಟ ಗಾಂಧಿವಾದಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರು. ಮಕ್ಕಳ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಶಿಕ್ಷಕರಾಗಿ, ಪತ್ರಕರ್ತರಾಗಿ ಕಾರ್ಯನಿರ್ವಹಿಸಿದವರು. ಮಕ್ಕಳಿಗಾಗಿ ಪ್ರತ್ಯೇಕವಾದ ಸಾಹಿತ್ಯ ಮಾಲೆಯನ್ನು ಆರಂಭಿಸಿ, ಪ್ರತಿ ವರ್ಷ ಸುಮಾರು ೧೫-೧೬ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿದವರು. ಅವುಗಳಲ್ಲಿ ಏಕಲವ್ಯನ ಕತೆ, ಬುದ್ಧಿಯ ಮಾತು, ಪುಲಕೇಶಿ ಚರಿತ್ರೆ, ಸುಗ್ಗಲಾದೇವಿ ಕತೆ, ಕಚದೇವನ ಕತೆ ಮೊದಲಾದ ಕೃತಿಗಳನ್ನು ಮಕ್ಕಳ ಲೋಕಕ್ಕೆ ನೀಡಿದ್ದಾರೆ.

ಸುಬೋಧ ರಾಮರಾಯರು 'ಸುಬೋಧ ಕುಸುಮಾಂಜಲಿ' ಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿ 'ಸುಬೋಧ' ಪತ್ರಿಕೆಯನ್ನು ಹೊರತಂದರು. ಹೀಗಾಗಿ ಮೈಸೂರು ರಾಮರಾಯರು

ಸುಬೋಧ ರಾಮರಾಯರಾಗಿ ಪ್ರಸಿದ್ಧಿ ಹೊಂದಿದವರು. ಮಕ್ಕಳ ಮನೋವಿಕಾಸಕ್ಕಾಗಿ ಹಲವಾರು ಉತ್ತಮ ಕೃತಿಗಳನ್ನು ರಚಿಸಿದರು. ಮಕ್ಕಳಲ್ಲಿ ಆದರ್ಶಗುಣಗಳು, ದೇಶಪ್ರೇಮ, ಭಕ್ತಿ, ಒಳ್ಳೆಯ ಆಚಾರ-ವಿಚಾರಗಳನ್ನು ಬೆಳೆಸಿಕೊಳ್ಳಲು ಪೌರಾಣಿಕ ವ್ಯಕ್ತಿಗಳ, ಮಹಾನ್‌ನಾಯಕರ, ಆದರ್ಶ ಪುರುಷರ ಜೀವನ ಚರಿತ್ರೆಗಳನ್ನು ಸುಲಭವಾಗಿ ಮಕ್ಕಳು ತಿಳಿದುಕೊಳ್ಳುವಂತೆ ಬರೆದು ಪ್ರಕಟಿಸಿದರು. ಧ್ರುವ, ಚಂದ್ರಹಾಸ, ಭಕ್ತಪ್ರಲ್ಹಾದ, ಸತಿಸಾವಿತ್ರಿ, ಶಿವಾಜಿ, ಗೋಪಾಲಕೃಷ್ಣ ಗೋಖಲೆ, ಮಹಾತ್ಮ ಗಾಂಧೀಜಿ, ಲೋಕಮಾನ್ಯ ಟಿಳಕ ಮೊದಲಾದವರ ಜೀವನ ಚರಿತ್ರೆಗಳನ್ನು ರಚಿಸಿ ಮಕ್ಕಳಿಗೆ ಆದರ್ಶದ ಬದುಕನ್ನು ಕಟ್ಟಿಕೊಳ್ಳಲು ಸಹಾಯಕಾರಿಯಾಗಿವೆ. ಅದೇ ರೀತಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಬಿತ್ತರಿಸುವ ಕಾಯಕ ಸುಬೋಧ ರಾಮರಾಯರದಾಗಿತ್ತು.

ಅರಗಂ ಲಕ್ಷ್ಮಣರಾಯರ ಕಾವ್ಯನಾಮ ಹೊಯ್ಸಳ. ಇವರು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರ. ಪಂಜೆಮಂಗೇಶರಾಯರು ಬಾಲಸಾಹಿತ್ಯದ ಪ್ರವರ್ತಕರಾದರೆ ಹೊಯ್ಸಳರು ಶಿಶುಸಾಹಿತ್ಯದ ಪ್ರವರ್ತಕರಾಗಿದ್ದಾರೆ. ಮಕ್ಕಳಿಗೆ ಪರಿಚಿತವಾದ ವಸ್ತುಗಳನ್ನು, ವ್ಯಕ್ತಿಗಳನ್ನು, ಪ್ರಾಣಿ-ಪಕ್ಷಿಗಳನ್ನು ಆಯ್ದುಕೊಂಡು ಅವರಿಗೆ ಅರ್ಥವಾಗುವ ರೀತಿಯಲ್ಲಿ ಅನೇಕ ಶಿಶುಗೀತೆಗಳನ್ನು, ಅಭಿನಯ ಗೀತೆಗಳನ್ನು, ಕತೆ, ನಾಟಕ ಮುಂತಾದವುಗಳನ್ನು ರಚಿಸಿದರು. ಹೊಯ್ಸಳರ ಸುಮಾರು ಹನ್ನೆರಡು ಕಥಾ ಸಂಕಲನಗಳು ಪ್ರಕಟಗೊಂಡಿವೆ. ಈ ಎಲ್ಲ ಕಥೆಗಳು ಮಕ್ಕಳಲ್ಲಿ ಒಳ್ಳೆಯ ಭಾವನೆಗಳನ್ನು ಮೂಡಿಸುವ, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳುವ ಮನೋಭಾವಗಳು ಅಭಿವ್ಯಕ್ತಗೊಂಡಿವೆ. ಮಕ್ಕಳಿಗೆ ಕತೆ ಹೇಳುವುದೊಂದು ಕಲೆ. ನಿರೂಪಣೆ ಮಗುವಿಗೆ ಆಕರ್ಷಣೀಯವಾಗಿರಬೇಕು, ಹೊಯ್ಸಳರು ಗದ್ಯಕ್ಕೆ ಆಡುಭಾಷೆಯನ್ನು ಬಳಸಿಕೊಂಡರು. ಮಾತಿನ ಚಲನೆ, ತಿರುವುಗಳು, ಹಾಸ್ಯದ ಲೇಪನಗಳು ಕಥೆಗಳಲ್ಲಿ ವ್ಯಕ್ತವಾಗುತ್ತವೆ. ಅವರ ಕಥೆಗಳ ಮುಖ್ಯ ಲಕ್ಷಣ ಕತೆಗಾರಿಕೆ, ಸಣ್ಣ-ಸಣ್ಣ ವಾಕ್ಯಗಳು, ಸಮಯಕ್ಕೆ ತಕ್ಕ ಸಂಭಾಷಣೆ, ಪರಿಸರಕ್ಕೆ ಸಂಬಂಧಪಟ್ಟ ಭಾಷೆಯ ಸೊಗಡು, ಕಥೆಯನ್ನು ವಾಸ್ತವದೃಷ್ಟಿಯಿಂದ ನೋಡುವುದು ಮೊದಲಾದ ಲಕ್ಷಣಗಳು ಹೊಯ್ಸಳರ ಕೃತಿಗಳಲ್ಲಿ ಕಂಡುಬರುತ್ತವೆ. ಹೊಯ್ಸಳರು ತಮ್ಮ ಕಥೆಗಳಿಗೆ ಚೀನಾ, ಜಪಾನ, ಜರ್ಮನಿ, ಆಫ್ರಿಕಾ, ಅಮೇರಿಕಾ ಹೀಗೆ ಜಗತ್ತನ್ನೇ ವಸ್ತುವನ್ನಾಗಿ ಬಳಸಿದ್ದಾರೆ. ಸಂತಮ್ಮಣ್ಣ ಇವರ ಪ್ರಮುಖ ಮಕ್ಕಳ ಕವನಗಳಲ್ಲಿ ಒಂದು. 'ಮಗುವಿನ ಕೂಗು', 'ಕೋಗಿಲೆ, 'ಚಂದಮಾಮ', 'ಸಕ್ಕರೆ ಗೊಂಬೆ', 'ಅಂಜೂರ', 'ಕೋಲುಕುದುರೆ', 'ರಾಜನಬುದ್ಧಿವಂತಿಕೆ', 'ಕಳ್ಳ-ಸುಳ್ಳ'ಮಳ್ಳ' ಇವರ ಪ್ರಸಿದ್ಧ ಮಕ್ಕಳ ಕೃತಿಗಳಾಗಿವೆ.

ಆರ್. ಕಲ್ಯಾಣಮ್ಮ ಕನ್ನಡ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ತಮ್ಮ ಬದುಕನ್ನೇ ಮಕ್ಕಳ ಸಾಹಿತ್ಯಕ್ಕೆ ಮುಡಿಪಾಗಿಟ್ಟರು. ಬೆಂಗಳೂರಿನಲ್ಲಿ 'ಮಕ್ಕಳ ಕೂಟ'ವನ್ನು ಸ್ಥಾಪಿಸಿ ಅವರ ಸರ್ವಾಂಗೀಣ ಬೆಳವಣಿಗೆಗೆ ಪಾತ್ರರಾಗಿದ್ದಾರೆ. ಆರ್. ಕಲ್ಯಾಣಮ್ಮನವರು

ಪ್ರಕಟಿಸುತ್ತಿದ್ದ 'ಸರಸ್ವತಿ' ಪತ್ರಿಕೆಯಲ್ಲಿ ಮಕ್ಕಳಿಗಾಗಿ ಕೆಲವು ಪುಟಗಳನ್ನು ಮೀಸಲಾಗಿರಿಸಿದ್ದರು. ಅನೇಕ ಸ್ಪರ್ಧೆಗಳನ್ನು ಮಕ್ಕಳಿಗಾಗಿ ಏರ್ಪಡಿಸಿ ಪ್ರತಿಭಾವಂತರಿಗೆ ಬಹುಮಾನ ನೀಡುವುದು ಮತ್ತು ಪ್ರೋತ್ಸಾಹಿಸುವುದು ಮುಖ್ಯವಾಗಿತ್ತು. ಮಕ್ಕಳ ಕೂಟವು ಕವನ, ಕಥೆ, ಲೇಖನ ರಚನಾ ಸ್ಪರ್ಧೆ, ಚರ್ಚಾ ಸ್ಪರ್ಧೆ, ಚಿತ್ರಬಿಡುಸುವ ಸ್ಪರ್ಧೆ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿತು. 'ಬಣ್ಣದ ಬುಗರಿ', 'ಹೂವಿನ ಶಾಲೆ', 'ಜಾಣ', 'ಉಗಾದಿ ಉಡುಗೊರೆ', 'ಅಜ್ಜ-ಅಜ್ಜಿ', 'ಕೋಲೆಬಸವ' ಮೊದಲಾದವು ಮಕ್ಕಳ ಕೂಟದ ಮಹತ್ವದ ಪ್ರಕಟಣೆಗಳಾಗಿವೆ. ಪ್ರಸಿದ್ಧ ಮಕ್ಕಳ ಸಾಹಿತಿಗಳಾದ ಜಿ. ಪಿ. ರಾಜರತ್ನಂ, ಹೊಯ್ಸಳ ಮೊದಲಾದವರು ಮಕ್ಕಳಿಗಾಗಿ ಕತೆ, ಕವನ, ನಾಟಕ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಮಕ್ಕಳ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುತ್ತಿದ್ದರು. ಹೀಗೆ ಮಕ್ಕಳ ಚರ್ಚೆಯ ಕುರಿತಾದ ಪುಸ್ತಕಗಳನ್ನು ಪ್ರಕಟಪಡಿಸುತ್ತಿದ್ದರು. ಇದರಿಂದಾಗಿ ಮಕ್ಕಳ ಕೂಟದಿಂದ ಅನೇಕ ಮಕ್ಕಳ ಸಾಹಿತಿಗಳು ರೂಪುಗೊಂಡಿರುವುದು ಸತ್ಯವಾದುದು. ನಿರ್ಭಾಗ್ಯವನಿತೆ, ಸುಖಾಂತ, ಪ್ರಿಯಂವದೆ, ಭಕ್ತಮೀರ, ಮಾಧವಿ, ನಿರ್ಮಲಾ, ಇಪ್ಪತ್ತನೆಯ ಶತಮಾನದ ಅಳಿಯ, ಯದುರಾಯ, ವರದಕ್ಷಿಣೆ, ದರಿದ್ರ ನಾರಾಯಣ ಮುಂತಾದವು ಕಲ್ಯಾಣಮ್ಮನವರ ಪ್ರಮುಖ ಕೃತಿಗಳಾಗಿವೆ.

ಕೊರಡ್ಕಲ್ ಶ್ರೀನಿವಾಸರಾವರವರು ಮಕ್ಕಳು ಬದುಕನ್ನು ರೂಪಿಸಿಕೊಳ್ಳುವಂತಹ ನಾಟಕಗಳನ್ನು ಹೆಚ್ಚಾಗಿ ರಚಿಸಿದರು. ಮಕ್ಕಳ ಕಥಾ ಸಾಹಿತ್ಯ, ನಾಟಕ ಸಾಹಿತ್ಯ, ಕಾದಂಬರಿ ಸಾಹಿತ್ಯ, ಶಿಶುಗೀತ ಸಾಹಿತ್ಯವನ್ನು ರಚಿಸಿ ಶ್ರೀಮಂತಗೊಳಿಸಿದವರು. ಅದೇ ರೀತಿ ಆರೋಗ್ಯ ಗೀತೆಗಳನ್ನು ರಚಿಸಿದರು. ಇವರ ಮಕ್ಕಳ ಕೃತಿ 'ಪದ್ಮಾವಳಿ' ಕಥನ ಕವನ ಸಂಗ್ರಹದ ಕವಿತೆಗಳು ದಕ್ಷಿಣ ಕನ್ನಡ ಶಾಲೆಗಳಲ್ಲಿ ಪಠ್ಯವಾಗಿ ಬಳಕೆಯಾಗಿತ್ತು. 'ಬಾಲವಾಙ್ಮಯ', 'ಆರೋಗ್ಯ ಪ್ರತಾಪ', 'ಧರ್ಮಸಂಕಟ', 'ಸುಶಿಲಾ ಸುಂಗರ', 'ಆನಂದ ಕಥಾವಳಿ', 'ಮುದುಕನ ಹೆಂಡತಿ', 'ಅಡ್ಡ ಬೆಳೆದ ಗಿಡ್ಡಿಯ ಮದುವೆ', ಥಕಥೈ ರಾಧೆ', 'ಮೂರು ಪ್ರಹಸನ', 'ರಂಗಿನ ಬುಡಬುಡಿಕೆ', 'ಟೊಪ್ಪಿ', 'ವಶೀಕರಣ' ಮೊದಲಾದವು ಇವರು ರಚಿಸಿದ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ದೇವುಡು ನರಸಿಂಹಶಾಸ್ತ್ರಿರವರು ಮಕ್ಕಳಿಗಾಗಿ ನೀತಿ ಕಥೆಗಳನ್ನು ಹೆಚ್ಚಾಗಿ ರಚಿಸಿದವರು ಹಾಗೂ ಮಕ್ಕಳ ಸಾಹಿತ್ಯದ ಪ್ರಗತಿಗಾಗಿ ಶ್ರಮಿಸಿದವರು. ಮಕ್ಕಳ ವಯೋಮಾನಕ್ಕೆ ತಕ್ಕಂತೆ ಮೂರು ಹಂತಗಳನ್ನಾಗಿ ವಿಂಗಡಿಸಿ ೫೦ಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ. ಇವರು ಪ್ರಾರಂಭಿಸಿದ 'ನಮ್ಮ ಪುಸ್ತಕ' ಪತ್ರಿಕೆ ಗಮನಾರ್ಹವಾದುದು. ಅನೇಕ ಮಕ್ಕಳ ಕತೆಗಳನ್ನು ರಚಿಸಿರುವುದು ಹಳ್ಳಿಯ ಪರಿಸರದ ಸಾಮಗ್ರಿಯನ್ನೇ ಒಳಗೊಂಡಿವೆ. ಸರಳ ಭಾಷೆ, ಸುಂದರ ವಿವರಣೆಯನ್ನು 'ಮುದುಕಿಯ ಮಕ್ಕಳು' ಅಭಿವ್ಯಕ್ತಗೊಳಿಸುತ್ತದೆ. ಅದರ ಮುನ್ನುಡಿಯಲ್ಲಿ ಈ ಪುಸ್ತಕವನ್ನು ಬರೆದಿರುವುದು ೭-೮

ವರ್ಷದ ಹುಡುಗರಿಗಾಗಿ, ಅವರು ಸ್ವತಂತ್ರವಾಗಿ ಓದಬಲ್ಲರು, ಶಾಲೆಯಿಂದ ಮನೆ, ಮನೆಯಿಂದ ಶಾಲೆಗೆ ಹೋಗಿ ಬರುವುದರ ಜೊತೆಗೆ ಕೊಂಚ ಹೊರಗೂ ತಿರುಗಿರಬಹುದಾದ ಸಂದರ್ಭವುಂಟು, ಮುಂದುವರಿಯುತ್ತಿರುವ ಅವರ ಬುದ್ಧಿಯನ್ನು ಇನ್ನೂ ಅಷ್ಟು ದೂರ ಎಳೆದುಕೊಂಡು ಹೋಗುವುದು ಒಳ್ಳೆಯದು ಎಂಬ ಉದ್ದೇಶದಿಂದ ಕತೆಗಳನ್ನು ಕೊಂಚ ವಿಲಂಬಿಸಿ ಬರೆದಿದೆ. ಜೊತೆಗೆ ಹೊಸ-ಹೊಸ ವಿಷಯಗಳನ್ನು ಮಕ್ಕಳಿಗೆ ಅಪ್ರಿಯವಾಗದ ರೀತಿಯಲ್ಲಿ ಸೇರಿಸಲು ಪ್ರಯತ್ನಿಸಿದೆ. ಈ ಪದ್ಧತಿ ಎಲ್ಲರಿಗೂ ಸಮರ್ಪಕವಾದುದು ಎಂದು ನನ್ನ ಭಾವನೆ, ಕಥೆಗಳನ್ನು ಉಪಾಧ್ಯಾಯರು ಮೊದಲು ಓದಿಸಿ ಅನಂತರ ಒಂದು ಸಲ ಹುಡುಗರನ್ನು ಕಥಾಪಾತ್ರಗಳನ್ನಾಗಿ ಮಾಡಿ ನಾಟಕ ಮಾಡಲು ಸೂಚಿಸಿದ್ದಾರೆ. ದೇವುಡು ಅವರು ಮಕ್ಕಳ ಓದಿನ ಬಗೆಗೆ, ಅವರ ಓದಿನಲ್ಲಿ ಈ ಬಗೆಯ ಕತೆಗಳ ಬಗೆಗೆ ಎಷ್ಟೆಲ್ಲ ಗಂಭೀರವಾಗಿ ತೊಡಗಿಕೊಂಡಿದ್ದರು ಎನ್ನುವುದು ಗಮನಿಸಬೇಕಾದ ಸಂಗತಿಯಾಗಿದೆ.

ನಾ. ಕಸ್ತೂರಿರವರು ಕನ್ನಡದ ಹಿರಿಯ ಕವಿಗಳಲ್ಲಿ ಪ್ರಮುಖರು. ಇಂಗ್ಲೀಷನಲ್ಲಿ ಖ್ಯಾತಿ ಪಡೆದ ಲೂಯಿ ಕೆರೋಲ್‌ನ 'ಆಲಿಸ್ ಇನ್ ವಂಡರ್‌ಲ್ಯಾಂಡ್' ಕೃತಿಯನ್ನು ಕನ್ನಡದಲ್ಲಿ ತಂದಿರುವುದು 'ಪಾತಾಳದಲ್ಲಿ ಪಾಪಚ್ಚಿ' ವಿಶಿಷ್ಟವಾದುದು. ಕನ್ನಡ ಮಕ್ಕಳಿಗೆ ಕೃತಿ ಮೂಲ ಕನ್ನಡದ್ದೇ ಎನ್ನುವ ಹಾಗೆ ವ್ಯಕ್ತಗೊಂಡಿದೆ. ನಾ. ಕಸ್ತೂರಿಯವರು 'ಪಾತಾಳದಲ್ಲಿ ಪಾಪಚ್ಚಿ' ಕೃತಿಯ ಅರಿಕೆಯಲ್ಲಿ ಹೀಗೆ, 'ಅಕ್ಷರಶಃ ಭಾಷಾಂತರ ಮಾಡಿದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರ ಹೊಂದುವ ಅನೇಕ ಸನ್ನಿವೇಶಗಳನ್ನು ಆಂಗ್ಲ ಸಾಹಿತ್ಯ ಅರಿತವರಿಗೆ ಮಾತ್ರ ರಚಿಸಬಹುದಾದ ಕೆಲವು ಹಾಸ್ಯಗಳನ್ನು ತಿಳಿದುಕೊಳ್ಳಲು ವಾಚಕರಿಗೆ ತೊಂದರೆಯಾಗ ಬಹುದಾದ್ದರಿಂದ, ಸೂಕ್ತ ತೋರಿದಂತೆ, ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿದ್ದೇನೆ, ಕಥೆಯನ್ನು ಕೊಂಚ ಮಾರ್ಪಡಿಸಿದ್ದೇನೆ. ಈ ನನ್ನ ಸ್ವತಂತ್ರ ವರ್ತನೆಯಿಂದ ಮೂಲಕ ಸ್ವಾರಸ್ಯಕ್ಕೆ ಹೆಚ್ಚು ಕುಂದು ಬಂದಿಲ್ಲವೆಂಬುದು ನನ್ನ ಭಾವನೆ' ಎಂದು ಹೇಳಿದ್ದಾರೆ. ನಾ. ಕಸ್ತೂರಿಯವರಿಗೆ ಹಾಸ್ಯದ ಬಲು ಹಂಬಲವಿರುವುದು ಸತ್ಯ. ಅದರಿಂದಾಗಿ ಈ ಕೃತಿ ಅವರನ್ನು ಆಕರ್ಷಿತರಾಗುವಂತೆ ಮಾಡಿದೆ. ಮಕ್ಕಳ ಸಾಹಿತ್ಯ ಹೇಗಿರಬೇಕೆಂದು ಪಾಪಚ್ಚಿ ಬಾಯಿಂದ ಹೇಳಿಸಿದ್ದಾರೆ. ಕಂಪನ-ನವರಾತ್ರಿ, ಅಣುಕು-ಮಿಣುಕು, ಉಪಾಯ ವೇದಾಂತ, ಅನರ್ಥಕೋಶ, ಗಾಳಿಗೋಪುರ, ಗಗ್ಗಯ್ಯನ ಗಡಿಬಿಡಿ, ವರಪರೀಕ್ಷೆ, ಅಲ್ಲೋಲ ಕಲ್ಲೋಲ ಮೊದಲಾದವು ನಾ. ಕಸ್ತೂರಿಯವರ ಪ್ರಮುಖ ಕೃತಿಗಳಾಗಿವೆ.

ಕನ್ನಡ ಸಾಹಿತ್ಯದ ಹಿರಿಕರಲ್ಲಿ ಒಬ್ಬರಾದ ಬೆಟಗೇರಿ ಕೃಷ್ಣಶರ್ಮರು ಜಾನಪದ ವಿದ್ವಾಂಸರೂ ಹೌದು. ಮಕ್ಕಳಿಗಾಗಿ ಸುಂದರವಾದ ಕವಿತೆಗಳನ್ನು ರಚಿಸಿದ್ದಾರೆ. 'ಮುದ್ದಿನ ಮಾತು' ಇವರ ಪ್ರಸಿದ್ಧವಾದ ಮಕ್ಕಳ ಕವನ ಸಂಗ್ರಹವಾಗಿದೆ. ತಾಯಿ ಮಗುವಿನ ವಾತ್ಸಲ್ಯವನ್ನು, ಸರಸ-ಸಂಭಾಷಣೆಯನ್ನು ಕೃತಿಯು ಒಳಗೊಂಡಿರುವುದು ವಿಶೇಷ.

ಕಡಲತೀರದ ಭಾರ್ಗವ ಎಂದು ಹೆಸರಾದ ಕೋಟ ಶಿವರಾಮ ಕಾರಂತರು ಮಕ್ಕಳ ಸಾಹಿತ್ಯದ ವಿವಿಧ ಕ್ಷೇತ್ರಗಳನ್ನು ಸಮೃದ್ಧಗೊಳಿಸಿದ್ದಾರೆ. ಆಟದ ಮೂಲಕ ಪಾಠವನ್ನು ಕಲಿಸುವ ಯೋಜನೆ 'ಬಾಲವನ'ದಾಗಿತ್ತು. ಈ ಸಂಸ್ಥೆಯನ್ನು ಪುತ್ತೂರಿನಲ್ಲಿ ಸ್ಥಾಪಿಸಿದರು. ಬಾಲವನದ ಶಾಲೆಯಲ್ಲಿ ಮಕ್ಕಳಿಗೆ ಅನ್ನ ಬಟ್ಟೆಯನ್ನು ಕೊಟ್ಟು ವಸತಿ ಸೌಕರ್ಯಗಳನ್ನು ಒದಗಿಸಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಮಕ್ಕಳ ಲವಲವಿಕೆಯನ್ನು ಹೆಚ್ಚಿಸಲು ಶಾಲೆಯ ಒಳಾಂಗಣದಲ್ಲಿ ಪ್ರಾಣಿ ಸಂಗ್ರಹಾಲಯನ್ನು ಕಾರಂತರು ಸ್ಥಾಪಿಸಿದರು. ಹೊಸಗನ್ನಡ ಪಾಠಮಾಲೆ ಎಂಬ ಪಠ್ಯವನ್ನು ಒಂದನೆಯ ತರಗತಿ ಮತ್ತು ಎಂಟನೆಯ ತರಗತಿಯ ಮಕ್ಕಳಿಗಾಗಿ ರಚಿಸಿದರು. ಮಕ್ಕಳಿಗೆ ಇಂಗ್ಲೀಷನಲ್ಲಿ ಇರುವಂತಹ ಉತ್ತಮ ಮಕ್ಕಳ ಪುಸ್ತಕಗಳು ಕನ್ನಡದಲ್ಲಿ ಇಲ್ಲವೆಂದು ತಿಳಿದು, ಕನ್ನಡದಲ್ಲಿ ೧೮೦೦ ಪುಟಗಳ 'ಬಾಲಪ್ರಪಂಚ'ದ ಮೂರು ಸಂಪುಟಗಳನ್ನು ರಚಿಸಿದರು. ಪ್ರತಿಯೊಂದು ಸಂಪುಟ ೬೦೦ ಪುಟಗಳನ್ನು ಹೊಂದಿದ್ದು ಹದಿಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳಲ್ಲಿ ಪ್ರಕೃತಿ ವಿಜ್ಞಾನ, ನಾಡುಗಳು, ಸಾಹಿತ್ಯ, ಕಲೆ, ಇತಿಹಾಸ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮದ ಸಾಹಸಗಳು, ಜೀವನ ಚರಿತ್ರೆ, ಉದ್ಯೋಗ, ಸಮಾಜ ವಿಜ್ಞಾನ, ಕ್ರೀಡಾಜಗತ್ತು ಮೊದಲಾದವು ಒಳಗೊಂಡಿವೆ. ಮಕ್ಕಳ ಮನಸಿನ ತುಡಿತವನ್ನು ಕುರಿತು ಶಿವರಾಮ ಕಾರಂತರು, 'ಶಿಕ್ಷಣದಲ್ಲಿ ಆಸೆ, ಉತ್ಸಾಹ, ರುಚಿಕಟ್ಟು ಹುಟ್ಟಿಸಲು ಶಿಕ್ಷಕರಿಗೆ ಹಾಗೂ ಬಾಲಕರಿಗೆ ಉತ್ತಮ ಪುಸ್ತಕಗಳು ಬೇಕು' ಎಂದು ಹೇಳುತ್ತಾರೆ.

ಕನ್ನಡ ಮಕ್ಕಳ ಸಾಹಿತ್ಯಕ್ಕೆ ಕಾರಂತರ ಕೊಡುಗೆ ಅನನ್ಯವಾದುದು. ಥಂ ಡಂ ಡೋಲು, ಮಂಗನ ಮದುವೆ, ಹುಲಿರಾಯ, ಗಜರಾಜ, ಸೂರ್ಯಚಂದ್ರ, ಒಂದೇ ರಾತ್ರಿ ಒಂದೇ ಹಗಲು, ಗೆದ್ದವರ ರಾಜ್ಯ, ಮರಿಯನ ಸಾಹಸ, ಜೋಗಿ ಕಂಡ ಊರು ಭೂತಾರಾಧನೆ, ಚೆಲುವ ಕನ್ನಡ ನಾಡು ಮೊದಲಾದ ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಹೊಸಗನ್ನಡ ಪಾಠಮಾಲೆ, ಮಕ್ಕಳ ಮುತ್ತುಗಳು, ಚಿತ್ರಕಥಾಮಾಲೆಯ ಮುಖಾಂತರ ಮಕ್ಕಳ ಸಾಹಿತ್ಯವನ್ನು ಬೆಳೆಸಿದ್ದಾರೆ.

ಪಂಡಿತ ಚೆನ್ನಬಸಪ್ಪ ಎಲ್ಲಪ್ಪ ಕವಲಿರವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮಕ್ಕಳಿಗಾಗಿ ಅರವತ್ತಕ್ಕೂ ಮೇಲ್ಪಟ್ಟು ಕೃತಿಗಳನ್ನು ರಚಿಸಿದ್ದಾರೆ. ಇವರ ಮಕ್ಕಳ ಸಾಹಿತ್ಯ ಕೃತಿಗಳನ್ನು ಗಮನಿಸಿದ ಕೇಂದ್ರ ಸರಕಾರ, ಮುಂಬೈ ಸರಕಾರ, ಮೈಸೂರು ಸರಕಾರ ಹಲವಾರು ಬಹುಮಾನಗಳನ್ನು ನಿಡಿ ಗೌರವಿಸಿದೆ. ಪುಟ್ಟಣ್ಣನ ಪಂಚತಂತ್ರ, ಸ್ವಾಮಿ ವಿವೇಕಾನಂದ ಮತ್ತು ಹರಿಜನ, ಸುಸಂಸ್ಕೃತ ಶಿಶು ಸಾಹಿತ್ಯ ಸುಧಾ, ಕೋಳೂರು ಕೊಡಗೂಸು, ಸಚಿತ್ರ ಮಹಾತ್ಮಾ ಗಾಂಧಿ, ಬಡವ ಭಾಗ್ಯಶಾಲಿಯಾದ, ಪ್ರಭಾರಾಣಿ, ಪೌರಾಣಿಕ ಕಥೆಗಳು, ಕನ್ನಡದ ಚೆನ್ನುಡಿ ಹಾಗೂ ಮಾತಿನ ಮುನ್ನಡೆ ಮುಂತಾದವು ಕವಲಿಯವರು ರಚಿಸಿದ ಮಕ್ಕಳ ಕೃತಿಗಳಾಗಿವೆ.

ತಮಿಳು ಮತ್ತು ಕನ್ನಡ ಬಾಂಧವ್ಯದ ಕೊಂಡಿಯಾಗಿ ಕೆಲಸ ನಿರ್ವಹಿಸಿದ ಎಲ್. ಗುಂಡಪ್ಪನವರು ಮಕ್ಕಳ ಸಾಹಿತ್ಯಕ್ಕೆ ಶ್ರಮಿಸಿದ್ದಾರೆ. ಒಂದನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ ರಚಿಸಿದ್ದಾರೆ. ಕನ್ನಡ ಮಕ್ಕಳ ಸಾಹಿತ್ಯಕ್ಕೆ ಸುಮಾರು ಐವತ್ತೆರಡಕ್ಕೂ ಹೆಚ್ಚು ಕೃತಿಗಳನ್ನು ರಚಿಸಿಕೊಟ್ಟಿದ್ದಾರೆ. ಮಕ್ಕಳ ರವೀಂದ್ರರು, ರವೀಂದ್ರನಾಥ ಠಾಕೂರರ ಜೀವನ ವ್ಯಕ್ತಿತ್ವ ಪರಿಚಯ, ಕಳ್ಳಮರಿ, ನಾಡಪದಗಳು, ಭಾರತ ಕಥಾಮಂಜರಿ, ಕನ್ನಡ ವ್ಯಾಕರಣ ಪಾಠಗಳು, ಮುಕುಂದಮಾಲಾ, ಭಾಸ ಮೊದಲಾದ ಕೃತಿಗಳನ್ನು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ್ದಾರೆ.

ಕನ್ನಡದ ರಾಷ್ಟ್ರಕವಿ ಎನಿಸಿಕೊಂಡ ಕುವೆಂಪು ಅವರು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆ ಅಮೋಘವಾದುದು. ಕನ್ನಡ ನಾಡು ಕಂಡ ಸೃಜನಶೀಲ ಪ್ರತಿಭೆಗಳಲ್ಲಿ ಕುವೆಂಪು ಅಗ್ರಮಾನ್ಯರು, ವಿಶ್ವಮಾನವತೆ, ಪರಿಸರ ಪ್ರೀತಿ, ರಾಷ್ಟ್ರೀಯತೆ, ಕನ್ನಡಾಭಿಮಾನದೊಂದಿಗೆ ತಮ್ಮ ವ್ಯಕ್ತಿತ್ವ ರೂಪಿಸಿಕೊಂಡವರು. ಅದನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಚಿಕ್ಕಮಕ್ಕಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಕ್ಕಳ ಕವಿತೆಗಳನ್ನು ರಚಿಸಿದ ಪುಟ್ಟಪ್ಪ ಮಕ್ಕಳಿಗೆ ಪ್ರಿಯವಾಗುವ ಕತೆಗಳನ್ನೇ ಕವಿತೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಹಿರಿಯರಿಗಾಗಿ ಮಹಾಕಾವ್ಯ, ಕಾದಂಬರಿಗಳನ್ನು ರಚಿಸಿದರೂ ಮಕ್ಕಳ ಮನೋಭಾವಕ್ಕೆ ತಕ್ಕಂತೆ ಉದಾತ್ತ ತತ್ವಗಳನ್ನು ಒಳಗೊಂಡ ಕವಿತೆ, ಕಥೆ, ನಾಟಕಗಳನ್ನು ರಚಿಸಿದ್ದಾರೆ. ಮಕ್ಕಳಿಗಾಗಿ ಅಮಲನ ಕಥೆ, ಹಾಳೂರು, ಮೋಡಣ್ಣನ ತಮ್ಮ, ಬೊಮ್ಮನಹಳ್ಳಿ ಕಿಂದರಿಜೋಗಿ, ಮರಿವಿಜ್ಞಾನಿ, ನನ್ನಮನೆ, ಮೇಘಪುರ, ನನ್ನ ಗೋಪಾಲ ಮೊದಲಾದ ಮಕ್ಕಳ ಕೃತಿಗಳನ್ನು ರಚಿಸಿದ್ದಾರೆ. ಪ್ರಕೃತಿಯ ಪ್ರತಿಯೊಂದು ಸಂಗತಿಯನ್ನು ಕುತೂಹಲ, ಪ್ರೀತಿ, ಚಿಕಿತ್ಸಕ ಮನೋಭಾವದಿಂದ ಕಂಡು ಅದನ್ನು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಮಕ್ಕಳ ಸಾಹಿತ್ಯದಲ್ಲಿ ಪ್ರಮುಖವಾದ ಹೆಸರು ಮೇವುಂಡಿ ಮಲ್ಲಾರಿಯವರದು. ಇವರು ಕಥೆಗಳನ್ನು ಕಲಾತ್ಮಕ ಉದ್ದೇಶಪೂರ್ವಕವಾಗಿಯೇ ನೀಡಿದ್ದು, ನೀತಿ ನಿರೂಪಣೆಯ ಆದರ್ಶದ ಹೇರಿಕೆಯ ಯಾವುದೇ ಉದ್ದೇಶಕ್ಕೆ ಬಳಸಿಕೊಂಡಿಲ್ಲ. ಇದಕ್ಕೆ ಕಾರಣ ಅವರು ಶಿಕ್ಷಕರಲ್ಲ. ಮಲ್ಲಾರಿಯವರು ಆಯ್ದುಕೊಂಡ ಕತೆಗಳ ವಸ್ತುಗಳಲ್ಲಿ ಗುಬ್ಬಿ, ಮಂಗ, ಕತ್ತೆ, ಇಲಿ, ಮುದುಕಿ ಮುಂತಾದವು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಸಣ್ಣ ಮತ್ತು ಕ್ಷುದ್ರ ಎನಿಸಿಕೊಳ್ಳುವ ಜೀವಿಗಳು ಪ್ರಮುಖ ಪಾತ್ರ ವಹಿಸಿಕೊಂಡಿವೆ. ಧಾರವಾಡದ ಆಡುಭಾಷೆ, ಕತೆ ಹೇಳುವ ಶೈಲಿ ಇವೆಲ್ಲವುಗಳಿಂದ ಮಕ್ಕಳ ಕಥೆಗಳು ಮನಸೂರೆಗೊಂಡಿವೆ. ಮಲ್ಲಾರಿಯವರು ಆಡುಭಾಷೆಯನ್ನು ಬಳಸಿ ತಮ್ಮ ಅನುಭವವನ್ನು ಕೃತಿಗಳಲ್ಲಿ ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಪರಿಸರದ ಮಕ್ಕಳಿಗೆ ಸಹಜವಾಗಿ ಹಿಡಿಸುವಂತಹ 'ಅದ್ಭುತ' ವಿಷಯಗಳನ್ನು ಚಿತ್ರಿಸಿದ್ದಾರೆ. ಕತೆಗಳಲ್ಲಿ ನೀತಿಯನ್ನು ತಿಳಿಸುವ, ಉದ್ದೇಶ

ಹೊಂದಿವೆ. ಮಕ್ಕಳಿಗೆ ಎಲ್ಲಿಯೂ ಹೊರೆಯಾಗದಂತೆ ತೋರುತ್ತವೆ. ಮಾನವೀಯ ಗುಣಗಳು ಬಿತ್ತರಿಸುವ ಕತೆಗಳಾಗಿವೆ. ಮಲ್ಲಾರಿಯವರು ಕರ್ನಾಟಕ ವೃತ್ತ, ಕನ್ನಡ ಕಂದ, ಪುಸ್ತಕ ಮಾಲೆ, ಜಯಕರ್ನಾಟಕ ಮೊದಲಾದ ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದಾರೆ.

ಕನ್ನಡ ಮಕ್ಕಳಿಗೆ ಸುಮಾರು ಎಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದವರು ಮಲ್ಲಾರಿಯವರು. ಕಡಲೆಪುರಿ, ಕತ್ತೆಯ ಮೇಳ, ಪೆದ್ದನ ಪುರಿ, ಬೆಕ್ಕಿನಂಗಡಿ, ದ್ರುವನ ದೋಸ್ತ, ಮಡ್ಡಮ್ಮನ ಸಂಸಾರ, ಗಾಳಿಯ ಹಾವಳಿ, ಬಂಗಾರದ ಕೂದಲು, ಗೆಳೆಯ, ಸೇರಿಗೆ ಸವ್ವಾಸೇರು, ಮೂವರು ಕಳ್ಳರು, ಗುಬ್ಬಚ್ಚಿಗೂಡು, ಅವಿವೇಕಿ ಅರಸು, ಕೆಂಪು ಮೋತಿ ಹಂಪಣ್ಣ, ಹೊಟ್ಟೆಡುಮ್ಮ, ಕಿಡಗೇಡಿ ಕಿಟ್ಟಿ, ದಾರಿಯ ಬುತ್ತಿ, ಠಕ್ಕರ ಗುರು, ಸಾಹಸ ಜೀವಿಗಳು, ಆದರ್ಶ ಕಥೆಗಳು, ಮಕ್ಕಳ ರಾಮಾಯಣ, ಮಹಾಭಾರತ, ಭಾಗವತ, ನೀತಿ ಕಥೆಗಳು, ಕರ್ಪೂರ ಮಂಜರಿ ಮೊದಲಾದ ಮಹತ್ವದ ಮಕ್ಕಳ ಕೃತಿಗಳಾಗಿವೆ.

ಮಕ್ಕಳ ಸಾಹಿತ್ಯ ಉತ್ತಮವಾದ ನೆಲೆಯನ್ನು ಕಂಡುಕೊಳ್ಳಲು ಜಿ. ಪಿ. ರಾಜರತ್ನಂ ಅವರ ಕೊಡುಗೆ ಅನನ್ಯವಾಗಿದೆ. ಇವರು ರಾಮನಗರ ಜಿಲ್ಲೆಯವರು ತಂದೆ ಜಿ. ಪಿ. ಗೋಪಾಲಕೃಷ್ಣ ಅಯ್ಯಂಗಾರರು, ಬೋಳುವಾರರು ಹೀಗೆ ಹೇಳುತ್ತಾರೆ. 'ಅವರು ಮಕ್ಕಳ ಪದ್ಯಲೋಕದ ರಾಜ ಮತ್ತು ರತ್ನ' ಎರಡೂ ಆಗಿದ್ದಾರೆ ಎಂದು. ರಾಜರತ್ನಂ ಅವರ ಶಿಶುಗೀತೆಗಳು ಮಕ್ಕಳನ್ನು ಆಕರ್ಷಿಸಿ ಅವರ ಮನವನ್ನು ಅರಳಿಸುವಲ್ಲಿ ಬಲು ಪ್ರಧಾನವಾಗಿವೆ. ಪದಗಳ ಬಳಕೆ ಸರಳವಾಗಿವೆ. ಮಕ್ಕಳ ಪ್ರಪಂಚವನ್ನು ಮತ್ತು ಅವರ ಮನೋಭಾವವನ್ನು ಚೆನ್ನಾಗಿ ಬಲ್ಲವರು. ನೀತಿಯ ಭಾರವಿಲ್ಲದೆ ಮಕ್ಕಳ ನೆನಪಿನಲ್ಲಿ ಉಳಿಯುವಂತಹ ಪದ್ಯಗಳನ್ನು ರಚಿಸಿದ್ದಾರೆ. ಮಕ್ಕಳ ಆಸಕ್ತಿ ಅಭಿರುಚಿಗಳಿಗೆ ಅನುಸಾರವಾಗಿ ವಸ್ತುವಿನ ಆಯ್ಕೆ, ಪ್ರಾಸ ಸಂಯೋಜನೆ, ಮಧುರವಾದ ಧಾಟಿ, ಲಯಗಳು ಇವರ ಕವಿತೆಗಳ ಯಶಸ್ಸಿಗೆ ಪೂರಕವಾಗಿವೆ.

ಜಿ. ಪಿ. ರಾಜರತ್ನಂ 'ಚುಟುಕು'ಗಳನ್ನು ಸಹಜವಾಗಿ ಬಳಸಿದ್ದಾರೆ. 'ಗಡಗಡ ಓಡಿತು ರೈಲು', 'ತೆಗೆದುಕೊಂಡು ದಡಿ', 'ಬೆಳ್ಳಿಯ ರೆಕ್ಕೆಯ ಹಕ್ಕಿ' ಮೊದಲಾದವು ಪ್ರಮುಖ ಚುಟುಕುಗಳಾಗಿವೆ. ಇವರಷ್ಟು ಸರಳವಾಗಿ, ವೈವಿಧ್ಯಮಯವಾಗಿ ಅನುಭವದ ಹಿನ್ನೆಲೆಯಲ್ಲಿ ರಚಿಸಿದವರು ಅಪರೂಪ. ಸ್ವತಃ ಶಿಕ್ಷಕರಾಗಿರುವುದರಿಂದ ಅಲ್ಲದೆ ಅಪಾರ ಅಧ್ಯಯನ, ಆಸಕ್ತಿ, ಪ್ರತಿಭೆಗಳಿಂದಾಗಿ ಶ್ರೇಷ್ಠ ಮಕ್ಕಳ ಸಾಹಿತ್ಯ ರಚಿಸಲು ಸಹಾಯಕವಾಗಿವೆ. ರಾಜರತ್ನಂ ಅವರನ್ನು ಕುರಿತು ಬಿ. ಶ್ರೀ. ಪಾಂಡುರಂಗರಾವ್ ಅವರು ಹೀಗೆ ಹೇಳುತ್ತಾರೆ. 'ಜಿ. ಪಿ. ರಾಜರತ್ನಂ ೧೯೩೨ರಲ್ಲಿ ಕನ್ನಡ ಸಾಹಿತ್ಯ ಪ್ರಪಂಚವನ್ನು ಹೊಕ್ಕು ಮಕ್ಕಳ

ಸಾಹಿತ್ಯ ರಚನೆಗೆ ತೊಡುಗುವುದಕ್ಕೆ ಪಾಣೀಪೀಠ ಸಿದ್ಧವಾಗಿತ್ತು. ದಿ. ಪಂಜೆಮಂಗೇಶರಾಯರ ಅವರಿಂದ ಮೊದಲುಗೊಂಡು ದಿ. ದೇವುಡುವರೆಗೆ ಇವರುಗಳು ಮಕ್ಕಳ ಸಾಹಿತ್ಯದಲ್ಲಿ ಒಂದೊಂದು ಪ್ರಕಾರವನ್ನು ಎತ್ತಿಕೊಂಡರು. ಏನನ್ನು ಸಾಧಿಸಿದರೂ ಅಷ್ಟನ್ನು ದಿ. ರಾಜರತ್ನಂ ತಮ್ಮ ಮಕ್ಕಳ ಸಾಹಿತ್ಯ ರಚನೆಯಲ್ಲಿ ಸಾಧಿಸಿದ್ದಾರೆ. ಅದೇಕೋ ಅವರು 'ಬೆಳೆಯುವ ಪೈರು' ಮತ್ತು 'ಧ್ವಜ ವಂದನೆ' ಎಂಬ ಕೇವಲ ಎರಡೇ ಮಕ್ಕಳ ನಾಟಕಗಳನ್ನು ಬರೆದು ಸುಮ್ಮನಾದದ್ದು ಆಶ್ಚರ್ಯ. ಮಕ್ಕಳ ವಿಜ್ಞಾನ ಸಾಹಿತ್ಯ ರಚನೆಯಲ್ಲಿ ತೊಡಗಿದಂತೆ ಕಾಣುವುದಿಲ್ಲ. ಈ ಎರಡು ಕೊರತೆಗಳನ್ನು ಬಿಟ್ಟರೆ, ರಾಜರತ್ನಂ ಮಕ್ಕಳ ಸಾಹಿತ್ಯ ಸೃಷ್ಟಿಯಲ್ಲಿ ಶ್ರವಣಬೆಳಗೊಳದ ಬೃಹದಾಕಾರದ ಮೂರ್ತಿ ಗೋಮಟೇಶ್ವರನಂತೆ ಎದ್ದು ಕಾಣುತ್ತಾರೆ. ಹಿಮಾಲಯ ಪರ್ವತಗಳ ಉತ್ತುಂಗ ಶಿಖರ ಗೌರಿ ಶಂಕರದಂತೆ ಎತ್ತರ ನಿಲ್ಲುತ್ತಾರೆ'[೩] ಎನ್ನುವ ಮಾತುಗಳು ಸತ್ಯವೆನಿಸುತ್ತವೆ.

ಮಕ್ಕಳಿಗೆ ರಚಿಸಿದ ಶಿಶುಗೀತೆಗಳಲ್ಲಿ 'ಬಣ್ಣದ ತಗಡಿನ ತುತ್ತೂರಿ', 'ಒಂದು ಎರಡು ಬಾಳಲೇ ಹರಡು', 'ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ' ಎನ್ನುವಂತಹ ಸರಳ ಪದ್ಯಗಳು ಮಕ್ಕಳನ್ನು ರಂಜಿಸಿವೆ. ಮಕ್ಕಳ ಭಾವವನ್ನು ಅರ್ಥಮಾಡಿಕೊಂಡು ಮಕ್ಕಳಿಗಾಗಿ ಪದ್ಯ, ಕತೆ, ಜೀವನ ಚರಿತ್ರೆ, ನಾಟಕಗಳನ್ನು ರಚಿಸಿದರು. ನಾದಮಾಧುರ್ಯ ಇವರ ಕವಿತೆಗಳ ವೈಶಿಷ್ಟ್ಯ, ಕಂದನ ಕಾವ್ಯಮಾಲೆ, ಕಡಲೆಪುರಿ, ಕೆನೆಹಾಲು, ಕಲ್ಲು ಸಕ್ಕರೆ, ತುತ್ತೂರಿ, ತುಂಟ ಗಣಪತಿ, ಮುದ್ದುಕೃಷ್ಣ, ಕಳ್ಳ ರಂಗಪ್ಪ, ಪೋಲಿ ಸುಬ್ಬಣ್ಣ, ತಾರೆ, ಕೊಂಬಿನ ಆನೆ, ಕೋಳಿಕಳ್ಳ, ಬೆಪ್ಪ ತಕ್ಕಡಿ, ಗೋಳೂರಿನ ಗಾಯಕರು, ಮಕ್ಕಳಿಗೆ ಮಣಿದೀಪ, ಪಂಚತಂತ್ರದ ಕಥೆಗಳು, ಜಯವಿಜಯರ ಕಥೆಗಳು, ಬಾಹುಬಲಿ ವಿಜಯ, ಗೊಮ್ಮಟಶಿಲ್ಪ, ಗಂಡುಗೊಡಲಿ ಮೊದಲಾದವು ರಾಜರತ್ನಂ ಅವರ ಪ್ರಮುಖ ಕೃತಿಗಳಾಗಿವೆ.

ಬಿ. ಶಂಕರಭಟ್ಟರವರು ಮಕ್ಕಳ ವಯಸ್ಸನ್ನು ಮತ್ತು ಬೌದ್ಧಿಕ ಮಟ್ಟವನ್ನು ಆಧರಿಸಿ ನೂರಕ್ಕೂ ಹೆಚ್ಚು ಮಕ್ಕಳಿಗಾಗಿ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳಲ್ಲಿ ಕುತೂಹಲಕಾರಿಯಾದ ಗುಣಗಳನ್ನು ಮೂಡಲು ಪಕ್ಷಿ, ಪ್ರಾಣಿಗಳನ್ನು ಆಯ್ದುಕೊಂಡು ಸಾಹಸ, ಜಾಣ್ಮೆಗಳ ಕಥೆಗಳನ್ನು ಹೆಣೆದಿದ್ದಾರೆ. ಸಣ್ಣ ಪದಗಳು ಮತ್ತು ಸಣ್ಣ ವಾಕ್ಯಗಳನ್ನು ಬಳಸಿಕೊಂಡು ಮಕ್ಕಳ ಮನಸ್ಸಿಗೆ ಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಪ್ರತಿ ಕತೆಯು ಕೊನೆಗೆ ನೀತಿಯನ್ನು ತಿಳಿಯಪಡಿಸುತ್ತವೆ. ಬುದ್ಧಿವಂತರ ಬುರುಡೆಗಳು, ಕಾಡುಮೀನು, ನೀಲಿಹೂ, ಭೂದೇವಿಯ ಮದುವೆ, ಬಡಗಿಗಳ ಬಂಡಾಟ, ಮಾಯೆಯ ಕನ್ನಡಿ, ಗ್ರೀಕ್ ವೀರರು, ಅದೃಷ್ಟದ ಆಟ, ಅರಸು, ನರಿ ಮುಂತಾದವು ಪ್ರಮುಖ ಮಕ್ಕಳ ಕೃತಿಗಳಾಗಿವೆ. 'ಚೆಲುವಗನ್ನಡ ಪದ್ಯಮಾಲೆ', 'ಚೆಲುವಗನ್ನಡ ಪಾಠಶಾಲೆ', 'ಕವನ ಕಿಶೋರ' ಎನ್ನುವ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ದಾಮೋದರ ಬಾಳಿಗರವರು ಮಕ್ಕಳ ಕಥೆಗಳನ್ನು ಮತ್ತು ಕವನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದವರು. ಮಕ್ಕಳ ಭಾವನೆಗಳನ್ನು ಅರಿತು ಪರಿಸರದ ವಸ್ತುಗಳಲ್ಲಿ ತಿಳಿಯಪಡಿಸುವ ಕಲೆ ದಾಮೋದರ ಬಾಳಿಗೆ ಅವರಿಗೆ ಕರಗತವಾಗಿತ್ತು. 'ಗೋವಿನ ಕತೆ', 'ಚೌಡಿ ಮೈನಾ', 'ಸೀನಿನ ಶೀನ', 'ಅಳಿಲು ಸೇವೆ', 'ದೇವರು ಮಕ್ಕಳು', 'ಭಾರತೀ ಜ್ಯೋತಿ', 'ಮಹಾತ್ಮ', 'ಅಜ್ಜಿ ಕತೆ', 'ಗುಬ್ಬಿ ಕುಣಿತ', 'ಅತ್ತೆಯ ಕರಾರು', 'ಇತರೆ ಕಥೆಗಳು', 'ಉಂಡಾಡಿ ತೋಳ', 'ಮೃಗರಾಜ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಸಾಹಿತ್ಯ ರಚನೆಗಾಗಿ ಅನೇಕ ಪುರಸ್ಕಾರಗಳು ಇವರಿಗೆ ಲಭಿಸಿವೆ.

ದಿನಕರ ದೇಸಾಯಿಯವರು ಸಾಮಾಜಿಕ ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು, ಸಮುದಾಯದ ಸೇವೆಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಮೂಲತಃ ಜನಪರ ಹೋರಾಟಗಾರರು, ಸಾಮಾಜಿಕ ಅನಿಷ್ಠ ಪದ್ಧತಿಗಳನ್ನು ತೊಲಗಿಸುವ ಉದ್ದೇಶ ಹೊಂದಿದವರು. ಹೀಗಾಗಿ ಅವರಿಗೆ ಮಕ್ಕಳ ಸಾಹಿತ್ಯ ರಚನೆಯ ಒಲುಮೆ ಬೆಳೆಯಲು ಸಾಧ್ಯವಾಯಿತು. ಮಕ್ಕಳ ಮನೋಭಾವನೆಗಳನ್ನು ಗ್ರಹಿಸಿದ ದಿನಕರ ದೇಸಾಯಿಯವರು ತಮ್ಮ ಪದ್ಯಗಳಲ್ಲಿ ಮಕ್ಕಳಿಗೆ ಪರಿಚಿತವಾದ ಪ್ರಾಣಿಗಳ ಕುರಿತ ವಿವರ, ವಿಶಿಷ್ಟ ವ್ಯಕ್ತಿಗಳ ಚಿತ್ರ, ಬೇರೆ-ಬೇರೆ ವಸ್ತುವಿನ ಗುಣ, ಲಕ್ಷಣ ಮಕ್ಕಳ ಮನಕ್ಕೆ ಮುದನೀಡುವ, ಅವರ ಜ್ಞಾನವನ್ನು ವಿಸ್ತರಿಸುವ ಕತೆಗಳನ್ನು ಗೇಯತೆ ಹಾಗೂ ಅನುಕರಣವಾಚಕ ಪದಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ದಿನಕರ ದೇಸಾಯಿಯವರು ಪಂಜೇಮಂಗೇಶರಾಯರ ಪ್ರಭಾವವನ್ನು ಹೊಂದಿ ಅನೇಕ ಮಕ್ಕಳ ಕವಿತೆಗಳನ್ನು ರಚಿಸಿದರು. 'ಚುಟುಕು ಬ್ರಹ್ಮ' ಎಂದು ಪ್ರಸಿದ್ಧರಾದ ದೇಸಾಯಿಯವರು ಅನೇಕ ಗೌರವಗಳಿಗೆ ಪಾತ್ರರಾಗಿದ್ದಾರೆ. ಇವರು ಕನ್ನಡದಲ್ಲಿ ಮಾತ್ರ ಮಕ್ಕಳ ಕೃತಿಗಳನ್ನು ರಚಿಸಲಿಲ್ಲ; ಕೊಂಕಣಿಯಲ್ಲೂ ಮಕ್ಕಳ ಗೀತೆಗಳನ್ನು ರಚಿಸಿದ್ದಾರೆ. ಮಕ್ಕಳ ಗೀತೆಗಳು, ಮಕ್ಕಳ ಪದಗಳು, ಹೂಗೊಂಚಲು, ಇವರ ಜನಪ್ರಿಯ ಮಕ್ಕಳ ಕೃತಿಗಳಾಗಿವೆ.

'ರಾಘವ' ಕಾವ್ಯನಾಮದಿಂದ ಪ್ರಸಿದ್ಧರಾದ ಪ್ರೋ. ಎಂ. ವಿ. ಸೀತಾರಾಮಯ್ಯನವರು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆ ಅಪಾರ. ಹಾಗೆ ಪ್ರೌಢ ಸಾಹಿತ್ಯದಲ್ಲಿಯೂ ಗಮನಾರ್ಹವಾದ ಸಾಹಿತ್ಯ ನಿರ್ಮಿಸಿದ್ದಾರೆ. ಕಾವ್ಯ, ನಾಟಕ, ಕಾದಂಬರಿ, ಪ್ರಬಂಧ, ಸಂಶೋಧನ, ವಿಮರ್ಶೆ ಮೊದಲಾದ ಪ್ರಕಾರಗಳಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಹೂವಾಡಗಿತ್ತಿ, ಹಾವಾಡಿಗ, ಕುಮಾರ ಗೌತಮ, ಯುಧಿಷ್ಠಿರ, ನಮ್ಮ ಪುಸ್ತಕ, ಊರುಗೋಲು, ಕರುಣಾಮೂರ್ತಿ ಬಾ ಬಸವೇಶ್ವರ, ಶ್ರೀಕೃಷ್ಣ ಬಾಲಲೀಲೆ ಇವರ ಪ್ರಮುಖ ಕೃತಿಗಳಾಗಿವೆ. ಇವರ ಸಾಹಿತ್ಯ ಕೃತಿಗಳಿಗೆ ಅನೇಕ ಪುರಸ್ಕಾರಗಳು ಲಭಿಸಿವೆ. ಸೀತಾರಾಮಯ್ಯನವರ

ಕಾವ್ಯದ ವಿಶೇಷತೆಯೆಂದರೆ ಹಾಸ್ಯ, ರಂಜನೆ, ಲಯಗಳನ್ನು ಹೊಂದಿ ಒಮ್ಮೆಲೆ ಆಕರ್ಷಣೆಗೆ ಒಳಗಾಗುತ್ತವೆ. ತಮ್ಮ ಸುತ್ತಲಿನ ಪರಿಸರವನ್ನು ಗಮನಿಸಿ ಕಾವ್ಯ ರಚಿಸಿದವರು. ಇಂಗ್ಲೀಷ ಭಾಷೆಯ ಜ್ಞಾನವಿರುವ ಇವರು ಸಹಜವಾಗಿ ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯಾಗಿದೆ. ಇಂಗ್ಲೀಷನಲ್ಲಿ ಪ್ರಚಲಿತವಿರುವ ದೃಶ್ಯಕಾವ್ಯವನ್ನು ಸೀತಾರಾಮಯ್ಯನವರು ಬಳಸಿಕೊಂಡು ಕನ್ನಡದಲ್ಲಿ ಇದನ್ನು ಬಳಸಿ ರಂಜನೀಯಗೊಳಿಸಿದ್ದಾರೆ. ಇಲಿಯಬಲ, ಹಾವು, ಗಂಟೆ, ಕಿರೀಟ ಧರಿಸುವ ದೊರೆಗಳು ಇಲ್ಲ, ಬೃಂದಾವನ ಮುಂತಾದ ಕವಿತೆಗಳು ದೃಶ್ಯಕಾವ್ಯಗಳಾಗಿ ಗಮನ ಸೆಳೆಯುತ್ತವೆ.

ಮಕ್ಕಳ ಸಾಹಿತ್ಯದಲ್ಲಿ ವರ್ಣಮಯ ಸಚಿತ್ರಗಳ ಪುಸ್ತಕಗಳನ್ನು ಪ್ರಕಟಿಸಿದವರಲ್ಲಿ ಟಿ. ಎಂ. ಆರ್. ಸ್ವಾಮಿಯವರು ಮೊದಲಿಗರೆಂದು ಹೇಳಬಹುದು. ಉಪಾಧ್ಯಯ ವೃತ್ತಿಯಾದರೂ ಮಕ್ಕಳ ಸಾಹಿತ್ಯ ರಚನೆ ಪ್ರವೃತ್ತಿಯಾಗಿತ್ತು. 'ಕನ್ನಡದ ಕಣಜ' ಎಂಬ ಗ್ರಂಥಮಾಲೆಯ ಮೂಲಕ ಕನ್ನಡದ ಮಕ್ಕಳಿಗೆ ವೈವಿಧ್ಯಮಯವಾದ ಕೃತಿಗಳನ್ನು ಪ್ರಕಟಿಸಿದರು. ಇವು ಆ ಸಮಯದ ಬರಹಗಾರರಿಗೆ ಸ್ಫೂರ್ತಿದಾಯಕವಾದವು. ಅದೇ ರೀತಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಶ್ರಮಿಸಿದರು. ಮಕ್ಕಳ ಸಾಹಿತ್ಯ ಬೆಳೆಸಿದರು. ಬೆಂಕಿಕೋಳಿ, ಗುಲಾಬಿ, ಪಾಯಸದ ಪಟ್ಟಣ, ರಂಕಲ್ ರಾಟಿ, ಕೊಕ್ಕರೆಯ ಕತ್ತೇಕೆ ಕೊಂಕು, ಪಟಾಕಿ ಪುಟ್ಟುವಿನ ಕತೆಗಳು, ಉಡುಗೊರೆ ಮೊದಲಾದವು ಸ್ವಾಮಿಯವರ ಕೃತಿಗಳಾಗಿವೆ.

ಮಕ್ಕಳ ಸಾಹಿತ್ಯಕ್ಕೆ ಮೀಸಲಾದ 'ಮಕ್ಕಳ ಮಂಟಪ'ವನ್ನು ಸ್ಥಾಪಿಸಿ ತಮ್ಮ ಬದುಕನ್ನು ಮುಡುಪಾಗಿಸಿದವರು ಬಿ. ಶ್ರೀ. ಪಾಂಡುರಂಗರಾಯರು. ಮಕ್ಕಳ ಮನೋವಿಕಾಸ, ಮಕ್ಕಳ ಮನರಂಜನೆ, ಮಕ್ಕಳ ಶಿಕ್ಷಣ, ಮಕ್ಕಳ ಕಲೆಗಾಗಿ ಸಂಸ್ಕಾರ, ಸಂಸ್ಕೃತಿಯ ಪ್ರಗತಿಗಾಗಿ ಶ್ರಮಿಸಿದವರು ಬಿ. ಶ್ರೀ. ಪಾಂಡುರಂಗರಾಯರು. ಮನೆಯೇ ಪಾಠಶಾಲೆಯಾಗಿ ನಿರ್ಮಿಸಿಕೊಂಡವರು. ಸಾಹಸ, ಕುತೂಹಲ ಮಕ್ಕಳಿಗೆ ಬಲು ಪ್ರಿಯ. ಅಂತಹ ಕೃತಿಗಳಲ್ಲಿ 'ಕಲ್ಲು ಸಕ್ಕರೆ' ಪ್ರಮುಖವಾದುದು. ಮಕ್ಕಳ ವಯೋಮಿತಿಯ ಹಂತಗಳಿಗೆ ಅನುಸಾರವಾಗಿ ಕವಿತೆ, ಕಥೆ, ನಾಟಕ, ಕಾದಂಬರಿಗಳನ್ನು ರಚಿಸಿದವರು ಪಾಂಡುರಂಗರಾಯರು. 'ಕನ್ನಡ ಮಕ್ಕಳ ಸಾಹಿತ್ಯದ ಹೆಜ್ಜೆ ಪಾಡು', 'ಮೆದುಳಿಗೆ ಮೃಷ್ಟಾನ್ನ' ಮೊದಲಾದ ಕೃತಿಗಳು ಮಾರ್ಗದರ್ಶಿಯಾಗಿವೆ. ಮಳೆರಾಯ, ಧೀರಮಗ, ಪಟಾಣಿ ಗೆಳೆಯ, ತುಂಟನ ಗುರು, ತಾಯಿಯೇ ಗುರು, ತಾಯಿಯೇ ದೇವರು, ಗುರುವೇ ದೊಡ್ಡವನು, ಆದರ್ಶ ಸಹೋದರರು, ರಾಜಾ ಬೀರಬಲ್, ಎಳೆಯರ ಭಾರತ, ಮಹಾತ್ಯಾಗಿ, ಮಹಾಸಾಹಸಿ, ಮಹಾಮಾತೆ ಮೊದಲಾದ ಕೃತಿಗಳು ಬಿ. ಶ್ರೀ. ಪಾಂಡುರಂಗರಾಯರನ್ನು ಮಕ್ಕಳ ಸಾಹಿತ್ಯದಲ್ಲಿ ಗುರುತಿಸುವಂತೆ ಮಾಡಿವೆ.

'ಭಾರತೀಸುತ' ಕಾವ್ಯನಾಮದಿಂದ ಪರಸಿದ್ಧರಾದವರು ಎಸ್. ಆರ್. ನಾರಾಯಣರಾವ್. ಮಕ್ಕಳ ಸಾಹಿತ್ಯಕ್ಕೆ ಇವರ ಕೊಡುಗೆ ವಿಶಿಷ್ಟವಾದುದು. ಮಕ್ಕಳಿಗೆ

ಅದ್ಭುತ ಘಟನೆ, ಕುತೂಹಲಕರ ಚಿತ್ರಣ, ಪ್ರಾಣಿಗಳ ಸಂಭಾಷಣೆ, ಸರಳವಾದ ಮತ್ತು ಸುಂದರವಾದ ಹಾಸ್ಯ ಪ್ರಸಂಗಗಳನ್ನು ಕಟ್ಟಿಕೊಡುವುದರಲ್ಲಿ ಭಾರತೀಸುತರು ಪ್ರಸಿದ್ಧರಾಗಿದ್ದಾರೆ. ಕೊಪ್ಪರಿಗೆ ಚಿನ್ನ, ಗೀಗೀ, ಶೆಟ್ಟರಿಗೆ ಸಿಕ್ಕ ಕೊಪ್ಪರಿಗೆ ಹೊನ್ನು, ಇರುವೆಯಾದ ಕತೆ, ಹೋತನ ಬೆನ್ನೇರಿದ ತೋಳ, ಹುಲಿಗಳ ದಿಬ್ಬಣ, ಕಾಡಿನಲ್ಲಿದ್ದ ಮರಿಯಾನೆಯ ಸಾಹಸ, ಗೆಳೆಯ ಮೊಲರಾಯ, ನಳದಮಯಂತಿ, ಬೆಸ್ತು ಬಿದ್ದ ನರಿ, ಕಳ್ಳರ ಫಜೀತಿ, ಕಿನ್ನರ ಕುಣಿತ, ಕಾವೇರಿ, ಕುಣಿಯುತ ಬಂದರು, ಕುಂಬಾರನ ಮಕ್ಕಳು, ಮಂತ್ರದ ಕೊಳಲು, ಹೊನ್ನು ಹೊಳೆಯ ಅರಸು, ಇಲಿ ಮರಿಗಳು ಹಾಡಿದಾಗ, ಹನ್ನೊಂದು ಹಂಸಗಳು ಮೊದಲಾದ ಪ್ರಮುಖ ಮಕ್ಕಳ ಕೃತಿಗಳನ್ನು ಎಸ್. ಆರ್. ನಾರಾಯಣರಾವ್ ಅವರು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ್ದಾರೆ.

ಎರಡನೆಯ ತಲೆಮಾರಿನ ಮಕ್ಕಳ ಸಾಹಿತ್ಯ : (೧೯೪೭-೧೯೭೦)

ಕನ್ನಡ ಮಕ್ಕಳ ಸಾಹಿತ್ಯವು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಮತ್ತು ಆನಂತರದ ಸಮಯದಲ್ಲಿ ಬಹು ವಿಶಾಲವಾಗಿ ಬೆಳೆಯಿತು. ಈ ಸಮಯದಲ್ಲಿ ಕಂಡುಬರುವ ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿದವರು ಶಿಕ್ಷಕ ಸಮೂಹವೇ ಹೆಚ್ಚು. ಇದು ಸ್ವಾತಂತ್ರ್ಯ ಹೋರಾಟದ ಸಂದರ್ಭವಿರುವುದರಿಂದ ಎಲ್ಲೆಡೆಯೂ ಗಾಂಧೀಜಿಯ ಪ್ರಭಾವದಿಂದ ರಾಷ್ಟ್ರ ಅಭಿಮಾನ, ಭಾವೈಕ್ಯತೆಗಳ ವಿಷಯಗಳುಳ್ಳ ಪುಸ್ತಕಗಳು ಪ್ರಕಟಗೊಂಡು ಪ್ರಚಲಿತವಾದವು. ಮಕ್ಕಳ ಪುಸ್ತಕಗಳ ವಿಷಯವಸ್ತು ಮಕ್ಕಳ ನಿಜ ಜೀವನದ ಚುಟುವಟಿಕೆಗಳು, ಆಟ-ಪಾಠಗಳು, ನೈತಿಕತೆಯ ಕಡೆಗೆ ಬರಹಗಾರರ ಮನಸ್ಸು ಹರಿಯತೊಡಗಿತು. ಈ ಕಾಲಘಟ್ಟದ ಮಕ್ಕಳ ಸಾಹಿತಿಗಳು ಮತ್ತು ಅವರ ಕೃತಿಗಳ ಕುರಿತಾಗಿ ನೋಡೋಣ.

ಅರ್ಚಕ ವೆಂಕಟೇಶರವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಇವರ ಕಾಣಿಕೆ ಅಪಾರ. ಪತ್ರಕರ್ತರಾದ ಅರ್ಚಕ ವೆಂಕಟೇಶರವರು ಕತೆ, ನಾಟಕ, ಕಾದಂಬರಿ, ಪ್ರಶ್ನೋತ್ತರ ಮಾಲಿಕೆ ರೂಪ ಮುಂತಾದ ಪ್ರಕಾರಗಳಲ್ಲಿ ಕೃಷಿಗೈದು ಮಕ್ಕಳ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಮಕ್ಕಳಿಗಾಗಿಯೇ ಆಕಾಶವಾಣಿಯಲ್ಲಿ ಅನೇಕ ಮಕ್ಕಳ ರೂಪಕಗಳನ್ನು ಪ್ರಸಾರ ಮಾಡಿದ್ದಾರೆ. ಪ್ರಲ್ಹಾದನ ಪ್ರಾಣಿ ಸಂಪತ್ತು, ಹರಿದ ಚಂದ್ರ, ಸಾವನ ದುರ್ಗ, ಭ್ರಾತೃಪ್ರೇಮ, ಪಾನಕ ಕೋಸಂಬರಿ, ಮೋಹನ ಮಾಳವೀಯ, ರಮಣ ಮಹರ್ಷಿ, ರಾಮನ ಕಥೆ, ಧ್ರುವ ನಕ್ಷತ್ರ, ಪೂರ್ಣಚಂದ್ರ, ಶಬ್ದ ಶಿಲ್ಪಿ, ಪಂಗನಾಮ ಮೊದಲಾದವು ಇವರ ಪ್ರಮುಖ ಕೃತಿಗಳಾಗಿವೆ.

ಕುಮಾರ ವೆಂಕಣ್ಣರವರು ಮಕ್ಕಳ ಸಾಹಿತ್ಯದಲ್ಲಿ ಹೆಸರುವಾಸಿಗಳಾದವರು. ಇವರು ಮಕ್ಕಳಿಗಾಗಿ ಸಾವಿರಕ್ಕೂ ಹೆಚ್ಚು ಕತೆಗಳನ್ನು ರಚಿಸಿದವರು ಸಣ್ಣ-ಸಣ್ಣ ವಾಕ್ಯಗಳು ಮತ್ತು

ಪದಪುಂಜಗಳನ್ನು ಬಳಸಿ ಸೊಗಸಾದ ರೀತಿಯಲ್ಲಿ ಕತೆ ರಚಿಸುವುದು ಇವರ ವಿಶೇಷತೆ. ಮಗುವಿನ ಮನೋಭಾವಕ್ಕೆ ತಕ್ಕ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಬರಹಕ್ಕೆ ಇಳಿಯುವುದು ಕುಮಾರ ವೆಂಕಣ್ಣರವರ ಇನ್ನೊಂದು ವಿಶೇಷತೆ. 'ಪಾಪಚ್ಚಿ' ಪತ್ರಿಕೆಯ ಸಂಪಾದಕರಾಗಿ ಮಕ್ಕಳ ಸಾಹಿತ್ಯಕ್ಕೆ ಪ್ರಾಧಾನ್ಯತೆ ಕಲ್ಪಿಸಿದ್ದಾರೆ. ಕಪ್ಪೆ ಮಾಡಿದ ಕ್ರಾಂತಿ, ಜಾಣರು ತೋಡಿದ ಭಾವಿ, ಜಾಣ ಗೆಲ್ಲುತ್ತಾನೆ, ನ್ಯಾಯಶೀಲ ಗೆಲ್ಲುತ್ತಾನೆ, ತಂದೆ ಹೇಳಿದ ಬುದ್ಧಿ, ಮಂತ್ರಿಯಾದ ಬುದ್ಧಿವಂತ, ಆನೆಗೆ ಬುದ್ಧಿಬಂತು, ದೇವರ-ಹೆಂಡಿರು, ದೇವರು ಮದುವೆ ಮಾಡಿಸಿದ ಇವು ಮಹತ್ವದ ಕೃತಿಗಳು.

ಡಾ. ವರದರಾಜ ಹುಯಿಲಗೋಳರವರು ಮಕ್ಕಳ ಸಾಹಿತ್ಯಕ್ಕೆ ಅಪೂರ್ವ ಕೊಡುಗೆ ಇವರದು. ಮಕ್ಕಳ ಸಾಹಿತ್ಯದ ಕುರಿತು ಚಿಂತಿಸಿದವರು. ಅವರಿಗೆ ಬೇಕಾದ ಸಾಹಿತ್ಯ ಸೃಷ್ಟಿ ಮಾಡಿದರು. ಉಪನ್ಯಾಸಕರಾದ ಇವರು ನಾಟಕ, ಕಥೆಗಳನ್ನು ಹೆಚ್ಚಾಗಿ ಮಕ್ಕಳಿಗೆ ರೂಪಿಸಿದವರು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತಹ 'ಸಾಹಿತ್ಯ ಮಂಜರಿ', 'ಸಾಹಿತ್ಯ ಮಧು ಸಂಚಯ' ಕನ್ನಡ ಸಾಹಿತ್ಯ ಪ್ರವೇಶ ಎಂಬ ಪಠ್ಯ ಪುಸ್ತಕಗಳನ್ನು ರಚಿಸಿದ್ದಾರೆ. ಸಾಹಸ ಜೀವಿಗಳು, ಹೋರಾಟದ ವೀರರು, ಜಾನಪದ ಕತೆಗಳು, ಅಭ್ಯಾಸದ ಕೋಣೆ, ದೀಪಾವಳಿ ಮೊದಲಾದವು ವರದರಾಜ ಹುಯಿಲಗೋಳರವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

'ಕಾವ್ಯಾನಂದ' ಕಾವ್ಯನಾಮದಿಂದ ಪ್ರಸಿದ್ಧಿಯನ್ನು ಹೊಂದಿದ ಸಿದ್ದಯ್ಯ ಪುರಾಣಿಕರು ಮಕ್ಕಳ ಸಾಹಿತ್ಯಕ್ಕೆ ಸ್ಮರಣೀಯ ಕೊಡುಗೆ ನೀಡಿದ್ದಾರೆ. ಕರ್ನಾಟಕ ಸರಕಾರದ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತ ಮಕ್ಕಳಿಗಾಗಿ ಒಳ್ಳೆಯ ಕೃತಿಗಳನ್ನು ರಚಿಸಿದ್ದಾರೆ. ಯಾವುದೇ ಒಂದು ಪಂಥಕ್ಕೆ ಒಳಗಾಗದೆ ಮುಕ್ತವಾಗಿ ಒಳ್ಳೆಯ ಅಂಶಗಳನ್ನು, ಪ್ರಗತಿಪರವಾದ ಧೋರಣೆಗಳನ್ನು ಸ್ವೀಕರಿಸುತ್ತ ಬೆಳೆದಿರುವ ಅಂಶ ಅವರ ಕೃತಿಗಳು ವ್ಯಕ್ತಪಡಿಸುತ್ತವೆ.

"೧೯೫೦ರ ಸಮಯದಲ್ಲಿ ಡಿ. ಕೆ. ಭೀಮಸೇನರಾಯರ ಬಳಿ ಕಾವ್ಯಾನಂದರು ಹೋಗಿದ್ದರಂತೆ. ಅವರು ಸತ್ಯಾಶ್ರಯ ಪಠ್ಯಪುಸ್ತಕಮಾಲೆ ರೂಪಿಸುತ್ತಿದ್ದರಂತೆ. ಕಾವ್ಯಾನಂದರು ಬಂದು ನಿಂತಿರುವುದನ್ನು ಕಂಡ ಭೀಮಸೇನರಾಯರು, ಎರಡು ಮಕ್ಕಳ ಪದ್ಯಗಳು ಅರ್ಜೆಂಟಾಗಿ ಬೇಕು ಬರೆದು ಕೊಡು ಎಂದು ಕಾಗದ ಪೆನ್ನು ಕೊಟ್ಟರಂತೆ. ಸ್ವಲ್ಪವೂ ಎದೆಗುಂದದೆ ಕಾವ್ಯಾನಂದರು ಪದ್ಯ ಬರದೇ ಬಿಟ್ಟರಂತೆ.

ಅಜ್ಜನ ಕುದುರೆ ನನ್ನಯ ಕೋಲಿದು । ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ ॥
ಕರಡಿಯ ತಕತಕ ಕುಣಿಸುತ । ಬಂದನು; ಸಿದ್ದಿ ಬಾವಾ, ಬಾಲರ ಬಾವಾ ॥

ಎಂಬ ಪದ್ಯವನ್ನು ನೋಡಿ ಡಿ. ಕೆ. ಭೀಮಸೇನರಾಯರು ದಂಗಾದರಂತೆ. ಇವರ ಅದ್ಭುತ ಪ್ರತಿಭೆ ಕಂಡು ಬೆನ್ನ ಮೇಲೆ ಕೈಯಾಡಿಸಿ, 'ಮಕ್ಕಳ ಹಾಡುಗಳನ್ನು ಚಂದ

ಬರೀತಿ. ಹಂಗs ಮುಂದ ಬರೀ' ಎಂದು ಹುರಿದುಂಬಿಸಿದರಂತೆ"'. ಕಾವ್ಯಾನಂದರು ಮಕ್ಕಳಿಗಾಗಿ ಐದು ಕೃತಿಗಳನ್ನು ಮುಖ್ಯವಾಗಿ ರಚಿಸಿದ್ದಾರೆ. ತುಪ್ಪಾ ರೊಟ್ಟಿ ಗೇ ಗೇ ಗೇ.. (೧೯೬೪), ಗಿಲ್ ಗಿಲ್ ಗಿಲ್ ಗಿಟ್ಟು (೧೯೭೭), ತಿರುಗೆಲೆ ತಿರುಗುಯ್ಯಾತೆ (೧೯೮೧), ಬಣ್ಣ ಬಣ್ಣದ ಓಕುಳಿ (೧೯೮೭), ಭಾರತವೆಲ್ಲಕೆ ಬಾವುಟವೊಂದೆ (೧೯೮೯) ಇವು ಪ್ರಧಾನ ಕೃತಿಗಳಾಗಿವೆ.

ಆಧುನಿಕ ವಚನಕಾರರೆಂದು ಪ್ರಸಿದ್ಧಿಯನ್ನು ಹೊಂದಿದವರು ಸಂಗಮೇಶ ಹೊಸಮನಿ. 'ಶಿವಕವಿ' ಎಂಬ ಕಾವ್ಯನಾಮದಿಂದ ಗುರುತಿಸಿಕೊಂಡವರು. ಮಕ್ಕಳ ಸಾಹಿತ್ಯದ ಕವಿತೆ, ಕಥೆ, ಪ್ರಬಂಧಗಳ ಪ್ರಕಾರಗಳಲ್ಲಿ ಹೆಚ್ಚಿನ ಕೃಷಿ ಮಾಡಿದವರು. ಶಿಕ್ಷಕ ವೃತ್ತಿಯವರಾದುದರಿಂದ ಮಕ್ಕಳ ಮೇಲೆ ಸಹಜವಾದ ಪ್ರೀತಿ ಇವರಿಗೆ. 'ಶಾಂತಿ ಸಾಹಿತ್ಯ ಮಾಲೆ'ಯ ಪ್ರಧಾನ ಸಂಪಾದಕರಾಗಿ ಕಾರ್ಯನಿರ್ವಹಿಸಿ ಅನೇಕ ಮಕ್ಕಳ ಪದ್ಯಗಳನ್ನು, ಕತೆಗಳನ್ನು ಪ್ರಕಟಿಸಿದ್ದಾರೆ. ಸಕ್ಕರೆ ಗುಬ್ಬಿ, ಹೃದಯ ವೀಣೆ, ಬೊಲಬಗರಿ, ಶಾಂತಿಧೂತ ಶಾಸ್ತ್ರೀಜಿ, ಗಾಂಧೀ ಗೀತೆ ಮೊದಲಾದವು ಸಂಗಮೇಶ ಹೊಸಮನಿಯವರ ಮಕ್ಕಳ ಕೃತಿಗಳಾಗಿವೆ. ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಕನ್ನಡ ನಾಡಿನ ಹಿರಿಯರು ಮತ್ತು ಮಕ್ಕಳ ಸಾಹಿತ್ಯಕ್ಕೆ ಹೊಸ ತಿರುವನ್ನು ನೀಡಿದ ಗುರುಪಾದಸ್ವಾಮಿ ಹಿರೇಮಠರವರ ಕೊಡುಗೆ ಅಪಾರವಾದುದು. ಮಕ್ಕಳಿಗಾಗಿ ಹಲವಾರು ಪದ್ಯಗಳನ್ನು ರಚಿಸಿ ಅವರ ವ್ಯಕ್ತಿತ್ವ ರೂಪಿಸುವ, ಮಾನವೀಯ ಮೌಲ್ಯಗಳನ್ನು ಬೆಳೆಸುವ ಕಾರ್ಯ ಮೆಚ್ಚತಕ್ಕದ್ದು. ನನ್ನ ಪುಸ್ತಕ, ಹೂದೋಟ, ಹಾಲಿನ ಗಿಂಡಿ, ಹವಳ ಮುತ್ತು, ನನ್ನ ಮನೆ, ಕಿತ್ತೂರು ಕನ್ನಡಿ, ಗೋಲಿಗುಂಡು, ಚಿಣ್ಣರ ಚುಟುಕು ಮೊದಲಾದವು ಗುರುಪಾದಸ್ವಾಮಿ ಹಿರೇಮಠರ ಪ್ರಮುಖ ಕೃತಿಗಳಾಗಿವೆ. ಇವರ ಕೃತಿಗಳಿಗೆ ರಾಷ್ಟ್ರಪ್ರಶಸ್ತಿಗಳು ಲಭಿಸಿವೆ.

ಉತ್ತರ ಕರ್ನಾಟಕದಲ್ಲಿ ಮಕ್ಕಳ ಸಾಹಿತ್ಯ ಗಟ್ಟಿಯಾಗಿ ನೆಲೆಯೂರಲು ಶಂ. ಗು. ಬಿರಾದಾರ ಅವರು ಕಾರಣೀಭೂತರು ಎಂದರೆ ತಪ್ಪಾಗದು. ವೃತ್ತಿಯಿಂದ ಶಿಕ್ಷಕರು ಹಾಗೂ ರಾಷ್ಟ್ರಪ್ರಶಸ್ತಿ ಪಡೆದ ಆದರ್ಶಕ ಶಿಕ್ಷಕರು. ಇವರ ಕೃತಿಗಳು ಸಹ ರಾಜ್ಯ-ರಾಷ್ಟ್ರಮಟ್ಟದ ಪ್ರಶಸ್ತಿಗಳಿಸಿಕೊಳ್ಳಲು ಸಫಲವಾಗಿವೆ. ನನ್ನ ಹಾಡು, ಕಾರಾಜಿ, ಮಂಗ್ಯಾ ಮಂಗ್ಯಾ ಕಿಸ್‌ಕಿಸ್, ರೂಪಗುಣ ಮೊದಲಾದವು ಶಂ. ಗು. ಬಿರಾದಾರ ಅವರ ಪ್ರಮುಖ ಕೃತಿಗಳಾಗಿವೆ.

ಪರಶುರಾಮ ಚಿತ್ರಗಾರರವರು ಉತ್ತಮ ಶಿಕ್ಷಕರು, ಸೃಜನಶೀಲರು, ಮಕ್ಕಳ ಭವಿಷ್ಯದ ಬಗ್ಗೆ ಚಿಂತಿಸಿದವರು. 'ಓ ತಾಯಿ ನಿನಗಾರು ಸರಿಯಿಲ್ಲ ಜಗದಿ, ನಿನ್ನ

ಸ್ತುತಿಸುತ ಕಾಲ ನೂಕುವೆನು ಇಹದಿ' ಎನ್ನುವ ಸಾಲುಗಳು 'ತಾಯಿ' ಕವಿತೆಯಲ್ಲಿ ಮಧುರತೆಯನ್ನು ನೀಡಿದೆ. ಇವರ ಅನೇಕ ಕೃತಿಗಳು ಸಾಹಿತ್ಯ ಬಹುಮಾನಗಳನ್ನು ಗಿಟ್ಟಿಸಿಕೊಂಡಿವೆ. ಪತಂಗ, ನಾವು ಭಾರತೀಯರು, ನಾವೆಲ್ಲ ಹಕ್ಕಿಗಳು, ಬಂಬೈ ಮಿಠಾಯಿ, ಕತೆಯ ಹಾಡು, ಚೇತನ, ಗುಡುಗುಡು ಮುತ್ಯಾ, ಹಾಡು ಮಗು ಹಾಡು, ಚಲುವ ಕನ್ನಡ ನಾಡು, ನಗುವ ಹೂಗಳು ಮುಂತಾದವು ಪರಶುರಾಮ ಚಿತ್ರಗಾರರ ಮಕ್ಕಳ ಸಾಹಿತ್ಯದ ಮಹತ್ವದ ಕೃತಿಗಳಾಗಿವೆ.

ಸಿಸು ಸಂಗಮೇಶರವರು ಮಕ್ಕಳ ಸಾಹಿತ್ಯಕ್ಕಾಗಿ ತಮ್ಮ ಜೀವನವನ್ನು ಸವೆಸಿದವರು. ಸಾಹಿತ್ಯವೆನ್ನುವುದು ಒಂದು ವ್ರತದಂತೆ ಭಾವಿಸಿದರು. ಸಿಸು ಸಂಗಮೇಶರು ಮಕ್ಕಳ ಸಾಹಿತ್ಯದ ವಾತಾವರಣ ಮೂಡಿಸಿದರು. ಅದರಲ್ಲಿ ಶ್ರದ್ಧೆಯಿಂದ ದುಡಿದರು. ಪ್ರೌಢ ಸಾಹಿತಿಗಳು ಮಕ್ಕಳ ಸಾಹಿತ್ಯದ ಕಡೆ ಗಮನಿಸದೇ ಹೋದರೂ ಅದನ್ನು ಲಕ್ಷಿಸದೆ ತಾವು ನಡೆದದ್ದೇ ಮಾರ್ಗ ಎನ್ನುವ ಕನಸು ಕಂಡು ಸಾಕಾರಗೊಳಿಸಿದವರು. ಸಿಸು ಸಂಗಮೇಶ ಅವರು ಮಕ್ಕಳ ಸಾಹಿತ್ಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಿದರು ಮತ್ತು ಯಶಸ್ಸು ಕಂಡರು. ಪ್ರಾಣಿಗಳ, ಪಕ್ಷಿಗಳ ಪಾತ್ರಗಳನ್ನು ನಿರ್ಮಿಸಿ ಹೊಸ-ಹೊಸ ಪ್ರಯೋಗದೊಂದಿಗೆ ಪದ್ಯಗಳನ್ನು ರಚಿಸಿದ್ದಾರೆ. 'ಬಾಲಭಾರತಿ' ಎನ್ನುವ ಮಕ್ಕಳಿಗಾಗಿರುವ ಪತ್ರಿಕೆಯನ್ನು ಪ್ರಕಟಿಸಿ ಹಲವಾರು ಕವಿಗಳ ಕತೆ, ಕವನಗಳನ್ನು ಪ್ರಕಟಿಸಿದರು. ಶಂ. ಗು. ಬಿರಾದಾರ ಅವರು ಹೇಳುವಂತೆ, 'ಸಿಸು ಸಂಗಮೇಶ ಅವರು 'ಭಾರತಿ ಸಾಹಿತ್ಯ ಭಂಡಾರ' ಎಂಬ ಮಕ್ಕಳ ಸಾಹಿತ್ಯ ಪ್ರಕಾಶನ ಸಂಸ್ಥೆಯೊಂದನ್ನು ಕಟ್ಟಿ ನನ್ನ ಹಾಗೂ ಕೆಲ ಶಿಕ್ಷಕ ಸಾಹಿತಿಗಳ ಸಹಾಯ ಸಹಕಾರಗಳಿಂದ ಮಕ್ಕಳ ಪುಸ್ತಕಗಳನ್ನು ಹೊರತರಲು ಅಣಿಯಾದರು. ಅದರ ಫಲವಾಗಿ ೧೯೫೪ರಲ್ಲಿ 'ಆಣಿಕಲ್ಲು' ಭಾಗ-೧, ಭಾಗ-೨, 'ಪುಟಚೆಂಡು' ಭಾಗ-೧, ಭಾಗ-೨, ಹೀಗೆ ಮಕ್ಕಳ ಕಥೆ ಕವನಗಳ ಸಂಕಲನಗಳು ಪ್ರಕಟವಾದವು. ಇವುಗಳಲ್ಲಿ ನಾಡಿನ ಹೆಸರಾಂತ ಸಾಹಿತಿಗಳ ಕಥೆ-ಕವನಗಳು ಪ್ರಕಟವಾದವು. ಜೊತೆಗೆ ಹೊಸ ಬರಹಗಾರರ ಕೃತಿಗಳೂ ಬೆಳಕು ಕಂಡವು. ನಂತರ ನಾಡಿನ ಶಿಕ್ಷಕ ಸಾಹಿತಿಗಳ ಕವನಗಳನ್ನು ಸಂಗ್ರಹಿಸಿ 'ನಾವು-ನಮ್ಮವರು' ಎಂಬ ಪುಸ್ತಕವನ್ನು ಹೊರತಂದರು. ಇವುಗಳಿಂದ ನಮ್ಮ ಜಿಲ್ಲೆಯ ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು' ಎನ್ನುವ ಮಾತುಗಳು ಸಿಸು ಅವರ ತುಡಿತ ಇನ್ನುಳಿದವರ ಮೇಲೆ ಹೇಗೆ ಪ್ರಭಾವಿಸಿತು ಎಂಬುದು ಕಂಡುಬರುತ್ತದೆ.

ಸಿಸು ಸಂಗಮೇಶರ ಬಹುಪಾಲು ಕೃತಿಗಳು ಸೃಜನಶೀಲ ಸಾಹಿತ್ಯ ಕೃತಿಗಳಾಗಿವೆ. ನಾವು ನಾಳೆಯ ರವಿಗಳು, ಚುಟುಕು-ಗುಟುಕು, ಸವಿಸಾಹಿತ್ಯ, ಕಾಡಿನ ಕಲಿಗಳು, ಚಕ್ಕಾ ಚೌಕಳಿ, ಶಾಲೆಗಿಂತ ಚೀಲ ಭಾರ, ನನ್ನ ಕವಿತಾ ಪುಸ್ತಕ, ಅಂಗಿಯಲ್ಲಿ ತಂಗಿ, ಬಿದ್ದ ಚಂದಿರನ ಒದ್ದು ಓಡಿಸಿದ, ನರಿಯ ಫಜೀತಿ, ಯಾರು ಜಾಣರು, ಮಂಕುಮರಿ, ಆಶೆ ಬುರುಕಿ ಆಶಾ, ಮಕ್ಕಳ ಆಯ್ದ ಕಥೆಗಳು, ಮೊದಲ ಮೂಗು ಮೊಂಡಾಯಿತು ಮೊದಲಾದವು ಇವರ ಮಹತ್ವದ ಕೃತಿಗಳಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಮಿತ್ತಬೈಲಿನ ಪಳಕಳ ಸೀತಾರಾಮಭಟ್ಟರು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದ ಅಪ್ರತಿಮ ಪ್ರತಿಭೆ. ಪಳಕಳ ಸೀತಾರಾಮಭಟ್ಟರು ಮಕ್ಕಳಿಗಾಗಿ ಕವನ, ಕಥನ ಕವನ, ಕಥೆ, ನಾಟಕ, ಜೋಗುಳ ಹಾಡು, ದೇಶಭಕ್ತಿಗೀತೆ, ಮಹಾಪುರುಷರ ಕುರಿತು ಹಾಡುಗಳು ಮೊದಲಾದವು ಇವರ ಸಾಹಿತ್ಯ ಪ್ರಕಾರಗಳ ರಚನೆಗಳಾಗಿವೆ. ಮಕ್ಕಳಿಗೆ ಮೋಜೆನಿಸುವ, ವಿಷಯ ತಿಳಿಸುವ, ಆಟ ಆಡಿಸುವ, ದೇಶಪ್ರೇಮ ಕಲಿಸುವ ಪಳಕಳರು ಹಾಡಿನ ಲಯ ಮತ್ತು ಧ್ವನಿಯನ್ನು ಸೇರಿಸಿ ಮಕ್ಕಳಿಗೆ ಇಷ್ಟವಾಗುವಂತೆ ಕಟ್ಟಿಕೊಡುತ್ತಾರೆ. ಇವರ ಬರವಣಿಗೆಯಲ್ಲಿ ಸುಮಾರು ಒಂದುನೂರಾ ಇಪ್ಪತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ನಿಷ್ಠೆಯಿಂದ ದುಡಿದವರು. ಎಳೆಯರ ಗೆಳೆಯ, ಕಂದನ ಕೊಳಲು, ತಮ್ಮನ ತಂಬೂರಿ, ಬಾಲರಬಾವುಟ, ಮಕ್ಕಳ ಮುದ್ದು, ಪುಟ್ಟನ ಪೀಪಿ, ಗಾಳಿಪಟ, ಕಿರಿಯರ ಕಿನ್ನರಿ, ತಿಮ್ಮನತುತ್ತೂರಿ, ಗಡಿಬಿಡಿ ಗುಂಡ, ಮಿಠಾಯಿ ಬೊಂಬೆ, ಚಿಕ್ಕಣಿ ಚೋಮ, ಬೆಕ್ಕಿನಮರಿ, ಆಟದ ಹುಡುಗಿಯರು, ಕಟಂ ಕಟಂ ಕಪ್ಪೆಯಣ್ಣ, ಏಕಲವ್ಯ, ಧ್ರುವ, ನಚಿಕೇತ, ಕಿಟ್ಟಾಯಣ ಮೊದಲಾದ ಪಳಕಳರ ಮಕ್ಕಳ ಸಾಹಿತ್ಯ ಕೃತಿಗಳು ಕೊಡುಗೆಯಾಗಿವೆ.

ರಸಿಕ ಪುತ್ತಿಗೆಯವರು ಶಿಕ್ಷಕರಾಗಿದ್ದುಕೊಂಡು ಸೃಜನಶೀಲ ಸಾಹಿತ್ಯವನ್ನು ಬೆಳೆಸಿದವರು. 'ರಸಿಕ ಪುತ್ತಿಗೆ' ಕಾವ್ಯನಾಮದಿಂದ ಮಕ್ಕಳ ಸಾಹಿತ್ಯದಲ್ಲಿ ಪರಿಚಿತರಾದವರು ಸುಬ್ರಹ್ಮಣ್ಯ ಆಚಾರ್ಯರು. ಮಕ್ಕಳಿಗಾಗಿ ಹಲವು ಕತೆಗಳನ್ನು, ಕಾದಂಬರಿಗಳನ್ನು, ಕವಿತೆಗಳನ್ನು ಬರೆದರು. ಇವರು ತಮ್ಮ ಸುತ್ತಲಿನ ಪರಿಸರದಲ್ಲಿ ಕಂಡುಬರುವ ವಸ್ತುಗಳನ್ನು ಆಯ್ದುಕೊಂಡು ಕತೆಗಳನ್ನು ಕಟ್ಟಿದವರು. ಬರವಣಿಗೆಯಲ್ಲಿ ಲವಲವಿಕೆಯು ಗಟ್ಟಿಯಾಗಿ ನೆಲೆನಿಂತಿದೆ. ಮಕ್ಕಳಿಗಾಗಿ ಕತೆ, ಕವಿತೆ, ಕಾದಂಬರಿ, ನಾಟಕ, ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ರಸಿಕ ಪುತ್ತಿಗೆಯವರು ಬಹುಭಾಷಾ ತಜ್ಞರಾಗಿದ್ದರು. ರಾಷ್ಟ್ರೀಯ ಪ್ರಶಸ್ತಿಗಳನ್ನು ಗಳಿಸಿಕೊಂಡವರು. ಕೆಂಪುಕಾರು, ಮೂವರು ಮಾಣಿಗಳು, ಸತಿ ಅನುಸೂಯ, ವೀರಜಠಾಯು, ಅಗ್ನಿ ಪರೀಕ್ಷೆ, ತಿಲೋತ್ತಮೆ, ಸುಂದೋಪಸುಂದ, ಕೊಂಬಿನ ಕಂಬಯ್ಯ, ಇಲಿಗೆ ಅಂಜಿದ ಹುಲಿ, ನೀತಿಕತೆಗಳು, ತುಂಟಾಟದ ಕತೆಗಳು, ತಪೋವನದ ಸಾಹಸಿಗಳು, ಅಮ್ಮನ ಸೈಕಲ್ ಸವಾರಿ, ಸೂರದಾಸ, ತುಳಸೀದಾಸ, ಕೋಟಿಚನ್ನಯ್ಯ ಇವು ರಸಿಕ ಪುತ್ತಿಗೆಯವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಈಶ್ವರ ಕಮ್ಮಾರರವರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತ ಉನ್ನತ ಹುದ್ದೆಗೇರಿದವರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಂಗದ ಅಧಿಕಾರಿಗಳಾಗಿ ನಿವೃತ್ತಿ ಹೊಂದಿದವರು ಈಶ್ವರ ಕಮ್ಮಾರರು. ಮಕ್ಕಳಿಗಾಗಿ ಕವಿತೆ, ಕಥೆಗಳನ್ನು ಬರೆದರು. ಧಾರವಾಡದಲ್ಲಿ 'ಮಕ್ಕಳ ಮನೆ' ಎನ್ನುವ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು. ಈಶ್ವರ ಕಮ್ಮಾರರು ಅನೇಕ ಮಕ್ಕಳ

ಕಾರ್ಯಾಗಾರವನ್ನು, ಸಮ್ಮೇಳನಗಳನ್ನು ನಡೆಸಿ ಯಶಸ್ವಿಯಾದರು. 'ಮಕ್ಕಳ ಲೋಕ' ಕೃತಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರ, ರಾಷ್ಟ್ರೀಯ ಪುರಸ್ಕಾರ ಗಳಿಸಿಕೊಂಡಿದೆ. ಇವರ ಪ್ರತಿಯೊಂದು ರಚನೆಯಲ್ಲಿ ಕಂಡು ಬರುವ ಗುಣವೆಂದರೆ ಆಡುಭಾಷೆಯ ಗ್ರಾಮೀಣ ಪರಿಸರದ ದಟ್ಟ ಛಾಯೆ. ಇದಕ್ಕೆ ಧಾರವಾಡದ ಸಾಹಿತ್ಯ ಬಳಗದ ಬೇಂದ್ರೆಯವರ ಪ್ರಭಾವವು ಕಾರಣವಿರಬಹುದು. ಮಗುವಿನ ಪ್ರೀತಿಯನ್ನು ಮನಮುಟ್ಟುವ ರೀತಿಯಲ್ಲಿ ಅಭಿವ್ಯಕ್ತಿಸುವ ಕ್ರಿಯೆ ಕಮ್ಮಾರರದು. ಈ ಹಿನ್ನೆಲೆಯಲ್ಲಿ ಅವರ ಅಭಿಲಾಷೆ, ಆಕಾಂಕ್ಷೆ, ಅನುಭವಗಳು ಕೆಲಸ ಮಾಡಿವೆ ಎಂದು ತೋರುತ್ತದೆ. ಈಶ್ವರ ಕಮ್ಮಾರರ ನಿರೂಪಣಾ ಶೈಲಿ ನವೀನ ಮಾದರಿಯಾಗಿ ಹೊಂದಿರುವುದನ್ನು ಗಮನಿಸಬಹುದು. 'ಮಕ್ಕಳಿಗೆ ಏನಾದರೂ ಹೇಳಬೇಕಾದಲ್ಲಿ ನೇರವಾಗಿ ಸ್ಪಷ್ಟವಾಗಿ ಯಾವ ಗೊಂದಲವಿಲ್ಲದೆ, ಸುತ್ತ ಸುಳಿದಾಡದೆ ಅವರ ಮನಸ್ಸಿಗೆ ಮುಟ್ಟುವಂತೆ ತಟ್ಟುವಂತೆ ವಿವರಿಸಿದರೆ ಅದು ಅವರ ಮನದಲ್ಲಿ ಉಳಿದು ಬಿಡುತ್ತದೆ'[೧೧] ಎನ್ನುವ ಮಾತುಗಳು ಕಮ್ಮಾರರಿಗೂ ಅನ್ವಯವಾಗುತ್ತವೆ ಎಂದು ಹೇಳಬಹುದು. ಮಕ್ಕಳ ಲೋಕ, ಪಾಪಾ, ಎಡತಾಕಪಟ್ಟಿ, ಸ್ವರ್ಗದಾ ಒಂದು ತುಣುಕು, ಕೊಟ್ಟಿಗೆಯೊಳಗಿನ ಕೋಣಪ್ಪ, ಶಿಲಾರಂಗ, ಭಾಗೀರಥಿ, ದಾರಿದೀಪ, ಮಂಗಳಗೌರಿ, ಚೂಡಾರತ್ನ ಮುಂತಾದ ಕೃತಿಗಳನ್ನು ಈಶ್ವರ ಕಮ್ಮಾರರು ಮಕ್ಕಳ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ.

ಎ. ಕೆ. ರಾಮೇಶ್ವರರವರು ಮೂಲತಃ ವಿಜಯಪುರ ಜಿಲ್ಲೆಯವರು. ನಂತರ ಕಲಬುರ್ಗಿಯಲ್ಲಿ ನೆಲೆಸಿದರು. ಉತ್ತರ ಕರ್ನಾಟಕದ ಮಕ್ಕಳ ಸಾಹಿತ್ಯ ನಿರ್ಮಾತೃರಲ್ಲಿ ಪ್ರಮುಖರು. ಸಂಘಟನಾ ಚತುರರು. ಅನೇಕ ಕಾರ್ಯಾಗಾರ, ಸಮ್ಮೇಳನಗಳನ್ನು ನಡೆಸಿದವರು. ಎ. ಕೆ. ರಾಮೇಶ್ವರರು ಗ್ರಾಮೀಣ ಬದುಕನ್ನು ಮೆಚ್ಚಿಕೊಂಡವರು, ಹಾಗೆಯೇ ತಮ್ಮ ಹಂಬಲ ಗ್ರಾಮಭಾರತವೆಂದು ವ್ಯಕ್ತಪಡಿಸಿದವರು. 'ದಿಲ್ಲಿಯ ದೃಷ್ಟಿಯ ಹಳ್ಳಿಗೆ ಸೆಳೆಯಲು ಕೈಗಾರಿಕೆಯನ್ನು ಬೆಳೆಸೋಣ, ದಿನ-ದಿನ ಹೊಸ-ಹೊಸ ಒಡವೆಯ ಮಾಡುತ ಆರ್ಥಿಕ ಬಲವನು ಪಡೆಯೋಣ' ಎಂಬ ಅಭಿಪ್ರಾಯವುಳ್ಳವರು ರಾಮೇಶ್ವರರು. ದೊಡ್ಡವರ ಅಭಿಪ್ರಾಯ, ಆಶಯಗಳನ್ನು ಮಕ್ಕಳ ಕವಿತೆಗಳಲ್ಲಿ ವ್ಯಕ್ತಗೊಳಿಸುವ ಪ್ರಯತ್ನ ಇವರದು. ನಂದಿಕೋಲು, ಒಂದೇ ಮನದವರು, ವಸಂತ ಬಂದ, ಹರೆ ಹಾರುತಿದೆ, ಬನ್ನಿರಿ ಮನುಕುಲ ಚಂದಿರರೆ, ಹುಲಿಹಾಲಿನ ಗಿಣ್ಣ, ಸಂತ ತುಕಾರಾಮ, ನಮಗಾಗಿ ದುಡಿದವರು, ಹಬ್ಬಗಳು ಮುಂತಾದ ಕೃತಿಗಳು ಮಕ್ಕಳ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ.

ಬಿ. ಎಸ್. ರುಕ್ಕಮ್ಮರವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದವರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ರಾಷ್ಟ್ರೀಯ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪಾಪು ಅಮ್ಮನಿಗೆ ಹೇಳಿದ ಕತೆಗಳು, ಫೇಬರರ ಕೀಟಲೋಕ, ನಂದಗೋಪಿ ಮತ್ತು ಕೃಷ್ಣ, ಕಚ, ಹರಿಹರ, ವ್ಯಾಪಾರಿ

ಮಂಗಣ್ಣ, ಶಾಲೆಯ ಮಕ್ಕಳು ಮೊದಲಾದವು ಬಿ. ಎಸ್. ರುಕ್ಕಮ್ಮನವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಕನ್ನಡ ಪ್ರೌಢ ಸಾಹಿತ್ಯದಲ್ಲಿ ಗುರುತಿಸಿಕೊಂಡಿರುವ ಅನುಪಮಾ ನಿರಂಜನರು ಪ್ರಸಿದ್ಧ ಕಾದಂಬರಿಕಾರರು ಮತ್ತು ಖ್ಯಾತ ವೈದ್ಯರು. ಜಗತ್ತಿನ ಪ್ರಾಚೀನ ವಿಷಯಗಳನ್ನು ಆಧರಿಸಿದ ೩೬೫ ಕತೆಗಳನ್ನು ಬರೆದು 'ದಿನಕ್ಕೊಂದು ಕತೆ' ಎಂಬ ಹೆಸರಿನಿಂದ ಅವನ್ನು ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದರು. ಇದು ಹಲವು ಮುದ್ರಣಗೊಂಡು ಪ್ರಸಿದ್ಧಿಯನ್ನು ಗಳಿಸಿದ ಮಕ್ಕಳ ಕೃತಿ, ಆರೋಗ್ಯದರ್ಶನ, ಕಲ್ಲೋಲ, ಕೇಳು ಕಿಶೋರಿ, ತಾಯಿಮಗು, ಏಳುಸುತ್ತಿನ ಮಲ್ಲಿಗೆ, ಶಿಶು ವೈದ್ಯ ದೀಪಿಕೆ, ಆಹಾರದಿಂದ ಆರೋಗ್ಯ ಮೊದಲಾದವು ಅನುಪಮಾ ನಿರಂಜನರ ಪ್ರಮುಖ ಕೃತಿಗಳಾಗಿವೆ.

ಮನೋಹರ ಬಾಲಚಂದ್ರ ಘಾಣೇಕರರವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ವೈವಿಧ್ಯತೆಯ ಕೊಡುಗೆ ಅನನ್ಯ. ಘಾಣೇಕರ ಅವರು ಪ್ರಪಂಚದ ಅನೇಕ ಮಕ್ಕಳ ಕಥೆಗಳನ್ನು ಆಯ್ದು ಕನ್ನಡ ಮಕ್ಕಳಿಗೆ ಪ್ರಕಟಿಸಿದ್ದಾರೆ. ಇವುಗಳಲ್ಲಿ ಹೆಚ್ಚಿನ ಕತೆಗಳು ನೀತಿ ಪ್ರಧಾನ. ಆದರ್ಶ ವ್ಯಕ್ತಿಗಳ, ಪ್ರಾಣಿಗಳ ಗುಣಗಳನ್ನು ಕತೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಜನಪದ ಮಾದರಿಯ ಗ್ರಾಮೀಣ ಸೊಗಡಿನ ಕತೆಗಳು ಘಾಣೇಕರವರು ಮಕ್ಕಳಿಗೆ ಕಟ್ಟಿಕೊಟ್ಟಿದ್ದಾರೆ. ಶ್ರೀ ಬಸವಣ, ಗೌತಮ ಬೋಧಿಸತ್ವದ ಕತೆಗಳು, ಬುದ್ಧ ಜಾತಕ ಕತೆಗಳು, ಮಾತಾಡುವ ಕುದುರೆ, ಠಕ್ಕರ ಗುರು, ಕೊಪ್ಪರಿಗೆ ತುಂಬ ಕತೆಗಳು, ಮಕ್ಕಳ ನಿತ್ಯಪಾಠ, ಅಮೇರಿಕ ಜನಪದ ಕಥೆಗಳು, ಅಜ್ಜಾ ನನಗೊಂದು ಕಥೆ ಹೇಳು ಅಮ್ಮಾ ನನಗೊಂದು ಕಥೆ ಹೇಳು, ಗರುಡನ ಕಥೆ, ಬಂಗಾರದ ಹೆಜ್ಜೆ ಮುಂತಾದವು ಮನೋಹರ ಘಾಣೇಕರರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಶಿಕ್ಷಕರಾದ ಬಿ. ಎ. ಸನದಿರವರು ಮಕ್ಕಳಿಗಾಗಿ ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಇದರಿಂದಾಗಿ ಅವರಲ್ಲಿ ಗ್ರಾಮೀಣ ಪರಿಸರ ಪ್ರಭಾವ ಹೆಚ್ಚಾಗಿರುವುದು ಕಂಡುಬರುತ್ತದೆ. ಇವರ ಕವಿತೆಗಳು ನಾದ ಮತ್ತು ಗೇಯತೆಗಳಿಂದ ಕೂಡಿವೆ. ಶಿಕ್ಷಕ ವೃತ್ತಿಯವರಾಗಿರುವುದರಿಂದ ಕವಿತೆಗಳನ್ನು ಮಕ್ಕಳಿಂದ ಹಾಡಿಸುವುದು, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಕ್ಕಳನ್ನು ರಂಜಿಸಲು, ಅಭಿನಯಿಸಿ ಹಾಡಿ ಕುಣಿಯಲು ಅವರ ರಚನೆಗೆ ಪ್ರೇರಣೆಯಾಗಿರಬೇಕು. ಸನದಿಯವರು ಗ್ರಾಮೀಣ ಪರಿಸರದ ಆಟಗಳ ಕುರಿತಾದ ಹಾಡುಗಳ ರಚನೆಯಲ್ಲಿ ಸಿದ್ಧಹಸ್ತರು. ಹೂ ಗೊಂಚಲು, ಗೃಹಪಂಚಮಿ, ಜಿಲೇಬಿ ಝುಣ್, ಝುಣ್, ಹೂವಿನ ಹುಡುಗಿ ಎಂಬ ಮಕ್ಕಳ ಕೃತಿಗಳನ್ನು ಸನದಿಯವರು ರಚಿಸಿದ್ದಾರೆ.

ಮೂರನೆಯ ತಲೆಮಾರಿನ ಮಕ್ಕಳ ಸಾಹಿತ್ಯ : (೧೯೭೦ ರಿಂದ)

೧೯೭೦ ರಿಂದ ಶಿಕ್ಷಣದಲ್ಲಿಯ ಬದಲಾವಣೆಗಳಿಂದ ಮಕ್ಕಳ ಮೇಲಾದ ಪ್ರಭಾವವನ್ನು ಗಮನಿಸಿ ಅವುಗಳಿಗೆ ಪೂರಕವಾದ ಮಕ್ಕಳ ಕೃತಿಗಳನ್ನು ವಿವಿಧ ದೃಷ್ಟಿಕೋನಗಳಿಂದ ರಚಿಸಲು ಪ್ರಾರಂಭವಾಯಿತು. ಇದು ಗಣನೀಯವಾಗಿ ಹೆಚ್ಚುತ್ತ ಸಾಗಿತು. ಈ ಸಮಯದಲ್ಲಿ ಅನೇಕ ಪ್ರಕಾಶನ ಸಂಸ್ಥೆಗಳು ಮಕ್ಕಳ ಬರಹಗಾರರಿಗೆ ಸಹಾಯವನ್ನು ಮಾಡಿ ಅವರ ಕೃತಿಗಳನ್ನು ಪ್ರಕಟಿಸುವ ಜವಾಬ್ದಾರಿ ಹೊತ್ತುಕೊಂಡವು. ೧೯೭೯ರಲ್ಲಿ ಆಚರಿಸಲಾದ 'ಅಂತಾರಾಷ್ಟ್ರೀಯ ಮಕ್ಕಳ ವರುಷ' ಆ ಮಕ್ಕಳ ಸಾಹಿತ್ಯ ಪ್ರಕಟಿಸುವ ಹೊಣೆ ಹೊತ್ತುಕೊಂಡಿತು. ಇದರಿಂದಾಗಿ ಮಕ್ಕಳ ಬರಹಗಾರರಿಗೆ, ಸಾಹಿತಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆತು, ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಿಡುಗಡೆಯಾದವು.

ಮಕ್ಕಳು ಸರ್ವಾಂಗೀಣ ಬದುಕನ್ನು ರೂಪಿಸಿಕೊಳ್ಳಲು ಮಕ್ಕಳ ಸಾಹಿತ್ಯ ಮಹತ್ವದ ಪಾತ್ರವಹಿಸುತ್ತದೆ. ಮಕ್ಕಳು ಕವಿತೆಗಳನ್ನು ಹಾಡಿ, ಕಥೆಗಳನ್ನು ಓದಿ ಆನಂದಪಡುತ್ತಾರೆ. ಹೀಗೆ ಮಕ್ಕಳು ಆನಂದಪಡುವ ಕೃತಿಗಳನ್ನು ಮಕ್ಕಳಿಗೆ ಕೊಡುವುದು ಅವಶ್ಯಕವಾಗಿದೆ. ಮಕ್ಕಳಿಗಾಗಿ ರಚಿಸುವ ಕೃತಿಗಳು ಮಕ್ಕಳ ಭೌತಿಕ ಮತ್ತು ಮಾನಸಿಕ ವಿಕಾಸಕ್ಕೆ ತಕ್ಕಂತೆ ರಚಿಸುವುದು ಅಗತ್ಯ. ಈ ಸಮಯದ ಹೆಚ್ಚು ಬರಹಗಾರರು ಶಿಕ್ಷಕ ಸಮುದಾಯದವರಾಗಿದ್ದಾರೆ ಎಂಬುದು ಸತ್ಯ. ಈ ಪರಂಪರೆಯನ್ನು ಹೀಗೆ ಗಮನಿಸಬಹುದು.

ಶಿಕ್ಷಕರಾದ ಕಂಚ್ಯಾಣಿ ಶರಣಪ್ಪನವರು ಮಕ್ಕಳೊಂದಿಗೆ ಬೆರೆತು ಅವರ ಮನಸ್ಸನ್ನು ಅರಿತುಕೊಂಡವರು. ತಮ್ಮ ಅನುಭವದ ಹಿನ್ನೆಲೆಯಲ್ಲಿ ಪ್ರಾಸದೊಂದಿಗೆ ಲಯಗಾರಿಯಲ್ಲಿ ಮಕ್ಕಳಿಗೆ ಕವಿತೆ, ಕಥೆಗಳನ್ನು ಕಟ್ಟಿಕೊಟ್ಟವರು. ಹೀಗಾಗಿ 'ಮಕ್ಕಳ ಅಜ್ಜ'ನೆಂದು ಪ್ರಸಿದ್ಧಿ ಹೊಂದಿದವರು. ನಿವೃತ್ತಿಯ ನಂತರ ಸಾಹಿತ್ಯ ಕೃಷಿಗೆ ತೊಡಗಿಸಿಕೊಂಡಿರುವುದು ಕಂಚ್ಯಾಣಿಯವರ ವಿಶಿಷ್ಟ ಲಕ್ಷಣ ಎನ್ನಬಹುದು. ಮಕ್ಕಳಿಗೆ ಬದುಕಿನ ನೀತಿಯನ್ನು ತಿಳಿಸುವ, ಗ್ರಾಮೀಣ ಪರಿಸರದ ಜನಜೀವನ, ಭಾಷೆ ಇವರ ಕವಿತೆ, ಕತೆಗಳಲ್ಲಿ ತೆರೆದುಕೊಂಡಿವೆ. ಅಜ್ಜನ ಹಾಡು, ಜಾಗ್ರತ ಭಾರತ, ಮಕ್ಕಳ ಮನೆ, ಹುಟ್ಟು ಹಬ್ಬ, ಚೆಲುವಿನ ಚಿಟ್ಟೆ, ತೊಟ್ಟಿಲು ಗುಬ್ಬಿ, ಬೆದರು ಬೆಚ್ಚ, ಗುಡು ಗುಡು ಗುಂಡ, ತಿಪ್ಪನ ಕತೆಗಳು, ಗಿಲ್‌ಗಿಲ್ ಗಿಡ್ಡ ಮೊದಲಾದವು ಕಂಚ್ಯಾಣಿಯವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಪಾ. ಭೀ. ಪಾಟೀಲರವರು ನಿಷ್ಠಾವಂತ ಶಿಕ್ಷಕರಾಗಿ ಮಹಾರಾಷ್ಟ್ರದ ಗಡಿಭಾಗದ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸಿದವರು. ಮಕ್ಕಳ ಬೆಳವಣಿಗೆಗೆ ಸದಾ ಚಿಂತನೆ ಮಾಡಿದವರು. ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಮಕ್ಕಳ ಮನಕ್ಕೆ ಮುಟ್ಟುವ–ತಟ್ಟುವ ಮತ್ತು ರಂಜಿಸುವ ಕವಿತೆಗಳನ್ನು ರಚಿಸಿದವರು. ಅಮ್ಮಾ ಹಾಡು ಹೇಳು,

ಹಾದಿಯ ಹೂವು, ಮುದ್ದು ಮರಿ, ಚಿಗರೆಯ ಮರಿ, ಬಾಲಕೃಷ್ಣ ಮೊದಲಾದ ಕೃತಿಗಳನ್ನು ಮಕ್ಕಳ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ. ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಕನ್ನಡದ ಪ್ರಮುಖ ವಿಮರ್ಶಕರು, ಕವಿಗಳು ಆದ ಸುಮತೀಂದ್ರ ನಾಡಿಗರು ಮಕ್ಕಳಿಗಾಗಿ ಹಲವು ಕೃತಿಗಳನ್ನು ರಚಿಸಿದ್ದಾರೆ. 'ಮಕ್ಕಳಿಗೆ ಅದ್ಭುತದ, ಕಾಲ್ಪನಿಕವಾಗಿರುವುದು, ಅಸಾಧ್ಯವಾದುದರ ಕುರಿತು ಯೋಚಿಸುವುದು, ಒಗಟುಗಳನ್ನು ಬಿಡಿಸುವುದು, ಇಷ್ಟವಾಗುತ್ತದೆ. ಶಬ್ದಗಳ ಜೊತೆಗೆ ಆಟ, ಪ್ರಾಸ-ಅನುಪ್ರಾಸ, ಶ್ಲೇಷ, ಲಯಬದ್ಧವಾದ ರಚನೆಯಿಂದ ಮಕ್ಕಳಿಗೆ ಖುಷಿಯಾಗುತ್ತದೆ. ಕತೆಗಳನ್ನು ಕೇಳುವುದು ಅವರ ಕುತೂಹಲವನ್ನು ಕೆರಳಿಸುತ್ತದೆ. ಅದ್ಭುತ ಸಾಹಸಗಳ ನಂತರ ಬರುವ ಸುಖಾಂತ ಅವರ ಮನಸ್ಸನ್ನು ಅರಳಿಸುತ್ತದೆ' ಎನ್ನುತ್ತಾರೆ ಸುಮತೀಂದ್ರ ನಾಡಿಗರು. ಗಾಳಿಪಟ, ಸಾಹಸ, ಇಲಿ ಮದುವೆ, ಹನ್ನೊಂದು ಹಂಸಗಳು ಮುಂತಾದವು ಇವರ ಪ್ರಮುಖ ಕೃತಿಗಳಾಗಿವೆ. ನಾಡಿಗರು ಕವನಗಳಲ್ಲಿ ಹೆಚ್ಚಾಗಿ ಪ್ರಚಲಿತ ಸಮಸ್ಯೆಗಳನ್ನು ಕುರಿತಾಗಿ ಎಚ್ಚರಿಕೆ ನೀಡುತ್ತಾರೆ. ಹಾಗೆಯೇ ಮಕ್ಕಳಿಗೆ ವೈಜ್ಞಾನಿಕ ವಿಚಾರಗಳನ್ನು ತಿಳಿಸುತ್ತಾರೆ.

ನಾ. ಡಿಸೋಜರವರು ಸಣ್ಣ ಕಥೆ, ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯಲೋಕದಲ್ಲಿ ಹೆಸರಾದಂತೆ ಮಕ್ಕಳ ಸಾಹಿತ್ಯದಲ್ಲಿಯೂ ಪ್ರಧಾನವಾಗಿ ಕಂಡುಬರುತ್ತಾರೆ. ಗೋಪಿಯ ಗೊಂಬೆ, ಕಾಡಾನೆಯ ಕೊಲೆ, ಆನೆ ಬಂತೊಂದಾನೆ, ಬೆಳಕಿನೊಡನೆ ಬಂತು ನೆನಪು, ಆನೆ ಹುಡುಗ, ಅಬ್ದುಲ್ಲಾ, ಕೋಳಿ ಅನಂತ, ಮುಂದೇನು? ಭೂತ, ಗೆಳೆಯರ ಬಳಗಕ್ಕೆ ಜೈ, ಗೇರುಸೊಪ್ಪ, ವರಾಹಿ ಇವು ನಾ. ಡಿಸೋಜರವರ ಪ್ರಮುಖ ಮಕ್ಕಳ ಕೃತಿಗಳಾಗಿವೆ. ಮಕ್ಕಳ ಹೃದಯದ ಮಿಡಿತವನ್ನು ಅರಿತು, ಗಾಢವಾದ ಅನುಭವದ ಸಂಗತಿಗಳನ್ನು ಮಕ್ಕಳ ಗ್ರಹಿಕೆಗೆ ನಿಲುಕುವ ರೀತಿಯಲ್ಲಿ ಕಥೆಯನ್ನು ಕಟ್ಟುವ ಕಲೆ ನಾ. ಡಿಸೋಜರವರದು.

ಎಂ. ಡಿ. ಗೋಗೇರಿರವರು ಶಿಕ್ಷಕರಾಗಿ ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಹಾಸ್ಯ ಪ್ರಧಾನವಾದ, ರಸಿಕತೆಯ ಸೊಗಡು, ಲಲಿತವಾದ ಮಾತುಗಳಿಂದ ಕನ್ನಡ ಮಕ್ಕಳ ಸಾಹಿತ್ಯದಲ್ಲೂ ಜನಪ್ರಿಯರಾದವರು ಎಂ. ಡಿ. ಗೋಗೇರಿಯವರು. ಪಠ್ಯಭಾಷೆಯನ್ನು ಹೆಚ್ಚು ಬಳಸಿದವರು. ಮಕ್ಕಳಲ್ಲಿ ಆದರ್ಶದ ಗುಣಗಳನ್ನು ತುಂಬುವ ಪ್ರಯತ್ನ ಗೋಗೇರಿಯವರ ಕವಿತೆಗಳಲ್ಲಿ ಹೆಚ್ಚಾಗಿ ಅಭಿವ್ಯಕ್ತಗೊಂಡಿರುವುದು ಕಂಡುಬರುತ್ತದೆ. ಕುರಿಮರಿಬೇಕೆ? ಸುರುವಾಯ್ತು ನನ್ನ ಶಾಲೆ, ಅಕ್ಕ, ಪಟ್ಟನ ಪರಿಸರ, ಸಮಗ್ರ ಮಕ್ಕಳ ಕವಿತೆಗಳು, ಹಳ್ಳಿ ಶಿಕ್ಷಕ, ಶೈಕ್ಷಣಿಕ ಗೀತೆಗಳು ಮುಂತಾದವು ಗೋಗೇರಿಯವರ ಮಕ್ಕಳ ಕೃತಿಗಳಾಗಿವೆ.

ಎಚ್. ಎಸ್. ವೆಂಕಟೇಶಮೂರ್ತಿರವರು ಮಕ್ಕಳ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರ. ಅವರ ಕವಿತೆಗಳು ಪ್ರಾಸ, ಲಯಗಳಿಂದ ಕೂಡಿದ್ದು ತಿಳಿ ಹಾಸ್ಯವನ್ನು ವ್ಯಕ್ತಪಡಿಸುತ್ತವೆ. ಕೆಲವು ಪದ್ಯಗಳು ಮಕ್ಕಳ ಕಲ್ಪನಾಶಕ್ತಿಯನ್ನು ಅರಳಿಸುವುದಾದರೆ ಕೆಲವು ಕೆರಳಿಸುವಂತಹವು ಎಂದು ಶ್ರೀನಿವಾಸ ಉಡುಪರು ಅಭಿಪ್ರಾಯ ವ್ಯಕ್ತಗೊಳಿಸುತ್ತಾರೆ. ಹಾಗೆಯೇ ಎಚ್. ಎಸ್. ವೆಂಕಟೇಶಮೂರ್ತಿಯವರ ಕವಿತೆಗಳಲ್ಲಿ 'ಮಗುವಿನ ಮುಗ್ಧ ಕಲ್ಪನಾಲೋಕ ತನ್ನೆಲ್ಲಾ ವರ್ಣ ವಿನ್ಯಾಸಗಳೊಂದಿಗೆ ಪ್ರತ್ಯಕ್ಷವಾಗುತ್ತವೆ. ಕಹಿ ಇಲ್ಲದ ವ್ಯಂಗ್ಯ, ನೋವಿಲ್ಲದ ತಮಾಷೆ, ಹತಾಷೆಯಿಲ್ಲದ ವಿಷಾದ, ತಲೆಭಾರವಿಲ್ಲದ ನೀತಿ, ಘಾಸಿಗೊಳಿಸದ ಮಗುವಿನ ಭಾವಕೋಶದ ಪ್ರಕಟಣೆ ಶ್ರೀಯುತರ ಕವಿತೆಗಳ ಬಹುಮುಖ್ಯ ಗುಣಗಳಾಗಿದ್ದು, ಮಕ್ಕಳ ಸಾಹಿತ್ಯ ಪ್ರಪಂಚದಲ್ಲಿ ಹೊಸಬೆಳಕೊಂದನ್ನು ಮೂಡಿಸುವಲ್ಲಿ ಸಫಲವಾಗಿದೆ' ಎಂದು ಸುಬ್ರಾಯ ಚೊಕ್ಕಾಡಿಯವರು ಅಭಿಪ್ರಾಯಪಡುತ್ತಾರೆ. ಹಕ್ಕಿ ಸಾಲು, ಹೂವಿನ ಶಾಲೆ, ಅಗ್ನಿಮುಖಿ, ಅಮಾನುಷರು, ಚಿನ್ನಾರಿ ಮುತ್ತಾ ಮೊದಲಾದವು ಎಚ್. ಎಸ್. ವೆಂಕಟೇಶಮೂರ್ತಿಯವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಮಕ್ಕಳ ಸಾಹಿತ್ಯಕ್ಕೆ ದೃಶ್ಯ ಹಾಗೂ ಶ್ರವಣ ಮಾಧ್ಯಮದಲ್ಲಿ ಮಕ್ಕಳಿಗೆ ಕವನಗಳನ್ನು ಕೊಟ್ಟವರಲ್ಲಿ ಪ್ರಮುಖರು ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರು. ಮಕ್ಕಳಿಗೆ ಸಾಹಿತ್ಯವೆಂಬುದಾಗಲಿ, ಕವನವಾಗಲಿ ಸಾಂಪ್ರದಾಯಿಕ ನೆಲೆಯಲ್ಲಿ ನೀತಿ ಬೋಧನೆಗಾಗಿ ಇರುವ ಪಾಠವೆಂಬ ರೀತಿಯನ್ನು ಬಿತ್ತಿದವರು. ಕಿಶೋರಿ, ನಂದನ, ಪ್ರಾಣಿಸಮ್ಮೇಳನ ಇವು ಭಟ್ಟರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಮಕ್ಕಳ ಸಾಹಿತ್ಯದ ಹಲವಾರು ಸಮಸ್ಯೆಗಳನ್ನು ಕಂಡವರು ಟಿ. ಎಸ್. ನಾಗರಾಜಶೆಟ್ಟಿಯವರು. ಮಕ್ಕಳಿಗಾಗಿ ಬರವಣಿಗೆಗೆ ತೊಡಗುವುದು ಬಲು ಪ್ರೀತಿ ಇವರಿಗೆ. ಮಕ್ಕಳಲ್ಲಿ ಭಾವ-ಬುದ್ಧಿ-ಕಲ್ಪನೆಗಳ ಸಂಬಂಧ ಬೆಸೆದಾಗ ಮಾತ್ರ ಪ್ರೌಢ ಸಾಹಿತ್ಯ ಬೆಳೆಯಲು ಸಾಧ್ಯವೆಂದು ನಂಬಿರುವ ಟಿ. ಎಸ್. ನಾಗರಾಜಶೆಟ್ಟಿಯವರು ಮಕ್ಕಳ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಯಲು ಗಮನಾರ್ಹ ಕೊಡುಗೆ ನೀಡಿದ್ದಾರೆ. ಮಕ್ಕಳ ಕವಿತೆಗಳು, ಕತೆಗಳು, ರೂಪಕಗಳು, ಪ್ರಹಸನ ಮುಂತಾದವುಗಳಲ್ಲಿ ಬರವಣಿಗೆಗೆ ತೊಡಗಿ ಹಲವಾರು ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಭಾಷೆ, ಲಯ, ಪ್ರಾಸಗಳನ್ನು ಸಮರ್ಥವಾಗಿ ಬಳಸಿ ಮಕ್ಕಳ ನಾಲಿಗೆಯ ಮೇಲೆ ನಲಿಯುವಂತಹ, ಬುದ್ಧಿಶಕ್ತಿಯನ್ನು ಬೆಳೆಸುವಂತಹ ಹಲವಾರು ಕವಿತೆಗಳನ್ನು ರಚಿಸಿದವರು. ಅವುಗಳಲ್ಲಿ ನವಿಲುಗರಿ, ಸಕ್ಕರೆ ಬೊಂಬೆ, ಆಮೆ ಮತ್ತು ಹಂಸಗಳು, ಸಂಕರ, ಪ್ರಾಣಿಗಳ ಜಾತ್ರೆ, ಚುಟ್ಟಿ ಪುಟ್ಟಿ, ಮಕ್ಕಳ ನೆಹರು ಮೊದಲಾದವು ನಾಗರಾಜಶೆಟ್ಟಿಯವರ ಪ್ರಮುಖ ಮಕ್ಕಳ ಕೃತಿಗಳಾಗಿವೆ.

ಈ ರೀತಿಯಾಗಿ ಮೂರು ತಲೆಮಾರುಗಳಲ್ಲಿ ಗುರುತಿಸಿಕೊಂಡು ಮಕ್ಕಳ ಕವಿಗಳಲ್ಲಿ ಇನ್ನೂ ಹಲವಾರು ಹಿರಿಯ-ಕಿರಿಯ ಕವಿಗಳ ದಂಡು ತಮ್ಮದೇ ಆಗ ವಿಶಿಷ್ಟತೆಯಿಂದ

ಕೃಷಿ ಮಾಡಿದ್ದಾರೆ. ಅವರಲ್ಲಿ ತೋನ್ಸೆ ಮಂಗೇಶರಾವ್, ಹಟ್ಟಿಯಂಗಡಿ ನಾರಾಯಣರಾಯ, ಮ. ಪ್ರ. ಪೂಜಾರ, ನಾರಾಯಣ ಹುಯಿಲಗೋಳ, ಸಿ. ಫ. ಕಟ್ಟಿಮನಿ, ಸೋಸಿಲೆ ಅಯ್ಯಾಶಾಸ್ತ್ರಿ, ಎಂ. ಡಿ. ಅಳಸಿಂಗಚಾರ್ಯ, ಸಾಲಿ ರಾಮಚಂದ್ರರಾಯ, ಎ. ಆರ್. ಕೃಷ್ಣಶಾಸ್ತ್ರಿ, ಡಿ. ವಿ. ಗುಂಡಪ್ಪ, ಉಗ್ರಾಣ ಮಂಗೇಶರಾವ್, ಮಂಜೇಶ್ವರ ಗೋವಿಂದ ಪೈ, ಸಿಂಪಿ ಲಿಂಗಣ್ಣ, ಕಯ್ಯಾರ ಕಿಞ್ಞಣ್ಣರೈ, ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲ, ದ. ರಾ. ಬೇಂದ್ರೆ, ಮಧುರ ಚೆನ್ನ, ಪೇಜಾವರ ಸದಾಶಿವರಾವ್, ಮಿರ್ಜಿ ಅಣ್ಣಾರಾಯ, ದೇ.ಜೆ.ಗೌ. ಹ. ಮ. ಅಂಬಿಗೇರ, ಎಸ್. ಆರ್. ಗುಂಜಾಳ, ಪಂಚಾಕ್ಷರಿ ಹಿರೇಮಠ, ದೊಡ್ಡೇರಿ ವೆಂಕಟರಾವ್, ದು. ನಿಂ. ಬೆಳಗಲಿ, ಚನ್ನವೀರ ಕಣವಿ, ಗುರುಲಿಂಗ ಕಾಪಸೆ, ಈಶ್ವರ ಚಂದ್ರ ಚಿಂತಾಮಣಿ, ಕೆ. ಎಸ್. ನಿಸಾರಅಹಮದ್, ಕಮಲಾ ಹಂಪನಾ, ಬಾ. ಇ. ಕುಮಠೆ, ಜಂಬುನಾಥ ಕಂಚ್ಯಾಣಿ, ಪಂಡಿತ ರಾಮಕೃಷ್ಣಶಾಸ್ತ್ರಿ, ವರದಾ ಶ್ರೀನಿವಾಸ, ರಾಘವೇಂದ್ರ ಇಟಗಿ, ಬಿ. ಟಿ. ಲಲಿತಾನಾಯಕ, ಎಲ್. ಎಸ್. ಹೆಬ್ಬಾರ, ಕವಿತಾಕೃಷ್ಣ, ಚನ್ನಬಸಪ್ಪ ಹೊಸಮನಿ, ವೆಂಕಟೇಶ ಹುಣಸಿಕಟ್ಟಿ, ಗಂಗಾಧರ ನಂದಿ, ಎಂ. ಎ. ಸನದಿ, ವಿ. ಎಸ್. ಸಿರಹಟ್ಟಿಮಠ, ಬಿ. ಶೇಖರಪ್ಪ ಹೂಲಗೇರಿ, ಸಂಗಮೇಶ ಬಾಗಲಕೋಟ, ಆರ್. ವಿ. ಭಂಡಾರಿ, ವಾಮನ ಬೇಂದ್ರೆ, ನೆಂಪು ನರಸಿಂಹಭಟ್, ನೀಲಗಂಗಾ ಚರಂತಿಮಠ, ವೈದೇಹಿ, ಚಂದ್ರಶೇಖರ ಕಂಬಾರ, ಅಬ್ದುಲ್ ರೆಹಮಾನ್ ಪಾಷಾ, ಹ. ಮ. ಪೂಜಾರ, ಫ. ಗು. ಸಿದ್ಧಾಪೂರ, ಚಂದ್ರಗೌಡ ಕುಲಕರ್ಣಿ, ಆನಂದ ಪಾಟೀಲ, ರಾಜಶೇಖರ ಕುಕ್ಕುಂದಾ, ವಿಕ್ರಮ ವಿಸಾಜಿ, ಕೂತ್ತಲ ಮಹಾದೇವಪ್ಪ, ಗುರುರಾಜ ಬೆಣಕಲ್, ಜಯವಂತ ಕಾಡದೇವರ, ರಾಜೇಂದ್ರ ಎಸ್. ಗಡಾದ, ದೊಡ್ಡಣ್ಣ ಗದ್ದನಕೇರಿ, ಕೆ. ಉಲ್ಲಾಸ ಪೈ, ಕೃಷ್ಣಮೂರ್ತಿ ಬಿಳಿಗೆರೆ, ಎಂ. ಎಂ. ಸಂಗಣ್ಣನವರ, ಗಜಾನನ ಶರ್ಮ, ಮಮತಾ ಜಿ. ಸಾಗರ, ನಾ. ಸು. ಭರತನಹಳ್ಳಿ, ಕಾತ್ಯಾಯಿನಿ ಕುಂಜಿಬೆಟ್ಟು, ನಿಂಗು ಸೊಲಗಿ ಹೀಗೆ ಹಲವಾರು ಬರಹಗಾರರು ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಈ ಹೊತ್ತಿನ ಹಲವರು ಮಕ್ಕಳ ಸಾಹಿತ್ಯವನ್ನು ಬೆಳೆಯಲು ಶ್ರಮಿಸುತ್ತಿದ್ದಾರೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ನೆಲೆಯನ್ನು ಕಂಡುಕೊಳ್ಳಲು ಇಂತಹ ಮಹನಿಯರನ್ನು ಸ್ಮರಿಸುವುದು ಅಗತ್ಯವೆನಿಸುತ್ತದೆ.

ಅಡಿಟಿಪ್ಪಣಿ :

೧) ಆನಂದ ವಿ. ಪಾಟೀಲ ಹಾಗೂ ನ. ರವಿಕುಮಾರ (ಸಂ) : 'ಮಕ್ಕಳ ಸಾಹಿತ್ಯ ಶತಮಾನ' : ಪು.೯

೨) ಬೋಳುವಾರ ಮ. ಕುಂಞಿ (ಸಂ.) : 'ತಟ್ಟು ಚಪ್ಪಾಳೆ ಪುಟ್ಟ ಮಗು' : ಪು.೩೭

೩) ಆನಂದ ವಿ. ಪಾಟೀಲ ಹಾಗೂ ನ. ರವಿಕುಮಾರ : 'ಮಕ್ಕಳ ಸಾಹಿತ್ಯ ಶತಮಾನ' : ಪು.೧೪

೪) ಮಹಿಪಾಲರೆಡ್ಡಿ ಮುನ್ನೂರ್ : 'ಸೃಜನಮುಖಿ' : ಪು.೪೮

□□□□□

ಅಧ್ಯಾಯ : ೪

ಮಕ್ಕಳ ಸಾಹಿತ್ಯ: ಅಭಿವ್ಯಕ್ತಿ ರೂಪಗಳು

ಅಧ್ಯಾಯ – ೪
ಮಕ್ಕಳ ಸಾಹಿತ್ಯ: ಅಭಿವ್ಯಕ್ತಿ ರೂಪಗಳು

ಮಕ್ಕಳೆಂದರೆ ಸುಂದರ ಲೋಕದ ಹೂವುಗಳಿದ್ದಂತೆ. ಅವರ ಹೂ ಮನಸ್ಸನ್ನು ಗಮನದಲ್ಲಿಟ್ಟುಕೊಂಡು ಕಥೆ, ಕವನ, ಕಾದಂಬರಿ, ನಾಟಕ, ಪ್ರವಾಸ ಸಾಹಿತ್ಯ ಹೀಗೆ ಹಲವು ಪ್ರಕಾರಗಳಲ್ಲಿ ಅದು ಅಭಿವ್ಯಕ್ತಿಗೊಂಡಿದೆ. ಕವಿ ಕಾವ್ಯ ರಚನೆಯ ಸಂದರ್ಭದಲ್ಲಿ ಪರಕಾಯ ಪ್ರವೇಶ ಮಾಡಬೇಕಾಗುವುದು. ತನ್ನನ್ನು ತನ್ನ ರಚನೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಸುಂದರ ಕಾವ್ಯ ಹುಟ್ಟುತ್ತದೆ. ಯಾವುದೇ ಲೇಖಕನು ಅಪಾರವಾದ ಜೀವನ ಅನುಭವ ಹೊಂದಿರುವ, ಮಕ್ಕಳ ಒಡನಾಟದ ಅನುಭವ ಇರುವ, ಮಗುವಿನ ಮನವುಳ್ಳವರು ಮಕ್ಕಳ ಸಾಹಿತ್ಯ ನಿರ್ಮಿಸಲು ಸಾಧ್ಯ. ಇಂಥ ಅಭಿವ್ಯಕ್ತಿಯ ನೆಲೆಗಳನ್ನು ಕವನದ ಅಭಿವ್ಯಕ್ತಿ, ಕಥೆಯ ಅಭಿವ್ಯಕ್ತಿ, ನಾಟಕ ಅಭಿವ್ಯಕ್ತಿ, ಕಾದಂಬರಿ ಅಭಿವ್ಯಕ್ತಿ, ಪ್ರವಾಸ ಸಾಹಿತ್ಯದ ಅಭಿವ್ಯಕ್ತಿ ಎಂದು ಗುರುತಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೪.೧ ಕಾವ್ಯ :

ಮಕ್ಕಳ ಸಾಹಿತ್ಯದ ಮುಖ್ಯ ಕಾಳಜಿಯೆಂದರೆ ಸರಳ ಸುಂದರ ಭಾಷೆ, ಚಿಕ್ಕ-ಚಿಕ್ಕ ವಾಕ್ಯಗಳು, ಪುನರುಕ್ತಿ ಪದಗಳು, ರೂಪಕ, ಪ್ರತಿಮೆಗಳು ಇದ್ದಷ್ಟು ಮಕ್ಕಳಿಗೆ ರಂಜನೀಯವಾಗಿ, ರೋಮಾಂಚನಕಾರಿಯಾಗಿ ಪರಿಣಮಿಸುತ್ತವೆ. ಪ್ರಥಮದಲ್ಲಿ 'ಬಾಲ ಸಾಹಿತ್ಯ ಮಂಡಲ' ಸ್ಥಾಪಿಸಿದ ಮಕ್ಕಳ ಸಾಹಿತ್ಯದ ಪಿತಾಮಹರೆನಿಸಿದ ಪಂಜೆಮಂಗೇಶರಾಯರು, ಮಕ್ಕಳ ಮಂಟಪ ಕಟ್ಟಿದ ಬೋಳಂತಿಕೋಡಿ ಶಂಕರಭಟ್ಟರು, ಮೇವುಂಡಿ ಮಲ್ಲಾರಿ, ಮಕ್ಕಳ ನಾಟಕ ರಚನೆಯ ಭೀಷ್ಮ ಎಂ. ಎನ್. ಕಾಮತ್, ಕಂದನ ಕಾವ್ಯ ಮಾಲೆಯ ಜಿ. ಪಿ. ರಾಜರತ್ನಂ, ದಿನಕರ ದೇಸಾಯಿ, ಅಮಲನ ಕತೆಯಿಂದ ಮರಿವಿಜ್ಞಾನಿಯವರೆಗೆ ಮಕ್ಕಳ ಸಾಹಿತ್ಯ ಸೃಷ್ಟಿಸಿದ ಕವಿ ಕುವೆಂಪು, ಬಾಲ ಪ್ರಪಂಚದ ಅದ್ಭುತ ಜಗತ್ತಿನ ಅನಾವರಣಗೊಳಿಸಿದ ಶಿವರಾಮ ಕಾರಂತ, ಹರ್ಡೇಕರ ಮಂಜಪ್ಪ, ಗಂಗಾಧರ ತುರಮರಿ, ವೆಂಕಟ ರಂಗೋಕಟ್ಟಿ, ಸಿದ್ಧಯ್ಯ ಪುರಾಣಿಕ, ಡಿ. ಎಸ್. ಕರ್ಕಿ ಮುಂತಾದವರು ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ.

ಮಕ್ಕಳ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯ ಪ್ರಮುಖವಾದುದು. ಕಥೆ ಎಂದರೆ ಮಕ್ಕಳು ಎಷ್ಟು ಆಸಕ್ತಿ ಹೊಂದುವರೋ ಅದರಷ್ಟೇ ಆಸಕ್ತಿಯನ್ನು ಕವನಗಳಲ್ಲಿ ವ್ಯಕ್ತಪಡಿಸುತ್ತಾರೆ. ಕವನಗಳು ತಾಳ, ಲಯಗಳಿಂದ ಮಕ್ಕಳನ್ನು ಕುಣಿಸಿ ತಣಿಸುತ್ತವೆ.

'ನಾಗರ ಹಾವೆ ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ
ಕೈಗಳ ಮುಗಿವೆ ಹಾಲನೀವೆ
ಬಾ ಬಾ ಬಾ ಬಾ ಬಾ ಬಾ ಬಾ ಬಾ
ಹಳದಿಯ ಹೆಡೆಯನು ಬಿಚ್ಚೋ ಬೇಗಾ
ಹೊಳಹಿನ ಹೊಂದಲೆ ತೂಗೋ ನಾಗಾ
ಕೊಳಲನ್ನೂದುವೆ ಲಾಲಿಸು ರಾಗಾ
ನೀ ನೀ ನೀ ನೀ ನೀ ನೀ ನೀ ನೀ'[೨].

ಈ ಮೋಡಿಯ ಹಾಡನ್ನು ಕೇಳದ ಮಕ್ಕಳು ಇಲ್ಲವೆನ್ನಬಹುದು. ಪುಂಗಿಯ ನಾದಕ್ಕೆ ಹಾವಿನಂತೆ ಮಣಿಯುವ, ಮೋಹಕತೆಗೆ ಒಳಗಾಗುವ ಮಕ್ಕಳು ರೋಮಾಂಚನಗೊಳ್ಳುವುದು ಸಹಜ. ನಾಗರಹಾವು ರೌದ್ರವೂ ರಮಣೀಯವೂ ಆದ ಪ್ರಾಣಿ. ಹೊರನೋಟಕ್ಕೆ ಸುಂದರವಾಗಿ ಕಂಡರೂ ಅಂತರಂಗದಲ್ಲಿ ಕ್ರೂರವೂ, ವಿಷಕಾರಿಯಾದ ಜಂತು. ಮಕ್ಕಳು ಹಾವಿನ ಬಾಹ್ಯ ಸೌಂದರ್ಯವನ್ನು ಆಸ್ವಾದಿಸುತ್ತಾರೆ. ಹಾವಿನ ವಾಸ ಬಾಗಿಲ ಬಳಿಯಲ್ಲಿ ಅಲ್ಲಿಯೇ ನಿನ್ನನ್ನು ಆದರಿಸುವೆ ಎಂದು ಕವಿ ಮನದ ಇಂಗಿತ ತಿಳಿಸುತ್ತಾರೆ. ಹಾವು ಹೊರಗಿದ್ದರೆ ಭಯವಿರದು. ಮನೆಯಲ್ಲಿ ಸೇರಿಕೊಂಡರೆ ಅಪಾಯ ತಪ್ಪುವುದಿಲ್ಲ. ಅದಕ್ಕಾಗಿ ನೀನು ಹೊರಗೆ ಇರಲು ಪಂಜೆಯವರು ಬಯಸುತ್ತಾರೆ. ಮಕ್ಕಳು ಈ ಪದ್ಯವನ್ನು ಬರೀ ನಾದ ಪ್ರಧಾನವಾಗಿ, ಲಯ ಬದ್ಧವಾಗಿ, ಪ್ರಾಸಬದ್ಧವಾಗಿ ಮಾತ್ರ ಗ್ರಹಿಸುತ್ತಾರೆ. ಆದರೆ ಹಾವಿನ ಹಿನ್ನೆಲೆಯುಳ್ಳ ಆಂಗ್ಲರ ಗುಣಗಳನ್ನು ಹೋಲಿಕೆಯಾಗಿರುವುದು ಮಕ್ಕಳ ಗ್ರಹಿಕೆಗೆ ನಿಲುಕುವುದಿಲ್ಲ. ಒಟ್ಟು ಪದ್ಯವನ್ನು ಗಮನಿಸಿದರೆ ಎಲ್ಲೂ ಒತ್ತಕ್ಷರಗಳ ಗೊಂದಲವಿಲ್ಲ. ಸರಳ ಪದಗಳ ಬಳಕೆ ಸೊಗಸಾಗಿ ಮೂಡಿದೆ. ಇದು ಮಗುವಿಗೆ ಬಲು ಪ್ರಿಯವೆನಿಸುವುದು.

'ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವವನು ರವಿ ಹೊಳೆಯುವವನು
ಕೂಡಲೆ ಕೋಣೆಯ ಕತ್ತಲೆ ಕೊಳೆಯನು ತೊಳೆಯುವವನು ರವಿ ತೊಳೆಯುವವನು
ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವವನು, ಕಣ್ ಬಿಡಿಸುವವನು
ಹುಲು ಗಿಡ ಹೂವಿಗೆ ಪರಿಪರಿ ಬಣ್ಣವ ಉಡಿಸುವವನು, ಹನಿ ತೊಡಿಸುವವನು'[೨].

ಪಂಜೆಮಂಗೇಶರಾಯರು 'ಉದಯರಾಗ' ಪದ್ಯದಲ್ಲಿ ನಾದಮಾಧುರ್ಯದಿಂದ ಗಮನ ಸೆಳೆಯುತ್ತಾರೆ. ಇಲ್ಲಿಯ ಪದಗಳ ಓಡಾಟವೇ ಒಂದು ರೋಮಾಂಚನ, ಮಕ್ಕಳು ಜಗಳವಾಡುವುದು, ಕುಣಿದಾಡುವುದು, ಕ್ಷಣಿಕ ಮಾತ್ರ, ಮತ್ತೆ ಒಂದಾಗಿ ಕೂಡಿ ಆಡುವರು ಇದು ಮಕ್ಕಳ ಸಹಜ ಗುಣ. ಆದರೆ ಕವಿ ಇಲ್ಲಿ ಸೂರ್ಯ ಉದಯಿಸುವ ದೃಶ್ಯವನ್ನು

ಪರಿಣಾಮಕಾರಿಯಾಗಿ ವ್ಯಕ್ತಿಗೊಳಿಸಿದ್ದಾರೆ. ಬಡವರು ಮನೆಯ ಮಾಡಿಗೆ ಹುಲ್ಲು ಹೊದೆಸುವರು. ಉಳ್ಳವರು ಹಂಚಿನಿಂದ ನಿರ್ಮಿಸಿವರು. ಸೂರ್ಯನು ಬಡವರ ಮನೆಯ ಮಾಡಿನ ಹುಲ್ಲಲಿ ಚಿನ್ನದ ಗೆರೆ ಎಳೆಯುತ್ತಾನಂತೆ. ಅದೇ ಬಂಗಾರವಾಗಿ ಕಾಣಿಸುತ್ತದೆ. ಬಡವರ ಬಂಗಾರವೆಂದರೆ ಬೆಳಗಿನ ಸೂರ್ಯ ಎನ್ನುವರು. ಕತ್ತಲೆಯ ಕೊಳೆಯನ್ನು ತೊಳಿಯುವುದು, ನಿದ್ದೆಯ ಕಸವನ್ನು ಗುಡಿಸುವುದು, ಹುಲ್ಲು ಗಿಡ, ಹೂವುಗಳಿಗೆ ಬಣ್ಣವನ್ನು ಉಡಿಸುವುದು, ಕವಿಯ ಕಲ್ಪನೆ ರಂಜನೀಯವಾಗಿ ಮೂಡಿದೆ.

ಮಕ್ಕಳ ಕವಿತೆ ಬರೆಯುವುದು ಸುಲಭವೆಂದು ಹಗುರಾಗಿ ತಿಳಿದುಕೊಳ್ಳುವುದು ಸರಿಯಲ್ಲ. ಇದು ಎಲ್ಲರಿಗೂ ಸಾಧಿಸುವಂತಹದಲ್ಲ. ಮಕ್ಕಳ ಒಡನಾಡಿಯಾಗಿ ಅವರ ಬೇಕು-ಬೇಡಗಳನ್ನು, ಆಸಕ್ತಿಯನ್ನು ಅರಿತುಕೊಂಡವರೇ ಉತ್ತಮ ಮಕ್ಕಳ ಕವಿತೆ ರಚಿಸಬಲ್ಲರು. ಅದಕ್ಕಾಗಿ ಶಿಕ್ಷಕರೇ ಈ ಕಾರ್ಯದಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದನ್ನು ಕಾಣಬಹುದು. ಪರಿಚಿತ ವಸ್ತು, ಸರಳ ಪದಗಳು, ಪ್ರಾಸ ಬದ್ಧವಾದ ನುಡಿಗಳು, ಸುಂದರವಾದ ಚಿತ್ರಗಳಿಂದ ಕೂಡಿದ್ದು ಮಕ್ಕಳ ಕವನಗಳಲ್ಲಿ ಅವಶ್ಯಕವಾಗಿ ಬೇಕು.

'ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿಧಪ ಮಗರಿಸ ಊದಿದನು.....
ಕಸ್ತೂರಿ ನಡೆದನು ಬೀದಿಯಲಿ
ಜಂಬದ ಕೋಳಿಯ ರೀತಿಯಲಿ.....
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ.....
ಬಣ್ಣದ ತುತ್ತೂರಿ ಹಾಳಾಯ್ತು
ಜಂಬದ ಕೋಳಿಗೆ ಗೋಳಾಯ್ತು'[೩].

ಮಕ್ಕಳ ಮನರಂಜನೆಯೊಂದಿಗೆ ನೀತಿಯನ್ನು ಕಲಿಯುವ ಪ್ರಸಂಗ ಜಿ. ಪಿ. ರಾಜರತ್ನಂ ಅಭಿವ್ಯಕ್ತಗೊಳಿಸುತ್ತಾರೆ. ಮಕ್ಕಳು ಆಡುತ್ತ-ಹಾಡುತ್ತ ಹೋಗುವ ಸರಳ ಪದಗಳು ಇಲ್ಲಿವೆ. ತುತ್ತೂರಿ ಊದುತ್ತ ಜಂಬದಿಂದ ಹೋಗುವ ಕಸ್ತೂರಿಗೆ ಆಪತ್ತು ಒದಗುವುದು. ಅತಿ ಜಂಬ ಅಪಾಯಕರ ಎನ್ನುವ ತತ್ವ ವ್ಯಕ್ತಗೊಳಿಸುವುದು ಕವಿಯದು. 'ಬಣ್ಣವು ನೀರಿನ ಪಾಲಾಯ್ತು ಬಣ್ಣದ ತುತ್ತೂರಿ ಬೋಳಾಯ್ತು' ಎನ್ನುವ ಮಾತು ಮಕ್ಕಳಲ್ಲಿ ನೀತಿಯನ್ನು ಬಿತ್ತುವ ಪ್ರಸಂಗ ತಿಳಿಸುತ್ತದೆ.

'ಕೋಳಿ ಕೂಗಿತೇಳು ಕಂದ
ಸೂರ್ಯ ಪೂರ್ವದಲ್ಲಿ ಬಂದ
ಹೆಚ್ಚು ಮಲಗಲೇನು ಚಂದ
ಬಾ! ಕಂದ ಬಾ'[೪]**!**

ಇಂಥ ಕವನಗಳು ಮಕ್ಕಳನ್ನು ಉತ್ತಮ ಬದುಕನ್ನು ಕಟ್ಟಿಕೊಳ್ಳಲು ಸಹಕಾರಿಯಾಗುತ್ತವೆ. ಮಗುವಿನಲ್ಲಿ ಸಮಯದ ಪರಿಜ್ಞಾನ ನೀಡಿ ಬೆಳಗಿನಿಂದ ಸಾಯಂಕಾಲದವರೆಗೂ ಏನೇನು ಮಾಡಬೇಕು ಎಂಬುದನ್ನು ಕಲಿಸಿಕೊಡುವಲ್ಲಿ ಸಫಲವಾಗುತ್ತವೆ. ಮಕ್ಕಳ ಪದ್ಯಗಳನ್ನು ಕುರಿತು ಜಿ. ಪಿ. ರಾಜರತ್ನಂ ಅವರು ಕೆಲವು ನುಡಿಗಳನ್ನು ಹೀಗೆ, 'ಮಕ್ಕಳು ನಾದಪ್ರಿಯರು, ಕೇಳಿದ ವರ್ಣಗಳನ್ನು, ಕೇಳಿದ ಪದಗಳನ್ನು, ಕೇಳಿದ ಪಂಕ್ತಿಗಳನ್ನು ಪುನಃ ಪುನಃ ಕೇಳುತ್ತಿದ್ದರೆ ಅವರಿಗೆ ಸಂತೋಷ, ಬಾಯಿ ಪಾಠ ಮಾಡಿದ ಪದ್ಯ ಬಹುಕಾಲ ನೆನಪಿನಲ್ಲಿ ನಿಲ್ಲುತ್ತದೆ. ಆದ್ದರಿಂದ ಮಗು ತಿಳಿಯಬೇಕಾದ ಕೆಲವು ವಿಷಯಗಳನ್ನು ಪದ್ಯದಲ್ಲಿ ಹೊಸೆಯುವುದು ರೂಢಿ'. ನಾನು ಮಕ್ಕಳಿಗಾಗಿ ಬರೆದ ಕವನಗಳಲ್ಲಿ ಮೊಟ್ಟ ಮೊದಲನೆಯದು 'ತುತ್ತೂರಿ' ಎಂಬ ಪದ್ಯ ಕಥೆ. ಮಕ್ಕಳಿಗೆ ಕಥೆ ಎಂದರೆ ತುಂಬ ಇಷ್ಟ. ಆದರೆ ಅದು ಗದ್ಯದಲ್ಲಿದ್ದರೆ ಎಷ್ಟು ಸುಲಭವಾಗಿ ತಿಳಿಯುತ್ತದೋ ಪದ್ಯದಲ್ಲಿದ್ದರೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಅದಕ್ಕೋಸ್ಕರ ಪದ್ಯದೊಳಗಿನ ಕತೆಯನ್ನು ಗದ್ಯದಲ್ಲಿ ಹೇಳಿ, ಆಮೇಲೆ ಪದ್ಯವನ್ನು ಓದಿ, ಅಲ್ಲಲ್ಲೆ ಅವಕ್ಕೆ ವಿವರಣೆ ಕೊಡುತ್ತ ಹೋದರೆ, ಮಕ್ಕಳಿಗೆ ಪದ್ಯದ ಸ್ವಾರಸ್ಯವನ್ನು ತಿಳಿಯುವ ದಾರಿ ತೋರಿಸಿದಂತಾಗುತ್ತದೆ'[೫].

ಸಿದ್ಧಯ್ಯ ಪುರಾಣಿಕರು ಮಕ್ಕಳ ಮನಸಿಗೆ ನಾಟುವ ಕವಿತೆಗಳನ್ನು ರಚಿಸಿ ಅವರಲ್ಲಿ ಹೊಸದೊಂದು ಲೋಕವನ್ನೇ ಸೃಷ್ಟಿಸಿದ್ದಾರೆ.

'ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ನಡೆಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ'[೬].

ಕುದುರೆಯ ಕಲ್ಪನೆ ಮನಮೋಹಕ. ಮಕ್ಕಳ ಮನಸ್ಸನ್ನು ಹೊಕ್ಕು ಹೇಳುವ ಕಾವ್ಯಾನಂದರು ನಿಜವಾಗಿಯೂ ಕವಿ ಮನದವರು. ಅಜ್ಜನ ಕೋಲು ಕುದುರೆಯಾಗಿ ಕುಣಿಸುವ, ಕೂಳಿಲ್ಲದೆ ನಡೆಸುವ, ಕಾಲಿಲ್ಲದೆ ನಡೆಸುವ ರೂಪಕ ಬಲು ಸುಂದರವಾಗಿ ಮೂಡಿದೆ. ಮಕ್ಕಳಿಗೆ ಇದೊಂದು ಖುಷಿ ನೀಡುವ ದೃಶ್ಯ. ಅಂಥ ಕವನಗಳು ಮಕ್ಕಳ ಬಲು ಬೇಗನೆ ಮನದಲ್ಲಿ ಉಳಿಸಿಕೊಳ್ಳುತ್ತವೆ.

'ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೊ ಸುಂದರ!
ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿ–
ಗೊಂದೆ ಭಾರತ ಮಂದಿರ
ಶಾಂತಿದಾತನು ಗಾಂಧಿತಾತನು
ಎದೆಯ ಬಾನಿನ ಚಂದಿರ'[೭]!

ಆದರ್ಶ ಶಿಕ್ಷಕರಾಗಿ ರಾಷ್ಟ್ರಪ್ರಶಸ್ತಿ ಪುರಸ್ಕಾರ ಹೊಂದಿರುವ ಶಂ. ಗು. ಬಿರಾದಾರ ಅವರು ಮಕ್ಕಳನ್ನು ನಾಳಿನ ನಾಯಕರಾಗಲಿ ಎಂದು ಹಾರೈಸುತ್ತ ಅವರಲ್ಲಿ ಬದುಕಿನ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಕರೆ ನೀಡುತ್ತಾರೆ. ಪಳಕರ ಸೀತಾರಾಮ ಭಟ್ಟರು ಮಕ್ಕಳ ಮನೋಭಾವವನ್ನು ವಿಭಿನ್ನವಾದ ಕವನಗಳಲ್ಲಿ ವ್ಯಕ್ತಗೊಳಿಸಿದ್ದಾರೆ.

'ಸೀರೆ ಉಡುವಳು ನನ್ನಮ್ಮ
ಕೋಟು ತೊಡುವವನು ನನ್ನಪ್ಪ
ಆದರೆ ನನಗೆ ಮಾತ್ರ ಅಂಗೀ ಚಡ್ಡೀ, ಯಾಕೋ ಗೊತ್ತಿಲ್ಲ ।
ಅಡುಗೆಯ ಕೆಲಸವು ಅಮ್ಮನಿಗೆ
ಆಫೀಸ ಕೆಲಸವು ಅಪ್ಪನಿಗೆ
ನನಗೆ ಮಾತ್ರ ಶಾಲೆಯ ಕೆಲಸವು, ಯಾಕೋ ಗೊತ್ತಿಲ್ಲ'[೮]

ಮಗು ಪ್ರಶ್ನೆಮಾಡುವ ಗುಣ ಬೆಳೆಸಿಕೊಳ್ಳುವ ವಿಧಾನ, ಮನೆಯ ಪರಿಸರದಿಂದಲೇ ಕಲಿತುಕೊಳ್ಳುತ್ತದೆ. ಅಮ್ಮ-ಅಪ್ಪನನ್ನು ನೋಡುತ್ತದೆ. ತಾಯಿಗೆ ಜಡೆ, ತಂದೆಗೆ ಮೀಸೆ ನನಗೆ ಯಾವುದು ಇಲ್ಲ ಎಂದು ಚಿಕಿತ್ಸಕ ಬುದ್ಧಿಯಿಂದ ಕೇಳುತ್ತದೆ. ಇವು ಮಕ್ಕಳ ಕವನಗಳಲ್ಲಿ ಅವಶ್ಯಕ ಎನ್ನುವುದು ಮರೆಯಬಾರದು. ಇನ್ನೂ ಹಲವು ಮಕ್ಕಳ ಕವನಗಳು ಕನ್ನಡ ಮಕ್ಕಳ ಸಾಹಿತ್ಯದಲ್ಲಿ ವ್ಯಕ್ತಗೊಂಡಿರುವುದು ಕಂಡುಬರುತ್ತವೆ.

'ಇರುವೆ ಇರುವೆ ಕರಿಯ ಇರುವೆ
ನಾನು ಜತೆಗೆ ಬರುವೆ
ಆಡಲಿಕ್ಕೆ ಅಮ್ಮನಿಂದಾ ಕರಣೆ ಬೆಲ್ಲ ತರುವೆ
ಮಳೆಯ ಕಾಲ ಬರುತಲಿಹುದು
ನನಗೆ ಸಮಯವಿಲ್ಲ
ಅನ್ನ ಕೂಡಿ ಹಾಕಿ ಇಟ್ಟು
ಕರೆಯ ಬರುವೆನಲ್ಲ'. * ಸಿಸು ಸಂಗಮೇಶ

'ಕಳ್ಳರು ಬಂದರೆ ಬೊಗಳುವ ಕುನ್ನಿಯು
ಒಳ್ಳೆಯ ಗಡಿಯಾರ
ಬೆಳಗುವ ಹೊತ್ತು ಕೂಗುವ ಕೋಳಿ
ಹಳ್ಳಿಯ ಗಡಿಯಾರ'. * ಉಳುವೀಶ ಹುಲೆಪ್ಪನವರಮಠ

'ಮನೆಯಂಗಳದಲಿ ಮರವೊಂದಿದ್ದರೆ
ಮನೆಯೇ ನಂದನವು
ಊರಿನ ಬದಿಯಲಿ ಬನವೊಂದಿದ್ದರೆ
ಊರೇ ಗೋಕುಲವು'. * ಶರಣಪ್ಪ ಕಂಚ್ಯಾಣಿ

ಹೀಗೆ ಮಕ್ಕಳ ಕವನಗಳು ಹಲವಾರು ವಸ್ತುಗಳನ್ನು ಹೊಂದಿರುವುದರಿಂದ ರಂಜನೀಯ ಮತ್ತು ರೋಮಾಂಚನಕಾರಿಯಾಗಿ ಅಭಿವ್ಯಕ್ತಗೊಂಡಿವೆ. ಇನ್ನು ಹಲವರು ಮಕ್ಕಳ ಕಾವ್ಯಾಭಿವ್ಯಕ್ತಿಯ ಸ್ವರೂಪವನ್ನು ಅನಾವರಣಗೊಳಿಸಿರುವುದು ನೋಡಬಹುದು.

ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿಯವರು 'ಬಾರೆಲೇ ಹಕ್ಕಿ ಬಣ್ಣದ ಹಕ್ಕಿ' ಎಂಬ ಪದ್ಯವು ಕನ್ನಡದ ಜನಮನದಲ್ಲಿ ವೈವಿಧ್ಯಮಯವಾಗಿ ಬಿತ್ತರಗೊಂಡಿದೆ.

'ಬಾರೆಲೇ ಹಕ್ಕಿ ಬಣ್ಣದ ಹಕ್ಕಿ
ಬಾರಲೆ ಹಕ್ಕಿ ಹಾರುವ ಹಕ್ಕಿ
ಗೆಳೆಯರು ಆಡಲು ಯಾರು ಇಲ್ಲ
ಕಳೆಯುವದೆಂತು ವೇಳೆಯನೆಲ್ಲ
ಬಾಬಾ ನನಗೂ ಹಾಡಲು ಕಲಿಸು
ಬಾಬಾ ನನಗೂ ಹಾರಲು ಕಲಿಸು'

ಎಂಬುದು ಮಕ್ಕಳ ಆಸೆಗಳನ್ನು ಅಭಿವಯಕ್ತಗೊಳಿಸುವ ಅಂಶಗಳಿಂದ ಕೂಡಿದೆ. 'ನನ್ನ ತಾಯಿ', ಪದಾರ್ಥ ಬೋಧಿನಿ, ನಾಡ ನೆಲೆಗಾರ, ಭೂಮಂಡಲ ಬೋಧಿನಿ ಮೊದಲಾದವು ಗೌರೀಶರ ಪ್ರಮುಖ ಕೃತಿಗಳಾಗಿವೆ.

ಸಿದ್ದಯ್ಯ ಪುರಾಣಿಕರ ಮಕ್ಕಳ ಕವಿತೆಗಳ ವಸ್ತುವಿನ ನಿರೂಪಣೆ ಪರಿಚಿತವಾದ, ಸರಳವಾದ ಭಾಷೆಯೊಂದಿಗೆ ಕಟ್ಟಿಕೊಡುತ್ತಾರೆ. ಇವರ ಕವಿತೆಗಳು ನಾಟಕೀಯತೆಯೊಂದಿಗೆ ಲವಲವಿಕೆಯಿಂದ ಕೂಡಿವೆ. ಇವು ಮಕ್ಕಳಿಗೆ ಥಟ್ಟನೆ ಆಕರ್ಷಿಸುವ ಗುಣ ಹೊಂದಿವೆ.

'ಕಾಲಿಲ್ಲದೆಯೇ ಕುಣಿಯುವ ಕುದುರೆ
ಕೂಳಿಲ್ಲದೆಯೇ ಬದುಕುವ ಕುದುರೆ ।
ಅರಬ ದೇಶದಿ ದೊರೆಯದ ಕುದುರೆ.....
ಅರಸು ಮಕ್ಕಳಿಗೂ ದೊರೆಯದ ಕುದುರೆ
ಅಜ್ಜನ ಕೋಲಿದೂ ನನ್ನೀ ಕುದುರೆ ॥

ಇಲ್ಲಿಯ ಲಯ, ಪ್ರಾಸ, ಕಲ್ಪನೆಗಳು ಎಲ್ಲ ವಯೋಮಾನದವರಿಗೂ ಮನಸೂರೆಗೊಳ್ಳುವಂತಹ ರೂಪವನ್ನು ಹೊಂದಿವೆ. ಇಲ್ಲಿಯ ಕೆಲವು ಸಾಲುಗಳು ಮಕ್ಕಳಿಗೆ ಅರ್ಥವಾಗದೇ ಹೋಗಬಹುದು. ಆದರೂ ಅವು ಮಕ್ಕಳಿಗೆ ಪೂರಕವಾಗಿವೆ ಎನ್ನಬಹುದು. ಇವರ ಮಕ್ಕಳ ಕಾವ್ಯದಲ್ಲಿ ವಯಕ್ತಿಕ ವಿಚಾರಗಳ ಅಭಿವ್ಯಕ್ತಿಯಿದ್ದರೂ, ಕಾಲ್ಪನಿಕ ಸಂಗತಿಗಳಿದ್ದರೂ, ನಮ್ಮ ಸುತ್ತಲಿನ ಚಿತ್ರಣವನ್ನು ಕವಿತೆಗಳಲ್ಲಿ ಕಂಡರೂ ಅವು ನಮ್ಮವೇ ಎನ್ನುವ ಭಾವನೆ ಮೂಡಿಸುತ್ತವೆ. ಮಕ್ಕಳ ಬಗೆಗೆ ಕಾವ್ಯಾನಂದರಿಗೆ ಬಲು ಪ್ರೀತಿ. 'ಮಕ್ಕಳೊಡನೆ ಮಕ್ಕಳಾಗಿ, ಮಕ್ಕಳ ಭಾವನೆಗಳನ್ನು ಅರ್ಥ ಮಾಡಿಕೊಂಡು, ಮಕ್ಕಳು ತಿಳಿಯುವ ಭಾಷೆಯಲ್ಲಿ ಅವರಿಗೆ ಇಷ್ಟವಾದ ವಸ್ತುಗಳನ್ನು ಗಮನದಲ್ಲಿಟ್ಟುಕೊಂಡು ಕವಿತೆಗಳನ್ನು ರಚಿಸಿದ್ದಾರೆ. ಅಡುಗೆ ಮನೆಯ ದೋಸೆಯಿಂದ ಹಿಡಿದು ಆಕಾಶದ ಚಂದಪ್ಪನವರೆಗೆ, ಕಥೆ ಹೇಳುವ

ಅಜ್ಜಿಯಿಂದ ಹಣ್ಣು ಮಾರುವವನವರೆಗೆ ಕುದುರೆಯನ್ನಾಗಿ ಮಾಡಿಕೊಂಡು, ಅಜ್ಜನ ಕೋಲಿನಿಂದ ಹಿಡಿದು, ಉಗಿಬಂಡಿಯವರೆಗೆ ಆಡುಮಾತಿನ ಧಾಟಿಯ ದೇಶಪ್ರೇಮ, ಕರಡಿ, ಆಟ, ಪಾಠ, ತುಪ್ಪಾರೊಟ್ಟಿ, ಟೈಮು, ದೇಶ ಮೊದಲಾದ ಕೃತಿಗಳು ಕಾವ್ಯಾನಂದರು ಕನ್ನಡ ಮಕ್ಕಳ ಸಾಹಿತ್ಯಕ್ಕೆ ನೀಡಿದವರು.

ಮಕ್ಕಳಿಗೆ ಪ್ರೀಯವಾದ ಊಟ, ತಿಂಡಿ-ತಿನಸುಗಳ ಬಗ್ಗೆ ಹೇಳುತ್ತ ಮಕ್ಕಳ ಮನಸ್ಸನ್ನು ಆಟ-ಪಾಠದ ಕಡೆಗೆ ಗಮನ ಸೆಳೆಯುತ್ತಾರೆ ಮತ್ತು ವಸ್ತುವಿನ ಮೂಲಕ ವಿಷಯವನ್ನು ತಿಳಿಸಿಕೊಡುತ್ತಾರೆ. ವಸ್ತು ವಿವಿಧತೆಗೆ ಅನುಗುಣವಾಗಿ ನಿಸರ್ಗ, ನಾಡು-ನುಡಿ, ಗಿಡ, ಮರ, ಪ್ರಾಣಿ, ಪಕ್ಷಿ, ಮಳೆ, ಮೋಡ, ಚಂದ್ರ ಹೀಗೆ ಎಲ್ಲವನ್ನು ಬಳಸಿಕೊಂಡು ಕವಿತೆಗಳನ್ನು ರಚಿಸಿದ್ದಾರೆ.

'ಚಂದಪ್ಪ ಚಂದಪ್ಪ ಚಾರೀ ಕಾಯಿ
ಬಟ್ಟಲು ತುಂಬ ಬಾರೀ ಕಾಯಿ' ।

ಎಂಬ ಚಂದಪ್ಪನ ಕವಿತೆ ಹೇಳುತ್ತ ಆಕಾಶವನ್ನು ನೋಡುವ, ವಿವಿಧ ಕನಸು, ಕಲ್ಪನೆ ಕಾಣುತ್ತ ಸಂಭ್ರಮ ಪಡುತ್ತಾರೆ. ಇದು ಮಕ್ಕಳ ಸಹಜತೆಗೆ ನಿಲುಕಬಲ್ಲ ವಸ್ತುವೆನ್ನಲು ಸಾಧ್ಯವಿದೆ.

ಶಂ. ಗು. ಬಿರಾದಾರರವರು ಮಕ್ಕಳ ಮನೋಧರ್ಮ ಅರಿತವರು. ಅವರಿಗೆ ಬೇಕಾದ ಸಾಹಿತ್ಯ ನಿರ್ಮಿಸಿದವರು. ಸಾಹಿತ್ಯ ಸಂಸ್ಕೃತಿಗಳನ್ನು ಮೆಚ್ಚಿಕೊಂಡು ಅದನ್ನು ಆಸ್ವಾದಿಸಿ ಬೆಳೆದವರು. ಅವರ ಯಾವುದೇ ರಚನೆಯಿರಲಿ ಮಗುವಿನ ಲವಲವಿಕೆ, ಕುತೂಹಲ, ಮಗುವಿನ ಮನಸ್ಸನ್ನು ಹೊಂದಿ ಬರೆದಿದ್ದಾರೆ.

'ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೋ ಸುಂದರ' ।

ಎಂಬ ಕವಿತೆ ಕನ್ನಡ ನಾಡಿನ ಮನೆ ಮಾತಾಗಿದೆ. ಹಿರಿಯ-ಕಿರಿಯ ಎಳೆಯ-ಗೆಳೆಯರೆಂಬ ಭೇದವನರಿಯದೇ ಎಲ್ಲರೂ ಒಂದು ಎನ್ನುವ ಭಾವದವರು ಶಂ. ಗು. ಬಿರಾದಾರ ಸಿಸು ಸಂಗಮೇಶರವರು ಮಕ್ಕಳಲ್ಲಿ ತೀಕ್ಷ್ಣ ಬುದ್ಧಿ ನಿರ್ಮಾಣಗೊಳ್ಳಲು ಹಾಸ್ಯ ಪ್ರಜ್ಞೆಯೊಂದಿಗೆ ಕವಿತೆ ರಚಿಸಿರುವುದು ಹೀಗೆ.

'ಕತ್ತೆ ಕುಮಾರನು ಪತ್ರಿಕೆ ತಿರುವುತ
ಓದುತ್ತಿದ್ದನು ಸುದ್ದಿ
ಸೋಟೆಯ ತಿರುವುತ ಟಿಸ್ ಪುಸ್ಸನ್ನುತ
ಇಂಗ್ಲೀಷ ಭಾಷೆಯ ತಿದ್ದಿ ।
ಮಂಗೂರಾಯನು ಕೇಳಿದನಾಗಲೆ

ಬೆನ್ನಿನ ಮೇಗಡೆ ಗುದ್ದಿ।
‘ಕನ್ನಡ ಪತ್ರಿಕೆ ತಿರುವಿ ಹಿಡಿದಿರುವೆ’
ಎಲ್ಲಿಟ್ಟಿರುವೆ ಬುದ್ದಿ’[೧೦] **।**

ಇವು ಮಕ್ಕಳಲ್ಲಿ ಸೂಕ್ಷ್ಮ ಬುದ್ಧಿಯನ್ನು ಕಲ್ಪಿಸಿಕೊಳ್ಳುವ, ಚತುರತನ ವ್ಯಕ್ತಪಡಿಸುವ ವಿಸ್ತಾರವನ್ನು ಹೊಂದಿವೆ. ಮಕ್ಕಳ ಸಾಹಿತ್ಯವನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸುವ ದಿಟ್ಟ ಪ್ರಯತ್ನಗಳಿಗೆ ಸಿಸು ಸಂಗಮೇಶರು ಕಾರಣಕರ್ತರು. ಈ ನುಡಿಗಳಿಗೆ ತಕ್ಕಂತೆ ಅವರು ಸಾಗಿಬಂದವರು.

ಪಳಕಳ ಸೀತರಾಮಭಟ್ಟರ ಸಹಜವಾದ ಮುಗ್ಧ, ಸುಕುಮಾರ ಭಾವಗಳು ಅಭಿವ್ಯಕ್ತಿಯ ಪ್ರಕ್ರಿಯೆಯಲ್ಲಿ ಕಂಡುಬರುತ್ತವೆ.

‘ಬಂದವರು ನಿಲ್ಲಿ ಈ ಕೋಣೆಯಲ್ಲಿ
ಮಲಗಿಹುದು ಕಂದ, ಇದಕೆ
ಬಲು ಹೊತ್ತು ನಿದ್ದೆ ಚಣಕೊಮ್ಮೆ ಒದ್ದೆ
ಹಾಸಿದ್ದ ಹಾಸು ಹೊದಿಕೆ’[೧೧].

ಮಗು ತೊಟ್ಟಿಲಲ್ಲಿ ಆಡುವುದೊಂದು ಸೊಬಗು. ಬಂದವರೆಲ್ಲ ಮಗುವನ್ನು ನೋಡುವ ಹಂಬಲದವರು. ಹಾಗೆ ಬರುವವರನ್ನು ತಡೆದು ನಿಲ್ಲಿಸುವ ಕ್ರಮ ಸೋಜಿಗವಾದುದು. ಮಕ್ಕಳ ಮಾತಿನಲ್ಲಿ ಅದು ಸಹಜತೆಯಿಂದ ಅಭಿವ್ಯಕ್ತಗೊಂಡಿದೆ. ಕಥನ ಪ್ರಕ್ರಿಯೆಯಲ್ಲಿ ಕತೆಯನ್ನು ಮಕ್ಕಳಿಗೆ ನೇರವಾಗಿ ಮುಟ್ಟಿಸುವುದು ಪ್ರತಿಯೊಬ್ಬ ಶಿಕ್ಷಕರಲ್ಲಿ ಕಾಣುತ್ತೇವೆ. ಇದು ಪಳಕಳರನ್ನೂ ಬಿಟ್ಟಿಲ್ಲ. ಕತೆ ಹೇಳುವುದು ನೀತಿಗಾಗಿ, ಬದುಕಿನ ಪಾಠಕ್ಕಾಗಿ ಎನ್ನುವ ಧೋರಣೆ ಕಂಡು ಬರುತ್ತದೆ. ಇವರ ಕಥನ ಕವಿತೆಗಳಲ್ಲಿ ಪ್ರಮುಖವಾಗಿ ವ್ಯಕ್ತವಾಗುವ ವಿಷಯ ವಸ್ತುಗಳಲ್ಲಿ ಬೆಕ್ಕಿಗೆ ಗಂಟೆಕಟ್ಟುವ, ಹಕ್ಕಿಗಳ ಮೊಟ್ಟೆ ತಿನ್ನುವ ಹಾವು, ಸಿಂಹವನ್ನೇ ಮರುಳುಗೊಳಿಸಿದ ನರಿ, ಹಾಡಿ ಸಿಲುಕಿಕೊಂಡ ಕತ್ತೆ ಮೊದಲಾದವು ವ್ಯಕ್ತಗೊಂಡಿವೆ. ಪಳಕಳರು ಆಯ್ದುಕೊಂಡಿರುವ ಕತೆಗಳೆಲ್ಲ ಬದುಕಿಗೆ ಉತ್ತಮ ಮಾರ್ಗದರ್ಶನವನ್ನು ನೀಡುವ ನಿರ್ದಿಷ್ಟವಾದ ಉದ್ದೇಶ ಹೊಂದಿವೆ. ಹಿರಿಯರಿಗೆ ಗೌರವದಿಂದ ವರ್ತಿಸುವುದು, ಶಿಸ್ತಿನ ಜೀವನ ನಡೆಸುವುದು, ಸತ್ಯ, ಅಹಿಂಸೆಯಿಂದ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವುದು ಮುಂತಾದ ಪಾಠ ಹೇಳುವ ಹಿರಿಯರ ನುಡಿಗಳು ಕಂಡುಬರುತ್ತವೆ.

ಬಿ. ಎಸ್. ಸನದಿಯವರ ಅತ್ಯಂತ ಪ್ರಚಲಿತವಾದ ಗೀತೆ ಮಕ್ಕಳಲ್ಲಿ ಬೆರೆತು ಯಶಸ್ವಿಯಾಗಿದೆ.

‘ಬಾ ಬಾರ ಕಂದಾ
ಬಾರ ಸುನಂದಾ

ಬ್ಯಾಸರ ಬಂದೈತಿ ಆಡೋಣ;
ಆಚಿ ಕೈ ತಾರ
ಈಚಿ ಕೈ ತಾರ
ಮುಟಿಗ್ಯಾಗೇನೈತಿ ನೋಡೋಣು?
ಅರೆರೆ! ಬಿಟ್ಟೀ ?
ಬಿತ್ತಲ ರೊಟ್ಟಿ !
ಎತಕೋ ಮೊದಲದ ತಿನ್ನೋಣು;
ಆ ಮ್ಯಾಲ ಆಟ
ಆಡೋಣ ಈಟ
ಕಡಿಕೊಂದ್ ಹಾಡರೆ ಅನ್ನೋಣು'[೧೨]!

ಭಾವಗೀತೆಯ ಮಧುರತೆ ಈ ಪದ್ಯದಲ್ಲಿ ವ್ಯಕ್ತಗೊಂಡರು ಮಕ್ಕಳು ಚಟುವಟಿಕೆಯಲ್ಲಿ ತೊಡಗುವುದನ್ನು ತಿಳಿಸುತ್ತದೆ. ಇದು ನಮ್ಮೊಳಗಿನ ಭಾವಸ್ಪಂದನದ ಕುಣಿದಾಟದಂತೆ ಅಭಿವ್ಯಕ್ತಗೊಂಡಿದೆ.

ಎನ್. ಎಸ್. ಲಕ್ಷ್ಮೀನಾರಾಯಣಭಟ್ಟರು.

'ಬಾಳ ಒಳ್ಳೋರ್ ನಮ್ಮ ಮಿಸ್ಸು
ಏನ್ ಹೇಳಿದ್ರೂ ಯಸ್ಸೆಸ್ಸು
ನಗ್ತಾ ನಗ್ತಾ ಮಾತಾಡ್ತಾರೆ
ಸ್ಕೂಲಿಗೆಲ್ಲ ಫೇಮಸ್ಸು'[೧೩].

ಎನ್ನುವ ಸಾಲುಗಳು ಲಕ್ಷ್ಮೀನಾರಾಯಣ ಭಟ್ಟರನ್ನು ಮಕ್ಕಳ ಸಾಹಿತ್ಯದ ತಾರೆ ಎನ್ನುವಂತೆ ಮಾಡಿದವು. ಹೊಸ-ಹೊಸ ಕಲ್ಪನೆ, ಶಬ್ದಗಳ ಜೋಡಣೆಯ ಚಮತ್ಕಾರ, ಪದ್ಯದಲ್ಲಿ ವ್ಯಕ್ತವಾಗುವ ಭಾವ, ನಾಟಕೀಯತೆ, ತಮಾಷೆ, ವಿನೋದ, ಅಚ್ಚರಿ ಇವರ ಕವನಗಳ ಗುಣಗಳಾಗಿವೆ. ಮಕ್ಕಳ ಮನೋಲೋಕಕ್ಕೆ ಇಳಿದು ಕೃತಿಗಳನ್ನು ರಚಿಸಿದಾಗ ಮತ್ತು ಅವರ ಭಾವನೆಗಳೊಂದಿಗೆ ಬೆರೆತರೆ ಮಾತ್ರ ಅವರ ಭಾವನೆಗಳನ್ನು ಅಭಿವ್ಯಕ್ತಪಡಿಸಲು ಸಾಧ್ಯ ಎಂಬುದು ಎನ್. ಎಸ್. ಲಕ್ಷ್ಮೀ ನಾರಾಯಣಭಟ್ಟರ ಅಭಿಪ್ರಾಯ. ಮಕ್ಕಳನ್ನು ಉದಾಸೀನತೆಯಿಂದ, ಅಸಡ್ಡೆ ಭಾವನೆಗಳಿಂದ ಕಾಣುವ ಹಿರಿಯರ ಸ್ವಭಾವವನ್ನು ಲಕ್ಷ್ಮೀನಾರಾಯಣಭಟ್ಟರು ಗುರುತಿಸಿದ್ದು ವಿಶೇಷವಾಗಿದೆ. ಮಕ್ಕಳಲ್ಲಿ ಅದು ಹೇಗೆಲ್ಲ ಅಭಿವ್ಯಕ್ತಗೊಳ್ಳುತ್ತದೆ ಎನ್ನುವ ಅರಿವು ಹಿರಿಯರಲ್ಲಿರುವುದು ಕಡಿಮೆ. ಅಂಥ ಸಂಗತಿಗಾಗಿ ಭಟ್ಟರ ಕವಿತೆ ನೋಡಬಹುದು.

'ಏನೋ ಕೇಳಿದರೇನೋ ಹೇಳ್ತಿ
ದೊಡ್ಡೋರೆಲ್ಲ ಹೀಗೇನೆ
ಬೇಗಬೇಗನೆ ದೊಡ್ಡೋನಾಗಿ
ತಿಳ್ಕೋತಿನಿ ನಾನೇನೇ'[೧೪]!

ಮಕ್ಕಳಲ್ಲಿರುವ ಸ್ವಾಭಿಮಾನ, ಕೆಚ್ಚು, ನಿಷ್ಠೆ, ಛಲ, ತುಂಟತನ, ಹಾಸ್ಯಪ್ರಜ್ಞೆ, ಉಲ್ಲಾಸದ ಗುಣಗಳನ್ನು ಲಕ್ಷ್ಮೀನಾರಾಯಣಭಟ್ಟರು ತಮ್ಮ ಕವನಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ನಾಗರಾಜಶೆಟ್ಟಿಯವರು ದಿನನಿತ್ಯದ ಸಂಗತಿಗಳನ್ನು ಆಯ್ದುಕೊಂಡು ನಾದಮಯದಿಂದ ಕೂಡಿದ ಶಿಶುಪ್ರಾಸಗಳನ್ನು ಮಕ್ಕಳಿಗೆ ಹಿತವೆನಿಸುವಂತೆ ಅಭಿವ್ಯಕ್ತಗೊಳಿಸಿರುವುದು ನೋಡಬಹುದು.

'ಗರಿ ಗರಿ ಗರಿ ಗರಿ ನವಿಲುಗರಿ
ಮಿರಿಮಿರಿ ಮಿಂಚುವ ನವಿಲುಗರಿ
ಗೆರೆ ಗೆರೆ ಗೆರೆ ಗೆರೆ ನವಿಲುಗರಿ
ನನ್ನ ಮೆಚ್ಚಿನ ಹೊಳುಪುಗರಿ'[೧೫]!

ಅಣ್ಣನ ಕಡೆಯಿಂದ ನವಿಲುಗರಿಯೊಂದು ಸಿಕ್ಕಿರುವುದಕ್ಕೆ ಪುಟ್ಟ ಹುಡುಗ ಸಂತೋಷದಿಂದ ಕುಣಿದಾಡಿ ಪುಸ್ತಕದಲ್ಲಿಟ್ಟರೆ ಅದು ಮರಿ ಹಾಕುವುದೆಂಬ ನಂಬಿಕೆಯಿಂದ ಪುಸ್ತಕದೊಳಿಡುವುದು. ಆ ಮರಿಯನ್ನು ಯಾರಿಗೆ ಕೊಡಬೇಕೆಂದು ನೂರೆಂಟು ದಾರಿ ಯೋಚಿಸುವುದು. ಜಗಳಗಂಟಿ ಗೆಳೆಯರಿಗೆ ಕೊಡದಿರಲು ನಿರ್ಧರಿಸುವುದು, ಕೊನೆಗೆ ಮನೆಯಲ್ಲಿಯ ಪುಟ್ಟ ತಂಗಿಗೆ ಕೊಟ್ಟರೆ ಅದಕ್ಕೆ ಪ್ರತಿಫಲವಾಗಿ ತನ್ನ ಕೆನ್ನೆಗೆ ಮುತ್ತು ಸಿಗುತ್ತದೆ ಹಾಗೂ ಮೆಚ್ಚಿನ ನವಿಲುಗರಿಯ ಮರಿಗರಿ ಮನೆಯಲ್ಲಿಯೇ ಉಳಿದಂತಾಗುತ್ತದೆಂಬ ಹುಡುಗನ ಕಲ್ಪನೆ 'ನವಿಲು ಗರಿ' ಪದ್ಯದಲ್ಲಿ ಅದ್ಭುತವಾಗಿ ಮೂಡಿಬಂದಿದೆ. ನಾಗರಾಜಶೆಟ್ಟಿಯವರ ಮಕ್ಕಳ ಸಾಹಿತ್ಯದ ಮುಖ್ಯ ಗುಣಗಳೆಂದರೆ ನಿಸರ್ಗ ಪ್ರೀತಿ; ಪ್ರಕೃತಿಯ ಚಿತ್ರಣ ಮಕ್ಕಳ ಮನದಲ್ಲಿ ಅಚ್ಚಳಿಯದೆ ನಿಲ್ಲುವಂತೆ ಮಾಡುತ್ತವೆ. ಗಿಡ–ಮರ–ಕಾಡು, ಆಕಾಶ, ಚುಕ್ಕಿ, ಮಳೆ, ಅಂಗಿಯ ಕೊಳೆ, ಹರಿಯುವ ನೀರು, ಕಾಗದದ ದೋಣಿ ಮೊದಲಾದ ಸನ್ನಿವೇಶಗಳ ವಸ್ತುಗಳು ಟಿ. ಎಸ್. ನಾಗರಾಜಶೆಟ್ಟಿಯವರ ಕೃತಿಗಳಲ್ಲಿ ಚಿತ್ರಣಗೊಂಡಿವೆ.

ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಶಿಶುಗೀತೆಗಳು ತನ್ನದೇ ಆದಂತಹ ವಿಶಿಷ್ಟ ಛಾಪನ್ನು ಮೂಡಿಸಿದೆ. ಐದು ವರ್ಷದಿಂದ ಮೇಲ್ಪಟ್ಟು ಹತ್ತು ವರುಷದೊಳಗಿನ ಮಕ್ಕಳನ್ನು ಉದ್ದೇಶಿಸಿ ರಚಿಸಿದ ಪದ್ಯಗಳನ್ನು ಶಿಶು ಗೀತೆಗಳೆಂದು ಕರೆಯಬಹುದು. ಸಾಮಾನ್ಯವಾಗಿ ಜನಪದ ಜೀವನದ ಹಲವು ಮಜಲುಗಳು ಎಲ್ಲೆಡೆಯು ಹಬ್ಬಿಕೊಂಡಿವೆ. ಬದುಕಿನಲ್ಲಿ ಒಂದಾಗಿವೆ. ಜಾನಪದ ಗೀತಾತ್ಮಕ ಭಾಗವೇ ಜನಪದ ಕಾವ್ಯ. ಇದು ನಿರ್ದಿಷ್ಟ ಬದುಕನ್ನು ಪರಿಚಯಿಸುತ್ತದೆ. ಸಮಗ್ರ ಜೀವನವನ್ನು ರೂಪಿಸುತ್ತದೆ. ಈ ಮೌಖಿಕ ಸಂಪ್ರದಾಯಗಳಲ್ಲಿ ಮಕ್ಕಳಿಗೆ ಸಂಬಂಧಿಸಿದ ಕಾವ್ಯ ಭಾಗವೇ ಶಿಶುಗೀತೆಗಳು ಮಕ್ಕಳು ಒಬ್ಬರನೊಬ್ಬ ಅರಿತುಕೊಳ್ಳಲು ಸಹಕಾರಿಯಾಗಿವೆ. ಇವು ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿವೆ. ಇವು ಮಕ್ಕಳಿಗೆ ಉಪಯುಕ್ತವಾಗಿ ಮನರಂಜಿಸುತ್ತವೆ. ಶಿಶುಗೀತೆಗಳಲ್ಲಿ ಜೋಗುಳಗಳು,

ಪ್ರಕೃತಿ ಗೀತೆಗಳು, ಭಾವಗೀತೆಗಳು, ದೇಶಭಕ್ತಿ ಗೀತೆಗಳೆಂದು ವಿಂಗಡಿಸಿ ನೋಡಬಹುದು. ತಾಯಂದಿರು ತಮ್ಮ ಕಂದಮ್ಮಗಳಿಗಾಗಿ ತೊಟ್ಟಿಲು ತೂಗುತ್ತ ಹಾಡಿರುವುದು ಜೋಗುಳ, ವಾತ್ಸಲ್ಯಭರಿತ ಮನದಿಂದ ತಾಯಿ ಜೋ..... ಜೋ..... ಎಂದು ಪುನರಾವರ್ತಿಸುತ್ತ ಹಾಡಿದಾಗ ಮಕ್ಕಳು ಆ ಹಾಡಿನ ಲಯದ, ಮಾಧುರ್ಯಕ್ಕೆ ಮನಸೋತು ನಿದ್ದೆ ಮಾಡುವ ಮಗು ತಾಯಿಯನ್ನು ಬೆರಗಿನಲ್ಲಿ ಮುಳುಗಿಸುತ್ತದೆ. ತಾಯಿಯ ಮಮತೆಯ ಕೈಗಳು ತೊಟ್ಟಿಲು ತೂಗಿದವು. ಹಾಡುತ್ತ ಹಾಡುತ್ತ ಜನಪದ ಗೀತೆಯಂತೆ ಬಾಯಿಂದ ಬಾಯಿಗೆ ಸಾಗಿಬಂದು 'ಜೋಗುಳ' ಹಾಡಾಗಿ ಎಲ್ಲರ ಬಾಯಲ್ಲಿ ಉಳಿದವು. ಮಕ್ಕಳು ಮೊದಲು ನೋಡುವುದು ತಾಯಿಯನ್ನು, ಮಕ್ಕಳ ಆಟ ಮೊದಲು ಮನೆಯಲ್ಲಿ, ತಾಯಿಯ ಮಡಿಲು ಮತ್ತು ತೊಟ್ಟಿಲು ಮಗುವಿಗೆ ವಿರಾಮದ ಸ್ಥಳ. ಮಗು ಅಂಬೆಗಾಲಿಟ್ಟು ಮನೆಯಲ್ಲಿ ಓಡಾಡುವುದು, ತೊದಲುತ್ತ, ಆಟ ಆಡುತ್ತ ಓಡಿ ಬಂದು ಅಮ್ಮನನ್ನು ತಬ್ಬಿಕೊಂಡಾಗ ತಾಯಿ ರಮಿಸಿ ಲಾಲಿ ಹಾಡುತ್ತಾಳೆ. ಜೋಗುಳ ಹಾಡುತ್ತ, ತೊಟ್ಟಿಲು ತೂಗುತ್ತ ತಾಯಿ ಮಗುವಿನ ಭವಿಷ್ಯದ ಕನಸು ಕಾಣುತ್ತಾಳೆ.

ಸ್ವಾತಂತ್ರ್ಯ ಪೂರ್ವದಲ್ಲಿ ಪಂಜೆಯವರು ಶಿಶು ಗೀತೆಗಳನ್ನು ಬರೆದಿದ್ದು, ದೇಶಪ್ರೇಮ, ಸ್ವಾಭಿಮಾನಗಳನ್ನು ಪದ್ಯಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಶಿಶು ಗೀತೆಗಳನ್ನು ಬರೆಯುವಾಗ ಮಕ್ಕಳಿಗೆ ಪ್ರೀತಿಯ ತಿಂಡಿ-ತಿನಿಸು, ಆಟ, ಪ್ರಾಣಿ-ಪಕ್ಷಿಗಳು ಇತ್ಯಾದಿ ವಿಷಯಗಳು ಆಯ್ಕೆ ಮಾಡಬೇಕು. ಶಿಶು ವಿಹಾರದ ಮಕ್ಕಳಿಗೆ ಚಿಕ್ಕ ಪದ್ಯವಿರಬೇಕು. ಪ್ರಾಸಬದ್ಧವಾದ ಸುಂದರ ಪದಗಳಿಂದ ಮಕ್ಕಳಿಗೆ ಆಕರ್ಶಕವಾಗುವಂತಿರಬೇಕು. ಮಕ್ಕಳಿಗೆ ತಮ್ಮದೇ ಅನುಭವದ ಪರಿಮಿತಿ ಇರುತ್ತದೆ. ಈ ಪರಿಮಿತಿಯ ಒಳಗಿರುವ ವಿಷಯಗಳು ಮಾತ್ರ ಮಕ್ಕಳ ಅಭಿವ್ಯಕ್ತಿಗೆ ಹತ್ತಿರವಾಗುತ್ತವೆ. ಮಗು ಹೊಸ-ಹೊಸ ಪದಗಳನ್ನು ಕಟ್ಟಿಕೊಳ್ಳುತ್ತ ಹೋಗುತ್ತದೆ. ಹೀಗಾಗಿ ಮಕ್ಕಳ ಭಾಷೆಯ ಕಲಿಕೆಯಲ್ಲಿ ಪ್ರಾಸಗಳ ಪಾತ್ರ ಹಿರಿದಾಗಿದೆ. ಹಲವಾರು ಪ್ರಾಸಗಳು ವಿಡಂಬನೆ, ಚಮತ್ಕಾರ, ಅಣಕ, ಅಸಂಬದ್ಧತೆ, ಒಗಟು ಮೊದಲಾದ ರಂಜನೀಯ ವಿಷಯಗಳು ಶಿಶುಪ್ರಾಸಗಳ ವಸ್ತುಗಳಾಗಿರುತ್ತವೆ. ಇಲ್ಲಿ ಅರ್ಥ ಗೌಣವಾಗಿದ್ದು ಶಬ್ದ ಪ್ರಧಾನವಾಗಿರುತ್ತದೆ. ಮಕ್ಕಳು ಹೆಚ್ಚಾಗಿ ಅನುಕರಣಶೀಲರು, ಕೊಂಕು, ಹಾಸ್ಯಮಯ ಪದ್ಯವನ್ನು ಹಾಡಿದಾಗ ಎಲ್ಲರೂ ಖುಷಿಪಡುವುದು ಸಹಜ. ಶಿಶು ಪ್ರಾಸಗಳು ಮನಸ್ಸನ್ನು ಹಗುರಗೊಳಿಸುತ್ತವೆ.

ಹಿಂಗs ಒಂದು ಊರಿತ್ತು
ಊರ ಮುಂದ ದಾರಿತ್ತು
ದಾರಿ ಬದಿಗೆ ಬಾವಿತ್ತು
ಬಾವಿ ದಂಡಿಗೆ ಮರವಿತ್ತು
ಮರದಲಿ ಕೋಳಿ ಕುಂತಿತ್ತು

ಕೊಕ್ಕೋ ಎಂದು ಕೂಗಿತ್ತು
ಬೆಳ್ಳಂ ಬೆಳಗು ಆಗಿತ್ತು
ಹಿಂಗs ಒಂದು ಊರಿತ್ತು। (ಬೆಳ್ಳಂ ಬೆಳಗು)

ಕಂಚಾಣಿ ಶರಣಪ್ಪನವರು ಮಕ್ಕಳನ್ನು ಸರಳವಾಗಿ ತಮ್ಮತ್ತ ಸೆಳೆಯುವ ಶಿಶುಪ್ರಾಸಗಳನ್ನು ರಚಿಸಿದ್ದಾರೆ. ಅವರ 'ಗುಡು ಗುಡು ಗುಂಡ' ಪ್ರಸಿದ್ಧವಾದ ಶಿಶುಪ್ರಾಸ ಸಂಕಲನವಾಗಿದೆ.

ರಂಗನ ಗಾಡಿ ತಳ್ಳುವ ಗಾಡಿ
ಸಂಗನ ಗಾಡಿ ಎಳೆಯುವ ಗಾಡಿ
ಆಡುತಲಿರುವರು ಇಬ್ಬರು ಕೂಡಿ
ಹಾಡನು ಹಾಡಿ ಕುಣಿಕುಣಿದಾಡಿ। (ಬಂಡಿ ಆಟ)

ಇಂತಹ ಶಿಶುಪ್ರಾಸಗಳನ್ನು ಪಳಕಳ ಸೀತಾರಾಮಭಟ್ಟರು ಸ್ವಗತಾಗಿ ಅಭಿವ್ಯಕ್ತಗೊಳಿಸಿದ್ದಾರೆ.

ಸದ್ದು ಇಲ್ಲದಂತೆ ಮೆಲ್ಲ
ಕೆಲಸದಲ್ಲೆ ತೊಡಗಬಲ್ಲ
ನಡತೆಯಲ್ಲಿ ತಿಳಿಯದಿಲ್ಲ
ಇರುವೆ ಜಾತಿ
ಜನಗಳೆಲ್ಲ ಕಲಿಯಲಿಲ್ಲ
ಇದರ ನೀತಿ। (ಇರುವೆ)

ಅದೇ ರೀತಿ ಜಿ. ಪಿ. ರಾಜರತ್ನಂ ಅವರು, ಮಕ್ಕಳು ಆಟವಾಡುತ್ತಾ ಹೇಳುವ ಅಂಕಿಗಳನ್ನು ಪರಿಚಯಿಸುವ ಶಿಶುಗೀತೆಗಳು ಖುಷಿ ನೀಡುತ್ತವೆ.

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು
ಇಪ್ಪತ್ತು ಹತ್ತು ಮೂವತ್ತು
ಕೈಯಲ್ಲೊಂದು ಕಲ್ಲಿತ್ತು। (ಅಂಕಿಗಳು)

ಇಂತಹ ಶಿಶುಗೀತೆಗಳು ಮಕ್ಕಳ ಮನದಲ್ಲಿ ಉಳಿಯುತ್ತವೆ.

ಶಿಶು ಪ್ರಾಸಗಳನ್ನು ರಚಿಸಿರುವ ಜಿ. ಪಿ. ರಾಜರತ್ನಂ, ಪಂಜೆಮಂಗೇಶರಾಯರ, ಗೋವಿಂದ ಪೈ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ, ಪಳಕಳ ಸೀತಾರಾಮಭಟ್ಟರ ಈ ಪ್ರಕಾರದಲ್ಲಿ ಕೃಷಿ ನಡೆಸಿದವರು. ಇತ್ತೀಚಿನ ಬರಹಗಾರರು ಮಕ್ಕಳ ದೃಷ್ಟಿಕೋನವನ್ನು

ಇಟ್ಟುಕೊಂಡು ಶಿಶು ಪ್ರಾಸಗಳನ್ನು ರಚಿಸುತ್ತಿರುವುದು ಸ್ವಾಗತಾರ್ಹವಾದುದು. ಡಾ. ರಾಜೇಂದ್ರ ಗಡಾದರ ಕೆನಿ ಕೆನಿ ಮೊಸರು, ಆನಿ ಬಂತು ಆನಿ, ಬಿ. ಎಸ್. ಜಗಾಪುರವರ ಬಣ್ಣದ ತುತ್ತೂರಿ, ತಮ್ಮಣ್ಣ ಬೀಗಾರರ ಮಿಂಚಿನ ಮರಿ, ಚಿಂತಾಮಣಿ ಕೊಡ್ಲಕೆರೆಯವರ ಸಿಂಡ್ರೆಲ್ಲಾ ಅಂಬ್ರೆಲ್ಲಾ, ಕಂಚ್ಯಾಣಿ ಶರಣಪ್ಪನವರ ಗುಡು ಗುಡು ಗುಂಡ, ಶ್ರೀನಿವಾಸ ಉಡುಪರವರ ಕನ್ನಡ ನಾಡಿನ ಕೂಸುಮರಿ, ಉಲ್ಲಾಸಣ್ಣ ಪುತ್ತೂರು ಇವರ ಪುಟ್ಟಿಯ ಗಿಲಿಗಿಲಿ, ತುರು ತುರು ತುತ್ತೂರಿ, ಪಳಕಳ ಸೀತಾರಾಮ ಭಟ್ಟರ ಪುಟಾಣಿ ಮಿತ್ರ ಮುಂತಾದ ಬರಹಗಾರರ ಶಿಶುಪ್ರಾಸಗಳು ಮಕ್ಕಳ ಲೋಕವನ್ನು ತಣಿಸಿವೆ. ರಾಜರತ್ನಂ ಶಿಶುಪ್ರಾಸಗಳನ್ನು ಕುರಿತು, 'ಉದ್ದವಿಲ್ಲದ ಚಿಕ್ಕ ಪದ್ಯ, ಸುಮಾರು ನಾಲ್ಕೊ ಆರೋ ಪಂಕ್ತಿಗಳೊಳಗೆ ಮುಗಿಯುವ ಪದ್ಯ. ಘಂ ಘಮ ಘಮ, ಝುಣ್, ಝುಣ್, ಝುಣ್, ತುಂಬು ನೀರ ಕೆರೆ, ಹೊಟ್ಟೆಬಾಕತನ, ದೊಡ್ಡ ಪಟ್ಟೆ ಹುಲಿ ಮೊದಲಾದ ೫ ಪಂಕ್ತಿಯ ಚುಟುಕಗಳು ನಾನು ಮೊದಲು ಬರೆದವು. ಇವುಗಳ ಛಂದಸ್ಸಿನಲ್ಲಿಯೂ ಪ್ರಾಸವಿನ್ಯಾಸದಲ್ಲಿಯೂ ತನ್ನದೆ ಆದ ಕಟ್ಟುಂಟು. ಇಂಥದೊಂದು ಪ್ರಕಾರವನ್ನು ಬರೆಯಬಹುದೆಂಬ ಪ್ರೇರಣೆ ನನಗೆ Edword Lear ನ Limericks ನಿಂದ ಬಂದಿತಾದರೂ ಅದರ ವಸ್ತು ವಿಧಾನಗಳಿಗೂ ನನ್ನದ್ದಕ್ಕೂ ಇರುವ ವ್ಯತ್ಯಾಸವನ್ನು ವಾಚಕರು ಕಾಣಬಹುದು. ಇವು ಪ್ರಕಟವಾದಾಗ ಮಕ್ಕಳಿಗೆ ತುಂಬ ಇಷ್ಟವಾದವು'[೧೬]. ಎನ್ನುತ್ತಾರೆ.

ಪ್ರಾಸಗಳು ವಯೋಮಾನಕ್ಕನುಗುಣವಾಗಿ ರಚಿತವಾಗಿರುವುದು ಕಂಡುಬರುತ್ತವೆ. ಮಕ್ಕಳ ಆಸಕ್ತಿ, ಅಭಿರುಚಿ, ಕುತೂಹಲ ಪ್ರವೃತ್ತಿ ಮುಂತಾದವುಗಳನ್ನು ಗಮನಿಸಿ ಸುಲಭ ಭಾಷೆಯಲ್ಲಿ ಅಂತ್ಯಪ್ರಾಸ, ಅನುಪ್ರಾಸಗಳೊಂದಿಗೆ ರಚಿತವಾದವು. ಇಂಥ ಶಿಶು ಪ್ರಾಸಗಳು ಮೊದಲನೆಯ ಸಲ ಕೇಳಿದಾಕ್ಷಣ ಮನಸೂರೆಗೊಳ್ಳುತ್ತವೆ. ಅವು ಮಕ್ಕಳಲ್ಲಿ ಹೆಚ್ಚು ಚಟುವಟಿಕೆಯಲ್ಲಿ ತೊಡಗಿಸುತ್ತವೆ. ಹೀಗೆ ಶಿಶು ಪ್ರಾಸಗಳು ಅಭಿವ್ಯಕ್ತಗೊಂಡು ಮಕ್ಕಳಲ್ಲಿ ಬೌದ್ಧಿಕ ವಿಕಾಸಕ್ಕೆ ಕಾರಣೀಭೂತವಾಗಿವೆ.

೪.೨ ಕಥನ ಕವನ :

ಮನದೊಳಗೆ ಹುದುಗಿದ ಭಾವನೆಗಳಿಗೆ ಮೂರ್ತರೂಪವನ್ನು ಕೊಡುವ ಸಂದರ್ಭದಲ್ಲಿ ಸಂಕೇತವಾಗಿ ಕೆಲವು ವಸ್ತುಗಳನ್ನು ವ್ಯಕ್ತಿಗಳನ್ನು ಬಳಸಿಕೊಂಡು ಕಾವ್ಯವನ್ನು ಕಟ್ಟುವ ಕಲೆ ಕಥನ ಕವನದಲ್ಲಿ ವ್ಯಕ್ತವಾಗುತ್ತದೆ. 'ಕಥನ' ಎಂಬುದು ಕಥನ ವಿಧಾನ ಮತ್ತು ಕಥೆ ಎರಡನ್ನೂ ಸೂಚಿಸುತ್ತದೆ. ಕವನ ಎನ್ನುವುದು ಪದ್ಯ ರೂಪವನ್ನು ಸೂಚಿಸುತ್ತದೆ. ಕಥನ ಕವನ ಮೂಲಭೂತವಾಗಿ ಒಂದು ಪದ್ಯ ರೂಪದ ರಚನೆ. ಕವಿ ಇಲ್ಲಿ ತನ್ನ ಭಾವನೆ, ಕಲ್ಪನೆ, ಅನುಭವ, ವಿಚಾರಗಳನ್ನು ಆತ್ಮನಿಷ್ಠ ನೆಲೆಯಲ್ಲಿ ವ್ಯಕ್ತಗೊಳಿಸದೆ, ಪಾತ್ರಗಳ ಮೂಲಕ ಮತ್ತು ಘಟನೆಗಳ ಮೂಲಕ ಅಭಿವ್ಯಕ್ತಗೊಳಿಸುತ್ತಾನೆ. ಆದ್ದರಿಂದ ಕಥನ ಕವನವನ್ನು ವಸ್ತುನಿಷ್ಠ ಕಾವ್ಯವೆಂದು ಕರೆಯಬಹುದು.

ಕಥನ ಕವನವನ್ನು ಕನ್ನಡದಲ್ಲಿ ಕಥನ ಕವಿತೆ, ಪದ್ಯಕತೆ, ನೀಳ್ಗವಿತೆ ಮುಂತಾಗಿ ಕರೆಯಲಾಗುತ್ತದೆ. ಇಂಗ್ಲೀಷನಲ್ಲಿಯೂ ಸಹ ಕಥನ ಕವನವನ್ನು 'Verse Tale, Narrative Poem, Narrative Verse, Langer Poem' ಎಂಬ ಹೆಸರುಗಳಿಂದ ಕರೆಯಲಾಗಿದೆ. ಕಥನ ಕವನವು ಕಥನ ಮತ್ತು ಕವನ ಎಂಬ ಎರಡು ಸಂಗತಿಗಳನ್ನು ಒಳಗೊಂಡಿದೆ. ಕಥನ ಎಂಬುದು ಕಥೆಯನ್ನು ನಿರೂಪಿಸುವ ರೂಪವಾದರೆ ಕವನ ಅದರ ಸ್ವರೂಪವನ್ನು ಸೂಚಿಸುತ್ತದೆ.

ನವೋದಯ ಕಾಲದ ಆರಂಭದಲ್ಲಿ ಕಥನ ಕವನಗಳು ಗಟ್ಟಿಯಾದ ಕಥಾ ಹಂದರ ಹೊಂದಿದ ರಚನೆಗಳಾಗಿವೆ. ಇಂತಹ ರಚನೆಗೆ ತೊಡಗಿದವರಲ್ಲಿ ಪಂಜೆಮಂಗೇಶರಾಯ, ಗೋವಿಂದ ಪೈ, ಮಾಸ್ತಿಯವರು ಪ್ರಮುಖರು. ನಂತರದಲ್ಲಿ ಕಾಣಿಸಿಕೊಂಡ ಕುವೆಂಪು, ಪು.ತಿ.ನ. ಮೊದಲಾದವರ ರಚನೆಗಳಲ್ಲಿ ಕಥೆಯ ಅಂಶ ಕಡಿಮೆಯಾಗಿ ಭಾವ ಅಭಿವ್ಯಕ್ತಿ ಹೆಚ್ಚಾಗಿರುವುದು ಕಾಣುತ್ತೇವೆ.

ನವೋದಯ ಕಾಲದ ಕಥನ ಕವನಗಳಲ್ಲಿ ಕರುಣೆ, ದೈವಭಕ್ತಿ, ಸತ್ಯ, ಪ್ರೀತಿ, ಸ್ವಾತಂತ್ರ್ಯ, ಸಮಾನತೆ, ಪ್ರಕೃತಿ ಪ್ರೇಮ ಮೊದಲಾದ ಮೌಲ್ಯಗಳು ಚಿತ್ರಣಗೊಂಡಿವೆ. ಕುವೆಂಪುರವರ ಕಥನ ಕವನಗಳಲ್ಲಿ ಭಾವವೇ ಪ್ರಧಾನವಾದುದು. ಕಥನ ಕವನಗಳಲ್ಲಿ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ವಸ್ತು ವೈವಿದ್ಯವಿದ್ದರೂ ಕುವೆಂಪು ತಮ್ಮ ಅಘಾದ ಕಲ್ಪನಾ ಶಕ್ತಿಯಿಂದ ಸನ್ನಿವೇಶವನ್ನು ಓದುಗರ ಕಣ್ಣಿಗೆ ಕಟ್ಟುವಂತೆ ಮಾಡಿದ್ದಾರೆ. ಮಲೇನಾಡಿನ ಪ್ರಕೃತಿ ಮತ್ತು ಜನಜೀವನದ ಅನೇಕ ನೋಟಗಳನ್ನು ಅವರ ಕಥನ ಕವನಗಳು ಚಿತ್ರಿಸುತ್ತವೆ. ಕಥನಕ್ಕೆ ಕಾವ್ಯದ ಲೇಪನ ನೀಡಿರುವುದು, ಪದ್ಯರೂಪ ವಸ್ತುವಿಗೆ ಅನಿವಾರ್ಯವೆಂಬುದು ಕುವೆಂಪುರವರ ಕಥನ ಕವನಗಳ ಮುಖ್ಯ ಲಕ್ಷಣವೆನಿಸುತ್ತದೆ. 'ಕಿಂದಗಿ ಜೋಗಿ' ಕಥನ ಕವನ ನಿದರ್ಶನವಾಗಿ ಹೆಸರಿಸಬಹುದು. ಸಮಾಜದ ಜನಸಾಮಾನ್ಯರ ಜನಜೀವನವನ್ನು ವಸ್ತುವಾಗಿ ಸ್ವೀಕರಿಸಿದ ಕಥನ ಕವನಗಳು ಹೆಚ್ಚಾಗಿ ಮೂಡಿಬಂದಿವೆ. ಪಂಜೆಯವರ 'ಡೊಂಬರಚೆನ್ನೆ' ಸಾಕ್ಷಿ ಪ್ರಜ್ಞೆಯು ನಿರೂಪಣೆಯೊಂದಿಗೆ ಬೆರಗು ಮೂಡಿಸುತ್ತದೆ.

ಒಂದು ಘಟನೆಯನ್ನು ಕಾಲನುಕ್ರಮದಲ್ಲಿ ಹೇಳುತ್ತಾ ಮುಂದುವರೆಯುವ ಲೇಖಕ ತನಗರಿವಿಲ್ಲದೇ ಕಥನಕ್ಕೆ ತೊಡಗುತ್ತಾನೆ. ಇಲ್ಲಿ ಕಾಲ, ದೇಶ, ನಾಮಗಳನ್ನು ನಿರ್ದಿಷ್ಟವಾಗಿ ತಿಳಿಸುವ ಮೂಲಕ ಕಥನ ಕವನ ಅನಾವರಣಗೊಳ್ಳುತ್ತದೆ. ಉದಾಹರಣೆಯಾಗಿ ಕುವೆಂಪುರವರ 'ಕಿಂದರಿ ಜೋಗಿ' ಕಥನ ಕವನದ ಸ್ವರೂಪ ಗಮನಿಸಬಹುದು.

ತುಂಗಾ ತೀರದ ಬಲಗಡೆಯಲ್ಲಿ
ಹಿಂದಲ್ಲಿದ್ದುದು ಬೊಮ್ಮನಹಳ್ಳಿ
ಅಲ್ಲೇನಿಲಿಗಳ ಕಾಟವೆ ಕಾಟ

ಅಲ್ಲಿನ ಜನಗಳಿಗತಿಗೋಳಾಟ
ಇಲಿಗಳು ಬಡಿದವು ನಾಯಿಗಳ
ಇಲಿಗಳು ಕಡಿದವು ಬೆಕ್ಕುಗಳ
ಕೆಲವನು ಕೊಂದವು ಕೆಲವನು ತಿಂದವು
ಕೆಲವನು ಬೆದರಿಸಿ ಹಿಂಬಾಲಿಸಿದವು... !

'ಪದ್ಯರೂಪ ಮತ್ತು ಕಥನ ಧಾಟಿಯಲ್ಲಿ, ಕಥೆ ಮತ್ತು ಆಕರ್ಷಕವಾದ ಪಾತ್ರಗಳನ್ನು ಬಳಸಿ, ಜೀವನ ವಿನ್ಯಾಸವೊಂದನ್ನು ಭಾವತೀವ್ರತೆಯಲ್ಲಿ ನಿರೂಪಿಸಲಾಗುವ ಕಾವ್ಯಾತ್ಮಕ ಅಭಿವ್ಯಕ್ತಿ ಕಥನ ಕವನ ಎನಿಸಿಕೊಳ್ಳುತ್ತದೆ'[೧೭]. ಕಾವ್ಯದ ಒಂದು ಪ್ರಭೇದವಾದ 'ಕಥನ ಕವನ'ವನ್ನು ಕನ್ನಡದಲ್ಲಿ ಕಥನ ಕವಿತೆ, ಪದ್ಯಕತೆ, ನೀಳ್ಗವಿತೆ ಮೊದಲಾಗಿ ಕರೆಯಲಾಗುತ್ತದೆ. ಕಥನ ಎಂಬುದು ನಿರೂಪಣೆಯ ವಿಧಾನ, ಕವನ ಎಂಬುದು ಅದರ ಸ್ವರೂಪವನ್ನು ಸೂಚಿಸುತ್ತದೆ. ಕಥನ ಕವನ ಎಂಬುದು ಪದ್ಯದಲ್ಲಿ ಬರೆದ ಕಥೆ ಎಂದು ಸರಳವಾಗಿ ಹೇಳಬಹುದು. ಗದ್ಯದಲ್ಲಿ ಹೇಳಬಹುದಾದ ಕಥೆಯನ್ನೇ ಪದ್ಯೆದಲ್ಲೂ ಹೇಳುವ ವಿಧಾನ. ಮಾಸ್ತಿಯವರು ಕಥೆಯಲ್ಲಿ ಭಾವನೆ ಹೆಚ್ಚಾದಾಗ ಕಥನ ಕವನವನ್ನು, ಸಂಗತಿ ಹೆಚ್ಚಾದಾಗ ಸಣ್ಣ ಕಥೆಯನ್ನು ಬರೆದುದಾಗಿ ಅವರೇ ಹೇಳಿಕೊಂಡಿದ್ದಾರೆ. ಕಥನ ಕವನದ ಸ್ವರೂಪ ವಿಶಿಷ್ಟವಾದುದು. ನಿರೂಪಣೆ ಶೈಲಿ ಭಾವಗೀತೆಗಳಿಗೆ ಹತ್ತಿರವಾಗಿ ಅಲ್ಲಿ ಸುಂದರ ಕಥಾ ಹಂದರ ಸೃಷ್ಟಿಯಾಗುತ್ತದೆ. ಭಾವನೆಗಳ ಅಭಿವ್ಯಕ್ತಿಯಲ್ಲಿ ಬದಲಾವಣೆಯಾಗುತ್ತದೆ. ಕಥನ ಕವನ ದೀರ್ಘವಾಗಿರುತ್ತದೆ. ಕಥನ ಕವನದ ಬಗ್ಗೆ ಎಚ್. ಎಸ್. ವೆಂಕಟೇಶಮೂರ್ತಿಯವರು ಕೆಲವು ಲಕ್ಷಣಗಳನ್ನು ಗುರುತಿಸುತ್ತಾರೆ.

* ಪದ್ಯರೂಪದಲ್ಲಿ, ಕಥೆಯೊಂದನ್ನು, ಕಥನಾತ್ಮಕವಾಗಿ ನಿರೂಪಿಸಿದಾಗ ಕಥನ ಕವನ ರೂಪ ತಾಳುತ್ತದೆ.
* ಕಥನ ಕವನದಲ್ಲಿ ಘಟನೆಯೊಂದನ್ನು ಅಥವಾ ಅನೇಕ ಘಟನೆಗಳನ್ನು ಕಾಲಾನುಕ್ರಮಣಿಕೆಯಲ್ಲಿ ನಿರೂಪಿಸಲಾಗುತ್ತದೆ.
* ಗದ್ಯ ಕಥೆಯಲ್ಲಿ ಘಟನೆಗಳ ಸಂವಿಧಾನವೇ ಮುಖ್ಯವಾದರೆ, ಕಥನ ಕವನದಲ್ಲಿ ಘಟನೆಗಳ ಸಂವಿಧಾನದ ಜೊತೆಗೆ ಭಾಷೆಯ ಅನೇಕ ಸಾಧ್ಯತೆಗಳ ಸೂರೆಯೂ ಮುಖ್ಯವಾಗುತ್ತದೆ.
* ಕಥನ ಕವನದಲ್ಲಿ ಕಥೆಯು ಬದುಕಿನ ಅರ್ಥವನ್ನು ಶೋಧಿಸುವ ಒಂದು ಉಪಾಯವಾಗಿ ಬಳಕೆಯಾಗುತ್ತದೆ.
* ಕಥನ ಕವನದಲ್ಲಿ ಕಾಲ, ದೇಶ, ನಾಮಗಳ ಅಧಿಕೃತತೆ ಸಾಮಾನ್ಯವಾಗಿ ಕಂಡುಬರುತ್ತದೆ.
* ಕಥನ ಕವನವು ವಿಸ್ತಾರ ಮತ್ತು ಹರಹಿನಲ್ಲಿ ಮಹಾಕಾವ್ಯ, ಖಂಡ ಕಾವ್ಯಗಳಿಗಿಂತ ಕಿರಿದಾದುದು. ಸ್ವರೂಪದಲ್ಲಿ ಹೆಚ್ಚು ಸರಳವಾದುದು.

* ಕಥನ ಕವನವು ವಸ್ತುನಿಷ್ಠ ಸ್ವರೂಪದ್ದಾದರೂ, ವ್ಯಕ್ತಿನಿಷ್ಠ ರಚನೆಗಳು ಅದರ ಕಕ್ಷೆಯಲ್ಲಿ ಬರಬಾರದೆಂದೇನಿಲ್ಲ.
* ಕಥನ ಕವನವು ವಿಶೇಷವಾಗಿ ಮನುಷ್ಯ ಕೇಂದ್ರಿತವಾದುದಾದರೂ ವಿಶ್ವದ ಎಲ್ಲ ಅಂಶಗಳನ್ನು ಮಾನವೀಯ ನೆಲೆಯಲ್ಲಿ ಅದು ತನ್ನ ತೆಕ್ಕೆಗೆ ತೆಗೆದುಕೊಳ್ಳಬಲ್ಲದು.
* ಸಾಹಿತ್ಯದ ಇತರ ಪ್ರಕಾರಗಳಂತೆಯೇ ಬದುಕಿನ ಸಾಧ್ಯತೆಗಳ ಶೋಧನೆಯೇ ಕಥನ ಕವನದ ಮುಖ್ಯ ಗುರಿಯಾಗಿದೆ.
* ಕಥನ ಕವನದಲ್ಲಿ ಕಥೆಗಿಂತ, ಕಥನ ಧಾಟಿಯೇ ಮುಖ್ಯವಾದುದು[೧೮].

೪.೩ ಕಥನ / ಕಥೆ :

ಕನ್ನಡ ಮಕ್ಕಳ ಸಾಹಿತ್ಯದ ಬೇರು ಜಾನಪದದಲ್ಲಿ ಕಾಣುತ್ತೇವೆ. ಜಾನಪದದಲ್ಲಿಯ ರಾಜಕುಮಾರ–ರಾಜಕುಮಾರಿಯರ ಕಥೆಗಳು, ಪೌರಾಣಿಕ, ಐತಿಹಾಸಿಕ ಕಥೆಗಳು, ಪಂಚತಂತ್ರದ ಅನೇಕ ಕಥೆಗಳು, ಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳು ತಲ–ತಲಾಂತರದಿಂದ ಬಾಯಿಯಿಂದ ಬಾಯಿಗೆ ಬೆಳೆದು ಬಂದಿವೆ. ಮಗು ತೊಟ್ಟಿಲಲ್ಲಿ ಇರುವಾಗ ತಾಯಿಯ ಲಾಲಿ ಹಾಡು, ಜೋಗುಳಿಂದ ಸಂತಸಗೊಳ್ಳುವುದು ಸಹಜ. ತಾಯಿಯ ಮಂಜುಳ ಧ್ವನಿ ಸಂತೋಷದಲ್ಲಿ ನಲಿಯುವಂತೆ ಮಾಡುತ್ತದೆ. ಮುಂದೆ ಬೆಳವಣಿಗೆಯ ಹಂತದ ಮಗುವಿಗೆ ಅಜ್ಜ–ಅಜ್ಜರು ಕಥೆಗಳನ್ನು ಹೇಳಿ ಮನವನ್ನು ತಣಿಸುವ ಪ್ರಸಂಗ, ಮಕ್ಕಳಲ್ಲಿ ಲವಲವಿಕೆಯನ್ನು ಮೂಡಿಸುತ್ತವೆ. ಮಕ್ಕಳಿಗೆ ಮೌಲ್ಯಗಳನ್ನು ಬೆಳೆಸುವಲ್ಲಿ ಕಥೆಗಳು ಬಹುಮುಖ್ಯ ಪಾತ್ರವಹಿಸುತ್ತವೆ. ಅವರು ಜೀವನ ಮೌಲ್ಯಗಳನ್ನು ತಿಳಿದುಕೊಳ್ಳಲು ಕೆಲವು ನೀತಿ ಪ್ರಧಾನ ಕಥೆಗಳು ಮಗುವಿನ ಮೇಲೆ ಪ್ರಭಾವ ಬೀರುವುದು ಹೆಚ್ಚು. ಕಥೆಗಳಿಂದ ಉತ್ತಮ ಪರಿಸರವನ್ನು ಮಕ್ಕಳಿಗೆ ಒದಗಿಸಲು ಸಾಧ್ಯವಿದೆ. ಕಥೆಗಳಲ್ಲಿ ನೀತಿಯನ್ನು ಬೋಧಿಸಬಾರದು, ರೂಪಿಸಬೇಕು. ಇದರಿಂದಾಗಿ ಮಕ್ಕಳು ತಮ್ಮ ಸುತ್ತಲಿನ ಜನಜೀವನಕ್ಕೆ ಸಂಬಂಧಿಸಿದ ಕಥೆಗಳಿಗೆ ಸ್ಪಂದಿಸುವರು. ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ಸಾಹಿತ್ಯವನ್ನು ಕುರಿತಾಗಿ ವಿಚಾರ ಮಾಡಿದಾಗ ಕಥೆಗಳು ತುಂಬಾ ಅವಶ್ಯಕ. ಕಥೆ ಹೇಳುವುದಾಗಲಿ, ಕೇಳುವುದಾಗಲಿ ಮನರಂಜನೆಗೆ ಅಲ್ಲ. ಸಮಯ ಕಳೆಯಲು ಅಲ್ಲ, ಅದು ಬಹುಕಾಲ ಮನದಲ್ಲಿ ಅಳಿಯದೇ ಉಳಿಸುವುದು ಕಥೆಯ ಮುಖ್ಯ ಉದ್ದೇಶವೆನ್ನಬಹುದು. 'ಮಕ್ಕಳ ಮನಸ್ಸು ವಿಕಾರಗೊಳ್ಳದೆ ದುರ್ಮಾರ್ಗದಲ್ಲಿ ಹರಿದಾಡದಂತೆ ಅವರನ್ನು ಸುಶೀಲರೂ, ಸದಾಚಾರಿಗಳೂ, ಸದ್ಗುಣಶೀಲರಾಗುವಂತೆ ಮಾಡುವುದೇ ಕಥೆಗಳ ಉದ್ದೇಶವೆಂದು ಹಲವರು ಅಭಿಪ್ರಾಯ'.

ಅಜ್ಜ–ಅಜ್ಜಿಯರ ಕಥೆಗಳು ಮಕ್ಕಳಲ್ಲಿ ಸ್ನೇಹ, ವಾತ್ಸಲ್ಯ, ಆದರ್ಶ, ಗೌರವ ಮೊದಲಾದ ಗುಣಗಳನ್ನು ಕಟ್ಟಿಕೊಡುತ್ತವೆ. ಚಿಕ್ಕಂದಿನಲ್ಲಿ ಸುಂದರ ವ್ಯಕ್ತಿತ್ವ ರೂಪಿಸುತ್ತವೆ. ಯಾವುದೇ ಕಥೆಗೆ ಒಂದು ಹಿನ್ನೆಲೆ, ಘಟನೆ, ಪಾತ್ರಗಳು, ಆತಂಕ, ಪರಿಹಾರ ಮುಂತಾದವು

ಕಥೆಗೆ ಅತೀ ಅವಶ್ಯಕ. ಕಥೆಗಳು ನಿತ್ಯ ಬದುಕಿಗೆ ಪೂಕರವಾಗಿದ್ದರೆ ಯಶಸ್ವಿ ಕಥೆ ಎನಿಸುತ್ತದೆ. ಕಥೆಗಳಲ್ಲಿ ಪೌರಾಣಿಕ ಕಥೆ, ಐತಿಹಾಸಿಕ ಕಥೆ, ಜಾನಪದ ಕಥೆ, ವೈಜ್ಞಾನಿಕ ಕಥೆ, ಪಕ್ಷಿ-ಪ್ರಾಣಿಗಳ ಕಥೆ, ಸಾಹಸಭರಿತ ಕಥೆ, ಸಾಮಾಜಿಕ ಕಥೆಗಳು, ಕಿನ್ನರರ ಕಥೆಗಳು ಎಂದು ವಿಭಾಗಿಸಿ ಕಥೆಗಳನ್ನು ಗಮನಿಸಬಹುದು. ಮಕ್ಕಳು ಇಂಥ ಪ್ರಕಾರಗಳಿಗೆ ಮನಸೋಲುವುದು ಖಂಡಿತ. ನಮ್ಮ ಮಕ್ಕಳ ಲೋಕದ ದಿಗ್ಗಜರು, ಕವಿಗಳು ಮಕ್ಕಳಿಗಾಗಿ ಕಥೆಗಳ ಕಣಜವನ್ನೇ ನಿರ್ಮಿಸಿದ್ದಾರೆ. ಅವರಲ್ಲಿ ಮಕ್ಕಳ ಕಥಾ ಸಾಹಿತ್ಯದಲ್ಲಿ ಮೊದಲು ಬರೆಯಲು ಶುರು ಮಾಡಿದವರಲ್ಲಿ ಎಂ. ಎಸ್. ಪುಟ್ಟಣ್ಣ, ಸೋಮಪ್ಪ ಕುಲಕರ್ಣಿ, ಎಂ. ಎನ್. ಕಾಮತ್, ಪಂಜೆಮಂಗೇಶರಾಯರು, ಹೊಯ್ಸಳ, ದೇವುಡು, ನರಸಿಂಹ ಶಾಸ್ತ್ರಿಗಳು, ಜಿ. ಪಿ. ರಾಜರತ್ನಂ. ಮೇವುಂಡಿ ಮಲ್ಲಾರಿ, ಬೆಟಗೇರಿ ಕೃಷ್ಣಶರ್ಮ ಮೊದಲಾದವರು ಮಕ್ಕಳಿಗಾಗಿ ಕಥೆಗಳನ್ನು ನಿರ್ಮಿಸತೊಡಗಿದವರು. ಪುರಾಣ, ಇತಿಹಾಸ, ಕಾವ್ಯಗಳಿಂದ ಪ್ರಭಾವಿತರಾದ ಎಂ. ಎಸ್. ಪುಟ್ಟಣ್ಣನವರು 'ನೀತಿ ಚಿಂತಾಮಣಿ' ಎಂಬ ಕಥಾ ಸಂಕಲನವನ್ನು ರಚಿಸಿದವರು. ಹೆಸರೇ ಸೂಚಿಸುವಂತೆ ಮಕ್ಕಳಲ್ಲಿ ನೀತಿಯ, ನೈತಿಕತೆಯನ್ನು ಬೆಳೆಸುವ ಕೃತಿ ಇದಾಗಿದೆ. ಸುಮಾರು ೧೦೦-೧೫೦ ಕಥೆಗಳ ಸಂಗ್ರಹ 'ನೀತಿ ಚಿಂತಾಮಣಿ'.

ಎಂ. ಎನ್. ಕಾಮತ್‌ರು ಪೌರಾಣಿಕ ಸನ್ನಿವೇಶಗಳನ್ನು ತೆಗೆದುಕೊಂಡು ಮಕ್ಕಳಿಗೆ ರುಚಿಸುವ ರೀತಿಯಲ್ಲಿ ಕಥೆಗಳನ್ನು ರಚಿಸಿದ್ದಾರೆ. ಪಂಜೆಮಂಗೇಶರಾಯರು ಮಕ್ಕಳಿಗಾಗಿ 'ಅಜ್ಜಿ ಸಾಕಿದ ಮಗು' ಮೆಣಸಿನ ಕಾಳಪ್ಪ, ಮೂರು ಕರಡಿಗಳು ಮೊದಲಾದ ಕಥೆಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಮೇವುಂಡಿ ಮಲ್ಲಾರಿ ಅವರು ಪಂಚತಂತ್ರಗಳಿಂದ ಆಯ್ದುಕೊಂಡ ವಸ್ತುವನ್ನು ಸ್ವತಂತ್ರವಾದ ಕಥೆಗಳೆನ್ನುವಂತೆ ರಚಿಸಿದ್ದಾರೆ. 'ನರಿಯತಂತ್ರ', 'ಗೆಳೆಯ', 'ಹೊಟ್ಟೆಡುಮ್ಮ', 'ಓತಿಕಾಟದ ತಂಗಿ' ಮುಂತಾದವು ಉತ್ತಮ ಮಕ್ಕಳ ಕಥಾ ಸಂಕಲನಗಳಾಗಿವೆ. ಶಿಕ್ಷಕರಾಗಿದ್ದ ಪಳಕಳ ಸೀತಾರಾಮಭಟ್ಟರು ಮಕ್ಕಳಿಗಾಗಿ ಬೆಕ್ಕಿನ ಮರಿ ಹಕ್ಕಯಾಯಿತೆ? ಕುಣಿ-ಕುಣಿದಾಡಿದ ಅಳಿಲಣ್ಣ, ಚಿಮಣಿ ಚೋಮ ಮತ್ತು ಬೆಳೂರಿನ ದೊರೆ ಮೊದಲಾದ ಸುಂದರ ಸಂಕಲನಗಳನ್ನು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ್ದಾರೆ ಸಿಸು ಸಂಗಮೇಶರವರು ಮಕ್ಕಳ ಸಾಹಿತ್ಯದ ಬಗ್ಗೆ ವಿಶೇಷ ಕಾಳಜಿ ಹೊಂದಿದವರು, ಪರಿಶ್ರಮಪಟ್ಟವರು, ಅವರ ಮಕ್ಕಳ ಕಥೆಗಳಲ್ಲಿ 'ನರಿಯ ಫಜೀತಿ', 'ಮಂಕುಮರಿ', 'ಯಾರು ಜಾಣರು', 'ನನ್ನ ಮನೆ', 'ಮೊಲದ ಮೂಗು ಮೊಂಡಾಯಿ' ಮುಂತಾದವು ಪ್ರಸಿದ್ಧವಾಗಿವೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ, ಪ್ರಾಥಮಿಕ ಶಾಲೆಯ ಶಿಕ್ಷಕರು ಹೆಚ್ಚಾಗಿ ಮಕ್ಕಳ ಕಥೆಗಳನ್ನು ಬರೆಯುವುದಲ್ಲಿ ಪ್ರಮುಖವಾಗಿ ಕಂಡುಬರುತ್ತಾರೆ. ಕಾರಣ ಮಕ್ಕಳಿಗೂ ಅವರಿಗೂ ಇರುವ ನೇರ ಒಡನಾಟದ ಸಂಬಂಧ ಪ್ರೇರಣೆಯಾಗಿರಬೇಕು ಎನಿಸುತ್ತದೆ. ಹೀಗಾಗಿ ಪ್ರಾಥಮಿಕ ಶಾಲಾ ಶಿಕ್ಷಕರು ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತವರಾಗಿರುವುದರಿಂದ ಮಕ್ಕಳ ಮನೋವಿಜ್ಞಾನಕ್ಕೆ ಅನುಗುಣವಾಗಿ, ಮನೋಭಾವನೆಯ ಇಂಗಿತವನ್ನು ಅರಿತುಕೊಂಡು ಮಕ್ಕಳ ಕಥೆಗಳನ್ನು ರಚಿಸಿದ್ದಾರೆ, ರಚಿಸುತ್ತಲಿದ್ದಾರೆ.

'ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತ ರಸವಿರಬೇಕು. ಮಕ್ಕಳಲ್ಲಿ ಕಲ್ಪನಾಶಕ್ತಿ ಹೆಚ್ಚು, ಅದನ್ನು ಹತೋಟಿಯಲ್ಲಿಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಕಥೆಗಳಲ್ಲಿ ಅದ್ಭುತವಿದ್ದರೆ ಅವರ ಕಲ್ಪನಾಶಕ್ತಿಯ ಓಡಾಟಕ್ಕೆ ಅವಕಾಶವಾಗುತ್ತದೆ. ಕಾಲು ತಾಗಿದರೆ ಬಾನಿಗೇರುವ, ಜಮಖಾನ, ಕಿವಿ ತಿರುಗಿದರೆ ನೀರೊಳಗೆ ಹೋಗುವ ಮಾಟದ ಕುದುರೆ, ದೀಪ ಉಜ್ಜಿದರೆ ಕಣ್ಮುಂದೆ ಬರುವ ಭೂತ ಮುಂತಾದ ಕಥೆಗಳು ಅವುಗಳೊಳಗಿನ ಅದ್ಭುತಸರದಿಂದ ಮಕ್ಕಳಿಗೆ ಪ್ರಿಯವಾಗುತ್ತವೆ'[೧೯] ಎಂದು ಪಂಜೆಯವರು ಮಕ್ಕಳ ಕಥೆಗಳ ಕುರಿತಾಗಿ ಅಭಿಪ್ರಾಯ ವ್ಯಕ್ತಗೊಳಿಸುತ್ತಾರೆ.

'ಈಗಿನ ಲೇಖಕರು ಬದಲಾಗುತ್ತಿರುವ ಕಾಲ, ಜೀವನ ವಿಧಾನ, ಬದುಕಿನ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ಪಡಿಮೂಡಿಸಲು ಯತ್ನಿಸಬೇಕು. ಮಕ್ಕಳ ಕಥೆ ಎಂದ ಕೂಡಲೆ 'ಒಂದಾನೊಂದು ಕಾಲದಲ್ಲಿ' ಎಂಬ ರೂಢಿಯ ಒಕ್ಕಣೆಯನ್ನು ಬಿಟ್ಟು ಹೊಸ-ಹೊಸ ಆವಿಷ್ಕಾರಗಳಿಂದ ಬದಲಾಗುತ್ತಿರುವ ಜೀವನ ವಿಧಾನ, ಪ್ರಪಂಚದ ಆಗು-ಹೋಗುಗಳು, ಬೆಳೆಯುತ್ತಿರುವ ವೈಜ್ಞಾನಿಕ ತಾಂತ್ರಿಕ ಜಗತ್ತು ಇವುಗಳನ್ನೆಲ್ಲ ಹೊಂದಿಕೊಂಡು ಮನೋಧರ್ಮದ ಕಥೆಗಳು ಬರಬೇಕು'[೨೦] ಎಂಬ ಅಭಿಪ್ರಾಯವನ್ನು ನಿರೂಪಮಾ ಅವರು ಮಕ್ಕಳ ಸಾಹಿತ್ಯ ಬರಹಗಾರರಿಗೆ ಕಿವಿಮಾತನ್ನು ಹೇಳಿದ್ದಾರೆ.

ಪೌರಾಣಿಕ ಕಥೆಗಳು :

'ಹಿಂದಣ ಹೆಜ್ಜೆಯನು ಅರಿಯದಿರ್ದಡೆ ಮುಂದಣ ಹೆಜ್ಜೆಯನರಿಯಲು ಬಾರದು' ಎಂಬ ವಚನಕಾರರ ಮಾತಿನಂತೆ ನಮ್ಮ ಮಕ್ಕಳಿಗೆ ಪುರಾಣಗಳಿಂದ, ಜಾತಕ ಕಥೆಗಳಿಂದ, ಉತ್ತಮ ಗ್ರಂಥಗಳಿಂದ ಪೂರ್ವಜರ ಸಮಾಜ, ಸಂಸ್ಕೃತಿಯ, ಪರಿಸರದ, ಆಗು-ಹೋಗುಗಳ ಪರಿಚಯವಾಗುತ್ತದೆ. ಮಹಾಪುರುಷರ ಜೀವನದ ಅನುಭವಗಳು ಮಕ್ಕಳ ಮೇಲೆ ಪರಿಣಾಮ ಬೀರಲು ಸಾಧ್ಯವಿದೆ. ಅವರ ದಿವ್ಯತೆ, ಭಯಭಕ್ತಿ, ಗೌರವಾದವರಗಳು ಮೊದಲಾದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಕಥೆಗಳನ್ನು ಸರಳ ಭಾಷೆ ಹಾಗೂ ಸುಂದರ ಶೈಲಿಯಲ್ಲಿ ನಿರೂಪಿಸಿದಾಗ ಮಕ್ಕಳು ಆನಂದಿಸುವುದು ಸಹಜ. ಕಥೆಗಳು ಭಯಾನಕವಾಗಿರದೆ ನೀತಿ ಹಾಗೂ ಧೈರ್ಯ ತುಂಬುವ ವಸ್ತುವನ್ನಾಧರಿಸಿದ್ದರೆ ಅವು ಮಕ್ಕಳ ಮನ ತಣಿಸುತ್ತವೆ, ಜಾಗ್ರತಗೊಳಿಸುತ್ತವೆ.

ಐತಿಹಾಸಿಕ ಕಥೆಗಳು :

ಐತಿಹಾಸಿಕ ಕಥೆಗಳಿಗೆ ಇತಿಹಾಸದ ಪುಟಗಳಲ್ಲಿ ಹುದುಗಿರುವ ವಿಷಯ-ವಸ್ತುಗಳು ಜೀವ ತುಂಬುತ್ತವೆ. ಇಲ್ಲಿ ನಮ್ಮ ಪರಂಪರೆ, ನಾಡು-ನುಡಿಯ ಅಭಿಮಾನ, ದೇಶಭಕ್ತಿ, ಭಾವೈಕ್ಯತೆ, ಸಂಸ್ಕೃತಿಯನ್ನು ಬಿಂಬಿಸುವ ಮೊದಲಾದ ಮೌಲ್ಯಗಳನ್ನು ತುಂಬುವ

ಸಂಗತಿಗಳನ್ನು ಪರಿಚಯ ಮಾಡುತ್ತವೆ. ಕಲ್ಪನೆಗೆ ಈ ಕಥೆಗಳಲ್ಲಿ ಹೆಚ್ಚು ಅವಕಾಶವಿರುವುದಿಲ್ಲ. ಸತ್ಯ ಸಂಗತಿಗಳು ಹೆಚ್ಚು ವ್ಯಕ್ತಗೊಳ್ಳುತ್ತವೆ. ಚಾರಿತ್ರಿಕ ಅಂಶಗಳನ್ನು ಒಳಗೊಂಡಿರುವ ಕಥೆಗಳು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ. ಇದು ಸತ್ಯ. ಯಾಕೆಂದರೆ ಇತಿಹಾಸದ ಪಾಠಗಳು ಸುಲಭವಾಗಿರುವುದು ಒಂದಾದರೆ ಆ ಚಿತ್ರಣಗಳು ಮಕ್ಕಳಲ್ಲಿ ರೋಮಾಂಚನ ಮೂಡಿಸುತ್ತವೆ. ಮಕ್ಕಳಲ್ಲಿ ಸದ್ಗುಣ, ಸದ್ಭಾವನೆಗಳು ಹುಟ್ಟಿಕೊಳ್ಳಲು ಅನುಕೂಲಕರ. ಈ ದಿಸೆಯಲ್ಲಿ ರಸಿಕ ಪುತ್ತಿಗೆ, ಸಂಪಟೂರು ವಿಶ್ವನಾಥ ಪ. ರಾಮಕೃಷ್ಣಶಾಸ್ತ್ರಿ ಇನ್ನೂ ಹಲವಾರು ಕೃಷಿ ಮಾಡಿದ್ದಾರೆ.

ಜಾನಪದ ಕಥೆಗಳು :

ಗತಕಾಲದ ಜಾನಪದ ಜನಜೀವನವನ್ನು ಪರಿಚಯಿಸುವುದೇ ಜನಪದ ಕಥೆಗಳ ಉದ್ದೇಶ ಎಂದು ಹೇಳಬಹುದು. ಈ ಕಥೆಗಳು ಪ್ರತಿಯೊಂದು ನಾಡಿನಲ್ಲಿ, ಪ್ರತಿಯೊಂದು ಪ್ರದೇಶದಲ್ಲಿ ಬಳಕೆಯಲ್ಲಿವೆ. ಜನಪದ ಕಥೆಗಳು ಮಕ್ಕಳಲ್ಲಿ ರೋಮಾಂಚನ ಮೂಡಿಸುವ ಗುಣಗಳಿವೆ. ಅದ್ಭುತ, ರಮ್ಯ ಇದರ ನೆಲೆಗಳು. ಗತಕಾಲದ ಆಚರಣೆಗಳು, ರೀತಿ–ನೀತಿಗಳು, ಹಬ್ಬ–ಹರಿದಿನಗಳು, ಗ್ರಾಮೀಣ ಬದುಕಿನ ಇಡಿಯಾದ ಚಿತ್ರಣ ಪರಿಚಯ ಮಾಡಿಕೊಡುವುದು. ಇಲ್ಲಿ ಕಂಡುಬರುವ ನೀತಿ, ಸಾಹಸ, ಸಹಾಯ, ಸಹಕಾರ ಗುಣಗಳು ಜಾನಪದ ಕಥೆಗಳಲ್ಲಿ ಅಭಿವ್ಯಕ್ತಗೊಳ್ಳುತ್ತವೆ.

ವೈಜ್ಞಾನಿಕ ಕಥೆಗಳು :

ಮಗುವಿನಲ್ಲಿ ವೈಚಾರಿಕತೆಯ ಮನೋಭಾವ ಬೆಳೆಯಲು ವೈಜ್ಞಾನಿಕ ಕಥೆಗಳು ಸಹಕಾರಿಯಾಗಿವೆ. ಇಂಥ ಕಥೆಗಳು ಮೂಢನಂಬಿಕೆ, ಕಂದಾಚಾರ, ಡಾಂಭಿಕತೆಯನ್ನು ತೊಲಗಿಸುತ್ತವೆ. ಜೊತೆಗೆ ಮಕ್ಕಳಲ್ಲಿ ವಿಚಾರಕ್ಕೆ ಆಸ್ಪದ ನೀಡಿ, ಕಲ್ಪನೆಯ ಶಕ್ತಿ ಹೆಚ್ಚಿಸಿ ಅವರನ್ನು ಜಾಗೃತರನ್ನಾಗಿಸುತ್ತವೆ. ಇಂಥ ಕಥೆಗಳನ್ನು ಮಕ್ಕಳಿಗಾಗಿ ರಚಿಸಿದವರಲ್ಲಿ ಶಿವರಾಮ ಕಾರಂತರು, ಪೂರ್ಣಚಂದ್ರ ತೇಜಸ್ವಿ, ರಾಜಶೇಖರ ಭೂಸನೂರ ಮಠ, ಎನ್. ವಾಸುದೇವ ಅವರು ಪ್ರಮುಖವಾಗಿ ಕಂಡುಬರುತ್ತಾರೆ.

ಪ್ರಾಣಿ ಪಕ್ಷಿಗಳ ಕಥೆಗಳು :

ಮಕ್ಕಳ ಕಥೆಗಳಲ್ಲಿ ಪ್ರಾಣಿಗಳು ಮತ್ತು ಪಕ್ಷಿಗಳು ಪಾತ್ರಗಳಾಗಿ ಇರುವುದರಿಂದ ಕಥೆಗೆ ಮೆರುಗು ಹೆಚ್ಚುತ್ತದಲ್ಲದೆ ಮಕ್ಕಳು ಕಥೆಯಲ್ಲಿ ಆಸಕ್ತಿಯಿಂದ ತಲ್ಲೀನಗೊಳ್ಳುವರು. ಮಾನವನ ಬದುಕಿನ ಸುಪ್ತವಾದ ಸಂಗತಿಗಳನ್ನು ಹೊರಹಾಕಲು, ಚೈತನ್ಯದಾಯಕ ಮನಸ್ಸು ನಿರ್ಮಾಣಗೊಳ್ಳಲು, ನೀತಿಯ ಹಂದರವನ್ನು ಹೆಣೆಯಲು ಪಕ್ಷಿ–ಪ್ರಾಣಿಗಳು ಕಥೆಯಲ್ಲಿರುವುದು ಅವಶ್ಯಕ. ಪಂಚತಂತ್ರದ ಕಥೆಗಳಲ್ಲಿ ಹಿತೋಪದೇಶದ ಕಥೆಗಳಲ್ಲಿ ಪಕ್ಷಿ–ಪ್ರಾಣಿಗಳೇ ಪ್ರಧಾನವಾಗಿ ಕಾಣಬಹುದು. ಮಕ್ಕಳು ಪ್ರಾಣಿಗಳು ಮಾತನಾಡುತ್ತವೆ

ಎಂದರೆ ನಂಬುತ್ತವೆ. ಕಲ್ಪನಾ ಶಕ್ತಿಯ ಬೆಳವಣಿಗೆ, ಕುತೂಹಲದ ಕೆರಳಿಕೆ, ಬುದ್ಧಿಯ ಚಿಗುರುವಿಕೆ, ಸಾಹಸ ಪ್ರವೃತ್ತಿ, ಅನುಕಂಪ, ಕರುಣೆ, ಸಹಕಾರ, ಪರೋಪಕಾರ ಮೊದಲಾದ ಗುಣಗಳು ಪಕ್ಷಿ–ಪ್ರಾಣಿಗಳಿಂದ ಅರಿತುಕೊಳ್ಳಬಹುದು. ಈ ಪಕ್ಷಿ–ಪ್ರಾಣಿಗಳ ಕಥೆಗಳನ್ನುಬಲು ಸುಂದರವಾಗಿ ಹೆಣೆದವರು ಕುವೆಂಪು, ಹೊಯ್ಸಳ, ಟಿ. ಎಸ್. ನಾಗರಾಜಶೆಟ್ಟಿ, ಚಂದ್ರಕಾಂತ ಕರದಳ್ಳಿ, ರಸಿಕ ಪುತ್ತಿಗೆ ಮೊದಲಾದವರು.

ಸಾಹಸಮಯ ಕಥೆಗಳು :

ಮಕ್ಕಳಲ್ಲಿ ಧೈರ್ಯ, ಆತ್ಮಸ್ಥೈರ್ಯ, ಸಾಹಸ ಮನೋಭಾವ ತುಂಬಲು ಇಂಥ ವರ್ಣನೆಗಳಿಂದ ಕೂಡಿದ ಕಥೆಗಳಿಂದ ಸಾಧ್ಯ. ಜೀವನದ ಹಾದಿಯಲ್ಲಿ ಅನೇಕ ಆಪತ್ತುಗಳು ಬಂದರೂ ಎದುರಿಸಿ ಮುನ್ನಡೆಯಲು ಈ ಕಥೆಗಳು ಪ್ರೇರಣೆ ನೀಡುತ್ತವೆ. ಕಠಿಣ ಕೆಲಸವನ್ನು ಬಲು ಸರಳವಾಗಿ ಪೂರೈಸುವ ಮನೋಭಾವ ಮೂಡುತ್ತದೆ. ಈ ಪ್ರಕಾರದ ಕಥೆಗಳನ್ನು ರಚಿಸಿದವರಲ್ಲಿ ನಾ. ಡಿಸೋಜ, ಸಿಸು ಸಂಗಮೇಶ, ರಸಿಕಪುತ್ತಿಗೆ ಮೊದಲಾದವರು ಪ್ರಮುಖರೆನಿಸುವರು.

ಸಾಮಾಜಿಕ ಕಥೆಗಳು :

ಈ ಹೊತ್ತಿನ ಸಂದರ್ಭಕ್ಕೆ ತಕ್ಕಹಾಗೆ, ಅನ್ವಯಿಸುವ ಸಂಗತಿಗಳನ್ನು ಮಕ್ಕಳಿಗೆ ತಿಳಿಯಪಡಿಸುವ ಉದ್ದೇಶ ಹೊಂದಿರುವ ಕಥೆಗಳೇ ಸಾಮಾಜಿಕ ಕಥೆಗಳು. ಸಮಾಜದ ಪ್ರತಿಯೊಂದು ಸಂದರ್ಭದಲ್ಲಿ ಮಗು, ತಂದೆ, ತಾಯಿ, ಬಂಧುಗಳು, ಪರಿಸರ, ನಾಡು–ನುಡಿ ಮುಂತಾದವುಗಳ ಬಾಂಧವ್ಯದ ಅರಿವನ್ನು ಮೂಡುವಂತೆ ಮಾಡುತ್ತವೆ ಈ ಕಥೆಗಳು. ಮನುಷ್ಯನ ಸಹವಾಸ ಮತ್ತು ವಾತಾವರಣದ ಪ್ರಭಾವ ಇವು ವ್ಯಕ್ತಿಯ ಸ್ವಭಾವವನ್ನು ಹೇಗೆ ಬದಲಿಸುತ್ತವೆ ಎಂಬುದು, ಜನಸಂಖ್ಯೆಯ ಏರಿಳಿತ, ಜನರ ವಾಸ, ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋಗಲು ಕಾರಣ, ಆ ಸ್ಥಳಗಳ ವೈಶಿಷ್ಟ್ಯ, ಸಾಮಾಜಿಕ ವ್ಯವಸ್ಥೆಯ ಕುಟುಂಬ, ಶಾಲೆ, ಸಂಘ–ಸಂಸ್ಥೆಗಳು, ಕಾರ್ಖಾನೆಗಳ ಉದ್ಯೋಗ ಕೇಂದ್ರಗಳಲ್ಲಿ ಮಾನವನ ನಡತೆ ಹೇಗೆ ಪ್ರಭಾವಿಸುತ್ತದೆ ಎಂಬುದು ಸಾಮಾಜಿಕ ಕಥೆಗಳ ಮೂಲ ಕೇಂದ್ರವಾಗಿದೆ.

ಕಿನ್ನರ ಲೋಕದ ಕಥೆಗಳು :

ಭೂತ ಪ್ರೇತಗಳ, ಯಕ್ಷ–ಯಕ್ಷಣಿಯರ, ದೇವತೆಗಳ ಕಥೆಗಳು ಕಿನ್ನರರ ಕಥೆಗಳಾಗಿವೆ. ಅತಿಮಾನುಷ ಶಕ್ತಿಯ ಪ್ರಳಾಪ, ಅಸಾಧ್ಯ ಘಟನೆಗಳು, ಮೈ ರೋಮಾಂಚನಗೊಳಿಸುವ ಪ್ರಸಂಗಗಳು, ಚಮತ್ಕಾರಗಳು, ಮಂತ್ರ–ಮಾಟಗಳು ಮುಂತಾದವು ಕಿನ್ನರ ಕಥೆಯ ವಸ್ತುಗಳು, ಈ ಕಥೆಗಳು ಮಕ್ಕಳಲ್ಲಿ ಕುತೂಹಲ ಕೆರಳಿಸುತ್ತವೆ. ಮಕ್ಕಳಿಗೆ ಕೇವಲ ಮನರಂಜನೆ ನೀಡುವ ಮೋಜಿನ ಕಥೆಗಳು ಬಲು ಇಷ್ಟ. ರಾಜ–ರಾಣಿಯರ ಕಥೆಗಳು, ರಾಕ್ಷಸರ ತೊಂದರೆಗಳು, ಕಷ್ಟಪಟ್ಟು ಹೊರಬರುವುದು ಮುಂತಾದವು ಮಕ್ಕಳ ಸಾಹಿತ್ಯದಲ್ಲಿ

ಅನಾವರಣಗೊಂಡಿವೆ. ಇಂದು ಮಕ್ಕಳ ಕಥೆಗಳಲ್ಲಿ ವೈವಿಧ್ಯಮಯ ಮಾನವೀಯ ಸಂಬಂಧ, ಸಹೃದಯತೆ, ಸಹಾಯ ಮುಂತಾದ ಅಂಶಗಳು ರಸಭರಿತವಾಗಿ ಮೂಡಿಬರುತ್ತಿರುವುದು ಉತ್ತಮ ಬೆಳವಣಿಗೆ ಎನ್ನಬಹುದು.

ಕಾಮಿಕ್ಸ ಕಥೆಗಳು :

ಹೆಸರೇ ಹೇಳುವಂತೆ ಇದು ಹಾಸ್ಯ ಪ್ರಧಾನವಾದುದು. ಮನರಂಜನೆಯೇ ಮುಖ್ಯ ಗುರಿ. ಸಾಹಿತ್ಯಕ್ಕೆ ಇಲ್ಲಿ ಅವಕಾಶವಿಲ್ಲ. ಕೇವಲ ಚಿತ್ರಗಳ ಓಡಾಟವಿದೆ. ಇಂಥ ಕಥೆಗಳನ್ನು ದೂರದರ್ಶನದಲ್ಲಿ ಮಕ್ಕಳು ನೋಡಲು ಸಾಧ್ಯವಿದೆ. ಈ ಕಥೆಗಳು ಹೊಡೆದಾಟದ, ರೋಮಾಂಚನಕಾರಿಯಾದ, ಇತಿಹಾಸ ಪುಟಗಳಿಂದ, ಪೌರಾಣಿಕ ಕಥೆಗಳಿಂದ, ಮಹಾಪುರುಷರ ಜೀವನ ಚಿತ್ರಗಳಿಂದ ಅಭಿವ್ಯಕ್ತಗೊಂಡಿರುವುದು ಕಂಡು ಬರುತ್ತದೆ.

ಒಟ್ಟಿನಲ್ಲಿ ಮಕ್ಕಳ ಕಥಾ ಸಾಹಿತ್ಯ ಆಧುನಿಕ ಸ್ಪರ್ಷದಿಂದ ಬದಲಾಗುತ್ತ ಸಾಗಿರುವುದು ರಚನೆಯ ದೃಷ್ಟಿಯಿಂದ ಮಾತ್ರ. ಸಾಂಪ್ರದಾಯಿಕ ಕಥೆಯ ತಂತ್ರಗಳೂ ಬದಲಾಗಬೇಕು. ಇಂದಿನ ವೈಜ್ಞಾನಿಕ ಯುಗದಲ್ಲಿ ಮಕ್ಕಳ ಮನಸ್ಸನ್ನು ಅರಳಿಸಬಲ್ಲ ವಿಜ್ಞಾನ, ತಂತ್ರಜ್ಞಾನದ ಮಹತ್ವ ತಿಳಿಸುವ ಕಥಾ ಸಾಹಿತ್ಯ ಮೂಡಿಬರಬೇಕು. ಇದು ಅಗತ್ಯ. ಹೀಗಾಗಿ ಮಕ್ಕಳ ಕಥೆ ರಚಿಸಲು ತಾಳ್ಮೆ, ಆಳವಾದ ಅನುಭವ, ಭಾಷೆಯ ಸರಳ ಬಳಕೆ ಕರಗತವಾಗಿರಬೇಕು. ಮಕ್ಕಳ ಕಥೆಗಳು ಕಲಿಕೆಯ ಕ್ರಿಯೆಯನ್ನು ಪ್ರಚೋದಿಸುವಂತಿರಬೇಕು. ಮಕ್ಕಳ ಮನಸ್ಸಿಗೆ ಸ್ಪಂದಿಸಿ ಕುತೂಹಲ ಮೂಡಿಸುವಂತಿರಬೇಕು.

೪.೪ ನಾಟಕ :

ನಾಟಕ ಬದುಕಿನ ರಹಸ್ಯವನ್ನು ಅಭಿವ್ಯಕ್ತಿಸುವ ಒಂದು ಕಲೆ. ಕಥೆ ಮತ್ತು ಕವನಗಳು ಮನಸ್ಸು-ಕಿವಿಗಳಿಗೆ ಸಂತಸ ನಿಡಿದರೆ ನಾಟಕ ಕಿವಿ-ಕಣ್ಣು-ಮನಸ್ಸುಗಳಿಗೆ ಆನಂದ ನೀಡುತ್ತದೆ. ಇದು ದೃಶ್ಯ ಹಾಗೂ ಶ್ರವಣ ಮಾಧ್ಯಮವಾದುದರಿಂದ ಮಕ್ಕಳ ಮೇಲೆ ಗಾಢವಾದ ಪರಿಣಾಮ ಬೀರುತ್ತದೆ. ಪ್ರಾಚೀನ ಕಾಲದ ಮಕ್ಕಳು ರಾಮಾಯಣ, ಮಹಾಭಾರತಗಳಲ್ಲಿ ಬರುವ ಪಾತ್ರಗಳ ಬಾಲ್ಯದ ಸನ್ನಿವೇಶಗಳನ್ನು ಕೇಳಿ ಸಂತೋಷ ಪಡುತ್ತಿದ್ದರು. ಮಕ್ಕಳು ನಾಟಕಗಳನ್ನು ಶಾಲೆ-ಕಾಲೇಜುಗಳ ವಾರ್ಷಿಕ ಸ್ನೇಹಸಮ್ಮೇಳನಗಳಲ್ಲಿ ಹಬ್ಬ-ಹರಿದಿನಗಳಲ್ಲಿ ಹಾಡು-ನೃತ್ಯಗಳೊಂದಿಗೆ ನಾಟಕಗಳನ್ನು ಆಡುವ ಕಲೆ ಪ್ರಾರಂಭಗೊಂಡವು. ಪಾಲಕರು, ಊರಿನ ಜನರು, ಬಂಧುಗಳು ಮಕ್ಕಳ ಅಭಿನಯ ಕಂಡು ಆನಂದಭರಿತರಾಗಿ ಪ್ರೋತ್ಸಾಹಿಸುತ್ತಿದ್ದರು. ನಾಟಕ ತನ್ನ ಪರಿಕರಗಳೊಂದಿಗೆ ವಿಸ್ತಾರವಾದ ಆಯಾಮವನ್ನು ಹೊಂದಿದೆ. ಕಥಾವಸ್ತು, ನಿರ್ದೇಶಕ, ಪಾತ್ರಧಾರಿಗಳು, ರಂಗಸ್ಥಳ, ವೇಶಭೂಷಣ, ಸಂಗೀತ, ಬೆಳಕು, ಪ್ರೇಕ್ಷಕರು ಇವು ಮೂಲಭೂತವಾಗಿ ಅವಶ್ಯಕ. ನಾಟಕಕಾರ ಕಥೆಯನ್ನು ಅಭಿವ್ಯಕ್ತಗೊಳಿಸಿದರೆ ನಿರ್ದೇಶಕ ತನ್ನ ಸೃಜನಶೀಲತೆಯಿಂದ ದೃಶ್ಯಮಾಧ್ಯಮಕ್ಕೆ ಅಳವಡಿಸಿ ಪ್ರೇಕ್ಷಕರ ಮುಂದೆ ತರುತ್ತಾನೆ.

ಮಕ್ಕಳ ನಾಟಕಗಳು ಕಡಿಮೆ ಸಮಯದಲ್ಲಿ ಮುಗಿದು ಮಕ್ಕಳಲ್ಲಿ ರೋಮಾಂಚನ ಮೂಡಿಸುತ್ತವೆ. ಇಲ್ಲಿ ರಂಗಸ್ಥಳ ಅನಿವಾರ್ಯ. ಹೀಗಾಗಿ ರಂಗಸ್ಥಳದ ಮೇಲೆ ಪಾತ್ರಧಾರಿಗಳು, ಪರದೆ, ದೃಶ್ಯ, ಬೆಳಕು, ಧ್ವನಿವ್ಯವಸ್ಥೆ, ವೇಷಭೂಷಣಗಳು, ಬಣ್ಣ ಮೊದಲಾದ ಸಾಧನಗಳು ಬೇಕು. ರಂಗವೇದಿಕೆ ನಾಟಕಕಾರನ ಕನಸನ್ನು ಸಾಕಾರಗೊಳಿಸುವ, ಸೌಂದರ್ಯದ ಕಲ್ಪನೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಪ್ರೇಕ್ಷಕ ಭಾವನಾತ್ಮಕವಾಗಿ–ವೈಚಾರಿಕವಾಗಿ ನಾಟಕದ ಪರಿಣಾಮಗಳನ್ನು ಅನುಭವಿಸುತ್ತಾನೆ. ನಾಟಕ ದೃಶ್ಯಮಾಧ್ಯಮವಾದುದರಿಂದ ಹಲವು ಪ್ರಯೋಜನಗಳನ್ನು ಮಕ್ಕಳು ಪಡೆಯಲು ಸಾಧ್ಯವಿದೆ. ಮಕ್ಕಳ ನಾಟಕದ ಮೂಲಕ ಉಪದೇಶ ನೀಡುವ ಕುರಿತು ಬಿ. ವಿ. ಕಾರಂತರು ಹೀಗೆ ಹೇಳುತ್ತಾರೆ. 'ನೇರವಾದ ಉಪದೇಶವಿರಬಾರದು, ಉಪದೇಶವಿಲ್ಲದೆ ಉಪದೇಶವಿರಬೇಕು. ಉಪದೇಶ ಮಾಡಬೇಕಾಗಿರುವುದನ್ನು ನಾಟಕ ನೋಡಿದ ಮಕ್ಕಳು ಅನುಭವಕ್ಕೆ ಬರುವಂತೆ ಮಾಡಬೇಕು. ಇಡೀ ನಾಟಕ ನೈತಿಕ ಅನುಭವದ ಪರಿಣಾಮವನ್ನುಂಟು ಮಾಡಬೇಕು'[೨೧]. ಮಕ್ಕಳ ನಾಟಕಗಳ ಮೊದಲ ಆದ್ಯತೆ ಎಂದರೆ ಮಕ್ಕಳಿಗೆ ಆನಂದಗೊಳಿಸುವುದು. ಮಕ್ಕಳ ಆಶೆ–ಆಕಾಂಕ್ಷೆಗಳನ್ನು ಪೂರೈಸುವುದು ಎಂದು ಬಿ. ವಿ. ವೈಕುಂಠರಾಜು ಹೇಳುತ್ತಾರೆ.

ಕನ್ನಡದಲ್ಲಿ ಪ್ರಮುಖ ಮಕ್ಕಳ ನಾಟಕಗಳು ಇವೆ. ಅವುಗಳಲ್ಲಿ ಕೆಲವನ್ನು ನೋಡಬಹುದು. ಮಕ್ಕಳ ನಾಟಕ ಪರಂಪರೆಯಲ್ಲಿ ಅತೀ ಹೆಚ್ಚು ನಾಟಕಗಳನ್ನು ಬರೆದವರು ಎಂ. ಎನ್. ಕಾಮತರು. 'ಅಂಚೆಮನೆ', 'ಚಂದ್ರಹಾಸ', 'ಕತೆ ಹೇಳುವಿಕೆ', 'ಸಿಂಹಾಸನ' ಮುಂತಾದವು ಇವರ ಪ್ರಮುಖ ನಾಟಕಗಳು. ಶಿವರಾಮ ಕಾರಂತರ ಅಜ್ಜಿಮಾಣಿ, ಕಾಕ ಪರಿಣಯ, ನರನೋವಾನರನೋ, ನಮ್ಮ ಓಟು ಯಾರಿಗೆ?, ಮಂಗನ ಮದುವೆ, ಕುವೆಂಪು ಅವರ ನನ್ನ ಗೋಪಾಲ, ಮೋಡಣ್ಣನ ತಮ್ಮ, ಕೈಲಾಸಂರವರ ಟೊಳ್ಳು–ಗಟ್ಟಿ, ಪೋಲಿಕಿಟ್ಟಿ, ಶ್ರೀರಂಗರ ಹನ್ನೊಂದು ವರಿ, ಅಂಬಿಕಾತನಯದತ್ತರ ಮಕ್ಕಳು ಅಡಿಗೆಮನೆ ಹೊಕ್ಕರೆ, ಕೆ. ವಿ. ಸುಬ್ಬಣ್ಣನವರ ಕಾಡಿನಲ್ಲಿ ಕಥೆ, ಬೆಟ್ಟಕ್ಕೆ ಚಳಿಯಾದರೆ, ಜಯಂಟ್‌ಮಾಮ, ಬಿ. ವಿ. ಕಾರಂತರ ಪಂಜರಶಾಲೆ, ಹೆಡ್ಡಾಯಣ, ಅಳಿಲು ರಾಮಾಯಣ, ಚಂದ್ರಶೇಖರ ಕಂಬಾರರ ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು, ಪುಷ್ಪರಾಣಿ, ಆರ್. ವಿ. ಭಂಡಾರಿಯವರ ಬೆಕ್ಕು ಮತ್ತು ರೊಟ್ಟಿ, ಜಾಣ ಕೋಳಿ, ನರಿಯ ಜಾಣ್ಮೆ, ಬೆಳಕಿನಡೆಗೆ,
ನಾ. ಸು. ಭರತನಹಳ್ಳಿಯವರ ಪಂಜರದಲ್ಲಿ ಹುಲಿ, ಎಂ. ಅಬ್ದುಲ್ ರಹಮಾನ್ ಪಾಶರವರ ಬೆಳೆದವರು, ನೀ ನನಗಿದ್ದರು ನಾ ನಿನಗೆ, ದುಂಡಿರಾಜರ ಅಜ್ಜಿ ಕಥೆ, ಗಿಡ್ಡೂ ಟೇಲರನ ಸಾಹಸಗಳು, ಎಸ್. ಕೆ. ಶರ್ಮಾರ ಮಕ್ಕಳ ರಾಜ್ಯ, ಕಪ್ಪು ಕಾಗೆಯ ಹಾಡು, ಗಜಾನನ ಶರ್ಮರ ಗೊಂಬೆರಾವಣ, ನಾಣಿಭಟ್ಟನ ಸ್ವರ್ಗದ ಕನಸು, ಎ. ಎಸ್. ಮೂರ್ತಿಯವರ ಮಂತ್ರವಾದಿ, ಚಿನ್ನದ ಚೆಂಡು, ಹಾಡು ಹಕ್ಕಿ, ವೈದೇಹಿಯವರ ನಾಯಿಮರಿ, ಹಕ್ಕಿ ಹಾಡು, ಬಾಲತಪಸ್ವಿ, ಎಸ್. ಎಂ. ಹಿರೇಮಠರ ಚಿನ್ನರ ಬಣ್ಣದ

ಲೋಕ, ಪರಾಶರ, ಮೇವುಂಡಿ ಮಲ್ಲಾರಿಯವರ ಮಯೂರವರ್ಮ, ಎಂ. ವಿ. ಸೀತಾರಾಮಯ್ಯನವರ ಕರುಣೆಯ ಕುಡಿ, ಎ. ಕೆ. ರಾಮೇಶ್ವರರ ಕ್ಷಮಾದಾನ, ಅಭಯರುಚಿ-ಅಭಯಮತಿ, ಫ. ಗು. ಸಿದ್ಧಾಪೂರ ಅವರ ಸೊಳ್ಳೆಗಳು, ಎಂ. ಡಿ. ಗೋಗೇರಿಯವರ ಬ್ರಹ್ಮನ ಸೋಲು, ಹೀಗೆ ಮೊದಲಾದವರು ಮಕ್ಕಳ ನಾಟಕಗಳಲ್ಲಿ ಕೃಷಿಗೈದು ಕನ್ನಡ ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಮಕ್ಕಳು ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳಲು ರಂಗಭೂಮಿಗೆ ಬರಬೇಕು. ಬಾಲ್ಯದಲ್ಲಿ ಕ್ರಿಯಾತ್ಮಕವಾಗಿ ಆಲೋಚಿಸುವ, ಮಾಯಾಲೋಕ ಹುಟ್ಟಿಸುವ, ಆತ್ಮವಿಶ್ವಾಸ ಮೂಡಿಸಿ ಧೈರ್ಯದಿಂದ ನಡೆದರೆ ದಾರಿ ತೋರಿಸುತ್ತದೆ. ಮಕ್ಕಳಿಗೆ ಸರಿದಾರಿಯಲ್ಲಿ ಜೀವನ ಸಾಗಿಸಲು ನಾಟಕಗಳು ಅಗತ್ಯ.

'ನಾಟಕ ಅಂದರೆ ಭಾವನೆಗಳನ್ನು ಅಭಿವ್ಯಕ್ತಿಸುವ, ವಿವರಣೆಗೆ ಮೀರಿದ ಸಂಗೀತಾನುಭವದ, ಭಾಷಾ ಬಳಕೆಯ ತಂತ್ರದ, ಕತ್ತಲು, ಬೆಳಕಿನ ಆಟದ, ಸದ್ದು ಮೌನಗಳ ದೃಶ್ಯ ಸಂಕಲನ. ಇದನ್ನು ಕಲಿಯಲು ಹೆಚ್ಚಿನ ಸಮಯ, ಸಂಯಮ ಬೇಕು. ಇದರಲ್ಲಿ ಪಾಲ್ಗೊಳ್ಳುವುದರಿಂದ ನಮಗೆ ಸಮಾಧಾನ, ರಂಜನೆ, ಜೊತೆಗೆ ವಿಚಾರಗಳನ್ನು ಸ್ಪಷ್ಟಗೊಳಿಸುವುದಕ್ಕೆ, ನಾಯಕತ್ವ ರೂಢಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ನಮ್ಮ ಭಾವನೆಗಳನ್ನು, ತಲುಪಿಸಬೇಕಾದ ವಿಚಾರಗಳನ್ನು ಪರಿಣಾಮಕಾರಿಯಾಗಿ ವ್ಯಕ್ತಗೊಳಿಸಲು, ತಲುಪಿಸಲು ಬಳಸಬಹುದಾದ ತಂತ್ರಗಳನ್ನು ರಂಗಭೂಮಿ ಕಲಿಸುತ್ತದೆ'[೨೨].

ಮಕ್ಕಳ ನಾಟಕದಲ್ಲಿ ಸುಲಭ ಸುಂದರ ಭಾಷೆ ಬಳಸಬೇಕು. ಪಾತ್ರಗಳ ಮಾತುಗಳು ಚಿಕ್ಕದಾಗಿರಬೇಕು. ಗ್ರಾಂಥಿಕ ಭಾಷೆಗಿಂತ ಆಡುಭಾಷೆಯೇ ಹೆಚ್ಚು ಸೂಕ್ತವಾದುದು. ಮಕ್ಕಳ ನಾಟಕ ರಚನಾಕಾರನಿಗೆ ಹಾಸ್ಯ ರಸದ ಅರಿವು ಇರಬೇಕು. ನಾಟಕದ ಸನ್ನಿವೇಶಕ್ಕೆ ತಕ್ಕಂತೆ ಸಹಜವಾಗಿ ಹಾಸ್ಯ ಬರಬೇಕು. ನಾಟಕದ ಪ್ರಾರಂಭದಲ್ಲಿ ಕುತೂಹಲ ಕೆರಳಿಸುವ ಸನ್ನಿವೇಶವಿರಬೇಕು. ನಾಟಕದ ಕೊನೆಯಲ್ಲಿ ನವಿರಾದ ನೀತಿಯು ಪರೋಕ್ಷವಾಗಿ ಮೂಡಬೇಕು. ಅದು ಪ್ರೇಕ್ಷಕರ ಮೇಲೆ ಪರಿಣಾಮ ಬೀರುವಂತಿರಬೇಕು. ಮಕ್ಕಳ ನಾಟಕ ೩೦ ನಿಮಿಷದಲ್ಲಿ ಮುಗಿಯುವಂತಿರಬೇಕು. "ಒಂದರ್ಥದಲ್ಲಿ ನಾಟಕವೆನ್ನುವುದು ನಿಜ ಜೀವನವೇ. ಮಗುವು ತಾನು ನೋಡಿದ ಪ್ರಪಂಚವನ್ನು ಅಲ್ಲಿ ಅನುಕರಿಸುತ್ತದೆ. ಮಗು ಇತರರನ್ನು ಗ್ರಹಿಸಲು, ಸಹಿಸಲು ಮತ್ತು ತನ್ನ ಭಾವವನ್ನು ನಿಯಂತ್ರಿಸಲು ನಾಟಕದಿಂದ ಕಲಿಯುತ್ತದೆ. ನಾಟಕವು ಒಂದು ಸುರಕ್ಷಾ ಕವಾಟ ಇದ್ದಂತೆ. ಅದು ಮನಸ್ಸಿನ ಕೆಡಕನ್ನು ನೈತಿಕ ಚೌಕಟ್ಟಿನಡಿಯಲ್ಲಿ ಹೊರಹಾಕಲು ಕಲಿಸುತ್ತದೆ. ಮಗುವಿನ ಭಾವೋದ್ರೇಕದ ಸಮಸ್ಯೆಯನ್ನು ನೀಗಿಸುತ್ತದೆ. ಅಹಿತ ಭಾವಗಳನ್ನು ಹೊರತಳ್ಳಿ ಅವುಗಳನ್ನು ನಿಭಾಯಿಸಲು ಕಲಿಸುತ್ತದೆ. ಭಾವನಿಯಂತ್ರಣಕ್ಕೆ ಇದೊಂದು ರೀತಿಯ ಮನಶಾಸ್ತ್ರಿಯ ವಿಧಾನವೆಂದು ಎಲ್ಲೆಡೆಯಲ್ಲೂ ಸ್ವೀಕೃತವಾಗಿದೆ. ಮಕ್ಕಳೊಂದಿಗೆ ಮಕ್ಕಳೇ ಆಗಿರುವ ನಿಲುವುಗಳು, ಸಹಜ ಕುತೂಹಲಗಳು ಸೃಷ್ಟಿಸುವ ರೋಮಾಂಚನ ಮಕ್ಕಳ ನಿಜ

ಭೂಮಿಕೆಯಾಗುತ್ತದೆ. ಅದು ಮಕ್ಕಳ ರಂಗಭೂಮಿ. ಒಂದೇ ಒಂದು ಉದಾಹರಣೆಯೊಂದಿಗೆ ನಿಮಗದನ್ನು ಅರ್ಥೈಸುವ ಪ್ರಯತ್ನ ಮಾಡುತ್ತೇನೆ. ಬಿದಿರ ಬೊಂಬಿನಲ್ಲಿ ಫಿರಂಗಿಯ ಸದ್ದು, ಬಾಳೆದಿಂಡಿನಲ್ಲಿ ಚಟಪಟ ಸಿಡಿಕೆ, ತೆಂಗಿನ ಗರಿಯಲ್ಲಿ ಇರಂಟೆಯ ನಾದ ಹೊಮ್ಮಿಸುವ ಗ್ರಾಮೀಣ ಮಕ್ಕಳಾಟಗಳು ಸಿದ್ಧವಾದ್ಯಗಳಿಂದ ಅಸಾಧ್ಯ ಎಂಬುದನ್ನು ನಾವು ಮನಗಾಣಬೇಕಾದ ಸತ್ಯ ಇಂದು ನಮ್ಮ ಮುಂದಿದೆ"[೨೨].

ಮಕ್ಕಳ ಸಾಹಿತ್ಯಕ್ಕೆ ಭದ್ರಬೂನಾದಿ ಹಾಕಿದವರು ಪಂಜೆಮಂಗೇಶರಾಯರು. ಅವರು ಮುಖ್ಯವಾಗಿ ಮಕ್ಕಳ ನಾಟಕ ಬರೆದವರಲ್ಲ, ಆದರೆ ನಾಟಕದ ಪರಿಕಲ್ಪನೆ ಅವರಲ್ಲಿ ಗಟ್ಟಿಯಾಗಿತ್ತು. ಅವರ ಕಥೆ, ಕವನಗಳು ನಾಟಕೀಯ ಬಲದಿಂದ ಮನಸೂರೆಗೊಂಡಿದೆ. ಅಭಿನಯದ ಕುರಿತಾಗಿ ಪಂಜೆಯವರು ಹೀಗೆ ಹೇಳುತ್ತಾರೆ. ಧರ್ಮಬೋಧನೆಗಾಗಿ, ನೀತಿ ಹೇಳುವುದಕ್ಕಾಗಿ ಕತೆ ಕಟ್ಟಬಾರದು. ಅದು ಕಥೆಯ ಅಂತಃರಂಗದಲ್ಲಿರಲಿ, ಕಥೆಗಳನ್ನು ಬರೆದು ಅಥವಾ ಹೇಳಿ ಅಂತ್ಯದಲ್ಲಿ ಬುದ್ದಿವಾದವನ್ನು ಸ್ಪಷ್ಟವಾಗಿ ವ್ಯಕ್ತಮಾಡುವುದು ಅನುಚಿತ. ಒಳಗಿನ ಮನೋವ್ಯಾಪಾರಗಳಿಗಿಂತ ಅವುಗಳನ್ನು ವ್ಯಕ್ತಗೊಳಿಸುವ ಅಂಗಮುದ್ರೆಗಳನ್ನು, ಬಾಹ್ಯ ಚೇಷ್ಟೆಗಳನ್ನು ಸೇರಿದರೆ ಮಕ್ಕಳಿಗೆ ಮುಂದೆ ಅದನ್ನು ಅಭಿನಯಿಸಿ ತೋರಿಸುವುದಕ್ಕೂ ಅನುಕೂಲವಾಗುತ್ತದೆ.

ಕನ್ನಡದಲ್ಲಿ ಮಕ್ಕಳ ನಾಟಕಗಳು ಬೆಳೆದು ಬಂದ ಬಗೆಯನ್ನು ಹುಡುಕುತ್ತಾ ಹೋದರೆ ಕೆಲವು ವಿಶಿಷ್ಟ ಸಂಗತಿಗಳು ಗೋಚರಿಸುತ್ತವೆ. ಆರಂಭದಲ್ಲಿ ಐತಿಹಾಸಿಕ, ಪೌರಾಣಿಕ ಘಟನೆಗಳ ಸಂಭಾಷನೆಯನ್ನು ಅಧ್ಯಾಪಕರು ರಚಿಸಿ ಸಭೆ-ಸಮಾರಂಭಗಳಲ್ಲಿ, ಶಾಲೆಯ ವಾರ್ಷಿಕ ಉತ್ಸವಗಳಲ್ಲಿ ನಾಟಕ ಆಡುವುದನ್ನು ಕಾಣುತ್ತೇವೆ.

ಮಕ್ಕಳ ನಾಟಕಗಳಲ್ಲಿ ಪ್ರಥಮವಾಗಿ ಕಂಡು ಬರುವುದು ಎಂ. ಎನ್. ಕಾಮತರ ಅಂಚೆಮನೆ, ಚಂದ್ರಹಾಸಾಬ್ಯುದಯ ಮತ್ತು ಶುಕ ಶಿಕ್ಷಣ ನಾಟಕಗಳು. ಆದರೆ ಮಕ್ಕಳಿಗಾಗಿ ಬರೆದ ಶುಕ ಶಿಕ್ಷಣ ಮೊದಲ ನಾಟಕವೆನ್ನಬಹುದು. ಇದು ರವೀಂದ್ರನಾಥ ಠಾಗೋರರ 'Parrots Training' ಎಂಬ ಕಥೆಯ ಅನುವಾದವೆಂದು ಬಿ. ಲೀಲಾಭಟ್ಟರು ಹೇಳುತ್ತಾ, ಬಾಲಶಿಕ್ಷಣ ಕ್ರಮದ ವಿಡಂಬನೆಯನ್ನು ವ್ಯಕ್ತಪಡಿಸುತ್ತಾರೆ. ಕೇವಲ ಕಂಠಪಾಠ ಮಾಡಿಸುವ ಯಾಂತ್ರಿಕ ಶಿಕ್ಷಣ ಕ್ರಮ ಮಕ್ಕಳಲ್ಲಿ ವಿಚಾರ ಶಕ್ತಿಯನ್ನು ಬೆಳೆಸುವುದನ್ನು ಬಿಟ್ಟು ಬರೆದಿಟ್ಟ ವಿಷಯಗಳನ್ನು ಕೇವಲ ಮುಖಪಾಠ ಮಾಡಿಸುವುದರಿಂದ ಯಾವ ಪ್ರಯೋಜನವಿಲ್ಲವೆಂದು, ಸ್ವ-ಇಚ್ಛೆಯಿಂದ ಹಾರಾಡುತ್ತ ತನ್ನ ಇಂಪಾದ ಧ್ವನಿಯಿಂದ ಹಾಡುವ ಗಿಳಿಯನ್ನು ಬಂಗಾರದ ಪಂಜರದಲ್ಲಿ ಹಿಡಿದಿಟ್ಟು, ಅದರ ಪುಕ್ಕಗಳನ್ನು ಕತ್ತರಿಸಿ, ಅದರ ಪಕ್ಕೆಗಳಲ್ಲಿ ಪುಸ್ತಕದ ಹಾಳೆಗಳನ್ನು ತುರುಕಿ, ಸ್ವಂತಿಕೆಯನ್ನು ಕೊಂದುಹಾಕುವ ಶಿಕ್ಷಣವು ಅರ್ಥಹೀನವೆಂದು ಠಾಗೋರರು ಕಟುವಾಗಿ ಟೀಕಿಸುತ್ತಾರೆ. ಇಂಥ ಶಿಕ್ಷಣ ಕ್ರಮಕ್ಕೆ

ಭಾರತೀಯ ಸಿಸು ಬಲಿಯಾಗಿದೆಯೆಂದು ಹೇಳುತ್ತಾರೆ. ಕಾಮಥರ ಈ ನಾಟಕ ಪ್ರಚಲಿತ ಶಿಕ್ಷಣ ಪದ್ಧತಿಗೆ ಸಮರ್ಪಕವಾದ ಕನ್ನಡಿಯಾಗಿದೆ ಎಂದು ಹೇಳಬಹುದು.

ಮಕ್ಕಳ ನಾಟಕಗಳ ಬಗ್ಗೆ ಹೇಳುವುದಾದರೆ, ಮಕ್ಕಳೇ ಹೆಚ್ಚಾಗಿ ನಾಟಕ ಬರೆದವುಗಳಲ್ಲ. ಮಕ್ಕಳ ಮನಸ್ಸುಳ್ಳ ಹಿರಿಯರು ಮಕ್ಕಳ ಭಾವ, ಭಾಷೆ, ಆಶೆಗಳನ್ನು ಮುಂದಿಟ್ಟುಕೊಂಡು ರಚಿಸಿದ ನಾಟಕ ಕೃತಿಗಳು. ಕೆಲವು ಮಕ್ಕಳಿಂದ ಮಕ್ಕಳಿಗಾಗಿ ಅಭಿನಯಿಸಲ್ಪಡುವ ನಾಟಕಗಳು, ಮಕ್ಕಳು ಅಭಿನಯಿಸಲ್ಪಡುವ ನಾಟಕಗಳು. ಇನ್ನೂ ದೊಡ್ಡವರು ಮಕ್ಕಳಿಗಾಗಿ ಅಭಿನಯಿಸಲ್ಪಡುವ ನಾಟಕಗಳು. ಹೀಗೆ ಮಕ್ಕಳ ನಾಟಕಗಳನ್ನು ಗುರುತಿಸಬಹುದು. ಮಕ್ಕಳು ದೇಶದ ಸಂಪತ್ತು. ಅವರಿಗಾಗಿ ಅನೇಕ ಕವಿಗಳು, ಮಹಾತ್ಮರು, ಶಿಕ್ಷಕರು ನಾಟಕಗಳನ್ನು ರಚಿಸಿದ್ದಾರೆ. ಸಾಮಾಜಿಕ ಸಂಗತಿಗಳನ್ನು ವ್ಯಕ್ತಗೊಳಿಸುವ ಕುವೆಂಪುರವರ 'ನನ್ನ ಗೋಪಾಲ', 'ಮೋಡಣ್ಣನ ತಮ್ಮ', ಶಂ. ಗು. ಬಿರಾದಾರರ 'ನೌಕರಿಯ ಹುಚ್ಚು', ಪರಶುರಾಮ ಚತ್ರಗಾರರ 'ತಾಯಿ ಕರೆ', ಹೊರೆಯಾಲ ದೊರೆಸ್ವಾಮಿಯವರ 'ನಾಗನ ಕಥೆ', 'ಒಂದೂರಿನಲ್ಲಿ ಒಬ್ಬ ರಾಜ' ಮೊದಲಾದ ಸಾಮಾಜಿಕ ನಾಟಕಗಳು ಗಮನ ಸೆಳೆಯುತ್ತವೆ. ನಿಸರ್ಗ ಕವಿಯಾದ ಕುವೆಂಪುರವರು ಮಕ್ಕಳ ಮನೋಭಾವವನ್ನು ಅರಿತುಕೊಂಡವರು. ಮಕ್ಕಳು ಮಾತನಾಡುವುದಕ್ಕಿಂತ ಅಭಿನಯಿಸಿ ಹಾಡುವುದರಲ್ಲಿ ಆಸಕ್ತರು. ಅವರಿಗಾಗಿ 'ಮೋಡಣ್ಣನ ತಮ್ಮ' ಕುವೆಂಪು ಸುಂದರವಾಗಿ ಚಿತ್ರಿಸಿದ್ದಾರೆ. ಇಲ್ಲಿ ಹುಡುಗ, ಮೋಡ, ಕಾಡು, ತಾಯಿ ಪಾತ್ರಗಳು ರಮಣೀಯವಾಗಿ ಅಭಿವ್ಯಕ್ತಗೊಂಡಿವೆ.

ಸಾಮಾಜಿಕ ನಾಟಕಗಳಂತೆ ಐತಿಹಾಸಿಕ ನಾಟಕಗಳನ್ನು ಬರೆಯುವುದು ಸುಲಭವಾದುದಲ್ಲ. ಇಲ್ಲಿ ಕಥೆಯ ವಸ್ತು ಮೊದಲೇ ತಿಳಿದುಬರುತ್ತದೆ. ವಸ್ತುವಿನ ಹಾಗೆ ಮುಂದುವರೆಯುವುದು ನಾಟಕದ ಉದ್ದೇಶ. ಮೇವುಂಡಿ ಮಲ್ಲಾರಿಯವರ 'ಮಯೂರವರ್ಮ', ಎಂ. ವಿ. ಸೀತಾರಾಮಯ್ಯನವರ 'ಕರುಣೆಯ ಕುಡಿ', ಎ. ಕೆ. ರಾಮೇಶ್ವರ ಅವರ 'ಕ್ಷಮಾದಾನ' ಮೊದಲಾದ ಐತಿಹಾಸಿಕ ನಾಟಕಗಳು ಮಕ್ಕಳಿಗೆ ಇತಿಹಾಸದ ಅರಿವನ್ನು ಮೂಡಿಸುತ್ತವೆ. ಸಾಮಾನ್ಯವಾಗಿ ಮಕ್ಕಳು ಮಹಾತ್ಮರ ಜೀವನದ ಹಾದಿಯಲ್ಲಿ ತಮ್ಮನ್ನು ನೋಡಿಕೊಂಡು ತಾವೂ ಅವರಂತೆ ಆಗಬೇಕೆಂದು ಹಂಬಲಿಸುತ್ತಾರೆ. ಮಕ್ಕಳ ಈ ಹಂಬಲವೇ ಅವರ ಬಾಳಿನ ಸುಂದರ ಕ್ಷಣಗಳನ್ನು ಅನುಭವಿಸಲು ಸಾಧ್ಯ.

ಭಕ್ತಿ ಪ್ರಧಾನವಾದ ಮೌಲ್ಯಗಳನ್ನು ಹೊಂದಿರುವ ಪೌರಾಣಿಕ ನಾಟಕಗಳು ಮಕ್ಕಳ ಮನಸ್ಸನ್ನು ಸೂರೆಗೊಳ್ಳುತ್ತವೆ. ಇದು ಭಾರತೀಯ ಪರಂಪರೆಯಲ್ಲಿ ಹೆಚ್ಚು ಪ್ರಚಲಿತವಾದವು. ಸಂಸ್ಕೃತಿಯ ಪ್ರತೀಕವಾಗಿ ನಾಟಕಗಳು ಅಭಿವ್ಯಕ್ತವಾಗುತ್ತವೆ. ಪೌರಾಣಿಕ

ಕಥೆಯನ್ನು ಹೊಂದಿರುವ ನಾಟಕಗಳಲ್ಲಿ 'ಏಕಲವ್ಯ', 'ಅಭಿಮನ್ಯು', 'ನಚಿಕೇತ', 'ಲವಕುಶ', 'ಧ್ರುವ', 'ಹನುಮಂತ', 'ಕೋಳೂರು ಕೊಡಗೂಸು' ಪ್ರಮುಖವಾದವುಗಳು. ನಾಟಕಗಳು ಮಕ್ಕಳಿಗೆ ಮನರಂಜನೆಯ ಜೊತೆಗೆ ಅವರ ವ್ಯಕ್ತಿತ್ವ ಅರಳಿಸುವುದಕ್ಕೆ ಮೂಲಪ್ರೇರಣೆಯಾಗುತ್ತವೆ. ವ್ಯಕ್ತಿಯ ವ್ಯಕ್ತಿತ್ವ ಅರಳಲು ಜೀವನದಲ್ಲಿ ಶ್ರದ್ಧೆ-ವಿಶ್ವಾಸ, ಪ್ರಾಮಾಣಿಕತೆ ಮುಂತಾದ ಒಳ್ಳೆಯ ಗುಣಗಳು ಅವಶ್ಯಕ. ಇವುಗಳಿಗೆ ಪೂರಕವಾಗಿ ಮಹಾತ್ಮರ ಜೀವನ ಸ್ಫೂರ್ತಿ ನೀಡುತ್ತದೆ. ಅಂತಹ ಸ್ಫೂರ್ತಿದಾಯಕವಾದ ನಾಟಕಗಳೆಂದರೆ ಹೊಯ್ಸಳರ 'ಪ್ರಸಾದ' ಪಳಕಳ ಸೀತಾರಾಮಭಟ್ಟರ 'ನಚಿಕೇತ', 'ಏಕಲವ್ಯ', 'ಬಳುವೀಶರ', 'ಬಾಲತಪಸ್ವಿ' ಮೊದಲಾದ ನಾಟಕಗಳು ಮಕ್ಕಳ ಮನವನ್ನು ಸೂರೆಗೊಳ್ಳುತ್ತಲಿವೆ. ಪ್ರೇಕ್ಷಕರನ್ನು ಸಂತಸಗೊಳಿಸುತ್ತಲಿವೆ. ಅದಕ್ಕಾಗಿ 'ಕಾವ್ಯೇಘು ನಾಟಕ ರಮ್ಯಂ' ಎಂದು ವಿದ್ವಾಂಸರು ಹೇಳುತ್ತಾರೆ.

೪.೫ ಕಾದಂಬರಿ :

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹವಾದ ಹಾಗೂ ಜನಪ್ರಿಯವಾದ ಪ್ರಕಾರವೇ ಕಾದಂಬರಿ. 'ಕಾದಂಬರಿ ಎಂಬ ಸಾಹಿತ್ಯ ಪ್ರಕಾರಕ್ಕೆ ಇಂಗ್ಲೀಷಿನಲ್ಲಿ 'ನಾವೆಲ್' ಎಂದು ಕರೆಯುತ್ತಾರೆ. ಇಂಗ್ಲೀಷಿನಲ್ಲಿ 'Novel' ಎಂಬ ಪದವು ಇಟಲಿಯನ್ 'NOVELLA' ಎಂಬ ಪದದಿಂದ ಬಂದದು. ಇದು ಹೊಸತು ಎಂಬ ಅರ್ಥವನ್ನು ಕೊಡುತ್ತದೆ. [ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ. ಪು.೫], 'A fictions prose narrative or tale of considerable length in which characters and actions represent ative or les complexity.... (Oxford English Dictionery)'.

ಕನ್ನಡದಲ್ಲಿ ಮಕ್ಕಳ ಕಾದಂಬರಿಗಳು ವಿರಳವೆಂದು ಹೇಳಬಹುದು. ಇಂಗ್ಲೀಷಿನಿಂದ ಬಂದ ಕಾದಂಬರಿ ಪ್ರಕಾರ ಮಕ್ಕಳ ಸಾಹಿತ್ಯದಲ್ಲಿ ಹೆಚ್ಚು ಪ್ರಚಾರಗಿಟ್ಟಿಸಿಕೊಳ್ಳಲಿಲ್ಲ ಎಂದು ಹೇಳಿದರೆ ತಪ್ಪಾಗದು. ಮಕ್ಕಳಲ್ಲಿ ಸಾಹಸ ಪ್ರವೃತ್ತಿ ಹಾಗೂ ಕುತೂಹಲ ಶಕ್ತಿಯನ್ನು ಹುಟ್ಟಿಸುವ ಕೃತಿಗಳು ಈ ಹೊತ್ತು ಅನೇಕ ಕನ್ನಡ ಪತ್ರಿಕೆಗಳಲ್ಲಿ, ದೂರದರ್ಶನದಲ್ಲಿ, ಧಾರಾವಾಹಿಯಾಗಿ ಪ್ರಕಟವಾಗುತ್ತಿರುವುದು, ಪ್ರಸಾರವಾಗುತ್ತಿರುವುದು ಕಂಡುಬರುತ್ತಿದೆ. ಇಲ್ಲಿಯವರೆಗೂ ಮಕ್ಕಳಿಗಾಗಿ ಬರೆದ ಕಾದಂಬರಿಗಳು ವಿವಿಧ ಬಗೆಯಾಗಿ ವಿಂಗಡಿಸಿ ಹೇಳಿರುವ ಉದಾಹರಣೆಗಳು ಇವೆ. ಅವುಗಳಲ್ಲಿ ಜಾನಪದ ರೂಪದ ಕಾದಂಬರಿಗಳು, ಪೌರಾಣಿಕ ಕಾದಂಬರಿಗಳು, ಐತಿಹಾಸಿಕ ಕಾದಂಬರಿಗಳು, ಸಾಹಸಮಯ ಕಾದಂಬರಿಗಳು, ನೀತಿಬೋಧಕ ಕಾದಂಬರಿಗಳು, ಹಾಸ್ಯ-ವಿಡಂಬನೆಯ ಕಾದಂಬರಿಗಳು, ಶೈಕ್ಷಣಿಕ ಕಾದಂಬರಿಗಳು, ಪತ್ತೇದಾರಿ ಕಾದಂಬರಿಗಳು, ವೈಜ್ಞಾನಿಕ ಕಾದಂಬರಿಗಳು, ಪ್ರಾಣಿ-ಪ್ರಪಂಚದ ಕಾದಂಬರಿಗಳು ಎಂದು ವಿಭಾಗಿಸಿ ಮಕ್ಕಳಿಗೆ ನೀಡುವುದರಿಂದ ಅವರಲ್ಲಿ ಕುತೂಹಲ ಮೂಡಲು ಸಾಧ್ಯ.

ಸಂಪಟೂರ ವಿಶ್ವನಾಥ ಅವರು 'ಸಾಹಸಿ ಸಹೋದರರು' ಕಾದಂಬರಿಯಲ್ಲಿ ಮಕ್ಕಳ ಸಾಹಸವನ್ನು ಚಿತ್ರಿಸಿದ್ದಾರೆ. ಇಬ್ಬರು ಧೈರ್ಯಶಾಲಿ ಹಾಗೂ ಬುದ್ಧಿಶಾಲಿ ಮಕ್ಕಳ ಕಥೆಯನ್ನು ಒಳಗೊಂಡಿದೆ. ಅದೇ ರೀತಿಯಾಗಿ ಬಿ. ಎಲ್. ವೇಣು ಅವರ 'ಗುಹೆ ಸೇರಿದವರು' ಸಹ ಸಾಹಸ ಪ್ರಧಾನವಾದ ಕಾದಂಬರಿ. ರಸಿಕ ಪುತ್ತಿಗೆ ಅವರ 'ಕೆಂಪುಕಾರು' ಉತ್ತಮ ಮಕ್ಕಳ ಕಾದಂಬರಿ ಉದಾಹರಣೆಯಾಗಿ ಹೇಳಬಹುದು. ಈ ಹೊತ್ತಿನ ಕಾದಂಬರಿಗಳಲ್ಲಿ ಹೆಚ್ಚು ವೈವಿಧ್ಯಮಯವಾಗಿ ಕೃಷಿ ಮಾಡಿರುವವರಲ್ಲಿ ನಾ. ಡಿಸೋಜ, ಶಶಿಧರ ವಿಶ್ವಾಮಿತ್ರ, ಎಚ್. ಎಸ್. ವೆಂಕಟೇಶಮೂರ್ತಿ, ಚಂದ್ರಶೇಖರ ಕಂಬಾರ ಮೊದಲಾದವರು ಮಕ್ಕಳ ಬೇಕು-ಬೇಡಗಳಿಗೆ ಸ್ಪಂದಿಸುವ, ಕುತೂಹಲ ಮೂಡಿಸುವ ವಸ್ತುವನ್ನು ಆಯ್ದುಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ. ಮಕ್ಕಳು ತಮ್ಮ ಸುತ್ತಲಿನ ಪರಿಸರದಲ್ಲಿ ಏನೇನು ಕಾಣುತ್ತಿದ್ದಾರೆ. ಅದಕ್ಕೆ ಅವರ ಪ್ರತಿಕ್ರಿಯೆ ಹೇಗೆ ತೋರಲು ಪ್ರಯತ್ನಿಸುವರು, ಹಿರಿಯರನ್ನು ಅನುಕರಣೆ ಮಾಡುವ ದೃಷ್ಟಿಕೋನ, ಉತ್ಸಾಹ, ನಿರಾಶೆ, ನೋವುಗಳಿಗೆ ಒಳಗಾಗುವ ಹಲವಾರು ಸನ್ನಿವೇಶಗಳನ್ನು ಕಥೆಗಳಲ್ಲಿ ಕಾಣುತ್ತೇವೆ. ಮಕ್ಕಳ ಸಂವೇದನಾಶೀಲ ಮನಸ್ಸಿಗೆ ತಲುಪುವಂತಹ ಜಾನಪದ ಪರಂಪರೆಯ, ಪುರಾಣ ಲೋಕದಿಂದ, ಇತಿಹಾಸದ ಘಟನೆಗಳಿಂದ ಮಕ್ಕಳ ಕಾದಂಬರಿ ಸಾಹಿತ್ಯವನ್ನು ವಾಸ್ತವದ ನೆಲೆಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

೪.೬ ಇತರ :

'ದೇಶ ನೋಡು ಇಲ್ಲವೆ ಕೋಶ ಓದು' ಎಂಬ ಗಾದೆ ಮಾತು ಪ್ರವಾಸದ ಮಹತ್ವವನ್ನು ತಿಳಿಸುತ್ತದೆ. ಪ್ರವಾಸವು ಶಿಕ್ಷಣದ ಒಂದ ಅಂಗ, ಬೇರೆ-ಬೇರೆ ದೇಶಗಳಲ್ಲಿ ಮಕ್ಕಳ ಪ್ರವಾಸಕ್ಕೆ ವಿಶಿಷ್ಟವಾದ ಯೋಜನೆಗಳಿವೆ. ಮಕ್ಕಳನ್ನು ಪ್ರವಾಸಕ್ಕೆ ತೆರಳಲು ಪ್ರಯಾಣ ದರದಲ್ಲಿ ರಿಯಾಯಿತಿ, ಪ್ರೇಕ್ಷಣೀಯ ಸ್ಥಳಗಳ ಸಂದರ್ಶನದ ಶುಲ್ಕದಲ್ಲಿ ವಿನಾಯಿತಿ ಮುಂತಾದವು ಪ್ರವಾಸಕ್ಕೆ ಕೊಟ್ಟಿರುವ ಮಹತ್ವವನ್ನು ತಿಳಿಸುತ್ತವೆ. ಹಿರಿಯರ ಸಾಹಿತ್ಯದಲ್ಲಿ ಪ್ರವಾಸ ಸಾಹಿತ್ಯ ರಚನೆಗೊಂಡು ಪ್ರಾಮುಖ್ಯತೆ ಪಡೆದಂತೆ ಮಕ್ಕಳ ಸಾಹಿತ್ಯದಲ್ಲಿ ಹೆಚ್ಚು ರಚನೆಯಾಗಿಲ್ಲ ಎನ್ನಬಹುದು. ಕಥೆಯ ನೆಲೆಯೆ ಪ್ರವಾಸ ಸಾಹಿತ್ಯದ ಮೂಲ. ಅದರ ನಿರೂಪಣೆ ಕಥೆ, ಕಾದಂಬರಿಯಂತೆ ಅನಾವರಣಗೊಳ್ಳುವುದರಿಂದ ಪ್ರವಾಸ ಸಾಹಿತ್ಯ ಮಕ್ಕಳಿಗೆ ಖುಷಿ ನೀಡುವುದರೊಂದಿಗೆ ಕುತೂಹಲ ಮೂಡಿಸುತ್ತದೆ. ಹೊಸತನ ಎಂದರೆ ಮಕ್ಕಳಿಗೆ ಬಲು ಆಶೆ. ಪ್ರವಾಸ ಸಾಹಿತ್ಯ ಹೊಸ ಸಂಗತಿ, ಹೊಸ ಅನುಭವವನ್ನು ನೀಡಿ ಮಕ್ಕಳ ಮನಸ್ಸನ್ನು ಸೆಳೆಯುತ್ತದೆ. ಪ್ರವಾಸ ಮಾಡಿದಾಗ ಅನೇಕ ಮಕ್ಕಳು ತಮ್ಮ ಅನುಭವವನ್ನು ಟಿಪ್ಪಣಿ ಮಾಡಿಕೊಂಡು ಶಿಕ್ಷಕರಿಗೆ ತೋರಿಸುವರು. ಇವೆಲ್ಲ ಪ್ರವಾಸ ಸಾಹಿತ್ಯದ ರಸಮಯ ಸನ್ನಿವೇಶ, 'ಕೋಣೆಯ ಕೂಸು ಕೊಳೆಯಿತು, ಓಣಿಯ ಕೂಸು ಬೆಳೆಯಿತು', 'ಕಣ್ಣಿದ್ದವರು ಕನಕಗಿರಿ ನೋಡಬೇಕು ಕಾಲಿದ್ದವರು ಹಂಪಿ ನೋಡಬೇಕು' ಇಂಥ ನುಡಿಗಳು ಪ್ರವಾಸದ ಮಹತ್ವವನ್ನು ಸಾರುತ್ತವೆ. ಪ್ರವಾಸ ಕೈಗೊಳ್ಳಲು ಪ್ರೋತ್ಸಾಹ ನೀಡುತ್ತವೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಹಲವು ವಿಧಗಳಲ್ಲಿ ಸಮೃದ್ಧವಾಗಿ ಬೆಳವಣಿಗೆಯಾಗಿದ್ದರೂ ಪ್ರವಾಸ ಸಾಹಿತ್ಯದಲ್ಲಿ ಕೊರತೆಯನ್ನು ನೀಗಿಕೊಂಡಿಲ್ಲ. 'ಮಹಾಪ್ರವಾಸಿ ಮಾರ್ಕೊಪೋಲೊ' ಪ್ರವಾಸ ಕೃತಿಯನ್ನು ಮಕ್ಕಳಿಗಾಗಿ ರಚಿಸಿದವರು ಮನೋಹರ ಘಾಣೆಕರ ಅವರು. ಮಾರ್ಕೊಪೋಲೊನ ಜೀವನ ಚರಿತ್ರೆಯನ್ನು ಅನಾವರಣಗೊಳಿಸುವ ಕೃತಿ. ಈತನು ಸುಮಾರು ಇಪ್ಪತ್ತೈದು ವರುಷ ಪ್ರವಾಸ ಮಾಡಿ
ವಿವಿಧ ದೇಶಗಳನ್ನು ಪರಿಚಯ ಮಾಡುವುದು, ಚೀನ, ಜಪಾನ ದೇಶಗಳನ್ನು ಸುತ್ತಾಡಿದ ಕಥೆ ರೋಮಾಂಚನ ಮೂಡಿಸುತ್ತದೆ. ಮಕ್ಕಳಿಗೆ ಸ್ಫೂರ್ತಿ ನೀಡುವ, ಉಪಯುಕ್ತ ಕೃತಿ ಎನಿಸುತ್ತದೆ. ಮಕ್ಕಳಿಗಾಗಿ ರಚಿಸಿರುವ ಅಜಿತಕುಮಾರ ಮಿರ್ಜಿಯವರ ನನ್ನ ಪ್ರವಾಸ ಕಥನ, ಅಣ್ಣಾರಾಯ ಮಿರ್ಜಿಯವರ 'ನನ್ನ ಪ್ರವಾಸ ಕಥನ' ಸಿದ್ಧಯ್ಯ ಪುರಾಣಿಕರ 'ಮಕ್ಕಳ ಲೋಕ ಸಂಚಾರ', ಕಮಲಾ ಹಂಪನಾ ಅವರ 'ಮುಳಬಾಗಿಲು', ನಾ. ಡಿಸೋಜರ 'ಶರಾವತಿ' ಮತ್ತು 'ವರಾಹಿ' ಮುಂತಾದ ಕೃತಿಗಳು ಗಮನಿಸುವಂತಹವು. ಚಂದ್ರಕಾಂತ ಕರದಳ್ಳಿಯವರ 'ಬಯಲು ಸೀಮೆಯಿಂದ ಕರಾವಳಿಗೆ' ಉತ್ತಮ ಪ್ರವಾಸ ಕಥನವಾಗಿದೆ. ಮಕ್ಕಳು ತಮ್ಮ ಸುತ್ತ-ಮುತ್ತಲಿರುವ ಪ್ರದೇಶ, ಮಹತ್ವದ ಸ್ಥಳಗಳ ಬಗ್ಗೆ ಕುತೂಹಲ ಹೊಂದಿರುತ್ತಾರೆ. ಅವರಿಗೆ ಐತಿಹಾಸಿಕ, ಪೌರಾಣಿಕ ಸ್ಥಳಗಳ ಬಗ್ಗೆ ಮಾಹಿತಿ ನೀಡಬೇಕು. ಇವುಗಳ ವಿವರಣೆ ನೀಡುವುದರಿಂದ ಅವರಲ್ಲಿ ಪ್ರವಾಸ ಕಥನದ ಕಲೆ ಮೂಡುತ್ತದೆ. ಬೌದ್ಧಿಕ ವಿಕಾಸಕ್ಕೆ ಪ್ರವಾಸ ಸಾಹಿತ್ಯ ಪ್ರಯೋಜನಕಾರಿ. ಮಕ್ಕಳು ಪ್ರವಾಸದ ಸಂದರ್ಭದಲ್ಲಿ ಕಂಡ ಭೌಗೋಳಿಕ ಪ್ರದೇಶದ ಪರಿಚಯ ಮಾಡಿಕೊಳ್ಳುವುದರೊಂದಿಗೆ, ಅಲ್ಲಿಯ ಜೀವನ ಶೈಲಿ, ಭಾಷೆಯನ್ನು ಗ್ರಹಿಸುತ್ತಾರೆ. ಇದರಿಂದ ಮಕ್ಕಳಲ್ಲಿ ಜ್ಞಾನ ಹೆಚ್ಚುತ್ತ ಮನರಂಜನೆ ದೊರೆಯಲು ಸಾಧ್ಯವಿದೆ. ಇಂಥ ಪ್ರವಾಸದ ಅನುಭವಗಳು ಮಕ್ಕಳ ಮನದೊಳಗೆ ಬಹು ಸಮಯದವರೆ ನಿಲ್ಲುತ್ತವೆ.

ಅಡಿಟಿಪ್ಪಣಿ :

೧) ಡಾ. ವರದಾ ಶ್ರೀನಿವಾಸ : ಪಂಜೆಯವರ ಕೃತಿಗಳು : ಹಾವಿನ ಹಾಡು : ಪು.೧೬೦

೨) ಡಾ. ವರದಾ ಶ್ರೀನಿವಾಸ : ಪಂಜೆಮಂಗೇಶರಾಯರ ಕೃತಿಗಳು : ಉದಯರಾಗ : ಪು.೧೬೪

೩) ಜಿ. ಪಿ. ರಾಜರತ್ನಂ : ಕಂದನ ಕಾವ್ಯಮಾಲೆ : ಪು.೪-೫

೪) ಅದೇ : ಪು.೨೨

೫) ಅದೇ : ಪು.೧೪೦

೬) ಸಿದ್ಧಯ್ಯ ಪುರಾಣಿಕ : ಅಜ್ಜನ ಕೋಲು : ಮಕ್ಕಳ ಸಾಹಿತ್ಯ ಚಿಂತನ : ಪು.೨೯

೭) ಶಂ. ಗು. ಬಿರಾದಾರ : ನಾವು ಗೆಳೆಯರು : ಪು.೮

೮) ಪಳಕಳರ ಆಯ್ದ ಕವನಗಳು : ಯಾಕೋ ಗೊತ್ತಿಲ್ಲ : ಪು.೧೯

೯) ಶಂ. ಗು. ಬಿರಾದಾರ : 'ಹೂವಿನ ಹಂದರ' : ಪು.೮

೧೦) ಸಿಸು ಸಂಗಮೇಶ : 'ಸವಿ ಸಾಹಿತ್ಯ' : ಪು.೧೨

೧೧) ಪಳಕಳ ಸೀತಾರಾಮಭಟ್ಟ : 'ಕಂದನ ಬರುವಿಕೆ' : ಪು.೨೨

೧೨) ಬಿ. ಎ. ಸನದಿ : 'ಗೃಹ ಪಂಚಮಿ' : ಪು.೩೮

೧೩) ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ : 'ನಂದನ' : ಪು.೧೩

೧೪) ಅದೇ : ಪು.೨೭

೧೫) ಟಿ. ಎನ್. ನಾಗರಾಜಶೆಟ್ಟಿ : 'ನವಿಲುಗರಿ' : ಪು.೧೬

೧೬) ಜಿ. ಪಿ. ರಾಜರತ್ನಂ : ಕಂದನ ಕಾವ್ಯಮಾಲೆ : ಇನ್ನೆರಡು ಮಾತು : ಪು.೧೪೧.

೧೭) ಎಚ್. ಎಸ್. ವೆಂಕಟೇಶಮೂರ್ತಿ : ಕಥನ ಕವನ : ಪು.೫

೧೮) ಅದೇ : ಪು.೪೧

೧೯) 'ಪಂಜೆಮಂಗೇಶರಾಯರು' : ಎಂ. ರಾಮಚಂದ್ರ : ಪು.೧೮

೨೦) ಎಲ್. ಎಸ್. ಶೇಷಗಿರಿರಾವ್ (ಸಂ.) 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' : ಪು.೪೪೧

೨೧) ಬಿ. ವಿ. ಕಾರಂತ : ಕಿನ್ನರ ಮೇಳ ಶಿಬಿರ : ಸಂದರ್ಶನ ೨೦೦೨

೨೨) ದ್ರಾಕ್ಷಾಯಣಿ ಭಟ್ : ಮಕ್ಕಳ ರಂಗಭೂಮಿ : ಪು.೩೦೩

೨೩) ಐ. ಕೆ. ಬೋಳುವಾರು (ಸಂ). ಕಿರಣ್‌ಭಟ್ : ಭಾರತೀಯ ಸಂದರ್ಭದಲ್ಲಿ ಮಕ್ಕಳ ರಂಗಭೂಮಿ : ಪು.೪೨

❑❑❑❑❑

ಅಧ್ಯಾಯ : ೨೮

ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ವೈವಿಧ್ಯತೆಗಳು ಭಾಷೆ, ವಸ್ತು, ಶೈಲಿ ಮತ್ತು ತಂತ್ರ ನಾವಿಣ್ಯತೆ

ಅಧ್ಯಾಯ - ೫

ಮಕ್ಕಳ ಸಾಹಿತ್ಯ: ಅಭಿವ್ಯಕ್ತಿಯ ತಾತ್ವಿಕ ವೈವಿಧ್ಯತೆಗಳು ಭಾಷೆ, ವಸ್ತು, ಶೈಲಿ ಮತ್ತು ತಂತ್ರ ನಾವಿಣ್ಯತೆ

ಪ್ರಸ್ತಾವನೆ :

ಅನುಭವದ ಸಮಗ್ರ ಅಭಿವ್ಯಕ್ತಿಗೆ ಭಾಷೆಯನ್ನು ಸಂಕೇತವಾಗಿ ಬಳಸಿಕೊಳ್ಳುವುದು ಎಲ್ಲ ಸಾಹಿತ್ಯ ಪರಂಪರೆಗಳಂತೆ ಕನ್ನಡದಲ್ಲಿಯೂ ಕಾಣಬಹುದಾಗಿದೆ. ಭಾಷೆಯ ನಾದ ಸಂಪತ್ತನ್ನು ಕವಿ ದುಡಿಸಿಕೊಳ್ಳುತ್ತಾನೆ. ಲಯವಿಲ್ಲದೆ ಕಾವ್ಯವಿಲ್ಲ. ಕಾವ್ಯವು ಗದ್ಯ ನೀಡಲಾರದ ಅನುಭವದ, ಆನಂದದ ಶ್ರೀಮಂತಿಕೆಯನ್ನು ದೊರಕಿಸುತ್ತದೆ. ಹೀಗಾಗಿ ಕಾವ್ಯ ಮೂಲತಃ ಭಾಷೆಯಿಂದ ಜೀವ ತಳೆದದ್ದು, ಈ ಭಾಷೆಯಲ್ಲಿ ಅಭಿವ್ಯಕ್ತಗೊಂಡ ಕವಿಯ ಅನುಭವದ ಮೂಲಕ ಕವಿಯ ಪ್ರತಿಭೆ, ಪ್ರಾಮಾಣಿಕತೆ, ವ್ಯಕ್ತವಾಗುತ್ತದೆ. ಸೃಜನಶೀಲ ಕವಿಗಳ ನಂಬಿಕೆಗಳು, ತತ್ವಗಳು, ಮೌಲ್ಯಗಳು, ಸಂಸ್ಕೃತಿ, ಮಾನವತಾವಾದ ಇತ್ಯಾದಿಗಳು ನವೋದಯ ಸಾಹಿತ್ಯದ ತಳಹದಿಗಳಾದವು. ಕನಸುಗಾರಿಕೆ, ಪ್ರಕೃತಿ ಪ್ರೇಮ, ರಾಷ್ಟ್ರಭಕ್ತಿ, ಆದರ್ಶ, ಭಾಷಾಭಿಮಾನ, ಭಾವುಕತೆ ಕೃತಿಗಳಲ್ಲಿ ಮೂಡತೊಡಗಿದವು. ಸಜ್ಜನಿಕೆ ಪ್ರತಿಪಾದನೆ, ಸಂಸ್ಕೃತಿಯ ಬಲವರ್ಧನೆ, ಮೂಲ ನೆಲೆಗಳಾದವು. ಉದಾರವಾದಿಗಳೂ, ಮಾನವತಾ ಹೃದಯಿಗಳೂ, ಸಂಸ್ಕೃತಿಯ ಪ್ರಚಾರಕರೂ ಆದ ನವೋದಯ ಕವಿಗಳು ಮಾನವನ ಬದುಕು ಹಸನಾಗಬೇಕು, ನೈತಿಕ ಮೌಲ್ಯಗಳನ್ನು ಉಳಿಸಿ-ಬೆಳೆಸಿಕೊಳ್ಳಬೇಕು ಎಂಬ ಸರಳ ಜೀವನದ ಆಶಯ ಹೊಂದಿದವರಾಗಿದ್ದರು. ಸಾಮಾನ್ಯರ ಕನಸು, ಹಂಬಲ, ನಿರಾಶೆ, ಪ್ರೇಮ, ದ್ವೇಷ, ಬೆರಗು, ಬೇಸರ, ಸುಖ-ದುಃಖ, ರಾಷ್ಟ್ರೀಯತೆ, ದೈಭಕ್ತಿ, ನಾಡು-ನುಡಿಯ ಪ್ರೇಮ ಮುಂತಾದವುಗಳನ್ನು ಮಕ್ಕಳು ಬೆಳೆಸಿಕೊಳ್ಳಲು ಚಿಂತಿಸಿದರು. ಇವು ಅಭಿವ್ಯಕ್ತಿಯ ಮಾಧ್ಯಮಗಳಾಗಿ ಕೆಲಸ ಮಾಡಿದವು. ಅಭಿವ್ಯಕ್ತಿ ಕ್ರಿಯೆಯಲ್ಲಿ ಭಾಷೆ, ಶೈಲಿ, ತಂತ್ರ, ವಸ್ತು, ನಿರೂಪಣೆಗಳು ಸಾಹಿತ್ಯ ರಚನೆಯ ಆಧಾರಸ್ಥಂಭಗಳಾಗಿವೆ. ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯನ್ನು ತಾತ್ವಿಕ ಅಂಶಗಳಿಂದ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಭಿವ್ಯಕ್ತಿ ಸ್ವರೂಪ :

'ಅಭಿವ್ಯಕ್ತಿ' ಎಂಬ ಪದದಲ್ಲಿ ಎರಡು ಪದಗಳಿವೆ. ಒಂದು 'ಅಭಿ' ಇನ್ನೊಂದು 'ವ್ಯಕ್ತಿ'. 'ಅಭಿ' ಪದವು ಲಕ್ಷಣ, ಚಿನ್ಹೆ, ಗುರುತು, ವ್ಯಾಪ್ತಿ, ಸುತ್ತಲು, ಒಳಗೆ, ಮುಂಭಾಗ,

ಮಾತು, ಭಾಗ, ಪಾಲು ಮುಂತಾದ ಅರ್ಥಗಳನ್ನು ಹೊಂದಿದೆ. ಶಬ್ದಕೋಶದಲ್ಲಿ 'ವ್ಯಕ್ತ' ಪದವು ಸ್ಪಷ್ಟವಾದ, ಗೋಚರವಾಗುವ, ಕಣ್ಣಿಗೆ ಕಾಣುವ, ಚೆನ್ನಾಗಿ ತಿಳಿಯಬಹುದಾದ ಅರ್ಥವನ್ನು ನೀಡುತ್ತದೆ. 'ವ್ಯಕ್ತಿ' ಎನ್ನುವುದು ಸ್ಪಷ್ಟವಾಗಿ ತೋರುವಿಕೆ, ದೃಷ್ಟಿಗೆ ಗೋಚರವಾಗುವಿಕೆ, ಸ್ಪಷ್ಟತೆ, ನಿಜಸ್ವರೂಪ ಮುಂತಾದ ಅರ್ಥಗಳನ್ನು ವ್ಯಕ್ತಪಡಿಸುತ್ತದೆ. ಈ ಎರಡು ಪದಗಳಿಂದ ಕೂಡಿದ 'ಅಭಿವ್ಯಕ್ತಿ'ಯು ಸ್ಪಷ್ಟವಾಗಿ ಕಾಣುವಿಕೆ, ಪ್ರಕಟವಾಗುವಿಕೆ, ಸ್ಥೂಲವಾಗಿ ಕಾಣಿಸಿಕೊಳ್ಳುವಿಕೆಯ ಅರ್ಥವನ್ನು ತಿಳಿಸುತ್ತದೆ. 'ವ್ಯಕ್ತಿಯು ತನ್ನ ಅನುಭವ, ಅಮೂರ್ತವಾದ ಭಾವನೆ, ಆಲೋಚನೆ, ಬಯಕೆ, ಚಿಂತನೆಗಳಿಗೆ ಸಾಮಾಜಿಕವಾಗಿ ಅಂಗೀಕೃತವಾದ ಯಾವುದೇ ಒಂದು ಮಾಧ್ಯಮದಲ್ಲಿ, ತಕ್ಕಮಟ್ಟಿಗೆ ಖಚಿತವಾದ, ಮೂರ್ತವಾದ ರೂಪವನ್ನು ಕೊಡುವ ಕ್ರಿಯೆ ತನ್ನ ಅನುಭವ ಇತ್ಯಾದಿಗಳನ್ನು ಸಮಾಜದ ಇತರರೊಂದಿಗೆ ಹಂಚಿಕೊಳ್ಳುವುದು ಮತ್ತು ತನ್ನ ಆಲೋಚನೆ ಚಿಂತನೆಗಳತ್ತ ಅವರನ್ನು ಒಲಿಸಿಕೊಳ್ಳುವುದು ಅಭಿವ್ಯಕ್ತಿಯ ಹಿಂದಿರುವ ಉದ್ದೇಶಗಳು. ಭಾಷೆ (ಮಾತು, ಸಂಭಾಷಣೆ, ಭಾಷಣ ಮತ್ತು ವಾಸ್ತುಶಿಲ್ಪಗಳಿಗೆ ಸಂಬಂಧಿಸಿದಂತೆ) ಧ್ವನಿವಿನ್ಯಾಸ ಮತ್ತು ವಾದ್ಯಗಳು (ಸಂಗೀತಕ್ಕೆ ಸಂಬಂಧಿಸಿದಂತೆ) ದೇಹವಿನ್ಯಾಸ, ಅಂಗ ಭಂಗಿಗಳು (ನಾಟ್ಯ ಮತ್ತು ನಾಟಕಗಳಿಗೆ ಸಂಬಂಧಿಸಿದಂತೆ) ಅಭಿವ್ಯಕ್ತಿಯ ವಿವಿಧ ರೂಪಗಳು. ಕನಸು ಕೂಡ ಒಂದು ಅಭಿವ್ಯಕ್ತಿಯೇ ಆದರೂ ಅದು ವೈಯಕ್ತಿಕ ಮಟ್ಟದಲ್ಲಿಷ್ಟೇ ನಿಲ್ಲುತ್ತದೆ. ಸಾಹಿತ್ಯ ವಿಮರ್ಶೆಯಲ್ಲಿ ಅಭಿವ್ಯಕ್ತಿ ಎಂಬ ಪದ ಅನುಭವಗಳನ್ನು ಓದುಗರಿಗೆ ತಲುಪಿಸಬಲ್ಲ ಮತ್ತು ಅದಕ್ಕೆ ಸಹಾಯಕವಾಗುವ ಲೇಖಕರ ಭಾಷೆ, ಸಾಮರ್ಥ್ಯ, ಶೈಲಿ, ಕೃತಿಯ ಪ್ರಕಾರ ಇವೆಲ್ಲವನ್ನು ಒಳಗೊಳ್ಳುವಂತೆ ಅಥವಾ ಇವುಗಳಲ್ಲಿ ಯಾವುದಾದರೊಂದು ಅಂಶಕ್ಕೆ ಅನ್ವಯವಾಗುವಂತೆ ಬಳಕೆಯಾಗುತ್ತದೆ'[೧].

ತಾತ್ವಿಕತೆ ಸ್ವರೂಪ :

ಸಾಹಿತಿ ಸಾಹಿತ್ಯದ ವಸ್ತುವಿನ ಜೊತೆಗೆ ತನ್ನದೆ ನೆಲೆಯ ತಾತ್ವಿಕತೆಯನ್ನು ನಿರ್ಮಿಸಿಕೊಳ್ಳುತ್ತಾನೆ. ಸಾಮಾನ್ಯವಾಗಿ ಕೃತಿಯನ್ನು ವಿಶ್ಲೇಷಣೆ ಮಾಡುತ್ತ ಹೋದಂತೆ ಪಡೆದುಕೊಳ್ಳುವ ಒಳಾರ್ಥ ಅಥವಾ ಅಂತರಂಗದ ಸಾರಾಂಶವೇ ಕೃತಿಯ ತಾತ್ವಿಕತೆಯಾಗಿದೆ. ಕೃತಿಯು ಅಂತರ್ಗತದಲ್ಲಿ ಬೇಕು-ಬೇಡಗಳನ್ನು ಹೇಳ ಬಯಸುತ್ತದೆ. ಇದರ ಕುರಿತಾದ ತಿಳುವಳಿಕೆ ಹೆಚ್ಚಿಸುವ ಮಾಧ್ಯಮ ತಾತ್ವಿಕತೆಯಾಗಿದೆ. ಬದುಕಿನ ಒಳಾರ್ಥಗಳನ್ನು ಕುರಿತು ಕೃತಿಯು ತನ್ನ ಅಂತರಂಗದೊಳಗೆ ಅಭಿವ್ಯಕ್ತಿಸುತ್ತಿರುತ್ತದೆ. ಅದುವೇ ತಾತ್ವಿಕತೆ ಎನ್ನಬಹುದು. ಅದು ಜೀವನದೃಷ್ಟಿ, ದರ್ಶನ, ತತ್ವಗ್ರಹಿಕೆ, ಲೋಕಗ್ರಹಿಕೆ, ನೋಡುವ ಕಮವನ್ನು ಒಳಗೊಂಡಿರುತ್ತದೆ. ತಾತ್ವಿಕತೆಯು ಕಾವ್ಯ, ಕಥೆ, ನಾಟಕ, ಕಾದಂಬರಿಗಳ ಅಂತರಂಗದೊಳಗೆ ಒಡಮೂಡಿರುತ್ತದೆ. ಅದನ್ನು ನಿಯಂತ್ರಿಸುವ ಕೃತಿಕಾರ ಲೋಕಗ್ರಹಿಕೆಯನ್ನು ವ್ಯಾಖ್ಯಾನಕ್ಕೆ ಒಳಪಡಿಸಿದಾಗ ತಾತ್ವಿಕತೆ ಒಡಮೂಡುತ್ತದೆ. ತಾತ್ವಿಕತೆಯ ಸತ್ಯವನ್ನು ಕಂಡುಕೊಳ್ಳುವುದು ಕಷ್ಟದ ಕೆಲಸ. ಇದಕ್ಕೆ ಆಳವಾದ ಅಧ್ಯಯನ, ವಿಭಿನ್ನವಾದ ಜೀವನ ಅನುಭವ ಅಗತ್ಯ.

ಅಭಿವ್ಯಕ್ತಿಯ ಸ್ವರೂಪವನ್ನು ಕುರಿತು ಅಭಿನವಗುಪ್ತನು ತನ್ನ ಕೃತಿಯಾದ 'ಅಭಿನವ ಭಾರತಿ'ಯಲ್ಲಿ ಹೀಗೆ ವಿಶ್ಲೇಷಿಸಿದ್ದಾನೆ. 'ಅಭಿವ್ಯಕ್ತಿಯು ಒಂದು ವ್ಯವಸ್ಥಿತವಾದ ಕ್ರಿಯೆ' ಒಳಗಡೆ ಇರುವ ಸಂಗ್ರಹದಿಂದ ಒಂದು ಆಯ್ಕೆ ಅದಕ್ಕೆ ಅಗತ್ಯ. ಆದ್ದರಿಂದ ಅಭಿವ್ಯಕ್ತಿ ಕ್ರಿಯೆಯು ಜ್ಞಾನ, ಇಚ್ಛೆ ಹಾಗೂ ಆತ್ಮಚೈತನ್ಯ ಅಥವಾ ಆನಂದಗಳನ್ನು ಪೂರ್ವಭಾವಿಯಾಗಿ ಹೊಂದಿರುತ್ತದೆ. ಆತ್ಮಾನಂದ ಇರದಿದ್ದರೆ ಇಚ್ಛೆ ಇರುವುದಿಲ್ಲ. ಇಚ್ಛೆ ಇಲ್ಲದಿದ್ದರೆ ಯಾವ ಜ್ಞಾನವು ಸಾಧ್ಯವಿಲ್ಲ. ಅದನ್ನು ಪಡೆಯುವ ಸಾಧನದ ಮತ್ತು ಮಾರ್ಗಗಳ ಜ್ಞಾನವಿರದಿದ್ದರೆ ವ್ಯವಸ್ಥಿತವಾದ ಕ್ರಿಯೆ ಇರುವುದಿಲ್ಲ. ಆತ್ಮಪ್ರಜ್ಞೆ ಅಥವಾ ಇಚ್ಛೆ ಜ್ಞಾನ ಮತ್ತು ಕ್ರಿಯೆ ಇವುಗಳನ್ನು ಉಂಟು ಮಾಡುವ ಶಕ್ತಿಯನ್ನು ಸೂಚಿಸುತ್ತದೆ'[೨].

ಇಂಗ್ಲೀಷಿನ 'Expression' ಎಂಬ ಪದಕ್ಕೆ ಸಮವಾಗಿ ಅಭಿವ್ಯಕ್ತಿ ಎಂಬ ಪದವನ್ನು ಕನ್ನಡದಲ್ಲಿ ಬಳಸಲಾಗುತ್ತದೆ. 'Expression' ಎಂದರೆ ಹೊರಸೂಸುವಿಕೆ, ನಿರೂಪಣೆ, ನಿರೂಪಿಸುವುದು, ಭಾವನೆಗಳ, ಗುಣಗಳ ಪ್ರಕಟಗೊಳಿಸುವುದು, ನುಡಿಯುವುದು, ಮಾತಿನಲ್ಲಿ ತಿಳಿಯಪಡಿಸುವುದು, ಪದ ಪ್ರಯೋಗ, ಪದ ವಿನ್ಯಾಸ, ಮಾತಿನ ಜೋಡಣೆ, ಪದ, ಪದಗುಚ್ಛ, ಮಾತಿನ ಮೂಲಕ ಅಭಿವ್ಯಕ್ತಗೊಳಿಸುವ ಶಕ್ತಿ, ಅಭಿವ್ಯಕ್ತಿ ಶೀಲ ಗುಣ, ಭಾವ ಮೊದಲಾದವುಗಳನ್ನು ನಿರೂಪಿಸುವ ರೀತಿ ಎಂಬ ಅರ್ಥವನ್ನು ಹೊಂದಿದೆ ಎನ್ನಬಹುದು.

ವಸ್ತು, ವಿಚಾರ, ವಿವೇಕ, ಸತ್ಯ-ಅಸತ್ಯಗಳು ಮೊದಲು ಮನಸ್ಸಿಗೆ ತಲುಪುವುದಕ್ಕೆ ಕಾರಣ ಪ್ರತಿಭಾನ. ಪ್ರತಿಭಾನವು ಸಂಪೂರ್ಣವಾಗಿ ಅಭಿವ್ಯಕ್ತಿಯಾದಾಗ ಅದು ಕಲೆಯಾಗುತ್ತದೆ. ಪ್ರತಿಭಾನ ಪ್ರತಿಮೆಯಾಗಿ ರೂಪುಗೊಂಡಾಗ ಅಭಿವ್ಯಕ್ತಿಯ ದರ್ಶನವಾಗುತ್ತದೆ. ಭಾಷೆಯ ಮೂಲಕ ಕೃತಿಯನ್ನು ಸೃಷ್ಟಿಸುವುದು ಎಷ್ಟು ಮುಖ್ಯವೋ ಅದು ಸಾಹಿತ್ಯಾಸಕ್ತರನ್ನು ತಲುಪುವುದು ಅಷ್ಟೇ ಪ್ರಮುಖವಾದುದು. ಅಭಿವ್ಯಕ್ತಗೊಂಡ ಸಾಹಿತ್ಯ ಸಹೃದಯರನ್ನು ತಲುಪುವ ವಿಧಾನವೇ ಸಂವಹನ. ಅಭಿವ್ಯಕ್ತಿ ಮತ್ತು ಸಂವಹನಗಳು ಒಂದಕ್ಕೊಂದು ಪೂರಕವಾದವು. ಇದನ್ನು ಯಶವಂತ ಚಿತ್ತಾಲರು, 'ಭಾಷೆಗಿರುವ ಇಬ್ಬಗೆಯ ಸಾಮರ್ಥ್ಯ, ಒಂದು; ಸುಪ್ತಪ್ರಜ್ಞೆಯನ್ನು ಪ್ರತಿಮೆಗಳ ಮೂಲಕ ಪ್ರಕಟಿಸುವ ಸಾಮರ್ಥ್ಯ. ಇದನ್ನು ನಾನು ಅಭಿವ್ಯಕ್ತಿಯೆಂದು ಕರೆಯುತ್ತೇನೆ. ಇನ್ನೊಂದು ಹೀಗೆ ಪ್ರತಿಮೆಯಾಗಿ ಮೂಡಿದ್ದನ್ನು ಉಳಿದವರೊಂದಿಗೆ ಹಂಚಿಕೊಂಡು, ಹಂಚಿಕೊಳ್ಳುವುದರ ಮೂಲಕವೇ ಅದನ್ನು ಜಾಗ್ರತ ಪ್ರಜ್ಞೆಯಲ್ಲಿ ಅರಗಿಸಿಕೊಳ್ಳುವ ಸಾಮರ್ಥ್ಯ. ಇದನ್ನೇ ನಾನು ಸಂವಹನ ಎಂದು ಕರೆಯುತ್ತೇನೆ'[೩] ಎಂದು ಹೇಳುತ್ತಾರೆ. ಕಾವ್ಯಕ್ಕೆ ತನ್ನದೆ ಆದ ವಿಶಿಷ್ಟ ಭಾಷೆಯಿದೆ ಎಂಬುದನ್ನು ಅನೇಕ ಆಧಾರಗಳಿಂದ ಗಮನಿಸಬಹುದು. ಕವಿತೆಯನ್ನು ಕಟ್ಟುವಾಗ ಪದಗಳ ಜೋಡಣೆ, ಅದರ ವಿನ್ಯಾಸ ಹೊಸದೊಂದು ಅರ್ಥವನ್ನು ಕಟ್ಟಿಕೊಡುತ್ತದೆ. ಸಂಗೀತಕ್ಕೆ ಸ್ವರ, ಶಿಲ್ಪಿಗೆ ಕಲ್ಲು, ಕಲಾಕಾರನಿಗೆ ಬಣ್ಣಗಳು ಹೇಗೆ ಮಾಧ್ಯಮವಾಗುತ್ತವೆಯೋ ಹಾಗೆಯೇ ಭಾಷೆಯು ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಪದ್ಯವಾಗಲಿ ಗದ್ಯವಾಗಲಿ

ಭಾಷೆ, ವಸ್ತು, ಆಶಯ, ಶೈಲಿ, ತಂತ್ರ, ಸಹೃದಯರು ಮೊದಲಾದ ಅಭಿವ್ಯಕ್ತಿಯ ತಾತ್ವಿಕ ಅಂಶಗಳನ್ನು ಒಳಗೊಂಡಿರುವುದು ಸಹಜವಾದುದು ಮತ್ತು ಅವಶ್ಯಕವಾದುದು.

ಭಾಷೆ ಸಮೂಹದ ಒಂದು ಘಟಕ. ಸಾಹಿತ್ಯ ಕೃತಿಯು ಅರ್ಥಪೂರ್ಣವಾದ, ವಿಶೇಷ ಅನುಭವವನ್ನು ಭಾಷೆಯ ಮೂಲಕ ಕಟ್ಟಿಕೊಡುತ್ತದೆ. ಕವಿ ಮತ್ತು ಕೃತಿಗಳ ಬಗ್ಗೆ ಚರ್ಚಿಸುವಾಗ ಆಯಾ ಕವಿಗಳ ಭಾಷಿಕ ವೈವಿಧ್ಯತೆಗಳನ್ನು ಆಯಾ ಕವಿಗಳ ಶೈಲಿ ಎಂದು ಕರೆಯಬಹುದು. ವಸ್ತು ಸಾಹಿತ್ಯ ಕೃತಿಯ ನಿರ್ದಿಷ್ಟ ಧೋರಣೆ ಮತ್ತು ವಿಚಾರಗಳನ್ನು ತಿಳಿಸುತ್ತದೆ. ವಸ್ತು ವಿಷಯದ ಒಂದು ಭಾಗ. ಸಂಗತಿ, ಸಂಕೇತಗಳು ನುಡಿಗಟ್ಟುಗಳಲ್ಲಿ ಪರೋಕ್ಷವಾಗಿ ಅಭಿವ್ಯಕ್ತಗೊಳ್ಳುತ್ತಿರುತ್ತವೆ. ವಾಸ್ತವ ಜಗತ್ತನ್ನು ಮುಂದಿಟ್ಟುಕೊಂಡು ಬೇರೊಂದು ಲೋಕವನ್ನು ಸೃಷ್ಟಿಸುವುದು ಕವಿತೆ. ಅದು ಪದಗಳ ಲಾಲಿತ್ಯ, ರೂಪಕ, ಪ್ರತಿಮೆಗಳನ್ನು ಒಳಗೊಂಡಿರುತ್ತದೆ. ಅಭಿವ್ಯಕ್ತಿಯ ತಾತ್ವಿಕತೆ ಎನ್ನುವುದು, ಕೃತಿಯು ಒಳಗೊಂಡಿರುವ ತತ್ವ, ಸಿದ್ಧಾಂತವೆಂದು ಗುರುತಿಸಲಾಗಿದೆ. ಅಭಿವ್ಯಕ್ತಿ ವ್ಯಕ್ತಿಯ ಭಾವಾಭಿವ್ಯಕ್ತಿಗೆ ಸಂಬಂಧಿಸಿದೆ. ಸಮಕಾಲೀನ ಸಂದರ್ಭದಲ್ಲಿ ಕೃತಿ ಕಟ್ಟಿಕೊಡುವ ವಸ್ತು, ಆಶಯಕ್ಕೆ ಸಂಬಂಧಿಸಿದೆ.

ಒಬ್ಬ ಕವಿಯ ಇಡಿಯಾದ ಕಾವ್ಯದ ಅಭಿವ್ಯಕ್ತಿಯ ತಾತ್ವಿಕತೆ ಶೋಧಿಸುವುದು ಅಧ್ಯಯನದ ಉದ್ದೇಶವಲ್ಲ. ಮಕ್ಕಳ ಸಾಹಿತ್ಯದಲ್ಲಿ ಪ್ರಮುಖವಾಗಿ ಗುರುತಿಸಿಕೊಂಡಿರುವ ಕವಿಗಳನ್ನು ಪ್ರಾದೇಶಿಕ ನೆಲೆಯಲ್ಲಿ ಗುರುತಿಸುವ ಮಾದರಿಯನ್ನು ಅಧ್ಯಯನ ಹೊಂದಿದೆ.

ಮಕ್ಕಳ ಸಾಹಿತ್ಯವು ಪ್ರೌಢಸಾಹಿತ್ಯದಂತೆ ಕವಿತೆ, ಕಥೆ, ನಾಟಕ, ಪ್ರವಾಸ ಸಾಹಿತ್ಯ, ಕಾದಂಬರಿ ಎಂಬ ವಿವಿಧ ಪ್ರಕಾರಗಳಲ್ಲಿ ವೈವಿಧ್ಯಮಯವಾಗಿ ಬೆಳವಣಿಗೆಯನ್ನು ಹೊಂದುತ್ತ ಬಂದರೂ ಇನ್ನೂ ಆಶಾದಾಯಕವಾದ ಪ್ರಗತಿಯನ್ನು ಹೊಂದಬೇಕಾಗಿದೆ. ಇತ್ತೀಚೆಗೆ ಆ ಬೆಳವಣಿಗೆಯನ್ನು ಸಫಲಗೊಳಿಸಲು ಪ್ರಯತ್ನಿಸಿರುವ ಬರಹಗಾರರು ಕೆಲವರು ಎಂದರೆ ಸೂಕ್ತ. ಅಂಥ ಮಕ್ಕಳ ಸಾಹಿತ್ಯ ಕವನ, ಕಥೆ, ನಾಟಕ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆ, ಪ್ರವಾಸ, ವಿಜ್ಞಾನ ಮೊದಲಾದ ಪ್ರಕಾರಗಳಲ್ಲಿ ಸಮೃದ್ಧವಾಗಿ ಬೆಳೆಯುತ್ತಲಿದೆ. 'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎಂಬ ಗಾದೆ ಮಾತಿನಂತೆ ಮಕ್ಕಳನ್ನು ಬಾಲ್ಯದಲ್ಲಿರುವಾಗಲೇ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಲು ಪ್ರಯತ್ನಿಸಬೇಕು. ಮಕ್ಕಳು ನಮ್ಮ ರಾಷ್ಟ್ರದ ಅಮೂಲ್ಯ ಸಂಪತ್ತು. ಇವರ ಬದುಕನ್ನು ಸುಂದರ ಮತ್ತು ವ್ಯವಸ್ಥಿತಗೊಳಿಸುವುದು ಹಿರಿಯರ ಕರ್ತವ್ಯ. ಅವರು ತಂದೆ, ತಾಯಿ, ಬಂಧುಗಳು, ಗುರುಗಳು ಇರಬಹುದು. ಇಲ್ಲವೆ ಸಾಹಿತಿಗಳಾಗಿರಬಹುದು. ಸಾಹಿತಿಯಾದವನು ಮಕ್ಕಳ ಬಗ್ಗೆ ನಿರ್ಲಕ್ಷ್ಯ ಮಾಡದೆ ಕಥೆ, ಕವನ, ನಾಟಕ, ಕಾದಂಬರಿಗಳ ಮೂಲಕ ಮಕ್ಕಳ ಮನವನ್ನು ಆಕರ್ಷಣೀಯಗೊಳಿಸಿ, ಅವರನ್ನು ತಿದ್ದಿ ಉತ್ತಮ, ಆದರ್ಶವಾದ ಮೌಲ್ಯಗಳನ್ನು ಹೊಂದಲು ಪ್ರಯತ್ನಿಸಬೇಕು. ಈ ನೆಲೆಯಲ್ಲಿ ಮಕ್ಕಳ ಸಾಹಿತ್ಯ ಅವಶ್ಯಕವಾಗಿದೆ ಎನ್ನಬಹುದು.

ಹೊಸಗನ್ನಡ ಸಾಹಿತ್ಯದಲ್ಲಿ ಮಕ್ಕಳಿಗಾಗಿ ರಚಿಸಿರುವ ಸಾಹಿತ್ಯವನ್ನು ಗಮನಿಸಿದರೆ ಅದು 'ಮಕ್ಕಳ ಸಾಹಿತ್ಯದ ಅರುಣೋದಯ ಕಾಲ' ಎಂದು ಕರೆಯಬಹುದು. ಈ ಸಂದರ್ಭಕ್ಕೂ ಹಿಂದಿನ ಸನ್ನಿವೇಶವನ್ನು ಪ್ರಸ್ತಾಪಿಸುವುದು ಔಚಿತ್ಯ ಎನಿಸುತ್ತದೆ. ಮಕ್ಕಳ ಸಾಹಿತ್ಯದ ಅರುಣೋದಯ ಪೂರ್ವದಲ್ಲಿ ಮಕ್ಕಳು, ಮಹಿಳೆಯರು, ವಯಸ್ಕರು, ವೃದ್ಧರು ಎಲ್ಲರಿಗೂ ಯಾವುದೇ ಭೇದವಿಲ್ಲದೆ ಸಾಹಿತ್ಯವನ್ನು ಒದಗಿಸುವುದಕ್ಕೆ ರಾಮಾಯಣ, ಮಹಾಭಾರತ, ಪುರಾಣ ಕಥೆಗಳು ಆಕರವಾಗಿರುವುದು ತೋರುತ್ತದೆ. ಮಕ್ಕಳ ವಯಸ್ಸು ಮತ್ತು ಮನೋಭಾವಗಳನ್ನು ಅವಲಂಬಿಸಿ ಸೃಜನಶೀಲವಾದ ರಚನೆಗಳು ಇರಲಿಲ್ಲ. ಆಕರಗಳು ಯಾವುದೇ ಆಗಿರಲಿ ಅದರ ಮುಖ್ಯ ಉದ್ದೇಶ ಅಥವಾ ಆಶಯ ಏನೆಂದರೆ ಎಳೆ ಮಕ್ಕಳ ಮನಸ್ಸಿನಲ್ಲಿ ಮೂಡುವಂತಹ, ಅವರು ಜೀವನದಲ್ಲಿ ಅನುಸರಿಸಬೇಕಾದ ನೀತಿಯನ್ನು ಬೆಳೆಸುವದಾಗಿತ್ತು. ಅವು ಗದ್ಯ-ಪದ್ಯಗಳ ರೂಪದಲ್ಲಿ ವ್ಯಕ್ತವಾಗಿದ್ದವು. ಹಿರಿಯರು ಕಿರಿಯರಿಗೆ ಪದ್ಯಗಳನ್ನು 'ಮೌಖಿಕ'ವಾಗಿ ಹೇಳುತ್ತಿದ್ದರು. ಮಕ್ಕಳಿಗೂ ಸಹ ಕೇಳಲು ರಂಜನೀಯವಾಗಿದ್ದವು ಎನ್ನುವುದರೊಂದಿಗೆ ನೆನಪಿನಲ್ಲಿ ಉಳಿಯುವ ರೀತಿಯಲ್ಲಿ ಇದ್ದವು.

'ಬೆಳಗಾಯಿತು ಮೂಡಲಲ್ಲಿ,
ಬಾಲರಿರಾ ಬೇಗೆದ್ದು ಬನ್ನಿ ದೇವರಿಗೆ ನಮಿಸಿ
ಹಕ್ಕಿ-ಪಕ್ಕಿಗಳೆಲ್ಲ ಹೊರಬಂದು,
ಚಿಲಿಪಿಲಿ ಹಾಡುತಿಹವು ಬಯಲಲ್ಲಿ
ಗೋವುಗಳು ಬಿಡಿರೆಂದು ಅಂಬಾ ಎನುತಲಿಹವು
ನಾರಿಯರು ಭರಭರನೆ ಮೊಸರ ಕಡೆಯುವರು
ಬಾಲೆಯರು ಬಿಂದಿಗೆ
ಬೆಳಗಿ ನೀರ ತರುತಿಹರು'.

ಎನ್ನುವ ಹಾಡುಗಳನ್ನು ಮಕ್ಕಳಿಗೆ ನಿತ್ಯವೂ ಅಜ್ಜಂದಿರರು ಬೆಳಗು ಜಾವದಲ್ಲಿ ಹಾಸಿಗೆಯಿಂದ ಎಬ್ಬಿಸಿ ಉದಯರಾಗವೆಂದು ಹೇಳುತ್ತಿದ್ದರು. ಅವು ಭಾಷೆ ಮತ್ತು ಪ್ರದೇಶಕ್ಕೆ ಸಂಬಂಧಿಸಿ ವಿಭಿನ್ನವಾಗಿರುತ್ತಿದ್ದವು. ಹೆಂಗಳೆಯರೂ ಸಹ ಹಾಡಿನ ಮೂಲಕ ಸಂಸ್ಕೃತಿ-ಸಂಪ್ರದಾಯಗಳನ್ನು ಮಕ್ಕಳಿಗೆ ಹೇಳುತ್ತಿದ್ದರು. ಮೌಖಿಕ ಪರಂಪರೆಯ ಇನ್ನೊಂದು ಮುಖ ಜಾನಪದ ರಂಗವು ಈ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುತ್ತಿತ್ತು. ಅವುಗಳಲ್ಲಿ ಮೂಡಲಪಾಯ, ಪಡುವಲಪಾಯ, ದೊಡ್ಡಾಟ, ಕೃಷ್ಣ ಪಾರಿಜಾತ, ಸಂಗ್ಯಾಬಾಳ್ಯಾ, ಸುಗ್ಗಿ ಕುಣಿತ ಮುಂತಾದ ಜಾನಪದಿಯ ಬಹುರೂಪಗಳ ಪ್ರದರ್ಶನ ಮಕ್ಕಳಿಗೂ ಹಿರಿಯರಿಗೂ ಸಮನಾಗಿ ದೊರಕುತ್ತಿದ್ದವು. ಗೀಗೀ ಪದ, ಏಕತಾರಿ ಪದ, ಜೋಗೇರ ಪದ, ಬೀಸುವ ಹಾಡು, ಕುಟ್ಟುವ ಹಾಡು ಇವೆಲ್ಲ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದವು. ಸ್ವಾತಂತ್ರ್ಯದ ನಂತರ ಹಳ್ಳಿಗಳ ಬೆಳವಣಿಗೆಯಾಗಿ ಎಲ್ಲರಿಗೂ ಶಿಕ್ಷಣದ ಅವಕಾಶ ದೊರೆಯ ತೊಡಗಿತು. ಮಕ್ಕಳಿಗಾಗಿ ಹಲವಾರು ಪಠ್ಯಗಳು ರಚನೆಯಾದವು. ಆ ಸಾಹಿತ್ಯವು ಬಹುತೇಕ ಮಕ್ಕಳು ಸುಲಭವಾಗಿ ಅರ್ಥ ಮಾಡಿಕೊಳ್ಳುವಂತೆ ಅಭಿನಯಿಸುತ್ತ ಹಾಡುವಂತಹ ಸರಳ ಪದಗಳನ್ನು ಜೋಡಿಸಿ ಬರಹ ರೂಪತಾಳಿರುವುದೇ ಅವುಗಳ ವಿಶೇಷವೆನ್ನಬಹುದು.

ಜಾತಕ ಕಥೆಗಳು, ಪಂಚತಂತ್ರದ ಕಥೆಗಳು, ಹಿತೋಪದೇಶದ ಕಥೆಗಳು, ಕಥಾಮಂಜರಿಯ ಆಯ್ದ ಕಥೆಗಳು, ರಾಮಾಯಣ, ಮಹಾಭಾರತಗಳಲ್ಲಿ ಬರುವ ನೀತಿ ಕಥೆಗಳನ್ನು ಆಯ್ದು ಶಾಲಾ ಮಕ್ಕಳ ಪಾಠಗಳಲ್ಲಿ ಸೇರಿಸುತ್ತಿದ್ದುದು ಕಂಡು ಬರುತ್ತದೆ. ಪ್ರಾಣಿ, ಪಕ್ಷಿಗಳ ಪಾತ್ರದ ಮೂಲಕ ಕಥೆಗಳನ್ನು ಹೇಳಿದರೆ ಮಕ್ಕಳಿಗೆ ಬೇಗ ತಲುಪುತ್ತವೆ ಎನ್ನುವುದು ಅರಿತುಕೊಂಡಂತ್ತಿತ್ತು. ಮೋಸ-ವಂಚನೆಗಳನ್ನು, ವ್ಯಕ್ತಪಡಿಸುವ ಬಕಪಕ್ಷಿ ಕಥೆ, ನರಿಯ ಕಥೆ, ಮಾರ್ಜಾಲನ್ಯಾಯ, ಸಾಹಸಗಳನ್ನು ಉದ್ದೀಪನಗೊಳಿಸುವ ಭೀಮ, ಹನುಮ, ಧ್ರುವ, ಮೊಲ ಸಿಂಹದ ಕಥೆ, ರೋಗ-ರುಜಿನುಗಳನ್ನು ಕುರಿತಾದ ಅನೇಕ ವಸ್ತುಗಳುಳ್ಳ ಕಥೆಗಳು ಕಂಡುಬರುತ್ತವೆ.

ಮಕ್ಕಳಿಗೆ ಅನುಭವವಾಗುವ ಮತ್ತು ಮಕ್ಕಳನ್ನು ಉದ್ದೇಶಿಸಿ ಸಾಹಿತ್ಯ ರಚನೆಗೊಂಡ ಉದಾಹರಣೆಯನ್ನು ನೋಡಬಹುದು.

'ಮೂಡಲೊಳಗೆ ಚಂದ್ರನೀಗ
ಮೂಡುತಿಹನು ದೂರ-ದೂರ
ಕೋಡುತಿಹುದು ಕಳ್ಳನಂತೆ ಕೂಡೆ ಕತ್ತಲೆ
ನೋಡು ಮನೆಯ ಮೇಲೆ ಬೆಳಕು
ಕೂಡಿ ಬೆಳ್ಳಿಯಿಂದ ತಗಡು
ಮಾಡಿ ಹೊದಿಸಿದಂತೆ ಕಣ್ಗೆ
ಹೊಳೆಯುತಿರುವುದು
ಮೇಲೆ ಬೆಳ್ಳಿ ಬಟ್ಟಲನ್ನು
ಹೋಲುತಿಹನು ಸಸಿಯು ನೆಲವು
ಹಾಲ ಮಳೆಯ ಕರೆದ ತೆರದಿ ಬೆಳಗುತಿರುವುದು'.

ಇದು ಎಸ್. ಜಿ. ನರಸಿಂಹಾಚಾರ್ ಅವರು ರಚಿಸಿದ ಪದ್ಯ. ೧೮೯೫ ರಲ್ಲಿ ಒಂದನೆಯ ತರಗತಿಯ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿತ್ತು. ಸರಳ ಶೈಲಿಯ ಲಯಬದ್ಧ ಪದಗಳಿಂದ ಕೂಡಿದೆ. ಮಕ್ಕಳು ಚಂದ್ರೋದಯದ ಪರಿಚಯ ಮಾಡಿಕೊಳ್ಳುವ ರೀತಿ ನವೀನ ಕಲ್ಪನೆಯಿಂದ ಕೂಡಿದೆ. ಬೆಳ್ಳಿ ತಗಡು, ಬೆಳ್ಳಿ ಬಟ್ಟಲು, ಹಾಲು ಹೊಳೆ ಮುಂತಾದ ರೂಪಕವನ್ನು ಪದ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ಚಂದ್ರನನ್ನು ನೋಡುವ ದೃಷ್ಟಿ ರಸವತ್ತಾಗಿ ಮೂಡಿದೆ. ಮಕ್ಕಳಲ್ಲಿ ಚಿಕಿತ್ಸಕ ಮನೋಭಾವ ಉಂಟು ಮಾಡುತ್ತದೆ. ಇಂಥ ಪದ್ಯಗಳು ಮಕ್ಕಳ ಕಲ್ಪನೆ ಪುಷ್ಟಿಗೊಳ್ಳಲು ಸಹಾಯಕಾರಿಯಾಗಿವೆ.

ತೋನ್ಸೆ ಮಂಗೇಶರಾಯರು ೧೯೦೭ ರಲ್ಲಿ ರಚಿಸಿದ ಪದ್ಯ ಭಿನ್ನ ಮಾದರಿಯನ್ನು ಹೊಂದಿದೆ.

ಬಾಲರೆದ್ದ ಮೇಲೆ । ಏನು ಮಾಡಬೇಕಲೇ ।
ಕಾಲು ಕೈ ಮುಖವನು । ಹೀಗೆ ತೊಳೆಯಬೇಕಲೇ ।

ಮನೆಯ ಕೆಲಸ ನಾವು
ಹೇಗೆ ಮಾಡಬೇಕಲೇ
ಮನಸುಕೊಟ್ಟು ಕಸವಗುಡಿಸಿ
ಹೀಗೆ ಬಿಸುಡಲೇ........
ಶಾಲೆಯಲ್ಲಿ ಮಕ್ಕಳೇನು ಮಾಡಬೇಕಲೇ
ಬಳಪದಿಂದ ತಿದ್ದಿ ತೀಡಿ ಹೀಗೆ ಬರೆಯುವೆ
ಶಾಲೆ ಮುಗಿದ ಬಳಿಕ ಗುರುವ ಹೇಗೆ ಅಗಲುವೆ
ಲೀಲೆಯಿಂದ ಗುರುವ ನಮಿಸಿ
ಹೀಗೆ ನಡೆಯುವೆ..........

ಇಲ್ಲಿ ಮಗುವಿನ ಕೆಲಸ ಮತ್ತು ಅದನ್ನು ಅನುಸರಿಸುವ ರೀತಿ-ನೀತಿಗಳನ್ನು ಬಿಂಬಿಸಿದ್ದಾರೆ. 'ಮಾಡುತ್ತ ಕಲಿ, ಹಾಡುತ್ತ ನಲಿ' ಎಂಬ ನೀತಿಯಂತೆ ಕ್ರಿಯೆಯನ್ನು, ಹಾಡನ್ನೂ, ಕಲಿಕೆಯನ್ನು ಒಟ್ಟಿಗೆ ಅಳವಡಿಸಿಕೊಂಡು ಪದ್ಯ ವಿಭಿನ್ನತೆಯಿಂದ ಅಭಿವ್ಯಕ್ತಗೊಂಡಿದೆ. ಕವಿ ಮಗುವಿನ ವಾಸ್ತವದೊಂದಿಗೆ ನಿಂತು ನೀತಿಯನ್ನು ಬಿಂಬಿಸುತ್ತಾರೆ. ಅಮೂರ್ತವಾದ ಕಲ್ಪನೆಯನ್ನು ಮಗುವಿಗೆ ತುಂಬುತ್ತ ಕಡ್ಡಾಯವಾಗಿ ಹೇರಿಕೆಯಾಗುತ್ತಿದ್ದ ಕ್ರಮದಿಂದ ದೂರಾಗಿ, ಮಕ್ಕಳ ಅನುಭವಕ್ಕೆ ನಿಲುಕುವ ಬಗೆಯಲ್ಲಿ ನೀತಿ ಪಾಠ ಕಲಿಸುವ ಸಾಹಿತ್ಯ ರಚನೆ ಮಕ್ಕಳ ಸಾಹಿತ್ಯದಲ್ಲಿ ಅರುಣೋದಯದ ಹೆಜ್ಜೆ ಗುರುತುಗಳಾಗಿವೆ.

ಕನ್ನಡದಲ್ಲಿ ಮೊದಲು 'ಗೋವಿನ ಹಾಡು' ಮತ್ತು 'ಮನೋಮಿಪದಗಳಂತಹ' ಜಾನಪದ ಹಾಡುಗಳು ಬಲು ಜನಪ್ರಿಯವಾಗಿದ್ದವು. ಕಳ್ಳೆ ಮಳ್ಳೆ ಕಪಾಟ ಮಳ್ಳೆ, ದಟ್ಟಿ ದಟ್ಟಿ ದಡಸಾಲಿ, ಗಿರಿಗಿರಿ ಗಿಂಡಿ ಇಬತ್ತಿ ಉಂಡಿ ಮೊದಲಾದ ಆಟಗಳನ್ನು ಆಡುವಾಗ ಇಂಥ ಹಾಡುಗಳನ್ನು ಮಕ್ಕಳು ಆಡುತ್ತ-ಹಾಡುತ್ತ ನಲಿಯುತ್ತಿದ್ದರು. ಸಂದರ್ಭಕ್ಕೆ ತಕ್ಕ ಹಾಗೆ ಈ ಹಾಡುಗಳು ಹುಟ್ಟಿಕೊಂಡಿರಲು ಸಾಧ್ಯ ಎನ್ನಬಹುದು. ಜಾನಪದ ಧಾಟಿಯ ಇಂಥ ಹಾಡುಗಳಿಗೆ ಕನ್ನಡದಲ್ಲಿ ಶಿಶು ಪ್ರಾಸಗಳೆಂದು ಕರೆಯುತ್ತಾರೆ. ಕನ್ನಡದಲ್ಲಿ ಮೊದಲು ಕ್ರೈಸ್ತ ಮಿಷನರಿಗಳು ಶಾಲೆಗಳಲ್ಲಿ ಕ್ರಿಸ್ತನ ಕುರಿತಾಗಿ ಮತ್ತು ಬ್ರಿಟಿಷ ರಾಜ-ರಾಣಿಯರನ್ನು ಕುರಿತು ಪದ್ಯಗಳು ರಚಿತವಾಗಿದ್ದು ಕಂಡುಬರುತ್ತವೆ. ಹೀಗೆ ೧೮೬೨ರಲ್ಲಿ ಪ್ರಕಟವಾದ ಜೆ. ಮ್ಯಾಕ್ ಅವರ 'ಬಾಲಗೀತೆಗಳು' ಎಂಬ ಪುಸ್ತಕವು ಮೊದಲನೆಯ ಕವನ ಸಂಗ್ರಹವೆಂದು ಗುರುತಿಸಬಹುದು.

ಮಕ್ಕಳ ಸಾಹಿತ್ಯದ ಆರಂಭದ ಸಮಯದಲ್ಲಿ ಅಂದರೆ ಸುಮಾರು ೧೮೬೯ರ ಸಮಯದಲ್ಲಿ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿಯವರು ಅನೇಕ ಜನಪ್ರಿಯವಾದ ಮಕ್ಕಳ ಕವಿತೆಗಳನ್ನು ರಚಿಸಿದರು. ಅವರ-

'ಏಳು ಮಾತಿನ ಗಿಣಿಯೆ
ಏಳು ಮುದ್ದಿನ ಖಣಿಯೆ

ಏಳು ಬೆಳಗಾಯಿತು ।
ಕಾಗೆ ಕಾಕಾ ಎಂದು
ಗುಬ್ಬಿ ಚಿಂವ್ ಚಿಂವ ಎಂದು
ಈಗಲೊದರುತ್ತಿಹವು ಬೇಗನೇಳಯ್' ॥

ಎನ್ನುವ ಕವನ ಮಕ್ಕಳಿಗೆ ಬಲು ಆಕರ್ಷಕವಾಗಿತ್ತು. ಅದರಂತೆ 'ಸುಣ್ಣವ ಕೊಡುವೆನು ಸುರಿಯಲೆ ಮಳೆಯೆ' ಮುಂತಾದ ಪದ್ಯಗಳು ಮಕ್ಕಳ ಮನವನ್ನು ತುಂಬಿಕೊಂಡಿವೆ. ಇಂಥ ಹಾಡುಗಳನ್ನು ಈಗಲೂ ಸಹ ಕೆಲ ಹಿರಿಯರು ತಮ್ಮ ಬಾಯಿ ಚಪಲಕ್ಕೆ ಗೊಣಗುಟ್ಟುವರು.

ಕನ್ನಡದಲ್ಲಿ ಪಂಜೆಮಂಗೇಶರಾಯರ (೧೮೭೪) ಪ್ರವೇಶದಿಂದಾಗಿ ಮಕ್ಕಳ ಸಾಹಿತ್ಯದ ಹೊಸಯುಗ ಪ್ರಾರಂಭಗೊಂಡಿತೆಂದು ಹೇಳಬಹುದು. ಪಂಜೆಯವರ 'ಹಾವಿನ ಹಾಡು' ಜನಪ್ರಿಯ ಮಕ್ಕಳ ಕವನ ಸಂಗ್ರಹ. 'ನಾಗರ ಹಾವೇ ಹಾವೊಳು ಹೂವೆ' ಎಂಬ ಹಾಡಂತು ಮಕ್ಕಳ ಮನವನ್ನು ಸೂರೆಗೊಂಡು, ಅವರಿಗೆ ಮುದ ನೀಡಿ ನಿತ್ಯನೂತನವಾಗಿದೆ. ಗೋವಿಂದ ಪೈ ಅವರು (೧೮೮೩) 'ಗಿಳಿವಿಂಡು', 'ನಂದಾದೀಪ' ಕೃತಿಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಎಂ. ಎಸ್. ಕಾಮತ್‌ರು (೧೮೮೩) ಮಕ್ಕಳ ನಾಟಕಗಳನ್ನು ರಚಿಸಿದವರಲ್ಲಿ ಬಹುದೊಡ್ಡ ಹೆಸರು. ಇದೇ ಸಮಯದಲ್ಲಿ ಹುಯಲಗೋಳ್ ನಾರಾಯಣರಾಯರು (೧೮೮೪) ರಚಿಸಿದ 'ಉದಯವಾಗಲಿ ಚೆಲುವ ಕನ್ನಡ ನಾಡು' ಎಂಬ ಕವಿತೆ ಪ್ರತಿಯೊಂದು ಶಾಲೆಗಳಲ್ಲಿ ಪ್ರಾರ್ಥನಾಗೀತೆಯಾಗಿ ಪ್ರಸಿದ್ಧಿ ಪಡೆಯಿತು. ಇವರ ಸಮಕಾಲೀನರಾದ 'ಹೊಯ್ಸಳ' ಕಾವ್ಯನಾಮದ ಆರಗಂ ಲಕ್ಷ್ಮಣರಾಯರು (೧೮೯೩) 'ಮಗುವಿನ ಕೂಗು', 'ಕೋಗಿಲೆ', 'ಚಂದಮಾಮ', 'ಕೋಲು ಕುದುರೆ', 'ನರಿಗಳ ಕೂಗು' ಮೊದಲಾದ ಕವನ ಸಂಗ್ರಹಗಳನ್ನು ಪ್ರಕಟಿಸುವ ಮೂಲಕ ಮಕ್ಕಳ ಸಾಹಿತ್ಯ ಸಂಪತ್ತನ್ನು ಸಮೃದ್ಧಗೊಳಿಸಿದ್ದಾರೆ. 'ಪಾತರಗಿತ್ತಿ ಪಕ್ಕಾ । ನೋಡಿದೇನ ಅಕ್ಕಾ । ಯಾರಿಗೂ ಹೇಳೋಣ ಬ್ಯಾಡ್' ಎಂಬ ಮಕ್ಕಳ ಮನ ಮುಟ್ಟುವ ಕವನಗಳನ್ನು ಕಟ್ಟಿಕೊಟ್ಟಂತಹ ಜಾನಪದ ಗಾರುಡಿಗ ದತ್ತಾತ್ರೆಯ ರಾಮಚಂದ್ರ ಬೇಂದ್ರೆಯವರು (೧೮೯೬) ಮಕ್ಕಳ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆ ಅಪಾರವಾದುದು. ಬೇಟಗೇರಿ ಕೃಷ್ಣಶರ್ಮ (೧೯೦೦) ಅವರ 'ಮುದ್ದನ ಮಾತು' ಮಕ್ಕಳಿಗಾಗಿ ನೀಡಿದ ಉತ್ತಮ ಕೃತಿಯಾಗಿದೆ.

ಕನ್ನಡದಲ್ಲಿ ಮಾತ್ರ ಮಕ್ಕಳ ಸಾಹಿತ್ಯ ರಚಿಸುವುದರೊಂದಿಗೆ ಭಾರತೀಯ ಇತರ ಭಾಷೆಗಳಲ್ಲಿಯೂ ಮಕ್ಕಳ ಕಥೆ, ಕವನಗಳನ್ನು ರಚಿಸಿರುವ 'ಕಡಲ ತೀರದ ಭಾರ್ಗವ'ರೆನಿಸಿರುವ ಶಿವರಾಮ ಕಾರಂತರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನನ್ಯ. ಅವರ ಬಾಲಸಾಹಿತ್ಯ, ಕಿರಿಯರ ವಿಶ್ವಕೋಶ, ಬಾಲ ಜಗತ್ತು, ವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳು, ಢಂ ಢಂ. ಡೋಲು ಎಂಬ ಕವನ ಸಂಗ್ರಹ ಮೊದಲಾದ ಕೃತಿಗಳು ಮಕ್ಕಳ ಸಾಹಿತ್ಯದ ಮೇರುಪರ್ವತಗಳಾಗಿ ನಿಂತಿವೆ. ಪ್ರತಿಭಾವಂತ ಶಿಕ್ಷಕರೆನಿಸಿದ ಅಪ್ಪಟ್ಟ ಮಕ್ಕಳ

ಕವಿಯೆಂದು ಹೆಸರಾದ ಸಿ. ಫ. ಕಟ್ಟಿಮನಿಯವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರ. ಅವರ 'ಕಂದನ ಕಾವ್ಯ' ಸುಂದರವಾದ ಕೃತಿ. ಇಲ್ಲಿಯ ಕವಿತೆಗಳು ಮಕ್ಕಳಿಗೆ ಬಲು ಪ್ರೀತಿ.

'ಬಾರಲೇ ಹಕ್ಕಿ ಬಣ್ಣದ ಹಕ್ಕಿ
ಬಾರಲೇ ಹಕ್ಕಿ ಹಾರುವ ಹಕ್ಕಿ'

'ನಾಗರ ಪಂಚಮಿ ಬಂದಿಹುದು
ಶಾಲೆಗೆ ಬಿಡುವು ಆಗಿಹುದು'

'ಕೋಳಿ ಕೂಗಿತೇಳು ಕಂದ
ಪೂರ್ವದಿಂದ ಸೂರ್ಯಬಂದ'

ಮೊದಲಾದ ಕವಿತೆಗಳು ಮಕ್ಕಳ ಮನದೊಳಗೆ ನೆಲೆನಿಂತಿವೆ. ಕನ್ನಡ ಸಾರಸ್ವತ ಲೋಕದಲ್ಲಿ ಮೇರುಗಿರಿಯಾಗಿ ನಿಂತ 'ಕುವೆಂಪು' (೧೯೦೪) ಮಕ್ಕಳ ಸಾಹಿತ್ಯ ಲೋಕವನ್ನು ಸಮೃದ್ಧಗೊಳಿಸಿದವರು. ಮರಿವಿಜ್ಞಾನಿ, ನನ್ನ ಮನೆ, ಮೇಘಪುರ, ಬೊಮ್ಮನಹಳ್ಳಿ ಕಿಂದರಿಜೋಗಿ, ಅಮಲನ ಕಥೆ, ಮೋಡಣ್ಣನ ತಮ್ಮ ಮೊದಲಾದ ಕೃತಿಗಳು ಮಕ್ಕಳ ಮನವನ್ನು ತಣಿಸಿವೆ. ಮಕ್ಕಳ ಭಾವನೆಗಳು ಹಕ್ಕಿಯಂತೆ ಹಾರುವ ಭಾವಪ್ರಧಾನ ಕವಿತೆಗಳನ್ನು ಅಭಿವ್ಯಕ್ತಗೊಳಿಸಿದವರು ಕುವೆಂಪು.

'ತಿಂಡಿಯನು ಕೊಡು ತಾಯಿ
ಹೇಳಿದುದ ಮಾಡುವೆನು'.....

'ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು'.....

ಮೊದಲಾದ ಸಾಲುಗಳು ಮಕ್ಕಳನ್ನು ಕಲ್ಪನಾಲೋಕದಲ್ಲಿ ವಿಹರಿಸುವಂತೆ ಮಾಡುತ್ತವೆ.

ಮೇವುಂಡಿ ಮಲ್ಲಾರಿಯವರು (೧೯೦೬) ಶಿಶು ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಮಕ್ಕಳ ಮನವನ್ನು ಗೆದ್ದ ಉದ್ದಾಮ ಕವಿ. ಶ್ರೇಷ್ಠ ಶಿಕ್ಷಣ ಚಿಂತಕರು, ಸಮಾಜ ಸೇವಕರೆಂದು ಗುರುತಿಸಿಕೊಂಡವರು. ದಿನಕರ ದೇಸಾಯಿ (೧೯೦೯) ತಿಪ್ಪಾಭಟ್ಟರು – ಇವರ ಕಾವ್ಯದ ಪ್ರಧಾನ ಪಾತ್ರ ವಿಡಂಬನೆಯ ಪ್ರತಿಮೆಯಾಗಿ ಕಂಗೊಳಿಸಿದ್ದಾರೆ. ದೇಸಾಯಿಯವರ ಮಕ್ಕಳ ಕವಿತೆಗಳಲ್ಲಿ ಕೆಳವರ್ಗದ ಜನಜೀವನದ ದೃಶ್ಯಗಳನ್ನು ಅಭಿವ್ಯಕ್ತಗೊಳಿಸಿರುವುದನ್ನು ಕಾಣುತ್ತೇವೆ. ಮಕ್ಕಳ ಪದ್ಯಗಳು, ಮಕ್ಕಳ ಗೀತೆಗಳು ಇವರ ಪ್ರಮುಖ ಕೃತಿಗಳಾಗಿವೆ. 'ಹಚ್ಚೇವು ಕನ್ನಡದ ದೀಪ' ಎಂಬ ಕವನದ ಮೂಲಕ ಹೆಸರುವಾಸಿಯಾದ ಡಿ. ಎಸ್. ಕರ್ಕಿಯವರು (೧೯೦೭) ಮಕ್ಕಳ ಮನದಲ್ಲಿ ನಂದಾದೀಪವಾಗಿ ಬೆಳಗಿದ್ದಾರೆ. 'ಬಾರಿಸು ಕನ್ನಡ ಡಿಂ ಡಿಂಮವ' ಎಂಬ ಪ್ರಸಿದ್ಧವಾದ ನಾಡಗೀತೆಯನ್ನು ಅರ್ಪಿಸಿದ ಎಸ್. ಡಿ. ಇಂಚಲರು ಮಕ್ಕಳ ಸಾಹಿತ್ಯ ಮತ್ತು ಶಿಕ್ಷಣಕ್ಕೆ ಸೇವೆ ಸಲ್ಲಿಸುವುದರೊಂದಿಗೆ ಪ್ರೇರಣೆಯನ್ನು ನೀಡಿದ್ದಾರೆ. ಮಕ್ಕಳ ಸಾಹಿತ್ಯ ಲೋಕದ

ರತ್ನವೆಂದರೆ ಜಿ. ಪಿ. ರಾಜರತ್ನಂ (೧೯೦೮) ಬಹು ದೊಡ್ಡ ಹೆಸರು ಮಕ್ಕಳ ಸಾಹಿತ್ಯದಲ್ಲಿ. ಮಕ್ಕಳ ಲೋಕಕ್ಕೆ ಉಸಿರಾದವರು.

'ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ'

ಎಂಬ ಕವಿತೆ ಮಕ್ಕಳ ಮನದಲ್ಲಿ ನೆಲೆನಿಂತಿದೆ. ಇವರು ಕಂದನ ಕಾವ್ಯಮಾಲೆ, ಕಡಲೆಪುರಿ, ಕಲ್ಲು ಸಕ್ಕರೆ, ತುತ್ತೂರಿ, ಕೆನೆ ಹಾಲು, ತಾರೆ, ಕಳ್ಳ ರಂಗಪ್ಪ ಮೊದಲಾದ ಕೃತಿಗಳನ್ನು ರಚಿಸಿ ಮಕ್ಕಳ ಸಾಹಿತ್ಯ ಭದ್ರವಾಗಿ ನೆಲೆಗೊಳ್ಳಲು ಬುನಾದಿಯನ್ನು ಹಾಕಿದರು. 'ರಾಘವ' ಕಾವ್ಯನಾಮದಿಂದ ಪ್ರಖ್ಯಾತರಾದ ಎಂ. ವಿ. ಸೀತಾರಾಮಯ್ಯನವರು (೧೯೧೦) ಮಕ್ಕಳಿಗಾಗಿ ಸುಂದರ ಕೃತಿಗಳನ್ನು ಮಕ್ಕಳ ಸಾಹಿತ್ಯಕ್ಕೆ ನೀಡಿದ್ದಾರೆ. ಸಿದ್ಧಯ್ಯ ಪುರಾಣಿಕರು (೧೯೧೮) 'ಕಾವ್ಯಾನಂದ' ಕಾವ್ಯನಾಮದಿಂದ ಮಕ್ಕಳ ಸಾಹಿತ್ಯಕ್ಕೆ ಹೊಸ ಬದಲಾವಣೆ ತಂದು ಹಲವಾರು ಮಕ್ಕಳ ಸಾಹಿತಿಗಳಿಗೆ ಪ್ರೇರಣೆಯಾಗಿದ್ದಾರೆ.

'ಅಜ್ಜನ ಕೋಲಿದು ನನ್ನಯ ಕುದುರೆ
ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ'.....
'ಏನಾದರೂ ಆಗು ಮೊದಲು ಮಾನವನಾಗು'.....

ಮುಂತಾದ ಪ್ರಮುಖ ಮಕ್ಕಳ ಕವಿತೆಗಳನ್ನು ರಚಿಸಿದರು. ಕಾವ್ಯಾನಂದರು 'ತಿರುಗಲೆ ತಿರುಗಲೆ ತಿರುಗುಯ್ಯಾಲೆ', 'ಬಣ್ಣ ಬಣ್ಣದ ಓಕುಳಿ', 'ಭಾರತವೆಲ್ಲಕೆ ಭಾವುಟವೊಂದೆ' ಮೊದಲಾದ ಕೃತಿಗಳನ್ನು ಮಕ್ಕಳ ಲೋಕಕ್ಕೆ ಸಲ್ಲಿಸಿ ಜಾಗ್ರತಿಯನ್ನು ಮಾಡಿದ್ದಾರೆ. ಕಯ್ಯಾರ ಕಿಞ್ಞಣ್ಣರೈ (೧೯೧೫) ಅವರು 'ಪದ್ಯ ಮಂಜರಿ' ಎಂಬ ಕೃತಿಯನ್ನು ಮಕ್ಕಳಿಗಾಗಿ ಅರ್ಪಿಸಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ಹೊಸ ಸಂಚಲನವನ್ನು ಮೂಡಿಸಿದವರು ಪಳಕಳ ಸೀತಾರಾಮಭಟ್. ಮಕ್ಕಳ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳಲ್ಲಿ ಹಲವು ಕೃತಿಗಳನ್ನು ರಚಿಸಿರುವರು. 'ಚಿನ್ನರ ಹಾಡುಗಳು', 'ಕಿರಿಯರ ಕಿನ್ನರಿ', 'ಮಕ್ಕಳ ಮಾಣಿಕ್ಯ', 'ಮಕ್ಕಳ ಮುದ್ದು', 'ಕಂದನ ಕೊಳಲು', 'ಡೊಂಬರ ಡೋಲು' ಮೊದಲಾದ ಕೃತಿಗಳನ್ನು ಮಕ್ಕಳಿಗಾಗಿ, ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ್ದಾರೆ. ಪ್ರತಿಭಾವಂತ ನಾಟಕಕಾರ, ಕಥೆಗಾರ, ಕವಿ, ಕಾದಂಬರಿಕಾರರಾಗಿ ಮಕ್ಕಳ ಸಾಹಿತ್ಯದಲ್ಲಿ ತಮ್ಮ ಛಾಪನ್ನು ಮೂಡಿಸಿದವರು ರಸಿಕ ಪುತ್ತಿಗೆಯವರು. 'ಇಲಿಗೆ ಅಂಜಿದ ಹುಲಿ', 'ಅಮ್ಮನ ಸೈಕಲ್ ಸವಾರಿ' ಇವರ ಪ್ರಮುಖ ಮಕ್ಕಳ ಕೃತಿಗಳಾಗಿವೆ. ಈಶ್ವರ ಕಮ್ಮಾರರು ಮಕ್ಕಳ ಸಾಹಿತ್ಯದಲ್ಲಿ ಪ್ರಧಾನವಾಗಿ ಗುರುತಿಸಿಕೊಂಡವರು. ಮಕ್ಕಳ ಲೋಕ, ಎಡತಾಕ ಪಟ್ಟಿ, ಪಾಪಾ ಮೊದಲಾದವು ಇವರ ಪ್ರಮುಖ ಕೃತಿಗಳು. ಸಿಸು ಸಂಗಮೇಶರು ಮಕ್ಕಳ ಸಾಹಿತ್ಯ ಅಕಾಡೆಮಿ ಉದಯವಾಗಲು ಕಾರಣಕರ್ತರು. ಹಿಂದಿ, ಮರಾಠಿ, ಉರ್ದು, ಕನ್ನಡ, ಇಂಗ್ಲೀಷ ಭಾಷೆಯ ಪಾಂಡಿತ್ಯ ಹೊಂದಿದವರು. ಮಕ್ಕಳ ಸಾಹಿತ್ಯವನ್ನು ಭಾರತೀಯ ಭಾಷೆಗಳಿಗೆ ಅನುವಾದ ಮಾಡಿದ್ದಾರೆ. ಸ್ವಂತ ಮುದ್ರಣಾಲಯವನ್ನು ಸ್ಥಾಪಿಸಿ ಪ್ರಕಾಶನ ಸಂಸ್ಥೆಯನ್ನು ಪ್ರಾರಂಭಿಸಿದರು. ಅನೇಕ ಮಕ್ಕಳ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿದರು. ಸಿಸು ಅವರ ಪ್ರಮುಖ ಕೃತಿಗಳಲ್ಲಿ 'ನಾವು ಎಳೆಯ ಕವಿಗಳು', 'ಜಪಾನದ ಟಾರೊ' ಮುಖ್ಯವಾಗಿವೆ.

ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಈ ಹೊತ್ತು ಅತೀ ಪ್ರಚಾರದಲ್ಲಿರುವ ಹೆಸರು ಟಿ. ಎಸ್. ನಾಗರಾಜಶೆಟ್ಟಿ, ಕಥಾ ಸಾಹಿತ್ಯದಲ್ಲಿ ಎತ್ತಿದ ಕೈ. ಇವರ 'ನವಿಲುಗರಿ', 'ಸಕ್ಕರೆ ಗೊಂಬೆ', 'ಆಮೆ ಮತ್ತು ಹಂಸಗಳು' ಪ್ರಮುಖ ಕೃತಿಗಳಾಗಿವೆ. ಇವರ ಸಮಕಾಲೀನವರಾದ ಗಂಗಾಧರ ನಂದಿ, ಎಂ. ಡಿ. ಗೋಗೇರಿ, ಸಂಗಮೇಶ ಬಾಗಲಕೋಟ, ಅಶೋಕ ಚೊಳಚಗುಡ್ಡ, ಚಂದ್ರಗೌಡ ಕುಲಕರ್ಣಿ ಮೊದಲಾದವರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ.

ನಮ್ಮ ನಾಡಿನ ಖ್ಯಾತ ಕವಿಗಳಾದ ಚನ್ನವೀರ ಕಣವಿಯವರು, ಎಚ್. ಎಸ್. ವೆಂಕಟೇಶಮೂರ್ತಿ, ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ, ದೊಡ್ಡರಂಗೇಗೌಡ, ಬರಗೂರು ರಾಮಚಂದ್ರಪ್ಪ ಮೊದಲಾದ ಈ ತಲೆಮಾರಿನ ಕವಿಗಳು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಕೊಂಡಿರುವುದು ಹೊಸತನ ಮೂಡಿಸಿದೆ. ಹಾಗೆಯೇ ಆರ್. ಕಲ್ಯಾಣಮ್ಮ, ತಿರುಮಲಾಂಬ, ಸರೋಜನಿ ಮಹಸಿ, ಶಾಂತಾದೇವಿ ನೀಲಗಾರ, ಕುಮುದಾ ಚಿಟಗುಪ್ಪಿ, ದುರ್ಗಾಸುತೆ, ಗೀತಾ ಕುಲಕರ್ಣಿ, ಚನ್ನಕ ಎಲಿಗಾರ ಮೊದಲಾದವರು ಪ್ರಮುಖ ಸಾಲಿನಲ್ಲಿ ನಿಲ್ಲುವ ಮಹಿಳೆಯರು. ಮಕ್ಕಳ ಸಾಹಿತ್ಯಕ್ಕೆ ಇವರ ಕೊಡುಗೆಯು ಅನನ್ಯವಾಗಿದೆ.

ಈ ಹೊತ್ತು ಮಕ್ಕಳ ಸಾಹಿತ್ಯದಲ್ಲಿ ಹೊಸ-ಹೊಸ ವಿಚಾರಧಾರೆಯ ಸಂಗತಿಗಳು ಅಭಿವ್ಯಕ್ತಗೊಳ್ಳುತ್ತಿವೆ. ಮಕ್ಕಳಿಗೆ ಆಧುನಿಕ ಜಗತ್ತಿನ ವಸ್ತು-ವಿಷಯಗಳ ಪರಿಚಯವಾಗಿ ಹೊಸ ದೃಷ್ಟಿಕೋನ ಬೆಳೆಯಲು ಸಾಧ್ಯವಾಗಿದೆ. ಅಂಥ ರೂಪಗಳ ಹಿನ್ನೆಲೆಯಲ್ಲಿ ಪ್ರತಿವಾರವು ದಿನಪತ್ರಿಕೆಗಳಲ್ಲಿ ಮಕ್ಕಳ ಕವನ, ಕಥೆ, ಪ್ರವಾಸ ಮೊದಲಾದವು ಮಕ್ಕಳಿಗಾಗಿ ಬಿತ್ತರಗೊಳ್ಳಲಿವೆ. ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಮಕ್ಕಳಿಗಾಗಿ ಕಥೆಗಳು, ನಾಟಕಗಳು, ಹಾಡುಗಳು ಪ್ರಸಾರವಾಗುತ್ತಿವೆ. ಆದರೆ ಅವುಗಳಲ್ಲಿ ಮಕ್ಕಳಿಗೆ ಈ ಹೊತ್ತು ಎಂಥ ಸಾಹಿತ್ಯಬೇಕು? ಎಂಬುದು ಬಹುಮಟ್ಟಿಗೆ ಕಡಿಮೆ ಎಂದರೆ ತಪ್ಪಾಗದು. ಹೀಗೆ ಮಕ್ಕಳ ಸಾಹಿತ್ಯದಲ್ಲಿ ತೊಡಗಿಸಿಕೊಂಡ ಬರಹಗಾರರು ಮತ್ತು ಅವರ ಕೃತಿಗಳನ್ನು ಸಂಕ್ಷಿಪ್ತವಾಗಿ ದೃಷ್ಟಿ ಹಾಯಿಸಿದರೆ; ಇನ್ನೂ ಹಲವರು ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಂಡವರು ಕಣ್ತಪ್ಪಿ ಉಳಿದುಕೊಂಡಿರಬಹುದು. ಆದರೆ ಅಧ್ಯಯನದ ಹಿನ್ನೆಲೆಯಲ್ಲಿ ಈ ಕ್ರಮ ಅವಶ್ಯವಾದುದೆಂದು ನನ್ನ ನಂಬಿಕೆ. ಈಗ ಅಧ್ಯಯನಕ್ಕೆ ಬಳಸಿಕೊಂಡ ಕವಿಗಳ ಮತ್ತು ಕೃತಿಗಳಲ್ಲಿಯ ಅಭಿವ್ಯಕ್ತಿಯ ತಾತ್ವಿಕ ಸ್ವರೂಪವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫.೧ ಪಂಜೆಮಂಗೇಶರಾಯ :

ಪಂಜೆಮಂಗೇಶರಾಯರು ಬಹುಮುಖ ಪ್ರತಿಭೆಯ ವ್ಯಕ್ತಿತ್ವವುಳ್ಳವರು. ಮಕ್ಕಳು, ಹಿರಿಯರು, ರಸಿಕರು, ಅರಸಿಕರು ಯಾರೇ ಆಗಲಿ ಎಲ್ಲರಿಗೂ ಸಂತೋಷವನ್ನುಂಟು ಮಾಡಿ ರಂಜಿಸುವ ಸಾಹಿತ್ಯವನ್ನು ಕನ್ನಡ ಮಕ್ಕಳ ಸಾಹಿತ್ಯ ಪ್ರಪಂಚಕ್ಕೆ ಅರ್ಪಿಸಿದ್ದಾರೆ.

'ಸಾಹಿತ್ಯ ಉತ್ಕೃಷ್ಟವಾಗುವುದು ಹೇಗೆ? ಮುಂದಿನ ಬೆಳೆ ಒಳ್ಳೆಯದೂ ಹುಲುಸಾಗಬೇಕಾದರೆ ಇಂದಿನ ಸಸಿಗಳನ್ನು ಗಮನಿಸಬೇಕು. ಕನ್ನಡ ಮಕ್ಕಳ ವಿದ್ಯಾಭ್ಯಾಸವು ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವು ಒಂದು ಸರಿಯಾದ ಕ್ರಮದಲ್ಲಿ ನಡೆಯುವ ಏರ್ಪಾಡಾಗಬೇಕು' ಎಂಬ ಪಂಜೆಯವರ ಈ ಮಾತುಗಳು ಮಕ್ಕಳ ಮೇಲಿನ ಪ್ರೀತಿಯನ್ನು ಮತ್ತು ಅವರನ್ನು ಕಾಳಜಿಯಿಂದ ಬೆಳೆಸುವ ಪರಿಯನ್ನು ಅಭಿವ್ಯಕ್ತಪಡಿಸುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ (೧೮೭೪) ಜನಿಸಿದ ಪಂಜೆಯವರು ತಾಯಿ-ತಂದೆಯ ಪ್ರೀತಿ-ವಾತ್ಸಲ್ಯದೊಡನೆ ಸುತ್ತಲಿನ ಸುಂದರವಾದ ಹಸಿರು ಸಿರಿಯ ಪರಿಸರ ಅವರ ಮೇಲೆ ಅಗಾಧ ಪರಿಣಾಮ ಬೀರುವುದರಿಂದ ಕವಿಯಾಗಲು ಪ್ರೇರಣೆ ನೀಡಿರಬೇಕು. ಶಾಲಾ ಮಾಸ್ತರರಾಗಿ, ಸಬ್‌ಇನಸ್ಪೆಕ್ಟರ್ ಆಗಿ, ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸಿ ಮಕ್ಕಳ ಸಾಹಿತ್ಯವನ್ನು ಬೆಳೆಸಿದವರು ಪಂಜೆಮಂಗೇಶರಾಯರು. 'ಕವಿಶಿಷ್ಯ' ಎಂಬ ಕಾವ್ಯನಾಮದಿಂದ ಬರವಣಿಗೆಗೆ ತೊಡಗಿದ ಪಂಜೆಯವರು 'ಸುವಾಸಿನಿ', 'ಸತ್ಯದೀಪಿಕ', 'ಕಂಠೀರವ' ಪತ್ರಿಕೆಗಳಲ್ಲಿ ತಮ್ಮ ಕವಿತೆಗಳನ್ನು ಪ್ರಕಟಿಸುತ್ತಿದ್ದರು.

ಹತ್ತೊಂಭತ್ತನೆಯ ಶತಮಾನದಲ್ಲಿ ಪಾಶ್ಚಿಮಾತ್ಯರ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಭಾವ ಕನ್ನಡಿಗರ ಮೇಲೆ ಪ್ರಭಾವಿಸಿರುವುದರಿಂದ ಇಂಗ್ಲೀಷ ಕವಿಗಳ ಕೃತಿಗಳನ್ನು ನೋಡುವ ಮನೋಧರ್ಮದಿಂದ ನಮ್ಮಲ್ಲಿ ಅನೇಕ ಬದಲಾವಣೆಗಳಾದವು. ಬದಲಾವಣೆಗಳಾಗಿರುವುದು ಸಹಜ ಮತ್ತು ಸತ್ಯವಾದುದು. ಹೀಗಾಗಿ ಶಾಲಾ ಮಾಸ್ತರರಾಗಿರುವ ಹಂತದಲ್ಲಿ ಪಂಜೆಯವರು ಮಕ್ಕಳಿಗಾಗಿ, ಮಕ್ಕಳಿಗೋಸ್ಕರ ಮತ್ತು ಮಕ್ಕಳೊಡನೆ ಹೆಚ್ಚು ಸಮಯ ಕಳೆದವರು. ಇದರಿಂದಾಗಿ ಅವರಲ್ಲಿ ಮಕ್ಕಳ ಆಶೆ, ಆಕಾಂಕ್ಷೆ, ಅನಿಸಿಕೆ, ಬೇಕು-ಬೇಡಗಳ ಕುರಿತಾಗಿ, ಅವರಿಗೆ ಆನಂದ ನೀಡುವ ಸಾಹಿತ್ಯ ಬರವಣಿಗೆಯ ಒಲವು ಬೆಳೆಯಿತು. 'ಬಾಲ್ಯಸಾಹಿತ್ಯ ಮಂಡಲ' ಪಂಜೆಮಂಗೇಶರಾಯರು ಸ್ಥಾಪಿಸಿದ ಸಂಸ್ಥೆ ಮಕ್ಕಳ ಅಭಿವೃದ್ಧಿಗೆ ನಾಂದಿಯಾಯಿತು.

ಪಂಜೆಮಂಗೇಶರಾಯರು ಮಕ್ಕಳಿಗಾಗಿ ಹೊಸ ಭಾವನೆಗಳ, ಹೊಸ ರೀತಿಯ ಕಲ್ಪನೆಗಳ ಪದ್ಯಗಳನ್ನು ರಚಿಸುವ ಮೂಲಕ ಕನ್ನಡ ಮಕ್ಕಳ ಕವಿತೆಗಳಿಗೆ ಒಂದು ಹೊಸ ಆಯಾಮವನ್ನು ನೀಡಿದರು. ಕನ್ನಡ ನಾಡು-ನುಡಿಯ ಪ್ರೀತಿ, ದೇಶಾಭಿಮಾನ, ಐಕ್ಯತೆಗಳು ಪಂಜೆಯವರ ಕಾವ್ಯಕ್ಕೆ ಪ್ರೇರಣೆಯಾಗಿ ಅಭಿವ್ಯಕ್ತಗೊಂಡವು. ಕವಿತೆ ಕಟ್ಟಲು ಎಲ್ಲರಿಂದಲೂ ಸಾಧ್ಯವಿಲ್ಲ. ಸೃಜನಶೀಲತೆ ವ್ಯಕ್ತಿಯನ್ನು ಅವಲಂಭಿಸಿರುತ್ತದೆ. ಪರಿಸರವನ್ನೂ ಅವಲಂಭಿಸಿರುತ್ತದೆ. ಭಾಷೆಯ ಮೂಲಕ ಅಭಿವ್ಯಕ್ತಗೊಳ್ಳುವ ಕ್ರಿಯೆಯೇ ಕವಿತೆ ಎನಿಸಿಕೊಳ್ಳುತ್ತದೆ. ಅದು ಬಾಹ್ಯ ವಿಚಾರ, ವಿಷಯ, ವಿವರಗಳನ್ನು ಒಳಗೊಂಡು ವ್ಯಕ್ತವಾದರೆ ವಸ್ತುನಿಷ್ಠ ಕಾವ್ಯವಾಗುತ್ತದೆ. ಮನಸಿನ ಭಾವನೆಗಳಿಗೆ, ಅನುಭವಗಳಿಗೆ ಸ್ಪಂದಿಸಿ ಅಭಿವ್ಯಕ್ತಗೊಂಡರೆ ಅದು ಭಾವನಿಷ್ಠ ಕಾವ್ಯವೆನಿಸುತ್ತದೆ. ಅದು ಸಂದರ್ಭಕ್ಕೆ ತಕ್ಕಂತೆ ವಿಭಿನ್ನವಾಗಿರುತ್ತದೆ. ಭಾವಪೂರ್ಣವಾಗಿ, ಅರ್ಥಪೂರ್ಣವಾಗಿ, ಧ್ವನಿಪೂರ್ಣವಾಗಿ,

ಸಂಕೀರ್ಣವಾಗಿ, ರಸಾತ್ಮಕವಾಗಿ ಹೀಗೆ ಹಲವು ರೀತಿಯ ಅಭಿವ್ಯಕ್ತಿಯ ಮೂಲಕ ವ್ಯಕ್ತಗೊಂಡಾಗ ಆ ಭಾಷೆ ಕಾವ್ಯದ ಭಾಷೆಯಾಗುತ್ತದೆ. ಅದು ಭಾವಗೀತೆಯಾಗಿ, ನಿಸರ್ಗ ಗೀತೆಯಾಗಿ, ಪ್ರೇಮ ಗೀತೆಯಾಗಿ, ವಾತ್ಸಲ್ಯ ಗೀತೆಯಾಗಿ, ಶಿಶು ಗೀತೆಯಾಗಿ, ಹಾಸ್ಯ ಗೀತೆಯಾಗಿ, ವಿಡಂಬನ ಗೀತೆಯಾಗಿ, ದೇಶಭಕ್ತಿ ಗೀತೆಯಾಗಿ, ಅನುಭಾವ ಗೀತೆಯಾಗಿ ಕವಿಯ ಪ್ರತಿಭೆಯಂತೆ ಕವನ ಮೂಡುತ್ತದೆ. 'ಸುತ್ತಲಿನ ವಾತಾವರಣಕ್ಕೆ ಪ್ರತಿ ಸ್ಪಂದಿಯಾಗಿ ಸ್ವಚ್ಛಂದವಾಗಿ ಹಾಡಬೇಕೆಂಬ ಮನೀಷೆಯಿಂದ ಕೆಲವರು ಮುಂದೆ ಬಂದರು. ಮಂಗ್ಳೂರಿನ ಪಂಜೆಮಂಗೇಶರಾಯರು ಶಾಲೆ ಕಲಿಯುವ ಹುಡುಗರಿಗಾಗಿ ಹೊಸ ಪದ್ಯಗಳನ್ನು ರಚಿಸತೊಡಗಿದರು. ಗಾಳಿಯಂತೆ ಹಗುರವಾದ ಸಹಜ ಸುಂದರವಾದ ಇವರ ಕವಿತೆಗಳಲ್ಲಿ ನವೋದಯದ ಸ್ವಾತಂತ್ರ್ಯ ಮಿಡಿಯುತ್ತದೆ'[೪].

ಆಧುನಿಕ ಸಾಹಿತ್ಯದ ವೈವಿಧ್ಯತೆಯನ್ನು ಅರಿತುಕೊಂಡ ಪಂಜೆಮಂಗೇಶರಾಯರು ತಮ್ಮ ಪ್ರತಿಭೆಯಿಂದ ಹೊಸ ಪದ ಪ್ರಯೋಗಗಳನ್ನು ಬಳಸಿಕೊಂಡು ಕಾವ್ಯವನ್ನು ರಚಿಸಿದವರು. ನವೋದಯ ಕವಿಗಳಲ್ಲಿಯೇ ಪ್ರಮುಖರೆನಿಸಿಕೊಂಡಿದ್ದಾರೆ. ಅವರ ಮಕ್ಕಳ ಸಾಹಿತ್ಯವನ್ನು ಶಿಶುಗೀತೆಗಳು ಮತ್ತು ಬಾಲಗೀತೆಗಳೆಂದು ಎರಡು ಭಾಗದಲ್ಲಿ ವಿಂಗಡಿಸಿ ನೋಡಬಹುದು. ಶಿಶುಗೀತೆಗಳಲ್ಲಿ ಮಕ್ಕಳ ಜೋಗುಳದ ಹಾಡುಗಳು, ನಡೆ-ನುಡಿಯ ಗೀತೆಗಳೆಂದು ವರ್ಗೀಕರಿಸಿದರೆ, ಬಾಲಗೀತೆಗಳಲ್ಲಿ ಭಾವಗೀತೆಗಳು, ನಿಸರ್ಗ ಗೀತೆಗಳು, ದೇಶಭಕ್ತಿ ಗೀತೆಗಳೆಂದು ಗುರುತಿಸಬಹುದು.

ಪಂಜೆಮಂಗೇಶರಾಯರ ಮಕ್ಕಳ ಸಾಹಿತ್ಯವನ್ನು ಐದು ವರ್ಷದಿಂದ ಹತ್ತುವರ್ಷದ ಮಕ್ಕಳಿಗಾಗಿ ರಚಿಸಿದ ಕವಿತೆಗಳನ್ನು ಶಿಶು ಗೀತೆಗಳೆಂದು, ಗುರುತಿಸಿದರೆ ಹತ್ತು ವರ್ಷದಿಂದ ಹದಿನೈದು ವರ್ಷದವರೆಗಿನ ಮಕ್ಕಳಿಗಾಗಿ ರಚಿಸಿದ್ದು ಬಾಲಗೀತೆಗಳೆಂದು ಕರೆಯಬಹುದು.

ಪಂಜೆಯವರ ಕೃತಿಗಳನ್ನು ವಿಂಗಡಿಸಿ ನೋಡಿದಾಗ ಆಡುಭಾಷೆಯ ಸೊಗಸು, ಲಯ, ಮೃದುವಾದ ಭಾವನೆ, ಹೃದಯವಂತಿಕೆ, ಸರಳತೆ, ಮಧುರವಾದ ಪದಗಳ ಜೋಡಣೆ ಮೊದಲಾದ ಮಕ್ಕಳ ಕವಿತೆಗಳ ಗುಣ-ಲಕ್ಷಣಗಳು ಸಹಜತೆಯಿಂದ ಅಭಿವ್ಯಕ್ತಗೊಂಡಿವೆ. 'ಬಾಲಸಾಹಿತ್ಯ' ಎಂಬ ಪದವನ್ನು ಮೊದಲು ಬಳಕೆ ಮಾಡಿದವರು ಪಂಜೆಮಂಗೇಶರಾಯರು ಎಂದರೆ ತಪ್ಪಾಗದು. ಹಾವಿನ ಹಾಡು, ಉದಯರಾಗ, ತೆಂಕಣಗಾಳಿಯಾಟ, ಹುತ್ತರಿ ಹಾಡು ಇವರ ಪ್ರಸಿದ್ಧ ಮಕ್ಕಳ ಕವಿತೆಗಳಾಗಿವೆ. 'ಪಂಜೆಮಂಗೇಶರಾಯರು ಶಾಲೆ ಉಪಾಧ್ಯಾಯರಾಗಿದ್ದುದರಿಂದ ಇವರ ದೃಷ್ಟಿಯಲ್ಲಿ ವಿಶೇಷವಾಗಿ ಶಾಲಾ ವಿದ್ಯಾರ್ಥಿಗಳ ಅವಶ್ಯಕತೆಯಲ್ಲಿ ಕೇಂದ್ರಿಕೃತವಾಗಿದ್ದಿತು. ಇಂಗ್ಲೀಷ ಸಾಹಿತ್ಯದ ಪ್ರಭಾವ ಇವರ ಮೇಲೆ ವಿಶೇಷವಾಗಿತ್ತು. ಅನೇಕ ಉತ್ತಮ ಇಂಗ್ಲೀಷ ಕವನಗಳನ್ನು ಅನುವಾದಿಸಿದುದಲ್ಲದೆ, ಆ ಮಾದರಿಯ ಸ್ವತಂತ್ರ ಕವನಗಳನ್ನು ರಚಿಸಿ

'ಸುವಾಸಿನಿ' ಮತ್ತು 'ಸ್ವದೇಶಾಭಿಮಾನ' ಪತ್ರಿಕೆಯಲ್ಲಿಯೂ, ತಾವೇ ಸಿದ್ಧಪಡಿಸಿದ ಅನೇಕ ಪಠ್ಯಪುಸ್ತಕಗಳಲ್ಲಿಯೂ ಪ್ರಕಟಿಸಿದರು'[೫].

ಪಂಜೆಮಂಗೇಶರಾಯರ 'ಆಡಿನ ಮರಿ' ಕವಿತೆ ನರ್ಸರಿ ಪದ್ಯದ ಮಾದರಿಯಂತೆ ಕಂಡರೂ ಅದರ ವಸ್ತು, ರೂಪ ಮತ್ತು ಲಯದ ಗುಣ, ನಾದಮಯತೆಗಳು ಕವಿತೆಗೆ ಹೊಸತನ ತಂದಿವೆ.

'ಆಡಿನಾ ಮರಿ, ಆಡ ಬಾರಲೆ
ಓಡ ಬೇಡಲೆ, ನೋಡಿ ನನ್ನನು
ಅರಳಿ ಎಲೆಯನೂ, ಹಲಸಿನೆಲೆಯನೂ,
ಹುರುಳಿ ಕಡಲೆಯೂ ಕಲಸಿಕೊಡುವೆನು
ಮಾತನಾಡದೇ, ನನ್ನ ನೋಡದೆ
ಏತಕ್ಹೋಗುವೆ? ಆಡಿನಾ ಮಗು'[೬].

ಮಗು ಆಡಿನ ಮರಿಯ ಜೊತೆಗೆ ಆಡುವ ಹಂಬಲ ವ್ಯಕ್ತಿಪಡಿಸುವುದು. ಜೊತೆಗೆ ಸಲುಗೆಯ ಭಾವ ಸಹಜವಾಗಿ ಅಭಿವ್ಯಕ್ತಗೊಂಡಿದೆ. ಈ ಕವಿತೆಯಲ್ಲಿ ಪಂಜೆಮಂಗೇಶರಾಯರು ಮಕ್ಕಳಿಗೆ ಅರಳಿ, ಹಲಸು, ಹುರುಳಿಗಳ ಪರಿಚಯ ಮಾಡಿಕೊಡುವ ಉದ್ದೇಶವಿದ್ದಂತೆ ಕಂಡುಬರುತ್ತದೆ. 'ಆಡಿನಮರಿ' ಎಂಬ ಕಲ್ಪನೆಯಿಂದ ಮಗು 'ಕಲಿಸಿ' ಕೊಡುವ ಕ್ರಿಯೆ ವಿಶೇಷವಾಗಿ ಬಳಸಿದ್ದಾರೆ. ತಾಯಿ–ಮಗುವಿನ ವಾತ್ಸಲ್ಯದ ತಾತ್ವಿಕತೆ ಈ ಪದ್ಯ ಕಟ್ಟಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಜಿ. ಪಿ. ರಾಜರತ್ನಂ ಅವರು 'ಪಂಜೆಯವರು ಹತ್ತೊಂಭತ್ತು ಮತ್ತು ಇಪ್ಪತ್ತನೆಯ ಶತಮಾನಗಳ ನಡುವಿನ ಒಂದು ಜೀವಂತ ಸೇತುವೆಯಾಗಿ ಇದ್ದವರು' ಎನ್ನುವ ಮಾತು ಸೂಕ್ತವಾದುದು.

ಪಂಜೆಮಂಗೇಶರಾಯರು ೧೯೩೪ರಲ್ಲಿ ರಾಯಚೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಮಾಡಿದ ಭಾಷಣದ ಮಾತುಗಳು ಕನ್ನಡ ನಾಡಿನ ಪ್ರತಿಯೊಬ್ಬರಿಗೂ ನಿತ್ಯವೂ ಸ್ಫೂರ್ತಿಯನ್ನು ನೀಡುವ ಸಂಗತಿಯಾಗಿದೆ. 'ನನಗೀಗ ಇರುವುದು ಒಂದೇ ಆಸೆ. ನನ್ನ ಕಡೆಯ ಗಳಿಗೆಯಲ್ಲಿ ನನ್ನ ನಾಲಿಗೆ ಕೃಷ್ಣ ಕೃಷ್ಣ ಎಂದು ನುಡಿಯುವಂತೆಯೇ 'ಕನ್ನಡ ಕನ್ನಡ' ಎಂದು ನುಡಿಯಲಿ' ಎನ್ನುವ ಮಾತುಗಳು ಕನ್ನಡ ನಾಡಿನ, ಕನ್ನಡ ಭಾಷೆಯ ಅಭಿಮಾನ ಪಂಜೆಯವರ ನರ–ನಾಡಿಗಳಲ್ಲಿ ತುಂಬಿರುವುದು ಕಂಡುಬರುತ್ತದೆ. ಪ್ರಕೃತಿಯ ರಮಣೀಯ ದೃಶ್ಯವನ್ನು ವರ್ಣಿಸುವ ಪಂಜೆಯವರು ಮೂಡಣದ ರವಿಯನ್ನು ಬಲು ಆಸಕ್ತಿಯಿಂದ ಗಮನಿಸಿದ್ದಾರೆ.

'ಏರುವನು ರವಿ ಏರುವನು
ಬಾನೊಳು ಸಣ್ಣಗೆ ತೋರುವನು ।
ಏರಿದವನು ಚಿಕ್ಕವನಿರಬೇಕಲೇ
ಎಂಬಾ ಮಾತನು ಸಾರುವನು'[೭].

ಇದು ಮಗುವಿಗೆ ನೀತಿಯ ಪಾಠದಂತೆ ಕಂಡರೂ ಕವಿ ಬದುಕಿನ ಬದಲಾವಣೆಗಳನ್ನು ಅಭಿವ್ಯಕ್ತಗೊಳಿಸಿರುವುದು ಕಂಡುಬರುತ್ತದೆ. ಬೆಳಗಿನ ರವಿ ಸಣ್ಣವನಾಗಿ, ನಂತರ ಬೆಳೆದು ದೊಡ್ಡವನಾದರೂ ಮತ್ತೆ ಮರೆಯಾಗಲೇಬೇಕು. ನಿಸರ್ಗದ ಚಲನೆ ನಿರಂತರವಾದುದು. ಇಲ್ಲಿ ನಾವುಗಳು ಕ್ಷಣಿಕ ಮಾತ್ರ. ಆದರೆ ಸೂರ್ಯನು ಮತ್ತೆ ಉದಯಿಸುವ ಕಲ್ಪನೆ ತಾತ್ವಿಕವಾಗಿ ಹೊಸ ರೂಪದ ಆಯಾಮವನ್ನು ಕವಿತೆಗೆ ಒದಗಿಸಿದಂತಿದೆ.

ಪಂಜೆಮಂಗೇಶರಾಯರ ಮಕ್ಕಳ ಕವಿತೆಗಳ ಭಾಷೆ, ವಸ್ತು ಲಯ, ಗೇಯತೆ, ಪ್ರಾಸಗಳು ಮತ್ತು ಅಭಿವ್ಯಕ್ತಿಯ ಬಗೆ ಅವರ ಕವಿತೆಗಳ ಮೌಲ್ಯವನ್ನು ಹೆಚ್ಚಿಸಿವೆ. ಮಕ್ಕಳಿಗೆ ಬೇಕಾದ ಆಶೆ-ಆಕಾಂಕ್ಷೆಗಳ ಕಾಳಜಿಯನ್ನು ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಪಂಜೆಯವರು ಮಕ್ಕಳಿಗಾಗಿ ಪ್ರಕೃತಿ ಗೀತೆಗಳ ಹೊಳೆಯನ್ನೇ ಹರಿಸಿದ್ದಾರೆ. ಪ್ರಾಣಿ-ಪಕ್ಷಿಗಳು, ಸೂರ್ಯ-ಚಂದ್ರ, ಬೆಟ್ಟ-ಗುಡ್ಡ ಮೊದಲಾದ ಪ್ರಕೃತಿಯ ವೈವಿಧ್ಯತೆಯನ್ನು ಕುರಿತಾಗಿ ಸರಳವಾದ, ಸುಂದರ ಕವನಗಳನ್ನು ರಚಿಸಿದ್ದಾರೆ. ಇವರ ಕವಿತೆಗಳು ಕಿರಿಯರನ್ನು ಹಿರಿಯರನ್ನು ಆನಂದಗೊಳಿಸಿವೆ. ಪಂಜೆಯವರಿಗೆ ನಿಸರ್ಗದಲ್ಲಿ ಕಾಣುವ ಎಲ್ಲ ವಸ್ತುಗಳು ಕವಿತೆಗಳಾಗಿ ನಿಲ್ಲಲು ಸ್ಫೂರ್ತಿ ನೀಡಿವೆ. ಪ್ರತಿಯೊಂದು ಕವಿತೆ ಅಲಂಕಾರಗಳಿಂದ ಕೂಡಿದಂತಿವೆ.

'ಮೂಡುವನು ರವಿ ಮೂಡುವನು ಕತ್ತಲೊಳಗೆ ಜಗಳಾಡುವನು
ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು, ಕುಣಿದಾಡುವನು'

ಜಗಳಾಡುವುದು, ಕುಣಿದಾಡುವುದು, ನೆತ್ತರು ಮಾಡುವುದು, ಮಕ್ಕಳಿಗೆ ಬಲು ಪ್ರೀತಿ ಸಣ್ಣ-ಸಣ್ಣ ವಿಷಯಗಳಿಗೆ ಜಗಳಾಡುವುದು ಮತ್ತೆ ಕೂಡುವುದು ಮಕ್ಕಳ ಸಹಜ ಗುಣ. ಇದು ಮಕ್ಕಳ ಲೋಕದ ಗ್ರಹಿಕೆ. ಸೂರ್ಯನು ಮೂಡುತ್ತಾನೆ. ಕತ್ತಲ ಜೊತೆಗೆ ಜಗಳವಾಡುತ್ತಾನೆ. ಇದರ ಪರಿಣಾಮವಾಗಿ ಮೂಡಣ ಕೆಂಪೇರಿದೆ. ಇದು ಜಗಳವಾಡಿದ ನೆತ್ತರಿನ ಕೆಂಪು ಎನ್ನುವ ಕವಿಯ ಕಲ್ಪನೆ ಅನನ್ಯವಾದುದು. 'ಸೂರ್ಯನ ಉದಯ ಜಗದ ಬೆಳಗು' ಎನ್ನುವ ಪಂಜೆಯವರು ನಿಸರ್ಗದ ಸೌಂದರ್ಯವನ್ನು ಕಣ್ಣಿಗೆ ಕಟ್ಟುವಂತೆ ಮಾಡಿದ್ದಾರೆ. ಹಕ್ಕಿಗಳು ಚಿಲಿಪಿಲಿ ಹಾಡಿನೊಂದಿಗೆ ಗೂಡಿನಿಂದ ಹೊರಬರುವುದು, ಸೌಂದರ್ಯದ ಪ್ರತೀಕವಾಗಿದೆ. ಇಂಥ ಹೋಲಿಕೆಗಳ ಮೂಲಕ ಕವಿತೆ ನಿರ್ಮಿಸುವ ಜಾಯಮಾನ ಪಂಜೆಯವರದು.

ಬಡವರು ಮನೆಯ ಮಾಡಿಗೆ ಹುಲ್ಲು ಹಚ್ಚುತ್ತಾರೆ. ಉಳ್ಳವರು ಹಂಚು ಹೊದಿಸುತ್ತಾರೆ. ಕವಿಯು ಬಡವರ ಮನೆಯ ಮಾಡಿನ ಹುಲ್ಲಿನಲ್ಲಿ ಚಿನ್ನದ ಗೆರೆ ಎಳೆಯುತ್ತಾನೆ. ಇದರಿಂದಾಗಿ ಅದು ಬಂಗಾರವಾಗಿ ಕಾಣಿಸುತ್ತದೆ. ಬಡವರಿಗೆ ಬಂಗಾರವೆಂದರೆ ಬೆಳಗಿನ ಸೂರ್ಯ ಎನ್ನುವ ಹೋಲಿಕೆ ಅಭೂತಪೂರ್ವವಾದುದು. ಸೂರ್ಯೋದಯವಾಗುತ್ತಲೇ ಬಡವರ್ಗ ಕಾಯಕದಲ್ಲಿ ತೊಡಗುವ ರೂಪಕ ಪ್ರತಿಮೆಗಳನ್ನು ಪಂಜೆಯವರು ಹೀಗೆ ವ್ಯಕ್ತಪಡಿಸುತ್ತಾರೆ.

'ಮಾಡಿನ ಹುಲ್ಲಲಿ ಚಿನ್ನದ ಗರಿಯನು
ಎಳೆಯುವನು ರವಿ ಹೊಳೆಯುವನು ।
ಕೂಡಲೆ ಕೋಣೆಯ ಕತ್ತಲೆ ಕೊಳೆಯನು
ತೊಳೆಯುವನು ರವಿ ತೊಳೆಯುವನು ।
ಮಲಗಿದ ಕೂಸಿನ ನಿದ್ದೆಯ ಕಸವನು
ಗುಡಿಸುವನು ಕಣ್ ಬಿಡುಸುವನು ।
ಹುಲು ಗಿಡ ಹೂವಿಗೆ ಪರಿಪರಿ ಬಣ್ಣವ ಉಡಿಸುವನು
ರವಿ ತೊಡಿಸುವನು'[೪]।

ಪಂಜೆಮಂಗೇಶರಾಯರು ಪ್ರಜ್ಞಾಪೂರ್ವಕವಾಗಿಯೇ ರೂಪಕಗಳನ್ನು ಬಳಸಿದ್ದಾರೆ ಎನಿಸುತ್ತದೆ. 'ಕತ್ತಲೆ ಕೊಳೆ', 'ನಿದ್ದೆಯ ಕಸ' ಅಭಿವ್ಯಕ್ತಿಸುವ ರೀತಿಯಿಂದ ಕವಿತೆ ಸಫಲತೆಯನ್ನು ಪಡೆದಿದೆ. ರವಿ ಉಯಯಿಸಿದೊಡನೆ ಕತ್ತಲೆ ಎಂಬ ಕೊಳೆ ಕೊಚ್ಚಿಕೊಂಡು ಹೋಗುತ್ತದೆ. ಕತ್ತಲೆಯನ್ನು ಕೊಳೆ ಎಂದು ಅರ್ಥೈಸಿದರೆ ಸೂರ್ಯನ ಬೆಳಕು ನಿರ್ಮಲತೆಯ, ಜ್ಞಾನದ ಸಂಕೇತವೆಂದು ತಾತ್ವಿಕವಾಗಿ ಆರಾಧಿಸಬೇಕಾಗುತ್ತದೆ. ಹಾಗೆಯೇ 'ನಿದ್ದೆಯ ಕಸವನ್ನು ಗುಡಿಸುವ' ರವಿಯ ಉದಯದಿಂದ ರಂಗು ರಂಗಿನ ಬಣ್ಣವನ್ನು 'ಹುಲ್ಲು ಗಿಡ ಹೂಗಳಿಗೆ ಉಡಿಸುವನು' ಎಂಬ ನುಡಿಗಳು ಪಂಜೆಯವರ ಕಲ್ಪನೆ ಕವಿತೆಯನ್ನು ಉತ್ತುಂಗಕ್ಕೆ ತಲುಪಿಸಿವೆ. ಸೂರ್ಯನ ಸಹಜ ಬಣ್ಣಗಳಾದ ಹೊಂಬಣ್ಣ, ಕೆಂಬಣ್ಣಗಳು ಪ್ರಕೃತಿಗೆ ಸೊಬಗನ್ನು ನೀಡಿ ಭವ್ಯತೆಯನ್ನು ಮೆರೆದಿವೆ. ಸಹೃದಯರ ಮನವನ್ನು ತಣಿಸಿವೆ. ಅನುಕರಣ ಪದಗಳಾದ ಮೂಡುವನು ರವಿ ಮೂಡುವನು', 'ಏರುವನು ರವಿ ಏರುವನು', 'ಹೊಳೆಯುವನು ರವಿ ಹೊಳೆಯುವನು' ಎನ್ನುವ ಅನುರಣನ ಕವಿತೆಗೆ ಮಹತ್ವ ತಂದುಕೊಟ್ಟಿವೆ. ಸಾಮಾನ್ಯ ಪದಗಳೂ ಸಹ ಪಂಜೆಯವರಲ್ಲಿ ವಿಶೇಷ ಅರ್ಥ ಪಡೆಯುತ್ತವೆ ಎನ್ನುವುದಕ್ಕೆ ಕವನವೇ ಸಾಕ್ಷಿ.

ಮಕ್ಕಳು ರಂಜಿಸುವಂತಹ ಕಲ್ಪನೆಗಳ, ಸನ್ನಿವೇಶಗಳಿಂದ ಕೂಡಿದ 'ಸೂರ್ಯೋದಯ' ಕವಿತೆ ಸುಂದರವಾಗಿ ಮೂಡಿದೆ. ಸೂರ್ಯನ ಉದಯ ನಿಸರ್ಗವನ್ನು ಭಿನ್ನ-ಭಿನ್ನವಾದ ವಿಧಗಳಿಂದ ಎಚ್ಚರಗೊಳಿಸುತ್ತದೆ. ಸೂರ್ಯೋದಯದ ವರ್ಣನೆಯೊಂದಿಗೆ ಕೆಂಪು ಬಣ್ಣದ ಓಕುಳಿ ಆಟ ಆಡಿರುವಂತಿರುವ ಸೂರ್ಯ, ಕೋಗಿಲೆಯ ಇಂಪಾದ ಗಾನ ಸೂರ್ಯನನ್ನು ಸ್ವಾಗತ ಕೋರಿದಂತಿದೆ.

'ಆ ದಿನನಾಥನ ಮೂರುತಿಗೆ
ಆದವು ಹೂಗಳು ಆರತಿಗೆ
ಕೋಳಿಯ ಕಹಳೆಯ ಊದಿದುದು
ಗಾಳಿಯ ರಾಯಸ ಓದಿದುದು'[೫].

ಸೂರ್ಯನು ಆಗಸದಲ್ಲಿ ಮೂಡುವುದು, ಸಿಂಹಾಸನವನ್ನು ಅಲಂಕರಿಸಿದಾಗ ಹೂಗಳೇ ಆರತಿಯಾದವು. ಕೋಳಿಯ ಕೂಗೇ ಕಹಳೆಯಾಯಿತು. ಗಾಳಿಯ ಬೀಸುವಿಕೆಯೇ ರಾಯಸ ಓದಿದಂತೆ ದಿನದ ಪ್ರಾರಂಭವಾಗುವುದನ್ನು ಕವಿ ಪಂಜೆಮಂಗೇಶರಾಯರು ರಂಜನೀಯವಾಗಿ ತಿಳಿಸುತ್ತಾರೆ. ಆದರೆ ತಾತ್ವಿಕ ದೃಷ್ಟಿಯಿಂದ ಕವಿತೆಯು ಸಂಪ್ರದಾಯ, ಪರಂಪರೆಯ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುತ್ತದೆ.

ಪಂಜೆಮಂಗೇಶರಾಯರು ಮಕ್ಕಳ ಕವನಗಳಿಗೆ ವಸ್ತುವಾಗಿ ಆಯ್ದುಕೊಂಡಿದ್ದು ಸಾಮಾನ್ಯವಾದ ದಿನನಿತ್ಯದ ಪ್ರಸಂಗಗಳು, ನಿಸರ್ಗದಲ್ಲಿ ಮೂಡುವ ಸೂರ್ಯ, ಚಂದ್ರ, ಸಂಜೆ, ಗಾಳಿ, ಸೂರ್ಯೋದಯ, ಆಕಾಶ, ಪಕ್ಷಿ, ಪ್ರಾಣಿ ಮೊದಲಾದವುಗಳು ಕವನಗಳಲ್ಲಿ ವ್ಯಕ್ತಗೊಳಿಸಿದ್ದಾರೆ. ಹಲವು ಕವಿಗಳು ಚಂದ್ರನನ್ನು ಕುರಿತು ಕವಿತೆ ರಚಿಸಿದ್ದಾರೆ. ಚಂದ್ರ ಮಕ್ಕಳಿಗೆ ಬಲು ಪ್ರೀತಿ, ಮಗು ತನಗೆ ಪ್ರಿಯವಾದ ವಸ್ತು ಸಿಗದಾಗ ಹಟ ಮಾಡುವುದು ಸಹಜ. ಅಂಥ ಕವಿತೆ 'ಚಂದ್ರನನ್ನು ತಾ' ಎಂಬುದು ಸುಂದರವಾಗಿ ಮೂಡಿದೆ.

'ತಾರಮ್ಮಯ್ಯ ತಂದು ತೋರಮ್ಮಯ್ಯ
ದೂರದ ಬಾನೊಳು ಏರಿದ ಚಂದ್ರನ
ತಾರಮ್ಮಯ್ಯ ತಂದು ತೋರಮ್ಮಯ್ಯ'[೧೦].

ಇದು ಹಾಡಲು ಯೋಗ್ಯವಾದುದು. ದಾಸರ ಕೀರ್ತನೆಯ ಧಾಟಿಯಲ್ಲಿ ಮೂಡಿದ ಈ ಪದ್ಯ ಮಕ್ಕಳಿಗೆ ಆನಂದ ನೀಡುವಲ್ಲಿ ಸಂಧೇಹವಿಲ್ಲ. ಮಗು ತಾಯಿಗೆ ಚಂದ್ರನನ್ನು ತಂದು ಕೊಡು ಎನ್ನುವುದೇ ಮುಗ್ಧತೆಯ ಪ್ರತೀಕವಾಗಿದೆ. ತಾಯಿ ಮಗುವನ್ನು ಎತ್ತಿ ಚಂದ್ರನನ್ನು ತೋರಿಸುವುದು, ಮುದ್ದು ಮಾಡುವುದು ವಾತ್ಸಲ್ಯದ ಪ್ರತಿಮೆಗಳಾಗಿವೆ. 'ಇರುಳಿನಲ್ಲಿ ಚಂದ್ರ ಬೆಳ್ಳಗೆ ಅರಳಿದ ಹೂವು', 'ತಣ್ಣನೆ ಮೊಸರಲ್ಲಿ ಬೆಣ್ಣೆ ಮುದ್ದೆ'ಯ ಹಾಗೆ ಮಗು ಕಾಣುವ ರೀತಿ ಕವಿತೆಗೆ ಮೆರಗು ತಂದಿದೆ.

ಪಂಜೆಮಂಗೇಶರಾಯರ 'ಹಾವಿನ ಹಾಡು' ಮೊದಲು ಪ್ರಕಟವಾದುದು ಕನ್ನಡ ಒಂದನೆಯ ಪದ್ಯ ಪುಸ್ತಕದಲ್ಲಿ (೧೯೧೨) ಆನಂತರ ಪಂಜೆಯವರ ಶತಮಾನೋತ್ಸವ ಸಂದರ್ಭದಲ್ಲಿ ಪಂಜೆಯವರ ಕೃತಿಗಳು ಸಂಪುಟ-೧ ರಲ್ಲಿ ಪ್ರಕಟವಾಯಿತು. ಹದಿನಾರು ಸಾಲುಗಳನ್ನು ಹೊಂದಿದ ಈ ಪದ್ಯ 'ನಾಗರ ಹಾವಿನ' ಬಾಹ್ಯ ಸೌಂದರ್ಯವನ್ನು ಮಕ್ಕಳು ಗ್ರಹಿಸಿದರೆ, ಹಿರಿಯರು ಇನ್ನೊಂದು ನೆಲೆಯಲ್ಲಿ ಅರ್ಥೈಸಲು ಸಾಧ್ಯವಿದೆ.

'ನಾಗರ ಹಾವೆ ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ
ಕೈಗಳ ಮುಗಿವೆ ಹಾಲನೀವೆ
ಬಾ ಬಾ ಬಾ ಬಾ ಬಾ ಬಾ ಬಾ ಬಾ
ಹಳದಿಯ ಹೆಡೆಯನು ಬಿಚ್ಚೋ ಬೇಗಾ

ಹೊಳಹಿನ ಹೊಂದಲೆ ತೂಗೋ ನಾಗಾ
ಕೊಳಲನ್ನೂದುವೆ ಲಾಲಿಸು ರಾಗಾ
ನೀ ನೀ ನೀ ನೀ ನೀ ನೀ ನೀ ನೀ"[೧೧].

ಇಂಥ ಮೋಡಿಯ ಹಾಡನ್ನು ಎಲ್ಲರೂ ಆಸ್ವಾದಿಸದವರೆಂದು ನನ್ನ ಗ್ರಹಿಕೆ. ಇಲ್ಲಿಯ ಗೇಯತೆ, ಪ್ರಾಸ, ಲಯದ ಗತಿಗಳು ಕವಿತೆಗೆ ಮಧುರತೆ ತುಂಬಿವೆ. ಪುಂಗಿಯ ನಾದಕ್ಕೆ ಕುಣಿಯುವ ಹಾವಿನಂತೆ ಸಮ್ಮೋಹನಗೊಂಡು ತಲೆದೂಗಿ ಹೆಜ್ಜೆ ಹಾಕಿದವರೇ ಹೆಚ್ಚು. ಪಂಜೆಯವರು ಬಳಸುವ ಪದಗಳ ಲಲಿತಗುಣ, ಭಾವಪೂರ್ಣತೆ ಕೇವಲ ಮಕ್ಕಳಿಗಷ್ಟೇ ಅಲ್ಲ ಹಿರಿಯರಿಗೂ ಹಿತವನ್ನುಂಟು ಮಾಡಿವೆ. ನಾಗರ ಹಾವು ಹೂವಾಗಿ ಕಾಣುವುದು, ರಮಣೀಯವಾಗಿರುವುದು ಹೊರನೋಟಕ್ಕೆ ಸುಂದರ. ಅಂತರಂಗದಲ್ಲಿ ಬಲು ಕ್ರೂರಿ, ವಿಷಕಾರಿ, ರೌದ್ರತೆಯ ಪ್ರಾಣಿ, ಮಕ್ಕಳಿಗೆ 'ಹಾವಿನಹಾಡು' ಬಾಹ್ಯ ಸೌಂದರ್ಯವನ್ನು ತಿಳಿಯಪಡಿಸಿದರೆ, ಹಿರಿಯರಿಗೆ ಧ್ವನಿಪೂರ್ಣವಾದ ಹೊಸದೊಂದು ಮಗ್ಗುಲನ್ನು ಅಭಿವ್ಯಕ್ತಗೊಳಿಸುತ್ತದೆ. ಈ ಕವಿತೆ ಪ್ರತಿಮೆಯಾಗಿರುವುದು ಗಮನಿಸಬೇಕಾದ ಸಂಗತಿ. ನಾಗರ ಹಾವಿನ ವಾಸ ಬಾಗಿಲ ಬಳಿಯಲ್ಲಿಯೇ; ಅಲ್ಲಿಯೇ ಹಾಲನ್ನೀವೆ, ಕೈಗಳ ಮುಗಿವೆ ಎನ್ನುತ ಪಂಜೆಯವರು ಹಾವನ್ನು, ಒಳಗೆ ಬರಲು ಆಹ್ವಾನಿಸುತ್ತಾರೆ. ಹಾವು ಹೊರಗೆ ಇದ್ದರೆ ಭಯವಿಲ್ಲ, ಒಳಗಿದ್ದರೆ ಅಪಾಯ ತಪ್ಪಿದ್ದಲ್ಲ. ಹಾವಿನ ನಾಲಗೆ ಸೀಳಿ ಎರಡಾಗಿದೆ. ಹೀಗಾಗಿ ಹಾವು ಒಳಗೊಂದು ಹೊರಗೊಂದು ರೀತಿಯದಾಗಿದೆ. ಇಂಥ ಪ್ರಾಣಿಯಿಂದ ಯಾವಾಗಲೂ ದೂರವಿರಬೇಕೆಂಬುದು ಇಲ್ಲಿಯ ಆಶಯವಾಗಿದೆ. ಪಂಜೆಮಂಗೇಶರಾಯರ ಈ ಪದ್ಯವನ್ನು ಇನ್ನೊಂದು ಮಗ್ಗಲು ಅಂದರೆ, ಒಳಾರ್ಥವನ್ನು ಗ್ರಹಿಸಿದರೆ ಹೊಸ ವಿಚಾರವನ್ನು ತೆರೆದಿಡುತ್ತದೆ. ೧೯೧೦ಳರಲ್ಲಿ ರಚನೆಯಾದ ಕವಿತೆ– ಸ್ವಾತಂತ್ರ್ಯ ಚಳುವಳಿಯ ಕುರಿತಾದುದೆಂದು ತಾತ್ವಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಪಂಜೆಮಂಗೇಶರಾಯರು ದೃಢ ಮನದವರು, ಸ್ವಾಭಿಮಾನಿಗಳು, ಜೀವನ ನಿರ್ವಹಣೆಗಾಗಿ ಸರ್ಕಾರದ ಉದ್ಯೋಗ ಹೊಂದಿದ್ದರೂ ತಮ್ಮ ದನಿಯನ್ನು ಕವಿತೆಗಳ ಮೂಲಕ ಸುಪ್ತ ರೀತಿಯಲ್ಲಿ ವ್ಯಕ್ತಪಡಿಸಿದವರು.

ಬ್ರಿಟಿಷರ ಸಂಕೇತವಾಗಿ 'ನಾಗರ ಹಾವು' ಕವಿತೆಯಲ್ಲಿ ಬಳಕೆಯಾಗಿದೆ. ಹೊರಗಿನಿಂದ ಬಂದ ಬ್ರಿಟೀಷರು ಬಾಗಿಲಲ್ಲಿ ಇರಲಿ, ಒಳಗೆ ಬಾರದಿರಲಿ ಎಂಬುದು ಕವಿಯ ಆಶಯ. ಅಸಹಾಯಕತೆಯಿಂದ ಕವಿ ಕೈ ಮುಗಿದು ಒಳಗೆ ಬರಮಾಡಿಕೊಳ್ಳುತ್ತಾನೆ. 'ಹೊಳಹಿನ ಹೊಂದಲೆ' ಎನ್ನುವ ಪದ ಬ್ರಿಟೀಷರ ಬಾಹ್ಯ ರೂಪವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅವರ ಮೈ ತಣ್ಣಗೆ, ಕಾರಣ ಅವರು ಶೀತಲವಾಸಿಗರು, ಸ್ವಭಾವ ಮಾತ್ರ ಹಗೆಯಿಂದ ಬಿಸಿಯಾಗಿದೆ. 'ಒಡೆದು ಆಳುವ ಇಬ್ಬಗೆಯ ನೀತಿಯನ್ನು 'ಎರಡೆಳೆ ನಾಲಗೆ' ಅಭಿವ್ಯಕ್ತಗೊಳಿಸುತ್ತದೆ. ಕವಿತೆಯ ತುಂಬೆಲ್ಲ ಎಲ್ಲಿಯೂ ಒತ್ತಕ್ಷರಗಳ ಸುಳಿವಿಲ್ಲ. ಸರಳ, ಸಹಜ ಶಬ್ದಗಳ ಬಳಕೆಯ ವರ್ಣನೆ ಸೊಗಸಾಗಿ ಮೂಡಿದೆ. 'ಹಾವಿನ ಹಾಡು

ಶಿಶುಗೀತೆಯಂತೆ ತೋರಿದರೂ ಅದರ ಆಳದಲ್ಲಿ ಅತಿಶಯಾರ್ಥದ ಎಳೆಯೊಂದು ಹಾಸುಹೊಕ್ಕಾಗಿ ಆ ಪದ್ಯ ಮೇಲು ನೋಟಕ್ಕಿಂತ ಹೆಚ್ಚು ಶಕ್ತಿಯುತವಾದದ್ದು ಎನಿಸುತ್ತದೆ. ಆಗಿನ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ 'ಮಕ್ಕಳ ಪದ್ಯ'ವೆಂದು ಸಾಮಾನ್ಯವಾಗಿ ಪರಿಣತವಾಗಿರುವ ಈ ಕವನವನ್ನು ಓದಿಕೊಂಡರೆ ಅದು ಕವಿಯ ಅದಮ್ಯ ಸಾಮಾಜಿಕ ಅರಿವನ್ನು ವ್ಯಕ್ತಗೊಳಿಸುವುದರ ಜೊತೆಗೆ ಅದರ ಮಾರ್ಮಿಕತೆಯ ಸಾಮರ್ಥ್ಯವನ್ನು ಪರಿಚಯಿಸುತ್ತದೆ. ಬ್ರಿಟೀಷ ಸರ್ಕಾರವನ್ನು ಅವರು ನಾಗರಹಾವಿಗೆ ಹೋಲಿಸಿದಂತೆ ತೋರುತ್ತದೆ'[೧೨]. ಹೀಗೆ ಪ್ರತಿಮೆಗಳಿಂದ ಕೂಡಿರುವ ಕವಿತೆ ಗಮನ ಸೆಳೆಯುತ್ತದೆ.

'ತೆಂಕಣಗಾಳಿಯಾಟ' ಕವಿತೆ ಪಂಜೆಮಂಗೇಶರಾಯರು ಸಂಪಾದಿಸಿದ ಕನ್ನಡ ಎರಡನೆಯ ಪದ್ಯ ಪುಸ್ತಕದಲ್ಲಿ 'ಕವಿಶಿಷ್ಯ' ಎಂಬ ಕಾವ್ಯನಾಮದಿಂದ ಪ್ರಕಟಿಸಿದ್ದಾರೆ. ಕನ್ನಡದ ಎಲ್ಲ ಮನಸುಗಳಿಗೆ ಪರಿಚಿತವಾದ ಪದ್ಯ ತೆಂಕಣ ಗಾಳಿಯಾಟ, ಗಾಳಿಯ ಬೀಸುವಿಕೆ, ಆವೇಶ, ಅರ್ಭಟ, ರಭಸಗಳಿಂದ ಕೂಡಿದ ಕವಿತೆಯಲ್ಲಿ ಪದಗಳ ಆಟ ಮನೋಹರವಾದುದು. ಹೊರನೋಟಕ್ಕೆ ಮಕ್ಕಳ ಕವನದಂತೆ ಕಂಡರೂ, ಇಲ್ಲಿ ವ್ಯಕ್ತಗೊಂಡಿರುವ ಕಲ್ಪನೆ, ಕವಿಯ ಸ್ಫೂರ್ತಿ, ಪ್ರತಿಭೆ, ರೋಮಾಂಚನ, ಪ್ರಾಸ ವೈವಿಧ್ಯತೆ, ಕವಿತೆಯ ರಭಸದ ಆವೇಶ ಇತ್ಯಾದಿಗಳು ಸಹೃದಯರ ಮನಮುಟ್ಟಿ ತಲ್ಲಣಗೊಳಿಸಿದೆ. ಮಳೆಗಾಲದ ಆರಂಭದ ಅರ್ಭಟ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಜ. ಪಂಜೆಮಂಗೇಶರಾಯರು ಬಂಟವಾಳ, ಮಂಗಳೂರಿನಲ್ಲಿ ನೆಲೆಸಿದವರು. ಮಲೆನಾಡಿನ ಮಳೆ, ಗಾಳಿ, ಸುಂಟರಗಾಳಿ, ನೆರೆಹಾವಳಿಗೆ ತುತ್ತಾದವರನ್ನು ಕಂಡವರು. ಮಳೆ-ಗಾಳಿಗೆ ಸಿಲುಕಿದ ಮಕ್ಕಳನ್ನು, ಹೆಂಗಸರನ್ನು, ಮುದುಕರನ್ನು ಹತ್ತಿರದಿಂದ ನೋಡಿ ಅನುಕಂಪ ವ್ಯಕ್ತಪಡಿಸಿದವರು. ಆ ಮಳೆಯ ದೃಶ್ಯ;

'ಬರಲಿದೆ; ಅಹಹಾ; ದೂರದಿ ಬರಲಿದೆ
ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತದ ಕೊಯುವ ಕೂವೊ?
ಹೊಸತಿದು ಕಾಲನ ಕೋಣನ ಓ; ಓ;
ಉಸುರಿನ ಸುಯ್ಯೋ? ಸೂಸೂ ಕರಿಸುತ'[೧೩].

ಅಮೂರ್ತವಾದ ಕಲ್ಪನೆಯಿಂದ ಕವಿತೆ ಪ್ರಾರಂಭಗೊಳ್ಳುತ್ತದೆ. ಪಾತಾಳದ ಹಾವಿನ ಬುಸುಗುಟ್ಟುವಿಕೆ, ಭೂತದ ಹಸಿವಿನ ಕೂಗು, ಕಾಲನ ಉಸುರಿನ ಸುಯ್ಲು, ಭಯಂಕರವಾದ ವಸ್ತುವಿನ ಆಗಮನವು ಭಯವನ್ನು ಹುಟ್ಟಿಸುತ್ತದೆ. ತೆಂಕಣಗಾಳಿಯ ಆಗಮನ ಅಶುಭ ಸಂಕೇತದ ಪ್ರತಿಮೆಯೊಂದಿಗೆ ಭಯವನ್ನು ಮೂಡಿಸುವ ಚಿತ್ರಣ ವ್ಯಕ್ತವಾಗುವುದು. ಕವಿಯ ಅಗಾಧ ಪ್ರತಿಭೆಯಿಂದ 'ಸೂಸೂಕರಿಸುತ' ಎನ್ನುವುದು, ಭೀಕರ ಗಾಳಿ ಎಲ್ಲವನ್ನು ನುಂಗಿಹಾಕುವ ಕಲ್ಪನೆ ಅಚ್ಚರಿ ಮೂಡಿಸುತ್ತದೆ.

ಪಂಜೆಮಂಗೇಶರಾಯರು ಶಬ್ದಗಳನ್ನು ಸುಂದರ ಮತ್ತು ಸ್ವಾರಸ್ಯಪೂರ್ಣವಾಗಿ ಬಳಸಿರುವುದು, ಪ್ರಾಸ-ಅನುಪ್ರಾಸಗಳಿಂದ ತೆಂಕಣಗಾಳಿಯಾಟವನ್ನು ಅಭಿವ್ಯಕ್ತಗೊಳಿಸಿರುವುದು ಕವಿಯ ಚಮತ್ಕಾರವೆಂದರೆ ತಪ್ಪಾಗದು.

'ಬೊಬ್ಬೆಯ ಹಬ್ಬಿಸಿ ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ
ಅಬ್ಬರದಲಿ ಭೋರ್ ಭೋರೆನ್ನೆ ಗುಮ್ಮಿಸಿ'[೧೪].

ಬಿರುಗಾಳಿಯ ರಭಸಕ್ಕೆ ಕಡಲು ಅಲ್ಲೋಲ ಕಲ್ಲೋಲವಾಗುತ್ತ ಅಲೆಗಳು ಒಮ್ಮೆಲೆ ದಡಕ್ಕೆ ಬಂದು ಬಡಿಯುವ ಅಬ್ಬರ, ರಮಣೀಯವಾಗಿ ಕಂಡುಬರುವುದು. ಅಲೆಗಳ ಏರು-ಇಳಿತಗಳು ಆರೋಹಣ-ಅವರೋಹಣ ಕ್ರಮವನ್ನು ಅಭಿವ್ಯಕ್ತಗೊಳಿಸಿರುವುದು ಕವಿಯ ಪ್ರತಿಭೆಗೆ ಸಾಕ್ಷಿಯಾಗಿದೆ. ಸಾಗರದ ಗಾಳಿಯ ಬೀಸುವಿಕೆ ಅಸ್ಪಷ್ಟ ಅನುಭವ ಸ್ಪಷ್ಟವಾಗುತ್ತ ಹೋಗುವುದು.

ಪಂಜೆಮಂಗೇಶರಾಯರು ತೆಂಕಣಗಾಳಿಯಾಟದ ಚಿತ್ರಣವನ್ನು ರೋಮಾಂಚನಕಾರಿಯಾಗಿ ಬಿತ್ತರಿಸಿದರೂ ಕರಾವಳಿಯ ಜನರಿಗೆ ಅದು ಅರಿವಿಗೆಬಾರದೇ ಹೋಗುತ್ತದೆ. ಹೀಗಾಗಿ ಅವರ ಬಾಳಿನಗೋಳು ಹೇಳತೀರದು.

'ನಡುಮುರಿಯುತ್ತ ನಗ ನಾವೆಗೆ ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ
ಹಡಗನು ಕೀಲಿಸಿ, ತುಮುರನು ತೇಲಿಸಿ
ದಡದಲಿ ಝಾಡಿಸಿ, ದೋಣಿಯ ನಾಡಿಸಿ'[೧೫].

ಇಲ್ಲಿಯ ನಾವೆ, ಕೂವೆ, ಹಾಯಿ, ಹಡಗು, ತುಮುರ, ದೋಣಿ ಮುಂತಾದ ಚಿತ್ರಗಳು ಪ್ರತಿಮೆಯ ರೂಪ ಪಡೆದುಕೊಂಡಿವೆ. ತೆಂಕಣಗಾಳಿ ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ ಇಕ್ಕುವ, ಹೊಲದ ಎತ್ತು, ದನ, ಆಡುಗಳನ್ನು ಹಟ್ಟಿಗೆ ಅಟ್ಟುವ, ದೃಶ್ಯ ರೋಮಾಂಚನಕಾರಿಯಾದುದು. ಪಂಜೆಮಂಗೇಶರಾಯರು ಸಾಮಾನ್ಯ ಪದಗಳಿಂದ ಕವಿತೆಯ ಧ್ವನಿ ಮೈದುಂಬಿ ಹರಿಯುವಂತೆ ಮಾಡುತ್ತಾರೆ. ರಸಿಕತೆ ಇಲ್ಲದ ಕವಿಗಳಿಲ್ಲ ಎನ್ನುವ ಹಾಗೆ ಪಂಜೆಯವರು ಸಹ ರಸಿಕರು. ಮಳೆಗಾಳಿಯ ಬೀಸುವ ರಭಸಕ್ಕೆ ಹೆಣ್ಣುಮಕ್ಕಳ ಮುಡಿ ಕೆದರುವ, ಸೀರೆ (ಉಡುಗೆ) ಹಾರಾಡುವ ದೃಶ್ಯ ನೋಡಿದ ಕವಿ, 'ಸಡಿಲಿಸಿ ಮಡದಿಯರುಡಿಯನು ಮುಡಿಯನು' ಎನ್ನುವಲ್ಲಿ ಸ್ಪಷ್ಟವಾಗಿ ತೋರುತ್ತದೆ.

ಪ್ರಕೃತಿ ಶಾಂತವಾಗಿರುವಾಗ ಸುಂದರವಾಗಿ ಕಾಣುತ್ತದೆ. ಕೋಪಗೊಂಡಾಗ ಭಯಾನಕವೂ ರೌದ್ರವೂ ಆಗಿರುವುದು ಸಹಜ ಇಂಥ ಸಂದರ್ಭದಲ್ಲಿಯೂ ಪಂಜೆಯವರು ನಯನಮನೋಹರವಾದ ಕವಿತೆ ಕಟ್ಟಬಲ್ಲರು. ಅವರ ಅನುಭವವು ಇದಕ್ಕೆ ಪೂರಕವಾಗಿ ನಿಲ್ಲುತ್ತದೆ. 'ಹೊರಗಣ್ಣಿಗೆ ಕಿರಿದಾಗಿ, ಸರಳವಾಗಿ, ಸುಲಭವಾಗಿ ತೋರುವ ಭಾವಗೀತೆಯ

ಸ್ವರೂಪ ಹೆಚ್ಚು-ಹೆಚ್ಚು ವಿಚಾರಕ್ಕೆ ಒಳಗಾಗುವಂತೆ ಶಕ್ತಿಪೂರ್ಣವೂ, ಜಟಿಲವೂ ಆಗಿರುವುದು ಸ್ಪಷ್ಟವಾಗುತ್ತದೆ'[೧೬].

ಪ್ರೊ. ಎಚ್. ಸುಂದರರಾವ್ ಅವರು ಪಂಜೆಯವರ ಪದ್ಯಗಳನ್ನು ವಿಮರ್ಶಿಸುತ್ತ 'ತೆಂಕಣಗಾಳಿಯಾಟ'ದಲ್ಲಿ ಬರುವ ದೃಶ್ಯ, ಉಜ್ವಲ ವರ್ಣನೆ ಹಾಗೂ ಅದ್ಭುತ ಕಲ್ಪನೆಗಳು ಶೆಲ್ಲಿಯ 'ode to the west wind' ಪ್ರಗಾಥದಲ್ಲಿ ಬರುವಂಥದೇ ಆಗಿದೆ ಎಂದು ಅಭಿಪ್ರಾಯಪಡುತ್ತಾರೆ. 'ಪಂಜೆಮಂಗೇಶರಾಯರ ಈ 'ತೆಂಕಣಗಾಳಿಯಾಟ'ದಲ್ಲಿ (೧೯೧೯ರಲ್ಲಿ ಕಾವ್ಯ ಅವತರಿಸಿದೆ) ನಾವು ಕಂಡಿರುವ ಪ್ರಚಂಡ ಗಾಳಿ ಬೀಸುವ ದೃಶ್ಯದ ಸ್ಫುಟವಾದ ಚಿತ್ರಣವಷ್ಟೇ ಅಲ್ಲ. ಇದು ನಿಸರ್ಗ ಹಾಗೂ ಮಾನವ ವ್ಯಾಪಾರಗಳಲ್ಲಿ ಗಾಳಿ ಬಂದು ವಿಶಿಷ್ಟ ಶಕ್ತಿಯಾಗಿ ಪುನರವತಾರ ಮಾಡುತ್ತದೆ. ಈ ಕವನದಲ್ಲಿ ಕವನ ಗಾಳಿಯ ಶಬ್ದವನ್ನೇ ಕಿವಿಗೆ ಕೇಳಿಸುತ್ತದೆ. ಜೊತೆಗೆ ಅದರ ಚಿಂತನವನ್ನೆ ಮಾತಿನಲ್ಲಿ ಹಿಡಿದಿಡುತ್ತದೆ. ಪಾತಾಳದ ಹಾವಿನಿಂದ ಹಸಿವಿನ ಭೂತ, ಹಸಿವಿನ ಭೂತದಿಂದ ಕಾಲನ ಕೋಣ ಈ ಚಿತ್ರಗಳಲ್ಲಿ ಗಾಳಿ ಹತ್ತಿರ ಬರುತ್ತ ಬರುತ್ತ ಅದರ ರುದ್ರಶಕ್ತಿಯ ಅರಿವೂ ಆಗುತ್ತದೆ. ಈಡೀ ಕವನ ಓದಿ ಅನುಭವಿಸಬೇಕಾದಂತಹದು. ದೂರದ ಗಾಳಿ ಹತ್ತಿರವಾಗುವ ಅನುಭವ, ಮುಂದೆ ಸಮುದ್ರದ ಮೇಲೆ ಅದರ ಹಾವಳಿ, ಅನಂತರ ಕಾಡಿನಲ್ಲಿ, ಅನಂತರ ಮನುಷ್ಯನ ಜಗತ್ತಿನಲ್ಲಿ ಅಲ್ಲಿಂದ ಸುತ್ತಲಿನ ನಿಸರ್ಗದಲ್ಲಿ ಹೀಗೆ ಇಡೀ ವಿಶ್ವವನ್ನೇ ವ್ಯಾಪಿಸಿ, ಜಡ, ಜೀವಂತ ವಸ್ತುಗಳೆಲ್ಲವನ್ನು ತನ್ನ ಮುಷ್ಠಿಯಲ್ಲಿ ಹಿಡಿಯುವ ತೆಂಕಣಗಾಳಿ ಒಂದು ಜೀವಂತ ಅದ್ಭುತ ಶಕ್ತಿಯಾಗಿ ಕವನದಲ್ಲಿ ಮೈತಾಳುತ್ತದೆ. ಭಾಷೆ ಛಂದಸ್ಸುಗಳು ಈ ಕವನದಲ್ಲಿ ಸಾಧಿತವಾಗುವ ಪ್ರತಿಸೃಷ್ಟಿಗೆ ಅನಿವಾರ್ಯವಾಗಿ ಬಂದಿವೆ ಎಂಬುದೂ ಅಭ್ಯಾಸ ಮಾಡಬೇಕಾದ ಅಂಶ. ಪಂಜೆಯವರಿಗೆ ಹೊಸಗನ್ನಡದಲ್ಲಿ ನಿಜವಾದ ಕಾವ್ಯ ಅವತರಿಸಿತು. (ಸೋಜಿಗದ ಸಂಗತಿ ಎಂದರೆ ಇದು 'Frolic in the wind' ಎಂಬ ಕವಿತೆಯ ರೂಪಾಂತರ)[೧೭].

ಒಟ್ಟಿನಲ್ಲಿ 'ತೆಂಕಣಗಾಳಿಯಾಟ' ಅದ್ಭುತ ಶಕ್ತಿಯ ರೂಪದಂತಿದೆ. ಗಾಳಿಯ ಅಬ್ಬರ ಅನಾಹುತ-ಅವಾಂತರಗಳನ್ನು, ರುದ್ರರಮಣೀಯತೆಗಳನ್ನು ಮಧುರವಾದ ಪದಗಳಲ್ಲಿ ಪಂಜೆಮಂಗೇಶರಾಯರು ಅಭಿವ್ಯಕ್ತಗೊಳಿಸಿದ್ದಾರೆ.

'ತೂಕಡಿಕೆಯನು ಕಳೆ' ದೇಶಭಕ್ತಿಯಾಗಿದೆ. ಇದು ಮೊದಲ ಬಾರಿಗೆ ಪ್ರಕಟಗೊಂಡಿದ್ದು 'ಪಂಜೆಯವರ ನೆನಪಿಗಾಗಿ' ಎಂಬ ಅಭಿನಂದನ ಗ್ರಂಥದಲ್ಲಿ ಆನಂತರ ಪಂಜೆಯವರ ಕೃತಿಗಳು ಸಂಪುಟ-೧ರಲ್ಲಿ ಪ್ರಕಟವಾಯಿತು. ಭಾರತೀಯರನ್ನು ದಬ್ಬಾಳಿಕೆ, ದಾಸ್ಯಗಳು ಎಷ್ಟು ಭೀಕರವಾಗಿ ಶೋಷಣೆಗೆ ಒಳಪಡಿಸಿರುವುದನ್ನು ಕವಿತೆ ಅಭಿವ್ಯಕ್ತಪಡಿಸುತ್ತದೆ. ಈ ಪದ್ಯದ ಕುರಿತಾಗಿ ಗೋವಿಂದ ಪೈಗಳು ಹೀಗೆ ಹೇಳುತ್ತಾರೆ. 'ಅವರ ಕವನಗಳಲ್ಲಿ ಸರ್ವೋತ್ತಮವಾದ 'ತೂಕಡಿಕೆಯನು ಕಳೆಯದೇತಕೆ ಕುಳಿತಿ ಹೆ ಗೆಳೆಯ' ಎಂದು

ಮೊದಲಾಗುವ ಆ ಹಾಡನ್ನು ಪ್ರಾಯಶಃ ಅವರು ಇಲ್ಲಿ ಮಂಜೇಶ್ವರದಲ್ಲಿ ರಚಿಸಿದರು ಹಾಗೂ ಕುಂಬಾರ ಹುಳು ತಾನಿಟ್ಟ ತತ್ತಿಗೆ ಮಣ್ಣು ಮೆತ್ತುವಂತೆ ಅದನ್ನು ಬಹಳ ಗೌಪ್ಯದಲ್ಲಿ ಇಟ್ಟರು. 'ಗೋವಿಂದ ಪೈ ಅವರು ಅದನ್ನು ಪಂಜೆಯವರ ಬಾಯಿಂದ ಹಾಡಿಸಿ, ತನ್ನ ತಮ್ಮಂದಿರು ಹಾಗೂ ಸೋದರಿಯಂದಿರ ಮೂಲಕ ಕಷ್ಟಪಟ್ಟು ಬರೆದುಕೊಂಡುದರ ಫಲವಾಗಿ ಆ ಪದ್ಯದ ಪೂರ್ಣಪಾಠ ದೊರೆಯುವಂತಾಯಿತು'[೧೮].

'ತೂಕಡಿಕೆಯನು ಕಳೆಯದೇತಕೆ ಕುಳಿತಿಹೆ ಗೆಳೆಯ?
ಸಾಕು, ಸುತ್ತಲು ನೋಡು, ಕಣ್ತೆರೆದು ನಿಂದು
ಲೋಕದಲಿ 'ವಂದೆ ಮಾತರಂ' ಎಂಬುದೊಂದೆ ಮಾ
ತೆ ಕಿವಿಯೊಡೆಯುತಿರೆ ಉಚ್ಛಳಿಸಿ ಬಂದು'[೧೯].

ದಾಸ್ಯತ್ವದ ನಿದ್ರೆಯಲ್ಲಿದ್ದ ಜನರನ್ನು ಎಚ್ಚರಿಸುವ ಅಭಿವ್ಯಕ್ತಿ ಇದಾಗಿದೆ. ದಬ್ಬಾಳಿಕೆಯ, ದಾಸ್ಯತ್ವದ ಅವಮಾನಗಳಿಂದ, ನಿದ್ರೆಯ ತೂಕಡಿಕೆಯಿಂದ ಬಿಡುಗಡೆಗೊಂಡು ಕಣ್ತೆರೆದು ನೋಡು ಎಂದು ಜನತೆಗೆ ಪಂಜೆಯವರು ಕರೆ ನೀಡುತ್ತಾರೆ. ಮಾತೃಭೂಮಿಗಾಗಿ ತನು-ಮನ-ಧನಗಳನ್ನು ಅರ್ಪಿಸು. ಸಮಯ ವ್ಯರ್ಥ ಸವೆಸಬೇಡ, ಭ್ರಾಂತಿಗೆ ಒಳಗಾಗಬೇಡ, ಸತ್ತಿರುವೆ ಏತಕೀ ಜೀವನದೊಳಿಂದು? ಎಂದು ಭಾರತೀಯ ಪ್ರಜೆಗಳನ್ನು ಪ್ರಶ್ನಿಸುತ್ತಾರೆ. ಭಾರತಾಂಬೆಯ ಮಕ್ಕಳನ್ನು ಎಚ್ಚರಿಸುವ ಕವಿತೆ ಶಬ್ದ ಚಿತ್ರಗಳಿಂದ ಪಂಜೆಮಂಗೇಶರಾಯರು ಮಾರ್ಮಿಕವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಇದೊಂದು ಹೃದಯ ಸ್ಪರ್ಶಿಯಾದ ಕವಿತೆ ಎಂದರೆ ತಪ್ಪಾಗದು. ಭಾರತೀಯ ವೀರನೇ ಯುದ್ಧಕ್ಕೆ ಸಿದ್ಧನಾಗು, ಮಿಂಚಿನ ಅಸಿಯನು ತೆಗೆದುಕೋ ಯುದ್ಧ ಮಾಡು ಎಂದು ಕವಿ ಆಜ್ಞೆ ಮಾಡುವುದು ಸ್ವಾಭಿಮಾನದ ಸಂಕೇತವಾಗಿದೆ. ರಕ್ತದ ಮಳೆ ಸುರಿಯಲಿ, ಅದರಿಂದ ಕಲಿಗಳ ಬೆಳೆ ಬೆಳೆಯಲಿ, ಭಾರತ ಸೌಭಾಗ್ಯ ಸಂಪನ್ನವಾಗಲಿ ಎನ್ನುವುದು ಕವಿಯ ಆಶಯದಂತಿದೆ. 'ರಕ್ತ ಬೀಜಾಸುರ'ನ ರಕ್ತದ ಹನಿ ಬಿದ್ದಲ್ಲಿ ಅವನಂಥ ಅಸಂಖ್ಯಾತರು ಜನಿಸುತ್ತಿದ್ದರಂತೆ. ಹಾಗೆಯೇ ಭಾರತಾಂಬೆಯ ವೀರರ ರಕ್ತದ ಮಳೆ ಸುರಿದಲ್ಲಿ ಅವರಂಥ ಅಸಂಖ್ಯಾತ ವೀರರು ಜನಿಸಿ ಅನಾಥೆಯಾದ ಭಾರತಾಂಬೆಯನ್ನು ಸೌಭಾಗ್ಯವಂತೆಯಾಗಿ ಮಾಡಲಿ ಎನ್ನುವುದು ಪಂಜೆಯವರ ಅಭಿಪ್ರಾಯವಾಗಿದೆ.

ಡಾ. ಎಸ್. ಅನಂತನಾರಾಯಣ ಅವರು ಈ ಕವಿತೆಯ ಬಗ್ಗೆ 'ಈ ಕವಿತೆ ಪಂಜೆಯವರ ಕೃತಿಗಳಲ್ಲೆಲ್ಲ ಸರ್ವೋತ್ತಮವಾದುದೆಂದು ಪೈಯವರ ಅಭಿಪ್ರಾಯ. ಅದನ್ನು ಕೇಳಿ ಮೆಚ್ಚಬೇಕು. ಅದನ್ನು ಕೇಳಿದಾತನ, ಅದನ್ನು ಓದಿದಾತನ ಮನಸ್ಸು ತನಗೆ ತಾನೇ ಒಂದು ಒರೆಯಾಗುತ್ತದೆ. ಅದರಿಂದ ಉಕ್ಕುವ ರಣಸ್ಫೂರ್ತಿ, ಮೈಯ್ತುಂಬುವ ಆ ರಣಾವೇಶ, ಅವೇ ಆತನ ಮಸೆಗತ್ತಿಯಾಗುತ್ತದೆ. ಬದುಕಿಗೇ ಒಂದು ಸ್ಫೂರ್ತಿ ನೀಡಬಲ್ಲದು ಈ ಕವಿತೆ'[೨೦] ಎಂದು ಹೇಳಿದ್ದಾರೆ. ಈ ಪದ್ಯ ಕೇವಲ ಯುವಕರಿಗೆ ಮಾತ್ರವಲ್ಲ ಎಳೆಯರಿಗೂ, ಹಿರಿಯರಿಗೂ ಸ್ಫೂರ್ತಿಯಾಗಿದೆ.

ಪಂಜೆಮಂಗೇಶರಾಯರು ಕೊಡಗಿನ ಸೌಂದರ್ಯ, ಇತಿಹಾಸ, ಕೊಡವ ನಾಡವರ ಧೈರ್ಯ, ಸಾಹಸ, ಔದಾರ್ಯ, ದೇಶಾಭಿಮಾನ ಇವೆಲ್ಲವುಗಳ ವರ್ಣನೆಗಳಿಂದ ಕೂಡಿದ ಕವಿತೆ 'ಹುತ್ತರಿ ಹಾಡು'. ಇದು ಮೊದಲು ಪ್ರಟಕಗೊಂಡಿದ್ದು ಕನ್ನಡ ಮೂರನೆಯ ಪದ್ಯ ಪುಸ್ತಕದಲ್ಲಿ, ಕವಿಶಿಷ್ಯ ಕಾವ್ಯನಾಮದಿಂದ ನಂತರ ೧೯೫೨ರಲ್ಲಿ 'ಪಂಜೆಯವರ ನೆನಪಿಗಾಗಿ' ಸ್ಮರಣ ಗ್ರಂಥದಲ್ಲಿ, ೧೯೭೩ರಲ್ಲಿ ಪ್ರಕಟವಾದ ಪಂಜೆಯವರ ಕೃತಿಗಳು ಸಂಪುಟ-೧ರಲ್ಲಿ. ಪಂಜೆಮಂಗೇಶರಾಯರು ಕೊಡಗಿನಲ್ಲಿದ್ದಾಗ ಪ್ರಸಿದ್ಧವಾದ ಐತಿಹಾಸಿಕ ಸ್ಥಳಗಳನ್ನು ಸಂದರ್ಶನ ಮಾಡಿದರು. ಪ್ರಕೃತಿ ಸೌಂದರ್ಯದ ಜೊತೆಗೆ ಕೊಡವ ನಾಡವರ ಜನಜೀವನ, ಸಂಸ್ಕೃತಿ, ಸಾಹಸಗಳನ್ನು ಕಂಡು ಅನುಭವಿಸಿದವರು. 'ಪುತ್ತರಿ-ಹುತ್ತರಿ ಅಂದರೆ ಹೊಸ ಅಕ್ಕಿ ಎಂದರ್ಥ. ಹೊಸ ಅಕ್ಕಿಯ ಊಟ ಎಂದರೆ ದಕ್ಷಿಣ ಕನ್ನಡದ ಜನರಿಗೆ, ಕೊಡವರಿಗೆ ಒಂದು ವಿಶೇಷ ಉತ್ಸವ, ಹಬ್ಬ'[೨೧] ಪಂಜೆಮಂಗೇಶರಾಯರು ಪ್ರಕೃತಿ ಸೌಂದರ್ಯದ ಆರಾಧಕರು. ಕೊಡವ ನಾಡನ್ನು ವರ್ಣಿಸಿದ ಮೊದಲ ಕವಿ ಎಂದರೆ ಸರಿಯಾದೀತು.

'ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೊ
ಎಲ್ಲಿ ಮೋಹನಗಿರಿಯ ಬೆರಗಿನ ರೂಪಿನಿಂದಲಿ ನಿಂದೋ
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ-ಹೊಳೆ ಹೊಳೆವಳೊ
ಎಲ್ಲಿ ನೆಲವನು ತಣಿಸಿ ಜನಮನ ಹೊಲದ ಕಳೆ-ಕಳೆ ಕಳೆವಳೊ'[೨೨].

ಇದು ಪಂಜೆಯವರ ಅದ್ಭುತ ಕಲ್ಪನೆ. ಪದಗಳ ಪುನರಾವರ್ತನೆ ಕವಿತೆಯ ಸನ್ನಿವೇಶಗಳ ಸೌಂದರ್ಯಕ್ಕೆ ಮೆರುಗು ನೀಡಿವೆ. ಭೂರಮೆ ದೇವಸನ್ನಿಧಿ ಬಯಸಿ ಬಂದು, ಮೋಹನಗಿರಿ ರೂಪದಿಂದ ನಿಂತುದನ್ನು ಪಂಜೆಯವರು, 'ನೆಲವನ್ನು ತಣಿಸಿ ಜನಮನ ಹೊಲದ ಕಳೆ ಕಳೆವ, ಹೊಳೆಯುವ ಕಾವೇರಿಯನ್ನು ಕಾಣುವ ಬಗೆ ಅದ್ಭುತವಾದುದು. ಇಂಥ ಸುಂದರ ತಾಣವೇ ಕೊಡಗಿನ ನಾಡು, ಕೊಡವರ ಬೀಡು'. ಹುತ್ತರಿ ಒಂದು ಹಬ್ಬ, ಆ ಹಬ್ಬದ ಸಂಬಂಧವಿದೆ. ಈ ಹಾಡಿಗೆ ದವಸವನ್ನು ಕುಯ್ದು ತರುವ ಸುಗ್ಗಿಯ ಕಾಲ. ಗಂಡು-ಹೆಣ್ಣು ದೊಡ್ಡ ಬಯಲಲ್ಲಿ ಸೇರುತ್ತಾರೆ. ಒಟ್ಟಿಗೆ ತಮ್ಮ ಕುಲದ ವೇಷಧರಿಸಿ ಹಾಡುತ್ತಾರೆ, ಕುಣಿಯುತ್ತಾರೆ. ಗಂಡಸರು ಬಣ್ಣ-ಬಣ್ಣದ ಉಡುಪು ಜರತಾರಿಯ ರುಮಾಲು ಧರಿಸಿ ನಡುವಿಗೊಂದು ಕಠಾರಿಯನ್ನು ಸಿಕ್ಕಿಸಿಕೊಂಡು ಕುಣಿಯುತ್ತಾರೆ.

ಕೊಡಗಿನ ನಾಡವರು ಸಾಹಸಿಗರು, ಕ್ರೂರ ಪ್ರಾಣಿಗಳನ್ನು ಪಳಗಿಸಿ ಬಳಸಿಕೊಂಡವರು. ಕೊಡವರ ಹಿರಿಯರು ಹುಲಿಯ ಹಾಲನ್ನು ಸವಿದವರು. ಕವಣೆ ಕಲ್ಲಿಗೆ ಹೆಬ್ಬಾವನ್ನು ಮಣಿಸಿದವರು, ಆನೆಯ ಸೊಂಡಿಲಿಂದ ರಣ ಕಹಳೆ ಊದಿದವರು. ಕ್ಷಾತ್ರ ವೃತ್ತಿಯನ್ನು ಮೆರೆದು ಅಮರರಾಗಿದ್ದಾರೆ ಎಂದು ಪಂಜೆಯವರು ಬಣ್ಣಿಸಿದ್ದಾರೆ. ಕೊಡಗಿನ ನಾಡು ದಾನ, ಧರ್ಮ, ನೀತಿ, ಸಂಪ್ರದಾಯ, ಪರಂಪರೆಯಿಂದ ಕೂಡಿ ಸಮೃದ್ಧವಾದುದು. ಕೊಡವರು ವೈರಿಗಳನ್ನು ಹೊಡೆದು ಹುಲಿಯಂತೆ ಬೇಟೆಯಾಡುವ ಸಾಹಸ ಪ್ರವೃತ್ತಿಯುಳ್ಳವರು ಎಂದು ಕವಿ ವ್ಯಕ್ತಗೊಳಿಸುತ್ತಾರೆ. ಕಾವೇರಿ ತಾಯಿಯ

ಹರಕೆ ಕೊಡವ ನಾಡವರ ಮೇಲಿರಲಿ, ಕೊಡಗು ನಾಡು ಬಾಳಲಿ ಎನ್ನುವ ಸದಾಶಯದಿಂದ ಕವಿತೆ ಮುಕ್ತಾಯಗೊಳ್ಳುತ್ತದೆ. 'ಆ ಗೀತೆ ಒಳ್ಳೆಯ ಅಥವಾ ಶ್ರೇಷ್ಠ ಕವಿತೆ..... ಇನ್ನಾವ ಭಾಷೆಗೂ ಅದನ್ನು ಅಂತರಿಸಲಾಗುವುದಿಲ್ಲ. ಈ ಕವನ ಅನನ್ಯ ಸಾಧಾರಣವಾಗಿದೆ. ಗಮಕ ವಾಚನಕ್ಕೆ ಇದು ಎತ್ತಿದ್ದು. ಒಂದು ಪ್ರಗಾಥದ ಹಾಗೆ..... ಸ್ವರ ವ್ಯಂಜನಗಳ ರಣನ-ಅನುಕರಣನ ಶಬ್ದಕ್ಕೆ ಶಬ್ದ ಮಾರ್ದನಿ ಕೊಡುವುದು; ಅರ್ಥವನ್ನು ಮಟ್ಟದಿಂದ ಮಟ್ಟಕ್ಕೆ ಎತ್ತಿ ಹಿಡಿಯಬಲ್ಲದ್ದು'[೨೪].

ಶೋಕ ಪ್ರಧಾನವಾದ, ಕರುಣರಸ ಹರಿಸುವ, ಅಂತರಂಗ ತಳಮಳಗೊಳಿಸುವ ಭಾವಪ್ರಧಾನವಾಗಿರುವ ನೀಳ್ಗವಿತೆ 'ಅಣ್ಣನ ವಿಲಾಪ'. ಪಂಜೆಮಂಗೇಶರಾಯರ ಮಕ್ಕಳ ಕವಿತೆಗಳಲ್ಲಿ ವಿಶೇಷವಾದುದು. ತಾಯಿ-ಮಗನ ಸಂವಾದದೊಂದಿಗೆ ಕವಿತೆ ಆರಂಭಗೊಳ್ಳುತ್ತದೆ.

'ಎಲ್ಲಿ ಹೋದನು ಅಮ್ಮ ಪುಟ್ಟಣ್ಣನಮ್ಮ
ಇಲ್ಲದವನ ಹುಡುಕಿ ತರುವೆ ನಾನಮ್ಮ;
ಅಲ್ಲಿಲ್ಲ ಇಲ್ಲಿಲ್ಲ ಎಲ್ಲಿಹನು ತಮ್ಮಾ?
ತಲ್ಲಣಿಸುತಿದೆ
ಮನವು ಹೇಳು ಸೀತಮ್ಮಾ'[೨೫].

ಪಂಜೆಮಂಗೇಶರಾಯರ ತಾಯಿಯ ಹೆಸರು ಸೀತಮ್ಮ. ತಮ್ಮ ರಾಘವೇಂದ್ರನನ್ನು ಕಳೆದುಕೊಂಡು ಕವಿ ಪರಿತಪಿಸುವ ರೀತಿ ಚಿತ್ತವೇಧಕವಾದುದು. ಅವರ ತಳಮಳ, ತಲ್ಲಣಗಳು ಇಲ್ಲಿ ಅಭಿವ್ಯಕ್ತಗೊಂಡಿವೆ. ದಿನವೂ ಇರುವ ತಮ್ಮ, ಈಗ ಕಾಣದೇ ಇರುವ ತಮ್ಮನ ಬಗ್ಗೆ ಹಂಬಲದಿಂದ 'ಅಲ್ಲಿಲ್ಲ ಇಲ್ಲಿಲ್ಲ ಎಲ್ಲಿಹನು? ಎಲ್ಲಿ ಹೋದನು?' ಎಂಬ ಪ್ರಶ್ನೆಗಳನ್ನು ತಾಯಿಗೆ ಕೇಳುವನು. ವೇದನೆಯ ಭಾವ ಅಭಿವ್ಯಕ್ತಗೊಳಿಸುವ ಕ್ರಮ ಪರಿಣಾಮಕಾರಿಯಾಗಿ ಮೂಡಿದೆ.

ಅಣ್ಣ-ತಮ್ಮರು ಒಬ್ಬರಿಗೊಬ್ಬರು ಬಿಟ್ಟು ಅಗಲದ ಅನ್ಯೋನ್ಯ ಜೀವಿಗಳು, ಜಾತ್ರೆಯ ಸಂದರ್ಭದಲ್ಲಿ ವ್ಯಕ್ತವಾದ ಭಾವ ಮನಕಲಕುವಂತಹದು. ಅಣ್ಣ ತಮ್ಮರು ಜಾತ್ರೆಗೆ ಹೋಗಿ ಸಂಭ್ರಮಪಡುತ್ತಿದ್ದರು. ಆಗ ಈಗ ಗೆಳೆಯರು ಕೇಳಿದರೆ ತಮ್ಮನೆಲ್ಲಿ ಎಂದು ತಾಯಿಯನ್ನು ಮತ್ತೆ ಪ್ರಶ್ನಿಸುವುದು. ದೇಹವೆರಡು ಪ್ರಾಣ ಒಂದು ಎನ್ನುವಂತೆ ಅವರಿಬ್ಬರಿದ್ದರು. ಆಟ-ಪಾಟಗಳಲ್ಲಿ ಊಟ-ತಿಂಡಿಯಲ್ಲಿ ಇಬ್ಬರೂ ಕೂಡಿಯೇ ಇರುತ್ತಿದ್ದರು. ನನಗೊಬ್ಬನಿಗೆ ಊಟ ಬೇಡ, ಆಟ ಆಡಲಾರೆ ಎಂದು ಹಟಮಾಡಿ ದುಃಖಿಸುವ ಅಣ್ಣನ ವಿಲಾಪ ತಮ್ಮನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತದೆ. ಈ ಮಾತುಗಳನ್ನು ಕೇಳುತ್ತ ತಾಯಿ ದುಃಖ ಉಮ್ಮಳಿಸಿ ಬರುತ್ತದೆ. ಮಗನನ್ನು ತಬ್ಬಿ ಕಣ್ಣೀರು ಸುರಿಸಿ ಮನ ಹಗುರ ಮಾಡಿಕೊಳ್ಳುತ್ತಾಳೆ. ಅಣ್ಣನೇ ಆಗ ಅಳದಿರು, ಪುಟ್ಟನೆಲ್ಲಿ? ಎಂದು ಮತ್ತೆ ಪ್ರಶ್ನಿಸುತ್ತಾನೆ. ಪಂಜೆಯವರ ಈ ಅನುಭವದ ನುಡಿಗಳು ಸಹೃದಯರನ್ನು ಕಣ್ಣೀರಿನಲ್ಲಿ ಮುಳುಗಿಸುತ್ತವೆ.

ಮುಗ್ಧ ಮನದ ಮಗುವಿನ ಪ್ರಶ್ನೆಗೆ ತಾಯಿ ಏನು ಉತ್ತರಿಸಲು ಸಾಧ್ಯ. ತಮ್ಮ ಎತ್ತ ಹೋದನೆಂದು ನಾನು ತಿಳಿಯೆ; ಕೊಟ್ಟವನು ದೇವರು. ಆತನೇ ಎತ್ತಿಕೊಂಡ. ತನ್ನ ಬಳಿ ಕರೆದುಕೊಂಡ, ಮುದ್ದಿನ ಮುಖದ ಮಗು ನಮ್ಮನ್ನಗಲಿ ಬಹುದೂರ ಹೋಗಿದ್ದಾನೆ. ಅವನು ಇನ್ನು ಇಲ್ಲಿ ಬರಲಾರ. ಯಾಕೆಂದರೆ –

‘ಜಗದಂಬೆ ತೊಡೆಯಲ್ಲಿ ಲಾಲಿ ಕೇಳುತ್ತ
ಸೊಗನಿದ್ದೆ ಗೊಂಡವನು ಬರುವನೇ ಇತ್ತ’[೨೧].

ಎನ್ನುವ ಮಾತು ಸೊಗಸಾಗಿ ಮೂಡಿಬಂದಿದೆ. ಪಂಜೆಮಂಗೇಶರಾಯರು ಬಳಸುವ ಪದಗಳು ಧ್ವನಿ, ಧ್ವನಿ ಪ್ರತಿಮೆಗಳಾಗಿ ವ್ಯಕ್ತಗೊಂಡು ಕವಿತೆಗೆ ಮೆರುಗನ್ನು ನೀಡಿವೆ. ‘ಸಾವು’ ಪದ ಎಲ್ಲಿಯೂ ಬಳಕೆಯಾಗದಿದ್ದರೂ ಅದರ ಅರ್ಥ ಅಭಿವ್ಯಕ್ತಗೊಳ್ಳುತ್ತದೆ. ಮಕ್ಕಳಿಗೆ ತಾಯಿಯ ಮಡಿಲು ಬಲು ಪ್ರೀತಿ. ತಾಯಿ ಮಡಿಲಲ್ಲಿ ಮಗುವನ್ನು ಮಲಗಿಸಿ ಜೋಗುಳ ಹಾಡುತ್ತಿದ್ದರೆ ಕೇಳುತ್ತ ಮಗು ನಿದ್ರೆಗೆ ಜಾರುತ್ತದೆ. ತಾಯಿಯ ತೊಡೆಯ ಮೇಲೆ ಇರುವವರೆಗೆ ಮಗುವಿಗೆ ನಿದ್ರಾಭಂಗವಾಗುವುದಿಲ್ಲ. ತೊಡೆಯ ಮೇಲಿಂದ ಬೇರೆಡೆ ಮಲಗಿಸಿದರೆ ಮಗು ಎಚ್ಚರಗೊಳ್ಳುತ್ತದೆ. ಇಲ್ಲಿಯ ಮಗುವಿಗೆ ಬೇರೆಡೆ ಮಲಗಿಸುವ ಸಾಧ್ಯತೆಯಿಲ್ಲ. ಯಾಕೆಂದರೆ ಅದು ಮಲಗಿರುವುದು ಭೂತಾಯಿ, ಜಗದಾಂಬೆಯ ಮಡಿಲಲ್ಲಿ, ಶಾಶ್ವತವಾದ ನಿದ್ರೆಯಲ್ಲಿ ಮಲಗಿದೆಯೆಂದು ಕವಿ ಪಂಜೆಮಂಗೇಶರಾಯರು ತಾತ್ವಿಕ ನೆಲೆಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಕರುಣರಸ ಪ್ರಧಾನವಾದ ಕವಿತೆ ಇದಾಗಿದ್ದು, ನೀಳ್ಗವಿತೆಗೆ ಉದಾಹರಣೆಯಾಗಿದೆ. ‘ಅಣ್ಣನ ವಿಲಾಪ’ ಕೇವಲ ಮರಣ ಹೊಂದಿದ ಸಹೋದರನ ನೆನಪಿನ ಕನವರಿಕೆಯಲ್ಲ. ಸಾವಿನಾಚೆಯ ಸ್ಥಿತಿಯನ್ನು ಚಿತ್ರಿಸುತ್ತದೆ. ಅಣ್ಣನು ತಮ್ಮನೊಡನೆ ಕಳೆದ ಮಧುರ ಸಂಬಂಧಗಳ ಮೆಲುಕು ನೋಟ, ತಾಯಿ–ಮಗನ ವಾತ್ಸಲ್ಯದ ಸಂವಾದ ಮರಣವನ್ನು ಮೀರಿದ ಸ್ಥಿತಿಯೆಡೆಗೆ ಒಯ್ದು ಸಹೃದಯರನ್ನು ಮನಕರಗುವಂತೆ ಮಾಡಿದೆ. ‘ತಮಗೆ ಅತ್ಯಂತ ಪ್ರಿಯವಾದ ವ್ಯಕ್ತಿ ತೀರಿಕೊಂಡಾಗ ಅವನನ್ನು ಕುರಿತು ಬರೆಯುವ ಕವನವನ್ನು ಎಲಜಿ ಅಥವಾ ಶೋಕಗೀತೆ ಎಂದು ನಾವು ಕರೆಯಬಹುದು’[೨೨] ಎಂದು ಹೇಳುತ್ತಾರೆ.

ಪಂಜೇಮಂಗೇಶರಾಯರು ಕೆಲವು ಇಂಗ್ಲೀಷ ಗೀತೆಗಳನ್ನು ಅನುವಾದ ಮಾಡಿರುವ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿಗೆ. ಅಂಥ ಕವಿತೆಗಳಲ್ಲಿ ಇದು ಒಂದೆನ್ನಬಹುದು. ‘ಅಣ್ಣನ ವಿಲಾಪ ಮೂಲತಃ ಪಂಜೆಯವರದ್ದೇ ಆಗಿದೆ. ಅದು ಯಾವುದೇ ಆಂಗ್ಲ ಕವನದ ಸ್ಫೂರ್ತಿಯಿಂದ ಬರೆದ ಕವನವಲ್ಲ, ಭಾಷಾಂತರವೂ ಅಲ್ಲ, ರೂಪಾಂತರವೂ ಅಲ್ಲ. ಅವರ ಅನುಭವದಲ್ಲಿ ಬಂದ ಘಟನೆ ಕವನವಾಗಿ ರೂಪುಗೊಂಡಿದೆ; ಎಂಬುದನ್ನು ಸ್ವತಃ ಪಂಜೆಯವರ ಮಗ ಪಂಜೆರಾಮರಾವ ತಿಳಿಸಿದ್ದಾರೆ. ಎಲ್ಲಿ ಹೋದನು ಅಮ್ಮ ಎಂಬ ದುರಂತ ಶೋಕಪೂರಿತ ಹಾಡದು. ಅದರಲ್ಲಿ ಕಾಣುವ ವಾತ್ಸಲ್ಯ ಮಮತೆಗಳ ಚಿಲುಮೆ, ಅನುತಾಪ, ವ್ಯಥೆಗಳು ಈ ಘಟನೆಯಿಂದ ಕೆರಳಿದುವೇ ಎಂದು ನಾವಾಗಿ

ಅವರನ್ನು ಕೇಳಿದವರಲ್ಲ. ಆ ಹಾಡಿನಲ್ಲಿರುವ ಆವರಣ, ವ್ಯಥೆಯ ತೀವ್ರತೆ, ಹಿನ್ನೆಲೆಯ ಚೆಲುವು, ಹಿಂದಣ ದಿನದ ಭೀಕರ ಗಂಭೀರ ಚಿತ್ರ ಸ್ವತಂತ್ರವಾದುದು. ಒಮ್ಮೆ ನಾವೇ ಯಾರೋ ಹೇಮನ್ಸನ ಆ ಇಂಗ್ಲೀಷ ಹಾಡನ್ನು ಓದಿ ತಂದೆಯ ಬಳಿಗೋಡಿ ಈ ಹಾಡನ್ನು ನೀನು ಅನುವಾದಿಸಿದ್ದೇ? ಎಂದು ಕೇಳಿದ್ದೇವು. ಆಗ ತಂದೆ ಮೆಲುವಾಗಿ ನಕ್ಕರು. ಅನಂತರ ಎಂಥ ಮಾತಿದು, ಎಂದರು.... ಅನಂತರ ಎಷ್ಟೋ ಕಾಲದ ಬಳಿಕ..... ಈ ಕವನದ ವಿಚಾರದಲ್ಲಿ ಕೆಲವರು ಕೇಳಿದರಂತೆ, ಆಗ ಅವರು ಆ ಕವನಕ್ಕೆ ಮೂಲ, ತಮ್ಮ ಪ್ರೀತಿಯ ತಮ್ಮನ ಅಗಲಿಕೆಯೆಂಬುದನ್ನು ತಿಳಿಸಿದರಂತೆ'[೨೮].

ಸತ್ಯ ಸೀಮೆಗೆ ತಾಯಿ ನಡೆಸೆನ್ನ. ದೇಶಭಕ್ತಿಯನ್ನು ಮೂಡಿಸುವ ಭಾವನೆಗಳನ್ನು ಈ ಕವಿತೆ ವ್ಯಕ್ತಪಡಿಸುತ್ತದೆ. ಭಾರತಾಂಬೆಯ ಸೊಬಗನ್ನು, ಸಮೃದ್ಧತೆಯನ್ನು ವರ್ಣಿಸುವ ಸುಂದರ ಕವನ. ಪಂಜೆಯವರು ಮೂಡಿಸುವ ಪದಗಳ ಚಿತ್ರಣಕ್ಕೆ ವಿವರಣೆ ಅವಶ್ಯಕತೆಯಿಲ್ಲ ಎನಿಸುತ್ತದೆ. ಭಾರತಮಾತೆಯ ಸೌಂದರ್ಯ ಕವಿಯ ಕಲ್ಪನೆಯಲ್ಲಿ ಅರಳಿದ್ದು ವಿಶೇಷ. ಮಳೆ ಹನಿಯ ಹೂವು, ಮರಗಳ ಹಸಿರು, ಬಿಳಿ ನೊರೆಯಲಿ ಮಿರುಗುವ ಸೀರೆಯುಟ್ಟ, ಹೊಳೆಗಳೇ ಕುತ್ತಿಗೆಯಲ್ಲಿ ಸರವಾಗಿ, ಹಿಮಗಿರಿಯ ಮುಕುಟ ಥಳಥಳ ಹೊಳೆಯುವ 'ರಮಣಿಯೇ ಭರತ ಭೂಮಣಿಯೇ' ಎಂಬುದು ಪಂಜೆಮಂಗೇಶರಾಯರ ಕಲ್ಪನಾತೀತ ವರ್ಣನೆ ಮನಸೂರೆಗೊಂಡಿದೆ. ನೋವನ್ನು ಅನುಭವಿಸಿ, ಹಿಂಸೆಗೊಳಗಾಗಿ ನಲುಗುವ ಭಾರತ ಮಾತೆಯ ಸೇವೆ ಮಾಡಿ, ಗುಲಾಮಗಿರಿಯಿಂದ ಬಿಡುಗಡೆಗೊಳಿಸುವ, ತಾಯಿಯ ಮನೋಗತವನ್ನು ಪೂರೈಸುವ, ಸುಖದ-ಸಂತಸ ನೀಡುವ ಮಗ ನಿಜವಾಗಿಯೂ ಭಾಗ್ಯವಂತ, ಅಂಥಹ ಪುತ್ರನಿಗೆ ಅಭಿನಂದಿಸುವ ಕವಿ ಭಾವರಸವನ್ನು ಹರಿಸಿದ್ದಾರೆ. ವರ್ಣ-ವರ್ಗ ಸಂಘರ್ಷ ಆ ಸಮಯದಲ್ಲಿ ಹೇಗೆ ಪ್ರಭಾವಿಸಿದ್ದವು ಎನ್ನುವುದಕ್ಕೆ; 'ಆತ್ಮೋನ್ನತಿಯ ಹಾದಿಗೆ ಕಲ್ಲುಮುಳ್ಳನಿಡರೆ' ಎಂಬ ನುಡಿಗಳು ಜನರ ಮಾತ್ಸರ್ಯ ಮನೋಭಾವ, ಉನ್ನತಿಗೆ ಹೇಗೆ ಮಾರಕವಾಗಿವೆ ಎಂಬುದಕ್ಕೆ ಸಾಕ್ಷಿಯಾಗಿವೆ. ಮಾತ್ಸರ್ಯವಿಲ್ಲದ, ನೆಮ್ಮದಿಯ ನೆಲೆಬೀಡಾದ ಸತ್ಯಸೀಮೆಗೆ ತನ್ನನ್ನು ಕರೆದೊಯ್ಯಲು ಬೇಡಿಕೊಳ್ಳುವ, ಭಾವೈಕ್ಯತೆಯಿಂದ ಕೂಡಿದ ವಿಶಾಲ, ಉದಾತ್ತ ಭಾವನೆಗಳನ್ನು ಅಭಿವ್ಯಕ್ತಗೊಳಿಸುವುದು ಪಂಜೆಯವರ ಮೂಲ ಉದ್ದೇಶವಾಗಿದೆ ಎನ್ನಬಹುದು. ಒಟ್ಟಿನಲ್ಲಿ ದೇಶಪ್ರೇಮವನ್ನು ಜಾಗ್ರತಗೊಳಿಸುವ ಮನೋಧರ್ಮ ಇಲ್ಲಿ ವ್ಯಕ್ತವಾಗುತ್ತದೆ.

ಡೊಂಬರ ಚೆನ್ನೆ ಕಥನ ಕವನ :

ಇತಿಹಾಸ ಪ್ರಸಿದ್ಧವಾದ ಘಟನೆಯನ್ನು ಪಂಜೆಮಂಗೇಶರಾಯರು 'ಡೊಂಬರ ಚೆನ್ನೆ' ಕಥನ ಕವನದ ಮೂಲಕ ಚಿತ್ರಿಸಿದ್ದಾರೆ. 'ನಂದಾವರದ ಬಂಗ ರಾಜ್ಯದಲ್ಲಿ ನಡೆದ ವೃತ್ತಾಂತವಿದು. ಬಂಗಾರ ಸಂತತಿಗೆ ಡೊಂಬ ಹೆಗ್ಗಡೆ ಹೆಸರು ಬರಲು ಕಾರಣವಾದ ಕಥೆ'[೨೯]. ಕಥೆಯು ನಾಟಕೀಯ ಸನ್ನಿವೇಶದಿಂದ ಪ್ರಾರಂಭಗೊಳ್ಳುತ್ತದೆ. ಬಂಗರಸ ಗಾಂಭಿರ್ಯ ಠೀವಿಯಿಂದ ಡೊಂಬರಾಟ ನೋಡಲು ಕುಳಿತಿದ್ದಾನೆ. ಅವನಿಗೆ

ಡೊಂಬರಾಟದಲಿ ಕುತೂಹಲ,ಆಸಕ್ತಿ. 'ಬೆರಗು ಕಣ್ಣಿನ ಬೆರಳ ಮೀಸೆಯ ಬೆರೆಸಿದಾ ನಗು ಮೋರೆಯೂ ಅರಸನಿದ್ದನು. ಡೊಂಬರಾಟಕೆ ಸೆರೆಯ ಸಿಕ್ಕಿದ ಮನದಲಿ' ಎಂದು ಕವಿ ರಾಜನನ್ನು ಕುರಿತು ಉದ್ಗಾರವೆತ್ತುವರು. ಡೊಂಬರ ಆಟಕ್ಕೆ ಜನ ಮಂತ್ರಮುಗ್ಧರಾಗಿದ್ದಾರೆ. ಬಿದಿರೊಂದು ತಂದು ಹತ್ತಿರದ ನೆಲದಲ್ಲಿ ಹೂಡಿ 'ಮದುವೆ ಮಗಳ' ಕರೆಯುತ್ತಾನೆ. ಮುದುಕ ಡೊಂಬ, ಪಂಜೆಮಂಗೇಶರಾಯರು 'ಮದುವೆ ಮಗಳು' ಎಂಬ ಪದವನ್ನು ಔಚಿತ್ಯವಾಗಿ ಬಳಸಿರುವುದು ಎನಿಸುತ್ತದೆ. ಅವಳು ಮದುವೆ ವಯಸ್ಸಿಗೆ ಬಂದ ಹರೆಯದ ಹೆಣ್ಣು. ಭವಿಷ್ಯದಲ್ಲಿ ನಡೆಯಲಿರುವ ಮದುವೆಗೆ ಸಿದ್ಧಗೊಂಡಿರುವಂತೆ ಕಂಡುಬರುತ್ತದೆ.

> **'ಹೆಣ್ಣು ಬಂದಳು ಹಣ್ಣು ಬಿಡದ ಸಣ್ಣ ಬಳ್ಳಿಯ ಬೆಡಗಿನಾ**
> **ಮಣ್ಣೊಳಾಡುವ ಬೆಣ್ಣೆಯಂತಿಹ ಕಣ್ಣು ಕಟ್ಟಿನ ಸೊಬಗಿನಾ'**[೩೦].

ಕನ್ನೆ ಎಂಬುದನ್ನು ಸೂಚಿಸುವ 'ಹಣ್ಣು ಬಿಡದ ಸಣ್ಣ ಬಳ್ಳಿಯಂತಹ ಹೆಣ್ಣು' ಎಂಬುದು ಧ್ವನಿಪೂರ್ಣವಾದ ಹೋಲಿಕೆಯಾಗಿದೆ. ಸಣ್ಣ ಬಳ್ಳಿಯ ಬೆಡಗು ಎಷ್ಟು ಮೋಹಕವೋ ಹಾಗೆಯೇ ಆ ಬೆಡಗಿಯ ಮೋಹಕತೆ ತುಂಬಿದ ಸೊಬಗು ಅದ್ಭುತವಾಗಿ ಮೂಡಿಬಂದಿದೆ. ಅವಳ ಚಮತ್ಕಾರದ, ರೋಮಾಂಚನಕಾರಿ ಆಟದ ಶೈಲಿಯನ್ನು ಕಂಡು ಕವಿ, ಮೈಯಲ್ಲಿ ಮೂಳೆಯೇ ಇಲ್ಲದಂತೆ ಬಾಗುವ ಬಳಕುವ, ಕುಣಿತ–ಮಣಿತಗಳು ಪ್ರೇಕ್ಷಕರ ಕಣ್ಣುಗಳು ಮುಚ್ಚದಂತೆ ಮಾಡಿದ್ದವು ಎನ್ನುತ್ತಾರೆ. ಅವಳ ಕೇಶರಾಶಿಗೆ 'ಮುಗಿಲ ಕೂದಲ ಬಲೆ' ಎಂಬುದಕ್ಕೆ ಎಷ್ಟು ದಟ್ಟವಾಗಿ, ನೀಳವಾಗಿ ಕೇಶರಾಶಿ ಕಂಡು ಬರುತ್ತಿತ್ತು ಎನ್ನುವುದು ವ್ಯಕ್ತವಾಗುತ್ತದೆ. ಇಂಥ ಕೂದಲ ಬಲೆಯಲ್ಲಿ ಅರಸನ ಮೃಗವೆಂಬ ಕಣ್ಣು ಸಿಕ್ಕಿ ಹಾಕಿಕೊಂಡಿತು. ಆಗ ಅರಸ ಅವಳನ್ನು;

> **'ಇದ್ದು ನೋಡಿದ, ಎದ್ದು ನೋಡಿದ, ಕದ್ದು ನೋಡಿದ ಹುಡಿಗಿಯಾ**
> **ಮುದ್ದು ಗಿಳಿಯಲಿ ಅರಸಿನಾ ಮನ ಹದ್ದು ಹಾರಿತು ಬೇಗನೆ'**[೩೧].

ಎಂಬ ಅರಸನ ಆಶೆಗೆ ಬಲಿಯಾದ ಚೆನ್ನೆ ಅರಸಿಯಾಗುವ ಪ್ರಸಂಗ ಸುಂದರವಾಗಿ ಮೂಡಿದೆ. ದುರಂತದಲ್ಲಿ ಕೊನೆಗೊಳ್ಳುವಂತೆ ಕಂಡ ಘಟನೆ ನಾಟಕೀಯವಾಗಿ ಹೊಸತಿರುವನ್ನು ಪಡೆದು ಸುಖಾಂತ್ಯದಲ್ಲಿ ಕೊನೆಗೊಳ್ಳುತ್ತದೆ. ಕುತೂಹಲ ಕೆರಳಿಸುವ ಸನ್ನಿವೇಶಗಳು, ಕಥೆಯ ಸಹಜ ತಿರುವುಗಳು, ಹಿಂದಿನ ನೆನಪುಗಳು, ದುರಂತದ ಘಟನೆ, ಇವೆಲ್ಲವುಗಳಿಗೆ ತಕ್ಕ ಹಾಗೆ ಸಂಭಾಷಣೆ ಇದ್ದು ಹಿರಿಯರ–ಕಿರಿಯರ ಮನಗಳಲ್ಲಿ ತುಂಬಿಕೊಂಡಿದೆ. 'ಕನ್ನಡದಲ್ಲಿ ಡೊಂಬರ ಚೆನ್ನಿಯ ಕಥೆ' ಬಹಳ ಹಳೆಯದಾಗಿರಬೇಕೆಂದು ತೋರುತ್ತದೆ. ಕ್ರಿ.ಶ. ಸುಮಾರು ೧೮ನೆಯ ಶತಮಾನದಿಂದೀಚೆಗೆ ರಚಿತವಾಗಿರಬಹುದಾದ ಮಹಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ'ದಲ್ಲಿ ಈ ಕಥೆ ಪ್ರಾಸಂಗಿಕವಾಗಿ ಕಂಡು ಬರುತ್ತದೆ. (ಕುಮಾರರಾಮನ ಸಾಂಗತ್ಯಗಳು – ೧೯೬೬, ಪು. ೧೭೭. ಡಾ. ಜಿ. ವರದರಾಜರಾವ್), ಜನಪದ ಸಾಹಿತ್ಯದಲ್ಲಿಯೂ ಈ ಕಥೆ ಸುಪ್ರಸಿದ್ಧವಾಗಿದೆ. (ಜನಪದ ಗೀತೆ : ಭಾಗ–೧, ಪು.೫೩–೫೮. ಸಂ. ಎಸ್. ಕೆ. ಕರೀಮ್‌ಖಾನ್). ಆದರೆ ಪ್ರಕೃತ ಕಥೆ ಕೆಲವು ಅಂಶಗಳಲ್ಲಿ ಅದಕ್ಕಿಂತ ಭಿನ್ನವಾಗಿದೆ.

ಪೂರ್ವೋಕ್ತ ಕಥೆಯಲ್ಲಿ ಸನ್ಯಾಸಿಯೊಬ್ಬನು ಡೊಂಬರ ಚೆನ್ನೆಯ ಚೆಲುವಿಗೆ ಮಾರುಹೋಗಿ ವ್ರತಭ್ರಷ್ಟನಾದುದೇ ಪ್ರಮುಖ ವಸ್ತು. ಆದರೆ ಪಂಜೆಮಂಗೇಶರಾಯರು ನಿರೂಪಿಸಿರುವ ಈ ಕಥನ ಗೀತೆಯಲ್ಲಿ ಡೊಂಬರ ಚೆನ್ನೆ ಎಂಬಾಕೆ ಜನ್ಮತಃ ಉಚ್ಚ ಕುಲದವಳಾಗಿದ್ದು ತನ್ನ ತಾಯಿಯ ವರ್ತನೆಯಿಂದ ಡೊಂಬರನ ಸಾಕುಮಗಳಾಗಿದ್ದು ರಾಜನ ಕೈ ಹಿಡಿದು ಅರಸಿಯಾಗುತ್ತಾಳೆ'[೩೨].

ನಾಗಣ್ಣನ ಕನ್ನಡಕ :

ಸಾಕ್ಷರತೆ ಪ್ರತಿ ಹಳ್ಳಿಯಲ್ಲಿಯೂ ಬೆಳೆಯಬೇಕೆಂಬುದು ಪಂಜೆಯವರ ಆಶಯ. 'ನಾಗಣ್ಣನ ಕನ್ನಡಕ' ಕಥೆಯಲ್ಲಿ ಹಾಸ್ಯದೊಂದಿಗೆ ವ್ಯಕ್ತಗೊಂಡಿದೆ. ಇಂಗ್ಲೀಷ ಭಾಷೆಯ ಪ್ರಭಾವ ಮತ್ತು ವ್ಯಾಮೋಹ ಕನ್ನಡಿಗರನ್ನು ಆವರಿಸಿದಾಗ, ಅವರಲ್ಲಿ ಕನ್ನಡಾಭಿಮಾನ ಮೂಡಿಸುವುದು ಕಥೆಯ ಉದ್ದೇಶ. ಹಳ್ಳಿಯ ಅನಕ್ಷರಸ್ಥರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಮನಸ್ಸು ಮಾಡಬೇಕೆಂಬುದು ಪಂಜೆಮಂಗೇಶರಾಯರ ಅಭಿಪ್ರಾಯವಾಗಿದೆ.

ಶಾಮ ಕನ್ನಡಕ ವ್ಯಾಪಾರಿ ಮಕ್ಕಳಿಂದ ಹಿಡಿದು ಮುದುಕರವರೆಗೂ ತನ್ನ ವ್ಯಾಪಾರಕ್ಕಾಗಿ ಕರೆಯುವನು. ಶಾಮ ಗಿರಾಕಿಗಳನ್ನು ಕೂಗಿ ಕರೆಯುವ ರೀತಿ 'ಓಡಿ ಬನ್ನಿರಿ; ಕೂಡಿ ಬನ್ನಿರಿ; ಗೆಳೆಯರೆ, ನೋಡಿ ನಮ್ಮಯ ಕನ್ನಡಕಗಳು; ಹಾಡಿ ಹೊಗಳಿರಿ ಗೆಳೆಯರೆ; ಬಲು ಮಧುರವಾದುದು'. ಊರುಗನ್ನಡಿ, ಉರುಟುಗನ್ನಡಿ, ದೂರನೋಟದ ಕನ್ನಡಿ, ಓರೆ ಕಣ್ಣಿನ ಕನ್ನಡಿ, ಹೊಸ ಹರಳಿನ ಕನ್ನಡಿ, ತಿಳಿಯ ಕನ್ನಡಿ ಹೀಗೆ ಬೇರೆ-ಬೇರೆ ಪ್ರಕಾರದ ಕನ್ನಡಕಗಳು ಶಾಮನ ಅಂಗಡಿಯ ವೈಶಿಷ್ಟ್ಯ.

'ಹಣ್ಣು ಮುದುಕಗೆ ಚಿಣ್ಣ ಮಕ್ಕಳ ಕಣ್ಣು ಕೊಡುವಾ ಕನ್ನಡಿ
ಬಣ್ಣ ಬಣ್ಣದ ಕನ್ನಡಕಗಳು ಬೆಣ್ಣೆಯಂದದಿ ತಣ್ಣಗೆ'[೩೩].

ಚಿಕ್ಕ ಮಕ್ಕಳ ಕಣ್ಣಿನ ದೃಷ್ಟಿ ತೀಕ್ಷ್ಣವಾದುದು. ಮಂದ ದೃಷ್ಟಿಯ ಮುದುಕರಿಗೆ ಸೂಕ್ಷ್ಮ ದೃಷ್ಟಿ ನೀಡುವ ಕನ್ನಡಕಗಳು ಶಾಮನ ಅಂಗಡಿಯಲ್ಲಿವೆ. ಇದನ್ನು ತಿಳಿದ ನಾಗಣ್ಣ ಸುಳ್ಳು ಕನ್ನಡಿ ಬೇಡ, ಒಳ್ಳೆಯ ಕನ್ನಡಿ ಬೇಕು ಎಂದು ಕೇಳುತ್ತಾನೆ. ವಿವಿಧ ರೀತಿಯ ಕನ್ನಡಕಗಳನ್ನು ನೋಡಿದರೂ ನಾಗಣ್ಣನಿಗೆ ಯಾವುದು ಸರಿಯಾಗಿ ತೋರುವುದಿಲ್ಲ. ವ್ಯಾಪಾರಿ ಮನೋಭಾವವನ್ನು ಕರಗತಮಾಡಿಕೊಂಡಿರುವ ಶಾಮನು ಸಹನೆ ಕಳೆದುಕೊಳ್ಳುವುದಿಲ್ಲ. ಸಮಾಧಾನದಿಂದ 'ಗುಡ್ಡ ಕುಂಬಳ'ದಂತೆ ಬರೆದ ದೊಡ್ಡ ಅಕ್ಷರ ಪತ್ರವನ್ನು ತೋರಿಸುತ್ತಾನೆ. ನಾಗಣ್ಣನ ಬಯಕೆಯೇ ಬೇರೆಯಾದುದು. ಆಗ ಕನ್ನಡ, ತೆಲುಗು, ಇಂಗ್ಲೀಷ ಭಾಷೆ ಕಲಿಯುವ ಕನ್ನಡಕ ಬೇಕೆಂದು ತನ್ನಾಶೆಯನ್ನು ವ್ಯಕ್ತಪಡಿಸುತ್ತಾನೆ. ಆಗ ಶಾಮನು ಹೇಳುವ ಮಾತಿನಲ್ಲಿ ಹಳ್ಳಿಯ ಜನರು ಸಾಕ್ಷರರಾಗುವ ಮನೋಭಾವ ವ್ಯಕ್ತವಾಗುತ್ತದೆ.

'ಬರಹ ಕಲಿಸುವ ಹರಳು ಕನ್ನಡಕ ನಮ್ಮಲ್ಲಿಲ್ಲ ಸ್ವಾಮಿ; ಹಳ್ಳಿಯ ಸಾಲೆಗೆ ತೆರಳಿ', ಎನ್ನುವನು – ಶಾಮ. ಮತ್ತೆ ನಾಗಣ್ಣ 'ಸಾಲೆಯೊಳ್ ಚಂದ ಕನ್ನಡಿ ಯಾವುದು? ಎಂದಾಗ, 'ಅಲ್ಲಿ ಕನ್ನಡಿ ದೊರಕುವುದಿಲ್ಲವು; ಅಲ್ಲಿ ಕನ್ನಡ ದೊರೆಯುವುದು, ಮೆಲ್ಲನಿದ ನೀವ್ ಕಲಿತುಕೊಂಡರೆ ಎಲ್ಲ ತಾನೆ ಕಾಂಬದು'[೩೪]. ಪಂಜೆಮಂಗೇಶರಾಯರು ತಮಗಿರುವ 'ಕನ್ನಡ ಅಭಿಮಾನ' ಶ್ಯಾಮನ ಮೂಲಕ ಅಭಿವ್ಯಕ್ತಗೊಳಿಸುತ್ತಾರೆ. ಕನ್ನಡ ಕಲಿತರೆ ಎಲ್ಲವೂ ಕಾಣುವುದು. ಕನ್ನಡ ಕಲಿಯದವ ಕುರುಡ ಎಂದು ಪರೋಕ್ಷವಾಗಿ ತಿಳಿಯಪಡಿಸುವರು. ಮಕ್ಕಳಿಗೆ ಅಷ್ಟೇ ಅಲ್ಲ ಹಿರಿಯರಿಗೂ ದೃಷ್ಟಿ ಬರುವುದು ಕನ್ನಡ ಕಲಿತರೆ ಎನ್ನುವ ನುಡಿಗಳಲ್ಲಿ ವಯಸ್ಕರ ಶಿಕ್ಷಣಕ್ಕೂ ಮಹತ್ವ ನೀಡುವರು. ಶ್ಯಾಮನ ಮಾತನ್ನು ಅರಿತ ಮುದಕ ನಾಗಣ್ಣ ಹೇಳುತ್ತಾನೆ; ತಾನು ಕಲಿಯುವ ಕಾಲ ಮೀರಿದೆ. ನನ್ನ ಮಕ್ಕಳಾದರೂ ಕಲಿಯಲಿ ಎಂಬ ಆಶಯ ವ್ಯಕ್ತಪಡಿಸುವನು. ಅದೇ ರೀತಿಯಾಗಿ ಪಂಜೆಮಂಗೇಶರಾಯರು ಕಬ್ಬಿಣದ ಬುದ್ಧಿವಾದ, ಕಡೆಕಂಜಿ, ರಂಗಸೆಟ್ಟಿ ಮೊದಲಾದ ಕಥನ ಕವನಗಳನ್ನು ಕನ್ನಡ ಮಕ್ಕಳಿಗೆ ನೀಡಿದ್ದಾರೆ.

ಪಂಜೆಮಂಗೇಶರಾಯರ ಮಕ್ಕಳ ಕಥಾ ಸಾಹಿತ್ಯ :

ನಮ್ಮ ದೇಶದಲ್ಲಿ ಮಕ್ಕಳ ಸಾಹಿತ್ಯ ಪರಂಪರೆ ಬಹು ಪ್ರಾಚೀನವಾದುದು. ಇದು ವಿಷ್ಣುಶರ್ಮನ ಪಂಚತಂತ್ರದಿಂದ ಪ್ರಾರಂಭವಾಯಿತೆಂದು ಕಂಡುಬರುತ್ತದೆ. ರಾಜಕುಮಾರರಿಗೆ ಕಥೆಗಳ ಮೂಲಕ ರಾಜನೀತಿಯನ್ನು ತಿಳಿಸುವ ಗ್ರಂಥವಾಗಿದೆ ಎನ್ನಬಹುದು. ಇಲ್ಲಿ ಪ್ರಾಣಿ–ಪಕ್ಷಿಗಳ ಮೂಲಕ ಮನುಷ್ಯನ ನಡೆವಳಿಕೆಯ ಅನುಕರಣೆ ಮಕ್ಕಳ ಮನಸ್ಸನ್ನು ಕಲ್ಪನಾ ಲೋಕಕ್ಕೆ ಒಯ್ಯುತ್ತದೆ. ಮಕ್ಕಳಿಗೆ ಕಥೆ ಎಂದರೆ ಬಲು ಪ್ರೀತಿ. ಮೊದಲು ಅವರ ಸುತ್ತಲಿನ ವಸ್ತುಗಳ, ಪರಿಸರದ ಚಿತ್ರಗಳಿಂದ ಕಥೆ ಕಟ್ಟಬೇಕಾಗುತ್ತದೆ. ಹೀಗಾಗಿ ಮಕ್ಕಳಿಗೆ ಮೊದಲು ಪರಿಚಯವಾಗುವ ಜಗತ್ತು ಹುಟ್ಟಿದ ಮನೆ, ಮನೆಯ ಮಂದಿ, ನೆರೆಹೊರೆ, ನಿಸರ್ಗದಲ್ಲಿಯ ಪಕ್ಷಿ–ಪ್ರಾಣಿಗಳು, ಸಸ್ಯಲೋಕ ಮೊದಲಾದವುಗಳ ಬಗ್ಗೆ ಕುತೂಹಲ ಮೂಡುವುದು ಸಹಜ. ಇಂಥವುಗಳಿಂದ ಕೂಡಿರುವ ಕಥೆಗಳು, ಕವಿತೆಗಳು, ನಾಟಕಗಳು ಮಕ್ಕಳಿಗೆ ಅಚ್ಚುಮೆಚ್ಚು. ಅಡಗೂಲಜ್ಜಿಯ ಕಥೆಗಳು, ಅಜ್ಜಿಯ ಕಥೆಗಳು, ಕಟ್ಟುಕಥೆಗಳು, ರೋಮಾಂಚನಕಾರಿ ಕಥೆಗಳೆಂದರೆ ಮಕ್ಕಳಿಗೆ ಬಲು ಆಶೆ.

'ಕಥೆಯ ಮೇಲಿನ ಪ್ರೀತಿ ಮಾನವನ ಹುಟ್ಟುಗುಣ. ಮನುಷ್ಯನಿಗೆ ಮಾತನಾಡುವ ಶಕ್ತಿ ಬಂದಂದಿನಿಂದಲೂ ಕಥೆಗಳು ಹುಟ್ಟುತ್ತಲೇ ಇವೆ. ಹುಟ್ಟು ಗುಣವನ್ನು ಚಾತುರ್ಯದಿಂದ ಉಪಯೋಗಿಸಿಕೊಂಡರೆ ಮಕ್ಕಳ ಶಿಕ್ಷಣವು ಎಷ್ಟೋ ಸುಲಭವಾಗುತ್ತದೆ. ಕಥೆಗಳು ಮಕ್ಕಳಲ್ಲಿ ಕುತೂಹಲ ಕೆರಳಿಸುತ್ತವೆ. ಮುಂದೇನಾಯಿತು? ಮುಂದೇನಾಯಿತು ಎಂದು ಕೇಳುವ ಈ ಕುತೂಹಲವೇ ಅವಧಾನದ ತವರು ಮನೆ. ಈ ಕುತೂಹಲ ಗಮನವನ್ನೆಲ್ಲ ಒಮ್ಮುಖವಾಗಿ ಸೆಳೆಯುತ್ತದೆ. ಕಥೆ ಕೇಳಿ ಮಕ್ಕಳಿಗೆ ಚಿತ್ತೈಕಾಗ್ರತೆ ಶ್ರಮವಿಲ್ಲದೆ ಅಭ್ಯಾಸವಾಗುತ್ತದೆ'[೩೫].

ಕಥೆಗಳು ಮುಖ್ಯವಾಗಿ ಮಕ್ಕಳ ನೆನಪಿನ ಶಕ್ತಿಯುನ್ನು ಹೆಚ್ಚಿಸಲು ಸಹಾಯಕಾರಿಯಾಗಿವೆ. ಕಲ್ಪನಾ ಶಕ್ತಿಯನ್ನು ಬೆಳೆಸುತ್ತವೆ. ಸೃಜನಶೀಲತೆಗೆ ಕಾರಣವಾಗಿವೆ. ಮಕ್ಕಳ ಪ್ರತಿಭೆ, ಚತುರತೆಗುಣ, ಕ್ರಿಯಾಶೀಲತೆ, ಚಟುವಟಿಕೆ, ಚುರುಕುತನಗಳನ್ನು ವ್ಯಕ್ತಗೊಳಿಸಲು ಸಹಾಯಕಾರಿಯಾಗಿ ಪರಿಣಮಿಸಿವೆ. 'ಅಡಗೂಲಜ್ಜಿ ಕಥೆಗಳಂತೂ ಮಕ್ಕಳ ಮನಸ್ಸಿನ ಮುಂದೆ ಅದ್ಭುತ ಲೋಕವನ್ನೇ ತೋರಿಸುತ್ತದೆ. ರಾಜಕುಮಾರ, ರಾಜಕುಮಾರಿಯರ, ಬ್ರಹ್ಮರಾಕ್ಷಸ, ಭೂತ ಪ್ರೇತಗಳ, ಮಂತ್ರವಾದಿಗಳ, ವೃತ್ತಾಂತಗಳು, ರಮ್ಯ ಸಾಹಸ ಕಾರ್ಯಗಳು, ಅಲೌಕಿಕ ಸನ್ನಿವೇಶಗಳು ಮಕ್ಕಳ ಮನಸ್ಸನ್ನು ಕಥಾ ಪ್ರವಾಹದಲ್ಲಿ ಮುಳುಗಿಸಿ ರಂಜಿಸುವಂತೆ ಮಾಡುತ್ತವೆ'[೩೬]. ಮಕ್ಕಳ ಮನಸು ಬಹಳ ಮೃದುವಾದುದು. ಅಂಥ ಮನಸ್ಸನ್ನು ಅರಿತು ಕಥೆಗಳನ್ನು ಹೇಳುವುದರಿಂದ ಮಕ್ಕಳು ಮೈಮರೆತು ತಲ್ಲಿನರಾಗುತ್ತಾರೆ. ಮಕ್ಕಳು ಕಲ್ಪನಾ ಲೋಕದ ಕುಸುಮಗಳಿದ್ದಂತೆ. ಕನಸಿನ ಸೌಧ ಕಟ್ಟುವ, ಮರಳಿನ ಮನೆಕಟ್ಟುವ ಮನೋಭಾವದವರು, ಮಗು ಕಥೆ ಹೇಳುವ ಶೈಲಿಯನ್ನು ಅನುಸರಿಸುತ್ತದೆ. ಕಥೆಯಲ್ಲಿಯ ವಿಷಯ ರೋಮಾಂಚನಗೊಳ್ಳುವಂತಿದ್ದರೆ ಮಕ್ಕಳು ಆನಂದಿತರಾಗುವರು. ದುಃಖದ ಸಂಗತಿ ಒಳಗೊಂಡಿದ್ದರೆ ಅವರ ಕಣ್ಣಲ್ಲಿ ನೀರು ಸುರಿಯುವವು. ಆಶ್ಚರ್ಯಗೊಳಿಸುವುದಾದರೆ ವಿಸ್ಮಯದಿಂದ ನೋಡುವರು. ಪ್ರತಿ ದಿನವೂ ಮಗು ಹೊಸತನವನ್ನು ಬಯಸುವ ಗುಣ ಹೊಂದಿರುತ್ತದೆ. 'ಬಾಲ ಸಾಹಿತ್ಯ' ಶೀರ್ಷಿಕೆಯಲ್ಲಿ ಪಂಜೆಮಂಗೇಶರಾಯರು ಹೇಳಿರುವ ವಿಷಯ ಇಲ್ಲಿ ಉಲ್ಲೇಖಿಸಬಹುದು. 'ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತ ರಸವಿರಬೇಕು. ಮಕ್ಕಳಲ್ಲಿ ಕಲ್ಪನಾ ಶಕ್ತಿ ಹೆಚ್ಚು ಅದನ್ನು ಹತೋಟಿಯಲ್ಲಿಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಕಥೆಗಳಲ್ಲಿ ಅದ್ಭುತವಿದ್ದರೆ ಅವರ ಕಲ್ಪನಾಶಕ್ತಿಯ ಓಲಾಟಕ್ಕೆ ಅವಕಾಶವಾಗುತ್ತದೆ. ಕಾಲು ತಾಗಿದರೆ ಬಾನಿಗೇರುವ ಜಮಖಾನ, ಕಿವಿ ತಿರುಗಿದರೆ ನೀರೊಳಗೆ ಹೋಗುವ ಮಾಟದ ಕುದುರೆ, ದೀಪ ಉಜ್ಜಿದರೆ ಕಣ್ಣು ಮುಂದೆ ಬರುವ ಭೂತ ಮುಂತಾದ ಕಥೆಗಳು ಅವುಗಳೊಳಗಿನ ಅದ್ಭುತ ರಸದಿಂದ ಮಕ್ಕಳಿಗೆ ಪ್ರಿಯವಾಗುತ್ತದೆ'[೩೭].

ಮಕ್ಕಳ ಮನೋಭಾವಗಳು ವಿಚಿತ್ರವಾಗಿರುತ್ತವೆ. ಅವರು ಗೆಳೆಯರ ಜೊತೆ ಆಡುವ ಮನಸ್ಸಿನವರು. ಅವರಿಲ್ಲದಿದ್ದರೂ ತಾವೇ ಮಾತನಾಡುತ್ತ ಆಟದಲ್ಲಿ ತೊಡಗುವರು. ಮನೆಯಲ್ಲಿಯ ನಾಯಿ, ಬೆಕ್ಕು, ಗೊಂಬೆಗಳು ಅವರ ಆಟದ ವಸ್ತುಗಳಾಗುತ್ತವೆ. ಮಕ್ಕಳು ಬೆಳೆದಂತೆ ಮನೆಯ ಮುಂದಿರುವ ಮರಗಳ ಕೆಳಗೆ ಆಡುವುದು ಹವ್ಯಾಸವಾಗುತ್ತದೆ. ಆದ್ದರಿಂದ ಅವರು ಬಯಸುವ ವಸ್ತು-ವಿಷಯಗಳು ಕಥೆಗಳಲ್ಲಿದ್ದರೆ. ಮಕ್ಕಳು ಹೆಚ್ಚಿನ ಆಸಕ್ತಿ ಹೊಂದಲು ಸಾಧ್ಯವಿದೆ. ಕೆಲವು ಮಕ್ಕಳು ಪ್ರಕೃತಿ, ಪರಿಸರ, ಕಾಡು ಕುರಿತಾಗಿ ವೈಜ್ಞಾನಿಕ ರೂಪದ ಕಥೆಗಳನ್ನು ಬಯಸುವರು. ಅತಿಮಾನುಷ ಶಕ್ತಿಯ, ಪರಕಾಯ ಪ್ರವೇಶ ಮಾಡುವ ಕಾಲ್ಪನಿಕ ವಿಚಾರಗಳನ್ನು ಹೊಂದಿರುವ ಕಥೆಗಳಲ್ಲಿ ಕೆಲವು ಮಕ್ಕಳು ಆಸಕ್ತಿ ಹೊಂದಿರುತ್ತಾರೆ. ಹಿಂದಿನ ಕಾಲದಲ್ಲಿ ಅಜ್ಜಿ ಮಕ್ಕಳಿಗೆ ಕಥೆ ಹೇಳುವವಳು, ಮಕ್ಕಳು ಸುತ್ತುವರಿದು ಕುಳಿತು ಕೇಳುವರು. ಕಥೆಯನ್ನು ಹೇಳುವಾಗ ಪುನರಾವರ್ತನೆಯ

ಮೂಲಕ ಬಿಡಿಸಿ, ವಿಸ್ತರಣೆಗೊಳಿಸಿ ಹೇಳುವುದರಿಂದ ಮಕ್ಕಳ ಮನಸ್ಸು ಸಂತಸಗೊಳ್ಳುತ್ತಿತ್ತು. ಕಥೆ ಕೇಳುವುದರಿಂದ ಮಕ್ಕಳಲ್ಲಿ ಏಕಾಗ್ರತೆ ಮೂಡುತ್ತದೆ. ನೆನಪಿನ ಶಕ್ತಿಯು ಹೆಚ್ಚುತ್ತದೆ. ಸಂಭಾಷಣೆ ಕಲೆ ಅವರಲ್ಲಿ ಸಹಜವಾಗಿ ಕರಗತವಾಗುತ್ತದೆ. ಇಂಥ ಗುಣಗಳು ಮಕ್ಕಳಲ್ಲಿ ಒಳಗೊಂಡಿದ್ದರೆ ಶಿಕ್ಷಣ ಸುಲಭವಾಗುತ್ತದೆಂದು ಪಂಜೆಮಂಗೇಶರಾಯರ ಗ್ರಹಿಕೆಯಾಗಿತ್ತು. ಮಕ್ಕಳ ಶಿಕ್ಷಣದಲ್ಲಿ ಅದರಲ್ಲು ಮಕ್ಕಳಿಗೆ ಶೈಕ್ಷಣಿಕ ಬೆಳವಣಿಗೆಯಲ್ಲಿ ಕಥಾನಿರೂಪಣೆ ಅವಶ್ಯಕವೆಂದು ಭಾವಿಸಿದವರು. ಹೀಗಾಗಿ ಅವರು ಮಕ್ಕಳಿಗೆ ಸುಲಭವಾಗಿ ತಿಳಿಯುವ, ಸರಳತೆಯಿಂದ ಕೂಡಿದ ಸಣ್ಣ–ಸಣ್ಣ ವಾಕ್ಯಗಳಲ್ಲಿ ಕಥೆಗಳನ್ನು ರಚಿಸಿದರು. 'ಪಂಜೆಯವರಿಗಿಂತ ಮೊದಲು ಮಕ್ಕಳಿಗಾಗಿ ಕಥೆ ಬರೆದವರ ಹೆಸರು ಎಲ್ಲಿಯೂ ಸಿಗುವುದಿಲ್ಲ. ಪಂಜೆಯವರ ಸಮಕಾಲೀನರು, ನಂತರ ಬಂದವರಲ್ಲಿ ಹೆಚ್ಚಿನವರು ಶಿಶು ಸಾಹಿತ್ಯದತ್ತ ಒಲವನ್ನು ತೋರಿ ಸಾಹಿತ್ಯ ರಚನೆ ಮಾಡಿದರು; ಮಕ್ಕಳ ಮಂಟಪ, ಬಾಲವನಗಳಲ್ಲಿ ಮಕ್ಕಳ ಚಟುವಟಿಕೆಗಳಿಗೆ ಆದ್ಯತೆ ನೀಡಿದರು. ಮಕ್ಕಳ ಕಥೆಗಳ ಪ್ರಕಟಣೆಗಾಗಿ ಸ್ವತಃ ಪಂಜೆಯವರೇ ಮಂಗಳೂರಿನಲ್ಲಿ ಬಾಲ ಸಾಹಿತ್ಯ ಮಂಡಲವನ್ನು ೧೯೨೧ರಲ್ಲಿ ಸ್ಥಾಪಿಸಿದರು'[೩೮].

ಪಂಜೆಮಂಗೇಶರಾಯರ ಸಮಕಾಲೀನರೂ, ಮಡಿಕೇರಿಯ ಶಾಲೆಯಲ್ಲಿ ಸಹಪಾಟಿಗಳಾಗಿದ್ದ ಹರಿಶಣ್ಯೆ ಅವರು ಹೇಳುವ ಮಾತು ಉಲ್ಲೇಖನಾರ್ಹವಾದುದು. 'ಮಕ್ಕಳ ಉಪಯೋಗಾರ್ಥವಾಗಿ ಕನ್ನಡದಲ್ಲಿ ಪಾಠ ಪುಸ್ತಕಗಳನ್ನು, ಕಿರುಗತೆಗಳನ್ನು, ಸುಲಭ ಪದ್ಯಗಳನ್ನು ರಚಿಸಿದವರಲ್ಲಿ ಪಂಜೆಗೆ ಪ್ರಥಮ ಸ್ಥಾನ ಕೊಡುವುದು ಉಚಿತವು..... 'ಬಾಲ ಸಾಹಿತ್ಯ' ಪಿತಾಮಹ ಎಂಬ ಬಿರುದು ಅವರಿಗೆ ಸಲ್ಲತಕ್ಕದ್ದು'[೩೯]. ಆ ಸಮಯದಲ್ಲಿ ಮಕ್ಕಳಿಗಾಗಿ ಕಥೆ, ಕವನಗಳನ್ನು ರಚಿಸಿದವರಿದ್ದರು. ಆದರೆ ಪ್ರಥಮ ಸ್ಥಾನವನ್ನು ಪಂಜೆಮಂಗೇಶರಾಯರಿಗೆ ಕೊಡುವುದು ಉಚಿತವೆನಿಸುತ್ತದೆ.

'ಇಲ್ಲಿಯೂ ಪ್ರಾಸಂಗಿಕವಾಗಿ ಹೇಳಬಹುದು, ಕನ್ನಡ ಸಣ್ಣ ಕಥೆಗಳಿಗೆ ಹೇಗೋ ಹಾಗೆಯೇ ಕನ್ನಡದ ಸಾಹಿತ್ಯಕ್ಕೂ (ನಾನು ಬಲ್ಲಷ್ಟರ ಮಟ್ಟಿಗೆ) ಪಂಜೆಯವರೇ ಮೂಲ ಪುರುಷರೆಂದು, ಅವರೇ ಜನ್ಮದಾತರೆಂದು'[೪೦]. ಈ ಮೇಲಿನ ನುಡಿಗಳನ್ನು ಗಮನಿಸಿದರೆ ಪಂಜೆಮಂಗೇಶರಾಯರಿಗೆ ಮಕ್ಕಳ ಸಾಹಿತ್ಯ ರಚನೆಯ ಕುರಿತಾದ ಒಲವು ಆಗಾಧವಾದುದೆಂದು ತಿಳಿಯುತ್ತದೆ. ಪಂಜೆಯವರೇ ಒಂದೆಡೆ ಹೀಗೆ ಹೇಳುತ್ತಾರೆ. 'ಮಕ್ಕಳ ಕಥೆಗಳಲ್ಲಿ ಧರ್ಮಬೋಧನೆಯು ಅಂತರಂಗದಲ್ಲಿ ಅಡಗಿದ್ದಿರಬೇಕು. ಧರ್ಮ ಬೋಧನೆಗಾಗಿಯೇ ಕಥೆಯನ್ನು ಕಟ್ಟಿದಂತೆ ಇರಬಾರದು...... ಕಥೆಗಳನ್ನು ಹೇಳಿ, ಇಲ್ಲವೆ ಬರೆದು ಅವುಗಳ ಅಂತ್ಯದಲ್ಲಿ ಬುದ್ಧಿವಾದವನ್ನು ಸ್ಪಷ್ಟವಾಗಿ ವ್ಯಕ್ತಮಾಡುವುದು ಅನುಚಿತವೆಂದು ನನ್ನ ಅಭಿಪ್ರಾಯ. ಮಕ್ಕಳ ಕಥೆಗಳಲ್ಲಿ ಪ್ರಯೋಗಿಸತಕ್ಕ ಭಾಷೆಯೂ ಸುಲಭವಿರತಕ್ಕದ್ದು. ಶಬ್ದಗಳು ಮನೆ ಮಾತುಗಳಿಂದ ಕೂಡಿರಬೇಕು. ವಾಕ್ಯಗಳು ಉದ್ದವಿರದೆ ಚಿಕ್ಕವಿರುವುದು ಅಗತ್ಯ. ಭಾಷೆ ಎಂದರೆ ಮಕ್ಕಳು ಮನಸ್ಸಿನಿಂದ ಚಿತ್ರಿಸತಕ್ಕ ಭಾಷೆ. ಕಥೆಗಳಲ್ಲಿ ಹೇಳಿಕೆಗಿಂತ ಸಂಭಾಷಣೆ ಅಧಿಕವಿರಬೇಕು. ಸಂಭಾಷಣೆ ಇದ್ದರೆ ಮಕ್ಕಳು ಕಥೆಯನ್ನು ಕಣ್ಣಾರೆ

ಕಂಡಂತೆ ಅನುಭವಿಸುವರು. ಕಥೆಯಲ್ಲಿಯ ಪಾತ್ರಗಳು, ಜೀವಕಳೆ ತುಂಬಿ ಮಕ್ಕಳ ಕಣ್ಣ ಮುಂದೆ ಕುಣಿಯುವವು. ಬಾಲಕರ ಕಥೆಗಳಲ್ಲಿ ಪುನರುಕ್ತಿಯು ಒಂದು ಲಕ್ಷಣವಾಗಿದೆ'[೪೧]. ಹೀಗೆ ಪಂಜೆಮಂಗೇಶರಾಯರು ತಮ್ಮ 'ಬಾಲ ಸಾಹಿತ್ಯ' ಕುರಿತಾದ ಭಾಷಣದಲ್ಲಿ ಮಕ್ಕಳ ಕಥಾ ಸಾಹಿತ್ಯದ ಲಕ್ಷಣಗಳನ್ನು ವ್ಯಕ್ತಪಡಿಸಿದ್ದಾರೆ.

ಸ್ವತಃ ಅಧ್ಯಾಪಕರಾಗಿರುವ ಪಂಜೆಮಂಗೇಶರಾಯರು ಮಕ್ಕಳ ಲೋಕವನ್ನು ಪ್ರವೇಶಿಸಿ, ತಾವು ಮಗುವಾಗಿ ಮಕ್ಕಳ ಜೊತೆಯಲ್ಲಿ ಆಟ-ಪಾಠಗಳಲ್ಲಿ, ನಡೆ-ನುಡಿಗಳಲ್ಲಿ, ನೋವು-ನಲಿವುಗಳಲ್ಲಿ, ಹಾವ-ಭಾವಗಳಲ್ಲಿ ಒಂದಾಗಿ ಮಕ್ಕಳ ಮನಸ್ಸಿಗೆ ಮುಟ್ಟುವ ಸರಳವಾದ, ರಂಜನೀಯವಾದ ಸಾಹಿತ್ಯ ರಚಿಸಿದವರು. ಪಂಜೆಮಂಗೇಶರಾಯರು ಮಕ್ಕಳಿಗಾಗಿ ಹಲವಾರು ಕಥೆಗಳನ್ನು ರಚಿಸಿದರೂ ಕೆಲವು ಮಾತ್ರ ನಮಗೆ ಲಭಿಸಿವೆ. ಇವುಗಳಲ್ಲಿ ಶಿಶು ಸಾಹಿತ್ಯ ಮತ್ತು ಬಾಲ ಸಾಹಿತ್ಯ ಎಂದು ವಿಂಗಡಿಸಿ ನೋಡಬಹುದಾಗಿದೆ.

ಒಟ್ಟು ೩೪ ಕಥೆಗಳನ್ನು ಪಂಜೆಮಂಗೇಶರಾಯರು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಅರ್ಪಿಸಿದ್ದಾರೆ. ೧೯೩೩ರಲ್ಲಿ ಪ್ರಕಟವಾದ ಮಕ್ಕಳ ಕಥಾ ಸಂಕಲನ 'ಸಚಿತ್ರಬಾಲ ಕಥಾವಳಿ'. ಒಂದನೆಯ ತರಗತಿಯ ಮಕ್ಕಳಿಗಾಗಿರುವ ಈ ಕೃತಿಯ ಮುನ್ನುಡಿಯಲ್ಲಿ ಉಪಾಧ್ಯಾಯರಿಗೆ ಹೇಳಿರುವ ಸೂಚನೆ ಬಹು ಮುಖ್ಯವಾದುದು. ಇದು ಪಂಜೆಮಂಗೇಶರ ಮಕ್ಕಳ ಸಾಹಿತ್ಯದ ಉದ್ದೇಶವನ್ನು ತಿಳಿಸುತ್ತದೆ.

'ಭಾಷಾ ಪರಿಚಯವನ್ನು ಚಿಕ್ಕ ಮಕ್ಕಳಿಗೆ ಕಥಾ ರೂಪವಾಗಿ ಮಾಡಿಕೊಡುವುದೇ ಈ ಪುಸ್ತಕದ ಉದ್ದೇಶವು. ಹೊಸ ಭಾಷೆಯನ್ನು ಕಲಿಯುವ ಮಕ್ಕಳು ಆ ಭಾಷೆಯಲ್ಲಿಯ ಯಾವ-ಯಾವ ಶಬ್ದಗಳನ್ನು ಮೊತ್ತ ಮೊದಲು ಹೆಕ್ಕಿಕೊಳ್ಳುತ್ತವೆ? ತಮ್ಮ ಎಳೇ ಮನಸ್ಸಿನಿಂದ ಮೊದಲು ಹೀರಿಕೊಳ್ಳುವ ಸಂಗತಿಗಳು ಯಾವವು? ಪದಗಳನ್ನು ಪೋಣಿಸಿ ಹೇಗೆ ವಾಕ್ಯಮಾಲೆ ಕಟ್ಟುತ್ತಾರೆ? ಎಂಬೀ ಪ್ರಶ್ನೆಗಳಿಗೆ ಸಮಾಧಾನ ಹೇಳತಕ್ಕ ಸೂತ್ರಗಳ ಮೇಲೆ ಈ ಕಥೆಗಳು ತೂಗಿರುವುದರಿಂದಲೇ ಇವು ಇನ್ನೂ ಉದುರಿ ಹೋಗದೇ ಉಳಿದಿವೆ'[೪೨].

ಕಾಗೆ ಮತ್ತು ಗುಬ್ಬಚ್ಚಿ :

ಒಂದಾನೊಂದು ಊರಿನಲ್ಲಿ ಒಂದು ಕಾಗೆ ಮತ್ತು ಗುಬ್ಬಚ್ಚಿ ಇದ್ದವು. ಕಾಗೆಯ ಗೂಡು ಮರದ ಕೊಂಬೆಯ ಮೇಲೆಯಿತ್ತು. ಗುಬ್ಬಚ್ಚಿಯ ಗೂಡು ಒಂದು ಮನೆಯ ಮುಚ್ಚಿಗೆಯಲ್ಲಿತ್ತು. ಕಾಗೆ ಬಾಗಿಲು ತೆರೆಯಲು ಗುಬ್ಬಚ್ಚಿಗೆ ಕೇಳುವ ಪ್ರಸಂಗದಿಂದ ಕಥೆ ಪ್ರಾರಂಭವಾಗುತ್ತದೆ. ದೈನಂದಿನ ಕಾರ್ಯಗಳ ಚಿತ್ರಣವನ್ನು ಪದಗಳಲ್ಲಿ ಕಟ್ಟಿಕೊಟ್ಟಿರುವುದು ಪಂಜೆಯವರ ವೈವಿಧ್ಯತೆಯನ್ನು ತಿಳಿಸುತ್ತದೆ. ಅವು ಮಕ್ಕಳಿಗೆ ಸುಲಭವಾಗಿ ಅರ್ಥವಾಗುತ್ತವೆ. ಮೋರೆ ತೊಳೆಯುವುದು, ಕಸಗುಡಿಸುವುದು, ಸಗಣಿ ಬಳಿಯುವುದು, ನೀರು ಸೇದುವುದು, ಮುಸುರೆ ಬೆಳಗುವುದು, ಸ್ನಾನ ಮಾಡುವುದು, ಬಟ್ಟೆ ಒಗೆಯುವುದು, ಅಕ್ಕಿ ತೊಳೆಯುವುದು, ಒಲೆ ಹೊತ್ತಿಸುವುದು, ನೀರು ಎಸರು ಇಡುವುದು, ತರಕಾರಿ ಹೆಚ್ಚುವುದು, ಕೂಸಿಗ

' ಹಾಲು ಕುಡಿಸುವುದು, ಊಟ ಮಾಡುವುದು ಮುಂತಾದ ಕೆಲಸಗಳನ್ನು ಮಾಡುವುದು ಮಗು ಬೆರಗಿನಿಂದ ನೋಡುತ್ತದೆ. ಹಾಗೆ ಕಥೆ ಮುಂದುವರೆಯುತ್ತದೆ. ಒಳಗೆ ಬಂದ ಕಾಗೆಗೆ ಅಟ್ಟದ ಮೇಲೆ ಮಲಗಲು ಗುಬ್ಬಚ್ಚಿ ಹೇಳುತ್ತದೆ. ಅಲ್ಲಿಯ ಮಾಡು, ಗೋಡೆ, ಕಿಟಕಿ, ಹೊಗೆ, ಮಂಚ, ತೊಟ್ಟಿಲು ಮುಂತಾದ ಮನೆಯ ಸಂಬಂಧಪಟ್ಟ ಪದಗಳನ್ನು ಪರಿಚಯ ಮಾಡುವುದು. ತೊಟ್ಟಿಲಲ್ಲಿ ಮಲಗಿ ಕಾಗೆ ಗುಬ್ಬಚ್ಚಿಯ ಮರಿಯೊಂದನ್ನು 'ಕುಟುಂ ಮಾಡಿದಾಗ' ಸದ್ದು ಬರುತ್ತದೆ. ಆಗ ಗುಬ್ಬಚ್ಚಿ ಏನು ತಿನ್ನುತ್ತಿ ಎಂದು ಕೇಳುವುದು. ಆಗ ಕಾಗೆಯು 'ಅಜ್ಜನ ಅಂಗಡಿಯ ತೊಗರಿ, ಹುರುಳಿ, ರಾಗಿ, ಅವರೆ, ಉದ್ದು, ಹೆಸರು' ಮೊದಲಾದ ಧಾನ್ಯದ ಕಾಳುಗಳನ್ನು ತಿನ್ನುತ್ತಿರುವುದನ್ನು ಪರಿಚಯ ಮಾಡಿಕೊಡುವುದು ಪಂಜೆಮಂಗೇಶರಾಯರ ಉದ್ದೇಶವಾಗಿದೆ ಎಂದರೆ ಸರಿಯೆನಿಸುತ್ತದೆ.

ಈ ರೀತಿಯಾಗಿ ಕಾಗೆ ಗುಬ್ಬಚ್ಚಿಯ ಎಲ್ಲ ಮರಿಗಳನ್ನು ತಿಂದು ಬಿಡುತ್ತದೆ. ಬೆಳಗಾದರೆ ಮರಿಗಳು ಕೂಗಿದರೂ ಬರಲೇ ಇಲ್ಲ. ಅಯ್ಯೋ ನನ್ನ ಮರಿಗಳನ್ನು ಕಾಗೆ ತಿಂದಿತು ಎಂದು ಗೋಳಾಡುವುದು. ನಂತರ ಸಮಾಧಾನಗೊಂಡ ಗುಬ್ಬಚ್ಚಿ, ಕಾಗೆಗೆ ಬುದ್ಧಿ ಕಲಿಸಲು ಉಪಾಯ ಮಾಡುತ್ತದೆ. ಒಂದು ಕಬ್ಬಿಣದ ಗೋಲಿಯನ್ನು ಓಲೆಗೆ ಹಾಕಿ ಬಿಸಿ ಮಾಡಿ ಬೆಣ್ಣೆ ಮುದ್ದೆಯಲ್ಲಿ ಇಟ್ಟಿತು. ಯಾರಿಗೆ ಬೆಣ್ಣೆ ಬೇಕು ಎಂದು ಕೂಗಿದಾಗ ಕಾಗೆ ತನಗೆ ಬೇಕೆಂದಿತು. ಕಾಗೆ ತಿನ್ನಲು ಬಾಯಿ ತೆರೆದಾಗ ಬೆಣ್ಣೆ ಬಾಯಿಯಲ್ಲಿ ಕರಗಿ, ಕಾಗೆಯ ಬಾಯಿ ಬಿಸಿಯಾಗಿ ಗುಬ್ಬಚ್ಚಿಯ ಮರಿಗಳನ್ನು ಕಾರಿಬಿಡುತ್ತದೆ. ಮರಿಗಳಿಗೆ ಗುಬ್ಬಚ್ಚಿ ಸ್ನಾನ ಮಾಡಿಸುತ್ತದೆ. ಮರಿಗಳೊಂದಿಗೆ ಸುಖವಾಗಿರುತ್ತದೆ. ಕಾಗೆ ಮಾತ್ರ ಗುಬ್ಬಚ್ಚಿ ಗೂಡಿಗೆ ಬರಲೇ ಇಲ್ಲ ಎನ್ನುವಲ್ಲಿಗೆ ಕಥೆ ಮುಗಿಯುತ್ತದೆ. ಇಂಥ ಕಥೆಗಳು ಮಕ್ಕಳಿಗೆ ಮುದ ನೀಡುವುದರೊಂದಿಗೆ ಕುತೂಹಲ ಮೂಡಿಸುತ್ತವೆ. ಪಂಜೆಮಂಗೇಶರಾಯರು ಮಕ್ಕಳಿಗೆ ಕಥೆಗಳ ಮೂಲಕ ಸುತ್ತಣ ಪರಿಸರವನ್ನು ಪರಿಚಯ ಮಾಡುವುದಲ್ಲದೆ ಅವರಲ್ಲಿ ನೈತಿಕತೆಯನ್ನು ತುಂಬುತ್ತಾರೆ.

ಅಮ್ಮನನ್ನು ಹೇಗೆ ಕೂಗಬೇಕು :

ಪಂಜೆಮಂಗೇಶರಾಯರು ಮಕ್ಕಳ ಕಥೆಗಳಲ್ಲಿ ಹೆಚ್ಚಾಗಿ ಪ್ರಾಣಿ ಜಗತ್ತನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. 'ಒಂದಾನೊಂದು ಊರಿನಲ್ಲಿ ಒಂದು ಹಸು ಇತ್ತು. ಒಂದು ದಿನ ಆ ಹಸು ತನ್ನ ಕರುವನ್ನು ಹಟ್ಟಿಯಲ್ಲಿ ಬಿಟ್ಟು ಹೊಲಕ್ಕೆ ಹೋಗಿ, ಅಲ್ಲಿ ಹುಲ್ಲು ಮೆಯುತ್ತ ಇತ್ತು. ಸಂಜೆಯಾಯಿತು. ಕರು ತಾಯಿಯ ಹಾದಿಯನ್ನು ನೋಡುತ್ತ ಇತ್ತು ಬಹಳ ಹೊತ್ತಾದರೂ ಹಸು ಬರಲಿಲ್ಲ. ನನ್ನ ತಾಯಿ ಯಾಕೆ ಬರಲಿಲ್ಲ? ಏನು ಮಾಡಲಿ? ಎನ್ನುತ್ತ, ಹಾದಿಯಲಿ ಭೆಟ್ಟಿಯಾದ ಅನೇಕ ಪ್ರಾಣಿಗಳಿಗೆ ತನ್ನ ತಾಯಿಯನ್ನು ಹೇಗೆ ಕೂಗಿ ಕರೆಯಲಿ ಎಂದು ಕೇಳುತ್ತದೆ. ಆಗ ಎಲ್ಲವೂ ಒಂದೊಂದು ಧ್ವನಿಯಿಂದ ಕೂಗಲು ಹೇಳುತ್ತವೆ. ಕುದುರೆಯ ಹುಂಕಾರದ ಕೆನೆತ, ನಾಯಿಯ ಬೊಗಳುವಿಕೆ, ಹಂದಿಯ ಗುರುಗುಟ್ಟುವಿಕೆ, ಕೋಣನ ಠೇಕಾರ, ಗುಬ್ಬಿಯ

ಕೀಚಲು, ಹಾವಿನ ಭುಸುಗುಟ್ಟುವಿಕೆ, ಕಪ್ಪೆ ವಟಗುಟ್ಟುವಿಕೆ, ಗೂಳಿಯ ಗುಟುರು ಮೊದಲಾದವುಗಳ ಕೂಗುವಿಕೆ ಬರುವುದಿಲ್ಲ. ಕೊನೆಗೆ ಗೂಳಿಯ ಗುಟುರಿಗೆ ಕರು ತಾಯಿಯನ್ನು ಕರೆಯುತ್ತದೆ. ಆಗ ಹಸು ಕರುವಿನ ಧ್ವನಿ ಗೊತ್ತಾಗಿ 'ಅಂಬಾ' ಎಂದು ಓಡಿಬರುತ್ತದೆ. ಹಸು ಮತ್ತು ಕರು ಕೂಡಿ ಹಟ್ಟಿಗೆ ಬರುವುದರೊಂದಿಗೆ ಕಥೆ ಮುಗಿಯುತ್ತದೆ. ಇಲ್ಲಿ ಮುಖ್ಯವಾಗಿ ಪಂಜೆಮಂಗೇಶರಾಯರಿಗೆ ಪ್ರಾಣಿ–ಪಕ್ಷಿಗಳ ಕೂಗುವಿಕೆಯ ದನಿಗಳನ್ನು ಮಕ್ಕಳಿಗೆ ತಿಳಿಸುವ ಉದ್ದೇಶ ಹೊಂದಿರುವುದನ್ನು ಕಾಣುತ್ತೇವೆ.

ಇಲಿಗಳ ಥಕಥೈ :

ಒಂದಾನೊಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನು ತನ್ನ ಅರಸಿ ಮತ್ತು ಮಗಳೊಂದಿಗೆ ಸುಖವಾಗಿದ್ದನು. ಅರಮನೆಯಲ್ಲಿ ಎರಡು ಇಲಿಗಳಿದ್ದವು. ಅವು ರಾತ್ರಿ ಬಿಲದಿಂದ ಬಂದು ಕಿರುಚಿತ್ತಿದ್ದವು. ಇದರಿಂದ ಅರಸನ ನಿದ್ರೆಗೆ ಭಂಗವಾಗುತ್ತಿತ್ತು. ಇಲಿಗಳನ್ನು ಹಿಡಿಯಲು ಸೇವಕರಿಗೆ ಆಜ್ಞೆ ಮಾಡುತ್ತಾನೆ. ಸೇವಕನು ಇಲಿಗಳಿಗೆ ತಿಂಡಿ ಇಟ್ಟು ಬಲೆಯಲ್ಲಿ ಬಂಧಿಸುತ್ತಾನೆ. ಗಂಡು ಇಲಿ ಬಲೆಯಲ್ಲಿ ಬಂಧಿಯಾಗುತ್ತದೆ. ಹೆಣ್ಣು ಇಲಿ ಗೋಳಾಡುತ್ತ; ಗಂಡನನ್ನು ಬಿಡಿಸಿಕೊಳ್ಳಲು ರಾಜನ ಮಗಳಲ್ಲಿ ಬೇಡಿಕೊಳ್ಳಲು ಅರಮನೆಯ ಹಿತ್ತಲಿಗೆ ಬರುತ್ತದೆ. ಹೀಗೆ ಬರುವಾಗ ಅದು ಕುಂಬಾರ, ತೋಟಗಾರ, ಗಾಣಿಗ, ಗಾಡಿಯಾಳು ಮೊದಲಾದವರನ್ನು ಭೇಟಿಯಾಗಿ ತನಗೆ ಬೇಕಾದ ವಸ್ತುಗಳನ್ನು ತರುತ್ತದೆ. ಅರಮನೆಗೆ ಬಂದಾಗ ರಾಣಿ ತನ್ನ ಮಗಳಿಗೆ ತಲೆ ಬಾಚುತ್ತಿರುತ್ತಾಳೆ. ಆಗ ಇಲಿ 'ಕೂಸಿನ ತಲೆಗೆ ಎಣ್ಣೆ ಹಚ್ಚು' ಎಂದು ತಾನು ತಂದ ವಸ್ತುಗಳಲ್ಲೊಂದಾದ ಎಣ್ಣೆಯನ್ನು ಕೊಡುತ್ತದೆ. ರಾಣಿ ತಲೆಗೆ ಎಣ್ಣೆ ಹಚ್ಚುವಾಗ ಎಣ್ಣೆ ಚೆಲ್ಲಿ ಹೋಗುತ್ತದೆ. ಆಗ ಇಲಿ 'ಅಮ್ಮಾ ಅಮ್ಮಾ ಕೊಡು ನನ್ನ ಎಣ್ಣೆ ಇಲ್ಲವೆ ಇಡು ನಿನ್ನ ಕೂಸು' ಎಂದು ಗದರಿಸುತ್ತದೆ. ಆಗ ರಾಣಿಯು ತನಗಿರುವುದು ಒಂದೇ ಕೂಸು, ಮತ್ತೇನಾದರೂ ಕೇಳು ಕೊಡುತ್ತೇನೆಂದು ಹೇಳುತ್ತಾಳೆ. ಈ ಮಾತನ್ನು ಕೇಳಿದ ಇಲಿ, ಹಾಗಾದರೆ ನನ್ನ ಗಂಡನನ್ನು ನನಗೆ ಕೊಟ್ಟು ಬಿಡು ನಿನ್ನ ಮಗಳನ್ನು ಬಿಡುತ್ತೇನೆ ಎನ್ನುತ್ತದೆ. ರಾಣಿ ಬಲೆಯಿಂದ ಗಂಡು ಇಲಿಯನ್ನು ಹೊರಗೆ ಬಿಡುತ್ತಾಳೆ. ಬಿಡುಗಡೆಗೊಂಡ ಗಂಡು ಇಲಿ ಮತ್ತು ಹೆಣ್ಣು ಇಲಿಗೆ ಸಂತಸ ಮೂಡುತ್ತದೆ. ಅವುಗಳ ಸಂಭ್ರಮವನ್ನು ಪಂಜೆಮಂಗೇಶರಾಯರು ಮನೋಹರ ದೃಶ್ಯದಿಂದ ಚಿತ್ರಿಸಿದ್ದಾರೆ.

'ಕಾಲು ಕೊಟ್ಟು ಬಾಳು ತಂದೆ ಥೈಥಕ್ಕಥೈ
ಬಾಳು ಕೊಟ್ಟು ಗಡಿಗೆ ತಂದೆ ಥಕ್ಕಥೈ
ಗಡಿಗೆ ಕೊಟ್ಟು ಹಣ್ಣು ತಂದೆ ಥೈ ಥಕ್ಕ ಥೈ
ಹಣ್ಣು ಕೊಟ್ಟು ಎತ್ತು ತಂದೆ ಥೈ ಥ ಕ್ಕ ಥೈ
ಎತ್ತು ಕೊಟ್ಟು ಎಣ್ಣೆ ತಂದೆ ಥೈ ಥ ಕ್ಕ ಥೈ
ಎಣ್ಣೆ ಕೊಟ್ಟು ಗಂಡ ತಂದೆ ಥೈ ಥ ಕ್ಕ ಥೈ'[೬೩].

ಎಂದು ಹಾಡುತ್ತ ಹೋಗುವುದರೊಂದಿಗೆ ಕಥೆ ಮುಗಿಯುತ್ತದೆ. ಸಣ್ಣ ಪ್ರಾಣಿಗಳು ಸಹ ದೃಢ ಮನಸ್ಸಿನಿಂದ ಪ್ರಯತ್ನ ಮಾಡಿದರೆ ಎಂಥ ಕಠಿಣ ಕೆಲಸವನ್ನಾದರೂ ಸಫಲಗೊಳಿಸಿಕೊಳ್ಳಬಹುದು ಎಂಬ ನೀತಿಯು ಇಲ್ಲಿ ಅಭಿವ್ಯಕ್ತಗೊಂಡಿದೆ. ಪ್ರಾದೇಶಿಕ ಪದಗಳ ಸೊಗಡು ಹೆಚ್ಚಾಗಿ ಬಳಕೆಯಾಗಿರುವುದು ಕಂಡುಬರುತ್ತದೆ. ಮಕ್ಕಳಿಗೆ ಮನರಂಜನೆ ಒದಗಿಸಿ ಕಥೆ ಸಾರ್ಥಕತೆ ಪಡೆದಿವೆ ಎನ್ನಬಹುದು.

ಹುಲಿಯೋ ಇಲಿಯೋ :

ಮಕ್ಕಳು ರಂಜನೀಯವಾದ ರಮ್ಯ ಕಥೆಯನ್ನು ಬಯಸುತ್ತಾರೆ. ಅವರು ಬಯಸುವ ಕಥೆಗಳಲ್ಲಿ ಚಮತ್ಕಾರಗಳಿರಬೇಕು. ಕುತೂಹಲವಿರಬೇಕು. ಆಸಕ್ತಿ ಹೆಚ್ಚಿಸುವ ರಮ್ಯತೆ ಇರಬೇಕು. ಇಂಥ ಕುತೂಹಲಭರಿತವಾದ ಮಂತ್ರವಾದಿಯ ಕಥೆಯೇ ಇಲ್ಲಿಯ ವಸ್ತು. ಮಂತ್ರವಾದಿಯು ಬೂದಿಯನ್ನು ಕೈಯಲ್ಲಿ ಹಿಡಿದುಕೊಂಡು ಪುಸ್ಸನೆ ಊದಿಬಿಟ್ಟರೆ, ಕುರುಡನಿಗೆ ಕಣ್ಣು ಕಾಣುತ್ತಿತ್ತು. ಕಿವುಡನಿಗೆ ಕಿವಿ ಕೇಳುತ್ತಿತ್ತು. ಮೂಕನಿಗೆ ಮಾತು ಬರುತ್ತಿತ್ತು. ಹೆಳವನಿಗೆ ಕಾಲು ಸರಿಯಾಗುತ್ತಿತ್ತು. ಮತ್ತೆ ಬೂದಿಯನ್ನು ಮುದುಕನ ತಲೆಯ ಮೇಲೆ ಎರಚಿದರೆ ಅವರು ಮಕ್ಕಳಂತೆ ನಗುತ್ತಿದ್ದರು. ಮಕ್ಕಳ ಮುಖದ ಹತ್ತಿರ ವಾಸನೆ ತೋರಿಸಿದರೆ ಅವರು ಮುದುಕರಂತೆ ಕೆಮ್ಮುತ್ತಿದ್ದರು. ಇಂಥ ಶಕ್ತಿಯಿರುವ ಮಂತ್ರವಾದಿಯ ಕಾಲಡಿಯಲ್ಲಿ ಚಿಲಿಪಿಲಿ ಮಾಡುತ್ತ ಒಂದು ಇಲಿ ಬಂದು ಬೀಳುತ್ತದೆ. 'ಯಾಕೆ ಬಂದೆ' ಎಂದು ವಿಚಾರಿಸಿದಾಗ ಇಲಿಯು 'ಮಹಾಸ್ವಾಮಿ ಬೆಕ್ಕು ಓಡಿಸಿಕೊಂಡು ಬಂದು ನನ್ನನ್ನು ಕಾಡುತ್ತಿದೆ. ಇಲಿಗಿಂತ ಬೆಕ್ಕಿಗೆ ಹೆಚ್ಚು ಬಲವಿದೆ.ನನಗೆ ಬೆಕ್ಕಿನಷ್ಟು ತ್ರಾಣ ಇಲ್ಲ, ನನ್ನನ್ನು ಬೆಕ್ಕಾಗಿ ಮಾಡಿದರೆ ನಾನು ಬದುಕುವೆನು, ನನ್ನನ್ನು ಕಾಪಾಡಬೇಕು'[೬೪] ಎಂದು ಬೇಡಿಕೊಳ್ಳುತ್ತದೆ. ಮಂತ್ರವಾದಿ ಅದಕ್ಕೆ ಒಪ್ಪಿಕೊಂಡು ಇಲಿಯ ಮೇಲೆ ಮಂಕುಬೂದಿಯನ್ನು ಎರಚಿದಾಗ ಇಲಿಯು ಬೆಕ್ಕಾಗುತ್ತದೆ. ಬೆಕ್ಕನ್ನು ನಾಯಿ ಅಟ್ಟಿಸಿಕೊಂಡು ಬಂದಾಗ ಬೆಕ್ಕನ್ನು ನಾಯಿಯಾಗಿ, ನಾಯಿಯನ್ನು ದನ ಅಟ್ಟಿಸಿಕೊಂಡು ಬಂದಾಗ ನಾಯಿಯನ್ನು ದನವನ್ನಾಗಿ, ದನವನ್ನು ಹುಲಿ ಬೆನ್ನತ್ತಿ ಬಂದಾಗ ದನವನ್ನು ಹುಲಿಯಾಗಿ ಮಾಡುವನು. ಕೊನೆಗೆ ಹುಲಿ ಗರ್ಜಿಸುತ್ತ ಮಂತ್ರವಾದಿಯನ್ನು ತಿನ್ನಲು ಬರುತ್ತದೆ. ಮಂತ್ರವಾದಿ ಅಂಜದೆ ಹುಲಿಗೆ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸುತ್ತಾನೆ. 'ಯಥಾ ಪೂರ್ವಮ್ ಕಲ್ಪಯೇತೆ' ಎಂದು ಮೂರು ಸಲ ಹೇಳಿ ಮಂತ್ರವನ್ನು ಗುಣಗುಣಿಸಿ ಹುಲಿಯ ಮೇಲೆ ಬೂದಿ ಎರಚುತ್ತಾನೆ. ಹುಲಿ ಇಲಿಯಾಗಿ ಅಲ್ಲಿಂದ ಹೋಗುತ್ತದೆ. ಇಂಥ ವಿಭಿನ್ನವಾದ ರೂಪಗಳಿಂದ ಕಥೆಯನ್ನು ಕೇಳಿದ ಮಕ್ಕಳು ಸಂತಸಗೊಳ್ಳುವಲ್ಲಿ ಸಂದೇಹವಿಲ್ಲ.

ಅಂಗಳ ದುಗ್ಗು :

ಮಕ್ಕಳು ಕೇಳಿ ಆನಂದಿಸುವಕಥೆ ಇದಾಗಿದ್ದು. ದಿನಾಲು ಮಕ್ಕಳು ನೋಡುವ ಕೋಳಿ, ಕಾಗೆ, ಗುಬ್ಬಚ್ಚಿ, ಗಿಳಿ ಮುಂತಾದವು ಈ ಕಥೆಯ ಪಾತ್ರಧಾರಿಗಳಾಗಿವೆ. ಸೊಗಸಾದ

ಸಂಭಾಷಣೆಯಿಂದ ಕೂಡಿದ, ಮಕ್ಕಳ ಮನಸೆಳೆಯುವ ನಿರೂಪಣೆಗಳಿಂದ ಕಥೆಯಲ್ಲಿ ತಲ್ಲೀನರಾಗುವಂತೆ ಮಾಡುವ ಕಲೆ ಪಂಜೆಮಂಗೇಶರಾಯರಿಗೆ ಅನುಭವದಿಂದ ಕರಗತವಾದುದೆಂದು ಹೇಳಬಹುದು. ಒಂದು ಊರಿನಲ್ಲಿ ಒಬ್ಬ ಕುಂಬಾರನಿದ್ದನು. ಅವನ ಮನೆಯಲ್ಲಿ ಒಂದು ಹೆಣ್ಣು ಕೋಳಿ ಇತ್ತು. ಅದು ಅಂಗಳದಲ್ಲಿ, ಹಿತ್ತಲ ಗದ್ದೆಯಲ್ಲಿ ಏನಾದರೂ ತಿನ್ನುತ್ತ ತಿರುಗಾಡುತ್ತಿತ್ತು. ಕುಂಬಾರನು ಅದಕ್ಕೆ 'ಅಂಗಳ ದುಗ್ಗು' ಎಂದು ಹೆಸರಿಟ್ಟದ್ದನು. ಅಂಗಳ ದುಗ್ಗು ಎಂದು ಕರೆದಾಗ ಅದು ಓಡಿಬರುತ್ತಿತ್ತು. ಒಂದು ದಿನ ಒಂದು ಕಾಳು ಭತ್ತವನ್ನು ಬಿತ್ತಲು ಕಾಗೆ, ಗಿಳಿ, ಗುಬ್ಬಚ್ಚಿಗೆ ಹೇಳುವನು. ಅವುಗಳು ತಮ್ಮಿಂದಾಗದ ಕೆಲಸವೆಂದು ತಿಳಿಸುತ್ತವೆ. ಕಥೆಗಾರರು ಇಲ್ಲಿ ಭತ್ತ ಬೆಳೆಯುವ, ರಾಶಿ ಮಾಡುವ ಮತ್ತು ಕಾಳನ್ನು ಬೀಸಿ ದೋಸೆ ಮಾಡುವ ಹಂತಗಳನ್ನು ಬಲು ಸುಂದರವಾಗಿ ಚಿತ್ರಿಸಿದ್ದಾರೆ. 'ಗದ್ದೆಯಲ್ಲಿ ದುಗ್ಗು ಕಾಳನ್ನು ಬಿತ್ತಿತ್ತು, ಭತ್ತ ಮೊಳೆಯಿತು, ಕೆಯ್ ಆಡಿತು, ತೆನೆ ಬಿಟ್ಟಿತು, ಹಾಲು ತುಂಬಿತು, ಕಾಳು ಆಯಿತು'[೪೫]. ಹೀಗೆ ಪಂಜೆಮಂಗೇಶರಾಯರು ಮಕ್ಕಳಿಗೆ ಅಕ್ಕಿ ತಯಾರಿಸುವ ವಿವಿಧ ಹಂತಗಳನ್ನು ತಿಳಿಸುತ್ತ ಮುಂದೆ ಹಿಟ್ಟು ಬೀಸಿ ದೋಸೆ ಮಾಡುವ ಹಂತಕ್ಕೆ ಬಂದು ತಲುಪುತ್ತಾರೆ. ಆಗ ಘಮ ಘಮಿಸುವ ದೊಸೆಯನ್ನು ಕಂಡು ಮಕ್ಕಳ ಬಾಯಲ್ಲಿ ನೀರು ಬರುತ್ತವೆ. ಈ ಕಾಯಕವನ್ನು ದುಗ್ಗುವಿನ ಕೈಯಿಂದ ಮಾಡಿಸಿರುವುದು ರೋಚಕವಾದುದು. ದುಂಡಾದ ದೋಸೆ ಕಣ್ಣಿಗೆ ಕಟ್ಟುವಂತೆ ಮಾಡಿರುವುದಲ್ಲದೆ, 'ಚುರ್' ಎನ್ನುವ ಶಬ್ದ ಮಕ್ಕಳಿಗೆ ರೋಮಾಂಚನ ಮೂಡಿಸಿದೆ.

ಪಂಜೆಮಂಗೇಶರಾಯರ ಈ ಕಥೆ ತಾತ್ವಿಕವಾಗಿ ಗಮನಿಸಿದರೆ ಭತ್ತದ ಕಾಳು ಗದ್ದೆಯಲ್ಲಿ ಬಿತ್ತುವುದು, ಭತ್ತ ಮೊಳೆತು ಬೆಳೆಯಾಗುವುದು. ತೆನೆಯಾಗಿ, ಹಾಲು ತುಂಬಿ ಕಾಳಾಗುವುದು, ತೆನೆ ಕೊಯ್ದು, ಭತ್ತ ಬಡಿದು ಉದುರಿಸಿ, ಭತ್ತ ಒಣಗಿಸುವುದು. ಅಕ್ಕಿ ಬೀಸಿ, ಕಲಿಸಿ, ದೋಸೆ ತಯಾರಿಸುವ ಸಂಪೂರ್ಣ ವಿವರವನ್ನು 'ಅಂಗಳ ದುಗ್ಗು'ವಿನ ಮೂಲಕ ತಿಳಿಸುತ್ತಾರೆ. ಸರಳ ವಾಕ್ಯಗಳಿಂದ ಕೂಡಿದ ಕಥೆ ಮಕ್ಕಳಲ್ಲಿ ಆಸಕ್ತಿ ಮೂಡಿಸಿದೆ. ಕಾಗೆ, ಗಿಳಿ, ಗುಬ್ಬಚ್ಚಿಗಳು ಕೆಲಸ ಮಾಡದೆ ಸೋಮಾರಿಯಾಗಿ ಕಂಡರೆ, ಕೋಳಿಯ ಕ್ರಿಯಾಶೀಲತೆ, ಕಾಯಕ ನಿಷ್ಠೆ ಮಕ್ಕಳಿಗೆ ಮಾದರಿಯಾಗಿದೆ. ಕಷ್ಟಪಟ್ಟರೆ ಫಲವಿದೆ. ದುಡಿದು ತಿನ್ನುವ ಕೋಳಿ ಆದರ್ಶಕ್ಕೆ ನಿದರ್ಶನವಾಗಿದೆ. ಸೋಮಾರಿಗೆ ಸೊನ್ನೆ, ದುಡಿತಕ್ಕೆ ಫಲ ಎನ್ನುವ ತತ್ವ ಇಲ್ಲಿ ಅಭಿವ್ಯಕ್ತಗೊಂಡಿದೆ.

ತಟಪಟ ಹನಿಯಪ್ಪ :

ಪ್ರಮುಖವಾಗಿ ಇದೊಂದು ನೀತಿ ಕಥೆಯಾಗಿದೆ. ಒಂದು ಊರಿನಲ್ಲಿ ಒಬ್ಬ ಬಡ ಮುದುಕಿ ತನ್ನ ಮಗನೊಂದಿಗೆ ವಾಸವಾಗಿದ್ದಳು. ಮಗ ವ್ಯಾಪಾರಕ್ಕೆಂದು ಪರ ಊರಿಗೆ ಹೋಗಿ ಬರುತ್ತಿದ್ದನು. ಇದು ಆತನ ಕಾಯಕವಾಗಿತ್ತು. ಒಂದು ದಿವಸ ಮಗ ಮರಳಿ ಬಾರದೇ ಇದ್ದಾಗ ಮುದುಕಿ ಮನೆಯ ಬಾಗಿಲು ಮುಚ್ಚಿ ಮಲಗುತ್ತಾಳೆ. ಆಗ ಜೋರಾಗಿ ಗಾಳಿ ಬೀಸಿ ಮಳೆ ಬರುವುದು. ಮಳೆಯಿಂದ ಮನೆ ಕುಸಿದು ನೀರು

ಸೋರಲು ಪ್ರಾರಂಭಿಸುವುದು. 'ತಟಪಟ ಹನಿಯಪ್ಪಾ ಏನು ರಗಳೆ? ಈ ಕೆಟ್ಟ ಮಳೆಯು ಯಾವಾಗ ನಿಂತಿತು?' ಎಂದು ಮುದುಕಿ ತೆಗಳುತ್ತ ಬೀಳುತ್ತಿದ್ದ ಹನಿಗಳಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಆಗ ಅಲ್ಲಿಗೆ ಒಂದು ಹುಲಿ ಬರುತ್ತದೆ. ಆಗ ಮುದುಕಿ ಹೆದರದೆ ಜೋರಾಗಿ ಗದರಿಸುತ್ತಾಳೆ. ಪಂಜೆಯವರು ಇಲ್ಲಿ ಮಳೆಯನ್ನು ಒಂದು ಪಾತ್ರವನ್ನಾಗಿ ನಿರೂಪಿಸಿದಂತೆ ಕಾಣುತ್ತದೆ. ಕರಡಿ, ನರಿ, ಹುಲಿಗಳಿಗೆ ಯುಕ್ತಿಯ ಮೂಲಕ ಅಗಸನು ಚಳ್ಳೆಹಣ್ಣು ತಿನಿಸಿದರೆ, ಮುದುಕಿ ಬಂದ ಆಪತ್ತನ್ನು ಧೈರ್ಯದಿಂದ ಉಪಾಯ ಮಾಡಿ ರಕ್ಷಿಸಿಕೊಳ್ಳುತ್ತಾಳೆ. ಆಪತ್ತು ಬಂದಾಗ ಧೈರ್ಯದಿಂದ ಇದ್ದರೆ ಎಂಥ ಕ್ರೂರ ಪ್ರಾಣಿಗಳಿಂದಲೂ ತಪ್ಪಿಸಿಕೊಳ್ಳಬಹುದೆಂಬುದು ಇಲ್ಲಿಯ ತಾತ್ವಿಕ ಅಭಿವ್ಯಕ್ತಿಯಾಗಿದೆ. ಹುಲಿ, ಕರಡಿ, ನರಿಗಳಂಥ ಶಕ್ತಿಶಾಲಿ ಪ್ರಾಣಿಗಳು ಮುದುಕಿಯ ಮಾತಿಗೆ, ಅಗಸನ ಯುಕ್ತಿಗೆ ಓಡಿ ಹೋಗುತ್ತವೆ. 'ಶಕ್ತಿಗಿಂತ ಯುಕ್ತಿ ಮೇಲು' ಎಂಬ ಗಾದೆ ಮಾತಿನಂತೆ ಕಥೆ ಅಭಿವ್ಯಕ್ತಗೊಂಡಿದೆ.

ಸೋಮಾರಿ ಮಲ್ಲ :

ಹೆಸರಿಗೆ ತಕ್ಕ ಹಾಗೆ ಸೋಮಾರಿತನದ ಗುಣವುಳ್ಳವನು ಮಲ್ಲ. ಹೀಗಾಗಿ ಸೋಮಾರಿ ಮಲ್ಲನೆಂಬ ಹೆಸರು ಪಡೆದಿರಬಹುದು. ಎರಡೂರಿನ ಪಟೇಲನ ಮನೆಯ ಆಳು ಈ ಸೋಮಾರಿ ಮಲ್ಲ. ಇವನು ಯಾವ ಕೆಲಸವನ್ನು ಮಾಡದ ಮೈಗಳ್ಳನು. ಯಾವ ಕೆಲಸ ಹೇಳಿದರೂ ಸುಳ್ಳು ನೆಪ ಹೇಳಿ ತಪ್ಪಿಸಿಕೊಳ್ಳುವನು. 'ಊಟಕ್ಕೆ ಕರೆದರೆ ಎಲ್ಲರಿಗಿಂತ ಮೊದಲು ಬಂದು ಕುಳಿತುಕೊಳ್ಳುವನು'. ಇದು ಮಲ್ಲನ ಪ್ರಮುಖ ಲಕ್ಷಣ ಪಟೇಲನ ಹೆಂಡತಿ ಮಲ್ಲನನ್ನು ಎಬ್ಬಿಸಿ ಮುಸುರೆ ತೊಳೆಯಲು, ಭತ್ತ ಕುಟ್ಟಲು, ತರಕಾರಿ ಹೆಚ್ಚಲು, ಎಣ್ಣೆ ತರಲು, ಹಾಲು ಕರೆಯಲು, ಹೀಗೆ ಹಲವು ಕೆಲಸಗಳನ್ನು ಹೇಳಿದರೂ ಕುಳಿತ ಸ್ಥಳದಿಂದ ಏಳದವನು. ಸೋಮಾರಿತನದಿಂದ ಕುಂಟು ನೆಪ ಹೇಳುತ್ತಾನೆ. ಇವನ ವರ್ತನೆಯನ್ನು ಕಂಡು ಪಟೇಲನ ಹೆಂಡತಿ ಮಲ್ಲನಿಗೆ ಬುದ್ಧಿ ಕಲಿಸಬೇಕೆಂದು ಯೋಚಿಸುತ್ತಾಳೆ. ಎಳೆ ಮೆಣಸುಗಳನ್ನು ಪುಡಿಮಾಡಿ ಪಲ್ಯದಲ್ಲಿ ಬೆರೆಸುವಳು. ಬಿಸಿ ಪಲ್ಯವನ್ನು ಅನ್ನದ ಮೇಲೆ ಹಾಕುತ್ತಾಳೆ. 'ಮಲ್ಲನ ಮೂಗಿಗೆ ಪಲ್ಯದ ಒಗ್ಗರಣೆಯ ಪರಿಮಳವು ಚೆನ್ನಾಗಿ ಆವರಿಸಿತ್ತು. ಹೊಟ್ಟೆ ತುಂಬಾ ಊಟ ಮಾಡಬೇಕೆಂದು ಆಲೋಚಿಸಿದನು. ಅನ್ನವನ್ನು ಪಲ್ಯದೊಂದಿಗೆ ಕಲಿಸಿದನು. ಒಂದು ತುತ್ತನ್ನು ಬಾಯೊಳಗೆ ಹಾಕಿಕೊಂಡನು. ಎಳೆ ಮೆಣಸಿನ ಖಾರವು ಹೆಚ್ಚಾಗಿ ಉರಿಯತೊಡಗಿತು. ಕಣ್ಣುಗಳಿಂದಲೂ ಮೂಗಿನಿಂದಲೂ ನೀರು ಸುರಿಯತೊಡಗಿತು. ಒಂದರ ಹಿಂದೆ ಒಂದು ತೇಗು ಬರಲು ಆರಂಭಿಸಿತು. ಅಮ್ಮಾ ಒಂದಿಷ್ಟು ನೀರು ಕೊಡಿ ಎಂದು ಮಲ್ಲ ಕೂಗಿ ಕರೆದನು'[೪೬].

ಆಗ ಪಟೇಲನ ಹೆಂಡತಿ ಬಿಸಿ ನೀರನ್ನು ಕೊಡುತ್ತಾಳೆ. ಅವಸರದಿಂದ ಬಿಸಿ ನೀರು ಕುಡಿದ ಮಲ್ಲ, ಅಯ್ಯೋ ಸತ್ತೆ ಎಂದು ಗೊಣಗುತ್ತಾನೆ. ನಂತರ ಮಲ್ಲನಿಗೆ ಮನೆಯಿಂದ ಹೊರ ಹಾಕುವರು. ಕೆಲಸವಿಲ್ಲದೆ ಊರೂರು ತಿರುಗಾಡಬೇಕಾಗುತ್ತದೆ.

'ಸೋಮಾರಿ, ಮಲ್ಲಾ
ಕೆಲಸಕ್ಕೆ ಸಲ್ಲಾ
ಹೊಟ್ಟೆಗೆ ಇಲ್ಲಾ
ಕಥೆ ಕೇಳಿ ಎಲ್ಲಾ'

ಪ್ರತಿಯೊಬ್ಬ ವ್ಯಕ್ತಿಯು ಪ್ರಯತ್ನದಿಂದ ಕಷ್ಟಪಟ್ಟು ದುಡಿದರೆ ಹೊಟ್ಟೆ ತುಂಬುವುದು. ಸೋಮಾರಿತನದಿಂದ ಊಟಕ್ಕೂ ಗತಿಯಿಲ್ಲವಾಗುತ್ತದೆ. ಹಲವಾರು ಜನರಿಂದ ಅಪಹಾಸ್ಯಕ್ಕೆ ಗುರಿಯಾಗಬೇಕಾಗುವುದು ಎಂಬುದು ಕಥೆಯಲ್ಲಿ ವ್ಯಕ್ತವಾಗುತ್ತದೆ. ಇದು ಗದ್ಯ-ಪದ್ಯಗಳಿಂದ ಕೂಡಿರುವ ಕಥೆ ಮಕ್ಕಳಿಗೆ ಕುತೂಹಲ. ಕೆರಳಿಸಿ ರಂಜನೆವುಂಟು ಮಾಡುವಲ್ಲಿ ಸಫಲತೆ ಹೊಂದಿದೆ.

ಬೆಕ್ಕಿನ ಬಿಡಾರ ಬೇರೆ :

ಮಕ್ಕಳಿಗಾಗಿಯೇ ಬರೆದ ವಿಶೇಷ ಕಥೆ ಎಂದರೆ ತಪ್ಪಾಗದು. ಇದು ಸಚಿತ್ರ ಪುಸ್ತಕ. ಈ ಕಥೆ ೧೯೫೭ರಲ್ಲಿ ಮಂಗಳೂರಿನ ಬಾಲಸಾಹಿತ್ಯ ಮಂಡಳಿಯ ಮೂಲಕ ಪ್ರಕಟವಾದುದು. ಅನಾಗರಿಕ ಬದುಕಿನ ಹಲವು ಪ್ರಸಂಗಗಳನ್ನು ಈ ಕಥೆ ಅಭಿವ್ಯಕ್ತಗೊಳಿಸುತ್ತದೆ. 'ಅನೇಕ ಸಾವಿರ ವರುಷಗಳ ಹಿಂದೆ ಎಲ್ಲವೂ ಕಾಡಾಗಿತ್ತು. ಯಾವ ಗಿಡವೇ ಆಗಲಿ, ಪ್ರಾಣಿಯೇ ಆಗಲಿ ಸಾಧುವಾಗಿರಲಿಲ್ಲ' ಎಲ್ಲವೂ ಕಾಡು ಗುಣದವು. ಗಿಡ-ಮರಗಳು ಕಾಡು, ಎಲೆ ಚಿಗುರುಗಳು ಕಾಡು, ಹಣ್ಣು ಹಂಪಲಗಳು ಕಾಡು, ಗೆಡ್ಡೆ ಗೆಣಸುಗಳು ಕಾಡು, ಎಲ್ಲವೂ ಕಾಡು. ಆಡು, ಕುರಿಗಳು, ದನಕರುಗಳು, ಕತ್ತೆ-ಕುದುರೆಗಳು, ಬೆಕ್ಕು-ನಾಯಿಗಳು ಎಲ್ಲವೂ ಕಾಡಾಗಿದ್ದವು. ಮನುಷ್ಯರೂ ಕಾಡು ಮನುಷ್ಯರೇ ಆಗಿದ್ದರು. ಅದರಲ್ಲೂ ಗಂಡಸರು ಬಲು ಕಾಡು ಸ್ವಭಾವದವರಾಗಿದ್ದರು'[೪೭]. ಈ ರೀತಿಯಾದ ಕಾಡಿನಲ್ಲಿ ಕಾಡು ಪ್ರಾಣಿಗಳ ಮಧ್ಯೆ ಒಬ್ಬ ಕಾಡು ಮನುಷ್ಯ ಇದ್ದನು. ಅವನ ದಿನಚರಿ ಹೀಗಿತ್ತು. 'ಅವನು ಕಂಡಲ್ಲಿ ಅಲೆದು, ಅಲೆದಲ್ಲಿ ಬೇಟೆಯಾಡಿ, ಬೇಟೆಯಾಡಿದ್ದನ್ನು ತಿನ್ನುತ್ತಿದ್ದನು. ನಿದ್ದೆ ಬಂದಲ್ಲಿ ಮಲಗುವನು. ನೀರು ದೊರೆತಲ್ಲಿ ಕುಡಿಯುವನು, ಹಸಿವಾದಲ್ಲಿ ತಿನ್ನುವನು. ಆಗ ಮನೆ-ಮಠಗಳಿರಲಿಲ್ಲ. ಕೆಲವು ವೇಳೆ ಇವನು ಗವಿಗಳ ಒಳಗೂ, ಕೆಲವು ವೇಳೆ ಕೊಂಬೆಗಳ ಮೇಲೂ ಇರುತ್ತಿದ್ದನು. ಇವನು ದೊಡ್ಡ ತರಗೆಲೆಗಳನ್ನು ಹೆಣೆದು ಸೊಂಟಕ್ಕೆ ಸುತ್ತಿಕೊಳ್ಳುವನು. ಬೇಟೆಯಾಡುವುದೇ ಇವನ ಕೆಲಸ. ಪ್ರಾಣಿಗಳೇ ಇವನ ಆಹಾರ'[೪೮].

ಪಂಜೆಮಂಗೇಶರಾಯರಿಗೆ ಕಥೆಗಳ ಮೂಲಕ ಶಿಕ್ಷಣವನ್ನು ನೀಡುವ ಉದ್ದೇಶವಿರುವುದು ಸ್ಪಷ್ಟವಾಗುತ್ತದೆ. ಕಥೆಯ ಮೂಲಕ ಭಾಷೆಯನ್ನು ಪರಿಚಯಿಸುವುದು. ಭಾಷೆ ಮತ್ತು ಶಿಕ್ಷಣಗಳು ಒಂದಕ್ಕೊಂದು ಪೂರಕವೆನ್ನುವುದು, ಪದಗಳ ಬಳಕೆ, ವಾಕ್ಯ ರಚನೆ, ಕಾಲ, ಲಿಂಗ, ವಚನಗಳ ಪರಿಚಯ ಮಾಡುವುದರೊಂದಿಗೆ ಮಕ್ಕಳ ಕಥೆಗಳಲ್ಲಿ ಹೊಸ ಹೊಳವುಗಳ ವಿಚಾರಗಳನ್ನು, ವಿಷಯಗಳನ್ನು ಪಂಜೆಯವರು ಕಟ್ಟಿಕೊಟ್ಟಿದ್ದಾರೆ.

ಹೆಂಗಸೊಬ್ಬಳು ಪುರುಷನ ಜೊತೆಗಿದ್ದರೆ ಎಲ್ಲವೂ ಹೇಗೆ ವ್ಯವಸ್ಥಿತವಾಗಿ ರೂಪುಗೊಳ್ಳುತ್ತವೆ ಎನ್ನುವುದಕ್ಕೆ ಈ ಕಥೆಯೇ ನಿದರ್ಶನ. ಆ ಕಾಲದಲ್ಲಿಯೂ ಸಹ ಅವಳ ಚೊಕ್ಕತನ, ಸಿಸ್ತು–ಸ್ವಚ್ಛತೆಗಳು ಸಹಜವಾಗಿರುವುದು ಇಲ್ಲಿ ಕಥೆ ಒಳಗೊಂಡಿದೆ. ನಾಯಿ, ಕುದುರೆ, ಹಸು, ಬೆಕ್ಕು ಮುಂತಾದ ಪ್ರಾಣಿಗಳನ್ನು ಬಳಸಿಕೊಂಡು ಬದುಕನ್ನು ಸುಂದರವಾಗಿಟ್ಟುಕೊಳ್ಳುವ ಪ್ರಯತ್ನ ಇಲ್ಲಿಯ ಪ್ರಧಾನ ಗುರಿಯಾಗಿದೆ. ಹಾಗೆಯೇ ಬದುಕು ಆನಂದಮಯವಾಗಿ ಇರಿಸಿಕೊಳ್ಳುವ ಕಲಿಕೆಯೂ ಇಲ್ಲಿ ಕಂಡುಬರುತ್ತದೆ.

ಅಜ್ಜಿ ಸಾಕಿದ ಮಗು :

ಪಂಜೆಮಂಗೇಶರಾಯರು ವ್ಯಕ್ತಪಡಿಸುವ ಕಥೆಗಳ ವಿಷಯ ಮತ್ತು ಶೀರ್ಷಿಕೆಗಳು ಮೊದಲು ಆಕರ್ಷಣೆ ಮಾಡುತ್ತವೆ. ಅಂಥ ಕಥೆಗಳಲ್ಲಿ ಇದು ಒಂದು. ಮಲೆನಾಡಿನ ಹಳ್ಳಿಯಲ್ಲಿ ಒಬ್ಬ ಮುದುಕಿ ಮೊಮ್ಮಗನೊಂದಿಗೆ ವಾಸವಾಗಿದ್ದಳು. ಹಿರಿಯರು ಮಾಡಿದ ಆಸ್ತಿ ಅವಳಿಗೆ ಬಂದಿತ್ತು. ಇದರಿಂದ ಜೀವನ ಸಾಗಿಸುತ್ತಿದ್ದಳು. ಮೊಮ್ಮಗನು ಯಾವ ಕೆಲಸವನ್ನು ಮಾಡದೆ ಉಂಡು ತಿರುಗಾಡುತ್ತಿದ್ದನು. ಹೀಗಾಗಿ 'ಹೆಡ್ಡ' ಎನಿಸಿಕೊಂಡು ಬೆಳೆಯುತ್ತಾನೆ. ಮೊಮ್ಮಗನ ಬದುಕು ಸುಂದರಗೊಳ್ಳಲಿ ಎಂಬ ಸದಾಶಯದಿಂದ ಮುದುಕಿ ಅವನಿಗೆ, 'ಹೆಚ್ಚು ಮಾತನಾಡುವ ಕೆಟ್ಟವರಲ್ಲಿ ನಿಲ್ಲಬೇಡ, ಮಾತನಾಡದೇ ಕೆಲಸ ಮಾಡುವವರನ್ನು ಸೇರಿಕೊ ಎಂಬ ಬುದ್ಧಿಯ ಮಾತುಗಳನ್ನು ಹೇಳಿ ಕಳುಹಿಸುತ್ತಾಳೆ. ಊರಿನ ಶ್ರೀಮಂತರ ಮನೆಗೆ ಹೋಗಿ ಕೆಲಸ ಕೇಳಿದಾಗ ಅವರ ಪ್ರಶ್ನೆಗಳಿಂದ ಅವರು ಧನಿಗಳಾಗಲು ಯೋಗ್ಯರಲ್ಲ ಎಂದು ತಿಳಿದು ಕಾಡಿಗೆ ಹೋಗುತ್ತಾನೆ. ಅಲ್ಲಿ ಓತಿಯೊಂದು ತಲೆ ಅಲ್ಲಾಡಿಸುವುದನ್ನು ನೋಡುತ್ತಾನೆ. ಅದೇ ಧನಿಯೆಂದು ಅದನ್ನು ಹಿಂಬಾಲಿಸುವನು. ಅದು ಬಿಲವನ್ನು ಸೇರಿದಾಗ ಕೋಲಿನಿಂದ ಬಿಲವನ್ನು ಅಗಿಯುತ್ತಾನೆ. ಅಲ್ಲಿ ಅವನಿಗೆ ಕೊಪ್ಪರಿಗೆ ಸಿಗುತ್ತದೆ. ಅದೇ ಸಂಬಳವೆಂದು ತಿಳಿದು ಕೊಪ್ಪರಿಗೆಯನ್ನು ಹೊತ್ತುಕೊಂಡು ಹೊಳೆದಾಟುವಾಗ ಎಡವಿ ಬೀಳುತ್ತಾನೆ. ಕೊಪ್ಪರಿಗೆ ಒಡೆದು ನಾಣ್ಯಗಳು ನೀರಿನಲ್ಲಿ ಬೀಳುತ್ತವೆ. ಕಲ್ಲಿನ ಮೇಲೆ ಉಳಿದ ಎರಡು ನಾಣ್ಯಗಳನ್ನು ಹಿಡಿದುಕೊಂಡು ಮನೆಗೆ ಬರುತ್ತಾನೆ. ಆ ತಂದ ನಾಣ್ಯಗಳನ್ನು ಅಜ್ಜಿಗೆ ಕೊಟ್ಟು ಎಲ್ಲ ವಿಷಯವನ್ನು ತಿಳಿಸುತ್ತಾನೆ. ಅಜ್ಜಿ ಅಲ್ಲಿಗೆ ಬಂದು ಬಿದ್ದಿದ್ದ ಚಿನ್ನದ ನಾಣ್ಯಗಳನ್ನು ಆಯ್ದುಕೊಂಡು ಯಾರಿಗೂ ಹೇಳಬೇಡ ಎಂದು ಮನೆಗೆ ಬರುತ್ತಾಳೆ. ಹೀಗೆ ಹೆಡ್ಡ ಮೊಮ್ಮಗನು ಅನೇಕ ಆವಾಂತರಗಳನ್ನು ಮಾಡುವುದು ಕಥೆ ಒಳಗೊಂಡಿದೆ. 'ಹುಟ್ಟುಗುಣ ಗಟ್ಟ ಹತ್ತಿದರೂ ಹೋಗದು' ಎಂಬ ಗಾದೆ ಮಾತಿನಂತೆ ಇಡೀ ಕಥೆ ರಂಜನೀಯ ಸಂಗತಿಗಳಿಂದ ಮಕ್ಕಳನ್ನು ಹಾಸ್ಯದಲ್ಲಿ ಮುಳುಗಿಸುತ್ತದೆ.

ಗೋವಿಂದಾ; ಗೋವಿಂದಾ :

ಪಂಜೆಮಂಗೇಶರಾಯರು ಈ ಕಥೆಯಲ್ಲಿ ಮುಖ್ಯವಾಗಿ ದೃಢಮನಸ್ಸು ಹೊಂದಿ ಶ್ರದ್ಧೆಯಿಂದ ದುಡಿದರೆ ಯಶಸ್ಸು ಲಭಿಸುವುದು ಎನ್ನುವ ಸಂಗತಿಯನ್ನು

ಅಭಿವ್ಯಕ್ತಗೊಳಿಸಿದ್ದಾರೆ. 'ಹಳ್ಳಿಯ ಇಬ್ಬರು ರೈತರು ತಿರುಪತಿ ದರ್ಶನಕ್ಕೆ ಹೊರಡುತ್ತಾರೆ. ಅವರಲ್ಲಿ ಒಬ್ಬನು ಎಲ್ಲ ಯೋಚನೆಗಳನ್ನು ಬಿಟ್ಟು ಕೇವಲ ತಿರುಪತಿ ತಿಮ್ಮಪ್ಪನನ್ನು ಕುರಿತು ಯೋಚಿಸುತ್ತಿರುತ್ತಾನೆ. ಇನ್ನೊಬ್ಬನು ಮಳೆಗಾಲ ಬಂತು, ಮನೆ ಮಾಡಿಗೆ ಹುಲ್ಲು ಹಾಸಿಲ್ಲ, ಅಕ್ಕಿಯನ್ನು ಮಕ್ಕಳು ಸರಿಯಾಗಿ ಮುಡಿಕಟ್ಟಿ ಕಾಪಾಡುವರೋ ಇಲ್ಲವೋ ಎಂದು ಚಿಂತಿಸುತ್ತಿರುತ್ತಾನೆ. ದಾರಿಯ ಮಧ್ಯದಲ್ಲಿ ಹೋಗುವಾಗ ಮೊದಲನೆಯವನಿಗೆ ಬಾಯಾರಿಕೆಯಾಗುತ್ತದೆ. ಜೊತೆಗಾರನಿಗೆ ಸ್ವಲ್ಪ ನಿಲ್ಲಲು ಹೇಳಿ, ಹತ್ತಿರದಲ್ಲಿರುವ ಒಂದು ಮನೆಗೆ ಹೋಗುತ್ತಾನೆ. ಆ ಮನೆಯಲ್ಲಿ ನಾಲ್ಕೈದು ಜನ ಅಶಕ್ತರೂ, ಅಸ್ವಸ್ಥರೂ ಆಗಿರುವುದನ್ನು ಕಾಣುತ್ತಾನೆ. ಅವರ ಆರೈಕೆಯಲ್ಲಿ ತೊಡಗುತ್ತಾನೆ. ಸಮಯ ಕಳೆದುದರ ಅರಿವು ಅವನಿಗೆ ಆಗುವುದಿಲ್ಲ. ಅತ್ತ ಇವನ ಜೊತೆಗಾರ ಕಾಯ್ದು ಕಾಯ್ದು ಸಾಕಾಗಿ ಮುಂದೆ ಪ್ರಯಾಣ ಬೆಳೆಸುತ್ತಾನೆ. ದಾರಿಯಲ್ಲಿ ಎಲಿಯೂ ಅವನು ತನ್ನ ಜೊತೆಗಾರರನ್ನು ಕಾಣಲಿಲ್ಲವಾದರೂ ಗೋವಿಂದಾ; ಗೋವಿಂದಾ ಎಂದು ಕೂಗಿ ತಿರುಪತಿ ಬೆಟ್ಟ ಹತ್ತುತ್ತಿರುವಾಗ ತನ್ನ ಮುಂದುಗಡೆ ದೂರದಲ್ಲಿ ತನ್ನ ಜೊತೆಗಾರನ ಬೊಕ್ಕ ತಲೆ ಕಾಣಿಸುತ್ತದೆ. ಎಷ್ಟು ಪ್ರಯತ್ನಿಸಿದರೂ ಅವನ ಬೆನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಎರಡನೆಯವನಿಗೆ ತನ್ನ ಜೊತೆಗಾರನನ್ನು ಎಷ್ಟು ಹುಡುಕಿದರೂ ಸಿಗುವುದಿಲ್ಲ. ಅವನು ಜೊತೆಗಾರನಿಲ್ಲದೆ ಹಳ್ಳಿಗೆ ಮರಳುತ್ತಾನೆ. ಆದರೆ ಅವನ ಜೊತೆಗಾರನು ಜಾತ್ರೆಗೆ ಹೋಗುವುದನ್ನು ಬಿಟ್ಟು ಆ ಮನೆಯ ವೃದ್ಧರನ್ನು, ಅಸ್ವಸ್ಥರನ್ನು ಆರೈಕೆ ಮಾಡಿ, ಅವರೆಲ್ಲ ಸ್ವಸ್ಥರಾದ ಬಳಿಕ ಮನೆಗೆ ಮರಳುತ್ತಾನೆ. ಇಬ್ಬರೂ ತಮ್ಮ-ತಮ್ಮ ಅನುಭವಗಳನ್ನು ಹಂಚಿಕೊಳ್ಳುವರು. ಒಟ್ಟು ಕಥೆಯಲ್ಲಿ ದೇವರಿಗೆ ಆಡಂಬರದ ಯಾತ್ರೆಗಿಂತ ವೃದ್ಧರ, ಅಸ್ವಸ್ಥರ ಸೇವೆಯೇ ಮುಖ್ಯ ಎಂಬುದು. ಇಲ್ಲಿ ತಾತ್ವಿಕವಾಗಿ ವ್ಯಕ್ತಗೊಂಡಿರುವುದು ಕಂಡು ಬರುತ್ತದೆ.

ಪಂಜೆಮಂಗೇಶರಾಯರು ಯಾವುದೇ ನೀತಿಯಿರಲಿ, ತತ್ವವಿರಲಿ ನೇರವಾಗಿ ಹೇಳುವುದಿಲ್ಲ. ಇಲ್ಲಿ ದೇವರ ದರ್ಶನಕ್ಕಿಂತ ಮಿಗಿಲಾದುದು ವೃದ್ಧರ, ಅಸಾಯಕರ ಸೇವೆ ಎಂಬುದನ್ನು ಮಕ್ಕಳಿಗೆ ತಿಳಿಸುತ್ತಾರೆ. ಮಕ್ಕಳಲ್ಲಿ ಈ ಹೊತ್ತು ಸೇವಾ ಮನೋಭಾವನೆಗಳು, ಶ್ರದ್ಧೆ, ನಿಷ್ಠೆ ಮೊದಲಾದ ಮೌಲ್ಯಗಳು ಪ್ರಸ್ತುತವೆನಿಸುತ್ತವೆ. ಒಟ್ಟನಲ್ಲಿ ಪಂಜೆಮಂಗೇಶರಾಯರು ಕೊಟ್ಟ ಮಕ್ಕಳ ಕಥೆಗಳು ಗಮನ ಸೆಳೆಯುತ್ತವೆ. ಕಥೆಯ ವಿಧಾನ, ಪದಗಳ ಬಳಕೆ, ವಾಕ್ಯಗಳ ಪುನರಾವರ್ತನೆ, ದಿನನಿತ್ಯದ ಚಟುವಟಿಕೆಗಳು, ವಸ್ತುಗಳ, ಪ್ರಾಣಿಗಳ ಪರಿಚಯ, ಮನೆಯ ಸದಸ್ಯರ ಸಂಬಂಧಗಳ ಪರಿಚಯ ಹೀಗೆ ಹಲವು ಸಂಗತಿಗಳನ್ನು ಮಕ್ಕಳ ಕಥೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಪಂಜೆಯವರ ಮಕ್ಕಳ ಕಥೆಗಳನ್ನು ಇಡಿಯಾಗಿ ಗ್ರಹಿಸಿದಾಗ ಮಾತ್ರ ಅದರೊಳಗಿನ ವೈವಿಧ್ಯತೆ ಅಭಿವ್ಯಕ್ತಗೊಳ್ಳುತ್ತದೆ. ಪಂಜೆಯವರು 'ನೀತಿಗಾಗಿಯೇ ಕಥೆ ಎಂದು ಹೇಳುವ ಮನೋಧರ್ಮದವರಲ್ಲ. ಅವರು ಕಥೆಗಳನ್ನು ಬರೆದ ಉದ್ದೇಶ ಜನತೆಯ ಹೆಚ್ಚಿನ ಓದಿದಾಗಿ, ಜ್ಞಾನಕ್ಕಾಗಿ ಎಂದು

ತಿಳಿದವರು. ಕಥನ ಕುತೂಹಲ ಎಳೆಯ ಮಕ್ಕಳ ಜನ್ಮಜಾತ ಮನೋಧರ್ಮ. ಅದನ್ನು ಸಾರ್ಥಕಪಡಿಸಿಕೊಳ್ಳುವ ಕಲೆ ಕಥೆಗಳಲ್ಲಿವೆ. ಮಕ್ಕಳ ಸಾಹಿತ್ಯವನ್ನು ಅನುಭವಪೂರ್ವಕವಾಗಿ ಪಂಜೆಮಂಗೇಶರಾಯರು ರಚಿಸಿದವರು. ಪ್ರಾಚೀನ ಸಾಹಿತ್ಯದಲ್ಲಿ ಮಕ್ಕಳಿಗಾಗಿ ಪ್ರತ್ಯೇಕ ಸಾಹಿತ್ಯ ಪ್ರಕಾರವಿರಲಿಲ್ಲ. ಪಾಶ್ಚಾತ್ಯ ಬಾಲಸಾಹಿತ್ಯ ಪದ್ಧತಿಯನ್ನು ಅನುಸರಿಸಿ ಕನ್ನಡದ ಬಾಲಸಾಹಿತ್ಯ ಪ್ರಾರಂಭವಾಯಿತು'[೪೯].

ಪಂಜೆಮಂಗೇಶರಾಯರು ಅಧ್ಯಾಪಕರಾಗಿರುವುದರಿಂದ ಮಕ್ಕಳ ಸಾಹಿತ್ಯದ ಇತಿಮಿತಿಗಳನ್ನು, ಆಗು-ಹೋಗುಗಳನ್ನು ಬಲ್ಲವರು. ಮಕ್ಕಳ ಮನೋಭೂಮಿಕೆಗೆ ಅನುಗುಣವಾಗಿ ಸತ್ಯ, ಪ್ರಾಮಾಣಿಕತೆ, ನೀತಿ, ನಿಯಮ, ಆತ್ಮೀಯತೆ, ಸ್ನೇಹ ವಿಶ್ವಾಸ ಮೊದಲಾದ ಭಾವನೆಗಳನ್ನು ಅಭಿವ್ಯಕ್ತಗೊಳಿಸಿದವರು. ಮಕ್ಕಳಿಗೆ ಕಥೆ ಸುಖಾಂತ್ಯದಲ್ಲಿ ಕೊನೆಗೊಂಡರೆ ಸಂತಸ. ಇದು ಭಾರತೀಯ ಪರಂಪರೆಯ ನಿಲುವು ಈ ನೆಲೆಯಲ್ಲಿ ಪಂಜೆಯವರ ಸಾಹಿತ್ಯ ನಿಂತಿದೆ ಎನ್ನಬಹುದು.

'ದೇವುಡು ಅವರು ಮಕ್ಕಳಿಗಾಗಿ ರಚಿಸಿದ ವೇದದ ಕಥೆಗಳು, ಬುದ್ಧಿಯ ಕಥೆಗಳು, ದೇಶಾಂತರದ ಕಥೆಗಳು...... ಇವುಗಳನ್ನು ಓದಿದ ಖ್ಯಾತ ಕವಿ ಪಂಜೆಮಂಗೇಶರಾಯರು ಅವರನ್ನು ತಬ್ಬಿಕೊಂಡು ಕರ್ನಾಟಕದಲ್ಲಿ ಮಕ್ಕಳಿಗೆ ಬರೆಯುವವರು ಇಲ್ಲವಲ್ಲ ಎಂದು ಯೋಚಿಸುತ್ತಿದ್ದೆ. ನಿಮ್ಮ ಬುದ್ಧಿಯ ಕಥೆ ಕಂಡು 'ಉಸ್ಸಪ್ಪಾ' ಇನ್ನು ನಾನು ನಿರಾತಂಕವಾಗಿ ಸಾಯಬಹುದು ಎಂದುಕೊಂಡೆ ಎಂದರಂತೆ'. ಹೀಗೆ ಪಂಜೆಮಂಗೇಶರಾಯರು ತಮ್ಮ ನಂತರ ಮಕ್ಕಳಿಗಾಗಿ ಬರೆಯುವವರು ಇದ್ದಾರೆ ಎಂಬ ಸಮಾಧಾನ ವ್ಯಕ್ತಪಡಿಸಿರುವುದನ್ನು ನೋಡಿದರೆ ಮಕ್ಕಳ ಬಗ್ಗೆ ಅವರಿಗಿದ್ದ ಕಳಕಳಿ, ಪ್ರೀತಿ ಸ್ಪಷ್ಟವಾಗುತ್ತದೆ.

೫.೨ ದಿನಕರ ದೇಸಾಯಿ :

ನವೋದಯ ಸಾಹಿತ್ಯ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಹೆಚ್ಚಿನ ಗಮನ ಕೊಡಲಾಯಿತು. ಆದರೆ ಹಿರಿಯ ಸಾಹಿತಿಗಳು, ವಿಮರ್ಶಕರು, ಮಕ್ಕಳ ಸಾಹಿತ್ಯದ ಕಡೆಗೆ ಹೆಚ್ಚು ಗಮನ ನೀಡಲಿಲ್ಲವೆಂದು ಹೇಳಿದರೆ ತಪ್ಪಾಗದು ಮತ್ತು ಕೆಲವು ಸಮಯ ಅವಜ್ಞೆಗೆ ಗುರಿಯಾದುದು ಕಂಡುಬರುತ್ತದೆ. ಅದಕ್ಕೆ ಹಾಮಾನಾ ಅವರು ಹೀಗೆ ಹೇಳುತ್ತಾರೆ. 'ಮಕ್ಕಳ ಸಾಹಿತ್ಯ ಎಂದರೆ ಮಕ್ಕಳನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಮಕ್ಕಳಿಗಾಗಿಯೇ ರಚಿಸಿದ ಸಾಹಿತ್ಯ. ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ ಎಲ್ಲಾ ದೇಶಗಳ ಎಲ್ಲಾ ಭಾಷೆಗಳ ಅವಿಭಾಜ್ಯ ಅಂಗವಿದು'[೫೦]. ಮಕ್ಕಳ ಸಾಹಿತ್ಯ ತನ್ನದೆ ನೆಲೆಗಟ್ಟಿನ ಮೇಲೆ ಪ್ರಮುಖ ವಾಹಿನಿಯಾಗಿ ಬೆಳೆದುಬಂದಿದೆ. ಮತ್ತು ಹಲವರು ತಮ್ಮದೇ ಮಾರ್ಗವನ್ನು ಕಂಡುಕೊಂಡು ಸಾಹಿತ್ಯ ನಿರ್ಮಿಸಿದ್ದಾರೆ. ಅಂಥ ಮಹನಿಯರಲ್ಲಿ ಎಂ. ಎಸ್. ಪುಟ್ಟಣ್ಣ, ಪಂಜೆಮಂಗೇಶರಾಯರು, ಶಿವರಾಮ

ಕಾರಂತ್, ಎಸ್. ಜಿ. ನರಸಿಂಹಚಾರ್, ದಿನಕರ ದೇಸಾಯಿ, ಹೊಯ್ಸಳ, ಸಿದ್ದಯ್ಯ ಪುರಾಣಿಕ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ, ಜಿ. ಪಿ. ರಾಜರತ್ನಂ, ಪಳಕಳ ಸೀತಾರಾಮಭಟ್ಟ ಮೊದಲಾದವರು ಮಕ್ಕಳ ಸರ್ವರಂಗದ ಬೆಳವಣಿಗೆಗೆ ದುಡಿದು ಸಾಹಿತ್ಯ ರಚಿಸಿದ್ದಾರೆ.

'ಪಂಜೆಮಂಗೇಶರಾಯರು ಮತ್ತು ಕುವೆಂಪು ಅವರ ಗಮನದಲ್ಲಿದ್ದುದು ಒಂಭತ್ತು-ಹತ್ತು ವರ್ಷದವರು ಮಕ್ಕಳೆಂದು ಕಾಣುತ್ತದೆ. ಆದರೆ ಮುಂದೆ ಮಕ್ಕಳಿಗಾಗಿ ಬರೆದ ಹೊಯ್ಸಳ, ಜಿ. ಪಿ. ರಾಜರತ್ನಂ, ದಿನಕರ ದೇಸಾಯಿಯವರು ಹತ್ತು ವರ್ಷಕ್ಕೆ ಕೆಳಪಟ್ಟ ಎಳೆಯರನ್ನು ಗಮನದಲ್ಲಿಟ್ಟುಕೊಂಡಿದ್ದು ಸ್ಪಷ್ಟವಾಗಿ ಕಾಣುತ್ತದೆ. ಈ ಮೂವರೂ ಈ ಶತಮಾನದ ನಾಲ್ಕನೆಯ ದಶಕದಿಂದೀಚೆಗೆ ಹೆಚ್ಚಾಗಿ ಸಾಹಿತ್ಯ ನಿರ್ಮಿಸಿದರು. ವಿವಿಧ ಪ್ರಯೋಗಗಳನ್ನು ಮಾಡಿದರು'[೫೧] ಎಂಬ ಜಿ. ಗೋವಿಂದರಾಜು ಅವರ ಅಭಿಪ್ರಾಯ ಗಮನಾರ್ಹವಾದುದು. ದಿನಕರ ದೇಸಾಯಿಯವರು ಮಕ್ಕಳ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆ ಅಪಾರವಾದುದು. ಅವುಗಳಲ್ಲಿ ಪ್ರಮುಖ ಕೃತಿಗಳು -

೧) ರೈತರ ಹಾಡುಗಳು	೨) ಕವನ ಸಂಗ್ರಹ
೩) ಮಕ್ಕಳ ಗೀತೆಗಳು	೪) ಮಕ್ಕಳ ಪದ್ಯಗಳು
೫) ಹೂಗೊಂಚಲು	೬) ಮಕ್ಕಳಪದ್ಯ
೭) ದಿನಕರನ ಚೌಪದಿ	೮) ದಿನಕರಾಲಿ ಕವನಾಂ
೯) ದಾಸವಾಳ	೧೦) ಪ್ರಪಂಚದ ಕೆಲಸಗಾರ
೧೧) ನಾ ಕಂಡ ಪಡುವಣ	

ದಿನಕರ ದೇಸಾಯಿಯವರು ತಮ್ಮ ಮಕ್ಕಳ ಪದ್ಯಗಳಲ್ಲಿ ಮಕ್ಕಳಿಗೆ ಪ್ರಿಯವಾದ ಮತ್ತು ಪರಿಚಿತವಾಗಿರುವ ಪ್ರಾಣಿಗಳ ಕುರಿತಾದ ವಿವರಗಳನ್ನು, ವಿಶೇಷ ವ್ಯಕ್ತಿಗಳ ಕುರಿತು ಚಿತ್ರಗಳನ್ನು, ಅನೇಕ ವಸ್ತುಗಳ ಗುಣಲಕ್ಷಣಗಳನ್ನು ಮಕ್ಕಳ ಮನಸ್ಸಿಗೆ ಮುಟ್ಟುವ, ಮುದನೀಡುವ ರೀತಿಯಲ್ಲಿ ತಮ್ಮ ಕೃತಿಗಳು ಅಭಿವ್ಯಕ್ತಗೊಳಿಸಿದ್ದಾರೆ. ಮಕ್ಕಳ ಪದ್ಯಗಳ ರಚನೆಯಲ್ಲಿ ವಿಭಿನ್ನ ಪ್ರಯೋಗಗಳನ್ನು ಮಾಡಿದ ದಿನಕರ ದೇಸಾಯಿಯವರು ಮಕ್ಕಳ ಮನವನ್ನು ರಂಜಿಸುವ ಉದ್ದೇಶ ಪ್ರಧಾನವಾದುದು. ಮಕ್ಕಳಿಗಾಗಿ ಹಿರಿಯರು ತಮ್ಮದಾದ ದೃಷ್ಟಿಯಿಂದ ಮತ್ತು ಮನೋಭಾವನೆಗಳಿಗೆ ಅನುಗುಣವಾಗಿ ರಚಿಸಿದ ಕವನಗಳು ಅಪಾರ. ಆದರೆ ಮಕ್ಕಳ ಮನೋಭಾವನೆಗಳಿಗೆ ತಲುಪುವ ಕವಿತೆಗಳು ಅಪರೂಪ. ದಿನಕರ ದೇಸಾಯಿಯವರು ಮಕ್ಕಳ ಮನವನ್ನು ಅರಿತು ತಮ್ಮದೆ ವಿಭಿನ್ನತೆಗಳಿಂದ ಮಕ್ಕಳಿಗಾಗಿ ಕವಿತೆ ರಚಿಸಿದ್ದಾರೆ. ೧೯೫೦ರ ಸುಮಾರಿಗೆ ಮಕ್ಕಳ ಕವನಗಳು ಬಲು ವಿರಳ. ಈ ಸಮಯದಲ್ಲಿ ದೇಸಾಯಿಯವರು ಹೊಸತನದ ಶೈಲಿಯನ್ನು ಅಳವಡಿಸಿಕೊಂಡು ಮಕ್ಕಳಿಗೆ ಮನರಂಜನೆಯಾಗುವಂತಹ ಮತ್ತು ಬೋಧನಾ ಪ್ರಧಾನವಾದ ಕವಿತೆಗಳನ್ನು ರಚಿಸಿದರು. ಮಕ್ಕಳ ಕವನಗಳಿಗೆ ಬರವಿಲ್ಲವೆಂಬುದನ್ನು ತೋರಿಸಿಕೊಟ್ಟರು. ದಿನಕರ

ದೇಸಾಯಿಯವರು ಮಕ್ಕಳ ಕವಿತೆಗಳಲ್ಲಿ ಮೂಢನಂಬಿಕೆ, ಶೋಷಣೆ, ಆಶೆಬುರುಕತನ, ಅಹಂಕಾರ, ನೈತಿಕತೆ, ದುರಾಸೆ ಮೊದಲಾದ ಸಂಗತಿಗಳನ್ನು ವಿಡಂಬಿಸಿದ್ದಾರೆ. ಮಕ್ಕಳು ಸಂತಸಪಡುವ ಪ್ರಾಸಬದ್ಧ ಕವಿತೆಗಳು ಹಿರಿಯರಿಗೂ ಆನಂದಭರಿತರನ್ನಾಗಿ ಮಾಡಲು ಸಹಕಾರಿಯಾಗಿವೆ.

ದಿನಕರರು ಮಕ್ಕಳ ಪದ್ಯಗಳನ್ನು ಪ್ರಾಣಿಗಳು, ವ್ಯಕ್ತಿಗಳು, ವಸ್ತು ಚಿತ್ರಗಳು, ಕಲ್ಪನೆಯ ಸೌಂದರ್ಯ, ಊಟ ಮೊದಲಾದ ಸಂಗತಿಗಳಿಂದ ಕವಿತೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಅದೇ ರೀತಿಯಾಗಿ ಕವನಗಳಲ್ಲಿ ಕತೆಯ ಹಂದರ, ನೀತಿಯ ಪ್ರಧಾನತೆ, ಪ್ರಾಸಗಳಿಂದ ಕೂಡಿದ ನುಡಿಗಟ್ಟುಗಳನ್ನು ಮತ್ತು ಅನುಕರಣವಾಚಕಗಳನ್ನು ಬಳಸಿರುವುದು ಇವರ ವಿಶೇಷತೆ. ಮಕ್ಕಳಿಗಾಗಿ ದಿನಕರರು ಮೂರು ಕೃತಿಗಳನ್ನು ರಚಿಸಿರುವರು. ಅವುಗಳಲ್ಲಿ ಮಕ್ಕಳ ಗೀತೆಗಳು, ಮಕ್ಕಳ ಪದ್ಯಗಳು, ಮಕ್ಕಳ ಪದ್ಯ ಪ್ರಮುಖವಾದವು. ೧೯೮೦ರಲ್ಲಿ ಮೂರು ಕೃತಿಗಳಲ್ಲಿಯ ಒಟ್ಟು ಕವನಗಳನ್ನು ಸೇರಿಸಿ 'ಮಕ್ಕಳ ಪದ್ಯ'ವೆಂದು ಪ್ರಕಟಗೊಂಡಿತು. ಮಕ್ಕಳ ಕವಿತೆಗಳನ್ನು ಬರೆದ ದಿನಕರ ದೇಸಾಯಿಯವರು ಅವುಗಳ ವಿನ್ಯಾಸದ ಬಗ್ಗೆಯೂ ಕಾಳಜಿ ಹೊಂದಿರುವುದು ಕಂಡು ಬರುತ್ತದೆ. 'ಮಕ್ಕಳ ಕವನಗಳ ಜೊತೆಗೆ ಚಿತ್ರಗಳಿದ್ದರೆ ಬಹಳ ಉತ್ತಮ. ಆದರೆ ಚಿತ್ರಗಳೊಂದಿಗೆ ಮುದ್ರಣದ ಖರ್ಚು ಬೆಳೆದು ಪುಸ್ತಕದ ಬೆಲೆ ಇನ್ನೂ ಏರುತ್ತದೆ. ಇದು ಕನ್ನಡ ಮಕ್ಕಳ ದುರ್ದೈವ. ಇಂಥ ಕನ್ನಡ ಪುಸ್ತಕಗಳು ಸಾಕಷ್ಟು ಸಂಖ್ಯೆಯಲ್ಲಿ ಖರ್ಚಾಗದಿರುವುದೇ ಇದಕ್ಕೆ ಕಾರಣ'[೫೨] ಎಂದು ದಿನಕರ ದೇಸಾಯಿಯವರು ಮಕ್ಕಳನ್ನು ಕುರಿತಾದ ಪುಸ್ತಕ ಉದ್ಯಮದ ಸಮಸ್ಯೆಯನ್ನು ಗುರುತಿಸುತ್ತಾರೆ.

ಮಕ್ಕಳ ಕವಿತೆಗಳು ಸರಳವಾಗಿರಬೇಕು. ಮಕ್ಕಳಿಗೆ ತಿಳಿಯುವ ಸರಳ ಶಬ್ದಗಳ ಬಳಿಕ ಮಾಡಿರಬೇಕು. ಪ್ರಾಸದೊಂದಿಗೆ ಅನುಕರಣ ಪದಗಳು ಕೂಡಿರಬೇಕು. ಕವಿತೆ ದೀರ್ಘವಾಗಿರಬಾರದು. ಮಕ್ಕಳಿಗೆ ಪರಿಚಿತವಾದ ಪಕ್ಷಿ-ಪ್ರಾಣಿ, ವಸ್ತುಗಳು, ವ್ಯಕ್ತಿಗಳು ಕವಿತೆಗಳಲ್ಲಿದ್ದರೆ ಮಕ್ಕಳ ಮನಸ್ಸು ಆ ಕಡೆ ಹೊರಳಲು ಸಾಧ್ಯ. ಇಂಥ ಕವಿತೆಗಳು ಮಕ್ಕಳ ಮನದಲ್ಲಿ ಬಹು ಸಮಯದವರೆಗೆ ನಿಲ್ಲಲು ಸಾಧ್ಯವಾಗುತ್ತದೆ. ಭಾವೈಕ್ಯತೆ, ಆದರ್ಶ ಗುಣ, ಸಹಬಾಳುವೆ, ರಾಷ್ಟ್ರ ಅಭಿಮಾನ, ಮೊದಲಾದ ವಿಷಯಗಳನ್ನು ವಸ್ತುವಾಗಿರಿಸಿಕೊಂಡು ಮಕ್ಕಳ ಕವನ ರಚಿಸಬೇಕು ಎನ್ನುವ ಆಶಯ ದಿನಕರರದ್ದು, ಮಕ್ಕಳಿಗಾಗಿ ಕವಿತೆಗಳನ್ನು ರಚಿಸುವುದು ಸುಲಭದ ಕೆಲಸವಲ್ಲ. ಪ್ರೌಢ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯವನ್ನು ರಚಿಸಿರುವ ಕುವೆಂಪುರವರಂತೆ ದೇಸಾಯಿಯವರೂ ಸಹ ಶಿಶು ಸಾಹಿತ್ಯದೊಂದಿಗೆ ಪ್ರೌಢ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಮಕ್ಕಳ ಮನಸು ಮುದಗೊಳ್ಳುವ ರೀತಿ ಇವರ ಕವಿತೆಗಳ ಅಭಿವ್ಯಕ್ತಿ.

ಮಕ್ಕಳಿಗೆ ಪಕ್ಷಿ–ಪ್ರಾಣಿಗಳೆಂದರೆ ಬಲು ಪ್ರೀತಿ. ಪ್ರಾಣಿಗಳನ್ನು ಪಕ್ಷಿ ಸಂಕುಲವನ್ನು ಕುತೂಹಲದಿಂದ ನೋಡುವ ಆಶೆ ಮಕ್ಕಳಿಗೆ ಇರುವುದು ಸಹಜ. ದಿನಕರ ದೇಸಾಯಿಯವರು ತಮ್ಮ ಕವಿತೆಗಳಲ್ಲಿ ಮಂಗ, ಇಣಚಿ, ಕರಡಿ, ನಾಯಿ, ಎತ್ತು, ಪಾತರಗಿತ್ತಿ, ಗುಬ್ಬಿ, ಕಾಗೆ, ಗಿಳಿ ಮೊದಲಾದವುಗಳನ್ನು ವಸ್ತುವನ್ನಾಗಿರಿಸಿಕೊಂಡು ವಿಭಿನ್ನವಾದ ರೀತಿಯಲ್ಲಿ ಕವಿತೆಗಳನ್ನು ರಚಿಸಿದ್ದಾರೆ. ಮಕ್ಕಳಿಗೆ ಬಲು ಪ್ರಿಯವಾದ ಪ್ರಾಣಿ ಬೆಕ್ಕು. ಅದನ್ನು ದಿನಕರರು ತಮ್ಮ ಮಕ್ಕಳ ಕವಿತೆಗಳಲ್ಲಿ ಹೆಚ್ಚು ಬಳಸಿಕೊಂಡು ಅಭಿವ್ಯಕ್ತಗೊಳಿಸಿದ್ದಾರೆ. ಬೆಕ್ಕು ಮೈಸೂರಿನ ಅರಮನೆಗೆ ಹೋಗುವುದು ದೇಸಾಯಿಯವರ ಕಲ್ಪನೆ. ಬೆಕ್ಕಿನ ಅನುಭವ ಮಗುವಿಗೆ ಆಕರ್ಶಕ.

‘ಬೆಕ್ಕೆ ಬೆಕ್ಕೆ ಬೇಗನೆ ಹೇಳೇ
ನೋಡಿದ ಆನಂದ
ರಾಣಿಯ ಮಂಚದ ಕೆಳಗೇ ಕಂಡೆನು
ಚಿಲಿಪಿಲಿ ಇಲಿಯೊಂದ’[೫೩].

ಎಂದು ಬೆಕ್ಕು ಉತ್ತರಿಸುವ ಬಗೆ ಇಡೀ ಕವಿತೆಯ ಆಶಯಕ್ಕೆ ಹೊಸದಾದ ತಾತ್ವಿಕತೆಯನ್ನು ನೀಡುತ್ತದೆ. ಬೆಕ್ಕು ಮೈಸೂರಿಗೆ ಹೋಗಿದ್ದೆ ಎಂದಾಗ, ಬೆಕ್ಕಿನ ಒಡತಿಯ ಪ್ರಶ್ನೆಗಳು ಕುತೂಹಲಕರವಾಗಿವೆ. ಮೈಸೂರಿನ ಅರಮನೆ, ಉದ್ಯಾನ, ರಾಣಿಯ ವಾಸಸ್ಥಳ, ಸುಂದರ ತೈಲಚಿತ್ರ, ರಾಜ ವೈಭವ ಇವೆಲ್ಲವುಗಳನ್ನು ಕಲ್ಪಿಸಿಕೊಂಡು ಬೆಕ್ಕಿನಿಂದ ವಿವರಣೆ ಬಯಸುವುದು. ಅವಸರದಿಂದ ಬೆಕ್ಕಿನ ಹತ್ತಿರ ಬಂದು; ನೀನು ನೋಡಿದ ಆನಂದವನ್ನು ಬೇಗನೆ ಹೇಳು ಎಂದಾಗ ಸಹಜವಾಗಿ ಉತ್ತರಿಸುವುದು. ಬೆಕ್ಕಿನ ಕಣ್ಣಿಗೆ ಕಂಡದ್ದು ರಾಣಿಯ ಮಂಚದ ಕೆಳಗಡೆಯ ಇಲಿ. ಅರಮನೆಯಲ್ಲೂ ಇಲಿ ಬಿಲವನ್ನು ಮಾಡಿ ವಾಸ ಮಾಡುತ್ತದೆ. ಸಿಂಹಾಸನದ ಕೆಳಗೂ ಹುಳುಕುಗಳಿರುತ್ತವೆ ಎಂಬ ಅರ್ಥವನ್ನು ಕವಿತೆಯು ಮೂಡಿಸುತ್ತದೆ. ಇಲಿ ಅನಿಷ್ಠ; ಹಾನಿಕಾರಕ. ಅದು ಅರಮನೆಯಲ್ಲಿ ವಾಸ ಮಾಡಿರುವುದು ಎನ್ನುವ ಮಾತು ರಾಜನಾಡಳಿತದ ವಿಡಂಬನೆಯು ವ್ಯಕ್ತಗೊಳ್ಳುತ್ತದೆ. ಇಲ್ಲಿ ಇನ್ನೊಂದು ರೀತಿಯಲ್ಲಿಯೂ ಕವಿತೆಯನ್ನು ಅರ್ಥೈಸಬಹುದು. ‘ನೋಟದಂತೆ ಮಾಟ’ ಎಂಬ ಗಾದೆ ಮಾತಿನಂತೆ, ಬೆಕ್ಕಿನ ಕಣ್ಣಿಗೆ ಅರಮನೆ, ಅರಮನೆಯ ವೈಭವ ಗೌಣವಾದುದು. ಬೆಕ್ಕಿಗೆ ಬಲು ಪ್ರಿಯವಾದುದು ಇಲಿ ಮಾತ್ರ. ದಿನಕರ ದೇಸಾಯಿಯವರು ಬೆಕ್ಕನ್ನು ಕುರಿತಾಗಿ ಆರು ಕವನಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. ಪ್ರತಿಯೊಂದು ಕವಿತೆಗಳಲ್ಲಿ ಪ್ರಾಸದೊಂದಿಗೆ ಶಬ್ದಗಳ ಹೊಸತನ ಕಂಡು ಬರುತ್ತವೆ. ಮಗು ಬೆಕ್ಕಿನ ಹತ್ತಿರ ಮಾಡುವ ಸಂಭಾಷಣೆ ಅಚ್ಚರಿ ಮೂಡಿಸುತ್ತದೆ. ‘ಬೆಕ್ಕಿನ ಆರೈಕೆ’ ಎಂಬ ಕವನದಲ್ಲಿ ಮಗು ಬೆಕ್ಕಿನ ಹತ್ತಿರ ಹೋಗಿ ತನ್ನಂತೆ ಜಳಕಮಾಡಿ ತಿಂಡಿ ತಿನ್ನುವೆಯಾ ಎಂದು ಪ್ರಶ್ನಿಸುತ್ತದೆ. ಯಾವಾಗಲೂ ಮೈ ನೆಕ್ಕುವ ನನಗೆ ಜಳಕದ ಅವಶ್ಯಕತೆಯಿಲ್ಲ. ಹಾಲು ಮತ್ತು ಮೀನು ನನ್ನ ಆಹಾರ ಎಂದು ಬೆಕ್ಕು ಉತ್ತರಿಸುವುದು. ಮಗು ಇಂಥ ಕವನಗಳಿಂದ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಿದೆ.

'ಮೀಯುವ ನೀರದು ತಣ್ಣಿರಾದರೆ
ಚಳಿಯಲಿ ಸಾಯುವೆನು
ಹಂಡೆಯ ನೀರದು ಬಿಸಿಬಿಸಿಯಾದರೆ
ಸೆಕೆಯಲಿ ಬೇಯುವೆನು'[೫೪].

ಎಂದು ಹೇಳುವ ಮಾತು ಮಕ್ಕಳಿಗೆ ನೀತಿಯ ಪಾಠವಾಗಿದೆ. ಏಕೆಂದರೆ ಬೆಕ್ಕಿಗೆ ಮೈ ತೊಳೆದು (ಸ್ನಾನ ಮಾಡುವುದು)ಕೊಳ್ಳುವುದು ಅಸಾಧ್ಯ ಮತ್ತು ಹಾಗೆ ಮಾಡಬಾರದೆಂಬುದು ಇಲ್ಲಿ ಅಭಿವ್ಯಕ್ತಗೊಂಡಿದೆ. ದಿನಕರ ದೇಸಾಯಿಯವರು ಮಕ್ಕಳ ಮನವನ್ನು ಗ್ರಹಿಸಿ ವ್ಯಕ್ತಪಡಿಸಿದ ರೀತಿ 'ಪುನರಾಗಮನ' ಕವಿತೆಯಲ್ಲಿ ಸುಂದರವಾಗಿ ಮೂಡಿದೆ. ಬೆಕ್ಕನ್ನು ಗೋಣಿಚೀಲದಲ್ಲಿ ಹಾಕಿಕೊಂಡು ಬೆಟ್ಟದ ಕೆಳಗೆ ಬಿಟ್ಟು ಬಂದರೂ ಅದು ಮರಳಿ ಮನೆಗೆ ಬಂದದ್ದು ಮಗುವಿಗೆ ವಿಸ್ಮಯ ಉಂಟು ಮಾಡುತ್ತದೆ. 'ಈ ಅಜ್ಜಿಯ ಕಾಟ ಬೇಡ ನಾವಿಬ್ಬರೂ ಅಕ್ಕನ ಊರಿಗೆ ಸದ್ದಿಲ್ಲದೆ ಹೋಗುವಾ' ಎನ್ನುವ ಮಗುವಿನಲ್ಲಿ ಮುಗ್ಧ ಭಾವ ಸಹಜವಾಗಿ ಅಭಿವ್ಯಕ್ತಗೊಂಡಿರುವುದು ಕಂಡುಬರುತ್ತದೆ.

'ಅಕ್ಕನ ಬಂಡಿ' ಎಂಬ ಕವನದಲ್ಲಿ ದಿನಕರ ದೇಸಾಯಿಯವರು ಅಕ್ಕನ ಬಂಡಿಯ ನೊಗವನ್ನು ಪುಂಡಬೆಕ್ಕು ಹಿಡಿದು ನಡೆಸುವ ವರ್ಣನೆ ಸೊಗಸಾಗಿದೆ. ಕುನ್ನಿ ಮರಿ ಡೋಲು ಬಡಿಯುವುದು. ಮಂಗ ಬಂಡಿಯನ್ನು ನಡೆಸುವುದು, ಕೋಳಿ ಹೇಂಟೆ ಹಾದಿ ಗೂಡಿಸುವುದು, ಕೊಡ್ಲ ಗದ್ದೆ ಭಟ್ಟ ಹಾಲು ಕೊಡಲು ಬರುವುದು, ಬೆಕ್ಕು ಕೆಳಗೆ ಹಾರಿ ಬಂಡಿ ಉರುಳಿಸುವುದು, ಅಕ್ಕ-ತಂಗಿ ಹಳ್ಳಕ್ಕೆ ಬೀಳುವುದು, ಇಂದ್ರ ಅವರನ್ನು ಆಕಾಶದಲ್ಲಿ ಎತ್ತಿಕೊಂಡು ಹೋಗುವುದು. ಹೀಗೆ ಕಲ್ಪನಾ ಲೋಕವನ್ನೇ ಕವಿ ನಿರ್ಮಿಸಿದ್ದಾರೆ. ಇಲ್ಲಿಯ ನಾಟಕೀಯ ಸನ್ನಿವೇಶ ಕವಿತೆಗೆ ಮೆರಗು ನೀಡಿದೆ. ಮಗು ಈ ಸನ್ನಿವೇಶಗಳನ್ನು ಕುತೂಹಲದಿಂದ ಗಮನಿಸುವ ಸಾಧ್ಯತೆ ಹೆಚ್ಚು.

ಮಕ್ಕಳಿಗೆ ವಿಲಕ್ಷಣವಾದ ವ್ಯಕ್ತಿಗಳೆಂದರೆ ಕುತೂಹಲದಿಂದ ನೋಡುವ ಆಶೆ. ಇವರನ್ನು ಬೆನ್ನತ್ತಿ ಸುತ್ತುವುದು ಸಹಜ. ವೇಷಗಾರರು, ಹಾವಾಡಿಗರು, ಭಿಕ್ಷುಕರು, ಹುಚ್ಚರು, ಕರಡಿ ಕುಣಿಸುವವರು, ಬಹುರೂಪಿಗಳು, ದುರುಗ ಮುರುಗಿಯವರು, ಕೋಲೆಬಸವ ಮೊದಲಾದವರು ಮಕ್ಕಳ ಗಮನ ಸೆಳೆಯುತ್ತಾರೆ. ಈ ವ್ಯಕ್ತಿಗಳನ್ನು ಹತ್ತಿರದಿಂದ ನೋಡಿದ ದಿನಕರರು ಅವರ ಸ್ವಭಾವ, ವೇಶಭೂಷಣಗಳನ್ನು ವರ್ಣಿಸುವುದಲ್ಲದೆ ಸ್ವಾರಸ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಸನ್ನಿವೇಶಗಳು ಮಕ್ಕಳಲ್ಲಿ ಚಿಂತನೆ ಮೂಡಿಸುವಲ್ಲಿ ಸಹಕಾರಿಯಾಗಿ ಪರಿಣಮಿಸುತ್ತವೆ. ದಿನಕರ ದೇಸಾಯಿಯವರು ಸಮಾಜವಾದಿ ಕವಿ ಎಂದು ವಿದ್ವಾಂಸರ ಅಭಿಮತ. ಅವರ ಕಾವ್ಯ ಹೋರಾಟದ ದಾರಿಯಿಂದ ಬೆಳೆದು ಬಂದಿರುವುದು ಖಂಡಿತ. ಅವರ ಎಲ್ಲ ಕವಿತೆಗಳು ಈ ಸಂಗತಿಯನ್ನು ಸ್ಪಷ್ಟಪಡಿಸುತ್ತವೆ. ದಿನಕರರು ತಿಪ್ಪಾಭಟ್ಟರ ಬಗ್ಗೆ ಅನೇಕ ಪದ್ಯಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ತಿಪ್ಪಾಭಟ್ಟರ ಪಾಯಸದ ಹುಚ್ಚು', 'ಬುದ್ಧಿಯ ಬರಗಾಲ', 'ತಿಪ್ಪಾಭಟ್ಟರು ನೇಗಿಲು ಹಿಡಿದದ್ದು',

'ತಿಪ್ಪಾಭಟ್ಟರ ಜನಿವಾರ' ಪ್ರಮುಖವಾದವು. ತಿಪ್ಪಾಭಟ್ಟರ ಮುಗ್ಧತೆ, ತಮಾಶೆ, ಲೇವಡಿ ಗುಣ ಮೊದಲಾದ ಲಕ್ಷಣಗಳು ಗಮನ ಸೆಳೆಯುತ್ತವೆ. ಅವರ ದೇಹ ರಚನೆ, ಸ್ವಭಾವ ಹಾಸ್ಯಮಯವಾಗಿದ್ದು ಮಕ್ಕಳಿಗೆ ಖುಷಿ ನೀಡುತ್ತವೆ. ತಿಪ್ಪಾಭಟ್ಟರ 'ಬೋಕ್ಕತಲೆ' ಕನ್ನಡಿಯಂತಿದೆ. ತಲೆಗೂದಲು ಇಲ್ಲದ ಅವರಲ್ಲಿ ಬುದ್ಧಿಯು ಇಲ್ಲ ಎಂಬುದು ಹಾಸ್ಯಮಯವಾಗಿ ವ್ಯಕ್ತಗೊಂಡಿದೆ. ದಿನಕರ ದೇಸಾಯಿಯವರ 'ಬುದ್ಧಿಯ ಬರಗಾಲ' ಕವನದಲ್ಲಿ ಗೋಪಾಲ ಎನ್ನುವ ತುಂಟ ಹುಡುಗ ತಿಪ್ಪಾಭಟ್ಟರು ಸ್ನಾನಕ್ಕೆ ಹೋದಾಗ ಅವರ ಬಟ್ಟೆಗಳನ್ನು ಮುಚ್ಚಿಡುವನು. ಬಟ್ಟೆಯನ್ನು ಮುಚ್ಚಿಟ್ಟವರು ಯಾರೆಂದು ತಿಳಿಯದೆ ಬೈಯುವುದನ್ನು ಕೇಳಿ ಹುಡುಗ ಸಂಭ್ರಮಿಸುವನು. ಈ ವರ್ಣನೆ 'ಕೀಟಲೆ ಹುಡುಗ' ಕವನದಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ. ಮಂತ್ರ ಹೇಳುವ ಭಟ್ಟರ ಬಾಯಿಯಲ್ಲಿ ಬೈಗುಳನ್ನು ಕೇಳಿದ ದಿನಕರರು 'ಭಟ್ಟರ ಬಾಯಲಿ ಹೊಸ ಮಂತ್ರ' ಎಂದು ಉದ್ಗರಿಸುವ ಬಗೆ ಸೋಗಸಾಗಿ ಮೂಡಿದೆ. ಮಂತ್ರಗಳನ್ನು ತಂತ್ರಗಳ ರೂಪದಲ್ಲಿ ಬಳಸಿರುವುದು ಕವಿಯು ಕವಿತೆಗೆ ನೀಡಿದ ಹೊಸ ಪರಿಭಾಷೆಯಂತಿದೆ. ಹಾಗೆಯೇ 'ಪೆದ್ದ ಮಿಠಾಯಿ ಕದ್ದು ಗುಂಡಿಗೆ ಬಿದ್ದ' ಪ್ರಸಂಗ ಮಕ್ಕಳಿಗೆ ರಂಜನೆ ನೀಡಿ ಅವರ ಮನದಲ್ಲಿ ಬಹುಕಾಲ ಉಳಿಯಲು ಸಾಧ್ಯವಿದೆ.

'ಭಟ್ಟರ ಹಳೆ ಜನಿವಾರ
ಸೊಂಟದ ಕೆಂಪುಡದಾರ
ಎರಡೂ ಅಷ್ಟೇ ಚೊಕ್ಕ
ಭಟ್ಟರಿಗೆ ಅವು ತಕ್ಕ'[೫೫].

ಇದು ನೇರವಾಗಿ ಭಟ್ಟರನ್ನು ವಿಡಂಬಿಸುವುದನ್ನು ಅಭಿವ್ಯಕ್ತಿಸುತ್ತದೆ. ಜನಿವಾರ-ಉಡದಾರಗಳಲ್ಲಿ ಭಿನ್ನವಿಲ್ಲದಷ್ಟು ಅವು ಹೊಲಸಾಗಿವೆ. ತಾವು ಪರಿಶುದ್ಧರು, ನಿರ್ಮಲ ಮನದವರು ಎಂದು ಹೇಳುವ ಭಟ್ಟರನ್ನು ಸೂಕ್ಷ್ಮ ದೃಷ್ಟಿಯಿಂದ ವಿಡಂಭಿಸಲಾಗಿದೆ. ಇಲ್ಲಿ ಕವಿಯ ವಿಮರ್ಶಕ ಬುದ್ಧಿಯನ್ನು ಕಾಣುವುದರೊಂದಿಗೆ ಸಾಮಾಜಿಕ ಕಾಳಜಿಯು ವ್ಯಕ್ತಗೊಂಡಿರುವುದು ಸಹಜ.

'ತಿಪ್ಪಾಭಟ್ಟರ ಜನಿವಾರ ಮತ್ತು ಉಡದಾರಗಳು ಒಂದು ಎನ್ನುವಂತೆ ನೋಡಲಾಗಿದೆ. ಭಟ್ಟರಿಗೆ ಅವುಗಳಲ್ಲಿ ಬೇರೆ ಅರ್ಥವಾಗಲಿ, ಭಿನ್ನತೆಯಾಗಲಿ ಕಂಡು ಬರುವುದಿಲ್ಲ. ಜನಿವಾರ ಬೀಗದ ಕೈಯನ್ನು ಕಟ್ಟುವ ದಾರವಾದರೆ, ಉಡದಾರ ಪಂಜೆಯನುಡಲು ಆಧಾರವಾಗಿದೆ ಎಂಬ ಹಾಸ್ಯ ಅಭಿವ್ಯಕ್ತಿ ಮೂಡಿದಂತಿದೆ. ದಿನಕರ ದೇಸಾಯಿಯವರು ಸಂಪ್ರದಾಯ, ಕಂದಾಚಾರ ಮೊದಲಾದ ಮೂಢನಂಬಿಕೆಗಳ ಬಗ್ಗೆ ತಾತ್ಸಾರ ಮೂಡಿಸುವ ಕಲ್ಪನೆಯಂತೆ ಕಾಣುತ್ತಾರೆ. ಜನರಲ್ಲಿ ಅಂಧಾನುಕರಣೆಗಳು ಮೂಡುವುದರಿಂದ ಅವರಿಂದ ಹಣ ಪಡೆದುಕೊಳ್ಳುವ ಸಮೂಹ ಒಂದೆಡೆಯಾಗಿದೆ. ಅಂಥವುಗಳಲ್ಲಿ ಹರಿಜನ ಸೋಮಿಯ ಆರೋಗ್ಯ ಕೆಟ್ಟರೆ ತಿಪ್ಪಾಭಟ್ಟರಿಗೆ ಅದು ಹಣಗಳಿಸುವ ಮಾರ್ಗವಾಗಿ ಪರಿಣಮಿಸುತ್ತದೆ. ಭಟ್ಟರ ಮೋಡಿಯ ಮಾಟದಿಂದ ದೆವ್ವದ ಕಾಟ ತಪ್ಪಿತೆಂದು ಆಕೆ ಭಾವಿಸುತ್ತಾಳೆ. ಅದೇ

ರೀತಿಯಾಗಿ ದೇವರ ಗುಡಿಯಲ್ಲಿಯ ತೀರ್ಥ ಭಟ್ಟರಿಗೆ ದಿನವೂ ಜೀವನ ಸಾಗಿಸುವ ಸಾಧನವಾಗಿದೆ.

'ಹೊಂಡದ ನೀರು ಸುದ್ದಾ
ಭಟ್ಟರ ಕೈಯಲಿ ಶುದ್ಧ'[೫೬].

ಇಲ್ಲಿ ಭಟ್ಟರು ಕೊಟ್ಟ ಹೊಂಡದ ಕಲುಸಿತ ನೀರೂ ಸಹ ಜನರಿಗೆ ತೀರ್ಥವಾಗಿ ಪರಿಣಮಿಸಿದಂತಿದೆ. ದಿನಕರ ದೇಸಾಯಿಯವರು ಜನರ ಮೌಢ್ಯತೆ ಮತ್ತು ಭಟ್ಟರ ಮೋಸ ಇವೆರಡನ್ನು ವಿಡಂಭಿಸಿದ್ದಾರೆ. ತಿಪ್ಪಾಭಟ್ಟರಿಗೆ ಬಾಯಿ ಚಪಲ ಹೆಚ್ಚು. ಜನರು ನೈವೇದ್ಯವಾಗಿ ತಂದ ಪದಾರ್ಥಗಳನ್ನು ನೋಡಿದಾಗ ಬಾಯಲ್ಲಿ ನೀರು ಬರುವುದು ಸಹಜ. ಅವಲಕ್ಕಿ ಬೆಲ್ಲ ತಿನ್ನುವ ಸಂಭ್ರಮದಲ್ಲಿ ಮಂತ್ರವನ್ನು ಮರೆತು ಭಟ್ಟರು ಹಾಸ್ಯಕ್ಕೆ ಒಳಗಾಗುತ್ತಾರೆ. ಇಂಥ ಹಲವು ಸನ್ನಿವೇಶಗಳು ಮಕ್ಕಳಿಗೆ ಬಲು ಮೋಜು. ಹಾಗೆ ದಿನಕರರು ಅಭಿವ್ಯಕ್ತಗೊಳಿಸಿದ್ದಾರೆ. ಊರಿನಲ್ಲಿ ಹಬ್ಬ-ಉತ್ಸವಗಳಲ್ಲಿ ನಾಟಕಗಳೇನಾದರೂ ಬಂದರೆ ಟಿಕೇಟುಕೊಳ್ಳದೆ ಒಳಗೆ ನುಗ್ಗುವ ಗುಣ ಭಟ್ಟರದು. ಇದು ಅವರಿಗೆ ಪರಂಪರೆಯಿಂದ ಬಂದ ವಾಡಿಕೆ ಎನ್ನಬಹುದು.

'ಭಟ್ಟರ ಮನೆಯಲಿ ಬಿಟ್ಟಿ
ಮೆಣಸಿನ ಪುಡಿಯನು ಕುಟ್ಟಿ
ದಣಿದಳು ಒಕ್ಕಲ ಮುದುಕಿ
ಸಾಯದೆ ಇದ್ದಳು ಬದುಕಿ'[೫೭].

ಒಕ್ಕಲ ಮುದುಕಿಯ ದುಡಿಮೆಯ ಶ್ರಮದ ಫಲವನ್ನು ಬಿಟ್ಟಿಯಾಗಿ ಬಳಸಿಕೊಂಡು ಶೋಷಣೆಗೆ ಒಳಪಡಿಸಿದ ಭಟ್ಟರ ರೀತಿ ಪರಿಣಾಮಕಾರಿಯಾಗಿದೆ. ಭಟ್ಟರ ಮನೆಯ ನಾಯಿ ಮಡಿಕೆಯ ನೀರು ಬಾಯಿ ಹಾಕಿ ಕುಡಿದರೂ ಶುದ್ಧ ಎನ್ನುವ ನೀತಿ ಭಟ್ಟರದು. ಪುರೋಹಿತ ವರ್ಗದ ಅನುಕೂಲಸಿಂಧು ತತ್ವಗಳನ್ನು ದಿನಕರರು ಭಟ್ಟರನ್ನು ಆಧರಿಸಿ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ. ಭಟ್ಟರು ಪುರೋಹಿತ ವರ್ಗವನ್ನು ಪ್ರತಿನಿಧಿಸಿದರೂ ಕಾಯಕ ಜೀವಿ ರೈತನಾಗಿ ನೇಗಿಲು ಹೊಡೆಯುವ ಪ್ರಸಂಗ ಸ್ವಾರಸ್ಯಕರವಾಗಿದೆ. ಭಟ್ಟರು ಮಾಡುವ ಕಾಯಕವನ್ನು ನೋಡಲು ಊರಿನ ಜನರೆಲ್ಲ ನೆರೆಯುವುದು. ಭಟ್ಟರನ್ನು ಕಂಡು ಎತ್ತುಗಳು ನೇಗಿಲನೊಗೆ ಹೊತ್ತು ಜೋರಾಗಿ ಓಡಿದಾಗ ಭಟ್ಟರ ಪಂಚೆಯು ಹರಿಯುವುದು. ಆದರೆ ಎತ್ತುಗಳು ನಿಲ್ಲುವುದಿಲ್ಲ. ಭಟ್ಟರು ಗುಂಡಿಯಲ್ಲಿ ಬೀಳುವರು. ಆಗ ರೈತರು –

'ತೊಗರಿಯ ಸಾರದು ಭಟ್ಟರಿಗೆ
ನೇಗಿಲ ಭಾರವೆ ದಿಟ್ಟರಿಗೆ'[೫೮].

ಎಂದು ಹಾಡಿ ಸಂಭ್ರಮ ಪಡುವ ಪ್ರಸಂಗ ಮಕ್ಕಳಿಗೆ ರಂಜನೆಯನ್ನು ನೀಡುವುದ ರೊಂದಿಗೆ ಮೋಜಿನದಾಗಿ ಕಾಣುತ್ತದೆ. ಭಟ್ಟರು ತಮ್ಮ ಪಂಚೆಯಲ್ಲಿ ಕುಂಬಳಕಾಯಿ ಕಟ್ಟಿಕೊಂಡು ಬರುವಾಗ ಅದು ಬಿದ್ದು ಒಡೆಯುವುದು. ಮಡದಿಯಿಂದ ಬೈಸಿಕೊಳ್ಳುವುದು.

ಇಂಥ ಹಲವಾರು ರೂಪಕಗಳನ್ನು ಹಾಸ್ಯಮಯವಾಗಿ ದಿನಕರ ದೇಸಾಯಿಯವರು ಕಟ್ಟಿಕೊಟ್ಟಿದ್ದಾರೆ.

'ದಿನಕರರು ಬರೆದು ಶಿಶುಗೀತೆಗಳು ಹಾಡಲರ್ಹವಾದವುಗಳು ಮಕ್ಕಳ ಗೀತೆಗಳಲ್ಲಿ ಗೇಯತೆ ಇರಬೇಕು. ನಾದಲೋಲ ಹೃದಯವಿದ್ದ ಮಕ್ಕಳಿಗೆ ಅರ್ಥ ಗೌರವಕ್ಕಿಂತ ಶಬ್ದಗಳ ನಾದ ರುಚಿಸುವುದು ಸಹಜ. 'NURSERY RHYMES' ಇದ್ದರೆ, (ಲಯವಿದ್ದರೆ) ಮಕ್ಕಳಿಗೆ ಎಲ್ಲಿಲ್ಲದ ಆನಂದ ಉತ್ಸಾಹ, ಉಲ್ಲಾಸ. ಈ ಲಯಗಾರಿಕೆಯ ಗತ್ತಿನ ಮೂಲಕವೇ ದಿನಕರರ ಗೀತೆಗಳು ಮಕ್ಕಳ ನಾಲಿಗೆಯ ಮೇಲೆ ಕುಣಿಯಲು ಯೋಗ್ಯವಾಗಿವೆ. ಈ ಲಯಗಾರಿಕೆಯನ್ನು ಸಾಧಿಸಲು ಕವಿಗೆ ಶಬ್ದ ಶಕ್ತಿಯ ಮೇಲೆ ಪ್ರಬಲವಾದ ಹಿಡಿತವಿರಬೇಕು. ಪ್ರಾಸಗಳು ಅವು ಅನುಪ್ರಾಸಗಳಿರಲಿ, ಅಂತ್ಯ ಪ್ರಾಸಗಳಿರಲಿ, ಅಂತರ್ ಪ್ರಾಸಗಳಿರಲಿ, ಓತ ಪ್ರೋತವಾಗಿ ಹೊರಹೊಮ್ಮಿ ಚಿಮ್ಮಿ ಪುಟಿದು ಬರಬೇಕು. ಅಂದರೇನೆ ಮಕ್ಕಳ ಪದ್ಯಗಳಿಗೆ ಸಂಗೀತದ ಇಂಪು–ತಂಪು–ಕೆಂಪು ಬಂದು ಅವು ಮಕ್ಕಳಿಗೆ ಮಹದಾನಂದವನ್ನು ನೀಡಬಲ್ಲವು. ಹಾಗೆ ನೋಡಿದರೆ ಗದ್ಯದ ಭಾಷೆಗೂ ಪದ್ಯದ ಭಾಷೆಗೂ ಇರುವ ಮಹತ್ವದ ಅಂತರವೆಂದರೆ ಲಯ (RHYTHM) ಇದಿಲ್ಲದೆ ಕಾವ್ಯ ನಿರ್ಮಾಣವಾಗಲಾರದು. ಲಯಬದ್ಧವಾದ ಶಬ್ದಗಳನ್ನು ಕೇಳುವ ಕುತೂಹಲ ಹಾಗೂ ಆಕಾಂಕ್ಷೆ ಮಾನವನ ಸಹಜ ಪ್ರವೃತ್ತಿಗಳಲ್ಲೊಂದು. (Man has the instinct for harmany and rhythm) ಈ ಸಹಜ ಪ್ರವೃತ್ತಿ ಮಕ್ಕಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆಯೆಂದು ಹೇಳುವುದು ಅನವಶ್ಯ. ಆದ್ದರಿಂದಲೇ ಮಕ್ಕಳು ರಾಗತಾಳಲಯಕ್ಕೆ ಹೆಜ್ಜೆಯಿಟ್ಟು ಹಾಡುತ್ತ ಕುಣಿಯುತ್ತ ಆನಂದವನ್ನು ಅನುಭವಿಸುತ್ತಾರೆ. ಮಕ್ಕಳ ಈ ಸಹಜ ಪ್ರವೃತ್ತಿಯನ್ನು ಅವರ ಮನದ ಇಂಗಿತವನ್ನು ದಿನಕರರು ಚೆನ್ನಾಗಿ ಮನಗಂಡಿದ್ದಾರೆ. ಆದ್ದರಿಂದಲೇ ಅವರ ಶಿಶುಗೀತೆಗಳು ತಮ್ಮ ರಾಗತಾಳಲಯಗಳ ಸಮ್ಮೋಹನಾ ಶಕ್ತಿಯಿಂದ ಶಬ್ದಗಳ ಮಹೇಂದ್ರ ಜಾಲವನ್ನೇ ನೇಯ್ದು ಮಕ್ಕಳನ್ನು ಬರಸೆಳೆದು, ಸೆರೆ ಹಿಡಿದು ತಮ್ಮ ಗಾರುಡಿಯಿಂದ ಅವರ ಹೃದಯಗಳನ್ನು ಸೂರೆಗೊಳ್ಳುತ್ತವೆ'[೫]. ದಿನಕರ ದೇಸಾಯಿಯವರ ಪದ್ಯಗಳು ಮಾಧುರ್ಯದ ನಾದಮಯದಿಂದ ಕೂಡಿದವು ಎನ್ನಲು ಕೆಲವು ಉದಾಹರಣೆಗಳನ್ನು ನೋಡಬಹುದು.

'ಗುಡುಗುಡು ಗುಡುಗುಡು ಗುಡುಗಮ್ಮಾ
ಹಪ್ಪಳ ತಾರೇ ನಾಗಮ್ಮಾ
ಸಪ್ಪಳ ಮಾಡದೇ ತಿನ್ನೋಣ
ಮಳೆರಾಯನ ಪದ ಅನ್ನೋಣ' – **(ಮಳೆರಾಯ)**

'ತಿಗರಿಯು ತಿರುಗಲು ಗರಗರನೆ
ಗಡಿಗೆಗಳಾದವು ಭರಭರನೆ' – **(ಕುಂಬಾರನ ತಿಗರಿ)**

ಇಂಥ ಪದ್ಯಗಳನ್ನು ನೋಡಿಯೇ 'ಇವರಂತೆ ಇನ್ನಾರು ಹಾಡಿಯೇ ಇಲ್ಲ' ಎಂದು ವಿ. ಕೃ. ಗೋಕಾಕರು ಹೇಳಿರುವ ಮಾತು ಅರ್ಥಪೂರ್ಣವಾಗಿದೆ.

ಮಕ್ಕಳು ಅದ್ಭುತವಾದ ರಂಜನೀಯ ಸಂಗತಿಗಳಿಗೆ ಬೇಗನೆ ಮನಸೋಲುವರು. ಆಟದ ವಸ್ತುಗಳೆಂದರೆ ಬಲು ಪ್ರೀತಿ. ಯಾವುದೇ ವಸ್ತುಗಳಾದರೂ ಮಗು ಅವುಗಳೊಂದಿಗೆ ಮಾತನಾಡುತ್ತ ಆಟವಾಡುತ್ತದೆ. ದಿನಕರ ದೇಸಾಯಿಯವರು ಮಕ್ಕಳ ಮನವನ್ನು ಸೆಳೆಯುವಂತಹ ವಸ್ತುಗಳಿಗೆ ಜೀವ ತುಂಬಿ ಕವನಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

'ಉರಿದರೆ ದೇಹ
ಮೂಗಿಗೆ ಮೋಹ
ಕಾಣಲು ಕಿರಿದು
ಪರಿಮಳ ಹಿರಿದು'[೬೦].

ಇಲ್ಲಿ ಊದುಬತ್ತಿಯ ಗುಣಲಕ್ಷಣಗಳನ್ನು ಮಗುವಿಗೆ ಪರಿಚಯ ಮಾಡುವ ಬಗೆ ಒಂದಾದರೆ, 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಮಾತಿನಂತೆ ವ್ಯಕ್ತವಾಗುತ್ತದೆ. ತನ್ನ ದೇಹವನ್ನು ಸುಟ್ಟುಕೊಂಡು ಪರರಿಗೆ ಪರಿಮಳವನ್ನು ನೀಡುವ ತಾತ್ವ ಕಂಡು ಬರುತ್ತದೆ. ಹಳ್ಳಿಗಳಲ್ಲಿ ಹಲವು ಸಮಸ್ಯೆಗಳು, ಅನಾನುಕೂಲತೆಗಳಿದ್ದರೂ ಕವಿಗೆ ಸುಂದರ ಕಾಣುತ್ತದೆ. ಗ್ರಾಮೀಣ ಬದುಕು ಸುಂದರ ಎನ್ನುವುದನ್ನು ದಿನಕರರು ಹೇಳುವ ರೀತಿಯೇ ಬೇರೆ ಗ್ರಾಮ ಜೀವನದ ಬದುಕು ಕಷ್ಟಕರ. ಭಾವ ಮಾತ್ರ ಅತಿ ಸುಂದರ, ಸಮೃದ್ಧಿಯ ಕಡಲು ಎನ್ನುವರು. ಹಳ್ಳಿಯಲ್ಲಿ ಮುಳ್ಳುಕಳ್ಳಿ ಬೆಳೆದಿದ್ದರೂ ನಮ್ಮ ಊರು ಸುಂದರ, ಇದು ನಮ್ಮ ಭಾಗ್ಯವೆಂದು ದಿನಕರ ದೇಸಾಯಿಯವರು ಅನುಭವಿಸಿ ತೋರಿಸಿಕೊಟ್ಟಿದ್ದಾರೆ, 'ನಮ್ಮ ಹಳ್ಳಿ' ಎಂಬ ಕವಿತೆಯಲ್ಲಿ.

ಆಗಸದಲ್ಲಿ ಹಾರುತ್ತ ಮುಗಿಲನ್ನು ಮುಟ್ಟಿ ದೇವರ ಅಟ್ಟದ ತುದಿಯನ್ನು ತಲುಪುವುದು 'ಗಾಳಿಪಟ', ಹದ್ದನ್ನು ಸೋಲಿಸಿ, ಚಿಕ್ಕಿಗಿಂತ ಮಿಗಿಲಾದ ಪಟ ಬೆರಗನ್ನು ಮೂಡಿಸುತ್ತದೆ. ದಿನಕರರು ಗಾಳಿಪಟವನ್ನು 'ಮಕ್ಕಳ ಆಟದ ಹಕ್ಕಿ' ಎಂದು ಕರೆದಿರುವುದು ಔಚಿತ್ಯವೆನಿಸುತ್ತದೆ.

'ನೋಡೋ ಎತ್ತರದಲಿ ಚಂದ
ಬಾನಿನ ಹಣೆಯಲಿ ಶ್ರೀಗಂಧ'[೬೧].

ಬಾನಿನ ಹಣೆಗೆ ತಿಲಕ ಇಟ್ಟಂತೆ ಗಾಳಿಪಟದ ಕಲ್ಪನೆ ರಮ್ಯವಾದುದು ಮಕ್ಕಳಲ್ಲಿ ಕಲ್ಪನೆಯ ಶಕ್ತಿ ಅಪಾರವಾದುದು. ಅವರು ಅಸಾಧ್ಯದ ಮಾತನ್ನು ಎಂದೂ ಹೇಳುವುದಿಲ್ಲ. ದಿನಕರ ದೇಸಾಯಿಯವರು ಪ್ರಪಂಚವನ್ನು ಮಕ್ಕಳ ಭಾವನೆಗೆ ಸ್ಪಂದಿಸುವ ರೀತಿಯಲ್ಲಿ ನೋಡುತ್ತಾರೆ. ಅವರ ದೃಷ್ಟಿ ವಿಸ್ಮಯಕಾರಿ. ಕಲ್ಪನಾತೀತವಾದ ಪದ್ಯಗಳು ಮಕ್ಕಳಿಗೆ ಸಂತಸ ನೀಡಬಲ್ಲವು. ಮಕ್ಕಳ ಮನಸ್ಸನ್ನು ಅರಿತುಕೊಂಡು ದಿನಕರರು ಕವನಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ.

'ಕುಂಬಾರನ ತಿಗರಿ'ಯನ್ನು ಬುಗುರಿಗೆ ಹೋಲಿಸಿ ನೋಡುವ ಮಕ್ಕಳ ದೃಷ್ಟಿಕೋನ ಕವಿಗಿರುವುದು ಅಚ್ಚರಿ ಮೂಡಿಸುತ್ತದೆ. ಅದು ಸಾಧ್ಯವಾಗಿಸುವ ಭಾವ ಮಗುವಿನಲ್ಲಿ ಸಹಜವಾದುದು.

'ನಾವು ತಿಗರಿಯನೇರುವುದು
ಮುದ್ದೆಯ ಪರಿಯಲಿ ತಿರುಗುವುದು
ನಾವೂ ಗಡಿಗೆಗಳಾದಲ್ಲಿ
ಸೋಜಿಗವಲ್ಲವೆ ಜಗದಲ್ಲಿ'[೨].

ಮಕ್ಕಳು ತಮ್ಮ ಮಿತಿಯಲ್ಲಿ ವಸ್ತುವನ್ನು ಮತ್ತು ಸಂಗತಿಯನ್ನು ಗ್ರಹಿಸುವ, ಕನಸು ಕಾಣುವ ಹಂಬಲವಿದ್ದರೂ ಅದರ ಪರಿಣಾಮದ ಅರಿವು ಅವರಿಗಿರುವುದಿಲ್ಲ. ದಿನಕರ ದೇಸಾಯಿಯವರು ಬದುಕಿನ ಚಕ್ರದ ಗತಿಯನ್ನು ಬಿಂಬಿಸುವ ತಾತ್ವಿಕತೆಯನ್ನು ಈ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಆದರೆ ಮಕ್ಕಳು ಕೇವಲ ತಿಗರಿಯ ಚಕ್ರವು ಮಣ್ಣಿನ ಮುದ್ದೆಗೆ ಆಕಾರ, ಅಂದ-ಚಂದವನ್ನು ನೀಡುವುದು-ನೋಡಿ ಆನಂದಪಡುವ ಅಭಿವ್ಯಕ್ತಿ ಇಲ್ಲಿಯದು. ಸೃಷ್ಟಿಕರ್ತನ ತಿಗರಿಯಲ್ಲಿ ನಾವುಗಳು ಗಡಿಗೆಗಳು ಎಂದು ಅರ್ಥೈಸಿದರೆ ಸೋಜಿಗವಾದರೂ ತಾತ್ವಿಕ ನೆಲೆಯಲ್ಲಿ ನಿಜವಾದುದು. ಮಕ್ಕಳು ಹೆಚ್ಚಾಗಿ ತಮ್ಮ ಸಹಪಾಟಿಗಳ ಸಂಗವನ್ನು ಬಯಸುವರು. ಅವರೊಂದಿಗೆ ಆಡುವುದು, ಹಾಡುವುದು, ಕುಣಿಯುವುದು ಸಹಜ ಗುಣವಾಗಿದೆ. ಸಮೂಹ ಜೀವನ ಅವರಿಗೆ ಆನಂದ ನೀಡುತ್ತದೆ. ಅಂಥ ಕವಿತೆ 'ಮಕ್ಕಳ ಕೋಲಾಟ' ಸುಂದರವಾಗಿ ವ್ಯಕ್ತಗೊಂಡಿದೆ. ದಿನಕರರು ಇಲ್ಲಿ ಪ್ರಾಸದೊಂದಿಗೆ ಆಟವಾಡಿದ್ದರೂ ಮಕ್ಕಳಿಗೆ ಜೀವನ ಮೌಲ್ಯಗಳನ್ನು ತಿಳಿಸುತ್ತಾರೆ. ದೃಷ್ಟಿ-ಸೃಷ್ಟಿ-ಸಂತುಷ್ಟಿ ಪದಗಳು ಮಗುವಿನಲ್ಲಿ ಚೈತನ್ಯ ತುಂಬುತ್ತವೆ. ಬದುಕು ನಿತ್ಯ ನೂತನವಾದುದು. ಅದನ್ನು ಸತ್ಯದಿಂದ ಸಾರ್ಥಕಗೊಳಿಸಿಕೊಳ್ಳುವ ಬಗೆಯನ್ನು ಮಕ್ಕಳಲ್ಲಿ ಬಿತ್ತುವ ಹಂಬಲ ದೇಸಾಯಿಯವರದು.

ಮಕ್ಕಳು ಕಲ್ಪನಾ ಲೋಕದ ವಿಹಾರಿಗಳು. ಕಲ್ಪನೆ ನೀಡುವ ಖುಷಿ ಬೇರೆ ಯಾವುದೇ ಸಂಗತಿಗಳು ಮಕ್ಕಳಿಗೆ ನೀಡಲಾರದು. ಅದ್ಭುತವಾದ ಯಕ್ಷಲೋಕದ ಚಿತ್ರಣಗಳು ಮಕ್ಕಳಿಗೆ ಸಂತಸ ನೀಡುವುದರೊಂದಿಗೆ ಚಿಂತನಾ ಗುಣಗಳನ್ನು ಬೆಳೆಸುತ್ತವೆ. ದಿನಕರರು ಇಂಥ ಕವನಗಳನ್ನು ಮಕ್ಕಳ ಮನಕೆ ನಾಟುವಂತೆ ರಚಿಸಿದ್ದಾರೆ. 'ಮಕ್ಕಳ ಬಯಕೆ' ಉತ್ತಮ ಉದಾಹರಣೆಯಾಗಿದೆ. ಮಗುವಿನ ಮನದ ಭಾವನೆಗೆ ಮಿತಿಯಿಲ್ಲ. ಅದು ಎಲ್ಲಿ ಬೇಕಾದರೂ, ಯಾವಾಗ ಬೇಕಾದರೂ ಸಂಚಾರ ಮಾಡಬಹುದು. ಆಕಾಶಕ್ಕೆ ತೋರಣ ಕಟ್ಟುವುದು. ಮುಗಿಲಲ್ಲಿ ಮಳೆ ಹನಿಯಾಗಿ ಬೀಳುವುದು. ಗುಡುಗಮ್ಮನ ಗಗನ ವಾದ್ಯವನ್ನು ಬಾರಿಸುವುದು. ಬೆಕ್ಕಿನ ಜೊತೆಯಲ್ಲಿ ಆಡುವುದು. ಅಂಗಳದಲ್ಲಿ ಮಳೆಯ ನೀರಿನ ಗುಳ್ಳೆಯಾಗಿ ತೇಲುವುದು. ಜಲಪಾತವಾಗಿ ಹರಿಯುತ್ತ ಸಮುದ್ರ ಸೇರುವುದು ಮಕ್ಕಳ ಬಯಕೆ. ಇಂಥ ಸನ್ನಿವೇಶಗಳು ಮಕ್ಕಳ ಸುಪ್ತ ಭಾವನೆಗಳನ್ನು ಹೊರಹಾಕುತ್ತವೆ. ದಿನಕರ ದೇಸಾಯಿಯವರು ಇಲ್ಲಿ ತಾತ್ವಿಕವಾಗಿ ಮಗುವಿನೊಂದಿಗೆ ಹಿರಿಯರಿಗೆ ಸಲಹೆ ನೀಡಿರುವಂತಿದೆ. ಮಕ್ಕಳಲ್ಲಿ ಪ್ರಶ್ನಿಸುವ ಗುಣ ಸಹಜವಾದುದು. ಆಕಾಶದಲ್ಲಿ ಮೂಡುವ ಕಾಮನ ಬಿಲ್ಲು ಕಂಡು ಬಣ್ಣದ ತೋರಣ ಎನ್ನುವುದು. ಅದನ್ನು ಹೇಗಾದರೂ ಮಾಡಿ ಮುಟ್ಟುವ ಬಯಕೆಯನ್ನು ಪ್ರಶ್ನೆಯಾಗಿ ವ್ಯಕ್ತಪಡಿಸುತ್ತದೆ.

ಕಾಮನಬಿಲ್ಲು ಮುಟ್ಟಲು; ಎತ್ತರ ಮರವನ್ನು ಹತ್ತಿದರೆ ಮೈಗೆ ಹತ್ತುವೆಯಾ? ಬೆಟ್ಟದ ಬದಿಯಲ್ಲಿ ಬಂದರೆ ಕೈಗೆ ನಿಲುಕುವೆಯಾ? ಎನ್ನುವ ಆಲೋಚನೆ ಬೆರಗು ಮೂಡಿಸುತ್ತದೆ. ದಿನಕರ ದೇಸಾಯಿಯವರು ಮಕ್ಕಳ ಕುತೂಹಲವನ್ನು ಕೆರಳಿಸುವ 'ಕಾಮನಬಿಲ್ಲು' ಹಿಡಿಯುವ ತವಕ ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

'ತಿರುಗುವ ಪ್ರಥಿವಿಯು ದೇವನ ಬುಗುರಿ
ಗಗನದ ಗುಡುಗೇಅವನ ನಗಾರಿ
ತಾರೆಗಳೆಲ್ಲಾ ಮಿನುಗಲು ಮೇಲೆ
ಮುಗಿಲೊಳಗೆಲ್ಲಾ ದೇವರ ಲೀಲೆ'[೬೩].

ದಿನಕರರು ಇದು ಮಕ್ಕಳಿಗಾಗಿ ರಚಿಸಿದ ಕವನವೆಂದರೂ, ದೇವನ ಲೀಲೆಯಿಂದ ಈ ಭೂಮಿ ನಿಯಂತ್ರಣ ಹೊಂದಿದೆ ಎಂಬ ತಾತ್ವಿಕತೆಯನ್ನು ವ್ಯಕ್ತಗೊಳಿಸುತ್ತಾರೆ. ಎಲ್ಲವೂ ಸೃಷ್ಟಿಕರ್ತನ ಕೃಪೆಗೆ ಒಳಗಾಗಿದೆ ಎಂಬ ಪ್ರಧಾನ ಉದ್ದೇಶವನ್ನು ತಿಳಿಸುತ್ತಾರೆ. ದಿನಕರ ದೇಸಾಯಿಯವರು ಆಸ್ತಿಕ ಮನೋಭಾವವನ್ನು, ನಿಸರ್ಗವನ್ನು ದೇವರೆಂದು ಒಪ್ಪಿಕೊಳ್ಳುವ ಆಲೋಚನೆಗಳನ್ನು ಬಿತ್ತರಿಸುತ್ತಾರೆ. ಆದರೆ ಮಕ್ಕಳು ಕೇವಲ ಆಕಾಶ-ಭೂಮಿಗಳ ಪ್ರಕ್ರಿಯೆಗಳನ್ನು ಗಮನಿಸುವರು. ದಿನಕರರು ಮಕ್ಕಳಲ್ಲಿ ಅರಿವಿನ ಪರಿಧಿಯನ್ನು ಬೆಳೆಸುವಲ್ಲಿ ಯಶಸ್ವಿಯಾದುದು ಕವಿತೆ ಅಭಿವ್ಯಕ್ತಿಸುತ್ತದೆ.

ಊಟ-ತಿನಿಸುಗಳೆಂದರೆ ಮಕ್ಕಳಿಗೆ ಬಲು ಪ್ರೀತಿ. ಆಹಾರ ಕ್ರಮ ಯಾವ ರೀತಿಯಾಗಿ ಇರಬೇಕು ಎಂಬುದು 'ಊಟ' ಎಂಬ ಕವಿತೆ ಮಕ್ಕಳಲ್ಲಿ ನೈತಿಕತೆಯನ್ನು ಮೂಡಿಸುತ್ತದೆ.

'ಒಪ್ಪತ್ತು ಉಂಬವನು ಸುಜ್ಞಾನಿ ಯೋಗಿ
ಎರಡ್ಹೊತ್ತು ಉಂಬವನು ಸಂಸಾರ ಭೋಗಿ
ಮೂರ್ಹೊತ್ತು ಉಂಬವನು ಅಜ್ಞಾನಿ ರೋಗಿ
ನಾಲ್ಕೊತ್ತು ಉಂಬವನ ಹೊತ್ಕೊಂಡು ಹೋಗಿ'[೬೪].

ಮಕ್ಕಳು ಸಂಖ್ಯೆಗಳನ್ನು ತಿಳಿದುಕೊಳ್ಳು ಈ ಪದ್ಯ ಸಹಕಾರಿಯಾಗುವುದರೊಂದಿಗೆ ಆಹಾರದ ಕ್ರಮವನ್ನು ಹಿತವಾಗಿ-ಮಿತವಾಗಿ ಬಳಸಿದರೆ ಬದುಕು ಸುಂದರ. ಇಲ್ಲದಿದ್ದರೆ ನಶ್ವರ ಎಂಬುದು ಮಕ್ಕಳ ಗ್ರಹಿಕೆಗೆ ಸಿಗಲು ಅಸಾಧ್ಯ. ಯಾಕೆಂದರೆ ಯೋಗಿ, ಭೋಗಿ, ರೋಗಿ ಪದಗಳು ಮಕ್ಕಳು ಅರ್ಥಮಾಡಿಕೊಳ್ಳುವುದು ಸುಲಭವಲ್ಲ. ಆಹಾರದ ಕ್ರಮ ಹಿತವಾಗಿರದಿದ್ದರೆ ಅನಾಹುತ ತಪ್ಪಿದ್ದಲ್ಲ ಎನ್ನುವುದು ಸತ್ಯ. ಗಂಡ-ಹೆಂಡತಿಯರ ಸರಸ-ವಿರಸಗಳನ್ನು ತಿಳಿಸುವ 'ಬಂಗಡೆ ಮೀನು' ಕವಿತೆ ಮಕ್ಕಳಿಗೆ ಖುಷಿ ತಂದಿದೆ. ಪತಿ-ಪತ್ನಿಯರ ರಸಮಯ ಸನ್ನಿವೇಶದೊಂದಿಗೆ, ಮೀನಿನ ಹಳದಿ ಬಣ್ಣ ಬಾಯಲ್ಲಿ ನೀರು ತರಿಸುತ್ತದೆ. ಗಂಡ, ಕುಡುಕ, ಗಿಡ್ಡ, ಧಡ್ಡ ಇವು ಹೆಂಡಿತೆಗೆ ಕೋಪ ತರಿಸುವ ಸಂಗತಿಗಳಲ್ಲ. ಆತ ಪೇಟೆಯಿಂದ ತಡಮಾಡಿ ಬಂದಿರುವುದು ಮೂಲ ಕಾರಣ ಅವಳ ಸಿಟ್ಟು ಹೆಚ್ಚಾಗಲು.

'ನನಗೊಬ್ಬ ಗಂಡ
ಕುಡಿತಾನೆ ಹೆಂಡ

ನನಗಿಂತ ಹೆಡ್ಡ
ನೋಡಲು ಗಿಡ್ಡ
ತಡಮಾಡಿ ಬಂದ
ಮೀನ್ ಪೇಟೆಯಿಂದ
ತಂದದ್ದು ಮುಗ್ಗು
ಆದರೂ ಹಿಗ್ಗು'[೬೫].

ಗಂಡ ಬರುವಾಗ ಮೀನು ತಂದಿದ್ದಾನೆ. ಅದು ಮುಗ್ಗಿ ಹೋದರೂ ಅವಳಿಗೆ ಹಿಗ್ಗು. ಮುಗ್ಗಿದ ಮೀನು ಸಂಸಾರದ ವಿರಸವನ್ನು ಹೋಗಲಾಡಿಸಿದೆ. ಸಂಸಾರದಲ್ಲಿ ಸಂತಸ ಮೂಡಿಸಿದೆ. ಮನೆಗೆ ಬೇಕಾದ ಸಾಮಗ್ರಿಗಳನ್ನು ತರುವುದು ಪತಿಯ ಕರ್ತವ್ಯ. ಅಂದಾಗ ಮಾತ್ರ ಸಂಸಾರ ರಸಮಯವಾಗಲು ಸಾಧ್ಯ ಎನ್ನುವುದು ದಿನಕರ ದೇಸಾಯಿಯವರ ಅಭಿಮತ. ಸಾಮಾನ್ಯವಾಗಿ ಮಕ್ಕಳ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವೆನಿಸಿದರೂ ಅವರ ಹೆಚ್ಚಿನ ಕವನಗಳು ಸಮಾಜಮುಖಿಯಾಗಿವೆ. ಸಮಾಜದ ಓರೆ-ಕೋರೆಗಳನ್ನು ತಿದ್ದುವುದಾಗಿದೆ. ಮಕ್ಕಳ ದೃಷ್ಟಿಯಿಂದ ಅವರ ಕವಿತೆಗಳಲ್ಲಿ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಬಹುದು.

* ಕವಿತೆಗಳ ವಸ್ತುಗಳು ಮಕ್ಕಳಿಗೆ ಪರಿಚಿತವಾದವು.
* ಸುಲಭವಾದ ಭಾಷೆಯು ಲವಲವಿಕೆಯಿಂದ ಕುಡಿದೆ.
* ಆಡುನುಡಿಯ ಸಹಜ ಶೈಲಿ ಮೂಡಿದೆ.
* ಕುತೂಹಲ ಭರಿತವಾದ ಸನ್ನಿವೇಶಗಳನ್ನು ಮಕ್ಕಳಿಗೆ ತಿಳಿಸುತ್ತವೆ.
* ಮಕ್ಕಳು ಕವಿತೆಗಳ ಅರ್ಥವನ್ನು ಗ್ರಹಿಸುತ್ತ ಹೋದಂತೆ ವಿಭಿನ್ನ ನೆಲೆಗಳನ್ನು ಮಕ್ಕಳಿಗೆ ತಿಳಿಸಿಕೊಡುತ್ತವೆ.

'ಮಕ್ಕಳ ಕವಿತೆಗಳು ಸರಳವಾಗಿರಬೇಕು. ಸಣ್ಣ ಮಕ್ಕಳಿಗೆ ಅರ್ಥವಾಗುವ ಸರಳ ಶಬ್ದಗಳು ಬಳಕೆಗೊಂಡಿರಬೇಕು. ಶಬ್ದಗಳು ಪ್ರಾಸ-ಅನುಪ್ರಾಸದೊಂದಿಗೆ ಮಧುರವಾಗಿ ಜೋಡಣೆಗೊಂಡಿರಬೇಕು. ಹಾಸ್ಯ, ವಿಡಂಬನೆ, ಕಲ್ಪಕತೆ, ಅಚ್ಚುಕಟ್ಟುತನ ಮಕ್ಕಳ ಗೀತೆಯಲ್ಲಿ ಇರಬೇಕು. ಅವು ಬಹಳ ದೀರ್ಘವಾಗಿರದೆ ಚಿಕ್ಕದಾಗಿ, ಚೊಕ್ಕದಾಗಿ ಇರಬೇಕು. ಅನುಕರಣ ವಾಚಕ ಶಬ್ದಗಳು, ಪ್ರಾಸ ಹಾಗೂ ಮಕ್ಕಳಿಗೆ ಪರಿಚಿತವಾದ ಪ್ರಾಣಿ, ವಸ್ತು ವ್ಯಕ್ತಿಗಳ ಚಿತ್ರಣದಿಂದ ಕವಿತೆ ಮಕ್ಕಳ ಮನಸ್ಸನ್ನು ಸೂರೆಗೊಳ್ಳುವಂತಿರಬೇಕು. ಆ ಕವಿತೆಯ ರಚನೆಯ ಶಿಲ್ಪದಿಂದ ಕವಿತೆ ಮಕ್ಕಳ ಮನಸ್ಸಿನಲಿ ಬಹುಕಾಲ ಉಳಿಯುವಂತಿರಬೇಕು. ಭಾವೈಕ್ಯತೆ, ಆದರ್ಶದ ಹಂಬಲ, ನಿಯಮ ಪಾಲನೆ ಸಹಬಾಳ್ವೆ, ರಾಷ್ಟ್ರಾಭಿಮಾನ ಮುಂತಾದ ವಿಷಯಗಳನ್ನು ವಸ್ತುವಾಗಿಟ್ಟುಕೊಂಡು ಮಕ್ಕಳ ಪದ್ಯ ರಚಿಸಬೇಕು. ಮಕ್ಕಳ ಗೀತೆಗಳನ್ನು ರಚಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇದು ಎಲ್ಲಾ ಕವಿಗಳಿಂದ ಸಾಧ್ಯವಾಗುವಂತಹದಲ್ಲ. ರವೀಂದ್ರನಾಥ ಟಾಗೋರ, ಲಿಯೋಟಾಲ್‌ಸ್ಟಾಯ್ ಮುಂತಾದ ಸಾಹಿತಿಗಳು ಗಂಭೀರವಾದ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯವನ್ನು ರಚಿಸಿದ್ದಾರೆ. ಹೀಗೆ ದಿನಕರ ದೇಸಾಯಿಯವರು

ಗಂಭೀರ ಪ್ರಜ್ಞೆಯ ಕವನಗಳನ್ನು ರಚಿಸಿದ್ದಲ್ಲದೆ ಮಕ್ಕಳ ಮನವನ್ನು ಮುದಗೊಳಿಸಬಲ್ಲ, ಸುಂದರವಾದ ಪ್ರಾಸಬದ್ಧವಾದ ಕವಿತೆಗಳನ್ನು ರಚಿಸಿದ್ದಾರೆ'[೬೬].

ಕಥೆ ಎಂದರೆ ಮಕ್ಕಳಿಗೆ ಬಲು ಇಷ್ಟ. ಅವು ಸರಳ ರೂಪದ ಅರ್ಥ ಹೊಂದಿ ಸಹಜವಾಗಿ ಮಗು ತಿಳಿಯುವಂತಿರಬೇಕು. ಸಂಕೀರ್ಣ ಕಥೆಗಳು ಮಕ್ಕಳಿಗೆ ಅರ್ಥವಾಗುವುದು ಅಸಾಧ್ಯ. ಕಥಾ ಸಂಸ್ಕೃತ ಶಬ್ದ ಅದರ ಅರ್ಥ ಹೇಳು. 'ಕಥೆ ಎಂಬುದು ಕಥಿತ ಎಂಬ ಪದದಿಂದ ಬಂದಿದೆ. ಕಥಿತ ಎಂದರೆ ವಸ್ತು ಎಂದರ್ಥ. ಅದರ ಮುಖ್ಯ ಲಕ್ಷಣ ಕಥನ. ಅದರ ಹಿರಿಯ ಗುಣ 'ಕಥನ ಕೌಶಲ' ಎಂದು ಮಾಸ್ತಿಯವರು ಹೇಳುತ್ತಾರೆ'. ಕಥೆಗಳ ವಸ್ತುವೈವಿಧ್ಯ, ನಿರೂಪಣಾ ಕ್ರಮ, ಸಾಮಾಜಿಕ ಸಂಗತಿಗಳು, ಐತಿಹಾಸಿಕ, ಪೌರಾಣಿಕ, ಕಲ್ಪನಾತ್ಮಕ, ಭಾವನಾತ್ಮಕ ವಸ್ತುಗಳು ಕಥೆಯ ಪೂರಕ ವಸ್ತುಗಳಾಗಿ ಪರಿಣಮಿಸಿವೆ. ದಿನಕರ ದೇಸಾಯಿಯವರು ಮಕ್ಕಳು ಮನಸೂರೆಗೊಳ್ಳುವಂತಹ ಸರಳ, ಸುಲಭವಾದ ಕಥೆಗಳನ್ನು ಮಕ್ಕಳ ಕವಿತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಇವರ ಹೆಚ್ಚಿನ ಕಥೆಗಳು ಪಕ್ಷಿ-ಪ್ರಾಣಿಗಳಿಗೆ ಸಂಬಂಧಪಟ್ಟವುಗಳು.

ದ್ವಾಪರ ಯುಗದಲ್ಲಿ ಒಂದು ದಿವಸ ಚಂದ್ರನ ಮೈ ಗೋಲವಾಗಿ ಬೆಳದಿಂಗಳು ಹಾಲಿನಂತೆ ಚೆಲ್ಲಿದಾಗ, ಬೇಡರು ಬೇಟೆಗೆ ಬಂದಾಗ ಅಲ್ಲಿ ಹುಲ್ಲು ಮೇಯುತ್ತಿರುವ ಮೊಲ ಆಕಾಶಕ್ಕೆ ಹಾರಿ ಚಂದ್ರನ ಮೇಲೆ ಕುಳಿತುಕೊಂಡಿದೆ ಎಂಬುದು ಕಥನ ಕವನದ ವಸ್ತು, ಲಯಬದ್ಧವಾದ ಮತ್ತು ಪ್ರಾಸದಿಂದ ಕೂಡಿದ ಕಥೆ ಮಕ್ಕಳ ಮನಸ್ಸಿಗೆ ಮುದನೀಡುತ್ತದೆ. 'ರೈತ ಮತ್ತು ಕರಡಿ' ಎಂಬ ಕಥನ ಕವನವು ಮಕ್ಕಳಿಗೆ ನೀತಿಯುನ್ನು ತಿಳಿಯಪಡಿಸುವದರೊಂದಿಗೆ ರಂಜನೆ ನೀಡುತ್ತದೆ. ರೈತನೊಬ್ಬ ಬೆಟ್ಟದ ಒಡೆಯ ಕರಡಿಯೊಂದಿಗೆ ಒಪ್ಪಂದ ಮಾಡಿಕೊಂಡು ಭೂಮಿಯನ್ನು ಸಾಗುವಳಿ ಮಾಡಿದ ಕಥೆ ಸ್ವಾರಸ್ಯಕರವಾಗಿದೆ. ಕರಡಿಯ ದರ್ಪದ ಮಾತಿಗೆ ಒಪ್ಪಿಕೊಂಡು ರೈತ ಸಮಪಾಲಿಗೆ ಭೂಮಿಯನ್ನು ಸಾಗುವಳಿ ಮಾಡುತ್ತಾನೆ. ಕರಡಿಗೆ ಆಯ್ಕೆಯಲ್ಲಿ ಮೊದಲಿಗೆ ಆದ್ಯತೆ. ಮೊದಲ ವರ್ಷ ಕರಡಿ ಬೆಳೆಯ ತುದಿಯನ್ನು ಬಯಸುವುದು. ಇದಕ್ಕೆ ರೈತ ಒಪ್ಪಿಕೊಂಡು ಮೂಲಂಗಿಯನ್ನು ಬೆಳೆಯುತ್ತಾನೆ. ಕರಡಿಯ ಪಾಲಿಗೆ ಬಂದ ಸೊಪ್ಪನ್ನು ನೀಡಿ ರೈತ ಮೂಲಂಗಿಯನ್ನು ಪಡೆದುಕೊಳ್ಳುವನು. ಕರಡಿಗೆ ಮೋಸಹೋದೆ ಎಂದು ತಿಳಿಯಿತು. ಮಾರನೆಯ ವರ್ಷ ಕರಡಿ ಬುಡದ ಬೆಳೆ ಬೇಕು ಎಂದು ನಿರ್ಧರಿಸುತ್ತದೆ. ರೈತನು ರಾಗಿಯನ್ನು ಬೆಳೆಯುವನು. ರಾಗಿಯ ತೆನೆಯ ತುದಿಯನ್ನು ಕೊಯ್ದುಕೊಂಡು ಉಳಿದದ್ದನ್ನು ಕರಡಿಗೆ ಒಪ್ಪಿಸುವನು. ರಾಗಿಯ ದಂಟಿನ ರಾಶಿಯನ್ನು ನೋಡಿ ಕರಡಿಯು ಸಂತಸಪಡುವುದು. ಆದರೆ ಹುಲ್ಲು ಗೊಬ್ಬರಕ್ಕೆ ಮಾತ್ರ ಉಪಯೋಗವೆಂದು ತಿಳಿದ ಕರಡಿ ಸಂಕಟಪಡುವುದು. ಆದರೆ ಇದರಿಂದ ಯಾವ ಪ್ರಯೋಜನವಾಗಲಿಲ್ಲ. ಇಲ್ಲಿ ದಿನಕರ ದೇಸಾಯಿಯವರು ಮಾನವನ ಬುದ್ಧಿವಂತಿಕೆಯನ್ನು ತಿಳಿಸುವುದರೊಂದಿಗೆ

ಮಕ್ಕಳಲ್ಲಿ ಜಾಣತನದ ಪ್ರವೃತ್ತಿ, ವಿಚಾರಗಳು ಮೂಡಲಿ ಎಂಬುದನ್ನು ಕತೆಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಸಾಹಿತ್ಯದ ಉದ್ದೇಶ ಮುಖ್ಯವಾಗಿ ಸಂತೋಷ ಮೂಡಿಸುವುದು. ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು, ಆದರೆ ಮಕ್ಕಳ ಸಾಹಿತ್ಯದಲ್ಲಿ ಮುಖ್ಯವಾಗಿ ಮನರಂಜನೆ ಹಾಗೂ ನೀತಿಬೋಧನೆ ಕಂಡುಬರುತ್ತದೆ. ಮಕ್ಕಳ ಮುಗ್ಧ ಮನಸ್ಸನ್ನು ತಿದ್ದಿ ಸಂಸ್ಕಾರಗೊಳಿಸುವಲ್ಲಿ ನೀತಿಯುತ ಬೋಧನೆ ಮಹತ್ವದ್ದಾಗಿ ಪರಿಣಮಿಸುತ್ತದೆ. ಹೀಗಾಗಿ ಮಕ್ಕಳ ಕಥೆ–ಕವನಗಳ ಉದ್ದೇಶ ಇದೇ ಆಗಿದೆ. ಬೆಳೆಯುವ ಮಕ್ಕಳಲ್ಲಿ ಇಂಥ ವಿಷಯಗಳು ಗಾಢವಾದ ಪರಿಣಾಮ ಬೀರಲು ಸಾಧ್ಯವಿದೆ. ದಿನಕರ ದೇಸಾಯಿಯವರು ಇಂಥ ಅಭಿವ್ಯಕ್ತಿಯನ್ನು –

‘ನಗುಮುಖವೆಂದಿಗು ಇರಲೆಣ್ಣಾ
ನೀವೇ ಸುಂದರ ಕಾಮಣ್ಣ
ಅಳುಬುರುಕಾದರೆ ನನ ತಮ್ಮಾ
ನಿನಗೆಂಬರು ಕಾಡಿನ ಗುಮ್ಮ’[೬೭].

‘ನಗುವೆಂದರೆ ಘಮ ಘಮಿಸುವ ಹೂವು
ಅಳುವೆಂದರೆ ತಾಪತ್ರಯ ನೂರು
ಮಕ್ಕಳು ನಕ್ಕರೆ ಹೂವಿನ ತೋಟ
ಹಾಲೂ ಸಕ್ಕರೆ ಸವಿಯೂದೂಟ’[೬೮].

ನಗು ಸೌಂದರ್ಯದ ಸಂಕೇತ ನಗು ಬದುಕಿಗೆ ಉಲ್ಲಾಸ ನೀಡುತ್ತದೆ. ನಗುವಿಗೆ ಎಲ್ಲರೂ ಮರುಳಾಗುವರು. ಇದು ಸಹಜವಾದುದಾಗಿರಬೇಕು. ಇಂಥ ನಗು ಪ್ರತಿಯೊಬ್ಬರಲ್ಲಿ ಮೂಡಲಿ ಎನ್ನುವುದು ಕವಿಯ ಆಶಯ. ಅಳುಬುರುಕನಾದರೆ ಅವನು ಕಾಡಿನಲ್ಲಿರುವ ಗುಮ್ಮನಾಗಿ ಕಾಣುತ್ತಾನೆ. ಮಕ್ಕಳು ನಕ್ಕರೆ ಸುವಾಸನೆ ಭರಿತವಾದ ಪರಿಮಳದ ಹೂವು ಇದ್ದಂತೆ. ಇಲ್ಲದಿದ್ದರೆ ಅವನ ಬಾಳು ತೊಂದರೆಯ ತವರೂರು ಎಂದು ಭಾವಿಸಲಾಗಿದೆ. ಮಕ್ಕಳು ನಗುಮುಖದವರಾದರೆ ತೋಟದಲ್ಲಿ ಅರಳಿದ ಹೂವಿನಂತೆ. ಹಾಲು–ಸಕ್ಕರೆಯ ಸವಿ ಊಟದಂತೆ ಎಂಬುದು ದಿನಕರ ದೇಸಾಯಿಯವರು ತಿಳಿಸುತ್ತಾರೆ. ದಿನಕರರ ಕವನಗಳ ಲಕ್ಷಣಗಳಲ್ಲಿ ಭಾವೈಕ್ಯತೆಯು ಒಂದು, ಉಪಮೆ, ರೂಪಕಗಳು ಮಕ್ಕಳ ಮನಸ್ಸಿಗೆ ಮುಟ್ಟುವುದರಿಂದ ಹೆಚ್ಚಾಗಿ ಬಳಸಿದ್ದಾರೆ. ಗಾದೆ ಮಾತುಗಳನ್ನು ತಮ್ಮ ಕೃತಿಗಳಲ್ಲಿ ಹಿಡಿದಿಡುವ ಕಲೆ ಇವರದು. ‘ಮಳೆಯ ಅಬ್ಬರ’ ಕವನದಲ್ಲಿ –

‘ಗುಡುಗುಡು ಗುಡುಗುಡು ಗುಡುಗಮ್ಮಾ
ಹಪ್ಪಳ ತಾರೇ ನಾಗಮ್ಮ
ಸಪ್ಪಳ ಮಾಡದೆ ತಿನ್ನೋಣ

ಮಳೆರಾಯನ ಪದ ಅನ್ನೋಣ
ಜೋ ಜೋ ಜೋ ಜೋ ನನತಂಗಿ
ಜೋಗುಳ ಹಾಡುವ ರಸಗಂಗಿ'[೧೯].

ಮಳೆಯ ಅಬ್ಬರದ ಜೊತೆಯಾಗಿ ಹಪ್ಪಳ ತಿನ್ನುವ ಚಪಲ ಮಕ್ಕಳಲ್ಲಿ ವ್ಯಕ್ತವಾಗಿದೆ. ಹಾಗೆಯೇ ಕವನದುದ್ದಕ್ಕೂ ಸೊಂಪು-ಕೆಂಪು-ಗುಂಪು, ಆಟ-ಕಾಟ, ಸಣ್ಣ-ಬಣ್ಣ, ಜೇನು-ಮೀನು-ಹೇನು ಮೊದಲಾದ ಪ್ರಸಬದ್ಧ ಕವನ ರಚನೆಯ ಪ್ರತಿಭೆ ದಿನಕರ ದೇಸಾಯಿಯವರದು ಎನ್ನಬಹುದು. ಅನುಕರಣ ಪದಗಳು, ಗೇಯತೆಯ ಗುಣ, ಮಕ್ಕಳನ್ನು ರಂಜಿಸುವಲ್ಲಿ ಸಹಕಾರಿ. ಮಕ್ಕಳ ಮನೋಭಾವಕ್ಕೆ ಏನು ಬೇಕು ಅವೆಲ್ಲವುಗಳು ದಿನಕರರು ತಮ್ಮ ಮಕ್ಕಳ ಕೃತಿಗಳಲ್ಲಿ ಮೂಡಿಸಿದ್ದಾರೆ. 'ಮಕ್ಕಳ ಗೀತೆಗಳು' ಎಂಬ ಕವನ ಸಂಕಲನದ ಮುನ್ನುಡಿಯಲ್ಲಿ –

'ಕನ್ನಡ ನುಡಿ ಮರದಲಿ ಹಣ್ಣಾಗಿದೆ
ಕವನದ ಮಾಗಾಯಿ
ಸವಿಯೋ ಹುಳಿಯೋ ಕಹಿಯೋ ಕೇಳುವ
ದಿನಕರ ದೇಸಾಯಿ'[೨೦].

ಹೀಗೆ ದಿನಕರ ದೇಸಾಯಿಯವರು ಕೇಳುತ್ತಾರೆ. ಕನ್ನಡ ನುಡಿ ಎಂಬ ಮಾವಿನ ಮರದಲ್ಲಿ ಕವನವೆಂಬ ಮಾವಿನಕಾಯಿ ಹಣ್ಣಾಗಿದೆ. ಅದರ ರುಚಿ ಹೇಗಿದೆ ಎಂದಿರುವರು, ಆದರೆ ಅದು ಕಹಿಯಾಗಿರದೆ, ಹುಳಿಯಾಗಿರದೆ ಸವಿಯಾಗಿದೆ. ಇಂಥ ಸಾಲುಗಳು ಮಕ್ಕಳಿಗೆ ಮಾತ್ರವಲ್ಲದೆ ಹಿರಿಯರಿಗೂ ಸಂತೋಷ ನೀಡುತ್ತವೆ. ಇದು ದಿನಕರರ ಕಾವ್ಯದ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸುತ್ತದೆ.

ದಿನಕರ ದೇಸಾಯಿಯವರು ಮಕ್ಕಳಿಗಾಗಿ ಬರೆದ ಕವನಗಳು ಹಿರಿಯರಿಗೂ ಅನ್ವಯಿಸುವ ರೀತಿಯಲ್ಲಿ ವಿಚಾರಪೂರ್ಣವಾಗಿವೆ. ಮಕ್ಕಳಿಗೆ ಕವಿತೆ ಬಾಹ್ಯ ಅರ್ಥವನ್ನು ತಿಳಿಸಿದರೆ, ಹಿರಿಯರಿಗೆ ಕವನದ ಅಂತರಂಗದ ಅರ್ಥ ತೆರೆದು ತೋರುತ್ತದೆ. ಅವುಗಳಲ್ಲಿ 'ಉಗಿಬಂಡಿ', 'ಗಡಿಯಾರ', 'ಸಾಬೂನು', 'ಅಂಚೆಯವನು', 'ಭಿಕ್ಷುಕರು' ಮೊದಲಾದವುಗಳು ಮುಖ್ಯವಾಗಿವೆ. ದಿನಕರ ದೇಸಾಯಿಯವರ ಕಾವ್ಯದ ವೈವಿಧ್ಯತೆಗಳನ್ನು ವಿ. ಕೃ. ಗೋಕಾಕರು ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. 'ಅವರ ಕಾವ್ಯದ ವಿವಿಧ ಲಹರಿಗಳಲ್ಲೆ ಅನನ್ಯತಮವಾದ ಒಂದು ಲಹರಿಯೆಂದರೆ ಶಿಶುಗೀತೆಗಳಂತೆ ಕಾಣುವ ಪ್ರಕಾರ, ಆದರೆ ಅವು ಶಿಶುಗೀತೆಗಳಲ್ಲ. ಶಿಶುಗೀತೆಗಳಂತೆ ಸಹಜವಾಗಿ ರೂಪವನ್ನು ಪಡೆದ ಸುಂದರ ಕವಿತೆಗಳು. ಈ ಕವಿತೆಗಳಲ್ಲೆ ಒಂದು ನೀತಿ ಪಾಠವನ್ನು ಕವಿ ಕಲಿಸುತ್ತಿರುವಂತೆ ಕಾಣುತ್ತದೆ. ಆದರೆ ಅದು ಬರೀ ನೀತಿ ಪಾಠವಲ್ಲ, ಹೃದಯದಲ್ಲಿ ನೇರವಾಗಿ ಉಗಮಿಸಿ ಹೃದಯವನ್ನು ಮುಟ್ಟುವ ರತ್ನಪಾಠ'[೨೧] ಎನ್ನುವ ಮಾತುಗಳು ಸತ್ಯವಾಗಿವೆ. ಪ್ರಾಸ, ಪದಜೋಡಣೆ ಸುಲಭವಾಗಿದ್ದು ಮಕ್ಕಳನ್ನು ಸಹಜವಾಗಿ ಗಮನ ಸೆಳೆಯುತ್ತವೆ.

'ಲಗು ಲಗು ಬುಗು ಬುಗು ಉಗಿಬಂಡಿ
ಯಂತ್ರ ಯುಗಾದಿಯ ಚಾಮುಂಡಿ
ಎತ್ತುಗಳಿಲ್ಲದೆ ಹೋಗುವ ಬಂಡಿ
ಕುದಿಯುವ ನೀರಿನ ಕಬ್ಬಿಣ 'ಹಂಡಿ'
ಬೆಂಕಿಯ ಕಿಡಿಗಳನುಗುಳುವ ಚಂಡಿ'[೨೨].

ಯಂತ್ರಯುಗದ ಆರಂಭದಲ್ಲಿ ಉಗಿಬಂಡಿಯನ್ನು ಭೌತಿಕವಾಗಿ ವರ್ಣಿಸುವಲ್ಲಿ ಶಕ್ತಿಯ ಅಧಿದೇವತೆ ಚಾಮುಂಡಿಯಂತೆ ಕಾಣುತ್ತದೆ. ರೈಲಿನಲ್ಲಿಯ ಕುದಿಯುವ ನೀರನ್ನು ಹಂಡೆಯಲ್ಲಿ ಕುದಿಯುವ ನೀರಿಗೆ ಹೋಲಿಸುವ ಪರಿ ಅಚ್ಚರಿ ಮೂಡಿಸುತ್ತದೆ.

'ವರ್ಗ ಬೇಧ ನಿನ್ನೊಳಗಿನ ಕುತ್ತು
ಮೊದಲನೆಯ ವರ್ಗ ಸುಖಶಾಂತಿಯ ಚಿತ್ತ
ಕೊನೆಯ ವರ್ಗ ತಲೆಗೇರಿತು ಪಿತ್ತ'[೨೩].

ಇದು ರೈಲಿನಲ್ಲಿಯ ವರ್ಗ ವೈಷಮ್ಯವನ್ನು ಪ್ರತಿನಿಧಿಸುತ್ತದೆ. ಮಗು ಅರ್ಥವನ್ನು ಗ್ರಹಿಸದೆ ಹೋದರೂ ರೈಲನ್ನು ನೋಡಿ ಆನಂದ ಹೊಂದುವ ಭಾವ ವ್ಯಕ್ತಪಡಿಸುತ್ತದೆ. ಅದೇ ರೀತಿಯಾಗಿ 'ಗಡಿಯಾರ' ಕವಿತೆಯ ಬಾಹ್ಯ ನೋಟ ಸಾಮಾನ್ಯವಾಗಿ ಕಂಡರೂ ತಾತ್ವಿಕವಾಗಿ ಇನ್ನೊಂದು ರೂಪವನ್ನು ಅಭಿವ್ಯಕ್ತಗೊಳಿಸುತ್ತದೆ. ಮಕ್ಕಳಿಗೆ ಸರಳವಾದ ಹೇಳಿಕೆಗಳನ್ನು ತಿಳಿಸುತ್ತ ಗಹನವಾದ ತಾತ್ವಿಕತೆಯನ್ನು ದಿನಕರ ದೇಸಾಯಿಯವರು ವ್ಯಕ್ತಪಡಿಸುತ್ತಾರೆ. ಗಡಿಯಾರದ ಭೌತಿಕ ಸ್ವರೂಪದ ವರ್ಣನೆಯನ್ನು ತಿಳಿಸುವುದರೊಂದಿಗೆ ಒಳಾರ್ಥದಲ್ಲಿ ದಿನಕರರು ಯಂತ್ರಯುಗದ ದುಡಿಯುವ ವರ್ಗದ ಗೋಳನ್ನು, ದುಡಿಸಿಕೊಳ್ಳುವ ಸಿರಿವಂತರ ದರ್ಪವನ್ನು ಅಭಿವ್ಯಕ್ತಗೊಳಿಸುತ್ತಾರೆ.

'ಸುಮಾರು ನಲವತ್ತು ವರುಷಗಳಿಗೂ ಹಿಂದೆ ಈ ಕವಿತೆ ಪ್ರಕಟವಾದ ಕವಿಯ ಸಮಕಾಲೀನ ವಿಮರ್ಶಕರು ಇದನ್ನು ಕೇವಲ ಮಕ್ಕಳ ಕವಿತೆ ಎಂದು ಅಲಕ್ಷಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ಆ ಕವಿತೆಯ ಶ್ರೀಮಂತ ಅರ್ಥ, ಪರಿಸರವನ್ನು ವಿಶ್ಲೇಷಿಸಲು ಅವಶ್ಯಕವಾದ ವಿಮರ್ಶಕ ಉಪಕರಣಗಳು ಆಗಿನ್ನೂ ತಯಾರಾಗಿದ್ದಿಲ್ಲ. ಆದರೆ ಹೊಸ ವಿಮರ್ಶೆಯ ಸಂದರ್ಭದಲ್ಲಿಯೂ ಇಂಥ ಅಲಕ್ಷ್ಯ ಮುಂದುವರೆದದ್ದು ದುರದೃಷ್ಟಕರ'[೨೪] ಎಂದು ಗಿರೀಶ ಕಾರ್ನಾಡರು ಅಭಿಪ್ರಾಯಪಡುತ್ತಾರೆ.

'ಗಡಿಯಾರ ಯಾಂತ್ರಿಕ ವಿಜ್ಞಾನಕ್ಕೆ ಸಂಕೇತವಾಗಿದ್ದರೆ ಕವಿಯ ದೃಷ್ಟಿಗೆ ಒಂದು ವ್ಯಂಗ್ಯವಾದ ವಸ್ತು ಪ್ರತಿರೂಪವು (Objective Correlative) ಆಗಿದೆ'[೨೫] ಎಂದು ಗಿರೀಶ ಕಾರ್ನಾಡರು ಅಭಿಪ್ರಾಯ ವ್ಯಕ್ತಪಡಿಸಿರುವುದು ಸೂಕ್ತವಾಗಿದೆ. ಗಡಿಯಾರವನ್ನು ದಿನಕರ ದೇಸಾಯಿಯವರು 'ಗಂಟೆಯ ನೆಂಟ' ಎಂದು ಕರೆದುದು ವಿಶೇಷವಾಗಿದೆ. ಗೋಲಾಕಾರ, ಬೆಳ್ಳಿಯ ಬಣ್ಣ ಬಾಳು, ಹಗಲು-ಇರುಳು ದುಡಿಯುವದೇ ಅದರ ಕೆಲಸ. ಗಡಿಯಾರಕ್ಕೆ ಕೂಳು (ಆಹಾರ) ಎಂದರೆ ಕಿವಿ ಹಿಂಡುವುದು, ಆಳುವ ವರ್ಗದ

ಬೈಗುಳ, ದರ್ಪದ ಮನೋಭಾವ ದುಡಿಯುವವರಿಗೆ ಕೂಳಾದಂತೆ ಗಡಿಯಾರದ ಪಾಡಾಗಿದೆ. ಗಡಿಯಾರದ ಪ್ರತಿಯೊಂದು ಭಾಗವನ್ನು ವರ್ಣಿಸುವ ದಿನಕರ ದೇಸಾಯಿಯವರು ಗಡಿಯಾರವನ್ನು 'ರಾಕ್ಷಸಪುತ್ರ' ಎಂದು ಕರೆದಿರುವುದು ಔಚಿತ್ಯವೆನಿಸುತ್ತದೆ.

'ಟಿಕ್ ಟಿಕ್ ಎನ್ನುತ ಹೇಳುವೆಯೇನು?
ನಿನ್ನೀ ಮಾತಿನ ಒಳಗುಟ್ಟೇನು?'[೭೬].

ಎಂದು ದಿನಕರರು ಕಾಲವು ನಿಲ್ಲುವುದಿಲ್ಲವೇನು ಎಂಬ ಪ್ರಶ್ನೆ ಮಾಡಿ ಉತ್ತರವನ್ನು ಕಂಡುಕೊಳ್ಳುತ್ತಾರೆ. ಟಿಕ್ ಟಿಕ್ ಗೆಳೆಯ ಎಂಬುದನ್ನು ಕುರಿತು ಗಿರೀಶ ಕಾರ್ನಾಡರು ಹೇಳುವುದು ಆಧುನಿಕ–ಪ್ರಗತಿಗೆ ಆಪತ್ತುದಾಯಕವಾದುದು ಎಂಬ ಮಾತು ತಾತ್ವಿಕವಾಗಿ ಒಪ್ಪಲೇಬೇಕು. 'ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್ ಇದು ಕವಿತೆಯ ಪಲ್ಲವಿಯೂ ಹೌದು. ಆದ್ದರಿಂದ ನಾವು ಇದನ್ನು ಗಂಭೀರವಾಗಿ ಪರಿಕಿಸಬೇಕಾಗಿದೆ, ಗಡಿಯಾರ ನಡೆಯುತ್ತಿದೆ (ಜೀವಂತವಾಗಿದೆ) ಎಂಬುದಕ್ಕೆ ಅದು ಮಾಡುವ ಟಿಕ್ ಟಿಕ್ ಸದ್ದೇ ಸಾಕ್ಷಿ. ಆದರೆ ಈ ಟಿಕ್ ಟಿಕ್ ಸದ್ದು ಗಡಿಯಾರವನ್ನು ಮಾತ್ರ ಸೂಚಿಸುವುದಿಲ್ಲ. ಅದಕ್ಕೂ ಮುಂದೆ ಹೋಗಿ 'Clock Work' ಯಂತ್ರವನ್ನು ಉಪಯೋಗಿಸುವ 'ಟೈಂ ಬಾಂಬ್' (Time Bomb)ನ್ನು ನೆನಪಿಗೆ ತರುತ್ತಾರೆ. ಎರಡರಲ್ಲಿ ಭೇಧವಿಷ್ಟೇ; ನಿಶ್ಚಿತಗಳಿಗೆ ಒದಗಿದಾಗ ಟೈ ಬಾಂಬ್ ಸ್ಪೋಟವಾಗಿ ಎಲ್ಲವನ್ನು ನಾಶಗೊಳಿಸಿ ಬಿಡುತ್ತದೆ, ಶೂನ್ಯತೆಗೆ ಇಳಿಸುತ್ತದೆ, ಇಂಥ ವಿನಾಶಕ ಅಸ್ತ್ರವನ್ನು 'ಗೆಳೆಯಾ' ಎಂದು ಕರೆದು ಕವಿ ತನ್ನ ಬೌದ್ಧಿಕ ಸಮಸ್ಯೆಗೆ ವಿನಾಶವೊಂದೆ ಪರಿಹಾರವೆಂದು ಹೇಳುತ್ತಾನೆ'[೭೭]. ಈ ಸಾಲುಗಳ ಕುರಿತು ಗಿರೀಶ ಕಾರ್ನಾಡರು ವಿಮರ್ಶೆಯ ಪರಿಮಿತಿಯನ್ನು ಮೀರಿ ಗ್ರಹಿಸಿರುವ ಸಾಧ್ಯತೆಯಿದೆ. 'ದುಡಿದು ಬಳಲಿದರೂ ಮುಖದಲ್ಲಿ ಕಾಂತಿ ಕುಂದಿಲ್ಲ' ಇದು ಕರ್ಮದ ಮರ್ಮ ಎಂದು ದಿನಕರ ದೇಸಾಯಿಯವರು ಹೇಳಿರುವ ಮಾತು ಔಚಿತ್ಯಪೂರ್ಣವಾದುದು.

'ದುಡಿಯುವದೊಂದೇ ಕೂಲಿಯ ಕರ್ಮ
ದುಡಿಸುವದೇ ಶ್ರೀಮಂತರ ಧರ್ಮ
ಇಂತಿರುವುದು ಭಗವಂತನ ಮರ್ಮ'[೭೮].

ದಿನಕರರ ಈ ನುಡಿಗಳು ಬದುಕಿಗೆ ಪೂರಕವೆನಿಸುತ್ತವೆ. ದುಡಿಯುವುದು ಕೂಲಿಯ ಪಾಲಿಗೆ ಕರ್ಮವಾದರೆ, ಅವನನ್ನು ದುಡಿಸಿಕೊಳ್ಳುವ ಒಡೆಯನ ಧರ್ಮ, ಪ್ರಾಮಾಣಿಕವಾಗಿ ದುಡಿಯುವ ಕೂಲಿಗೆ ಅದು ಅವನ ಕರ್ಮ ಎಂಬ ನಂಬಿಕೆಯನ್ನು ತುಂಬಿದ ಸಿರಿವಂತರು ಕೂಲಿಕಾರರನ್ನು ತಮಗೆ ಬೇಕಾದಂತೆ ದುಡಿಸಿಕೊಳ್ಳುವುದೇ ತಮ್ಮ ಧರ್ಮ ಎಂದುಕೊಂಡಿದ್ದಾರೆ. ಇದನ್ನು ಬಂಡವಾಳಶಾಹಿಗಳು, ಧನಿಕರು ತಮ್ಮ ಸ್ವಾರ್ಥಕ್ಕಾಗಿ ಮಾಡಿಕೊಂಡ ಮರ್ಮವೆಂದು ಕವಿಯ ಅಭಿವ್ಯಕ್ತಿಯಾಗಿದೆ. ದಿನಕರ ದೇಸಾಯಿಯವರು ಇದು ಮಕ್ಕಳಿಗಾಗಿ ಬರೆದ ಕವನವಾದರೂ, ಹಿನ್ನೆಲೆಯಾಗಿ ಇದು ದುಡಿಯುವ ವರ್ಗದ ವೇದನೆಯನ್ನು ಪ್ರತಿನಿಧಿಸುತ್ತದೆ. ಮಕ್ಕಳು ಗಡಿಯಾರದ ಭೌತಿಕ ಸೌಂದರ್ಯವನ್ನು ಆಸ್ವಾದಿಸಿದರೆ ತಾತ್ವಿಕವಾಗಿ ಕವನ ಹಲವು ಆಯಾಮಗಳನ್ನು ಬಿಚ್ಚಿಕೊಳ್ಳುತ್ತ ಹೋಗುತ್ತದೆ.

‘ಬುರು ಬುರು ಬುರು ಬುರು ನೊರೆಯಣ್ಣಾ
ಕಲಿಯುಗವೆಂದರೆ ಹೀಗಣ್ಣ
ಹೊರಗಿನ ಬಣ್ಣವು ಕೆಂಪಾಗಿದ್ದರು
ಹಳದಿ ನೀಲಿ ಎಂಥದು ಇದ್ದರು
ಹೃದಯದ ನೊರೆ ಸತತವು ಬಿಳಿ ಶುದ್ಧವು’[೭೯].

ಸಾಮಾನ್ಯ ವಸ್ತುವಾದ ‘ಸಾಬೂನು’ ದೇಸಾಯಿಯವರ ಕಣ್ಣಿಗೆ ಅಸಾಮಾನ್ಯವಾಗಿ ಕಂಡಿದೆ. ಸಾಬೂನು ಪರೋಪಕಾರಿಯಾಗಿ ವ್ಯಕ್ತಗೊಂಡರೂ ನೊರೆಯನ್ನು ಆಧುನಿಕ ಕಾಲದ ನಾಜೂಕನ್ನು ಸೂಚಿಸುತ್ತದೆ. ಸಾಬೂನಿನ ಬಣ್ಣಗಳು ಬೇರೆ-ಬೇರೆಯಾಗಿರಬಹುದು. ಆದರೆ ಸಾಬೂನಿನಿಂದ ಹೊರ ಸೂಸುವ ನೊರೆಯ ಬಿಳಿಯಾದ ಬಣ್ಣ ನಿರ್ಮಲ ಭಾವವನ್ನು ಅಭಿವ್ಯಕ್ತಪಡಿಸುತ್ತದೆ.

ಮಾನವನು ಬದುಕಿನಲ್ಲಿ ಬಾಹ್ಯ ಪ್ರಪಂಚಕ್ಕೆ ಭಿನ್ನವಾದ ಬಣ್ಣದ ರೂಪವನ್ನು ಪಡೆದು ಅಂತರಂಗದಲ್ಲಿ ಶುದ್ಧ ಭಾವವನ್ನು ಹೊಂದಬೇಕು. ಸಾಬೂನಿನಂತೆ ಸಹನೆಯ ಗುಣ ಬೆಳೆಸಿಕೊಳ್ಳುವುದು ದಿನಕರರ ಆಶಯ, ಎಷ್ಟು ತಿಕ್ಕಿದರೂ ನೋವು ವ್ಯಕ್ತಗೊಳಿಸದೆ ಬಿಳಿಯ ನೊರೆಯನ್ನು ಹೊರಬಿಡುವ ಪರಿಯನ್ನು ಕವಿ ಅಚ್ಚರಿಯಾಗಿ ನೋಡುತ್ತಾನೆ. ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಶುಭ್ರತೆಯನ್ನು ನೀಡುವ ಸಾಬೂನು ಆದರ್ಶದ ಸಂಕೇತವಾಗಿ ಬಳಕೆಯಾಗಿದೆ. ತಾತ್ವಿಕ ದೃಷ್ಟಿಯಿಂದ ಇದನ್ನು ಒಪ್ಪಿಕೊಳ್ಳಲೇಬೇಕು. ‘ಕವಿತೆಯ ವಸ್ತು ರೂಪ ಯಾವುದೇ ಇರಲಿ, ಅದನ್ನು ಸರಸವಾಗಿ ಸರಳವಾಗಿ ಮಾನವೀಯ ಭಾವನೆಯೊಂದಿಗೆ ಮುನ್ನಡೆಸುವ ನಿರೂಪಣಾ ಶಕ್ತಿ ದೇಸಾಯಿಯವರ ಕಾವ್ಯ ಶೈಲಿಯಾಗಿದೆ. ಪ್ರಾಸಮೋಹ ಹೆಚ್ಚು ಎಂದು ಕೆಲವರಿಗನಿಸಿರಬಹುದಾದರೂ ಪ್ರಾಸಗಳು ಇವರ ಕಾವ್ಯದಲ್ಲಿ ಹೇಳಿಕಳಿಸಿದ ಹಾಗೆ ಬರುತ್ತವೆ. ಆಡುವ ಭಾಷೆಯಲ್ಲಿಯೇ ಆಧುನಿಕ ಪ್ರಜ್ಞೆಯನ್ನು ಪ್ರಗತಿಶೀಲತೆಯನ್ನು ಇವರು ಮೆರೆಯಬಲ್ಲರು’[೮೦] ಎನ್ನುವ ಚನ್ನವೀರ ಕಣವಿಯವರ ಮಾತು ಮಕ್ಕಳ ಸಾಹಿತ್ಯ ರಚಕರಿಗೆ ಪ್ರಾಸ, ಗೇಯತೆ, ರಂಜಕತೆಗಳು ಪೂರಕವಾಗಿ ಬೇಕೆನ್ನುವುದು ಸೂಕ್ತವೆನಿಸುತ್ತದೆ.

೫.೩ ಕುವೆಂಪು :

ಜಗದ ಕವಿ, ಯುಗದ ಕವಿ, ರಸಋಷಿ, ಸಹ್ಯಾದ್ರಿ ವನದ ಕಾವ್ಯರ್ಷಿ ಮುಂತಾದ ಬಿರುದುಗಳಿಂದ ಹೊಗಳಿಸಿಕೊಂಡವರು ಕನ್ನಡದ ಕುವೆಂಪು. ಅಪ್ರತಿಮ ಪ್ರತಿಭೆಯುಳ್ಳವರು. ಸಾಹಿತ್ಯ ರಸಿಕರಿಗೆ ಅವರ ದೈತ್ಯ ಪ್ರತಿಭೆ ಬೆರಗು ಮೂಡಿಸುತ್ತದೆ. ‘ಆಡು ಮುಟ್ಟದ ಸೊಪ್ಪಿಲ್ಲ’ ಎಂಬ ಗಾದೆ ಮಾತಿನಂತೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ತಮ್ಮನ್ನು ತೊಡಗಿಸಿಕೊಂಡವರು. ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ಕುವೆಂಪು ಅವರು ಅನನ್ಯ ಪ್ರತಿಭೆಯನ್ನು ಮೆರೆದಿರುವರು. ಕನ್ನಡ ಸಾಹಿತ್ಯ ಲೋಕದಲ್ಲಿ ಮರೆಯಲಾಗದ

ಮಾಣಿಕ್ಯವಾಗಿದ್ದಾರೆ. 'ಕುವೆಂಪು ಕನ್ನಡ ಸಂಸ್ಕೃತಿಯ ಅಶೋಕಸ್ತಂಭ; ಹೊಸ ಶತಮಾನದ ಮುಂಜಾವದಲ್ಲಿರುವ ನಮ್ಮ ಪಾಲಿಗೆ ಕುವೆಂಪು ಬರಹಗಳು, ವಿಚಾರಗಳು ಚೇತೋಹಾರಿಯಾಗಿವೆ. ಸ್ವತಂತ್ರ ಮನೋಧರ್ಮ, ನೇರವಾದ ನಿಸರ್ಗ ಅನುಭವ, ಬದಲಾಗದ ತತ್ವನಿಷ್ಠೆ, ಅನಿಕೇತನ ಪ್ರಜ್ಞೆ, ಇವು ಕುವೆಂಪುರವರ ವ್ಯಕ್ತಿತ್ವದ ನಾಲ್ಕು ಮುಖಗಳು'[೮೧].

'ವಿವೇಕಾನಂದರ ಪ್ರಖರ ವೈಚಾರಿಕತೆ, ಬುದ್ಧನ ಪ್ರಸನ್ನತೆ, ಮಗುವಿನ ಅಪಾರ ಮುಗ್ಧತೆ, ಸತ್ಯದ ಯಾವುದೇ ಸಣ್ಣ ಕಿರಣದ ದರ್ಶನದಿಂದ ಕೂಡ ಯಾವತ್ತೂ ಯಾವ ಕಾರಣಕ್ಕೂ ಕಿಂಚಿತ್ತೂ ವಂಚಿತನಾಗಬಾರದೆನ್ನುವ ಜ್ಞಾನದ ಹಸಿವು, ತನಗಿಂತಲೂ ಭಿನ್ನವಾದುದರ ಕಡೆಗೆ ಮನ್ನಣೆಯಿತ್ತು ಗೌರವಿಸುವ ತೆರೆದ ಮನಸ್ಸು, ಅನಿಕೇತನ ಚಿಂತನೆಯ ಮಹಾನ್ ಚೇತನವಾದ ಕುವೆಂಪು ಅವರಲ್ಲಿ ಏಕಕಾಲದಲ್ಲಿ ಮೈಳೈಸಿದ್ದವು'[೮೨].

ಈ ಅಭಿಪ್ರಾಯಗಳಲ್ಲಿ ಕುವೆಂಪುರವರ ವ್ಯಕ್ತಿತ್ವ ಮತ್ತು ಕನ್ನಡ ಸಾಹಿತ್ಯದ ಮೇಲಿರುವ ಅಪಾರ ಕಾಳಜಿ, ಸಾಹಿತ್ಯದ ವಿಭಿನ್ನತೆಗಳನ್ನು ಕಾಣಬಹುದು. ವೈಚಾರಿಕತೆ ನೆಲೆ ಕುವೆಂಪು ಕಂಡುಕೊಂಡ ಪ್ರಧಾನ ಉದ್ದೇಶವಾಗಿದೆ. ಕುವೆಂಪುರವರು ಸಾಮಾಜಿಕ ಕಳಕಳಿಯ ಮನೋಧರ್ಮದೊಂದಿಗೆ ಚಿಂತನೆ, ವಿಚಾರಪೂರ್ಣ ಮಾರ್ಗವನ್ನು ತೋರಿದವರು, ನವೋದಯ ಸಾಹಿತ್ಯದಲ್ಲಿ ಹೊಸತನದ ಹೊಳೆಯನ್ನು ಹರಿಸಿದವರು; ಬೆಳೆಸಿದವರು. ಇಂಥ ಕವಿಯ ಕುರಿತು ಸಿ.ಪಿ.ಕೆ. ಹೀಗೆ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ಶಿಶುವಿನ ಮುಗ್ಧ ಮನಸ್ಸಿಗೊದಗುವ ಸರಳಾನುಭವಗಳಿಂದ ಹಿಡಿದು ಮುಂದುವರಿದ ಪ್ರಬುದ್ಧ ಚೇತನಕ್ಕೆ ಲಭ್ಯವಾಗುವ ಗಾಢ, ಸಂಕೀರ್ಣ ಅನುಭವಗಳವರೆಗೆ ಕುವೆಂಪು ಅವರ ಭಾವಗೀತೆಗಳಲ್ಲಿ ವಿಸ್ಮಯಕರವಾದ ನಾನಾ ಭಾವಾನುಭಾವಗಳ ವ್ಯಾಪ್ತಿಯಿದೆ'[೮೩].

'ಕಾವ್ಯದ ಕೇಂದ್ರ ಮಾನವನ ಆಶೆ-ಆಕಾಂಕ್ಷೆಗಳು. ಅವನ ನೂರಾರು ಬಗೆಯ ಅಭಿಲಾಷೆ. ಆತಂಕ, ಹಂಬಲ, ಕನಸುಗಾರಿಕೆ, ಪ್ರೀತಿ, ಸುಖ-ದುಃಖ ಮೊದಲಾದವು ಕಾವ್ಯದ ವಸ್ತುಗಳಾದವು. ಜೀವನಶ್ರದ್ಧೆ, ಒಲುಮೆ, ಆದರ್ಶ, ನಿಸರ್ಗಪ್ರೇಮ, ಅನುಕಂಪ, ಮಾನವೀಯತೆ, ರಾಷ್ಟ್ರೀಯತೆ, ಆಧ್ಯಾತ್ಮಿಕತೆ, ಕಾವ್ಯದ ಮೌಲ್ಯಗಳೆನಿಸಿದವು. ಸರಳತೆ, ಆತ್ಮೀಯತೆ. ಮಧುರತೆ, ಕಾವ್ಯಭಾಷೆಯ ವೈಶಿಷ್ಟ್ಯಗಳಾದವು. ಗೇಯತೆ, ಭಾವತೀವ್ರತೆ, ನಾದಮಯತೆ, ಉತ್ಪ್ರೇಕ್ಷೆ, ಕಲ್ಪಕಥೆ, ರಮ್ಯತೆಗಳು ಕಾವ್ಯದ ಶರೀರವೆನಿಸಿದವು'[೮೪]. ಇವೆಲ್ಲವುಗಳು ನವೋದಯ ಕಾವ್ಯದ ಲಕ್ಷಣಗಳಾಗಿ ವ್ಯಕ್ತಗೊಂಡವು, ಇಂತಹ ಸಂದರ್ಭದಲ್ಲಿ ಮಕ್ಕಳಿಗಾಗಿ ಬರೆಯುವ ಹಂಬಲ ನಮ್ಮಲ್ಲಿ ಬೆಳೆಲು ಪ್ರಾರಂಭಗೊಂಡಿತು.

ಇಪ್ಪತ್ತನೆಯ ಶತಮಾನದ ಪೂರ್ವಭಾಗದಲ್ಲಿ ಮಕ್ಕಳ ಸಾಹಿತ್ಯದ ಕಲ್ಪನೆ ಸ್ಪಷ್ಟವಾಗಿ ಇರಲಿಲ್ಲ. ಮಕ್ಕಳ ಮನಸ್ಸು ಹೇಗಿರುವುದು, ಪೂರಕವಾಗಿ ರಂಜನೀಯ, ನೀತಿಯ, ಮಾರ್ಗದರ್ಶನಗಳನ್ನು ವಿಶೇಷ ರೀತಿಯಲ್ಲಿ ಒದಗಿಸಬೇಕೆಂಬ ವಿಚಾರ ಯಾರನ್ನು ಕಾಡಲಿಲ್ಲ. ಒಂದೊಂದು ಕಡೆ ಕೆಲವು ಪ್ರಯೋಗಗಳು ನಡೆದಿರುವುದು ಕಂಡುಬರುತ್ತದೆ. ಹಿರಿಯರಿಗಾಗಿ ರಚನೆಗೊಂಡ ಸಾಹಿತ್ಯವನ್ನು ಮಕ್ಕಳಿಗೂ ಕೊಟ್ಟ ಪ್ರಸಂಗಗಳನ್ನು ನೋಡಬಹುದಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಮಕ್ಕಳನ್ನು ಬಾಲ್ಯದಿಂದಲೇ ಉತ್ತಮ ನಾಗರಿಕ ಜೀವನ ಅನುಸರಿಸುವಂತೆ ಪ್ರೇರಣೆ ನೀಡುವ ವೈಯಕ್ತಿಕ ಒಲವುಗಳು ಹೆಚ್ಚಾದವು. ಮಕ್ಕಳ ಸುಂದರ ಕನಸುಗಳು ನಾಡಿನ ಭವಿಷ್ಯದ ರೂವಾರಿಗಳು ಮಕ್ಕಳನ್ನು ಮಾತ್ರ ದೇವರಿಗೆ ಸಮಾನ ಎಂದು ಹೋಲಿಸುತ್ತಾರೆ. ಅವರಲ್ಲಿರುವ ಮುಗ್ಧತೆ, ಪ್ರಾಮಾಣಿಕತೆ, ಪರಿಶುದ್ಧತೆಯನ್ನು ದೈವೀ ಸ್ವರೂಪದಲ್ಲಿ ಕಾಣಬಹುದು. ಜಾತಿ, ಮತ, ಪಂಥ, ವರ್ಗಗಳ ಬೇಧವಿಲ್ಲದೆ ವಿಶ್ವಮಾನವತ್ವದ ಪ್ರತಿರೂಪಕಗಳಾಗಿವೆ. ಇವು ಮೌಢ್ಯತೆಯ ಬಂಧನಗಳಿಂದ ಮುಕ್ತವಾಗಿ ನೈಸರ್ಗಿಕ ಗುಣಗಳಿಂದ ಒಳಗೊಂಡಿರುತ್ತವೆ. ಇಂತಹ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕೇವಲ ಭೌತಿಕವಾದ ವಿಷಯಗಳನ್ನು ಒದಗಿಸುವುದು ಪಾಲಕರ ಹೊಣೆಯಲ್ಲ. ಅದರ ಜೊತೆಯಾಗಿ ಬೌದ್ಧಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವ ಸಾಹಿತ್ಯ, ಸಂಗೀತ, ಲಲಿತ ಕಲೆಗಳನ್ನು ಮಕ್ಕಳಿಗೆ ತಿಳಿಸುವುದು ಅಷ್ಟೇ ಮುಖ್ಯವಾದುದು. ಮುಗ್ಧ ಮಕ್ಕಳ ಮನಸ್ಸಿನಲ್ಲಿ ಮತ್ಸರದ ಭಾವಸ್ಪಂದಿಸದಂತೆ ವಿಶಾಲ ಮನೋಭಾವದ ತಳಹದಿಯ ವೈಚಾರಿಕ ಪ್ರಜ್ಞೆಯನ್ನು ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

'ಮಕ್ಕಳ ಸಾಹಿತ್ಯ'ದ ಕುರಿತು ಆಲೋಚನೆಗೆ ತೊಡಗಿದಾಗ ಮೊದಲು ಕಂಡುಬರುವುದು ಮಕ್ಕಳ ಲಾಲಿ ಪದಗಳ ರೂಪದಲ್ಲಿ. ಮಗುವನ್ನು ಸಮಾಧಾನಪಡಿಸುವ ಸಂದರ್ಭಗಳಲ್ಲಿ, ತಾಯಿ ಭಾವನೆಗಳು ಹಾಡಿನ ಮೂಲಕ ವ್ಯಕ್ತಗೊಳ್ಳಬಹುದು. 'ಅಳುವ ಕಂದನ ತುಟಿಯು ಹವಳದ ಕುಡಿ ಹಾಂಗ' ಎನ್ನುವ ಲಾಲಿ ಹಾಡು; 'ಹಾಲು ಕುಡಿಯಪ್ಪ ಅನ್ನ ಉಣ್ಣಪ್ಪ ಬೆಳ್ಳಿಯ ತೊಟ್ಟಿಲಲ್ಲಿ ಮಲಗಪ್ಪ' ಎಂದು ಜನಪದ ಹೆಣ್ಣು ಮಗಳು ಹಾಡುವ ಹಾಡಿನಲ್ಲಿ ವಾತ್ಸಲ್ಯಭಾವ ಅಭಿವ್ಯಕ್ತಗೊಂಡಿದೆ. ಅಳುವ ಕಂದನನ್ನು ಸಮಾಧಾನಪಡಿಸಿ ಮಲಗಿಸುವಾಗ ತಾಯಿ ಹೇಳುವ ಜೋಗುಳ ಪದ, ಅಜ್ಜಿ ಹೇಳುವ ಕಥೆಗಳು ಯಾವುದೇ ಒಂದು ಪ್ರದೇಶಕ್ಕೆ ಒಂದು ಜನಾಂಗಕ್ಕೆ ಸೀಮಿತವಾದವುಗಳಲ್ಲ ಎನ್ನಬಹುದು. ಅವು ಸರ್ವಜನಾಂಗದ ಜೀವಾಳದ ಧ್ವನಿಗಳಾಗಿವೆ. ಜನಪದ ಕಥೆ, ಹಾಡುಗಳನ್ನು ಸಂಗ್ರಹಿಸಿ ಪ್ರಕಟಿಸುವ ಕೆಲಸ ನಡೆದಿರುವುದು ಮೊದಲು ಭಾರತೀಯ ಭಾಷೆಗಳಲ್ಲಿ. ಅದುವೇ ಮಕ್ಕಳ ಸಾಹಿತ್ಯದ ಬೆಳವಣಿಗೆಯ ಮೊದಲ ಹೆಜ್ಜೆಗಳು ಎನ್ನಬಹುದು. ಪಾಶ್ಚಾತ್ಯ ರಾಷ್ಟ್ರಗಳ ಸಂಪರ್ಕದಿಂದ ವೈಚಾರಿಕ ಮತ್ತು ವೈಜ್ಞಾನಿಕ ರೀತಿಯಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಪ್ರೇರಣೆಯನ್ನು ನಮ್ಮ ಬರಹಗಾರರು ಪಡೆದುಕೊಂಡಿರುವುದು ಸಹಜವಾಗಿ ಕಂಡುಬರುತ್ತದೆ. ಇದಕ್ಕೆ ಮುದ್ರಣ ಸೌಲಭ್ಯವೂ ಕಾರಣವಾಯಿತು. ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಆರಂಭವಾದುದು ಶಿಶುಸಾಹಿತ್ಯ, ಬಾಲಸಾಹಿತ್ಯ, ಕಂದನ ಕಥೆಗಳು ಮೊದಲಾದ

ಹೆಸರುಗಳಿಂದ. ಇಂದು ಈ ಕ್ಷೇತ್ರ ವಿಶಾಲವಾಗಿ ಬೆಳೆದಿರುವುದರಿಂದ, 'ಮಕ್ಕಳ ಸಾಹಿತ್ಯ' ಎಂಬ ಹೆಸರಿನಿಂದ ಭದ್ರನೆಲೆಯನ್ನು ಹೊಂದಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ 'ಮಕ್ಕಳ ಸಾಹಿತ್ಯ' ಎಂಬ ಪ್ರತ್ಯೇಕ ಪ್ರಕಾರ ಕಂಡು ಬರುವುದು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ. ಅವರೆಗೂ ನಮ್ಮ ಸಾಹಿತ್ಯ ಗದ್ಯ-ಪದ್ಯಗಳಿಂದ ಕೂಡಿದ, ಆಸ್ಥಾನ ಕವಿಗಳ, ಪಂಡಿತರ ರಚನೆಗಳಿಂದ ಒಳಗೊಂಡಿರುವುದು ಕಾಣುತ್ತೇವೆ. ಆನಂತರದಲ್ಲಿ ಶರಣರ ವಚನಗಳಲ್ಲಿ, ದಾಸರ ಕೀರ್ತನೆಗಳಲ್ಲಿ ಮಕ್ಕಳ ನಡೆ-ನುಡಿಯ ವರ್ಣನೆಗಳಿರುವುದು ಗುರುತಿಸಲು ಸಾಧ್ಯವಿದೆ. ಆದರೆ ಮಕ್ಕಳ ಮನಸ್ಸಿಗೆ ಮುದ ನೀಡುವ, ರಂಜಿಸುವ ಸಂಗತಿಗಳು ಕಂಡು ಬರುವುದಿಲ್ಲ. ಮಕ್ಕಳಿಗಾಗಿ ಪ್ರತ್ಯೇಕವಾದ ಸಾಹಿತ್ಯದ ಅಗತ್ಯ ಇದೆಯೆಂದು ಭಾವಿಸಿರುವುದು ಸಹ ವ್ಯಕ್ತಗೊಳ್ಳುವುದಿಲ್ಲ. ರಾಮಾಯಣ, ಮಹಾಭಾರತದ ಹಲವು ಪ್ರಸಂಗದ ಸನ್ನಿವೇಶಗಳನ್ನು ಮಕ್ಕಳು ಕೇಳುವ ಮತ್ತು ಹೇಳುವ, ತೃಪ್ತಿಯನ್ನು ಹೊಂದುವ ಕಾಲವಿತ್ತು. ಆದರೂ ಆ ಕಾಲದಲ್ಲಿ ಬಳಕೆಯಲ್ಲಿದ್ದ ಜನಪದ ಹಾಡುಗಳು, ತ್ರಿಪದಿಗಳು ಮಕ್ಕಳು ಆಸಕ್ತಿಯಿಂದ ಬಳಸುತ್ತಿದ್ದರು. ಕೋಲಾಟ, ದೊಡ್ಡಾಟ, ಮದುವೆ, ಜಾತ್ರೆ, ಉತ್ಸವ ಮೊದಲಾದ ಪ್ರಸಂಗಗಳಲ್ಲಿ ಮಕ್ಕಳು ಹಿರಿಯರೊಡನೆ ಕೂಡಿ ಹಾಡುತ್ತ-ಕುಣಿಯುತ್ತ ಆನಂದಪಡುತ್ತಿದ್ದರು. ಅಜ್ಜಿಯರಿಂದ ಕಥೆಯನ್ನು ಕೇಳಿದ ಮಕ್ಕಳು ಅವರಂತೆ ಅನುಕರಣೆ ಮಾಡುತ್ತಿದ್ದರು.

ಜನಪದ ಜೀವನ, ಸಂಸ್ಕೃತಿಯನ್ನು ಬೆಳೆಸುವ ನೀತಿದಾಯಕತೆ ಮುಖ್ಯವಾಗಿರುವುದು ತೋರುತ್ತದೆ. ಆದರೆ ಅವು ಮೌಖಿಕವಾಗಿ ಮಾತ್ರ ದೊರೆಯುತ್ತವೆ. ಹಿರಿಯರು ಮಕ್ಕಳಿಗೆ ನೀತಿಯ ಸಂಗತಿಗಳನ್ನು ತಿಳಿಸುವ ಉದಾಹರಣೆಗಳು ಹೇರಳವಾಗಿ ಕಂಡುಬರುತ್ತವೆ. 'ನಸುಕಿನಲಿ ಬೇಗೆದ್ದು, ಹಾಸಿಗೆಯ ಎತ್ತಿಟ್ಟು, ತೊಳೆದು ಮುಖ ಕೈಕಾಲು ದೇವರಿಗೆ ನಮಿಸು' ಎನ್ನುವ ಪ್ರತಿದಿನದ ಬೆಳಗು ಜಾವದ ಪದ್ಯಗಳಾಗಿವೆ. ಹಾಗೆಯೇ-

'ಬೆಳಗಾಯಿತು ಮೂಡಲಲ್ಲಿ,
ಬಾಲರಿರಾ ಬೇಗೆದ್ದು ಬನ್ನಿ ದೇವರಿಗೆ ನಮಿಸಿ
ಹಕ್ಕಿ ಪಕ್ಕಿಗಳೆಲ್ಲ ಹೊರಬಂದು, ಚಿಲಿಪಿಲಿ ಹಾಡುತಿಹವು
ಬಯಲಲ್ಲಿ,
ಗೋವುಗಳು ಬಿಡಿರೆಂದು ಅಂಬಾ ಎನುತಲಿಹವು
ನಾರಿಯರು ಭರಭರನೆ ಮೊಸರ ಕಡೆಯುವರು
ಬಾಲೆಯರು ಬಿಂದಿಗೆ
ಬೆಳಗಿ ನೀರ ತರುತಿಹರು'

ಇಂಥ ಹಾಡುಗಳನ್ನು ಮಕ್ಕಳಿಗೆ ಹಿರಿಯರು ಬೆಳಗಿನ ಸುರ್ಯೋದಯದ ಸಂದರ್ಭದಲ್ಲಿ ಹೇಳುತ್ತಿರುವುದು ವ್ಯಕ್ತವಾಗುತ್ತದೆ.

ಅದೇ ರೀತಿಯಾಗಿ ಪದ್ಯಗಳಂತೆ ಗದ್ಯದಲ್ಲಿ ಮಕ್ಕಳ ಮನೋಭಾವಕ್ಕೆ ನಿಲುಕುವ ಕಥಾ ಪಾಠಗಳು ರಚನೆಯಾದವು. ಪಂಚತಂತ್ರದ ಕಥೆಗಳು, ಹಿತೋಪದೇಶದ ಕಥೆಗಳು ಮುಂತಾದ ನೀತಿಯ ಕಥೆಗಳು ಮಕ್ಕಳ ಪಠ್ಯಗಳಲ್ಲಿರುವುದು ಕಂಡುಬರುತ್ತದೆ. ಪಕ್ಷಿ-ಪ್ರಾಣಿಗಳಿಂದ ಕೂಡಿದ ಕಥೆಗಳನ್ನು ರಚಿಸಿದರೆ ಅವು ಮಕ್ಕಳಿಗೆ ಬಲು ಪ್ರಿಯ ಎಂಬ ತಾತ್ವಿಕತೆ ವ್ಯಕ್ತವಾಗುತ್ತದೆ. ಮುಗ್ಧತೆಯನ್ನು ವ್ಯಕ್ತಪಡಿಸುವ ಧ್ರುವನ ಚರಿತ್ರೆ, ಸಾಹಸಗಳನ್ನು ತಿಳಿಸುವ ಭೀಮನ ಕಥೆ, ಮೊಸವನ್ನು ಅಭಿವ್ಯಕ್ತಗೊಳಿಸುವ ಬಕಪಕ್ಷಿಯ ಕಥೆ, ನರಿಯ ಕಥೆ, ಚತುರತೆಯನ್ನು ತಿಳಿಸುವ ತೆನ್ನಾಲಿ ರಾಮಕೃಷ್ಣನ ಕಥೆ ಮೊದಲಾದವು ಗದ್ಯದ ವಸ್ತುಗಳಾಗಿ ವ್ಯಕ್ತಗೊಂಡಿದೆ. ಲಯಬದ್ಧವಾದ ಪದಗಳಿಂದ ಕೂಡಿದ ಪದ್ಯಗಳನ್ನು ಪಠ್ಯಗಳಲ್ಲಿ ಸೇರಿಸಿ ಸೃಷ್ಟಿಯ ವೈಚಿತ್ರ್ಯಗಳನ್ನು ತಿಳಿಸುವ ಪ್ರಸಂಗ ಮನಮೋಹಕವಾದುದು.

'ಮೂಡಲೊಳಗೆ ಚಂದ್ರನೀಗ
ಮೂಡುತಿಹನು ದೂರ ದೂರ
ಕೋಡುತಿಹುದು ಕಳ್ಳನಂತೆ ಕೂಡೆ ಕತ್ತಲೆ
ನೋಡು ಮನೆಯ ಮೇಲೆ ಬೆಳಕು
ಕೂಡಿ ಬೆಳ್ಳಿಯಿಂದ ತಗಡು
ಮಾಡಿ ಹೊದಿಸಿದಂತೆ ಕಣ್ಗೆ,
ಹೊಳೆಯುತಿರುವುದು
ಮೇಲೆ ಬೆಳ್ಳಿ ಬಟ್ಟಲನ್ನು
ಹೋಲುತಿಹನು ಸಸಿಯು ನೆಲವು
ಹಾಲ ಮಳೆಯ ಕರೆದ ತೆರದಿ ಬೆಳಗುತಿರುವುದು'[೮೫].

ಇಲ್ಲಿ ಮಕ್ಕಳಿಗೆ ಚಂದ್ರೋದಯದ ಪರಿಚಯ ಮಾಡುವ ಸಂಗತಿ ವ್ಯಕ್ತಗೊಂಡಿದೆ. ಪರಿಚಿತವಾದ ವಸ್ತು ಮತ್ತು ದೃಶ್ಯ ಮಕ್ಕಳಲ್ಲಿ ಹೊಸ ಕಲ್ಪನೆಯನ್ನು ಮೂಡಿಸುವ ಬೆಳ್ಳಿ ತಗಡು, ಬೆಳ್ಳಿ ಬಟ್ಟಲು, ಹಾಲು ಹೊಳೆ ಮೊದಲಾದ ಪದಗಳು ಚಂದ್ರನನ್ನು ನೋಡುವ ದೃಷ್ಟಿಕೋನ ರಸವತ್ತಾಗಿ ಮೂಡಿದೆ.

'ಬಾಲರೆದ್ದ ಮೇಲೆ ಏನು ಮಾಡಬೇಕೆಲೇ
ಕಾಲು ಕೈ ಮುಖವನು ಹೀಗೆ ತೊಳೆಯಬೇಕೆಲೇ
ಮನೆಯ ಕೆಲಸ ನಾವು ಹೇಗೆ ಮಾಡಬೇಕೆಲೇ
ಮನಸು ಕೊಟ್ಟು ಕಸವಗುಡಿಸಿ ಹೀಗೆ ಬಿಸುಡಲೇ.....
ಶಾಲೆಯಲ್ಲಿ ಮಕ್ಕಳೇನು ಮಾಡಬೇಕೆಲೇ
ಬಳಪದಿಂದ ತಿದ್ದಿ ತೀಡಿ ಹೀಗೆ ಬರೆಯುವೆ
ಶಾಲೆ ಮುಗಿದ ಬಳಿಕ ಗುರುವ ನಮಿಸಿ
ಹೀಗೆ ನಡೆಯುವೆ.........'[೮೬]

ಹೀಗೆ ಮಗುವಿನ ಕೆಲಸ ಮತ್ತು ಮಗು ಅನುಸರಿಸುವ ನೀತಿಯನ್ನು ಈ ಪದ್ಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಮಗುವಿಗೆ ಹತ್ತಿರವಾದ ವಿಷಯ ವಸ್ತು ಕವಿತೆಯಲ್ಲಿ ಮುಖ್ಯವಾಗಿದೆ.

ಅಮೂರ್ತವಾದ ಕಲ್ಪನೆಯನ್ನು ಮಗುವಿಗೆ ತಿಳಿಸುವ ವಿಧಾನ ಸರಳತೆಯಿಂದ ಕೂಡಿದೆ. ಮಕ್ಕಳ ಅನುಭವಕ್ಕೆ ನಿಲುಕುವ ರೀತಿಯಲ್ಲಿ ನೀತಿ ಕಲಿಸುವ ರಚನೆ ಈ ಸಮಯದಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತಂದಿದೆ.

ಜಯರಾಜಾರ್ಯರು ೧೯೦೨ ರಲ್ಲಿ ನವಿಲನ್ನು ವಸ್ತುವನ್ನಾಗಿಟ್ಟುಕೊಂಡು ಮಕ್ಕಳಿಗಾಗಿ ರಚಿಸಿದ ಪದ್ಯ ಬಲು ಸುಂದರವಾಗಿ ಮೂಡಿದೆ.

'ನವಿಲೇ ನವಿಲೇ ನಲಿದಾಡು ನವಿಲೇ
ಸುಳಿ ಸುಳಿ ನವಿಲೇ
ಹಲಸಿನ ಮರದ
ಹೊಲದೊಳಗಿರುವೆ
ಊಟ ಮಾಡುವುದೆಲ್ಲಿ
ಕೂಟ ಕೂಡುವುದೆಲ್ಲಿ
ನೀಟಾದ ನವಿಲೇ'[೮೭]

ಇಂಥ ಪದ್ಯಗಳು ಮಕ್ಕಳಲ್ಲಿ ಕುತೂಹಲವನ್ನು ವ್ಯಕ್ತಗೊಳಿಸುವಲ್ಲಿ ಸಹಕಾರಿಯಾಗಿವೆ. ಮಕ್ಕಳಲ್ಲಿ ಇಂಥಹ ಪದ್ಯಗಳು ಪ್ರಶ್ನೆಗಳನ್ನು ಹುಟ್ಟಿಸುವುದರೊಂದಿಗೆ ಉತ್ತರವನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತವೆ. ಬಾಲ ಸಾಹಿತ್ಯದ ಮುಖ್ಯ ಉದ್ದೇಶ ಮಕ್ಕಳಿಗೆ ಆಲ್ಹಾದ ನೀಡುವುದು. ಈ ಎಲ್ಲ ಸಂಗತಿಗಳು ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ ಎನ್ನಬಹುದು. ನಂತರದಲ್ಲಿ ಬಂದ ಪಂಜೆಮಂಗೇಶರಾಯರು ಮಕ್ಕಳ ಸಾಹಿತ್ಯದ ರಚನೆಯಲ್ಲಿ ಪ್ರವೇಶ ಮಾಡಿದ ಸಮಯದಲ್ಲಿ ಬಾಲಸಾಹಿತ್ಯ ಪ್ರಕಾಶಮಾನವಾಗಿ ಬೆಳಗುತ್ತಿತ್ತು. ನಂತರದಲ್ಲಿ ಕನ್ನಡ ಸಾಹಿತ್ಯ ಲೋಕದ ಶಿಖರವೆನಿಸಿದ ಕುವೆಂಪುರವರು ಮಕ್ಕಳ ಸಾಹಿತ್ಯವನ್ನು ಉತ್ತುಂಗಕ್ಕೆ ತೆಗೆದುಕೊಂಡು ಬಂದರು. ಇಂತಹ ಅನನ್ಯ ಪ್ರತಿಭೆಯಾದ ಕುವೆಂಪುರವರ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿ ರೀತಿಯನ್ನು ಮತ್ತು ತಾತ್ವಿಕ ಸ್ವರೂಪವನ್ನು ಈ ಮುಂದೆ ಗಮನಿಸಬಹುದು.

ಕುವೆಂಪುರವರು ಯಾವುದೇ ನಿಷ್ಟುರ ಸಂಪ್ರದಾಯಕ್ಕೆ ತಲೆಬಾಗದ, ಜನಪದ ಸಂಸ್ಕೃತಿಯ ಸಾಮಾನ್ಯ ಪರಿಸರದಿಂದ ಬಂದವರು. ಹೀಗಾಗಿ ಅವರಿಗೆ ಯಾವುದೇ ಕಂದಾಚಾರ, ಮೂಢನಂಬಿಕೆಗಳು ಬಾಧಿಸುವದಿಲ್ಲ. ಅನುಭವ ಪ್ರಜ್ಞೆ ಕುವೆಂಪುರವರಿಗೆ ಆಗಾಧವಾದುದು. ಸಾಮಾಜಿಕ, ಅಸಂಗತ ವಿಷಯಗಳನ್ನು ಪ್ರತಿರೋಧಿಸುವ ನಿಲುವು ಅವರಲ್ಲಿದೆ. ಮಲೆನಾಡಿನ ನಿಸರ್ಗ ಸೌಂದರ್ಯ ಕವಿತ್ವವನ್ನು ಅರಳಿಸಿದಂತಿದೆ. ಸಂಸ್ಕೃತಿ ಪರಂಪರೆಗಳು ಸಾಮಾಜಿಕ ನಿಷ್ಠ, ಯುಗ ಧರ್ಮದ ಚೈತನ್ಯ ಮೂಡಿಸಿದವು. ಈ ರೀತಿಯಾಗಿ ಕುವೆಂಪುರವರು ಮಾನವೀಯ ಮೌಲ್ಯಗಳ ಮನೋಧರ್ಮದಿಂದ ಪ್ರಬುದ್ಧವಾದ ಮತ್ತು ವೈವಿಧ್ಯಮಯವಾದ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಕುವೆಂಪುರವರು ಶಿಶು ಸಾಹಿತ್ಯದಲ್ಲಿ ಮಾನವನು 'ವಿಶ್ವಮಾನವ'ನಾಗಿಯೇ ಆಗುತ್ತಾನೆಂಬ ಆಶಾಭಾವನೆಯು

ನೆಲೆಯಿಂದ ತಮ್ಮ ವೈಚಾರಿಕ ಚಿಂತನೆಗಳನ್ನು ಅಭಿವ್ಯಕ್ತಗೊಳಿಸಿದ್ದಾರೆ. ಲೇಖಕನಿಗೆ ಇಂಥ ವೈಚಾರಿಕ ಅಂಶಗಳು, ತಾತ್ವಿಕ ಮೌಲ್ಯಗಳಾಗಲು ಮುಖ್ಯ ಕಾರಣ ಸಮಕಾಲೀನ ಬದುಕಿನ ತಲ್ಲಣಗಳು. ಆದ್ದರಿಂದ ಅವರು ಏಕಕಾಲದಲ್ಲಿ ಪ್ರಾದೇಶಿಕ ನೆಲೆಯೊಂದಿಗೆ ವಿಶ್ವವ್ಯಾಪ್ತಿಯಾಗಿ ಚಿಂತಿಸುತ್ತಾರೆ. ಕುವೆಂಪುರವರು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸುವ ವಿಚಾರ ಧಾರೆಗಳು ದರ್ಶನ ಸ್ವರೂಪದಿಂದ ಗಂಭೀರವಾಗಿವೆ. ಈ ನೆಲೆಯಲ್ಲಿ ಕುವೆಂಪು ಅವರ ಮಕ್ಕಳ ಸಾಹಿತ್ಯ ಗುರುತಿಸುವುದು ಮುಖ್ಯವಾದ ಉದ್ದೇಶವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ತನ್ನ ತನಗೆ ತಾನಾಗದೆ ಬೇರೆಯವರಿಗಾಗಿ ನಿಸ್ವಾರ್ಥ ಸೇವೆಯಿಂದ, ಸಾಮಾಜಿಕ ವ್ಯವಸ್ಥೆಯ ನಿರ್ಮಲತೆಗೆ ಜನಜೀವನದ ಬೆಳವಣಿಗೆಗೆ ಶ್ರಮಿಸಬೇಕೆಂಬುದು ಕುವೆಂಪುರವರ ನಿಲುವಾಗಿತ್ತು. 'ಜೀವಕ್ಕೆ ಮುಕ್ತಿ ತನ್ನೊಬ್ಬನ ಮುಕ್ತಿಯಿಂದ ಸಾಧ್ಯವಿಲ್ಲ. ಸರ್ವರ ಮುಕ್ತಿಯನ್ನು ಸಾಧಿಸಿದ ಅನಂತರವೇ ಸಂಪೂರ್ಣ ಸಾಧ್ಯ' ಎನ್ನುವ ಅವರ ಮಾತುಗಳು ವಿಶಾಲವಾದ ಸಾಮಾಜಿಕ ನೆಲೆಯನ್ನು ಒಳಗೊಂಡಿದೆ ಎನ್ನಬಹುದು.

ಕುವೆಂಪುರವರು ಕಾವ್ಯ ರಚನೆಯಿಂದಲೇ ತಮ್ಮ ಸಾಹಿತ್ಯ ಬದುಕನ್ನು ಪ್ರಾರಂಭಿಸಿದವರು. ಶಿಶು ಸಾಹಿತ್ಯವನ್ನು ವೈಚಾರಿಕ ಮನೋಭಾವನೆಯ ನೆಲೆಯಿಂದಲೂ, ವೈಜ್ಞಾನಿಕ ನೆಲೆಯಿಂದಲೂ ಸಮೃದ್ಧವಾಗಿ ಬೆಳೆಸಿದ್ದಾರೆ. ಕುವೆಂಪು ಅವರು ಕಾವ್ಯವನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದ್ದರೋ ಅಷ್ಟೇ ಗಂಭೀರವಾಗಿ ಶಿಶು ಸಾಹಿತ್ಯವನ್ನು ರಚಿಸಿದ್ದಾರೆ. ಸಮಕಾಲೀನ ಮತ್ತು ಐತಿಹಾಸಿಕ ಆಯಾಮಗಳೆರಡನ್ನೂ ವಸ್ತು ನಿಷ್ಠವಾಗಿ ಪರಿಶಿಲಿಸಿ, ಸಾಮಾಜಿಕ ಭಿನ್ನತೆಯನ್ನು ನಿರ್ಮಲಭಾವದಿಂದ ಅನಾವರಣಗೊಳಿಸಿದ್ದಾರೆ. ಅಧ್ಯಾತ್ಮದಿಂದ ಸಾಮಾಜಿಕ ನಿಷ್ಠೆ, ಸಮಗ್ರತೆಯಿಂದ ಪ್ರೀತಿ ಸಾಧ್ಯವೆನ್ನುತ್ತಾರೆ. ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯ ಪಡೆದುಕೊಂಡ ಹೊಸ ಸ್ವರೂಪಕ್ಕೆ ಹಲವಾರು ಪ್ರೇರಣೆಗಳಿದ್ದವು. ಆದರೆ ಕುವೆಂಪುರವರು ಬದುಕಿಗೆ ಹೆಚ್ಚಿನ ಮಹತ್ವಕೊಟ್ಟರು ಎನ್ನಬಹುದು. ಇವರು ಅದ್ವೈತ ತತ್ವದ ವಿಚಾರಗಳ ಮೂಲಕ ವೈಚಾರಿಕ ಪಥವನ್ನು ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

ಮಕ್ಕಳ ಮನೋಭಾವ ಎಂತಹದು? ಅವರ ಆಶಯಗಳೇನು? ಇಂಥ ಹಲವು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಕಷ್ಟ. ಆದರೂ ತಾಳ್ಮೆಯಿಂದ ಮಕ್ಕಳ ಭಾವನೆಗಳನ್ನು ಗ್ರಹಿಸಿದರೆ ಅರ್ಥವಾಗುತ್ತದೆ. ಮಕ್ಕಳ ಭಾವನೆಗಳನ್ನು ಅರಿತು ಅವರ ಜೀವನ ರೂಪಿಸುವಲ್ಲಿ ತಂದೆ-ತಾಯಿ ಹಾಗೂ ಪೋಷಕರ ಪಾತ್ರ ಪ್ರಧಾನವಾದುದು. ಮಕ್ಕಳ ಆಟ-ಪಾಠಗಳಿಗೆ ಪ್ರೋತ್ಸಾಹ ನೀಡುವುದರಿಂದ ಅದು ತನ್ನ ಸ್ನೇಹಿತರೊಂದಿಗೆ ಅಷ್ಟೇ ಅಲ್ಲದೆ ಸಮಾಜದ ಇತರರಲ್ಲಿಯೂ ಗುರುತಿಸಿಕೊಳ್ಳುತ್ತದೆ. ಜೀವನದ ಆಗು-ಹೋಗುಗಳ, ಸೋಲು-ಗೆಲುವುಗಳನ್ನು ಸಮನಾಗಿ ಅರ್ಥಮಾಡಿಕೊಳ್ಳುವ ಮನೋಧರ್ಮವನ್ನು ಸ್ವತಃ ರೂಪಿಸಿಕೊಳ್ಳುತ್ತದೆ. 'ಬೆಳೆಯುವ ಪೈರು ಮೊಳಕೆಯಲ್ಲಿಯೇ' ಎಂಬ ಗಾದೆ ಮಾತಿನಂತೆ ಮಕ್ಕಳನ್ನು ಬಾಲ್ಯದಲ್ಲಿರುವಾಗಲೇ ಒಳ್ಳೆಯ ಗುಣಗಳಿಂದ ಬೆಳೆಸಬೇಕು. ಮಕ್ಕಳು ನಮ್ಮ

ರಾಷ್ಟ್ರದ ಅಮೂಲ್ಯ ಸಂಪತ್ತು ಇದ್ದಹಾಗೆ. ಇವರ ಜೀವನವನ್ನು ಸುಂದರವಾಗಿ ಮತ್ತು ವ್ಯವಸ್ಥಿತಗೊಳಿಸುವುದು ಹಿರಿಯರ ಕರ್ತವ್ಯ. ಅವರು ಪಾಲಕರಾಗಿರಬಹುದು, ಗುರುಗಳಾಗಿರಬಹುದು, ಸಾಹಿತಿಗಳಾಗಿರಬಹುದು. ಸಾಹಿತಿಯಾದವನು ಮಕ್ಕಳನ್ನು ನಿರ್ಲಕ್ಷ್ಯ ಮಾಡದೆ ಕಥೆ, ಕವನ, ನಾಟಕ, ಪ್ರವಾಸ ಸಾಹಿತ್ಯ ಮೊದಲಾದವುಗಳ ಮೂಲಕ ಮಕ್ಕಳ ಮನಸ್ಸನ್ನು ಆಕರ್ಷಿಸಿ, ಅವರನ್ನು ಸೂಕ್ಷ್ಮವಾಗಿ ತಿದ್ದಿ ಉತ್ತಮ ಗುಣಗಳನ್ನು ಬೆಳೆಸಬೇಕು. ಈ ನೆಲೆಯಲ್ಲಿ ಶಿಶುಸಾಹಿತ್ಯ ಅಗತ್ಯವಿದೆ. 'ರಾಷ್ಟ್ರದ ಬಹುತೇಕ ಶಕ್ತಿಶಾಲಿಯಾಗಲಿರುವ ಇವರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅದು ದೊಡ್ಡ ನಷ್ಟವೇ ಸರಿ'[೮೮].

ಮಕ್ಕಳ ಮನಸ್ಸನ್ನು ಸರಿಯಾಗಿ ಅರ್ಥಮಾಡಿಕೊಂಡು ಅವರ ಭಾವನೆಗೆ ಸ್ಪಂಧಿಸುವ ಸಮಾಜ ಮತ್ತು ಸಾಹಿತಿಗಳು ಬೆಳೆಯಬೇಕಾಗಿದೆ. ಈ ಮಾತಿಗೆ ಪೂರಕವಾಗಿ ಚಂದ್ರಗೌಡ ಕುಲಕರ್ಣಿಯವರು ಹೀಗೆ ಅಭಿಪ್ರಾಯ ವ್ಯಕ್ತಗೊಳಿಸುತ್ತಾರೆ. 'ಮಕ್ಕಳ ಸಾಹಿತಿಗಳು / ಸಾಹಿತಿಗಳು ಜೀವನವನ್ನೇ ಮುಡುಪಿಟ್ಟು ಮಕ್ಕಳಿಗೆ ರುಚಿಸುವಂತಹ ಸಾಹಿತ್ಯವನ್ನು ನಿರ್ಮಿಸಿಲ್ಲ. ಮಕ್ಕಳ ಮನೋಲೋಕಕ್ಕೆ ಲಗ್ಗೆ ಹಾಕಿ ಅವರನ್ನು ಆಕರ್ಷಿಸಿ ತಲ್ಲೀನಗೊಳಿಸಬಲ್ಲ ಸಾಹಿತ್ಯ ನಿರ್ಮಾಣವಾದಾಗ ಮಾತ್ರ ಅಲಕ್ಷ್ಯ ಅಸಡ್ಡೆ ತೋರುವ ಸಮಾಜ ಒಂದಿಷ್ಟಾದರೂ ಈ ಕಡೆ ದೃಷ್ಟಿ ಹೊರಳಿಸೀತು[೮೯] ಕಾರಣವನ್ನು ತಿಳಿಸುತ್ತಾರೆ. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಕೃಷಿ ಹೆಚ್ಚಾಗಿ ಕಂಡುಬರದಿದ್ದರೂ ಅದಕ್ಕೆ ಕೊರತೆಯಿಲ್ಲವೆನ್ನಬಹುದು. ಕನ್ನಡದ ಹಲವು ಬರಹಗಾರರು ಈ ದಿಸೆಯಲ್ಲಿ ಕೆಲಸ ಮಾಡಿರುವುದು ಮತ್ತು ಮಾಡುತ್ತಿರುವುದು ಸಂತಸದ ಸಂಗತಿ. ಈ ಹಿನ್ನೆಲೆಯಲ್ಲಿ ಕನ್ನಡದ ರಸಋಷಿ, ಭವ್ಯಮಾನವ ಎನಿಸಿಕೊಂಡ ಕುವೆಂಪು ಅವರು ಮಕ್ಕಳ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಅಭಿವ್ಯಕ್ತಿಯ ಎಲ್ಲ ಸಾಧ್ಯತೆಗಳನ್ನು ಒಳಗೊಂಡಿರುವ ಮಹಾಪ್ರತಿಭೆ ಕುವೆಂಪು ಎಂದರೆ ತಪ್ಪಾಗದು. ಇವರಂಥ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಸಿದ ಕವಿ ಇನ್ನೊಬ್ಬರು ಅಪರೂಪವೇ ಸರಿ. ಈ ಯುಗದ ಯಾವುದೇ ಸಾಹಿತ್ಯ ಪ್ರಕಾರದಿಂದ ಇವರು ದೂರವಾಗಿಲ್ಲ. ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಶ್ರೀ ರಾಮಾಯಣ ದರ್ಶನ ಮೊದಲಾದ ಮಹಾಕೃತಿಗಳನ್ನು ರಚಿಸಿದ ಕುವೆಂಪು ಮಕ್ಕಳ ಸಾಹಿತ್ಯವನ್ನು ಸುಂದರವಾಗಿ, ಸಮೃದ್ಧವಾಗಿ ನಿರ್ಮಿಸಿದವರು, ಶಿಶು ಹೃದಯದ ಮನದಾಳದಲ್ಲಿ ನಡೆಯುವ ಭಾವನೆಯ ಅನುಭವಗಳು, ಆನಂದ ಉಲ್ಲಾಸಗಳನ್ನು ಅಭಿವ್ಯಕ್ತಪಡಿಸುವ ಮೂಲಕ ಕುವೆಂಪು ಅವರು ಬದುಕಿನ ಎಲ್ಲ ಮಗ್ಗುಲಗಳಿಗೂ ಗಮನ ನೀಡಿದ್ದಾರೆ. ಮಕ್ಕಳಿಗಾಗಿ ಒಂಭತ್ತು ಕೃತಿಗಳನ್ನು ಕುವೆಂಪುರವರು ರಚಿಸಿದ್ದಾರೆ. ಇವುಗಳಲ್ಲಿ ಕವನ ಸಂಕಲನಗಳು, ಕಥಾ ಸಂಕಲನಗಳು, ಕಥನ ಕವನಗಳು ಮತ್ತು ನಾಟಕಗಳು ಒಳಗೊಂಡಿದೆ.

ಕುವೆಂಪುರವರು ಪ್ರಕೃತಿಯೆ ಪ್ರಧಾನವಾಗಿರುವ ವಸ್ತುವನ್ನು ಆಧರಿಸಿ ಮಕ್ಕಳಿಗಾಗಿ ಮೂರು ಕವನ ಸಂಕಲನಗಳನ್ನು ರಚಿಸಿರುವರು. ಇವುಗಳಲ್ಲಿ ಮಕ್ಕಳ ಮುಗ್ಧ ಪ್ರೀತಿ ಮತ್ತು ತಾಯಿಯ ವಾತ್ಸಲ್ಯಗಳು ಮೂಡಿಬಂದಿವೆ. 'ನನ್ನ ಮನೆ' ಮಕ್ಕಳ ಎಳೆಯ

ಮನಸ್ಸಿನ ಭಾವನೆಗಳನ್ನು, ಅರಳುವ ಪ್ರತಿಭೆಯನ್ನು ವ್ಯಕ್ತಪಡಿಸುವ ಹದಿನೈದು ಕವಿತೆಗಳನ್ನು ಒಳಗೊಂಡಿರುವ ಸಂಕಲನವಾಗಿದೆ. ಪ್ರತಿಯೊಂದು ಕವಿತೆಯು ಪ್ರಕೃತಿ ಪ್ರೇಮ ಮತ್ತು ತಾಯಿಯ ವಾತ್ಸಲ್ಯವನ್ನು ಅಭಿವ್ಯಕ್ತಗೊಳಿಸುತ್ತವೆ. ಕುವೆಂಪು ಮತ್ತು ಪ್ರಕೃತಿಯ ಅವಿನಾಭಾವ ಸಂಬಂಧವನ್ನು ಕುರಿತಾಗಿ ಕೆಲವು ನುಡಿಗಳು ಹೀಗೆ ವ್ಯಕ್ತಪಡಿಸಿದರೆ ಸೂಕ್ತವೆನಿಸುತ್ತದೆ.

'ಮಲೆನಾಡಮ್ಮನ ಮಡಿಲಿನಲಿ
ಕರ್ಮುಗಿಲೊಡಲಿನಲಿ
ಮನೆಮಾಡಿರುವೆನು ಸಿಡಿಲಿನಲಿ
ಮಿಂಚಿನ ಕಡಲಿನಲಿ !
ಬನಗಳ ಬೀಡು
ಚೆಲ್ವಿನ ನಾಡು
ಮೋಹನ ಭೀಷಣ ಮಲೆನಾಡು
ರನ್ನನು ಪಂಪನು ಬಹರಿಲ್ಲಿ !
ಶ್ರೀ ಗುರುವಿಹನಿಲ್ಲಿ
ಮಿಲ್ಟನ್ ಷೆಲ್ಲಿ ಬಹರಿಲ್ಲಿ
ಕವಿವರರಿಹರಿಲ್ಲಿ
ಮುದ್ದಿನ ಹಳ್ಳಿ
ಈ ಕುಪ್ಪಳ್ಳಿ
ಬಾ ಕಬ್ಬಿಗ ನಾನಿಹೆನಿಲ್ಲಿ'[೧೦] !

ಮಲೆನಾಡಿನ ಒಂದು ಪುಟ್ಟ ಹಳ್ಳಿ ಕುಪ್ಪಳ್ಳಿಯ ಬಾಲಕನು ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಕಾಶಮಾನವಾಗಿ ಬೆಳಗಿರುವುದು ರೋಮಾಂಚನ ಉಂಟು ಮಾಡುತ್ತದೆ. ಕುವೆಂಪುರವರ ಬದುಕು ರೋಚಕವಾದುದು. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಕುವೆಂಪುವಾದುದು ಮಲೆನಾಡಿನ ಕುಪ್ಪಳ್ಳಿಯ ಸುಂದರ, ರಮ್ಯವಾದ ಪ್ರಕೃತಿ ಸೌಂದರ್ಯವೆ ಕಾರಣ. ಅದು ಎಲ್ಲರಿಗೂ ಗೊತ್ತು.

'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಿಸರ್ಗ ನಿರೂಪಣೆ ಹಸಿರು ಮುರಿಯುವುದು ಪಂಪನಲ್ಲಿ. ನಂತರ ಮಹಾಮೌನವನ್ನು ವ್ಯಾಪಕವಾಗಿ ಮುರಿದವರು ಕುವೆಂಪು. ಅವರ ರಚನೆಗಳಲ್ಲಿ ಸಮಗ್ರ ಸಹ್ಯಾದ್ರಿಯೇ ಅನಾವರಣಗೊಂಡಿದೆ. ನವೋದಯದ ಸಂದರ್ಭದಲ್ಲಿ ಅವರನ್ನು ನಿಸರ್ಗ ಕವಿಯೆಂದು ಕನ್ನಡಿಗರು ಗುರುತಿಸಿದ್ದು ಈ ಕಾರಣಕ್ಕಾಗಿ'[೧೧]. ಮಕ್ಕಳು ಭಾವನಾಜೀವಿಗಳು, ಅವರ ಮನಸ್ಸು ಹೂವಿನ ಹಾಗೆ. ಮೃದುಭಾವದ ಸಸಿಗಳಿದ್ದಂತೆ, ಅವರಿಗೆ ಹಾಡು, ಕಥೆ, ಅನುಕರಣ, ಅಭಿನಯಗಳು ಬಲು ಇಷ್ಟ. ಪ್ರಾಣಿ-ಪಕ್ಷಿಗಳ ಧ್ವನಿಯನ್ನು ಅನುಕರಣ ಮಾಡುತ್ತಾರೆ. ಆನಂದದಲ್ಲಿ ಮೈಮರೆಯುತ್ತಾರೆ. ಅದಕ್ಕಾಗಿಯೇ ಕುವೆಂಪುರವರು, ಆಟ ಮುಗಿಯುವ ಮುನ್ನ, ಕರೆಯಬೇಡೆನ್ನ, ಆಟಮುಗಿಯಲು ನಾನೆ ಬರುವೆನಮ್ಮಾ ಎಂದು ಹೇಳಿದ ಮಾತು ಸತ್ಯವಾದುದು. ಈ ಸಾಲುಗಳು ಮಕ್ಕಳ

ಅಂತರಂಗವನ್ನು ತೆರೆದು ತೋರಿಸುತ್ತದೆ. ಮಕ್ಕಳು ಊಟಕ್ಕಿಂತ ಆಟದ ಕಡೆಗೇ ಹೆಚ್ಚು ಗಮನಕೊಡುವರು. ಆಟ–ಆಡುತ್ತ–ನಲಿದಾಡುತ್ತ ಇರುವಾಗ ಹಸಿವೆಯನ್ನು ಮರೆಯುವರು. ಆಟ ಮುಗಿದಾಗಲೇ ಅವರಿಗೆ ಹಸಿವಿನ ಅರಿವಾಗುವುದು. ಇದುವೇ ಮಕ್ಕಳ ಮನದ ಒಳದನಿ. ‘ನನ್ಗೆ ಚಿಕ್ಕಂದಿನಿಂದಲೇ ಕಾಡು ಅಂದರೆ, ಪ್ರಕೃತಿ ಅಂದರೆ ಗಾಢವಾದ ಪ್ರೀತಿ. ನಮ್ಮ ಕಡೆ ಊರು ಅಂದರೆ ಮನೆ, ಮತ್ತೆ ಮನೆ ಅಂದರೆ ಬರಿ ಮನೆಯಲ್ಲ, ಮನೆ ಅನ್ನೋದು ಕಾಡಿನ ಒಂದು ಭಾಗವೇ, ನನ್ನ ಒಂದು ಕವಿತೆಯಲ್ಲಿ ‘ಕಾಡು ಮುತ್ತುಕೊಡುತಲಿರುವ ಸೊಗದ ಬೀಡು ನನ್ನ ಮನೆ’ ಅಂತ ಬರೆದಿದ್ದೀನಿ. ‘ಕಾವ್ಯಾಲಯ ಪ್ರಕಾಶನ’ದ ಕೂಡಲಿ ಚಿದಂಬರಂ ಇದ್ದಾರಲ್ಲ, ಅವರು ಪುಟ್ಟಪ್ಪನವರು ಹೀಗೆ ಬರೆದಿದ್ದಾರಲ್ಲ ನೋಡೋಣ ಅಂತ ಒಂದು ಸಲ ನಮ್ಮ ಮಲೆನಾಡಿನ ಕುಪ್ಪಳ್ಳಿಯ ಮನೆ ಕಡೆ ಹೋದಾಗ, ಕಾಡು ಮುತ್ತು ಕೊಡೋದಲ್ಲ, ಕಾಡೇ ಮನೇನ ಹಾದು ಬರ್‍ತಾ ಇದೆ, ಆಕ್ರಮಿಸಿಕೊಂಡಿದೆ ಅನ್ನಿಸ್ತಂತೆ. ಅಂಥ ಪರಿಸರದಿಂದ ಬಂದವನು ನಾನು, ನಾನು ಕಾಡನ್ನು ಕೇವಲ ವರ್ಣನೆಗೋಸ್ಕರ ವರ್ಣಿಸಿದೀನಿ ಅಂತ ತಿಳಕೊಂಡರೆ ಅದು ತಪ್ಪು. ಕಾಡಿನೊಂದಿಗಿದ್ದ ಅತ್ಯಂತ ಆತ್ಮೀಯವಾದ ಅನುಭವಗಳನ್ನು ನಾನು ವರ್ಣಿಸಿದ್ದೇನೆ’[೬೨] ಎಂಬ ಮಾತುಗಳು ಕುವೆಂಪುರವರು ಕಾಡಿನೊಂದಿಗೆ ಮತ್ತು ಪ್ರಕೃತಿಯೊಂದಿಗೆ ಎಷ್ಟು ಒಡನಾಡಿಗಳಾಗಿದ್ದರು ಎನ್ನುವ ಸಂಗತಿ ಅಭಿವ್ಯಕ್ತಗೊಳ್ಳುತ್ತದೆ.

ಕುವೆಂಪು ಅವರು ಮಕ್ಕಳ ಮನಸ್ಸನ್ನು ಪ್ರವೇಶ ಮಾಡಿ ಮೃದು ಮಾತುಗಳಿಂದ ಮಾತನಾಡಿದರೂ ಹಿತವೆನಿಸುತ್ತದೆ ಎಂಬುದನ್ನು ತಮ್ಮ ಕವನ ಸಂಕಲನದಲ್ಲಿ ವ್ಯಕ್ತಗೊಳಿಸಿದ್ದಾರೆ. ವಸ್ತು ಮತ್ತು ತಂತ್ರಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳನ್ನು ಪ್ರೇರೇಪಿಸಿದ್ದಾರೆ. ಹೂಮನದ ಮಕ್ಕಳಿಗೆ ಎಲ್ಲ ವಿಷಯಗಳು ಮನದಟ್ಟು ಮಾಡುವುದು ಇವರ ಪ್ರಮುಖ ಗುರಿಯಾಗಿದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ಗುರುತಿಸಲು ತನ್ನ ಬಾಲ್ಯದಲ್ಲಿ ನಡೆದು ಘಟನೆ, ಅನುಭವಗಳು ನೆನಪಿಗೆ ಬಂದಂತೆ ಬೇರೆ ಯಾವ ಅವಸ್ಥೆಯ ಅನುಭವಗಳು ನೆನಪಿಗೆ ಬರುವುದಿಲ್ಲ ಎನ್ನುವದನ್ನು ಮನದಟ್ಟು ಮಾಡಿಕೊಂಡು ಮಗು ಒಬ್ಬ ಉತ್ತಮ ಪ್ರಜೆಯಾಗಬಲ್ಲ ಎಂಬ ಮನೋಭಾವದಿಂದ ಕುವೆಂಪು ಶಿಶು ಸಾಹಿತ್ಯವನ್ನು ರಚಿಸಿದ್ದಾರೆ. ಮಕ್ಕಳು ಸ್ವತಂತ್ರವಾಗಿ ಆಲೋಚನೆ ಮಾಡುವಂತೆ ಹಾಗೂ ಹೊಸ ಚಿಂತನೆಯನ್ನು ಮಾಡುವ ಮಾರ್ಗವನ್ನು ಹಾಕಿದವರು. ಗುರು–ಹಿರಿಯರು, ದೇವರು, ಧರ್ಮ ಮೊದಲಾದ ಇಂತಹ ಪ್ರಶ್ನೆಗಳನ್ನು ಸೃಷ್ಟಿಸಿ, ಉತ್ತರಗಳನ್ನು ಶಿಶು ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ‘ಪಶ್ಚಿಮದ ಸಂಪರ್ಕ ಹಾಗೂ ಪ್ರೇರಣೆ–ಪ್ರಭಾವಗಳಿಂದಾಗಿ ಉಂಟಾದ ಭಾರತೀಯ ಪುನರುಜ್ಜೀವನ ಪರಿಣಾಮವಾಗಿ ಕನ್ನಡ ಸಾಹಿತ್ಯವೂ ಇತರ ಭಾರತೀಯ ಭಾಷಾ ಸಾಹಿತ್ಯಗಳಂತೆ ತನ್ನ ದೃಷ್ಟಿ–ಧ್ಯೇಯ, ರೂಪಗಳಲ್ಲಿ ಬದಲಾಯಿತೆಂಬುದು ಈಗಾಗಲೇ ಸಾಹಿತ್ಯ ಚರಿತ್ರೆಯ ಭಾಗವಾಗಿದೆ. ಈ ಬದಲಾವಣೆ ಮುಖ್ಯವಾಗಿ ಪಶ್ಚಿಮದ ಪ್ರೇರಣೆ ಪ್ರಭಾವಗಳಿಗೆ ನಮ್ಮ ಕನ್ನಡ ಕವಿಗಳು ತಮ್ಮ ಪ್ರಾದೇಶಿಕ ಸಂಸ್ಕೃತಿ ಹಾಗೂ ಪರಂಪರೆಯ ನೆಲೆಯಲ್ಲಿ ತೋರಿದ ಸೃಜನಾತ್ಮಕ ಪ್ರಕ್ರಿಯೆಯ ಒಂದು ರೂಪವಾಗಿದೆ’[೬೬]. ಇದರಿಂದಾಗಿ

ನವೋದಯ ಸಾಹಿತ್ಯದ ತಾತ್ವಿಕ ನೆಲೆಗಟ್ಟು ಸಾಮರಸ್ಯ, ಮಾನವತಾವಾದದ ಮೇಲೆ ನಿಂತಿರುವುದು. ಬಹುಮುಖತೆಯಿಂದ ಅನುಭವದ ವೈಯಕ್ತಿಕ ನೆಲೆಯ ಚಿಂತನಶೀಲತೆ ನವೋದಯ ಸಾಹಿತ್ಯಕ್ಕೆ ವೈವಿಧ್ಯತೆಯನ್ನು ನಿಡಿವೆ. ೧೯೨೦ ರಿಂದ ೧೯೪೫ ರವರೆಗಿನ ಸಮಯ ನವೋದಯ ಕಾವ್ಯದ ಸುಗ್ಗಿಯ ಕಾಲವಾಗಿದೆ. ಧಾರವಾಡ ಭಾಗದಲ್ಲಿ ಬೇಂದ್ರೆ, ಮಧುರಚನ್ನರು, ಆನಂದ ಕಂದ, ರಂ. ಶ್ರೀ. ಮುಗಳಿ, ವಿ. ಕೃ. ಗೋಕಾರರು; ಮೈಸೂರು ಭಾಗದಲ್ಲಿ ಮಾಸ್ತಿವೆಂಕಟೇಶ ಅಯ್ಯಂಗಾರ, ಕುವೆಂಪು, ಪುತಿನ; ಜಿ. ಪಿ. ರಾಜರತ್ನಂ; ಮಂಗಳೂರು ಭಾಗದಲ್ಲಿ ಪಂಜೆಮಂಗೇಶರಾಯರು, ಗೋವಿಂದ ಪೈ, ಶಂಕರಭಟ್, ಎಂ. ಎನ್. ಕಾಮತ್ ಮೊದಲಾದ ಮಹತ್ವದ ಕವಿಗಳ ಸಾಧನೆಯಿಂದ ಕನ್ನಡ ಸಾಹಿತ್ಯ ಅದರಲ್ಲೂ ಮಕ್ಕಳ ಸಾಹಿತ್ಯ ಸಮೃದ್ಧವಾಗಿ ಮತ್ತು ವೈವಿಧ್ಯತೆಯಿಂದ ಬೆಳೆದು 'ಸುವರ್ಣಯುಗ'ವೆಂದು ಕರೆಯುವಂತಾಯಿತು. ಕುವೆಂಪುರವರು ಕನ್ನಡ ಅಭಿಮಾನವನ್ನು ಹೀಗೆ ವ್ಯಕ್ತಪಡಿಸುತ್ತಾರೆ.

'ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು ।
ಕಾಮನ ಬಿಲ್ಲನು ಕಾಣುವ ಕವಿಯೊಲು
ತಕ್ಕನೆ ಮನ ಮೈಮರೆಯುವುದು'[೧೦೦] ।

ಕನ್ನಡ ಎಂದರೆ ಕುವೆಂಪು ಹಾಗೆ ಅವರ ಅಭಿಮಾನ. ಕನ್ನಡ ನಾಡು-ನುಡಿಗೆ ಶ್ರದ್ಧೆಯಿಂದ ಸೇವೆ ಸಲ್ಲಿಸಿರುವ ಅಪಾರ ಪ್ರೇಮಿ. ಅವರ ನರನಾಡಿಗಳಲ್ಲಿ ಕನ್ನಡ ಪ್ರೇಮ ನಿರಂತರವಾಗಿ ತುಂಬಿ ಹರಿದಿದೆ.

'ಕನ್ನಡದಲಿ ಹರಿ ಬರೆಯುವನು
ಕನ್ನಡದಲಿ ಹರ ತಿರಿಯುವನು
ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿ ವರಗಳ ಮಳೆ ಕರೆಯುವನು ।
ಹರ ಮುನಿಯದೆ ತಾ ಪೊರೆಯುವನು'[೧೦೧] ।

ಕವಿ ತನ್ನ ಭಾವನೆಗಳನ್ನು ಮಕ್ಕಳಿಗೆ ಅರ್ಥವಾಗುವಂತೆ ಸರಳವಾಗಿ ತಿಳಿಯುವಂತೆ, ಕನ್ನಡ ಭಾಷೆಯನ್ನು ಪ್ರೀತಿಸುವಂತೆ ಮಾಡಿದ್ದಾರೆ.

ಕನ್ನಡದಲ್ಲಿ ನುಡಿಯಲು, ಕನ್ನಡವನ್ನು ಪ್ರೀತಿಸಲು, ಕನ್ನಡಕ್ಕಾಗಿ ದುಡಿಯಲು, ಕನ್ನಡ ತಾಯಿಯ ಸೇವೆ ಮಾಡಲು ಕಳಕಳಿಯಿಂದ ಕೇಳಿಕೊಂಡಿದ್ದು ಹೀಗೆ;

'ಬಾಳುವುದೇತಕೆ ನುಡಿ ಎಲೆ ಜೀವ;
ಸಿರಿಗನ್ನಡದಲಿ ಕವಿತೆಯ ಹಾಡೆ ।
ಸಿರಿಗನ್ನಡದೇಳಿಗೆಯನು ನೋಡೆ;
ಕನ್ನಡ ತಾಯಿಯ ಸೇವೆಯ ಮಾಡೆ'[೧೦೨] ।

ಎನ್ನುವ ನುಡಿಗಳು ಸುಪ್ತವಾದ ಮನವನ್ನು ಹಿತವಾಗಿ ಎಚ್ಚರಿಸಿದಂತಿವೆ. ಕನ್ನಡ ತಾಯಿಯ ಸೇವೆಯ ಮಾಡಲು ಮಕ್ಕಳಿಗೆ ಭಿನ್ನವಿಸಿಕೊಂಡಿದ್ದಾರೆ. ಕುವೆಂಪು ಅವರ ಪ್ರತಿಭೆಗೆ ಪ್ರಕೃತಿಯೇ ಉಗಮ ಸ್ಥಾನ ಎಂದರೆ ತಪ್ಪಾಗದು. ಬಾಲ್ಯದಿಂದಲೂ ಅವರು ಪ್ರಕೃತಿಯ ಸುಂದರ ಮಡಿಲಲ್ಲಿ ಬೆಳೆದಿರುವುದರಿಂದ ಅವರು ಶಿಶು ಭಾವನೆಯುಳ್ಳವರೆಂದು ಅಭಿವ್ಯಕ್ತವಾಗುತ್ತದೆ. ಇಂಥ ಮುಗ್ಧ ಮಗುವನ್ನು ಪ್ರಕೃತಿಯಲ್ಲಿ ಕಂಡವರು. ಅಲ್ಲಿಯ ಕೋಗಿಲೆಯ ದನಿಯೊಂದಿಗೆ ತಮ್ಮ ದನಿಯನ್ನು ಬೆರೆಸಿ ಹಾಡಿದವರು. ಕಾವ್ಯ ಕನ್ನಿಕೆಯ ಸನ್ನಿಧಿಯಲ್ಲಿ ಚಟುವಟಿಕೆಗೆ ತೊಡಗಿಕೊಂಡವರು. ಬಣ್ಣದ ಹಕ್ಕಿ ಎಂಬ ಕವನದಲ್ಲಿ;

'ಹಕ್ಕಿ, ಹಕ್ಕಿ, ಹಾರುವ ಹಕ್ಕಿ
ಬಾರೆಲೆ ಹಕ್ಕಿ, ಬಣ್ಣದ ಚುಕ್ಕಿ ।
ಗೆಳೆಯರು ಆಡುವರಾರೂ ಇಲ್ಲ
ಕಳೆಯುವುದೆಂತೀ ಕಾಲವ ಎಲ್ಲಿ ।
ಬಾ, ಬಾ, ನನಗೂ ಹಾರಲು ಕಲಿಸು
ಬಾ, ಬಾ, ನನಗೂ ಆಡಲು ಕಲಿಸು ।
ಹೂವಿನ ರಸವನು ಕೊಡುವೆನು ನಿನಗೆ
ಸುಗ್ಗಿಯ ಕಾಳನು ಸುರಿವೆನು ನಿನಗೆ ।
ಬಾ, ಬಾ, ಆಡುವ ಹಗಲೆಲ್ಲ
ಬಾ, ಬಾ, ಹಾಡುವ ದಿನವೆಲ್ಲ'[೧೦೩] ।

ಪ್ರಕೃತಿಯಲ್ಲಿಯ ಪಕ್ಷಿ-ಪ್ರಾಣಿಗಳು ಕುವೆಂಪು ಅವರಿಗೆ ಬಲು ಪ್ರೀತಿ, ಹಕ್ಕಿಯ ಹಾರುವ ಬಗೆ ಮಗುವಿಗೆ ಅಚ್ಚರಿ ಮೂಡಿಸುತ್ತದೆ. ಆಡಲು ಮಗುವಿಗೆ ಸಹಪಾಟಗಳಿಲ್ಲ. ಸಮಯ ಕಳೆಯುವುದು ಹೇಗೆ ಎಂಬ ಕೊರಗಿನಿಂದ ಹಕ್ಕಿಯನ್ನು ತನ್ನೊಡನೆ ಆಡಲು-ಹಾಡಲು ಕೇಳಿಕೊಳ್ಳುವುದು. ನನಗೂ ಹಾಗೆ ಹಾರುವ, ಹಾಡುವ ಕ್ರಮವನ್ನು ತಿಳಿಸು ಎಂದು ಮಗು ಬೇಡಿಕೊಳ್ಳುವ ಚಿತ್ರಣ ಹೃದಯಸ್ಪರ್ಷಿಯಾಗಿದೆ.

ಮಕ್ಕಳು ಕನಸಿನ ಗೋಪುರಕಟ್ಟಿ ಆಗಸದಲ್ಲಿ ನಲಿಯುವ ನಕ್ಷತ್ರಗಳಿದ್ದಂತೆ. ಅವರನ್ನು ಪ್ರಕೃತಿ ಸಹಜವಾಗಿ ಸೆಳೆಯುತ್ತದೆ. ಹಾಗೆಯೇ ಕವಿಯೂ ಕೂಡ ನಮ್ಮನ್ನು ಪ್ರಕೃತಿಯ ಸೌಂದರ್ಯದಲ್ಲಿ ಮುಳುಗಿಸಿ, ಅಗಸದಲ್ಲಿ ಕರೆದುಕೊಂಡು ಹೋಗುವ ಮಾಂತ್ರಿಕನಾಗುತ್ತಾನೆ. ಭಾವ ಜೀವಿಯಾಗುತ್ತಾನೆ. ಮಗುವಿನ ಮನಸ್ಸು ಬಲು ಸೂಕ್ಷ್ಮವಾದುದು. ತನ್ನ ವಿಚಾರಪೂರಿತವಾದ ಮನೋಭಾವನೆಯಿಂದ ಅಭಿವ್ಯಕ್ತಗೊಳಿಸುವ 'ಅರ್ಧಚಂದ್ರ' ಕವನದಲ್ಲಿ ಚಂದ್ರನನ್ನು ಪೆಪ್ಪರಮೆಂಟಿಗೆ ಹೋಲಿಸಿ, ಎಷ್ಟು ತಿಂದರೂ ಕರಗುವುದಿಲ್ಲವೇ? ಎಂದು ಪ್ರಶ್ನಿಸುವ ಗುಣವ್ಯಕ್ತಗೊಳ್ಳುತ್ತದೆ. ಮಕ್ಕಳು ವೈಚಾರಿಕ ನೆಲೆಯಲ್ಲಿ ಸಾಗಲು ಕವಿತೆ ಪೂರಕವೆನಿಸುತ್ತದೆ ಎನ್ನುವುದು ಕುವೆಂಪುರವರ ಆಶೆ. ಕುವೆಂಪು ಅವರ 'ಪೊದೆಯ ಹಕ್ಕಿ, ಎದೆಯ ಹಕ್ಕಿ' ಕವಿತೆ ಮಕ್ಕಳಿಗಾಗಿ ಬರೆದಂತೆ ಕಂಡರೂ ತಾತ್ವಿಕವಾಗಿ ಹೊಸ ನೆಲೆಯನ್ನು ಅಭಿವ್ಯಕ್ತಿಸುತ್ತದೆ. 'ಟುವ್ವಿ ಟುವ್ವಿ ಟುವ್ವಿ ಎಂದು ಹಕ್ಕಿ ಕೂಗಿತು' ಎಂದು

ಪ್ರಾರಂಭವಾಗುವ ಕವಿತೆ, ಕವಿಗೂ-ನಿಸರ್ಗದ (ಹಕ್ಕಿಯ) ನಡುವೆ ನಡೆಯುವ ಸಂವಾದದ ಸ್ವರೂಪವನ್ನು ಸುಂದರವಾಗಿ ವ್ಯಕ್ತಗೊಳಿಸುವ ಪ್ರತೀಕದಂತಿದೆ. ಇಲ್ಲಿ ಕವಿತೆ ಸಾಗುವುದು ಹಕ್ಕಿ ಮತ್ತು ಕವಿಯೊಂದಿಗೆ, ಹಕ್ಕಿಯನ್ನು ಜಗದ ಪ್ರತಿನಿಧಿಯಾಗಿ, ಕವಿಯನ್ನು ಅದಕ್ಕೆ ಸ್ಪಂದಿಸುವ ಪ್ರತಿಮೆಯಾಗಿ ನೋಡಬಹುದು.

'ಟುವ್ವಿ, ಟುವ್ವಿ, ಟುವ್ವಿ ಟುವ್ವಿ
ಎಂದು ಎನ್ನ ಎದೆಯೊಳಗೊಂದು
ಹಕ್ಕಿ ಕೂಗತೊಡಗಿತು'[೧೦೪].

ಇದು ಜಗದ ಸಂಬಂಧ. ಕವಿಯ ಮನದಲ್ಲಿ ಅನಾವರಣಗೊಳ್ಳುವ, ಗಾಢವಾಗಿ ಪ್ರಭಾವಿಸುವ ಒಂದು ಕ್ರಮ. ಪ್ರಪಂಚದ ಅನುಭವಗಳನ್ನು ಗ್ರಹಿಸುವ ಕ್ರಮ ಪ್ರಧಾನವಾಗಿ ವ್ಯಕ್ತವಾಗಿವೆ. ಮುಂದಿನ ಸಾಲುಗಳು ವೈಚಾರಿಕ ಚಿಂತನೆಯ ಇನ್ನೊಂದು ಮುಖವನ್ನು ತೆರೆದುಕೊಳ್ಳುತ್ತದೆ.

'ಆಗ ಎನ್ನ ಎದೆಯೊಳಗೊಂದು
ಹಕ್ಕಿ ಇರುವದೆಂಬುದನ್ನು
ನಾನು ಗೊತ್ತು ಹಿಡಿದೆನು'[೧೦೫].

ಕವಿತೆಯ ಪ್ರಸ್ತುತತೆ ಇರುವುದು ಆತ್ಮೀಯತೆಯ ಸ್ಪಂದನದಲ್ಲಿ. ಒಂದು ಹಕ್ಕಿಗೆ ಇನ್ನೊಂದು ಹಕ್ಕಿ ಒಡನಾಡಿಯಾಗಿರುವುದೋ ಹಾಗೆ ಟುವ್ವಿ ಟುವ್ವಿ ಎಂದು ಕೂಗಿದ ಹಕ್ಕಿಗೆ ಕವಿಯ ಹೃದಯ ಸ್ಪಂದಿಸಿದೆ. (ಹೊರಗಿನ) ಜಗದ ಹಕ್ಕಿಗೆ ಭಾವ-ಬಂಧಿಸಿರುವುದು ತಮ್ಮೊಳಗಿನ ಹಕ್ಕಿ. ಯಾಕೆಂದರೆ ತಾನೆ ಹಕ್ಕಿಯಾದಾಗ ಮಾತ್ರ ನಿಸರ್ಗದ ಹಕ್ಕಿಗೆ ಸಹಜತೆಯಿಂದ ಸ್ಪಂದಿಸಬಹುದು ಎಂದು ಕುವೆಂಪುರವರ ಅಭಿವ್ಯಕ್ತಿ, ಮುಖ್ಯವಾಗಿ ವಿವೇಚಿಸಬೇಕಾದ ಸಂಗತಿ ಏನೆಂದರೆ, ನಮ್ಮ ಮನದಾಳದಲ್ಲಿ ಸೌಂದರ್ಯ ಅನುಭವದ ಸಾಮರ್ಥ್ಯ ಇರುವುದರಿಂದ ಲೋಕದ ವಸ್ತುಗಳು ಸುಂದರವಾಗಿ ಕಾಣಲು ಸಾಧ್ಯವಾಗಿದೆ ಎಂಬ ತಾತ್ವಿಕ ಅಭಿವ್ಯಕ್ತಗೊಂಡಿದೆ.

ಕನ್ನಡ ಸಾರಸ್ವತ ಲೋಕದಲ್ಲಿ ಧೃವತಾರೆಯಾಗಿ ಮೆರೆಯುತ್ತಿರುವ ಕುವೆಂಪು ರಾಷ್ಟ್ರಕವಿಯಾಗಿ, ರಸಋುಷಿಯಾಗಿ ಕನ್ನಡದ ಮಕ್ಕಳಿಗೆ ನೀಡಿದ ಸಾಹಿತ್ಯ ಅಪಾರ ಮತ್ತು ಮೌಲ್ಯದಾಯಕ. 'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೊಳಗುತ್ತದೆ. ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಅದು ಗೋವರ್ಧನ ಗಿರಿಯಾಗುತ್ತದೆ' ಎಂದು ಹೇಳಿರುವ ಭಾವಾವೇಶದ ನುಡಿಗಳೇ ನಿದರ್ಶನ. ಕನ್ನಡ ತಾಯಿ ಭುವನೇಶ್ವರಿಯ ಬಗ್ಗೆ, ಭಾಷೆಯ ಬಗ್ಗೆ ಇರುವ ಅಭಿಮಾನ, ಗೌರವಗಳು ನಮ್ಮನ್ನು ಅಚ್ಚರಿ ಮೂಡಿಸುತ್ತವೆ. ಕುವೆಂಪು ಅವರ ಶ್ರೇಷ್ಠ ಕೃತಿಗಳಲ್ಲಿ ಶ್ರೀ ರಾಮಾಯಣ ದರ್ಶನ ಒಂದು. ಕಿಂದರಿ ಜೋಗಿ, ಅಮಲನ ಕಥೆ, ಮೋಡಣ್ಣನ ತಮ್ಮ, ನನ್ನ ಗೋಪಾಲ, ಮರಿ ವಿಜ್ಞಾನಿ, ಹಾಳೂರು, ನನ್ನ ಮನೆ, ಮೇಘಪುರ ಇವು ಶಿಶು ಸಾಹಿತ್ಯದ ಅನನ್ಯ ಕೃತಿಗಳು. ಇವು ಮಕ್ಕಳ ಮನದಲ್ಲಿ ನೆಲೆಯೂರಲು ಮುಖ್ಯ ಕಾರಣ

ಅವುಗಳ ಸುಲಭ ಅಭಿವ್ಯಕ್ತಿಯೇ ಮೂಲ, ಕುವೆಂಪು ಮಕ್ಕಳಿಗೆ ಒಂದು ಸಲಹೆ ನೀಡುವರು. 'ಕನ್ನಡಕೆ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ' ಎಂದು. ಈ ಮಾತುಗಳಿಂದ ಮಕ್ಕಳ ಮನದಲ್ಲಿ ಜಾಗ್ರತೆ ಮೂಡಿ ದೇಶಭಕ್ತಿ, ದೇಶಪ್ರೇಮ, ತಾಯಿ ನುಡಿಯ ಬಗ್ಗೆ ಗೌರವ, ಶ್ರದ್ಧಾಭಾವನೆ ಚಟುವಟಿಕೆಗಳಲ್ಲಿ ತೊಡಗುವ ಗುಣಗಳು ಮಕ್ಕಳಲ್ಲಿ ಮೂಡಿಸುತ್ತವೆ. 'ಕಣ್ದೆರೆಯರೇಳಿ ಓ ಕನ್ನಡದ ಕಂದರಿರೆ ಗರ್ಜಸುವುದು ಕಲಿತು ಸಿಂಹವಾಗಿ'ಎಂದು ಹೇಳಿದ ದೀರೋದಾತ್ತ ನುಡಿಗಳು ಮಕ್ಕಳಿಗೆ ಬಡಿದೆಚ್ಚರಿಸುವ ಕುವೆಂಪುರವರು ಮಕ್ಕಳಿಗಾಗಿ ಶ್ರಮಿಸಿರುವುದು ಸ್ಪಷ್ಟವಾಗಿ ಅಭಿವ್ಯಕ್ತವಾಗುತ್ತದೆ.

ಮಕ್ಕಳ ಸಾಹಿತಿಗಳು ಹೆಚ್ಚಾಗಿ ಬಳಸುವ ಆಕರ್ಷಣೀಯ ವಸ್ತುವಾಗಿರುವ 'ಚಂದಿರ'ನನ್ನು ಕಂಡ ರೀತಿ ವಿಸ್ಮಯಕಾರಿಯಾದು. ಚಂದಮಾಮಾ ಮಕ್ಕಳಿಗೆ ಪರಿಚಿತ, ಬೇಗನೆ ಮನ ಸೂರೆಗೊಳ್ಳುವಂಥಹದು. ಅಳುವ ಕಂದನನ್ನು ಸಮಾಧಾನ ಪಡಿಸಲು ಚಂದ್ರನನ್ನು ತೋರಿಸಿ ಅಮ್ಮ ಸಮಾಧಾನ ಪಡಿಸುವಾಗ ಅನೇಕ ಚಿತ್ರಗಳನ್ನು ತಿಳಿಯಪಡಿಸುವಳು. ಅಳುವ ಮಗು ಕೂಡಾ ಬಾಯಿತೆರೆದು ನೋಡುವ ಮನೋಹರ ನೋಟ ಸುಂದರವಾಗಿ ತೋರುತ್ತದೆ. ಮಕ್ಕಳ ಸಾಹಿತ್ಯದಲ್ಲಿ ಪಂಜೆಯವರಿಂದ ಹಿಡಿದು ಇಂದಿನವರೆಗೂ ಅನೇಕ ಹಿರಿಯ ಮತ್ತು ಕಿರಿಯ ಮಕ್ಕಳ ಕವಿಗಳೆಲ್ಲರಲ್ಲಿಯೂ ಒಂದೊಂದು ರೂಪದಲ್ಲಿ ಚಂದ್ರನನ್ನು ಕವಿತೆ–ಕಥೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಇಂಥ ಬಹುರೂಪದ ಚಂದ್ರನನ್ನು ಮಕ್ಕಳ ಕವಿಯಾಗಿ ಕುವೆಂಪುರವರು ಸಹ ವೈವಿಧ್ಯಮಯವಾಗಿ ಕಂಡವರು. ಮಗುವಾಗಿ ಆನಂದಿಸಿ ಅಭಿವ್ಯಕ್ತಗೊಳಿಸಿದವರು. ಅವರು 'ಅರ್ಧಚಂದ್ರ' ಕವನದಲ್ಲಿ,

'ದೇವರ ಪೆಪ್ಪರಮೆಂಟೇನಮ್ಮಾ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೆ ಆಗದ
ಬೆಳೆಯುವ ಪೆಪ್ಪರಮೆಂಟೇನಮ್ಮಾ'[೧೦೬]

ಮಗುವಿನ ಮನಸ್ಸು ಹೇಗಿದ್ದರೂ ಮನಮೋಹಕವಾದುದು. ಹುಣ್ಣಿಮೆಯ ಚಂದ್ರ ಅಮವಾಸೆ ಬರುತ್ತಲೇ ಕರಗುವುದು. ಮತ್ತೆ ಹುಣ್ಣಿಮೆ ಸಮೀಪಿಸುತ್ತಲೇ ಬೆಳೆಯುವನು. ಪ್ರತಿದಿನ ಮಗು ಇಂಥ ವೈಚಿತ್ರ್ಯ ಕಂಡು ಕಲ್ಪನೆ ಮಾಡುವ ಬಗೆ ಅದ್ಭುತ. ಕುವೆಂಪು ಮಗುವಾಗಿ ಸರಳ ಶೈಲಿಯಿಂದ ಕವಿತೆ ಕಟ್ಟಿರುವುದು ಸಾರ್ಥಕತೆ ಪಡೆದಿದೆ. ಚಂದ್ರನ ಕರಗುವಿಕೆ ಮತ್ತು ಬೆಳೆಯುವಿಕೆಯ ಪ್ರಕ್ರಿಯೆ ಮಗುವಿಗೆ ಅಚ್ಚರಿ ತಂದಿದೆ.

'ದಿನ ದಿನ ನೋಡುವೆ, ದಿನವೂ ಕರಗುವ
ಎರಡೇ ವಾರದೊಳಳಿಯುವುದು
ಮತ್ತು ದಿನ ದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು'[೧೦೭].

ಮಗುವಿನ ಮನಸು ಮುಗ್ಧವಾದರೂ ಬಲು ರೋಮಾಂಚನಕಾರಿಯಾದುದು. ಅರ್ಧಚಂದ್ರನ ಮತ್ತು ಪೂರ್ಣಚಂದ್ರನನ್ನು ಮಗು ಗ್ರಹಿಸುವ ರೀತಿ ವಿಭಿನ್ನವಾದುದು. ಮಗು ತನ್ನ

ಬಾಯಿಯಲ್ಲಿಟ್ಟುಕೊಂಡ ಪೆಪ್ಪರಮೆಂಟು ಕರಗುತ್ತಿದ್ದಂತೆ ಮತ್ತೊಂದನ್ನು ಬಾಯಿಗೆ ಹಾಕಿಕೊಂಡಂತೆ ಚಂದ್ರನ ಪರಿಕಲ್ಪನೆ ವಿಸ್ಮಯಕಾರಿ–ಅನುಭವ.

'ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವದೇನಮ್ಮಾ'?

ಎಂಬ ಪ್ರಶ್ನೆ ಮಗುವಿನಲ್ಲಿ ಸಹಜವಾದುದು. ಕರಗಿದ ನಂತರ ಮತ್ತೆ ಬೇಡುವ ಬದಲು ಶಾಶ್ವತವಾದ ಪೆಪ್ಪರಮೆಂಟಿನ ಬಯಕೆ ವ್ಯಕ್ತಪಡಿಸುವ ಮಗುವಿನ ಭಾವನೆ ಕುವೆಂಪುರವರದು.

ಈ ರೀತಿಯ ಮಗುವಿನ ಬಯಕೆಗೆ ತಾಯಿ ಉತ್ತರಿಸುವುದು ಅಷ್ಟೇ ಸುಂದರವಾಗಿದೆ.

'ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವೆನು, ಕಂದಯ್ಯ'

ಇಂಥ ಉತ್ತರದಿಂದ ಮಗು ಸಮಾಧಾನ ಹೊಂದುವುದಿಲ್ಲ. ಶಾಶ್ವತವಲ್ಲದ ಪೆಪ್ಪರಮೆಂಟಿಗಾಗಿ ತನ್ನ ತಾಯಿಯಿಂದ ದೂರಾಗಲೂ ಸಾಧ್ಯವಿಲ್ಲ. ಇದು ಮಹಾಕವಿಯ ಕಲ್ಪನೆ. ಅದ್ಭುತವಾಗಿ ಮೂಡಿಬಂದಿದೆ. ಸಾಮಾನ್ಯ ಕವಿಯಾಗಿದ್ದರೆ, 'ನಾನು ದೇವ ಬಾಲಕನಾಗುವೆ, ನನಗದು ದೊರಕಿಸಿ ಕೊಡಮ್ಮಾ' ಎಂದು ವ್ಯಕ್ತಗೊಳಿಸಬಹುದಾಗಿತ್ತು. ಆದರೆ ಕುವೆಂಪು ಮುಗ್ಧತೆಯಿಂದ ಕೂಡಿದ ಮಗುವಾಗಿ ಹೇಳಿರುವುದು ಹಾಗಲ್ಲ.

'ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ'[೧೦೮].

ಇದು ಊಹೆಗೂ ನಿಲುಕದ ಕಲ್ಪನೆ. ತನ್ನ ಅನುಭವಕ್ಕೆ ನಿಲುಕುವ ವಸ್ತುವಿನ ಮೂಲಕ ಊಹೆಗೂ ನಿಲುಕದ ಸತ್ಯವನ್ನು ಬಲು ರಮಣೀಯವೆನಿಸಿದ ವಸ್ತುವಿನ ಅನಾವರಣವಾಗಿದೆ. ತಾಯಿಗೂ ಹೊಳೆಯದ ಕಲ್ಪನೆ–ಇದು. ತಾಯಿ ವಾತ್ಸಲ್ಯವನ್ನು ಕಳೆದುಕೊಳ್ಳದ ಮಗುವಿನ ಯೋಚನೆ ಪೂರಕವಾಗಿ ಅಭಿವ್ಯಕ್ತಗೊಂಡಿದೆ. ತಾಯಿ–ಮಗು–ಚಂದ್ರ ಈ ಮೂವರ ನಡುವಿನ ಸಂಭಾಷಣೆಯು ಮಕ್ಕಳ ಸಾಹಿತ್ಯದ ವಿಭಿನ್ನ ಆಯಾಮವನ್ನು ತೆರೆದುಕೊಳ್ಳುತ್ತದೆ. ಇಲ್ಲಿ ನೆಲದ ವಾಸ್ತವತೆಯಿಂದ ಆಗಸದ ಚಂದ್ರನವರೆಗೆ ಕಲ್ಪಿಸುವ ಸಂಬಂಧ ತಾತ್ವಿಕತೆಯ ನೆಲೆಯಾಗಿದೆ. ಈ ರೂಪದ ಆಶೆಯ ಹೊಂದಿದ ಕಥೆ ರಾಮಾಯಣದಲ್ಲೂ ನೋಡಬಹುದು. ಕುವೆಂಪು ಅವರಿಗೆ ಅರ್ಧಚಂದ್ರ ದೇವರ ಪೆಪ್ಪರಮೆಂಟಾಗಿ ಕಂಡರೆ ಪೂರ್ಣಚಂದ್ರ ತಿಂಗಳ ಮಾವನಾಗಿ ಕಂಡಿದ್ದಾರೆ.

'ನಮ್ಮನೆಯಂಗಳದಲ್ಲಾಡುತಿರೆ ನಾನು
ನೆತ್ತಿಯ ಮೇಲೆಯೆ ತೋರುವನು
ಮಾವನ ಮನೆಯೊಳಗುಳಿಯಲು ಹೋದರೆ

ಅಲ್ಲಿಗೂ ಬರುವನು ಚಂದಿರನು'[೧೯೯].

ಹೀಗೆ ಮೂರ್ತಿಯ ಜೊತೆಗೆ ಚಂದ್ರ ಎಲ್ಲ ಕಡೆಗೂ ಹೋಗುವನು. ಆದರೆ ಇನ್ನೊಬ್ಬರ ಜೊತೆಗೆ ಹೋಗನು ಎನ್ನುವ ಮನೋಭಾವ ಮಗುವಿನದು.

'ನೆರೆಮನೆಯ ಕಿಟ್ಟು ಕರೆದರೆ ಹೋಗನು
ಮೂರ್ತಿಯನೆಂದೂ ಬಿಟ್ಟಿರನು
ಎಲ್ಲಿಗೆ ನಾ ಹೋದರಲ್ಲಿಗೆ ಬರುವನು
ಅಮ್ಮಾ ಚಂದಿರ ನನ್ನವನು;
ನಿನ್ನವನಾನಾಗಿರುವುದರಿಂದ
ಅಮ್ಮಾ ಚಂದಿರ ನಿನ್ನವನು'[೨೦೦].

ಮಗು ತಾಯಿಯನ್ನು ಬಿಟ್ಟು ಅಗಲುವುದಿಲ್ಲ ಎಂದು ಹೆಮ್ಮೆಯಿಂದ ಹೇಳುತ್ತದೆ. ಚಂದ್ರನನ್ನು ತನ್ನಿಂದ ಬೇರ್ಪಡಿಸದೆ ಜೊತೆಯಾಗಿರಬೇಕು ಎನ್ನುವುದು ಕವಿಯ ಆಶಯ. ಹೀಗೆ ಚಂದ್ರನನ್ನು ಮಾವನನ್ನಾಗಿಸಿ ನೋಡುವ ಮಗುವಿನ ಮುಗ್ಧತೆಯ ಕಲ್ಪನೆಗಳನ್ನು ಕುವೆಂಪು ಅವರು ಮನಸೂರೆಗೊಳ್ಳುವಂತೆ ಅಭಿವ್ಯಕ್ತಗೊಳಿಸಿದ್ದಾರೆ. ತಾಯಿಯ ಪ್ರೀತಿಯನ್ನು ಮರೆಸುವುದಾದರೆ ಆನು ದೇವರ ಬಾಲಕನಾಗಲು ತಿರಸ್ಕರಿಸುತ್ತಾನೆ. 'ತಾಯಿಯನ್ನಗಲಿಸಿ ದೇವರ ಹಿಡಿಸುವ' ಪೆಪ್ಪರಮೆಂಟೂ ಆತನಿಗೆ ಬೇಡವಾಗುತ್ತದೆ. ತಾಯಿಗೂ ಸಹ ಹಾಗೆಯೇ ಅನಿಸಿಕೆ. ಅವನಿಗಿಂತ ಬೆಲೆಯುಳ್ಳ ವಸ್ತು ಅವಳಿಗೆ ಮತ್ತೊಂದಿಲ್ಲ. ಅವಳ ನೊಂದ, ನೋವಿನ ಬದುಕಿಗೆ ಸಂತೋಷ ನೀಡುವವನು. ಆತನ ಬಾಲ್ಯದ ಆಟ-ನೋಟಗಳೇ ಅವಳ ಪ್ರಪಂಚ. ಇದು ಕವಿ ಕಾವ್ಯದ ಧಾರೆಯಾಗಿ ನಿಂತಿದೆ.

'ಜಗತ್ತಿನ ಮೊದಲ ವಿಜ್ಞಾನಿ ಮಗು' ಎನ್ನುವುದು ತಜ್ಞರ ಅಭಿಮತ. ಯಾಕೆಂದರೆ ಪ್ರಶ್ನೆ ಮಾಡುವ ಗುಣ ಹೊಂದಿರುವುದರಿಂದ ಮಗು ತಾನು ನೋಡಿದ ಸಂಗತಿಗಳಿಗೆ ಹಲವು ಪ್ರಶ್ನೆಗಳನ್ನು ಮಾಡುತ್ತದೆ. ಅದು ಆತನ ತಿಳುವಳಿಕೆಯ ಮೇಲೆ ನಿಂತಿರುತ್ತದೆ. ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳನ್ನು ಹೇಳುವುದು ತಾಯಿಯ ಕರ್ತವ್ಯ, ಉತ್ತರಿಸದಿದ್ದರೆ ಮಕ್ಕಳ ಮೇಲೆ ಬೇರೆ ಪರಿಣಾಮ ಬೀರಲು ಸಾಧ್ಯವಿದೆ. ಈ ರೀತಿಯ ಮಗುವಿನ ಪ್ರಶ್ನೆಯ ಕುರಿತಾಗಿ 'ಗುರು' ಎನ್ನುವ ಕವನದಲ್ಲಿ ಕುವೆಂಪು ಅವರು ಹೀಗೆ ವ್ಯಕ್ತಗೊಳಿಸುತ್ತಾರೆ.

'ಸಂಪಿಗೆ ಹೂವನು ಸಂಪಿಗೆ ಹೂವೆಂದೇತಕೆ
ಕರೆವರು ಹೇಳಮ್ಮಾ ।
ಸಂಪಿಗೆಗಿಂತಲು ತಂಪಿಗೆ ಎಂದರೆ
ಇಂಪಾಗಿರುವುದು ಕೇಳ್ವರಿಗೆ ॥

ತಾಯಿಗೆ 'ಸಂಪಿಗೆ'ಯನ್ನು 'ತಂಪಿಗೆ' ಎನ್ನಲು ಮಗು ಹೇಳುತ್ತದೆ. ಈ ಮಾತಿಗೆ ತಂಗಿಯೂ ಒಪ್ಪಿರುವಳು. ಆದರೆ ಸ್ನೇಹಿತರು ಯಾರು ಇದಕ್ಕೆ ಒಪ್ಪುತ್ತಿಲ್ಲ ಎಂದು ಮಗು ಅಭಿಪ್ರಾಯ ತಿಳಿಸಿದಾಗ ತಾಯಿ, ಹೀಗೆ ಹೇಳುತ್ತಾಳೆ. 'ಆಗಲಿ ನಾನೂ ತಂಪಿಗೆ ಎಂಬೆನು, ನನಗೂ ತಂಗಿಗೂ ನೀನೇ ಗುರು' ಎಂದು ಸಮಾಧಾನಪಡಿಸುವಳು.

ಮಕ್ಕಳ ಪ್ರಶ್ನೆಗಳಿಗೆ ಹಿರಿಯರು ಸುಮ್ಮನಿರದೆ, ಮಕ್ಕಳಿಗೆ ಸರಿಯಾಗಿ ತಿಳಿಯುವಂತೆ ಉತ್ತರಗಳನ್ನು ನೀಡಿ ಪ್ರೋತ್ಸಾಹಿಸಬೇಕು. ಮಕ್ಕಳನ್ನು ಅಲಕ್ಷಿತರನ್ನಾಗಿ ನೋಡಬಾರದು ಎನ್ನುವ ತಾತ್ವಿಕತೆ ಇಲ್ಲಿ ವ್ಯಕ್ತವಾಗಿದೆ. ಕುವೆಂಪು ಅವರು ಮಲೆನಾಡಿನ ಸೌಂದರ್ಯವನ್ನು ಹಲವಾರು ಕವನಗಳಲ್ಲಿ ವರ್ಣಿಸಿರುವರು. ಅಂಥ ವಸ್ತುವನ್ನಾಧರಿಸಿದ 'ಸಂಜೆಯ ರವಿ' ಕವಿತೆ ಮಕ್ಕಳಲ್ಲಿ ಸೃಜನಶೀಲ ಮನೋಭಾವವನ್ನು ಮೂಡಿಸುತ್ತದೆ.

'ಸಂಜೆಯ ರಂಜಿಪ ಸೂರ್ಯನ ತರುವೆನು
ಕೈಬಿಡು ಹೋಗುವೆ ನಾನಮ್ಮ ।
ಚಿನ್ನದ ಚಂಡನು ಕೈವಶ ಮಾಡುವೆ
ಅಂಜದೆ ಅನುಮತಿಯಿಯಮ್ಮ' ।

ಈ ರೀತಿಯ ಮಕ್ಕಳ ಮಾತುಗಳು ಅಚ್ಚರಿ ಮೂಡಿಸಿದರೂ ತಾಯಿಗೆ ಸಂತಸ ನೀಡುತ್ತವೆ. ಮಗು ಸೂರ್ಯನನ್ನು ಚಿನ್ನದ ಚೆಂಡಿಗೆ ಹೋಲಿಸಿ ತನ್ನ ಕೈವಶ ಮಾಡಿಕೊಳ್ಳುವ ಬಯಕೆ ಅಸಾಧ್ಯವಾದುದು ಎಂಬ ಕಲ್ಪನೆ ಮಗುವಿನಲ್ಲಿ ಮೂಡುವುದಿಲ್ಲ. ಕೇವಲ ಚೆಂಡು ಎಂದು ಭಾವಿಸುತ್ತದೆ. ಮುಗ್ಧ ಭಾವದ ಮಗು ಮುಂದುವರೆದು, 'ಇದೇನು ದೊಡ್ಡ ಕೆಲಸವಲ್ಲ. ಸೂರ್ಯನು ನನಗಿಂತ ಶಕ್ತಿವಂತನೆ' ನನ್ನನ್ನು ನೋಡಿ ಹೆದರುವನು ಎಂದು ತಾಯಿಗೆ ಹೇಳುತ್ತದೆ ಮಗು.

'ಹಗಲೊಳಗಾತನು ಬೆದರುತಲೇರಿದ
ಬರುವನು ನಾನೆಂಬಾ ಭಯಕೆ ।
ಗಿರಿಗಳ ನಿಳಿದಿಳಿದಡಗಲು ಪೋಪನು
ಮುಖ ಕೆಂಪಾಗಿದೆ ನೋಡಮ್ಮ' ।

ಸೂರ್ಯನು ಮಗುವನ್ನು ನೋಡಿ ಮೇಲೇರಿ ಹೋಗುವದು, ಗಿರಿಗಳ ಕೆಳಗೆ ಇಳಿಯುವುದು, ಮುಖ ಕೆಂಪಾಗಿ ತೋರುವುದು ಇವೆಲ್ಲ ಕುವೆಂಪುರವರು ಮಕ್ಕಳಲ್ಲಿ ಕುತೂಹಲಗೊಳಿಸುವ ವಿಷಯಗಳನ್ನು ಸಹಜವಾಗಿ ಸೃಷ್ಟಿಸಿದ್ದಾರೆ. ಇಂಥ ಅಭಿವ್ಯಕ್ತಿಗಳಿಂದ ಮಕ್ಕಳಲ್ಲಿ ಬೌದ್ಧಿಕ ಮಟ್ಟ ಹೆಚ್ಚುವುದು ಎಂಬ ಆಶಯ ಅವರದು. ತಾಯಿ ಮಗನ ಮುಗ್ಧ ಮಾತುಗಳನ್ನು ಕೇಳಿ ಸಮ್ಮತಿಯನ್ನು ನೀಡಿ, ನೀನೆ ನನ್ನ ಸರ್ವಸ್ವ ಎನ್ನುವಳು.

'ತಾಯಿಯು ಮಗನಾ ಮುದ್ದಿನ ನುಡಿಗಳ
ಆಲಿಸಿ ಚುಂಬಿಸಿ ಉಸಿರಿದಳು,
ಕಂದಾ ಎನ್ನಯ ಸೂರ್ಯನು ನೀನಿರೆ
ಜಗದಾ ಸೂರ್ಯನು ಎನಗೇಕೆ?'

ಎಂದು ಖುಷಿಯನ್ನು ವ್ಯಕ್ತಗೊಳಿಸುತ್ತಾಳೆ. 'ಹೆತ್ತ ತಾಯಿಗೆ ಹೆಗ್ಗಣ ಮುದ್ದು' ಎನ್ನುವ ಹಾಗೆ ಮಗು ಏನು ಹೇಳಿದರೂ ಚಂದ, ಏನು ಮಾಡಿದರೂ ಚಂದ ಎಂಬುದು ತಾಯಿಯ ಮನ. ಅದಕ್ಕಾಗಿ ನೀನೇ ಸೂರ್ಯನನ್ನು ಮೀರಿಸುವ ಗುಣ ಹೊಂದಿರುವುದರಿಂದ ಜಗದ ಸೂರ್ಯನ ಅವಶ್ಯಕತೆ ಇಲ್ಲ ಎಂದು ಮಗನನ್ನು ಮುದ್ದಿಸಿ ಸಂತೈಸುವ ತಾಯಿಯನ್ನು ಮೆಚ್ಚಲೇಬೇಕು.

ಮಕ್ಕಳು ಸ್ವತಂತ್ರವಾಗಿ ಆಡುವುದು, ಹಾಡುವುದು, ಆಲೋಚಿಸುವುದನ್ನು ಬಯಸುತ್ತವೆ. ಅದು ಕಲ್ಲು ಇರಲಿ, ಮುಳ್ಳಿರಲಿ, ಕೆಸರೇ ಇರಲಿ, ಮಣ್ಣೇ ಇರಲಿ ಸಂಕೋಚಪಡುವುದಿಲ್ಲ. ಭಯ ಹೊಂದುವುದಿಲ್ಲ. ತನ್ನ ಮನಸ್ಸಿಗೆ ಬಂದಂತೆ ವರ್ತಿಸುತ್ತದೆ. ಇಂಥ ಚಟುವಟಿಕೆಗಳಿಗೆ ತಡೆ ಮಾಡಬಾರದು ಎನ್ನುತ್ತವೆ 'ಒಡವೆಗಳು' ಎಂಬ ಕವನದ ಸಾಲುಗಳು.

'ಚಿನ್ನದ ಒಡವೆಗಳೇತಕೆ ಅಮ್ಮಾ
ತೊಂದರೆ ಕೊಡುವವು ಬೇಡಮ್ಮಾ
ಬಣ್ಣದ ಬಟ್ಟೆಗಳೇತಕೆ ಅಮ್ಮಾ
ಮಣ್ಣಿನೊಳಾಡಲು ಬಿಡಮ್ಮಾ'[೧೧೧] ।

ಮಕ್ಕಳಿಗೆ ಮಣ್ಣಿನಲ್ಲಿ ಆಡುವುದೆಂದರೆ ಬಲು ಪ್ರೀತಿ. ಮನೆಯವರ ಭಯದಿಂದ ಚಿನ್ನದ ಒಡವೆಗಳನ್ನು, ಬಣ್ಣದ ಬಟ್ಟೆಗಳನ್ನು ನಿರಾಕರಿಸುತ್ತವೆ. ಬಟ್ಟೆಗಳು ಹೊಲಸಾಗುವವು ಎಂಬ ಕಲ್ಪನೆ ಮಗುವಿನಲ್ಲಿ ಇರದು. ಮಗು ಒಡವೆಗಳನ್ನು ಕಳೆದುಕೊಂಡಿತೆಂಬ ಆತಂಕ ತಂದೆ-ತಾಯಿಯರದ್ದು. ಹೀಗಾಗಿ ಮಗು ಇವೆಲ್ಲವುಗಳಿಂದ ದೂರವಿರಲು ಬಯಸುತ್ತದೆ. 'ನಾ ನಿನಗೊಡವೆಯು ನೀ ನನಗೊಡವೆಯು, ಬೇರೆಯ ಒಡವೆಗಳೇಕಮ್ಮಾ' ಎಂದು ಮಗು ಹೇಳುತ್ತದೆ. 'ಒಡವೆಗಳ ಗೋಳಾಟವೇಕೆ' ಎನ್ನುವಲ್ಲಿ ಮಕ್ಕಳ ಮುಗ್ಧತೆ ಸ್ಪಷ್ಟವಾಗುತ್ತದೆ. ತಾಯಿ ಮಗುವಿನ ಬಾಂಧವ್ಯ ಅನ್ಯೋನ್ಯವಾದುದು. ಅದನ್ನು ಬೇರ್ಪಡಿಸಲು ಅಸಾಧ್ಯ ಎಂದು ಕುವೆಂಪುರವರ ಇಂಗಿತ. ಕುವೆಂಪು ಪ್ರಕೃತಿಯ ಮಡಿಲಲ್ಲಿ ಬೆಳೆದ ಕವಿ. ಹೀಗಾಗಿ ಸೂರ್ಯ, ಚಂದ್ರ, ಕಾಮನಬಿಲ್ಲು ಮೊದಲಾದವುಗಳ ಮೂಲಕ ಆಕಾಶದ ವಿಸ್ಮಯಗಳನ್ನು ಪರಿಚಯ ಮಾಡುವುದರೊಂದಿಗೆ ವೈಜ್ಞಾನಿಕ ಪ್ರಜ್ಞೆಯನ್ನು ಬೆಳೆಸಿದ್ದಾರೆ. 'ಕಾಮನಬಿಲ್ಲು' ಮಕ್ಕಳಿಗೆ ಪರಿಚಯಿಸುವ ಬಗೆ ಸರಳವಾದರೂ ಕೌತುಕ ಮೂಡಿಸುತ್ತದೆ.

'ಕಾಮನಬಿಲ್ಲು ಕಮಾನು ಕಟ್ಟಿದೆ, ಮೋಡದ ನಾಡಿನ ಬಾಗಿಲಿಗೆ' ಕಾಮನಬಿಲ್ಲು ವಿವಿಧ ಬಣ್ಣಗಳಿಂದ ಮತ್ತು ಆಕಾರಗಳಿಂದ ಮಕ್ಕಳಿಗೆ ಆಕರ್ಷಣೀಯವಾಗಿದೆ. 'ಮೋಡದ ನಾಡಿನ ಬಾಗಿಲಿಗೆ' ಕಾಮನಬಿಲ್ಲು 'ಕಮಾನು ರೂಪವನ್ನು ನಿರ್ಮಿಸಿದೆ' ಎನ್ನುವುದು ಕವಿಭಾವ. ಇಂಥ ಕಲ್ಪನೆ ಜನಿಸುವುದು ನಿಜವಾದ ಕವಿ ಹೃದಯವುಳ್ಳವರಿಗೆ ಮಾತ್ರ. ಅಂಥ ಅಭಿವ್ಯಕ್ತಿ ಕುವೆಂಪು ಅವರಲ್ಲಿ ಅಪಾರ. 'ಹಣ್ಣಿನ ಹೂವಿನ ಹೊನ್ನನು ಕೂಡಿದೆ; ಮಕ್ಕಳಿಗೋ ಕುಳಿಯಾಟವನಾಡಿದೆ' ಎಂಬ ನುಡಿಗಳಲ್ಲಿ ಬಣ್ಣಗಳ ವೈವಿಧ್ಯತೆಯೊಂದಿಗೆ ಮಕ್ಕಳು ಹಣ್ಣನ್ನು, ಹೂವನ್ನು ಹೋಲಿಕೆ ಮಾಡುವುದು ಕವಿಯ ಕಲ್ಪನೆಯಾದರೂ ಒಕುಳಿಯಾಟದ ವರ್ಣನೆ ಮಕ್ಕಳಲ್ಲಿ ಆನಂದದ ನೆಲೆಯಾಗಿ ಮೂಡಿಬಂದಿದೆ.

ಕುವೆಂಪು ಅವರ ಬಾಲ್ಯದ ನೆನಪುಗಳನ್ನು ಕಟ್ಟಿಕೊಡುವ ಕವಿತೆ 'ನನ್ನ ಮನೆ' ಎಂದರೆ ತಪ್ಪಾಗದು. ಮೂರ್ತಿ ಎಂಬ ಮಗುವನ್ನು ಸಾಂಕೇತಿಕವಾಗಿ ಬಳಸಿಕೊಂಡು ಕವಿತೆ ವ್ಯಕ್ತಗೊಂಡಿದೆ. ಮಕ್ಕಳು ತಮ್ಮ ಬಾಲ್ಯದ ನೆನಪುಗಳನ್ನು ಹೇಗೆ ಚಿತ್ರಿಸುವರು ನೋಡಿ.

'ನಾನು ಬಿದ್ದು ಎದ್ದ ಮನೆ
ಮೊದಲು ಬೆಳಕು ಕಂಡ ಮನೆ
ತಿಪ್ಪ ತಿಪ್ಪ ಹೆಜ್ಜೆಯಿಟ್ಟು
ಬಿಸಿಲ ಕೋಲ ಹಿಡಿದು ಬಿಟ್ಟು
ತಂಗಿ ತಮ್ಮರೊಡನೆ ಹಿಟ್ಟು
ತಿಂದು ಬೆಳೆದ ನನ್ನ ಮನೆ'[೧೧೨].

ಕುವೆಂಪು ಅವರು ಹೇಳುವ ಧಾಟಿ ಮುಗ್ಧವಾದುದು. ಏಳು-ಬೀಳುಗಳನ್ನು ಹಿತವಾಗಿ ಅನುಭವಿಸಿ ತಂಗಿ-ತಮ್ಮರೊಡನೆ ಕೂಡಿ-ಆಡಿ, ಹಂಚಿ ತಿಂದ ಪ್ರಸಂಗ ಕಣ್ಮುಂದೆ ನಿಲ್ಲುವಂತೆ ಮಾಡಿದ್ದಾರೆ. 'ತಾಯಿ ಮುತ್ತು ಕೊಟ್ಟ ಮನೆ । ತಂದೆ ಎತ್ತಿಕೊಂಡ ಮನೆ' ಹೀಗೆ ಕುವೆಂಪು ಅವರು ವಾತ್ಸಲ್ಯವನ್ನು ಕಂಡವರು ಅನುಭವಿಸಿದವರು.

'ನನ್ನ ಗೆಳೆಯರೊಡನೆ ಕೂಡಿ
ಮುದ್ದು ಮಾತುಗಳನು ಆಡಿ
ಮಕ್ಕಳಾಟಗಳನ್ನು ಹೂಡಿ
ನಾನು ಕಲಿತ ನನ್ನ ಮನೆ'[೧೧೩].

ಮಕ್ಕಳು ತಮ್ಮ ಬಾಲ್ಯವನ್ನು ಕಳೆದಂತಹ ಪ್ರಸಂಗ. ಗೆಳೆಯರ ಸಮೂಹ, ಸರಸ-ವಿರಸಗಳ ಸಂಗ ಮಗುವಿನ ವಾತಾವರಣ. ಇಲ್ಲಿ ಎಲ್ಲವೂ ಸೊಗಸು-ಸಂಭ್ರಮ. ಇವುಗಳನ್ನು ನನ್ನ ಮನೆ ನನಗೆ ನೀಡಿದೆ ಎಂಬ ಕೃತಜ್ಞತೆಯ ಭಾವ ಕವಿಯದು. ಒತ್ತಕ್ಷರಗಳಿಲ್ಲದ ಸರಳ ಕವಿತೆ ಮಗುವಿಗೆ ಸಂತೋಷಮೂಡಿಸಿ ಸಫಲವೆನಿಸಿದೆ.

'ಮೂರ್ತಿಯ ಬೆಳ್ಮುಗಿಲು' ಕವಿತೆ ಆಗಸದ ವಿಭಿನ್ನತೆಯನ್ನು ದೃಶ್ಯಗಳ ಮೂಲಕ ಕುವೆಂಪುರವರು ಹೀಗೆ ಗ್ರಹಿಸಿದ್ದಾರೆ.

'ಬೆಳ್ಳನೆ ಲಾಲಿಕುಲಾಲಿ ಮಿಠಾಯಿಯ
ಬಾನೊಳು ಹರಡಿಹರೇನಮ್ಮಾ?
ತೆಳ್ಳಗೆ ಹಿಂಜಿದ ಬೂರುಗದರಳೆಯ
ಬಿಸಿಲಿಗೆ ಕೆದರಿಹರೇನಮ್ಮಾ?'[೧೧೪].

ಮಗುವಿನ ಮನ ಮುಗ್ಧತೆಯು ಆಗರವಾಗಿ 'ಬಿಳಿಮುಗಿಲನ್ನು' ಮೀಠಾಯಿಗೆ ಹೋಲಿಸುವುದು, ತೆಳ್ಳನೆ ಹಿಂಜಿದ ಬೂರುಗು ಎಳೆಯ ಬಿಸಿಲಿಗೆ ಕೆದರಿದ್ದಾರೆ ಎನ್ನುವುದು ಮಗುವಿನ ಕಲ್ಪನಾಶಕ್ತಿಯನ್ನು ತಿಳಿಸುತ್ತದೆ. ಭಾಷೆಯ ಮೃದುತನ ಮಕ್ಕಳಿಗೆ ಹಿತವೆನಿಸುತ್ತದೆ.

'ತಿಳಿ ಬೆಳುದಿಂಗಳ ಸವಿನೊರೆ ಹಾಲೊಳು
ತೇಲ್ವ ಚಿರೋಟಿಗಳೇನಮ್ಮಾ?
ನೀಲಿಯ ನೀರೊಳು ಬಾನಮ್ಮ ನಿಟ್ಟಿಹ
ಬೆಣ್ಣೆಯ ಮುದ್ದೆಗಳೇನಮ್ಮಾ?'[೧೧೫].

ಮಗು ಮುಗಿಲನ್ನು ಕಲ್ಪಿಸುವ ರೀತಿ ಪರಿಣಾಮಕಾರಿಯಾದುದು. ಕುವೆಂಪು ಅವರು ಇಡೀ ಕವಿತೆಯಲ್ಲಿ ಮಕ್ಕಳ ಅನುಭವಕ್ಕೆ ನಿಲುಕುವ ಪ್ರತಿಮೆ ರೂಪಕಗಳನ್ನು ಬಳಸಿಕೊಂಡು ವ್ಯಕ್ತಪಡಿಸಿರುವ ದೃಷ್ಟಾಂತಗಳು ರಮ್ಯತೆಯ ಭಾವವನ್ನು ಮೂಡಿಸುತ್ತವೆ. 'ನನ್ನ ಮನೆ' ಉತ್ತಮ ಶಿಶು ಕಾವ್ಯವಾದರೂ ಪ್ರಕೃತಿ ವರ್ಣನೆ ಸುಂದರವಾಗಿ ಕಂಗೊಳಿಸಿದೆ. ಇಲ್ಲಿಯ ವಸ್ತು, ಪರಿಸರ, ಖಗೋಳ ಪರಿಚಯ ಸರಳವಾಗಿ ಮತ್ತು ರಂಜನೀಯವಾಗಿ ಮಕ್ಕಳಿಗೆ ಅರ್ಥವಾಗುವಂತೆ ಕುವೆಂಪುರವರು ವ್ಯಕ್ತಪಡಿಸಿದ್ದಾರೆ. ತಾಯಿ-ಮಗುವಿನ ಭಾಂದವ್ಯ, ಮಗುವಿನ ಪ್ರಶ್ನೆಗಳಿಗೆ ತಾಯಿ ಸರಳವಾಗಿ ಉತ್ತರಿಸಿ ಮಗುವಿನ ಮನ ತಣಿಸುತ್ತಾಳೆ. ಪ್ರತಿಯೊಂದು ಕವಿತೆ ನೀತಿಯನ್ನು ತಿಳಿಸುವ ಸ್ವರೂಪವನ್ನು ಪಡೆದಿವೆ.

ಹದಿಮೂರು ಕವಿತೆಗಳಿಂದ ಕೂಡಿದ ಕವನ ಸಂಕಲನ ಮರಿವಿಜ್ಞಾನಿ. ವೈಚಾರಿಕ ಸಿದ್ಧಾಂತವನ್ನು ತಿಳಿಸುವ ಕೃತಿ. ಇಲ್ಲಿಯ ಕವಿತೆಗಳು ಮಕ್ಕಳಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವನೆಗಳನ್ನು ಮೂಡಿಸುವವು. ಕುವೆಂಪು ಅವರ ಉದ್ದೇಶವು ಇದುವೆ ಎನ್ನಬಹುದು. 'ತಿಂಡಿ' ಎಂಬ ಕವಿತೆಯಲ್ಲಿ ಕುವೆಂಪುರವರು ಮಗುವಿನ ಮುಗ್ಧ ಮನಸ್ಸಿನ ಮೂಲಕ ಮಾತನಾಡಿದರೂ ಕೆಲವೊಂದು ಸಲ ಮಗುವಿಗೆ ಮೀರಿದ ಭಾವನೆಗಳನ್ನು ಹೇಳುವ ಪ್ರಯತ್ನ ಮಾಡಿರುವುದು ಕಂಡುಬರುತ್ತದೆ.

'ತಿಂಡಿಯನು ಕೊಡು ತಾಯೆ ಹೇಳಿದುದ ಮಾಡುವೆನು,
ಬೇಕಾದುದೆಲ್ಲವನು ನೀಡುವೆನು ನಿನಗೆ.......।
ಮೂಡುತಿಹ ಚಂದಿರನ ಸೆರೆಹಿಡಿದು ತಂದು
ಕೊಡುವೆನು ನಿನ್ನ ಮಾಂಗಲ್ಯದಲ್ಲಿ ಇಂದು
ಮಿಣುಕುತಿಹ ತಾರೆಗಳನೆಲ್ಲವನು ಕೊಯ್ದು
ಮಣಿಮಾಲೆಗಳ ಮಾಡುವೆನು ನಿನಗೆ ನೆಯ್ದು'[೧೧೬].

ಮೂರ್ತಿಯು ತಿಂಡಿಯ ಸಲುವಾಗಿ ಅನೇಕ ಪ್ರಯತ್ನಗಳನ್ನು ಮಾಡುವ ತಾಯಿಯನ್ನು ಮನವೊಲಿಸುವ, ತುಂಟತನದ ಮಾತುಗಳು ಸುಂದರವಾಗಿ ಮೂಡಿವೆ. ಚಂದ್ರನನ್ನು ಸೆರೆಹಿಡಿದು ನಿನ್ನ ಮಾಂಗಲ್ಯದಲ್ಲಿ ಕೂಡಿಸುವೆ, ಆಗಸದಲ್ಲಿ ಮಿನುಗುವ ತಾರೆಗಳನ್ನು ಕೊಯ್ದು ಮಾಲೆ ಮಾಡಿಕೊಡುವೆ ಎಂಬ ಮೊದಲಾದ ಮಾತುಗಳು ಮಗುವಿನ ಮುಗ್ಧತೆಯಲ್ಲಿ ಅರಳಿದವು. ಅಸಾಧ್ಯವಾದುದನ್ನು ಸಾಧ್ಯಮಾಡುವ ಕ್ರಿಯೆ ಕಂಡುಬರುತ್ತದೆ. ಇದು ಮಗುವಿಗೆ ನಿಲುಕದ ಸಂಗತಿಯಾದರೂ ಕುವೆಂಪುರವರು ಮಗುವಿನ ಮೂಲಕ ವ್ಯಕ್ತಪಡಿಸಿರುವುದು ವಿಶೇಷವಾಗಿದೆ.

'ಹಿರೇತನ' ಎಂಬ ಕವಿತೆಯಲ್ಲಿ ಮೂರ್ತಿಯು ತನ್ನ ತಂಗಿ 'ದಡ್ಡ' ಎಂದು ಗುರುತಿಸಿ ಹೇಳುವ ಕ್ರಮ ಮಕ್ಕಳ ಮನಸ್ಸನ್ನು ಹಿಡಿದಿಡುತ್ತದೆ. ಬೀದಿಯ ದೀಪಗಳಿಗೂ, ಗಗನದ ತಾರೆಗಳಿಗೂ ಇರುವ ವ್ಯತ್ಯಾಸವನ್ನು ತಿಳಿಯದವಳು. ತನ್ನ ತಂಗಿಗೆ ಕಲಿಯಲು ಪುಸ್ತಕ ಕೊಟ್ಟರೆ ಹರಿಯುವಳಮ್ಮ ಎಂದು ಹೇಳುವ ಮಾತುಗಳು ಕನ್ನಡ ಅಕ್ಷರಗಳನ್ನು ಹೇಳಿಕೊಡುವ ಪ್ರಯತ್ನ ಇರುವುದು ಕಂಡುಬರುತ್ತದೆ. ಇದು ಕುವೆಂಪುರವರ ಕನ್ನಡಾಭಿಮಾನ. ತೊದಲು ನುಡಿಯಂದ ಮಕ್ಕಳು ಆಡುವ ಭಾಷೆ ಕವಿಗೆ ಖುಷಿ ನೀಡಿದಂತಿದೆ. ಬಿಸ್ಕತ್ತನ್ನು 'ಬಿಕ್ಕತ್ತು' ಎಂದು ಹೇಳುವ ಪ್ರಕ್ರಿಯೆ ಮಕ್ಕಳ ಸ್ವಂತಿಕೆ ವ್ಯಕ್ತವಾಗುತ್ತದೆ. ಮಕ್ಕಳಲ್ಲಿ ಚೈತನ್ಯ ಮೂಡಿಸಿ, ಅವರ ಮನಸ್ಸನ್ನು ಪ್ರವೇಶಿಸಿ ತಾವೇ ಮಗುವಾಗಿ ಕೃತಿ ರಚನೆ ಮಾಡಿರುವುದು ಕವಿಯ ಅನನ್ಯತೆಯಾಗಿದೆ. ಮಕ್ಕಳು ಆಟದಲ್ಲಿ ತೊಡಗಿದಾಗ ಅದು ಮುಗಿಯುವ ತನಕ ಬಿಟ್ಟು ಬರಲಾರರು. ಆಟದಲ್ಲಿ ಮಗ್ನರಾದ ಮಕ್ಕಳ ರೀತಿಯನ್ನು ಕುವೆಂಪುರವರು 'ಆಟ ಮುಗಿಯುವ ಮುನ್ನ' ಕವನದಲ್ಲಿ ಹೀಗೆ ಹೇಳುತ್ತಾರೆ.

'ಆಟ ಮುಗಿಯುವ ಮುನ್ನ
ಕರೆಯ ಬೇಡೆನ್ನ ।
ಆಟ ಮುಗಿಯಲು ನಾನೆ
ಬರುವೆನಮ್ಮಾ'[೧೧೭].

ಮಗುವಿನ ಏಕಾಗ್ರತೆಯನ್ನು ಪ್ರಧಾನವಾಗಿ ಚಿತ್ರಿಸುವ ಪ್ರಸಂಗ ಇಲ್ಲಿಯದು. ತಾಯಿ ಮಗುವಿಗೆ ಸವಿಯೂಟದ ಆಶೆ ತೋರಿದರೂ ಬರಲಾರದ ಮಗುವಿನಲ್ಲಿ ಪಾಠದಷ್ಟೇ ಆಟವೂ ಪ್ರಮುಖವಾದುದು. ಕುವೆಂಪು ಅವರು ಮಕ್ಕಳಲ್ಲಿ ಈ ರೂಪದ ಅರಿವನ್ನು ಮಾಡಿಕೊಡುತ್ತಾರೆ.

ಮಕ್ಕಳಿಗೆ ಸುತ್ತಲಿನ ಪರಿಸರವನ್ನು ಪರಿಚಯ ಮಾಡುವುದರೊಂದಿಗೆ ತಮ್ಮ ಕುಟುಂಬದ ಸದಸ್ಯರನ್ನು ಪರಿಚಯ ಮಾಡುವ, ಸಂಬಂಧವನ್ನು ತಿಳಿಸುವ, ಪ್ರಶ್ನೆ ಮಾಡುವ ಗುಣ ಬೆಳೆಯಲು ಹಲವಾರು ಸಂಗತಿಗಳನ್ನು ಕುವೆಂಪು ಚಿತ್ರಿಸುತ್ತಾರೆ. ಕೌಟುಂಬಿಕ ಜೀವನದ ಸನ್ನಿವೇಶ ಮಗುವಿನಲ್ಲಿ ಪ್ರಶ್ನೆ ಕೇಳುವ ಕುತೂಹಲ ಮೂಡಿಸುತ್ತವೆ. 'ಸೋತೆ ನೀನ್ । ಗೆದ್ದೆ ನಾನ್' ಎಂಬ ಕವಿತೆಯಲ್ಲಿ ಕುವೆಂಪುರವರು ಹೀಗೆ ವ್ಯಕ್ತಪಡಿಸುತ್ತಾರೆ.

'ಅವ್ವಾ ಅಪ್ಪನ ನೀನೇಕೆ
'ಅಪ್ಪಾ' ಎನ್ನುವುದಿಲ್ಲವಾ?
ಅಪ್ಪನ 'ಅಪ್ಪಾ' ಎನ್ನದಿರೆ
'ಕೆಟ್ಟವನಾಗುವೆ ನೀ'ನೆಂದೆ ।
'ಕೆಟ್ಟವಳಲ್ಲವೆ ನೀ'ನವ್ವಾ;
ಅಪ್ಪನ 'ಅಪ್ಪಾ' ಎನ್ನವ್ವಾ'[೧೧೮].

ಈ ರೀತಿಯ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭವಲ್ಲ. ಇಷ್ಟಕ್ಕೂ ಮಗು ಸುಮ್ಮನಾಗುವುದಿಲ್ಲ. ಪೀಡಿಸುತ್ತ ಮುಂದುವರೆದು,

'ಮುತ್ತಿಡೆ ಬಿಡುವೆನೆ ಹೇಳವ್ವಾ?
ನಕ್ಕರೆ ಬಿಡುವೆನೆ ಹೇಳವ್ವಾ?
ಬುದ್ಧಿಯ ಹೇಳುವೆ ನಿನಗವ್ವಾ,
ಬುದ್ಧಿಯು ನಿನಗೇ ಇಲ್ಲವಾ'[೧೧೯].

ತಾಯಿಗೆ ಬುದ್ಧಿ ಇಲ್ಲ ಎನ್ನುವ ಮಗುವಿನ ವಿಚಾರವಂತಿಕೆಗೆ ಪ್ರತಿಮೆಯಾಗಿದೆ. ಯಾಕೆಂದರೆ, ಅಪ್ಪನಿಗೆ 'ಅಪ್ಪ' ಎನ್ನದಾಗ ಕೆಟ್ಟವನಾಗುವೆ ಎಂದ ತಾಯಿಗೆ, ನೀನೇಕೆ ಅಪ್ಪಾ ಎನ್ನುತ್ತಿಲ್ಲ ಎನ್ನುವ ಪ್ರಶ್ನೆ ಆಶ್ಚರ್ಯ ಮೂಡಿಸುತ್ತದೆ. ಈ ಗುಣ ಮಕ್ಕಳಲ್ಲಿ ಬೆಳೆಯಬೇಕು ಎನ್ನುವ ಉದ್ದೇಶವಾಗಿದೆ.

ಕುವೆಂಪು ಮೂಲತಃ ಪ್ರಕೃತಿ ಕವಿ. ಪ್ರಕೃತಿಯಲ್ಲಿಯ ಪ್ರತಿಯೊಂದು ವಸ್ತುಗಳು–ವಿಷಯಗಳು ಅವರ ಕವಿತೆಗೆ ವಸ್ತುವಾಗಿ ಬಳಸಿಕೊಂಡಿದ್ದಾರೆ.

'ಅಂಗಳದಲ್ಲಿಹ ಮಲ್ಲಿಗೆಯಣ್ಣರು
ಎಲ್ಲಿಂದ ಬಂದರು ಹೇಳಮ್ಮಾ?
ಅಂಕೆಯ ಇಲ್ಲದ ಗೆಲವನು ತೋರುತ
ನಲಿನಲಿ ದೊಲಿಯುತಲಿಹರಮ್ಮಾ'[೧೨೦].

ಮಕ್ಕಳಲ್ಲಿ ಪರಿಸರ ಪ್ರೇಮವನ್ನು ಮೂಡಿಸುವ ಪ್ರಧಾನ ಉದ್ದೇಶ 'ಮಲ್ಲಿಗೆ ಹೂಗಳು' ಕವಿತೆ ತಿಳಿಸಿಕೊಡುತ್ತದೆ. ಅಂಗಳದಲ್ಲಿ ಬೆಳೆದ ಮಲ್ಲಿಗೆ ಹೂಗಳು ಎಲ್ಲಿಂದ ಬಂದಿವೆ, ಸಂತಸದಲ್ಲಿ ಹೇಗೆ ನಲಿಯುತ್ತಿವೆ ಯಾಕೆ ಹೇಳಮ್ಮ ಎಂದು ಮಗು ತಾಯಿಗೆ ಪ್ರಶ್ನೆ ಮಾಡುತ್ತದೆ. ಇದು ಮಗುವಿನ ಗ್ರಹಿಕೆ ಮತ್ತು ಚಿಕಿತ್ಸಕ ಬುದ್ಧಿಯನ್ನು ವ್ಯಕ್ತಗೊಳಿಸುತ್ತದೆ.

'ಮಲ್ಲಿಗೆಯಣ್ಣರ ಶಾಲೆಗೆ ಹೋಗುವೆ ಕನಸಿನ ಕತೆಗಳನಾಲಿಸಲು;
ಅಲ್ಲಿಯ ಕನಸುಗಳೆಲ್ಲವನಿಲ್ಲಿಗೆ ಕದ್ದೊಯ್ದು ತರುವೆನು ನಿನಗಮ್ಮಾ' ।

ಮಗುವಿನ ಭಾವನೆಗಳ ಅನಾವರಣವೇ ಮಲ್ಲಿಗೆ ಹೂಗಳು ಕವಿತೆ. ಮಲ್ಲಿಗೆ ತೋಟಕೆ ಹೋಗುವುದು, ಕನಸಿನ ಕತೆಗಳನ್ನು ಕೇಳುವುದು, ಕದ್ದು ತರುವುದು, ಇವೆಲ್ಲ ತಾಯಿಗಾಗಿ ಮಗು ಮಾಡುವ ಕೆಲಸ. ತೋಟವೆ ಒಂದು ಶಾಲೆ. ಮಲ್ಲಿಗೆ ಹೂಗಳೇ ವಿದ್ಯಾರ್ಥಿಗಳು, ಅವರೇ ಮಲ್ಲಿಗೆಯಣ್ಣರು ಎಂದು ಹೇಳುವ ಮಗು ಭಾವಲೋಕವನ್ನು ಕಟ್ಟಿಕೊಡುತ್ತದೆ.

ಆಕಾಶದಲ್ಲಿ ನಡೆಯುವ ವೈಚಿತ್ರ್ಯಗಳನ್ನು 'ಮೂರ್ತಿಯ ವಿಜ್ಞಾನ' ಕವನ ತಿಳಿಸುತ್ತದೆ. ಮಗು ತಾಯಿಯೊಂದಿಗೆ ನಡೆಸುವ ಸಂಭಾಷಣೆ ಪ್ರಶ್ನಾತೀತವಾಗಿವೆ.

'ಮಳೆಯೆಂದರೇನಮ್ಮ? ಗುಡುಗೆಂದರೇನಮ್ಮ?
ಮಿಂಚೆಂದರೇನಮ್ಮ? ಮುಗಿಲೆಂದರೇನಮ್ಮ?[೧೨೧]'

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮಗು ಸ್ವಂತಿಕೆಯನ್ನು ಪ್ರದರ್ಶಿಸುತ್ತದೆ. ಮಕ್ಕಳ ಆಲೋಚನ ಕ್ರಮ ಅಭಿವ್ಯಕ್ತಗೊಳ್ಳುವುದು ವೈಚಾರಿಕ ನೆಲೆಯಲ್ಲಿ ಎಂಬುದು ಕುವೆಂಪುರವರ ಅಭಿಮತ. ಅದು ಇಲ್ಲಿ ಸಹಜವಾಗಿ ಮೂಡಿದೆ.

‘ದೇವರ ಲೋಕದ ಬಾಲಕರಾಡುವ
ಉಕ್ಕಿನ ಚಂಡದು, ಕೇಳಮ್ಮಾ ।
ಮೇಲಿನ ಲೋಕದ ನೆಲವದು, ಅಮ್ಮಾ,
ಚಿನ್ನದ ಉಕ್ಕಿನ ನೆಲವಮ್ಮಾ ।
ಚೆಂಡಾಡಲುಕ್ಕಿನ ಚೆಂಡೆದ್ದು ಬೀಳೆ
ಗುಡುಗಾಗಿ ಕೇಳುವುದೆಮಗಮ್ಮಾ ।
ಉಕ್ಕಿನ ಚೆಂಡೆದ್ದು ಬೀಳಲು ಕಿಡಿಯೆದ್ದು
ಮಿಂಚಾಗಿ ತೋರುವುದೆಮಗಮ್ಮಾ’[೧೨].

ಪ್ರಕೃತಿಯಲ್ಲಿ ಸಂಭವಿಸುವ ಘಟನೆಗಳನ್ನು ಬಲು ಹತ್ತಿರದಿಂದ ಮಗು ಗ್ರಹಿಸುವ ರೀತಿ ವಿಸ್ಮಯಕಾರಿ. ಇದು ವಯೋಮಾನಕ್ಕನುಗುಣವಾಗಿ ವ್ಯಕ್ತವಾದುದು. ವೈಜ್ಞಾನಿಕ ದೃಷ್ಟಿಯಲ್ಲಿ ಮಗು ಗ್ರಹಿಸದೆ ಇರಬಹುದು. ಆದರೆ ಸೃಷ್ಟಿಯ ರಹಸ್ಯವನ್ನು ನೋಡುತ್ತ ಸಾಗುವುದೇ ಒಂದು ಸೊಗಸು. ನಿಸರ್ಗದ ಅದ್ಭುತಗಳಿಗೆ ಮಗು ಸ್ಪಂದಿಸುವ ಬಗೆ ಇಲ್ಲಿದೆ. ಗುಡುಗು, ಮಿಂಚು, ಮುಗಿಲು, ಮಳೆ ಎಂಬುದರ ಅರ್ಥವನ್ನು ಮಗು ತನ್ನ ನೆಲೆಯಲ್ಲಿ ಅರ್ಥೈಸಲು ಪ್ರಯತ್ನ ಮಾಡುವುದೇ ಒಂದು ಸೊಗಸು.

‘ಹೂವಿನ ಬೇಲಿ’ ಕವಿತೆಯಲ್ಲಿ ಮೂರ್ತಿ ತನ್ನ ತಂಗಿಗೆ ಹೇಳುವ ವಿಚಾರಗಳು ಮಕ್ಕಳಲ್ಲಿ ಕುತೂಹಲ ಕೆರಳಿಸುತ್ತವೆ.

‘ತೋಟದ ಬೇಲಿಯು ಹೂಮಯವಾಗಿದೆ
ಬಾರವ್ವ, ತಂಗಿಯೆ, ಹೂ ಕೊಯ್ಯಲು ।
ಹೂವಿನ ಮಧುವನು ಹೀರಲು ಬಂದಿವೆ
ಬಗೆ ಬಗೆ ಬಣ್ಣದ ಹಕ್ಕಿಗಳು ।
ಉದಯದ ಊರಿಂದ ಬಂದಿಹವವುಗಳು
ತಂದಿವೆ ವಿಧ ವಿಧ ಹಾಡುಗಳು
ಹೂಗಳ ಕೊಯ್ಯುವ ನೆವದಿಂದ ಕದಿಯೋಣ
ಅವುಗಳ ಕೊರಲಿನ ಇಂಚರವ’[೧೩].

ಮೂರ್ತಿಯು ಬಣ್ಣ-ಬಣ್ಣ ಹಕ್ಕಿಗಳನ್ನು ನೋಡುವ ನೆಪದಿಂದ ಹೂವು ಕೊಯ್ಯಲು ತನ್ನ ತಂಗಿಗೆ ಕರೆಯುತ್ತಾನೆ. ಉದಯದ ಊರಿಂದ ಹಕ್ಕಿಗಳು ಬಂದಿವೆ. ವಿವಿಧ ಹಾಡುಗಳನ್ನು ತಂದಿವೆ. ಈ ನೆವದಿಂದ ಅವುಗಳ ಇಂಪಾದ ಧ್ವನಿಯ ಇಂಚರವನ್ನು ಕದಿಯೋಣ ಬಾ ಎಂದು ಹೇಳುವಲ್ಲಿ ಕುವೆಂಪುರವರು ಮಕ್ಕಳ ಮನವನ್ನು ಮೀರಿ ನಿಲ್ಲುತ್ತಾರೆ. ಹೀಗೆ ಹೇಳುತ್ತ ಮೂರ್ತಿ ತಂಗಿಯನ್ನು ತಾಯಿ ಸೆರಗಿನಿಂದ ಹೊರಬರಲು ಪ್ರಯತ್ನಿಸುವ ಪ್ರಸಂಗ ಮಾರ್ಮಿಕವಾಗಿದೆ.

ಮಕ್ಕಳು ಎಷ್ಟೇ ದೊಡ್ಡವರಾದರೂ ತಾಯಿಗೆ ಮಕ್ಕಳೇ, ತಾನು ಅಮ್ಮನಿಗಿಂತ ದೊಡ್ಡವನಲ್ಲ ಎಂಬುದು 'ಅಮ್ಮನ ಮೂರ್ತಿ' ಕವನದಲ್ಲಿ ವ್ಯಕ್ತಗೊಂಡಿದೆ. ತಾಯಿ–ಮಗುವಿನ ಬಾಂಧವ್ಯದ ಬಿಗಿತ ಇಲ್ಲಿಯ ವಸ್ತು. ಮಗ ಎಷ್ಟೇ ಕೀರ್ತಿವಂತನಿರಲಿ, ಎತ್ತರಕ್ಕೆ ಏರಲಿ ತಾಯಿಯೇ ದೊಡ್ಡವಳು. ಪ್ರತಿಯೊಬ್ಬ ಮಗು ಹೀಗೆ ತಾಯಿಯನ್ನು ಭಾವಿಸಬೇಕೆಂಬ ಹಂಬಲ ಕುವೆಂಪುರವರದು. ಒಟ್ಟಿನಲ್ಲಿ 'ಮರಿವಿಜ್ಞಾನಿ' ಸಂಕಲನ ಮಕ್ಕಳ ಆಲೋಚನ ಶಕ್ತಿ ಹೆಚ್ಚಿಸುತ್ತದೆ. ವೈಚಾರಿಕತೆ ಬೆಳೆಸುತ್ತದೆ. ಕುವೆಂಪು ಅವರೇ ಹೇಳಿದಂತೆ, ಮಕ್ಕಳಿಗೆ ವೈಚಾರಿಕ ಮನೋಧರ್ಮವನ್ನು ಮೊದಲಿನಿಂದಲೂ ಕಲಿಸಬೇಕು. ಎನ್ನುವ ಮಾತುಗಳು ಸ್ಪಷ್ಟಪಡಿಸುತ್ತವೆ. ಮಗುವಿನ ದೃಷ್ಟಿ, ವಿಚಾರ ಮನೋಧರ್ಮ ಕವಿತೆಗಳ ಜೀವಾಳ. ವೈಜ್ಞಾನಿಕ ದೃಷ್ಟಿಯೊಂದಿಗೆ ಮನರಂಜನೆ ಪ್ರಧಾನವಾದುದು. ಶಿಶುಗೀತೆಗಳ ಮೂಲ ಸೆಲೆ, ನೆಲೆ ಪ್ರೀತಿ–ವಾತ್ಸಲ್ಯದ ಬಂಧನ ಎಂಬುದು ಮರೆಯಬಾರದು.

ಕಲ್ಪನಾ ಪ್ರಧಾನವಾದ ಗೀತೆಗಳ ಸಂಕಲನವೇ 'ಮೇಘಪುರ'. ಹನ್ನೆರಡು ಕವನಗಳಿಂದ ಕೂಡಿದ ಮಕ್ಕಳ ಭಾವಲೋಕವನ್ನು ತೆರೆದಿಡುವದರೊಂದಿಗೆ ವಿಚಾರಪರವಾದ ಚಿಂತನೆಗೆ ಎಡೆ ಮಾಡಿಕೊಡುತ್ತವೆ. ಬಾಲ್ಯತನದ ಮಹತ್ವ ತಿಳಿಸುವ, ರಾಷ್ಟ್ರಸೇವೆಗೆ ಎಲ್ಲರೂ ಸಿದ್ಧರಾಗಲು ಕೇಳಿಕೊಳ್ಳುವ, ತಾಯಿಯ ಒಡನಾಟದ ವಾತ್ಸಲ್ಯಮಯತೆ ಮುಂತಾದ ವಿಷಯಗಳನ್ನು ಹೊಂದಿದ ಕೃತಿ ಮಕ್ಕಳ ಮನ ತಣಿಸುವಲ್ಲಿ ಯಶಸ್ವಿಯಾಗಿದೆ. ಹಕ್ಕಿಗಳೊಡನೆ, ನದಿಗಳೊಡನೆ, ಮುಗಿಲಿನೊಡನೆ ಸಂಬಂಧಿಸಿದ ವಸ್ತು ಕವಿತೆಗಳಲ್ಲಿದೆ. ಮಕ್ಕಳ ಮನವನ್ನು ಅರಿಳಿಸುವ, ಭಾವಸರಳತೆಯ ಸಹಜ ಶೈಲಿಯು ಎಲ್ಲರನ್ನು ಒಲಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ನದಿಯು ಹರಿಯುವ ಓಟ, ಅದರ ಬಳುಕುವಿಕೆ ಕುರಿತಾದ ಕವಿತೆ 'ತೊರೆಯ ಬಳಿ' ಗಮನ ಸೆಳೆಯುತ್ತದೆ.

'ಎಲ್ಲಿಂದ ನೀ ಬರುವೆ?
ಎಲ್ಲಿಗೋಡುತಲಿರುವೆ?
ಆರನೀ ಪರಿ ಕರೆವೆ?
ಏಕಿಂತು ಮೊರೆವೆ? ಓ ಮುದ್ದು ತೊರೆಯೆ
ಹೋಗುವೆಯ ಬಹುದೂರ
ಸೇರಬೇಕೆಂದಾರ?
ನಿನ್ನ ಪಾರಾವಾರ
ಇನ್ನೆಷ್ಟು ದೂರ? ಓ ಮುದ್ದು ತೊರೆಯೆ'[೧೨೪].

ಮಗುವಿಗೆ ನದಿಯೊಂದು ಒಡನಾಡಿಯಾದ ಸ್ನೇಹಜೀವಿಯಂತೆ ಕಂಡಿದೆ. ಹೀಗಾಗಿ ಆತ್ಮೀಯವಾಗಿ ಪ್ರಶ್ನೆಗಳನ್ನು ಕೇಳುತ್ತದೆ. ಎಲ್ಲಿಗೆ ಹೋಗಬೇಕು, ಯಾರ ಕೂಡಬೇಕು ಎನ್ನುವ ಕುತೂಹಲಪೂರ್ಣ ಭಾವನೆ ಸುಂದರವಾಗಿ ಅಭಿವ್ಯಕ್ತಗೊಂಡಿದೆ. 'ಮೇಘಪುರಕ್ಕೆ'

ಮಗು ಹೋಗುವ ಹಂಬಲ ವ್ಯಕ್ತಪಡಿಸುತ್ತದೆ. ಅದಕ್ಕೆ ತಾಯಿ ತಡೆಯಿದೆ. ಸೃಷ್ಟಿಯ ಅದ್ಭುತ ಸೌಂದರ್ಯ ಬಾಲಕನನ್ನು ಸೆಳೆಯುತ್ತದೆ. ತಾಯಿಗೆ ಹೀಗೆ ಹೇಳುತ್ತಾನೆ.

'ಮೇಘಪುರದೊಳಗಿರುವರಾರಮ್ಮ
ಹೋಗಿ ಬರುವೆನು ನಾನೆನ್ನ ಕಳುಹಿಸಮ್ಮಾ......।
ನಿನ್ನ ಕರಗಳು ತಾಯೆ
ನನ್ನ ಸೆರೆಗೈದಿಹವು
ಇನ್ನು ನಾನದ ಸಹಿಸೆ ।
ಲೋಕವಿದು ಸಾಕು ಆ
ನಾಕ ಬೇಕಮ್ಮಾ'[೧೨೫].

ತಾಯಿಯ ಜೊತೆಗೆ ವಾತ್ಸಲ್ಯದ ಮಾತುಗಳು ಸಹಜವಾಗಿ ಮೂಡಿವೆ. ಮುಗಿಲ ಬಾಲಕನಾಗಿ ಸಂಚರಿಸಿ ಆನಂದಿಸುವ ಹಂಬಲ. ಅಲ್ಲಿಯ ಸೌಂದರ್ಯವನ್ನು ಸವಿಯುವ, ಸ್ವತಂತ್ರವಾಗಿ ನಲಿದಾಡುವ ಮಕ್ಕಳು ಮೂರ್ತಿಯನ್ನು ಕರೆಯುತ್ತವೆ. ಅಲ್ಲಿ ನನಗೆ ಸ್ವಾಗತವಿದೆ ಎನ್ನುವನು. ಮೇಘಪುರದ ಗೆಳೆಯರು, ಅವರದನಿ, ಒಡನಾಟ ಮರೆಯಲಾರದಂತಹದ್ದು, ಅದುವೇ ನಮ್ಮ ಊರು ಎನ್ನುವನು. ಮೂರ್ತಿ ತನ್ನ ಮನದ ಆಶಯವನ್ನು ಅಭಿವ್ಯಕ್ತಗೊಳಿಸುವುದು ಇಲ್ಲಿ ಪ್ರಧಾನವಾಗಿದೆ.

ದೇಶದ ಅಭಿಮಾನ ಮಕ್ಕಳಲ್ಲಿ ಬೆಳೆಸುವ ಪ್ರಯತ್ನ 'ಏಳಿರೈ ಬಾಲಕರೇ' ಎನ್ನುವ ಕವನದಲ್ಲಿ ವ್ಯಕ್ತಗೊಂಡ ರೀತಿ ಮಕ್ಕಳಲ್ಲಿ ಸ್ಫೂರ್ತಿಯನ್ನು ತುಂಬಿದೆ.

'ಏಳಿರೈ ! ಬಾಲರೇ ! ದೇಶಸೇವೆಗೈಯುವ !
ಕೇಳಿರೈ ! ಕೇಳಿರೈ ! ತಾಯ ಗೋಳ ರೋದನ'[೧೨೬].

ಸ್ವಾತಂತ್ರ್ಯ ಸಂಗ್ರಾಮದ ಸನ್ನಿವೇಶ ಪ್ರತಿಯೊಬ್ಬ ಭಾರತೀಯರಲ್ಲಿ ರೋಮಾಂಚನ ಮೂಡಿಸುತ್ತದೆ. ದೇಶಕ್ಕಾಗಿ ಹೋರಾಡಿ, ತಾಯಿನಾಡನ್ನು ಉಳಿಸಲು ಕುವೆಂಪುರವರು ಕರೆಕೊಡುತ್ತಾರೆ. ತಮ್ಮ ದೇಶಭಕ್ತಿಯನ್ನು ಶ್ರದ್ಧೆ, ಶಿಸ್ತುಗಳಿಂದ ರೂಪಿಸಿಕೊಳ್ಳಲು ಕರೆ ನೀಡುತ್ತಾರೆ.

'ಎದ್ದೇಳು ! ಎದ್ದೇಳು !
ಬಿದ್ದಿರುವೆ ಏಕೆ?
ನಿದ್ದೆಯಿಂದೆದ್ದೇಳು
ಮೊದ್ದುತನವೇಕೆ?
ದಾಸ ನೀನಲ್ಲ,
ಈಶನೋ ನೀನು ।
ಮೂಷಿಕವು ಅಲ್ಲ,
ಕೇಸರಿಯೂ ನೀನು'[೧೨೭].

ವಿವೇಕಾನಂದರ ವಾಣಿಯಂತೆ ಕುವೆಂಪುರವರು ಸಹ ಯುವಕರನ್ನು ಬಡಿದೆಬ್ಬಿಸುವರು. ಭವಿಷ್ಯ ನಿಮ್ಮ ಕೈಯಲ್ಲಿದೆ. ಸಮಯ ಹಾಳ ಮಾಡುವುದಲ್ಲ, ಪ್ರಜ್ಞೆಯಿರಲಿ. ಹೇಡಿಯು ಅಲ್ಲ, ನೀನು ಸಿಂಹದ ಶಕ್ತಿಯನ್ನು ಹೊಂದಿದವನು. ಹೀಗೆ ಮುಂತಾದ ನುಡಿಗಳಿಂದ ಹುರಿದುಂಬಿಸುವ ಭಾವ ಕವಿತೆಯಲ್ಲಿ ವ್ಯಕ್ತಗೊಂಡಿದೆ. ಕುವೆಂಪುರವರು ಮಕ್ಕಳಲ್ಲಿ ದೈವಭಕ್ತಿ, ವೈಚಾರಿಕ ನಿಲುವು, ಶ್ರದ್ಧೆಗಳು ಒಳಗೊಂಡು ಸದೃಢ ರಾಷ್ಟ್ರಕಟ್ಟಲು ಯುವಕರಿಗೆ ಕರೆಕೊಡುತ್ತಾರೆ. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ಗಾದೆ ಮಾತಿನಂತೆ ಮಕ್ಕಳನ್ನು ಬಾಲ್ಯದಿಂದಲೇ ಸದ್ಗುಣಿಗಳಾಗಿ ಮಾಡಬೇಕು. ರಾಷ್ಟ್ರದ ನಿರ್ಮಾಪಕರಾಗುವ ಇವರನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ದೊಡ್ಡ ನಷ್ಟವಾದೀತು ಎಂಬುದು ಕುವೆಂಪುರವರ ಅಭಿಮತ. ಯಾವುದೇ ದೇಶದ ಭದ್ರಬುನಾದಿ ಈ ಮಕ್ಕಳು. ಅವರ ಬದುಕನ್ನು ವ್ಯವಸ್ಥಿತವಾಗಿ ಬೆಳೆಸುವುದು ಹಿರಿಯರ ಕರ್ತವ್ಯ. ಶಿಶು ಜೀವನವನ್ನು ರೂಪಿಸಿ ಕಟ್ಟಿಕೊಡುವುದೇ ಸಾಹಿತ್ಯ. ಸಾಹಿತಿಯಾದವನು ಕವನ, ಕಥೆ, ನಾಟಕಗಳ ಮೂಲಕ ಮಕ್ಕಳ ಮನಸ್ಸನ್ನು ಆಕರ್ಷಿಸಿ ತಿದ್ದಿ ರೂಪಿಸಬೇಕು. ಇವು ಕುವೆಂಪುರವರ ಶಿಶು ಸಾಹಿತ್ಯದ ನಿಲುವುಗಳಾಗಿವೆ.

ಕುವೆಂಪು ಅವರು ೧೯೨೪ರಲ್ಲಿ ಪ್ರಕಟಿಸಿದ ಮೊದಲ ಕೃತಿ ಅಮಲನ ಕಥೆ. ೧೯೦ ಚೌಪದಿಗಳಿಂದ ಕೂಡಿದ್ದು ಭಕ್ತಿ ಪ್ರಧಾನವಾದುದು. ಸಾಮಾನ್ಯವಾಗಿ ಆದಿಪ್ರಾಸವನ್ನು ಕಾಣಬಹುದಾಗಿದೆ. ಗೋವಿನ ಕಥೆಯ ಲಯ-ಧಾಟಿಯನ್ನು ಹೊಂದಿದೆ. ಜಿಂಕೆಯೊಂದನ್ನು ಬದುಕಿಸಲು ಭಾಷೆಕೊಟ್ಟು, ಅದಕ್ಕಾಗಿ ತನ್ನ ಪ್ರಾಣವನ್ನೇ ಕೊಡಲು ಸಿದ್ಧನಾದ, ಸತ್ಯವನ್ನು ಎತ್ತಿ ಹಿಡಿದು ಭಗವಂತನನ್ನು ಒಲಿಸಿಕೊಂಡ ಪುಣ್ಯಪುರುಷ ಅಮಲನ ಕಥೆಯೆ ಇಲ್ಲಿಯ ವಸ್ತು, ಮಕ್ಕಳಿಗೆ ಪ್ರಿಯವಾದ ಕಥನ ಶೈಲಿ, ಭಕ್ತಿಪರವಾದ ಕಥೆ ಮಗುವಿಗೆ ಆಕರ್ಷಕವಾಗಿದೆ. ಅಮಲನ ಕಥೆ ಮಕ್ಕಳ ಮನದ ಮೇಲೆ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ. ಅಮಲ ಮತ್ತು ಅವನ ಮಗ ಮಧುರನ ನಿರ್ಮಲ ಭಕ್ತಿಗೆ ದೇವರು ಮೆಚ್ಚಿ ಪ್ರತ್ಯಕ್ಷನಾಗಿ ಅವನ ಕಷ್ಟಗಳನ್ನು ಪರಿಹಾರಗೊಳಿಸುವುದು ಈ ಕಥೆ.

'ಕಡಿದು ಕಷ್ಟದಿ ತರುಗಳೆಲ್ಲವ
ಒಡೆದು ಬುಡಗಳ ಚದುರ ಕೈಯಲಿ
ಬಡವನಾದರು ಪಡುತ ಸುಖವನು
ಪಡೆದನಚ್ಚುತ ಪದವಿಯ'.

ಬಡತನದ ಕಷ್ಟಗಳನ್ನು ಅನುಭವಿಸಿ, ಯಾರಿಗೂ ಎರಡು ಬಗೆಯದ ಅಮಲ ನೆಮ್ಮದಿಯ ಬದುಕಿನಿಂದ ಇದ್ದು ಶಿವನ ಮೆಚ್ಚಿಸಿ ಗಣಧರನಾಗುತ್ತಾನೆ. ಸೂರ್ಯ ಉದಯಿಸುವ ಮುನ್ನ ಸೌದೆಯನ್ನು ತರಲು ಕಾಡಿಗೆ ಹೋಗುವನು. ಬೆಳಗಿನ ನೀರವತೆ, ಹಕ್ಕಿಗಳ ಚಿಲಿಪಿಲಿ ನಿನಾದ, ಸುಪ್ರಭಾತದ ಚೆಲುವನ್ನು ಸವಿಯುತ್ತ ಬರುವಾಗ ವನಸುಮಗಳು ಅವನ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ. ತಂಪಾದ ಗಾಳಿ ರೋಮಾಂಚನಗೊಳಿಸುತ್ತದೆ.

ಅಮಲ ಸೃಷ್ಟಿಯ ಸೌಂದರ್ಯಕ್ಕೆ ಮುಗ್ಧನಾಗಿ, ಇದು ಭಗವಂತನ ಕೃಪೆಯ ಕ್ಷೇತ್ರವೆಂದು ಭಾವಿಸುತ್ತಾನೆ. ಇದನ್ನು ಕುವೆಂಪು ಅವರು ನೋಡುವ ರೀತಿ, ಅದ್ಭುತವಾದುದು.

'ಎಲ್ಲಿ ನೋಡಿದರಲ್ಲಿ ಪೂಮಯ
ಬಲ್ಲಿದರು ನೋಡಿದೊಡೆ ಚಿನುಮಯ
ನಲ್ಲನಹ ನೊಟಕ್ಕೆ ಸತಿಮಯ
ಎಲ್ಲಿಯು ಮಯವೆಸೆದುದು'.

ಕುವೆಂಪು ಅವರು ಪ್ರಕೃತಿ ಕವಿ. ಮಲೆನಾಡಿನಲ್ಲಿ ಹುಟ್ಟಿ, ಪ್ರಕೃತಿಯ ಮಡಿಲಲ್ಲಿ ಬೆಳೆದು ಅಲ್ಲಿಯ ರಹಸ್ಯಗಳನ್ನು ತಮ್ಮ ಕವಿತೆಗಳಲ್ಲಿ ತೋರಿದವರು. ಪ್ರಕೃತಿಯ ಸೌಂದರ್ಯವನ್ನು ಕಣ್ಣು ದಣಿಯುವತನಕ ನೋಡಿ ಮನಸಾರೆ ಆನಂದಿಸುವನು ಅಮಲ. 'ಬಡವರಾಗಿಹ ನರರಿಗೆಲ್ಲವು ಅಡವಿ ಅರಮನೆ' ಎಂಬ ಭಾವ ಅಭಿವ್ಯಕ್ತಗೊಂಡಿದೆ. ಜಗದ ರೋಮಾಂಚನಗೊಳಿಸುವ ಆರಾಧನೆ, ಲೀಲೆಗಳು ಈ ನಿಸರ್ಗದಲ್ಲಿಯೇ ಮಡುಗಟ್ಟಿವೆ. ಅವು ಉದಯದೊಂದಿಗೆ ಪ್ರಾರಂಭಗೊಳ್ಳುವ ಅಭಿವ್ಯಕ್ತಿ ಮಧುರವಾದುದು. ಅಮಲನು ಸೂರ್ಯ ಉದಯಿಸುವ ಮೊದಲು ಎದ್ದು ಸವಿಯಾದ ಗಂಜಿ ಉಂಡು ಉಲ್ಲಾಸ ಭಾವದಿಂದ ಕೊಡಲಿಯನ್ನು ತೆಗೆದುಕೊಂಡು ಅಡವಿಗೆ ಹೋಗುವುದನ್ನು ಮನೆಯವರು ನೋಡುತ್ತ ನಿಲ್ಲುವರು.

'ತನಯರೆಲ್ಲರು ಆಶೆಯಿಂದಲಿ
ಮನೆಯ ಹೊಸಲಿನ ಮೇಲೆ ಸೇರುತ
ಬನದೆ ಕೆಡೆ ಪೊರ ಮಡುವ ತಂದೆಯ
ಮನದಿ ನೋಡುತ ನಿಂತರು'.

ಇದು ಅಮಲನ ದಿನಚರಿ. ಅವನು ಕಾಡಿಗೆ ಹೋಗುವುದನ್ನೇ ನೋಡುತ್ತ ನಿಲ್ಲುವ ಮಡದಿ–ಮಕ್ಕಳ ಪ್ರೀತಿ–ವಾತ್ಸಲ್ಯ ಎಷ್ಟು ಗಾಢವಾದುದು ಎನ್ನುವುದು ಸ್ಪಷ್ಟವಾಗುತ್ತದೆ. ಭಕ್ತನಾದ ಅಮಲನು ದೇವರನ್ನು ನೆನೆಯುತ್ತ ಹೊರಡುವನು. 'ರವಿಯ ರೂಪದಿ ಬರುವ ದೇವಸಿ, ನವಿಲು ಗರಿಯಿಂ ಮೆರೆವ, ಲೋಲನೆ, ಭುವನ ಪಾಲಕ, ಭುವನ ನಾಶಕ, ಪವಿಯ ರೂಪನೆ ರಕ್ಷಿಸೈ' ಎಂದು ಸೂರ್ಯನನ್ನು, ದೇವರೆಂದು, ನವಿಲುಗರಿಯನ್ನು ಮುಡಿದವನೆ, ಭೂಮಿಯ ಪಾಲಕನೆ ರಕ್ಷಿಸು ಎನ್ನನು ಎಂದು ಬೇಡಿಕೊಳ್ಳುತ್ತಾನೆ. ಮಲೆನಾಡಿನ ಸಂಪೂರ್ಣ ಸೊಬಗನ್ನು ಪರಿಚಯಿಸುತ್ತ ಕವಿತೆ ಸಾಗುತ್ತದೆ. ಮೂಡಣದ ರವಿಯ ಮುಖವನ್ನು ನೋಡಿ ಸಂತಸಪಡುವ ಅಮಲನ ಮೂಲಕ ಕವಿ ಸೂರ್ಯನನ್ನು ವರ್ಣಿಸಿದ್ದು ಹೀಗೆ;

'ಮೂಡಣೆಲ್ಲವು ಹೊನ್ನ ಬಣ್ಣದಿ
ನಾಡನೆಲ್ಲಿಯು ಬೆಳಗಿ ನಲಿಯುತ
ಬಾಡಿ ಬಳಲದ ಅಲರನೆಲ್ಲವ
ನೋಡಿ ಸಂತಸಗೊಂಡಿತು'.

ಪ್ರಕೃತಿ ಪ್ರಿಯರಾದ ಕುವೆಂಪುರವರು ಪೂರ್ವದಿಗಂತವೆಲ್ಲ ಹೊನ್ನ ಬಣ್ಣದಿಂದ ತುಂಬಿ, ನಾಡಿಗೆಲ್ಲ ಬೆಳಕನ್ನು ನೀಡುವ ಸೂರ್ಯನನ್ನು ವರ್ಣಿಸುವ ರೀತಿ ಮನಮೋಹಕವಾದುದು.

ಅಮಲನು ಕಾಡಿನಲ್ಲಿ ಅಲೆಯುತ್ತ, ಬೇಕಾದ ಮರಗಳನ್ನು ಹುಡುಕಿ ಕಡಿದು ಸಾಕಾಗಿ, ಆಯಾಸ ಪರಿಹರಿಸಿಕೊಳ್ಳಲು ಹಸಿರು ಹುಲ್ಲಿನ ಮೇಲೆ ಮಲಗುವನು. ಹೊತ್ತು ಮುಳುಗುವ ಸಮಯ ದೇವರನು ನೆನೆಯುವನು. 'ದೇವ ನಿನ್ನಯ ನಾಮ ಕೀತನೆ, ಸಾವು ಎಂಬುದ ದೂರ ಮಾಡಿತು; ಆವ ಜನ್ಮದ ಪಾಪವಾದರು ದೇವ ಎಂದೊಡೆ ಓಡಿತು;' ಎಂದು ಅಮಲ ಉದ್ಘಾರವೆತ್ತುವನು. ದೇವರನ್ನು ನೆನೆದರೆ ಸಾವು ದೂರವಾಗುವುದು. ಪಾಪವೆಲ್ಲ ಕಳೆಯುವುದು. ದೈವಭಕ್ತಿಯ ಆರಾಧನೆ ಅಮಲನಲ್ಲಿ ವ್ಯಕ್ತವಾಗುತ್ತಿರುವಾಗ ಭಯದಿಂದ ಯಾರೋ ತನ್ನ ಕಡೆಗೆ ಬರುವುದನ್ನು ಗಮನಿಸುತ್ತಾನೆ. ಜೀವಭಯದಿಂದ ತನ್ನನ್ನು ರಕ್ಷಿಸು ಎಂದು ಜಿಂಕೆ ಬೇಡಿಕೊಳ್ಳುತ್ತದೆ. ಅಮಲನ ಭಾವ-ಬುದ್ಧಿಯ ಪರೀಕ್ಷೆ ನಡೆಯುವ ಬಗೆ ವಿಶಿಷ್ಟವಾದುದು.

ಜಿಂಕೆಯು ಮರಿಗಳನ್ನು ಕಾಡಿನಲ್ಲಿ ಬಿಟ್ಟು ಹೊಳೆಯ ದಂಡೆಗೆ ನೀರು ಕುಡಿಯಲು ಬಂದಾಗ ಬೇಡನೊಬ್ಬನು ನನ್ನನು ಕೊಲ್ಲಲು ಅಟ್ಟಿಸಿಕೊಂಡು ಬಂದಿರುವನು ರಕ್ಷಿಸೆಂದು ಬೇಡಿಕೊಳ್ಳುವುದು.

'ಜೀವದಾಸೆಗೆ ಬರುತ ಹರಿಣನು
ಮಾವಿನಡಿಯಲಿ ನಿಂತ ಅಮಲನ
ಭಾವ ಬುದ್ಧಿಯನರಿದು ಹರುಷದಿ
ಕಾವುದೆನ್ನನು ಎಂದಿತು'!.

ಅಮಲನನ್ನು ಪರೀಕ್ಷಿಸಲು ಭಗವಂತನೇ ಹರಿಣ ಮತ್ತು ಬೇಡರಾಗಿ ಬರುವುದು ಆಶ್ಚರ್ಯ ಮೂಡಿಸುವ ಕಲ್ಪನೆ. ಆದರೆ ಅಮಲನಿಗೆ ಇದರ ಅರಿವಿಲ್ಲ. ಬೇಡನ ಮಧ್ಯೆ ವಾದ-ವಿವಾದ ನಡೆಯುತ್ತದೆ. ಅಮಲನು ಬೇಡಿಕೊಳ್ಳುವ ಪ್ರಾರ್ಥನೆ ಕರುಣಾರಸವನ್ನೇ ಹರಿಸುತ್ತದೆ. 'ಧರಣಿಯೊಳಗಿಹ ಜೀವರೊಳಗೇ, ಅರುಳು ಚರಿಸುವ ಅಸುರರೊಳಗೇ, ನರನು ಪರಮನು ಎಂದು ಉಸುರಲು ಕರುಣೆ ಎಂಬುದೆ ಸಾಕ್ಷಿಯು' । ಆದರೆ ಬೇಡನು ಈ ಮಾತುಗಳನ್ನು ಆಲಿಸಿದರೂ ತಿರಸ್ಕಾರದಿಂದ ಯುದ್ಧಕ್ಕೆ ನಿಲ್ಲುವನು. ಬೇಡನು ಅಮಲನನ್ನು ಸೋಲಿಸುವ ಹಂತಕ್ಕೆ ಬಂದಾಗ, ಹರಿಣದ ಜೀವ ಉಳಿವಿಗಾಗಿ ಮತ್ತು ಜಿಂಕೆಯನ್ನು ಕಾಪಾಡುವೆನೆಂಬ ಮಾತಿಗಾಗಿ ಅಮಲನು ಭಗವಂತನ ಮೊರೆ ಹೋಗುತ್ತಾನೆ.

'ನಿನ್ನ ನಂಬುತ ಭಾಷೆ ಕೊಟ್ಟೆನು
ನಿನ್ನ ಮೇಲೆಯೆ ಆಣೆ ಇಟ್ಟೆನು
ನಿನ್ನ ಕರುಣೆಯ ಬೇಡಿ ಕೊಂಬೆನು
ಚೆನ್ನ ಹರಿಣನ ಕಾಯಲ್ಕೆ'.

ಅಂದು ದ್ರುಪದೆಯ ಮಾನ ಕಾಯ್ದೇ
ಬಂದ ಗೆಳೆಯಗೆ ಸಿರಿಯ ಕೊಟ್ಟೇ
ಹಿಂದೆ ದುಷ್ಟರ ಜೀವ ಹಿಂಡಿದೆ
ಇಂದು ಹರಿಣನ ಕಾಯಲ್ಕೆ'.

ಎಂದು ಕೃಷ್ಣನನ್ನು ನೆನೆದು ಮುಗ್ಧ ಪ್ರಾಣಿಯ ಜೀವ ಉಳಿಸಲು ಅಮಲನು ಭಕ್ತಿ ಪರವಶನಾಗಿ ಬೇಡಿಕೊಳ್ಳುವನು. ಇವನ ನಿರ್ಮಲಭಾವಕ್ಕೆ ಭಗವಂತನು ಮೆಚ್ಚಿ ಪ್ರತ್ಯಕ್ಷನಾಗುವನು. ಪುಳಕಿತನಾದ ಅಮಲನು ಭಾವ ತುಂಬಿ ಹಾಡಿ ಕುಣಿಯುತ್ತಾನೆ. ಇದು ಕಥನ ಕವನದ ಮೊದಲ ಭಾಗವಾದರೆ ಮುಂದಿನ ಭಾಗ ಅಮಲನ ಮಗ ಮಧುರನ ಮುಗ್ಧ ಭಕ್ತಿಯ ಅನಾವರಣಗೊಳಿಸುತ್ತದೆ. ಅಮಲನು ಜಿಂಕೆಯನ್ನು ರಕ್ಷಿಸಿದ ಸನ್ನಿವೇಶ, ಭಗವಂತನ ದರ್ಶನ ಇವುಗಳಿಂದ ಸಂತಸ-ಸಂಭ್ರಮದಿಂದ ಮೈಮರೆತು ಮನೆಗೆ ಬರುವದು ತಡವಾಗುತ್ತದೆ. ಕತ್ತಲಾದರೂ ಅಮಲನು ಮನೆಗೆ ಬಾರದಿರಲು ಪತ್ನಿ, ಮಗ, ಮಗಳು ಗಾಬರಿಗೊಳ್ಳುವರು. ಆಗ ಮಗಳು ತಂದೆಯನ್ನು ಹುಡುಕಿಕೊಂಡು ಬರುತ್ತೇನೆ ಎನ್ನುತ್ತಾಳೆ. ಆಗ ತಾಯಿ.....

'ಮಗಳೆ ಸಂಶಯವೆನ್ನ ಸುಡುತಿದೆ
ಅಗಲಲಿಲ್ಲಾ ನಮ್ಮನೆಂದಿಗು;
ಹಗಲ ಊಟಕೆ ಬರಲೆ ಇಲ್ಲವು,
ಬಗೆಯಲಾರೆನು ಕಷ್ಟವ'.

ಎನ್ನುವ ನುಡಿಗಳು ಕರುಣಾರಸ ಪೂರ್ಣವಾಗಿ ಮನಸ್ಸಿಗೆ ಮುಟ್ಟುತ್ತವೆ. ಪತಿಯನ್ನು ಹುಡುಕಲು ಮಗಳನ್ನು ಕಾಡಿಗೆ ಕಳುಹಿಸಲು ತಾಯಿಗೆ ಮನಸುಬಾರದು. ಅದಕ್ಕೆ ಮಗ ಮಧುರ, ಹೆದರಬೇಡ ತಾಯಿ ನಾನು ತಂದೆಯನ್ನು ಹುಡುಕಿಕೊಂಡು ಬರುವೆ ಎನ್ನುವನು. ಮಧುರ ಕಾಡಿಗೆ ಹೋಗಲು ಅಣಿಯಾದಾಗ ತಾಯಿ-ತಂಗಿಯರು ಕಣ್ಣೀರು ಸುರಿಸುತ್ತ ಹೀಗೆ ಹೇಳುತ್ತಾರೆ. ಮಗ ದಾರಿಯಲ್ಲಿ ಹಾವು-ಚೇಳುಗಳಿರಬಹುದು. ನಿನ್ನ ತಂದೆ ಕಾಣದಿದ್ದರೆ ಮರಳಿ ಬರಲು ಕಳಕಳಿಯಿಂದ ವ್ಯಕ್ತಪಡಿಸಿ ಮಗನನ್ನು ಕಾಡಿಗೆ ಕಳಿಸುವರು. ಮಧುರನು ಕಾಡಿನಲ್ಲಿ ಹಸುರಿನ ಮಧ್ಯ ಕೆಸರು-ಜೊಂಡಗಗಳನ್ನು ಲೆಕ್ಕಿಸದೆ, ಉಸಿರು ಬಿಗಿ ಹಿಡಿದು ತಂದೆಯನ್ನು ಹುಡುಕುವನು. ಆಗ ಒಮ್ಮೆಲೆ ಜೋರಾಗಿ ಗಾಳಿ ಬೀಸಿ ಮೋಡ ಕವಿದು ಗುಡುಗು-ಸಿಡಿಲಿಂದ ಮಳೆ ಬರುತ್ತದೆ. ರಭಸವಾಗಿ ಹರಿಯುವ ಜಲರಾಶಿಯನ್ನು ಕಂಡು ಭಯಗೊಳ್ಳುತ್ತಾನೆ. ದೃತಿಗೆಡದೆ ದೇವರನ್ನು ನೆನೆದು ದಾರಿ ತೋರಿಸೆಂದು ಬೇಡಿಕೊಳ್ಳುವನು.

'ಮೂರು ರೂಪದಿ ಎಸೆವ ದೇವನೆ,
ಮೂರು ಗುಣಗಳ ಮೂಲ ಕವಿಯೇ,
ಮೂರು ಲೋಕದ ಈಶರೀಶನೆ,
ದಾರಿ ಕಾಣೆನು ರಕ್ಷಿಸೈ'.

ಮಧುರನ ಭಕ್ತಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾಗುವನು. ಪ್ರಕಾಶಮಾನವಾದ ಬೆಳಕಿನ ರೂಪದ, ಬಣ್ಣದ ಮುಕುಟ ಧರಿಸಿದ ದೇವರ ಚರಣಕ್ಕೆ ಭಕ್ತಿಯಿಂದ ಶಿರಮಣಿದು ನಮಿಸುವನು. ಪರಮಾತ್ಮನ ದಿವ್ಯ ದರ್ಶನದ ಜೊತೆಗೆ ದೇವನ ದಿವ್ಯವಾಣಿ ಮೊಳಗುತ್ತದೆ.

'ಯಾರು ನನ್ನನು ಭಕ್ತಿಯಿಂದಲಿ
ಪಾರು ಮಾಡೈ ಎನುತ ಕರೆವರೊ
ದೂರದಿಂದಲೆ ಬರುತಲವರನು
ಪಾರು ಮಾಡುವೆನೆಂದಿಗು'।
'ನಾಡಿನೊಳಗಿಹ ಬಾಲರಾದರೂ
ಪಾಡಲೆನ್ನನು ಹರುಷದಿಂದಲಿ
ಕಾಡಿನೊಳಗಿಹ ಯೋಗಿಗೀಯುವ
ಗಾಢ ಸುಖವನು ಕೊಡುವೆನು'।

ಯಾರು ಭಕ್ತಿಯಿಂದ ಪರಮಾತ್ಮನಲ್ಲಿ ಬೇಡಿಕೊಳ್ಳುವರೋ ಅವರನ್ನು ಕಷ್ಟದಿಂದ ಪಾರು ಮಾಡುವನು ಎಂಬ ಮಾತುಗಳು ಮಕ್ಕಳಿಗೆ ತಿಳಿಯುವ ಹಾಗೆ ಸರಳವಾಗಿ ಅಭಿವ್ಯಕ್ತಗೊಳಿಸಲಾಗಿದೆ. ಮಧುರನು ತನ್ನ ಮನೆಗೆ ಬಂದು ನೋಡುತ್ತಾನೆ. ಗುಡಿಸಲಿರುವ ತಾಣ ಅರಮನೆಯಾಗಿ ಪರಿವರ್ತನೆ ಹೊಂದಿರುವುದು ನೋಡಿ ಅಚ್ಚರಿಪಡುತ್ತಾನೆ. ಒಳಗೆ ಬಂದು ತಾಯಿ, ತಂಗಿ–ಬಳಗವನ್ನು ನೋಡುತ್ತಾನೆ.

'ಅಮಲನಲ್ಲಿಯೆ ಸಿಂಹ ಪೀಠದಿ
ಕಮಲನಾಭನ ರೂಪ ಧರಿಸಿ
ಕಮಲ ಮಿತ್ರನ ಜೋತಿಯಿಂದಲಿ
ವಿಮಲ ದೊರೆಯಾಗೆಸೆದನು'.

ಅಮಲನು ದೇವಲೋಕದ ಗಣಧರನಾಗಿ ಸಿಂಹಾಸನವನ್ನು ಅಲಂಕರಿಸಿದ್ದಾನೆ. ಮಗನನ್ನು ನೋಡಿ ಮುದ್ದಿಸಿ ಅಪ್ಪಿಕೊಳ್ಳುತ್ತಾನೆ.

ಹೀಗೆ ಅಮಲನು ದೇವಸ್ಮರಣೆಯ ಬಲದಿಂದ ಭಗವಂತನನ್ನು ದರ್ಶನ ಮಾಡಿಕೊಂಡ ಬಗೆ–ಒಂದಾದರೆ, ಬಾಲಕನಾದ ಮಧುರನು ನಿರ್ಮಲಭಾವದ ಸ್ಮರಣೆಯಿಂದ ದೇವನನ್ನು ಒಲಿಸಿಕೊಂಡ ಕಥೆ ಮಾರ್ಮಿಕವಾಗಿದೆ. ಭಕ್ತ–ಭಗವಂತ ಬೇರೆಯಲ್ಲ ಎಂಬ ಗಹನವಾದ ದರ್ಶನ ಸರಳವಾಗಿ ನಿರೂಪಿತವಾಗಿದೆ. ತಾತ್ವಿಕ ಮನೋಭಾವನೆ ಹೂವಿನಲ್ಲಿಯ ಪರಿಮಳದಂತೆ ಕಥೆಯಲ್ಲಿ ಮಿಳಿತವಾಗಿದೆ. ಸರಳ ಭಾಷೆ, ಹೃದಯಸ್ಪರ್ಶಿ ಕಥಾ ಸ್ವರೂಪ ಪರಿಣಾಮಕಾರಿಯಾಗಿ ಮೂಡಿದೆ. ಮಕ್ಕಳ ಮನವನ್ನು ಕರಗಿಸುವ ಶಕ್ತಿಯೊಂದಿಗೆ ಅವರನ್ನು ಉನ್ನತ ಆದರ್ಶಗಳ ಕಡೆಗೆ ಒಯ್ಯುವ ಗುಣ ಈ ಕಥನ ಕವನ ಹೊಂದಿದೆ.

ಕುವೆಂಪು ಅವರು ಶಿಶು ಸಾಹಿತ್ಯಕ್ಕೆ ನೀಡಿದ ಅನನ್ಯ ಕಾಣಿಕೆ 'ಹಾಳೂರು' ಕಥನ ಕವನ. ಇಂದಿನ ಹಳ್ಳಿಯ ಮತ್ತು ಪಟ್ಟಣಗಳ ಹಲವಾರು ಸಮಸ್ಯೆಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಜನರ ಒಳ್ಳೆಯದಕ್ಕಾಗಿ, ಹಾಳಾದ ಹಳ್ಳಿಯ, ಕಳೆದುಕೊಂಡ ಸೌಂದರ್ಯಕ್ಕೆ ಕವಿ ಮನ ಮಿಡಿಯುತ್ತದೆ. ಹಳ್ಳಿಯ ಗತ ವೈಭವದ ವರ್ಣನೆ ಕಣ್ಮುಂದೆ ಕಟ್ಟಿದಂತಿದೆ. ಇಲ್ಲಿಯ ಉನ್ನತ, ಆದರ್ಶಭಾವಗಳು ಮಕ್ಕಳ ಮನೋವಿಕಾಸಕ್ಕೆ ಪೂರಕವೆನಿಸಿವೆ. ನಾಗರಿಕತೆ ಬೆಳೆದಂತೆ ನಮ್ಮ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನುವ ಕೊರಗು ಕುವೆಂಪುರವರು ವ್ಯಕ್ತಪಡಿಸುತ್ತಾರೆ. 'ಹಾಳೂರು' ಕಥನ ಕವನ ಸುಲಭವಾದ ಮತ್ತು ಮಕ್ಕಳಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿ ಹೇಳುವಂತಿದೆ. ಆದರೆ ಮಕ್ಕಳ ಮನಸ್ಸನ್ನು ಆಕರ್ಷಿಸುವ ಸನ್ನಿವೇಶಗಳಾಗಲಿ, ಮಕ್ಕಳ ಮನಸ್ಸನ್ನು ಸೆಳೆಯುವ ಪಾತ್ರಗಳಾಗಲಿ, ಮಕ್ಕಳ ಮನವನ್ನು ರಂಜಿಸುವ ಚಿತ್ರಣಗಳು ಇಲ್ಲದಿರುವುದು ಶಿಶು ಸಾಹಿತ್ಯದ ಕೊರತೆ ಎನ್ನಬಹುದು. ಆಧುನಿಕ ಜಗತ್ತು ಬೆಳೆದಂತೆ ಮಾನವರು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಹೋಗುತ್ತಿದ್ದಾರೆ. ಇದರಿಂದಾಗಿ ಹಾಳೂರು ದಿನ-ದಿನವೂ ಹಾಳಾಗುತ್ತಿದೆ. ಹಳ್ಳಿಯ ಚಿತ್ರಣಗಳೇ ಮಾಯವಾಗುತ್ತಿವೆ. ಪಟ್ಟಣದ ಮಾರಿ ಬಂದು ಬಡಿದುಕೊಂಡು ಹೋದ ಮೇಲೆ ಹಳ್ಳಿ ದುರಂತಕ್ಕಿಡಾದ ಸ್ಮಶಾನವಾಗಿದೆ. ಆ ಹಳ್ಳಿಯನ್ನು ಪುರದ ಗೆಳೆಯನಿಗೆ ಪರಿಚಯ ಮಾಡಿಕೊಡುವುದರಿಂದ ಕವನ ಪ್ರಾರಂಭವಾಗುತ್ತದೆ.

'ಬಾ, ಪುರದ ಗೆಳೆಯನೇ, ಹಾಳೂರ ನೋಡು;
ಹಾಳೂರು ಇದು ನಮ್ಮ ರೈತರಿಹ ಬೀಡು;
ದೇಶಕನ್ನವ ನೀಡುವರಿಗೆಲ್ಲ ಗೂಡು,
ನಮ್ಮೂರು ದಿನದಿನವೂ ಆಗುತಿದೆ ಕಾಡು'.

ಹಳ್ಳಿಯ ವಿವಿಧ ಜೀವನ ಕ್ರಮವನ್ನು ಪರಿಚಯಿಸುತ್ತ ಗತಕಾಲದ ಚಿತ್ರಗಳನ್ನು ಸವಿಯುತ್ತ ಸಾಗುವ ಕವಿ ಕುವೆಂಪುರವರು ಕೊರಗನ್ನು ವ್ಯಕ್ತಪಡಿಸುತ್ತಾರೆ. ಹಳ್ಳಿಯ ಪ್ರಶಾಂತ ವಾತಾವರಣದ ಜೀವನ, ಅದರ ಚೆಲುವು, ಸಂಭ್ರಮದಿಂದ ಹೊಲವನ್ನು ಉಳುವ ರೈತರು, ಸಂತಸದಿಂದ ನಲಿಯುವ ಬಾಲಕರು, ಇಂದು ಕಾಣುವುದಿಲ್ಲ.

'ಕೇಕೆ ಹಾಕುತ ಕುಣಿದು ನೆರೆ ನಲಿದುದಿಲ್ಲಿ;
ಗೋಲಿಯಾಡುತ ನಾವು ಮೆರೆದ ತಳವಿಲ್ಲಿ,
ಇಂದಿಗೂ ಕಿವಿಯೊಳದೆ ಅಂದಿನಾ ಕೂಗು,
ಮನದೊಳಿದೆ ಅಂದಿನಾಟದ ತಾಗು ಬಾಗು'.

ಬಾಲ್ಯದ ನೆನಪುಗಳನ್ನು ಮೆಲುಕು ಹಾಕುತ್ತ, ಆಡಿ-ಹಾಡಿ ನಲಿದಾಡಿದ ಮಲೆನಾಡಿನ ಚಿತ್ರಣ ಅಭೂತಪೂರ್ವವಾದುದು. 'ಆ ಕೂಗು, ಆಟದ ಬಾಗು' ಎನ್ನುವ ನುಡಿಗಳು ಕವಿಗೆ ವ್ಯಥೆಯನ್ನು ತಂದಿರುವಂತಿವೆ. ಗೆಳೆಯನೇ ನೋಡು ನಮ್ಮ ಹಾಳೂರು,

'ದೂರ ಕಾಣುವುದು ಪಂಚಾಯಿತರ ಕೂಡು,
ಊರಗೌಡನ ಕಟ್ಟೆ, ಬಾ ಗೆಳೆಯ, ನೋಡು,

ದೂರು ಹೇಳುವರೆಲ್ಲ ಅಲ್ಲಿ ಗೈ ತಂದು,
ಹೈ ಕೋರ್ಟುಗಳಿಗವರು ಹೋಗುತಿರಲಿಲ್ಲ'.

ಹಳ್ಳಿಯಲ್ಲಿ ಯಾವುದೇ ನ್ಯಾಯವಿದ್ದರೂ ಪಂಚಾಯಿತಿ ಕಟ್ಟೆಯ ಮೇಲೆ ಊರಗೌಡನೇ ತೀರ್ಮಾನಿಸುತ್ತಿದ್ದನು. ಇಂದು ಇದೆಲ್ಲ ಮಾಯವಾಗಿ ಕೋರ್ಟು, ಕಛೇರಿ, ವಕೀಲರು ಎಂದು ಹಣ ವ್ಯರ್ಥಮಾಡುವ ಪ್ರಸಂಗಗಳು ನೋಡಿದಲ್ಲಿ ಕಂಡುಬರುತ್ತಿವೆ. ಆ ಗತ್ತು, ಗೌರವ ಈಗೆಲ್ಲಿ. ಬಿದ್ದಗೋಡೆಗಳ ಮುರುಕಲು ಗುಡಿಸಲುಗಳ ಹಾಳಾದ ಹಳ್ಳಿ ಇಂದು ನಗುವಿಲ್ಲದೆ ಅಳುವ ಕಂದರವಾಗಿದೆ. ನೋಡಿದರೆ ಕರುಳು ಮರುಗುತ್ತದೆ ಎನ್ನುವರು. ಬಡತನದ ಬೇಗೆಯಲಿ ಬಳಲಿ ಬೆಂದರೂ ಸಹ ತಂದೆ-ತಾಯಿಯರು ತಮ್ಮ ಮಕ್ಕಳನ್ನು ಶಾಲೆ ಕಲಿಯಲು ಪ್ರೋತ್ಸಾಹ ನೀಡುತ್ತಾರೆ.

'ಇಲ್ಲೋದಿದರು ಕೆಲರು ಕಾಲೇಜ ಸೇರಿ
ಪ್ರೌಢ ವಿದ್ಯಾಭ್ಯಾಸ ಮಾಡಿದರು ಮೀರಿ,
ಆಸ್ತಿಯಾಭರಣಗಳನೆಲ್ಲವನು ಮಾರಿ
ಓದಿಸಿದರಾತನನು, ಒಂದು ಸರಕಾರಿ
ಚಾಕರಿಯು ಸಿಗಲೆಂದು ಬಹಳ ಹಾರೈಸಿ'.

ಬಡವರಾದರೂ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಪರಊರಿಗೆ ಕಳಿಸುವರು. ತಮ್ಮ ಆಸ್ತಿ ಆಭರಣಗಳೆಲ್ಲವ ಮಾರಿ ಸರಕಾರಿ ನೌಕರಿ ಪಡೆಯುವ ಹಂಬಲ ಪಾಲಕರದ್ದು. ನೌಕರಿ ಮಾಡುವ ಮಗನ ನೋಡಲು ಪಟ್ಟಣಕ್ಕೆ ಬಂದು ತಂದೆಯನ್ನು ಆಳು ಎಂದು ಗೆಳೆಯರಿಗೆ ಪರಿಚಯಿಸುವ, ಅಧಮರನ್ನು ಕವಿ ಖಂಡಿಸುವರು. ಹಳ್ಳಿಯ ಸಂಪ್ರದಾಯ, ಪರಂಪರೆ, ಗುರು-ಹಿರಿಯರಲ್ಲಿ ಭಕ್ತಿ ಮೊದಲಾದ ಮೌಲ್ಯಗಳನ್ನು ಮರೆತ ಜನರನ್ನು ಕಂಡು ವ್ಯಥೆಪಡುತ್ತಾರೆ. 'ಹಾಳಾದ ವೈಭವಕೆ ಮನ್ನಣೆಯ ಮಾಡು' ಎಂದು ಗೆಳೆಯರನ್ನು ಕೇಳಿಕೊಳ್ಳುವರು ಕುವೆಂಪು. ಇಡೀ ಕವನದುದ್ದಕ್ಕೂ ಕರುಳು ಮಿಡಿಯುವ ಚಿತ್ರಣಗಳ ಸಾಲು ಕಂಡುಬರುತ್ತವೆ. ಅಂತಹ ಚಿತ್ರಗಳಲ್ಲಿ ಬರಹಗಾರ ತಾತಯ್ಯನ ವ್ಯಕ್ತಿತ್ವವೂ ಒಂದು. ಆತನ ತಾಯ್ನುಡಿಯ ಪ್ರೀತಿಯನ್ನು ಮೆಚ್ಚಿ 'ತಾಯನುಡಿಯೊಲುಮೆ ತಾತಯ್ಯಗಿದ್ದಂತೆ, ನಮಗಿದ್ದರೇನುಂಟು ತಾಯ್ನುಡಿಗೆ ಚಿಂತೆ' ಎಂದು ಕೊರಗುವ ಕುವೆಂಪುರವರ ಕನ್ನಡ ಪ್ರೇಮ ಅನನ್ಯವಾಗಿ ಅಭಿವ್ಯಕ್ತಗೊಂಡಿದೆ. ಹಳ್ಳಿಯವರು ದಡ್ಡರೆಂದು ಕೀಳಾಗಿ ಕಾಣುವರು ಪಟ್ಟಣಿಗರು. ರೈತರು ಶ್ರಮದಿಂದ ದುಡಿದ ಫಲವೇ ನಗರವಾಸಿಗಳ ಜೀವಾಳ ಎನ್ನುವುದು ಮರೆತ ಮಂಕು ಜನರಿಗೆ,

'ಕಾರ್ಖಾನೆಗಳ ಕೂಲಿಗಾಸೆ ಪಡುತೆಲ್ಲ
ಓಡಿದರು ಪಟ್ಟಣಕೆ; ದೇವರೆ ಬಲ್ಲ
ಪಟ್ಟಣವ ಸೇರೆ ದುರ್ನಡತೆಗಳನೆಲ್ಲ
ಒಂದೊಂದನೇ ಕಲಿತು ಹಾಳಾದರೆಲ್ಲ.
ಪುರದೊಳಗೆ ಸೌಭಾಗ್ಯ ದೊರಕುವುದು ಎಂದು
ಬರಿದೆ ಭಾವಿಸಿ ಹಳ್ಳಿಗಳ ಬಿಟ್ಟರಂದು,

ಪುರಕೆ ನೋಡಲು ಬಂದು ಕಂಡುದವರೇನು?
ದುರ್ವ್ಯಸನ ಕುಡುಕುತನ ಜೂಜಾಟವೆರನು?
ಹೊಟ್ಟೆಗಿಲ್ಲದ ಬಟ್ಟೆಯಾಡಂಬರೇನು,
ಸಿನಿಮಾ ನಾಟಕ ಶಾಲೆಗಳ ಭೋಗವೇನು ।
ಸಂಪಾದಿಸಿದುದೆಲ್ಲ ದುರ್ನಡತೆಗಾಯ್ತು,
ಹಳ್ಳಿಯಾ ಸುಖವಳಿದು, ಪುರ ಮಸಣವಾಯ್ತು ।
ಹಳ್ಳಿಯ ಸುಖವಿಲ್ಲ; ಪುರದ ಸುಖವಿಲ್ಲ,
ಹಳ್ಳಿಯಗಲಿದ ನರಗೆ ಏನೊಂದುಮಿಲ್ಲ'.

ಇದು ಹಳ್ಳಿಯ ಚಿಂತಾಜನಕ ಪರಿಸ್ಥಿತಿ, ಎಲ್ಲಿಯೂ ಉತ್ಸಾಹವಿಲ್ಲ, ಯಾರಲ್ಲಿಯೂ ದುಡಿಯುವ ಪ್ರವೃತ್ತಿ ಇಲ್ಲದೆ ಆಲಸಿಗಳಾಗಿದ್ದಾರೆ. ಆದರೆ ಹಳ್ಳಿಯ ದುರಂತದ ಸಂಗೀತಗಿಂತ ಭಿನ್ನವಾದುದು ಪಟ್ಟಣವಿಲ್ಲ. ಅಲ್ಲಿಯೂ ಸಹ ಕುಡುಕುತನ, ಜೂಜಾಟ, ಆಡಂಬರದ ಬದುಕು, ಸಿನಿಮಾ ನಾಟಕಗಳ ವೈಭವದ ಜೀವನದಿಂದ ಮಸಣವಾಯಿತು ಎಂದು ತಳಮಳ ವ್ಯಕ್ತಗೊಳಿಸುತ್ತಾರೆ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ' ಎನ್ನುವ ಅನುಭವದ ಮಾತಿನಂತೆ ಪಟ್ಟಣದ ಬದುಕಾಗಿದೆ. ಮೋಜು-ಮಸ್ತಿಯಿಂದ, ಕೆಟ್ಟ ಚಟಗಳನ್ನು ಹವ್ಯಾಸ ಮಾಡಿಕೊಂಡು ಯುವ ಜನರನ್ನು ಅಧೋಗತಿಗೆ ಒಯ್ಯುತ್ತಿವೆ. ಪಟ್ಟಣದ ಜೀವನವನ್ನು ಕುರಿತು ಕವಿಗೆ ಅನುಕಂಪವಿದೆ, ಉದ್ಧಾರದ ದೃಷ್ಟಿಯಿದೆ. 'ದಿಲ್ಲಿಗಿಂತ ಹಳ್ಳಿ ಮೇಲು' ಎನ್ನುವ ಹಿರಿಯರ ನುಡಿಯಂತೆ,

'ಗಂಜಿಯುಂಡರು ಹಳ್ಳಿಯದು ಪರಮನಾಕ
ಪಾಯಸವನುಂಡರೂ ಪುರ ನರಕಲೋಕ ।
ಹಳ್ಳಿಗನೆ ಪುರದವನ ಅನುಸರಿಸಬೇಡ
ಹಳ್ಳಿಯೇ ಸ್ವರ್ಗವೈ, ಅದ ಬಿಡಲು ಬೇಡ'.

ಸ್ವರ್ಗ-ನರಕದ ಕಲ್ಪನೆ ಮಕ್ಕಳಿಗಾಗದಿದ್ದರೂ ಹಳ್ಳಿಯ ಜನರ ಜೀವನ ಸುಂದರವಾದುದು ಎನ್ನುತ್ತಾರೆ ಹಿರಿಯರು. ಉತ್ತಮ ಆರೋಗ್ಯ ಹೊಂದಿದ ಬದುಕನ್ನು ಕಳೆಯುವ ಹಳ್ಳಿಗರು ನಮ್ರವಾದಿಗಳು, ಶ್ರಮಜೀವಿಗಳು ಎನ್ನುವುದಕ್ಕೆ 'ಎದೆಗಾರ ತಿಮ್ಮನ' ಚಿತ್ರ ಕರುಳು ಮಿಡಿಯುವಂತಿದೆ.

'ಎದೆಗಾರನೆತ್ತರದ ಮೈತುಂಬಿದಾಳು,
ಬಗ್ಗದಿಹ ಕುಗ್ಗದಿಹ ಕಗ್ಗಲ್ಲ ಬಾಳು ।
ಬಡತನದ ಬಾವುಟಗಳವನುಟ್ಟ ಬಟ್ಟೆ
ರಂಧ್ರಗಳಲ್ಲಲ್ಲಿ ಇಣುಕುವುದು ಹೊಟ್ಟೆ ।
ಮುಚ್ಚುತಿದ್ದುದು ಪಂಚೆಯವನ ಮೊಳಕಾಲ,
ಬಗಲೊಳಿಹುದಾವಗಂ ಎಲೆಯಡಿಕೆ ಚೀಲ ।
ಹೆಗಲೊಳಿಹುದು ಸದಾ ಕಂಬಳಿಯ ಚಿಂದಿ,
ಮೈಮೇಲೆ ಪಟವಾಡುವುದು ಹರಿದ ಅಂಗಿ'.

ಗೋಪಾಲಕ ಎದೆಗಾರ ತಿಮ್ಮನ ಬಡತನ ಕಣ್ಣಿಗೆ ಕಟ್ಟುವಂತೆ ಕುವೆಂಪು ಚಿತ್ರಿಸಿದ್ದಾರೆ. ಬಡತನದ ಭೀಕರತೆ ಇದಕ್ಕಿಂತಲೂ ಕಠೋರವಾಗಿ ವರ್ಣಿಸಲು ಸಾಧ್ಯವಿಲ್ಲದಂತಿದೆ. ಬಡತನದ ಬೇಗೆಯವನಾದರೂ ತಿಮ್ಮ ಸಾಹಸಿ, ವೀರ, ದೃಢಮನಸ್ಸುಳ್ಳವನು. ತಿಮ್ಮನ ವರ್ಣನೆಯಲ್ಲಿ ಆತ ಧರಿಸಿದ ಬಟ್ಟೆ ಅವನ ಇರುವಿಕೆಯನ್ನು ವ್ಯಕ್ತಗೊಳಿಸುತ್ತದೆ. ಎದೆಗಾರ ತಿಮ್ಮನ ಚಿತ್ರಣ ಒಂದು ಕಡೆಯಾದರೆ ಸತ್ಯವಂತ, ಶುದ್ಧನಡತೆಯ ವ್ಯಾಪಾರಿ ಸಿದ್ದಣ್ಣನ ಪಾತ್ರ ಕಣ್ಣಿಗೆ ಕಟ್ಟುವಂತಿದೆ. ಸುಂದರ ಬದುಕನ್ನು ಬಾಳುತ್ತಿದ್ದ ಸಿದ್ದಣ್ಣ ಪಟ್ಟಣ ಸೇರಿ ಹಾಳಾದ ಪ್ರಸಂಗವನ್ನು ಕುವೆಂಪುರವರು ಪಟ್ಟಣದ ಕುಟಿಲ, ಕುಹಕ, ಮೋಸದ ಬದುಕನ್ನು ವಿಡಂಬಿಸಿದ್ದಾರೆ.

'ಅಮ್ಮ, ಭಾರತಿ, ಹಳ್ಳಿ ಹಾಳಾಗದಿರಲಿ
ನಿನಗೆಂದು ಸುಖ ಶಾಂತಿಯಾನಂದವಿರಲಿ
ಹಳ್ಳಿಗಳ ಮಾತಾಯಿ, ಭಾರತಿಯೆ, ಅಮ್ಮಾ,
ಹಳ್ಳಿಗಳು ಹಾಳಾಗದಂತೆ ಸಲಹಮ್ಮಾ'.

ಭರತ ಭೂಮಿ ಹಳ್ಳಿಗಳ ನಾಡು. ಅವು ಉಳಿದು ಬೆಳೆಯುವ ಸದಾಶಯ ಇಲ್ಲಿದೆ. ಇನ್ನೂ ಮುಂದಾದರೂ ಹಳ್ಳಿಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡೋಣ, ಹಳ್ಳಿಗಳು ಹಾಳಾಗದಂತೆ ನೋಡಿಕೊಳ್ಳೋಣ ಎಂದು ಕವಿ ಬೇಡಿಕೊಳ್ಳುವರು. ಒಟ್ಟಿನಲ್ಲಿ 'ಹಾಳೂರು' ಶಿಶು ಸಾಹಿತ್ಯದ ಕೃತಿ ಎಂದರೂ ಹಳ್ಳಿಗಳ ಮತ್ತು ಪಟ್ಟಣಗಳ ಹಲವಾರು ಸಮಸ್ಯೆಗಳನ್ನು ತೆರೆದಿಡುತ್ತದೆ. ಹಳ್ಳಿಯ ಉದ್ಧಾರಕ್ಕೆ ಕವಿ ಮನ ಪ್ರಯತ್ನಿಸುತ್ತದೆ. ಹಳ್ಳಿಯ ಹಾಳಾದ ಸೌಂದರ್ಯ ಅನುಕಂಪ ಹುಟ್ಟಿಸುತ್ತದೆ. ಆಧುನಿಕ ಯುವಕರಿಗೆ ಈ ಕಥನ ಕವನ ಕಿವಿಮಾತಿನ ಮಾದರಿಯಾಗಿದೆ. ಮಕ್ಕಳ ಮನಸಿಗೆ ಮುಟ್ಟುವ ಭಾಷೆ-ಭಾವವನ್ನು ಹೊಂದಿದೆ.

ಕೊಟ್ಟ ಮಾತಿಗೆ ತಪ್ಪಿದರೆ ಆಗುವ ಅನಾಹುತವನ್ನು ಬೊಮ್ಮನ ಹಳ್ಳಿಯ ಕಿಂದರಿ ಜೋಗಿ ಕಥನ ಕವನ ಚಿತ್ರಿಸುತ್ತದೆ. ಇದು ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಕರ್ನಾಟಕ ಸಂಘದಿಂದ ಪ್ರಕಟಿಸಿದ 'ಕಿರಿಯರ ಕಾಣಿಕೆ' ಸಂಲನದಲ್ಲಿ ಮುದ್ರಣಗೊಂಡು ಕುವೆಂಪು ಅವರಿಗೆ ಯಶಸ್ಸು ತಂದುಕೊಟ್ಟ ಪ್ರಮುಖ ಕವನವಾಗಿದೆ. ಇದನ್ನು ಹಾಡಿ ಕುಣಿಯದ ಮಕ್ಕಳಿಲ್ಲ. ಮಕ್ಕಳ ಮನವನ್ನು ಆಕರ್ಷಿಸುವ ಕೃತಿ. ಅವರ ಹೃದಯ ಕದ್ದ ಶಿಶು ಸಾಹಿತ್ಯದ ಮಹತ್ವದ ಕೊಡುಗೆಯಾಗಿದೆ. ಭಾಷೆ ಮತ್ತು ಭಾವ ಮಧುರತೆಯ ಬಳುಕು ಮಕ್ಕಳ ಮೇಲೆ ಪರಿಣಾಮ ಮೂಡಿಸಲು ಸಾಧ್ಯವಿದೆ. ಮಕ್ಕಳು ಕವಿತೆಯನ್ನು ಮರೆಯಲಾರರು.

ಮಕ್ಕಳ ಕಲ್ಪನಾ ಲೋಕವನ್ನು ತೆರೆದಿಡುವ, ಅಡೆ-ತಡೆಯಿಲ್ಲದೆ ಸಾಗುವ ಕಥನ ವೈಖರಿಯ ಅಭಿವ್ಯಕ್ತಿಯಾಗಿದೆ. ಹೆಜ್ಜೆ-ಹೆಜ್ಜೆಗೂ ಕುತೂಹಲ ಮೂಡಿಸುವ ಕೃತಿ. ಸುಂದರವಾದ ರೇಖಾಚಿತ್ರಗಳಿಂದ ಒಳಗೊಂಡಿದೆ. ಕಿಂದರಿ ಕೈಯಲಿ ಹಿಡಿದು ಬಾರಿಸುವ

ಜೋಗಿ ಚಿತ್ರವು ಅತಿಮಾನುಷ ರೂಪದಂತೆ ವ್ಯಕ್ತಗೊಂಡಿದೆ. ತಲೆಯಲ್ಲಿ ಜಿಂಕೆಯ ಕೊಂಬುಗಳು, ಹುಲಿಯ ಭೀಕರ ಕಣ್ಣುಗಳು, ಆನೆಯ ಕಿವಿ, ಕುದುರೆ ಗೊರಸು, ಹಂದಿಯ ದಾಡೆ ಹಲ್ಲುಗಳು, ಮಂಗನ ಮುಖ ಮೊದಲಾದ ರೂಪಗಳಿಂದ ಜೋಗಿ ವಿಲಕ್ಷಣವಾಗಿ ಕಾಣುತ್ತಾನೆ. ಮೂಲತಃ ಈ ಕಥನ ಕವನ ಬ್ರೌನಿಂಗ್ ಕವಿಯ 'The pied piper of Hamlin' ಕವಿತೆಯನ್ನಾಧರಿಸಿ ರಚಿತವಾದುದೆಂದು ವಿದ್ವಾಂಸರ ಅಭಿಮತ. ಕುವೆಂಪು ಅವರು ತಮ್ಮ 'ನೆನಪಿನ ದೋಣಿ'ಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ. 'ಅನೇಕರು ಅದನ್ನು ಬ್ರೌನಿಂಗ್ ಕವಿಯ ಪೈಡ್ ಪೈಪರ್ ಆಫ್ ಹೆಮಲಿನ್ ಕವಿತೆಯ ಭಾಷಾಂತರವೆಂದು ಭಾವಿಸಿದ್ದಾರೆ. ಅದು ಮೊದಲು 'ಕಿರಿಯಕಾಣಿಕೆ'ಯಲ್ಲಿ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದಿಂದ ೧೯೨೮ರಲ್ಲಿ ಪ್ರಕಟವಾದಾಗ ಅದು ಬ್ರೌನಿಂಗ್ ಕವಿಯ ಕವಿತೆಯ ಆಧಾರದ ಮೇಲೆ ರಚಿತವಾದದ್ದು ಎಂಬ ಉಲ್ಲೇಖವಿದೆ. ಅದು ಯಾವ ದೃಷ್ಟಿಯಿಂದ ಪರಿಶೀಲಿಸಿದರೂ ಭಾಷಾಂತರವಾಗುವುದಿಲ್ಲ. ಕಡೆಗೆ ಸಮೀಪದ ಅನುವಾದ ಕೂಡ ಆಗುವುದಿಲ್ಲ. ಅದನ್ನು ಬರೆಯುವಾಗ ಶಿವಮೊಗ್ಗದಲ್ಲಿ ನನ್ನ ಬಳಿ ಬ್ರೌನಿಂಗ ಕೃತಿ ಇರಲಿಲ್ಲ. ಅಷ್ಟೇ ಅಲ್ಲ, ಇಂಗ್ಲೀಷಿನಲ್ಲಿ ಅದನ್ನು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ನಾನು ಐದನೆಯ ಫಾರಂನಲ್ಲಿ ಓದುತ್ತಿದ್ದಾಗ ಪಠ್ಯಪುಸ್ತಕದಲ್ಲಿ ಓದಿದ್ದೇನೆ ಹೊರತು ಆಮೇಲೆ ಅದನ್ನು ಓದಿರಲೂ ಇಲ್ಲ. ಆದ್ದರಿಂದ ಅದು ಭಾಷಾಂತರವೂ ಅಲ್ಲ. ಆ ಕಥೆಯ ನೆನಪಿನ ಆಧಾರದ ಮೇಲೆ ರಚಿತವಾದದ್ದು ಎಂದು ಹೇಳಬಹುದು'[೧೨೮]. ಇದು ಕುವೆಂಪು ಅವರ ಪ್ರತಿಭೆಯ ಸೃಷ್ಟಿ ಎನ್ನಬೇಕು. ಬೊಮ್ಮನ ಹಳ್ಳಿಯಲ್ಲಿ ಇಲಿಗಳ ಕಾಟದಿಂದ ಜನರು ತತ್ತರಿಸಿ ಹೋಗಿದ್ದಾರೆ. ಎಲ್ಲಿ ನೋಡಿದರಲ್ಲಿ ಇಲಿಗಳು.

'ಟೋಪಿಯ ಒಳಗಡೆ ಗೂಡನು ಮಾಡಿ
ಹೆತ್ತುವು ಮರಿಗಳನು;
ಪೇಟದ ಒಳಗಡೆ ಆಟವನಾಡಿ
ಕಿತ್ತುವು ಸರಿಗೆಯನು ।
ಗೋಡೆಗೆ ತಗುಲಿಸಿದಂಗಿಯ ಜೇಬನು
ದಿನವೂ ಜಪ್ತಿಯ ಮಾಡಿದವು;
ಮಲಗಿರೆ ಹಾಸಿಗೆಯನ್ನೇ ಹರಿದುವು,
ಕೇಶಚ್ಛೇದವ ಮಾಡಿದುವು;

ಮಕ್ಕಳಿಗೆ ಇಲಿಗಳು ಕೊಡುವ ಕಾಟ ರೋಮಾಂಚನ ಮೂಡಿಸಿವೆ. ಕುತೂಹಲದಿಂದ ಮಕ್ಕಳು ನೋಡುವ, ಮೋಜು ಮಾಡುವ ಸಂದರ್ಭ ಹಲವು ಅವುಗಳಲ್ಲಿ,

'ಸಿದ್ದೋ ಜೈಗಳು ಶಾಲೆಗೆ ಹೋಗಿ
ಪಾಠವ ಬೋಧಿಸುತ್ತಿದ್ದಾಗ
ಅಂಗಿಯ ಜೇಬಿಂ ಹೆಳವಿಲಿಯೊಂದು
ಚಂಗನೆ ನೆಗೆಯಿತು ತೂತನು ಮಾಡಿ

ಲೇವಡಿ ಎಬ್ಬಿಸೆ ಬಾಲಕರೆಲ್ಲ
ಗುರುಗಳಿಗಾಯಿತು ಬಲು ಗೇಲಿ'.

ಮಕ್ಕಳು ಪಾಠದ ಗಂಭೀರ ವಿಷಯಗಳನ್ನು, ನೀತಿಯ ಮೂಲಕ ಕೇಳುವುದು ಅಷ್ಟೇ ಮುಖ್ಯವಲ್ಲ. ಅವುಗಳ ಜೊತೆ ಹಾಸ್ಯದ ಸನ್ನಿವೇಶಗಳನ್ನು ಹೀಗೆ ಕುವೆಂಪು ಅವರು ಕಟ್ಟಿಕೊಟ್ಟಿರುವುದು ಕವಿತೆಗೆ ಮೆರಗು ತಂದಿದೆ. ಇಲಿಗಳನ್ನು ನಾಶಪಡಿಸಲು ಜನರು ಅನೇಕ ಉಪಾಯಗಳನ್ನು ಮಾಡಿದರೂ ಫಲಕಾರಿಯಾಗಲಿಲ್ಲ.

'ಇಲಿಗಳ ಕೊಲ್ಲಲು ಊರಿನ ಜನರು
ತುಂಬಾ ಯತ್ನ ಮಾಡಿದರು;
ಕಡಿದರೆ ಮುರಿದುವು ಕತ್ತಿಗಳೆಲ್ಲ
ಹೊಡೆದರೆ ಮುರಿದುವು ಕೋಲುಗಳು
ಇಲಿಗಳ ಬೇಟೆಯನಾಡುತಿರಲು
ಮುರಿದುವು ತಿಮ್ಮನ ಕಾಲುಗಳು'.

ಹೀಗೆ ಜನರು ಹಲವು ಪ್ರಯತ್ನಗಳನ್ನು ಮಾಡಿದರೂ ಇಲಿಗಳ ಕಾಟ ತಪ್ಪಲಿಲ್ಲ. ಬೇಸತ್ತ ಜನ ಪೂಜೆ, ಯಾಗ, ಹರಕೆ, ಕಾಣಿಕೆ ಹೀಗೆ ಅನೇಕ ಕರ್ಮಾದಿಗಳನ್ನು ನಂಬುಗೆಯಿಂದ ಆಚರಣೆ ಮಾಡಿದರು. ಇಲಿಗಳ ಸಮಸ್ಯೆ ಹೆಚ್ಚಾಗುತ್ತಲೇ ಹೋಯಿತು. ಕೊನೆಗೆ ಊರ ಗೌಡನಿಗೆ ಬೈಯುವ ಪ್ರಸಂಗ ಅಚ್ಚರಿ ಮೂಡಿಸುತ್ತದೆ.

'ಥೂ! ಛಿ! ಗೌಡನೆ ನೀ ಹಾಳಾಗ!
ಮಾರಿಯ ಇಲಿಗಳ ಕೊಲ್ಲಿಸೊ ಬೇಗ!
ತೆರಿಗೆಯ ಮಾತ್ರ ಕಾಸೂ ಬಿಡದೆ
ಹೊಡೆದೂ ಬೈದೂ ಎತ್ತುವೆ ನೀನು
ನಿನ್ನ ರುಮಾಲಿನ ಜರಿ ಹಾಳಾಗ,
ನಿನ್ನೀ ಗಂಟಲು ಕಟ್ಟೇ ಹೋಗ!
ಇಲಿಗಳ ಸಹಿಸೆವು ಕೊಲ್ಲಿಸೊ ಬೇಗ!
ಬೆಂಕಿಯನಿಡುವೆವು ನಿನ್ನೀ ಮನೆಗೆ,
ಕೊಲ್ಲಿಸದಿರೆ ಬರೆಯಿಡುವೆವು ನಿನಗೆ!
ಹೆಸರಿಗೆ ಮಾತ್ರಾ ಗೌಡನೆ ನೀನು?
ಮಾನವ ಇಲ್ಲವೆ ಛೀ ನಿನಗೇನು'.

ಊರಿನಲ್ಲಿ ನಾನಾ ರೀತಿಯ ಅನಾಹುತಗಳು ನಡೆಯುತ್ತಿದ್ದರೂ ಗೊತ್ತಿಲ್ಲದಂತೆ ಸುಮ್ಮನಿದ್ದ ಗೌಡನನ್ನು ಜನರು ತರಾಟೆಗೆ ತೆಗೆದುಕೊಳ್ಳುವರು. ತೆರಿಗೆ ಕೊಡದಿದ್ದರೆ ಹೊಡೆದು ವಸೂಲಿ ಮಾಡುವ, ಯಾವುದೇ ಕುಂದುಕೊರತೆ, ಅನಾಹುತಗಳು ಸಂಭವಿಸಿದರೂ ಸೂಕ್ತ ಕ್ರಮ ಕೈಗೊಳ್ಳದ ಗೌಡನನ್ನು ಸಂಕೇತವಾಗಿ ಬಳಸಿಕೊಂಡು ಅನ್ಯಾಯದ ವಿರುದ್ಧ ಪ್ರತಿಭಟಿಸುವ ಅರಿವನ್ನು ಮೂಡಿಸುವಲ್ಲಿ ಕಥೆ ಪ್ರಧಾನವಾಗಿ ಮೂಡಿಬಂದಿದೆ. ಕುವೆಂಪು ಅವರು ಮಕ್ಕಳಲ್ಲಿ ಅನ್ಯಾಯದ ವಿರುದ್ಧ ಸುಮ್ಮನಿರದೆ ಹೋರಾಟದ ಮನೋಧರ್ಮ

ಬೆಳೆಸುವಲ್ಲಿ ಪ್ರಯತ್ನಿಸಿದ್ದಾರೆ. ಜನರ ಪ್ರತಿಭಟನೆಗೆ ಮಣಿದ ಗೌಡ ಒಂದು ನಿರ್ಣಯಕ್ಕೆ ಬರುತ್ತಾನೆ.

‘ಇಲಿಗಳ ಕೊಲ್ಲಲು ದಾರಿಯನಾರು
ತೋರಿಸಿ ಕೊಡುವರೊ ಅವರಿಗೆ ಆರು
ಸಾವಿರ ನಾಣ್ಯಗಳೀಯುವೆ ನಾನು
ತಿಳಿದವರಿದ್ದರೆ ಬನ್ನಿರಿ! ಏನು?’

ಯಾರೇ ಆಗಲಿ ಇಲಿಗಳ ಕಾಟವನ್ನು ಪರಿಹರಿಸುವವರಿಗೆ ಗೌಡ ಬಹುಮಾನ ಕೊಡುವ ಘೋಷಣೆ ಮಾಡುವನು. ಜನರು ಇದಕ್ಕೆ ಸಮಾಧಾನ ಪಡುವುದಿಲ್ಲ. ಅದೇ ಸಮಯಕ್ಕೆ ಕಿಂದರಿ ಜೋಗಿ ಅಲ್ಲಿಗೆ ಬರುವನು. ಅವನ ರೂಪು ಎಲ್ಲರನ್ನು ಸೆಳೆಯುತ್ತದೆ.

‘ಬಂದನು ಬಂದನು ಕಿಂದರಿ ಜೋಗಿ!
ಕೆದರಿದ ಕೂದಲ ಗಡ್ಡದ ಜೋಗಿ!
ನಾನಾ ಬಣ್ಣದ ಬಟ್ಟೆಯ ಜೋಗಿ!
ಕೈಯಲಿ ಕಿಂದರಿ ಹಿಡಿದಾ ಜೋಗಿ!
ಕುದುರೆಯ ಗೊರಸಿನ ಅಡಿಗಳ ಜೋಗಿ!
ಆನೆಯ ಕಿವಿಗಳ ಕಿಂದರಿ ಜೋಗಿ!
ಹಂದಿಯ ದಾಡೆಯ ಕೋರೆಯ ಜೋಗಿ!
ಮಂಗನ ಮೂತಿಯ ಮುಡಿದಿಹ ಜೋಗಿ’!

ಜೋಗಿಯ ರೂಪು ಮಕ್ಕಳಿಗೆ ಭಯ ಮತ್ತು ರಂಜನೆಯನ್ನು ಮಾಡುತ್ತದೆ. ಕವಿತೆ ಲಯ, ಗೇಯತೆ, ನಾದಗಳ ಸಹಜ ಓಟದಿಂದ ಮಕ್ಕಳ ಮನದಲ್ಲಿ ಉಳಿಯಲು ಸಾಧ್ಯವಿದೆ. ಊರಿನ ಜನರಾದಿಯಾಗಿ ಜೋಗಿಯನ್ನು ನೋಡಿ ಭಯದಿಂದ ಕೈಮುಗಿದು ದೂರ ಸರಿದು ನಿಲ್ಲುವರು. ಗೌಡನು ಸಹ ಭಯ-ಭಕ್ತಿಯಿಂದ ನೀನಾರು ಎಂದು ಕೇಳಿದಾಗ ಜೋಗಿ ಹೇಳುತ್ತಾನೆ.

‘ಹಿಮಗಿರಿಯಲ್ಲಿಹ ಜೋಗಿಯು ನಾನು;
ಪರಮೇಶ್ವರನಿಗೆ ಗೆಳೆಯನು ನಾನು;
ನಿಮ್ಮೀಗೋಳನು ಕೇಳಿದ ಶಿವನು
ನನ್ನನ್ನಿಲ್ಲಿಗೆ ಕಳುಹಿದನು,
ಇಲಿಗಳನೆಲ್ಲಾ ಕೊಂದರೆ ಆರು
ಸಾವಿರ ನಾಣ್ಯಗಳೀಯುವೆಯೇನು?’

ಎಂದು ಜೋಗಿಯು ತನ್ನ ವಿಶಿಷ್ಟ ಪರಿಚಯ ಮಾಡುತ್ತಾನೆ. ಇಲ್ಲಿ ಕುವೆಂಪುರವರು ದೈವ ಕಲ್ಪನೆಯನ್ನು ಅಭಿವ್ಯಕ್ತಗೊಳಿಸಿರುವುದು ಕಂಡು ಬರುತ್ತದೆ. ಜೋಗಿಯ ಮಾತುಗಳನ್ನು ಕೇಳಿದ ಗೌಡನು ಸಂತೋಷದಿಂದ ಹೀಗೆ ಉತ್ತರಿಸುವನು.

‘ಬೇಕಾದುದು ನಾ ಕೊಡುವೆನು ಜೋಗಿ,
ಆರೇಕಿನ್ನೆರಡಾದರು ಕೊಡುವೆನು,

ಬೇಕಾದುದನೆಲ್ಲವ ನೀ ಕೇಳು,
ಊರೇ ನಿನ್ನದು! ನಾ ನಿನ್ನಾಳು'!

ಗೌಡನ ಈ ಘೋಷಣೆಗೆ ಜೋಗಿ ಸಮ್ಮತಿಯನ್ನು ನೀಡಿ ಎಲ್ಲ ಇಲಿಗಳನ್ನು ಕಿಂದರಿಯ ನಾದದಿಂದ ಹೊಳೆಯ ನೀರಿನಲ್ಲಿ ತೇಲಿ ಹೋಗುವಂತೆ ಮಾಡುತ್ತಾನೆ. ಜನರ ಸಂತಸಕ್ಕೆ ಮಿತಿಯೇ ಇಲ್ಲವೆಂಬಂತೆ ವರ್ತಿಸುವರು. ಆಗ ಜೋಗಿಯು ಬಂದು ಗೌಡನಿಗೆ ಆರುಸಾವಿರ ನಾಣ್ಯಗಳನ್ನು ಕೊಡು ಎಂದಾಗ, ಊರ ಗೌಡನು ಹೇಳುವನು.....

'ಕಿಂದರಿ ಜೋಗಿಯೆ ಹೇಳುವೆ ಕೇಳು,
ಸಾವಿರ ಆರನು ನಾ ಕೊಡಲಾರೆನು,
ನೀ ಮಾಡಿದ ಕೆಲಸವು ಹೆಚ್ಚಲ್ಲ,
ಸುಮ್ಮನೆ ಕಿಂದರಿ ಬಾರಿಸಿದೆ,
ಇಲಿಗಳ ಹೊತ್ತೆಯ ನೀನೇನು?
ಅವುಗಳು ತಮ್ಮಷ್ಟಕ್ಕೆ ತಾವೇ
ಬಿದ್ದವು ಹೊಳೆಯಲಿ ಮುಳುಗಿದುವು!
ಕೊಡುವೆನು ನೀ ಪಟ್ಟಿಹ ಶ್ರಮಕಾಗಿ
ಕಾಸೈದಾರನು ತೆಗೆದುಕೊ, ಜೋಗಿ,
ಪುರಿಗಡಲೆಯ ಕೊಂಡುಕೊ ಹೋಗಿ!'

ಗೌಡ ಮತ್ತು ಕಿಂದರಿ ಜೋಗಿಯ ಸಂವಾದ ಸುಂದರವಾದುದಾದರೂ ಗೌಡನ ಅಪಹಾಸ್ಯ, ಆಡಿದ ಮಾತನು ಉಳಿಸಿಕೊಳ್ಳದೆ ಪರಿತಪಿಸುವನು. ಜೋಗಿಗೆ ಕೀಳಾಗಿ ಕಾಣುವ ದೃಷ್ಟಿಕೋನ ವ್ಯಕ್ತವಾಗಿದೆ. ಈ ವರ್ತನೆಗೆ ಕೋಪಗೊಂಡ ಜೋಗಿ ಪ್ರತಿಕಾರದ ನುಡಿಗಳನ್ನಾಡುತ್ತಾನೆ.

'ಆಡಿದ ಭಾಷೆಯ ತಪ್ಪುವೆಯ?
ಸಾವಿರ ಆರನು ಕೊಡದಿರೆ ನೀನು
ಮತ್ತೇ ಕಿಂದರಿ ಬಾರಿಸುವೆ!
ನಿಮ್ಮೀ ಹಳ್ಳಿಯನಾರಿಸುವೆ!'

ಗೌಡನ ಮಾತಿಗೆ ಕೋಪಗೊಂಡ ಜೋಗಿ 'ನಿಮ್ಮೀ ಹಳ್ಳಿಯನಾರಿಸುವೆ' ಎಂಬ ಮಾತು ನಾಶವನ್ನು ಸೂಚಿಸುತ್ತದೆ. ತನ್ನ ಅಮೋಘ ಕಿಂದರಿಯನ್ನು ಬಾರಿಸಲು ಪ್ರಾರಂಭಿಸುವನು. ಕಿಂದರಿಯ ನಾದಕ್ಕೆ ಊರಿನ ಮಕ್ಕಳೆಲ್ಲ ಚಂಗ್ ಚಂಗ್ ಎಂದು ಜಿಗಿಯುತ್ತ ಜೋಗಿಯ ಹಿಂದೆ ನಡೆದರು. ನಾದ ಮಾಧುರ್ಯದೊಂದಿಗೆ ಮಕ್ಕಳೆಲ್ಲ ಬಂಡೆಯೊಳಗೆ ಅಡಗುವರು. ಮಕ್ಕಳನ್ನು ಕಳೆದುಕೊಂಡ ಜನರು ಎದೆ ಬಡಿದುಕೊಂಡು ಗೋಳಾಡುವರು. ಗೌಡನ ದೆಸೆಯಿಂದ ನಾವು ಹಾಳಾದೆವು ಎಂದು ಶಪಿಸುವರು. ಹಿನ್ನೆಲೆಯಾಗಿ ಕುವೆಂಪುರವರು ಸತ್ಯವನ್ನು ತಾತ್ವಿಕವಾಗಿ ಅಭಿವ್ಯಕ್ತಗೊಳಿಸುತ್ತಾರೆ.

'ಭಾಷೆಯನ್ನು ಕೊಟ್ಟರೆ, ಮೂರ್ತಿ, ನಾವು
ಮೋಸವ ಮಾಡದೆ ಸಲ್ಲಿಸಬೇಕು,

ಆದುದರಿಂದ, ಮೂರ್ತಿ, ಕೇಳು!
ಸತ್ಯವೆನೆಂದೂ ತ್ಯಜಿಸದೆ ಬಾಳು!'

'ನುಡಿದಂತೆ ನಡೆಯಬೇಕು' ಎಂಬ ದರ್ಶನವನ್ನು ಕುವೆಂಪುರವರು ಮಕ್ಕಳಿಗೆ ಈ ಕಥನ ಕವನದ ಮೂಲಕ ತಿಳಿಸುವ ಬಗೆ ಮಾರ್ಮಿಕವಾದುದು. ನಿರೂಪಣೆಯ ವಿಧಾನ ಅತ್ಯಂತ ಪರಿಣಾಮಕಾರಿಯಾಗಿ ಮೂಡಿದೆ. ಕಥೆಯ ನಡೆ ಮಕ್ಕಳಲ್ಲಿ ಅಚ್ಚರಿ ಮೂಡಿಸುತ್ತ ಹೋಗುತ್ತದೆ. 'ಭಾಷೆಯ ಕೊಟ್ಟರೆ ಮೋಸವ ಮಾಡದೆ ಸಲ್ಲಿಸಬೇಕು' ಎನ್ನುವ ನೀತಿಯನ್ನು ಹೇಳಲು ಕವಿ ಈ ಕಥೆಯನ್ನು ಬಳಸಿಕೊಂಡಿರಬಹುದು. ಕಥೆಯ ತಂತ್ರಗಾರಿಕೆ ದರ್ಶನದಲ್ಲಿ ಸಾರ್ಥಕತೆ ಪಡೆಯುತ್ತದೆ. ಕುವೆಂಪುರವರು ಒಂದೇ ಏಟಿಗೆ ಎರಡು ಹಕ್ಕಿ ಹೊಡೆದಂತೆ, ಮನರಂಜನೆ ಮತ್ತು ತಾತ್ವಿಕ ದರ್ಶನ ಮಾಡಿದ್ದಾರೆ. 'ಆ ಗೌಡ, ಕತೆಯ ಚೌಕಟ್ಟಿನಲ್ಲಿ ನೋಡುವುದಾದರೆ, ಯಾವ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಾನೆಯೋ, ಅದು ಭ್ರಷ್ಟವಾಗಿದೆ. ಆ ಭ್ರಷ್ಟತೆ ಅಭಿವ್ಯಕ್ತವಾಗುವುದು, ಗೌಡ ಕಿಂದರಿಜೋಗಿಗೆ ಕೊಟ್ಟ ವಚನವನ್ನು ತನ್ನ ಪುಢಾರಿತನದ ಉಡಾಫೆಯಿಂದ ತಿರಸ್ಕರಿಸುವುದರಲ್ಲಿ...... ಆ ಊರ ಜನಪ್ರತಿನಿಧಿಯಾದ ಗೌಡ ತನ್ನ ನಯವಂಚಕ ಪ್ರವೃತ್ತಿಯಿಂದ 'ಅಪರಾಧ' ಮಾಡಿದ ಮತ್ತು ಹಾಗೆ ನಡೆದುಕೊಂಡ. ತಮ್ಮ ನಾಯಕನ ವರ್ತನೆಯನ್ನು ಪ್ರಶ್ನಿಸದ ಹಾಗೂ ಒಂದಿಷ್ಟಾದರೂ ಪ್ರತಿಭಟಿಸದ ಆ ಊರ ಜನ ತಮ್ಮ ನಿಷ್ಕ್ರೀಯತೆಯಿಂದಾಗಿ ಒಂದು ರೀತಿಯಲ್ಲಿ ತಾವೂ ಆ ಅಪರಾಧದಲ್ಲಿ ಭಾಗಿಯಾದಂತಾಯಿತು. ಅಲೌಕಿಕ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದ ಕಿಂದರಿ ಜೋಗಿ ಈ ಅಪರಾಧಕ್ಕೆ ತಕ್ಕ ಶಿಕ್ಷೆ ಮಾಡಲು ಹೊರಡುತ್ತಾನೆ'[೧೨೯]. ಇದು ಪ್ರಸ್ತುತ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. 'ಕನ್ನಡ ನಾಡಿನ ಮಕ್ಕಳಿಗೆಲ್ಲ ಏಕಪ್ರಕಾರವಾಗಿ ಪ್ರಿಯವಾಗಿರುವ ಅದು ಪ್ರಕಟವಾದಂದಿನಿಂದ ಶಿಶು–ವಯಸ್ಕರೆನ್ನದೆ ಸರ್ವರಿಗೂ ಆಕರ್ಷಕ ಕೃತಿಯಾಗಿರುವ, ಬೊಮ್ಮನಹಳ್ಳಿಯ ಕಿಂದರಿ ಜೋಗಿಯನ್ನು ಮಕ್ಕಳ ಮಹಾಕಾವ್ಯವೆಂದೇ ಕರೆಯಬಹುದಾಗಿದೆ. ಓದಿದಷ್ಟು ನವೋನವವಾಗಿ ತೋರುತ್ತದೆ'[೧೩೦]. ಒಟ್ಟಿನಲ್ಲಿ ಕಥನ ಕವನ ಆಸಕ್ತಿ ಮೂಡಿಸುವದರೊಂದಿಗೆ ಕುತೂಹಲ ಕೆರಳಿಸುತ್ತದೆ.

ಕಥೆಗಳೆಂದರೆ ಕೇವಲ ಮನರಂಜನೆಗಾಗಿ ಎಂಬ ಅಭಿಪ್ರಾಯವಿದೆ. ಕುವೆಂಪು ಅವರು ಅದನ್ನು ಮೀರಿದ ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ. 'ಉಪಕಾರ ಮಾಡಿದವರಿಗೆ ಅಪಕಾರ ಮಾಡಬಾರದು' ಎಂಬುದು ಕಥೆಯ ಪ್ರಧಾನ ಆಶಯವಾಗಿದೆ. ಕಥೆಯ ಉದ್ದಕ್ಕೂ ಮಲೆನಾಡಿನ ಸೌಂದರ್ಯ ವರ್ಣಿತವಾಗಿದೆ. ಈ ಕಥೆಯಲ್ಲಿ ಗುಬ್ಬಕ್ಕ, ನರಿಯಣ್ಣ, ಕರಡ್ಯೆಣ್ಣ ಮತ್ತು ಹುಲಿಯಣ್ಣಗಳ ಪಾತ್ರಗಳು ಪ್ರಮುಖವಾಗಿ ಸೃಷ್ಟಿಸಿದ್ದಾರೆ. ತೀರ್ಥಹಳ್ಳಿಯ ಕಲ್ಲು ಬೆಟ್ಟದಲ್ಲಿ ಗುಬ್ಬಕ್ಕನ ತುಂಬು ಸಂಸಾರವಿತ್ತು. ಗುಬ್ಬಕ್ಕನು ಮರಿಗಳೊಂದಿಗೆ ಆನಂದದಿಂದ ಜೀವನವನ್ನು ಸಾಗಿಸುತ್ತಿದ್ದಳು. ಈ ಸಂಸಾರದ ಮನೆಯ ಸೊಬಗನ್ನು ಕುವೆಂಪುರವರು ವರ್ಣಿಸಿದ ರೀತಿ ಆಕರ್ಷಕ ಮತ್ತು ರಂಜನೀಯವಾದುದು. 'ಬೆಲ್ಲದ ಗೋಡೆ, ಸಕ್ಕರೆ ಬಾಗಿಲು, ಕಬ್ಬಿಣ ಮುಚ್ಚಿಗೆ, ಮನೆಯ ಅಂಗಳದಲ್ಲಿ ಒಂದು ಪುಟ್ಟ ಸರೋವರ, ಅದರಲ್ಲಿ ನೀರಿಲ್ಲ, ಜೇನು ತುಪ್ಪವಿತ್ತು'. ಈ ವರ್ಣನೆ ಮಕ್ಕಳಲ್ಲಿ ಕುತೂಹಲ

ಕೆರಳಿಸುತ್ತದೆ. ಕಲ್ಪನಾ ಶಕ್ತಿಯನ್ನು ಬೆಳೆಸುತ್ತದೆ. ನರಿ, ಕರಡಿ ಮತ್ತು ಹುಲಿ ಈ ಮೂವರು ಮಳೆಯಲ್ಲಿ ತೊಯ್ದು ಆಸರೆ ಹುಡುಕುತ್ತ ಬರುವರು. ಆಗ ನರಿಯಣ್ಣ ಗುಬ್ಬಚ್ಚಿಯ ಮನೆಯನ್ನು ನೋಡಿ ಬಾಗಿಲು ತೆರೆಯಲು ಹೇಳುತ್ತದೆ. ಅದಕ್ಕೆ ಗುಬ್ಬಚ್ಚಿ ನಿರಾಕರಿಸುತ್ತದೆ. ಆಗ ಹುಲಿಯಣ್ಣ 'ಅಕ್ಕಾ ಗುಬ್ಬಕ್ಕಾ! ನಾನು ಹುಲಿಯಣ್ಣ ಇದ್ದೇನೆ. ದಯವಿಟ್ಟು ಬಾಗಿಲು ತೆರೆ, ನಿನಗೇನೂ ಅಪಾಯ ಬರದಂತೆ ನೋಡಿಕೊಳ್ಳುತ್ತೇನೆ, ಹೇದರಬೇಡ. ನಮ್ಮ ಸಂಗಡ ಸಾಧು ಸಜ್ಜನನಾದ ಕರಡ್ಯಣ್ಣನೂ ಇದ್ದಾನೆ'. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ನರಿಯಣ್ಣಾ ಕೇಳಿದಾಗ ಬಾಗಿಲು ತೆರೆಯದೆ, ಹುಲಿಯಣ್ಣ ಕೇಳಿದಾಗ ಬಾಗಿಲು ತೆರೆಯುವುದು. ಸಜ್ಜನರಿಗೆ ಪ್ರಾಮುಖ್ಯತೆ ಕೊಡುವುದರಿಂದ ಯಾವ ಅಪಾಯವಿಲ್ಲ ಎನ್ನುವುದು ತಿಳಿದುಬರುತ್ತದೆ. ಗುಬ್ಬಚ್ಚಿಯು ಮೂವರಿಗೂ ಆತಿಥ್ಯವನ್ನು ನೀಡಿ ಸ್ವಾಗತಿಸುವ, ಊಟ ಮಾಡಿಸುವ, ಹುಲ್ಲಿನ ಹಾಸಿಗೆಯಲ್ಲಿ ಮಲಗಿಸುವ ಪ್ರಸಂಗ ರಂಜನೀಯವಾಗಿದೆ. ಆಗ ಬೆಲ್ಲದ ಗೋಡೆಯ ಮೇಲೆ ತೂಗು ಹಾಕಿದ್ದ ಮಹಾತ್ಮಾಗಾಂಧಿ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಪಟಗಳನ್ನು ನೋಡಿ ಕರಡ್ಯೆಣ್ಣ ಇವೇಕೆ ಎಂದು ಪ್ರಶ್ನಿಸುತ್ತದೆ. ಅದಕ್ಕೆ ಗುಬ್ಬಕ್ಕ ಹೇಳುತ್ತಾಳೆ, 'ಮಕ್ಕಳು ಈ ಮಹಾಪುರುಷರ ಸನ್ನಿಧಿಯಲ್ಲಿಯೇ ಬೆಳೆದರೆ ಅವರೂ ಮಹಾತ್ಮರಾಗುತ್ತಾರೆ. ಭರತಮಾತೆಯ ಉದ್ಧಾರ ಮಾಡುತ್ತಾರೆ. ಅದಕ್ಕೋಸ್ಕರ ಈ ಪಟಗಳನ್ನು ಇಟ್ಟಿದ್ದೇನೆ. ಅವರಿಗೆ ದಿನವೂ ಅವರ ಕಥೆಗಳನ್ನು ಜೋಗುಳದಂತೆ ಹೇಳುತ್ತೇನೆ. ಹಾಲು ಬೆಣ್ಣೆಗಳಲ್ಲಿ ಅವರ ಮಹಿಮೆಯನ್ನು ಊಡುತ್ತೇನೆ' ಎಂಬ ಮಾತುಗಳು ಆದರ್ಶದ ಗುಣಗಳನ್ನು ಮಕ್ಕಳು ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ರಾತ್ರಿ ನರಿಯಣ್ಣ ಗುಬ್ಬಕ್ಕನ ಮಕ್ಕಳನ್ನು ತಿಂದು ಓಡಿ ಹೋಗಿತ್ತು, ಗುಬ್ಬಕ್ಕ ದುಃಖದಲ್ಲಿ ಮುಳುಗಿರುವಾಗ ಕರಡ್ಯೆಣ್ಣ ಹುಲಿಯಣ್ಣರು ಸಮಾಧಾನ ಪಡಿಸಿ, ನರಿಯಣ್ಣನನ್ನು ಹುಡುಕಿಕೊಂಡು ತರುವರು. ಹುಲಿ ನರಿಯ ಹೊಟ್ಟೆಯನ್ನು ಸೀಳಿ ಮರಿಗಳನ್ನು ತೆಗೆಯುವ ಉಪಾಯ ಹೇಳುತ್ತದೆ. ಆದರೆ ಗುಬ್ಬಕ್ಕ ಅದಕ್ಕೆ ಆಸ್ಪದ ಕೊಡುವುದಿಲ್ಲ. 'ದುಷ್ಟರಿಗೆ ಶಿಕ್ಷೆ ಆಗಬೇಕು ಸರಿ. ಆದರೆ ಹಿಂಸೆಯಿಂದ ಮಾತ್ರವಲ್ಲ. ಅದು ಅಹಿಂಸೆಯಿಂದ ಕೂಡಿರಬೇಕೆಂಬ ತಾತ್ವಿಕತೆ ಇಲ್ಲಿದೆ'. ಗುಬ್ಬಕ್ಕನಲ್ಲಿ ಮಾತೃ ಹೃದಯವಿದೆ, ಸಂಸ್ಕಾರದ ನೀತಿಪರ ಚಿಂತನವಿದೆ, ಉಪಕಾರ ಗುಣದ, ಅತಿಥಿ ಸತ್ಕಾರದ ಆದರ್ಶ ಗೃಹಿಣಿಯಾಗಿದ್ದಾಳೆ, ಕಪಟ ಬುದ್ಧಿಯ ನರಿಯಣ್ಣನನ್ನು ಹುಲಿ ಹಿಡಿದುಕೊಳ್ಳುವುದು, ಕರಡ್ಯೆಣ್ಣ ಜೋರಾಗಿ ನರಿಯ ಬೆನ್ನಿಗೆ ಗುದ್ದಿತು. ಮೂರು ಮರಿಗಳು ಬಾಯಿಯಿಂದ ಹೊರಬಂದವಂತೆ. 'ಗುಬ್ಬಕ್ಕ ಮರಿಗಳನ್ನು ಎತ್ತಿಕೊಂಡು ಹರ್ಷದಿಂದ ಹೋದಳು. ತನ್ನ ಮರಿಗೆ ಸ್ನಾನಮಾಡಿಸಿ, ಉಣಲಿಕ್ಕಿ ಮಲಗಿಸಲು, ಹುಲಿಯಣ್ಣನು ನರಿಯಣ್ಣನಿಗಿದ್ದ ಎರಡು ಕೋಡುಗಳನ್ನು ಶಿಕ್ಷೆಗಾಗಿ ಮುರಿದನು. ಕರಡ್ಯೆಣ್ಣನು ಇನ್ನೂ ಮೇಲೆ ನಿನ್ನ ಜಾತಿಗೆ ಕೋಡುಗಳಿರದೆ ಹೋಗಲಿ' ಎಂದು ಶಾಪ ಕೊಟ್ಟನು. ಅಂದಿನಿಂದ ನರಿಯ ಜಾತಿಗೆ ಕೋಡುಗಳಿಲ್ಲ. 'ಗುಬ್ಬಕ್ಕನ ಮಾನವೀಯತೆಗಳು, ಹುಲಿಯಣ್ಣ ಕರಡ್ಯೆಣ್ಣರ ನ್ಯಾಯಪರ ಬುದ್ಧಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಕೋಡು ಮುರಿಯುವುದು ಪಾಪದ, ನೀಚತನದ, ಅಪಕಾರದ ಸಂಕೇತವಾಗಿ ಬಳಸಲ್ಪಟ್ಟಿರುವುದು

ಕುವೆಂಪುರವರ ಅನನ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಹೀಗಾಗಿ ಅವರು ಒಬ್ಬ ಮಹಾ ಮಾನವತಾವಾದಿಯಾಗಿ ಕಂಗೋಳಿಸುವುದು ಮಕ್ಕಳ ಸಾಹಿತ್ಯದಲ್ಲಿ.

ಮಕ್ಕಳ ನಾಟಕಗಳು ಸರಳ ಭಾಷೆಯ-ಭಾವನೆಗಳ ರಂಜನೆಯ ಅಭಿವ್ಯಕ್ತಿಯನ್ನು ಹೊಂದಿರಬೇಕೆಂದು ಕುವೆಂಪು ಅವರ ಉದ್ದೇಶ. ಮಕ್ಕಳ ಮುಗ್ಧತೆಯ ಜೊತೆಗೆ ಭಕ್ತಿ ಮತ್ತು ಮಾನವ ಪ್ರೀತಿ ಬೆಳೆಸಿಕೊಳ್ಳಲು ಸಹಕಾರಿಯಾಗುವ ಗುಣವಿರಬೇಕು. ಕುವೆಂಪು ಅವರ 'ನನ್ನ ಗೋಪಾಲ' ಮೃದುಭಾವಗಳಿಂದ ತುಂಬಿದ ಹೃದಯಸ್ಪರ್ಶಿ ಕೃತಿ. ಇದು ಮಕ್ಕಳ ನಾಟಕವಾದರೂ ಒಳಹೊಕ್ಕು ನೋಡಿದರೆ ದೈವತ್ವದ ಚಿತ್ರಣ ವ್ಯಕ್ತಗೊಳ್ಳುತ್ತದೆ. ವಿಶಾಲವಾದ ಅರ್ಥದೊಂದಿಗೆ, ನಿಷ್ಠೆಯ ಭಕ್ತಿಗೆ ಭಗವಂತನು ಒಲಿಯುವನು ಎಂಬ ತಾತ್ವಿಕತೆಯ ಮೇಲೆ 'ನನ್ನ ಗೋಪಾಲ' ನಿಂತಿದೆ. ಒಂಭತ್ತು ದೃಶ್ಯಗಳಿಂದ ಕೂಡಿದ ಈ ನಾಟಕದಲ್ಲಿ ಕುವೆಂಪು ಅವರು ಗೋಪಾಲನ ಮುಗ್ಧ ಮನಸ್ಸು ಮತ್ತು ವಿಧವೆಯಾದ ಗೋಪಾಲನ ತಾಯಿಯ ದೈವಭಕ್ತಿಯನ್ನು ಸುಂದರವಾಗಿ ಅಭಿವ್ಯಕ್ತಗೊಳಿಸಿದ್ದಾರೆ.

'ಗೋಪಾಲನ ತಾಯಿ ವಿಧವೆ ಮತ್ತು ಬಲು ಬಡವಿ'. ತನ್ನ ಒಬ್ಬನೇ ಮಗನಾದ ಗೋಪಾಲನಿಗಾಗಿ ಭಗವಂತನನ್ನು ಅತ್ಯಂತ ಶ್ರದ್ಧೆ-ಭಕ್ತಿಗಳಿಂದ ಒಲಿಸಿಕೊಳ್ಳುವ ತಾಯಿಯ ಕರುಣಾಮಯ ದೃಶ್ಯ ಒಂದೆಡೆಯಾದರೆ, ತಾಯಿಯ ಮಾತಿನಲ್ಲಿ ನಂಬಿಕೆಯನ್ನಿಟ್ಟು ತನ್ನ ಮುಗ್ಧ ಭಕ್ತಿಯಿಂದ ಬನದ ಗೋಪಾಲನನ್ನು ಒಲಿಸಿಕೊಳ್ಳುವ ಮುಗ್ಧ ಗೋಪಾಲನ ಭಕ್ತಿ ಇನ್ನೊಂದೆಡೆ ಹೃದಯಸ್ಪರ್ಶಿಯಾಗಿ ವ್ಯಕ್ತಗೊಂಡಿದೆ. ತಾಯಿಯು ಗೋಪಾಲನಿಗೆ ಬೇಗನೆ ಶಾಲೆಗೆ ಹೋಗಲು ಹೇಳುವಲ್ಲಿ ಕುವೆಂಪುರವರು ಸಮಯ ಪ್ರಜ್ಞೆಯನ್ನು ತಿಳಿಸಿದಂತಿದೆ.

'ಹೂಗಳನ್ನು ಅಲ್ಲಿಟ್ಟು ನೀನು ಶಾಲೆಗೆ ಹೋಗು. ಹೊತ್ತಾಗಿ ಹೋದರೆ ಗುರುಗಳು ನೊಂದುಕೊಳ್ಳುತ್ತಾರೆ. ನಿನಗಾಗಿ ಗಂಜಿ ಮಾಡಿಟ್ಟಿದ್ದೇನೆ' ಎಂದಾಗ ಗೋಪಾಲನು;

'ಆಗಲಮ್ಮ, ಹೋಗುತ್ತೇನೆ. ಅಮ್ಮ, ನಾನು ಬರುವಾಗ ಕಾಡು ದಾಟಿ ಬರಬೇಕು. ಬೈಗಿನ ಹೊತ್ತು ನನಗಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ, ಜೊತೆಗೆ ಯಾರಾದರೂ ಬೇಕಮ್ಮ, ನೆರೆಯೂರಿನಿಂದ ಬರುವ ಹುಡುಗರಿಗೆ ಜೊತೆಯಾಗಿ ಆಳುಗಳಿರುವರಮ್ಮ. ರಾಮು, ಕಿಟ್ಟಿ, ನಾಣಿ, ಮಾಧು ಇವರೆಲ್ಲರಿಗೂ ಒಬ್ಬೊಬ್ಬ ಆಳು. ನನಗೆ ಮಾತ್ರ ಯಾರೂ ಇಲ್ಲ' ಎನ್ನುವನು. ತಾಯಿ ತನ್ನ ಬಡತನದ ಅರಿವಾದರೂ ತೋರಗೊಡದೆ ಕೃಷ್ಣನನ್ನು ಪ್ರಾರ್ಥಿಸಿಕೊಳ್ಳುವಳು. 'ನನ್ನ ನಂಬಿದವರನ್ನು ಕಾಪಾಡಬಲ್ಲೆ' ಎಂದು ವಾಣಿಯೊಂದು ಕೇಳಿಸಿದಾಗ ಸಮಾಧಾನಗೊಳ್ಳುವಳು. ಆಗ ಗೋಪಾಲನು ಶಾಲೆಗೆ ಹೋಗುವ ಮಧ್ಯೆ ಕಾಡುಯಿರುವುದರಿಂದ ಒಬ್ಬನೆ ಹೋಗಲು ಭಯವಾಗುತ್ತದೆ ಎಂದಾಗ,

'ನೀನು ಶಾಲೆಯಿಂದ ಬರುವಾಗ ಕಾಡಿನಲ್ಲಿ ಹೆದರಿಕೆಯಾದರೆ ಗೋಪಾಲನನ್ನು ಕೂಗು, ಬರುತ್ತಾನೆ' ಎನ್ನುವಳು. ಗೋಪಾಲನು ಮುಗ್ಧ ಭಾವದಿಂದ 'ಯಾರಮ್ಮ ಅವನು?'.

'ನಿನ್ನಣ್ಣ, ನನ್ನ ಹಿರಿಯ ಮಗ ಕಾಡಿನಲ್ಲಿರುವನು. ಯಾವಾಗಲೂ ದನ ಕಾಯುತ್ತ ಇರುವನು. ನೀನು ಕರೆದರೆ ಬಂದು ನಿನ್ನನ್ನು ಕಾಡು ದಾಟಿಸುತ್ತಾನೆ' ಎಂದು ಗೋಪಾಲನನ್ನು ಧೈರ್ಯದಿಂದ ಶಾಲೆಗೆ ಹೋಗಿಬರಲು ಹೇಳುವಳು. 'ಅಮ್ಮ ಅವನಿಗೆ ನನ್ನ ಗುರುತಿದೆಯೆ? ಎನ್ನುವ ಮಾತುಗಳು ಮಗುವಿನ ಭಾವವನ್ನು ತಿಳಿಸಿ ಮಂತ್ರಮುಗ್ಧರನ್ನಾಗಿಸುತ್ತವೆ.

'ನನ್ನ ಭಕ್ತಿಗೆ ಬಲವಿಲ್ಲವೆಂದು ಕೋಪ ಮಾಡಬೇಡ, ಗೋಪಾಲ' ಎಂದು ತಾಯಿ ಹೇಳುವ ಮಾತುಗಳಲ್ಲಿ ಆತ್ಮವಿಶ್ವಾಸ ಭಕ್ತಿ ವ್ಯಕ್ತಗೊಂಡಿದೆ. ಅವನಲ್ಲಿ ಶ್ರದ್ಧಾ-ಭಕ್ತಿಯಿಂದ ನಡೆದುಕೊಳ್ಳಬೇಕೆಂದು ಮಗನಿಗೆ ಹೇಳಿ ಕಳುಹಿಸಿಕೊಡುತ್ತಾಳೆ. ತಾಯಿಯ ಮಾತಿನಂತೆ, ಗೋಪಾಲನು ಶಾಲೆಗೆ ಹೋಗಿ ಮರಳಿ ಮನೆಗೆ ಬರುವಾಗ ಕಾಡಿನ ಮಧ್ಯೆ ಭಯವಾಗುತ್ತದೆ. ಆಗ ತಾಯಿ ಹೇಳಿದ ಮಾತು ನೆನಪಾಗುತ್ತದೆ.

'ಅಣ್ಣಾ, ಅಣ್ಣಾ! ಏ ಅಣ್ಣಾ! ನನಗೆ ಹೆದರಿಕೆ ಅಣ್ಣಾ, ಕತ್ತಲಾಗುತ್ತಿದೆ. ಎಲ್ಲಿದ್ದೀಯಣ್ಣಾ, ಏ ಗೋಪಾಲಣ್ಣಾ!' ಬೇಗನೆ ಬಾ, ಹೆದರಿಕೆಯಾದರೆ ಅಮ್ಮ ನಿನ್ನನ್ನು ಕರೆಯಲು ಹೇಳಿರುವಳು ಎಂದಾಗ, ಮಗುವಿನ ಮುಗ್ಧ ಭಾವ ಅರಳುತ್ತದೆ. ತಾಯಿ ಹೇಳಿದ ರೀತಿಯಲ್ಲಿ ಬನದ ಗೋಪಾಲನ ದರ್ಶನವಾಗುತ್ತದೆ. ನಿತ್ಯವೂ ಆಟವಾಡುತ್ತ ಸಮಯ ಕಳೆದು ಬರುತ್ತಾನೆ. ತಾಯಿಗೆ ತಾನು ಕಂಡ ಅಣ್ಣನ ರೂಪವನ್ನು ವರ್ಣಿಸಿ ಹೇಳುತ್ತಾನೆ. ಕೃಷ್ಣನ ರೂಪ ಮನಮೋಹಕವಾದುದು. ವೇಣುಗೋಪಾಲನ ವಿಗ್ರಹಕ್ಕೆ ತಾಯಿ ಹಾಕಿದ ಹೂವಿನ ಮಾಲೆಯಂತೆ ಆತನ ಕೊರಳಲ್ಲಿರುವುದು ಎಂದು ತಿಳಿಸುತ್ತಾನೆ. ಈ ಎಲ್ಲ ವಿಷಯಗಳನ್ನು ತಾಯಿಯ ಮುಂದೆ ಹೇಳುತ್ತಾನೆ. ತಾಯಿ ಸಂತಸ-ಸಂಭ್ರಮದಿಂದ; 'ಪುಣ್ಯವಂತನು ನೀನು, ಮಗನೆ, ನಿನ್ನನ್ನು ಹೆತ್ತವಳು ನಾನೂ ಧನ್ಯಳಾದೆ. ನನ್ನ ಬಡತನವಿಂದು ಮರೆಯಾಯತು. ನನ್ನ ವೈಧವ್ಯವಿಂದು ಅಳಿದು ಹೊಯ್ತು. ಇನ್ನೆನ್ನ ಭಾಗ್ಯಕ್ಕೆ ಎಣೆಯಿಲ್ಲ. ಕಂದಾ ನಿನ್ನಣ್ಣ ಗೋಪಾಲನನ್ನು ಕಂಡೆಯಾ? ಅವನು ಹೇಗಿದ್ದ'? ಎಂದು ಸಂತೋಷಪಡುವಳು. ಮರುದಿನ ಬನದ ಗೋಪಾಲನಿಗಾಗಿ ತಾಯಿ ಅವಲಕ್ಕಿ ಮೊಸರು ಕೊಟ್ಟು ಕಳುಹಿಸುವಳು. ಗೋಪಾಲನು ಕಾಡಿನ ಮಧ್ಯೆ ಬನದ ಗೋಪಾಲನನ್ನು ಮತ್ತೆ ಕರೆಯುತ್ತಾನೆ. 'ಆಗ ಬನದ ಗೋಪಾಲ' ನನಗೆ ತುಂಬಾ ಕೆಲಸವಿದೆ. ನೀನು ಶಾಲೆಗೆ ಹೋಗಿ ಬಾ' ಎನ್ನುವನು. ಬಾಲಕ ಹಟಮಾಡಿ ಹೇಳುವನು. 'ಅದಾಗದು, ನೀನು ಬರಲೇ ಬೇಕು. ದಿನವೂ ಕೆಲಸವಿದೆ, ಕೆಲಸವಿದೆ ಎನ್ನುವೆ! ಏನು ಕೆಲಸ? ನೀನು ಹೊರಗೆ ಬರದ ಹೊರತು ನಾನು ಹೋಗುವುದಿಲ್ಲ. ಎಂದಾಗ ಬನದ ಗೋಪಾಲ ಬರುತ್ತಾನೆ. ಅವನ ತಲೆಯ ಮೇಲೆ ಸಣ್ಣ ಕಿರೀಟ, ನವಿಲುಗರಿ, ಕೈಯಲ್ಲೊಂದು

ಕೊಳಲು, ಕೊರಳಲ್ಲಿ ಹಾರ ಮತ್ತು ನೊಸಲಲ್ಲಿ ಗಂಧ, ಇವೆಲ್ಲವನ್ನು ಧರಿಸಿದ ಗೋಪಾಲನನ್ನು ನೋಡಿದ. ಈತ ತನ್ನ ತಾಯಿ ಕೃಷ್ಣನ ಮೂರ್ತಿಗೆ ಅಲಂಕರಿಸಿದ ರೀತಿಯಲ್ಲಿದ್ದುದು ಕಂಡು ಅಚ್ಚರಿಪಡುತ್ತಾನೆ. ಕುತೂಹಲದಿಂದ ಪ್ರಶ್ನೆಗಳನ್ನು ಕೇಳುತ್ತಾನೆ.

'ಅಣ್ಣಾ, ನಿನಗೆ ಈ ಹಾರ ಯಾರು ಕೊಟ್ಟರು?'

'ಅಣ್ಣಾ, ಈ ನವಿಲು ಗರಿ ಎಲ್ಲಿ ಸಿಕ್ಕಿತು ನಿನಗೆ?'

ಈ ಎಲ್ಲ ಸಂಗತಿಗಳನ್ನು ತಾಯಿಯ ಮುಂದೆ ವಿವರವಾಗಿ ತಿಳಿಸುತ್ತಾನೆ. ಇದರಿಂದ ಆ ತಾಯಿಗೆ ಗೋಚರವಾಗುತ್ತದೆ. ಆತನೇ ಕೃಷ್ಣನೆಂಬುದು. ಆದರೆ ಬನದ ಗೋಪಾಲನನ್ನು ನೋಡುವ ಗೋಜಿಗೆ ಹೋಗುವುದಿಲ್ಲ. ಅವನನ್ನು ಕಂಡ ತನ್ನ ಮುದ್ದು ಗೋಪಾಲನಿಗೆ ಮುದ್ದು ಮಾಡುವಳು. ಅವನೇ ಇವನೆಂದು ಅಪ್ಪಿ ಆನಂದಪಡುವಳು. ಅವಳ ಕೃಷ್ಣನ ಭಕ್ತಿ ಮತ್ತಷ್ಟು ಹೆಚ್ಚುವದು. ಮಗನನ್ನು ಭಗವಂತನ ರೂಪದಲ್ಲಿ ದರ್ಶನ ಮಾಡುವ ಕುವೆಂಪು ಅವರ ಅಭಿವ್ಯಕ್ತಿ ಮಕ್ಕಳ ಮನದಲ್ಲಿ ಉಳಿಯುವಂತಹದ್ದು. ಇಲ್ಲಿಯ ತಾಯಿ-ಮಗನ ಸಂವಾದ, ನಾಡಿನ ಗೋಪಾಲ, ಕಾಡಿನ ಗೋಪಾಲರ ಸಂವಾದ ಅರ್ಥಪೂರ್ಣವಾಗಿ ಅನಾವರಣಗೊಂಡಿದೆ. ಕುವೆಂಪುರವರು ವಿಭಿನ್ನವಾಗಿ ಚಿತ್ರಿಸಿದ್ದು ಗಮನ ಸೆಳೆಯುತ್ತದೆ. ಬನದ ಗೋಪಾಲನಿಗೆ ಭಯವಾಗುವುದಿಲ್ಲವೆ ಎಂದು ಮಗು ತಾಯಿಗೆ ಕೇಳಿದಾಗ ಆಕೆ ಹೇಳುವಳು. 'ಆತ ದನಗಾಹಿ ಮತ್ತು ಭೀತಿಯಿಲ್ಲದ ಸರ್ವಗೋಪಾಲ' ಎಂಬುದು ಕೃಷ್ಣನ ಪ್ರತಿಮಾ ವಿಧಾನ ಅಭಿವ್ಯಕ್ತಗೊಂಡಿದೆ. ತಾಯಿ ನಿನ್ನನ್ನು ಮನೆಗೆ ಬರಲು ಹೇಳಿರುವಳು, ಬಾ ಎಂದು ಬನದ ಗೋಪಾಲನಿಗೆ ಕೇಳಿದರೆ ಆತ ನಿರಾಕರಿಸಿ ಹೀಗೆ ಹೇಳುತ್ತಾನೆ.

'ತಿಳಿವಳಿಕೆಗೆ ನಾ ಸಿಲುಕೇ ಮನುಜಾ
ಒಲುಮೆಗೆ ಸೆರೆಯಾಗುವೆನು
ತಪಸಿಗಳೆನ್ನನು ಜ್ಞಾನದಿ ಮುಟ್ಟಲು
ಯುಗಯುಗಗಳು ಬಲು ಬಳಲುವರು
ಯೋಗಿಗಳೆನ್ನನು ಜನುಮ ಜನುಮದಲಿ
ಹೊಂದಲು ಸಾಧನೆ ಮಾಡುವರು,
ಕಡಲಿನ ಬಿತ್ತರ ಸಾಲದು ಪವಡಿಸೆ
ಭಕ್ತಿಯ ಕಂಬನಿ ಮನೆ ಎನಗೆ
ಹಿಮಗಿರಿ ಎತ್ತರ ಸಾಲದು ನಾನಿರೆ
ಭಕ್ತನ ಹೃದಯವು ಸಾಕೆನಗೆ'. **– ನನ್ನ ಗೋಪಾಲ**

ತನ್ನನ್ನು ಯಾರು ನಂಬಿ ಪ್ರೀತಿಯಿಂದ ಕರೆಯುವರೋ ಅವರಿಗೆ ಭಗವಂತ ಕಾಣುತ್ತಾನೆ. ಅವನಿಗೆ ಮೇಲು-ಕೀಳು, ಬಡವ-ಬಲ್ಲಿದರೆಂಬ ಭೇದವಿಲ್ಲ. ತಾಯಿಯ ಭಕ್ತಿ ಹಾಗೂ ಗೋಪಾಲನ ನಂಬಿಕೆ ದೇವನೊಲುಮೆಗೆ ಕಾರಣ ಎನ್ನುವಲ್ಲಿ ದೇವತತ್ವವನ್ನು ಅಭಿವ್ಯಕ್ತಿಸುತ್ತದೆ. ನನ್ನ ಪಾಲಿಗೆ 'ನೀನೆ ಅವನು, ಅವನೇ ನೀನು' ಎಂದು ತನ್ನ

ಮಗುವಿನಲ್ಲಿಯೇ ದೇವನನ್ನು ಕಾಣುವ ತಾಯಿ ಶ್ರೇಷ್ಠವೆಂದು ಕುವೆಂಪು ಅವರೇ ಹೇಳುವರು. 'ಕಂದನಲಿ ಶಿವನ ಕಾಣುವ ಬಂಧನವೇ ಮುಕ್ತಿ' ಎಂದು.

ಒಮ್ಮೆ ಗುರುಗಳ ಮನೆಯಲ್ಲಿ ಕಾರ್ಯಕ್ರಮವಿರುತ್ತದೆ. ನಿಮ್ಮ ನಿಮ್ಮ ಕೈಲಾದ ದಕ್ಷಿಣೆ ತಂದುಕೊಡುವಂತೆ ಎಲ್ಲಾ ಶಿಷ್ಯರಿಗೆ ಹೇಳುತ್ತಾರೆ. ಗೋಪಾಲನು ತನ್ನ ತಾಯಿಗೆ ಬಂದು ಹೇಳುತ್ತಾನೆ. ಅದಕ್ಕೆ ತಾಯಿಯು ನಮ್ಮ ಹತ್ತಿರ ಏನೂ ಕೊಡಲು ಇಲ್ಲ. ನಿನ್ನಣ್ಣ ಕೇಳು ಏನಾದರೂ ಕೊಡುತ್ತಾನೆ ಎಂದು ಹೇಳಿ ಕಳುಹಿಸುತ್ತಾಳೆ. ಆಗ ಬಾಲಕ ಗೋಪಾಲ, ಬನದ ಗೋಪಾಲನ ಕಡೆ ಹೋಗಿ, 'ಅಣ್ಣಾ, ಇಂದು ಗುರುದಕ್ಷಿಣೆ ಕೊಡಬೇಕಾಗಿದೆ. ಅಮ್ಮನನ್ನು ಕೇಳಿದೆ. ನಿನ್ನನ್ನೇ ಕೇಳು ಎಂದಳು. ಏನಾದರೂ ಕೊಡಣ್ಣ', ಎಂದಾಗ ಬನದ ಗೋಪಾಲನು ಹೇಳುವ ಮಾತುಗಳು ಆಶ್ಚರ್ಯ ಮೂಡಿಸುತ್ತವೆ. 'ತಮ್ಮ ನಾನೇನು ಐಶ್ವರ್ಯವಂತನಲ್ಲ. ದನ ಕಾಯುವ ಬಡ ಹುಡುಗ ಸ್ವಲ್ಪ ಮೊಸರು ಕೊಡುತ್ತೇನೆ, ತೆಗೆದುಕೊಂಡು ಹೋಗು' ಎನ್ನುವನು. ಸಾಕ್ಷಾತ್ ಕೃಷ್ಣನಾದ ಗೋಪಾಲನು ಮನಸ್ಸು ಮಾಡಿದ್ದರೆ ಬೇಕಾದಂತಹ ಕಾಣಿಕೆಯನ್ನು ಕೊಡಬಹುದಿತ್ತು. ಆದರೆ ಮಣ್ಣಿನ ಕುಡಿಕೆಯಲ್ಲಿ ಮೊಸರನ್ನು ಕೊಟ್ಟಿದ್ದು ಗಮನಿಸಬೇಕಾದ ಸಂಗತಿಯಾಗಿದೆ. ಶಾಲೆಯ ಎಲ್ಲ ಹುಡುಗರು ಬೆಲೆಬಾಳುವ ವಸ್ತುಗಳನ್ನು ಗುರುಗಳಿಗೆ ಕೊಡಲು ದಕ್ಷಿಣೆಯಾಗಿ ತಂದು ತೋರಿಸುತ್ತಾರೆ. ಗೋಪಾಲನು ತಂದ ಮಣ್ಣಿನ ಕುಡಿಕೆಯನ್ನು ನೋಡಿ ಎಲ್ಲರೂ ಅಪಹಾಸ್ಯ ಮಾಡುತ್ತಾರೆ. ಗುರುಗಳಿಗೆ ತಮ್ಮ ಕಾಣಿಕೆಗಳನ್ನು ಕೊಟ್ಟು ಆಶೀರ್ವಾದ ಪಡೆಯುತ್ತಾರೆ. ಆಗ ಗುರುಗಳು; 'ಗೋಪಾಲ, ಅದೇಕೆ ದೂರ ನಿಂತಿದ್ದೀಯಾ? ಬಾ, ಏನು ತಂದಿದ್ದೀಯ ಕೊಡು' ಎಂದಾಗ ಎಲ್ಲ ಬಾಲಕರು ನಗುವರು. ಹೀಗೆ ಅಪಹಾಸ್ಯ ಮಾಡಬಾರದೆಂದು ಬುದ್ಧಿಮಾತು ಹೇಳುವರು.

'ನಗುವುದೇಕೆ ಮಕ್ಕಳಿರಾ? ಗುರುಗಳಿಗೆ ಪ್ರೀತಿಯಿಂದ ಭಕ್ತಿಪೂರ್ವಕವಾಗಿ ಏನು ಕೊಟ್ಟರೂ ಅದು ಮಹತ್ವವಾದುದು. ನನಗೆ ಬೇಕಾಗಿರುವುದು ಬೆಲೆಯುಳ್ಳ ದಕ್ಷಿಣೆಯಲ್ಲ. ಅದು ಕೊಡುವವನ ಹೃದಯದಲ್ಲಿನ ಭಕ್ತಿ. ಬಾ ಗೋಪಾಲ. ನೀನು ತಂದಿರುವುದನ್ನು ಕೊಡು, ನಾಚಿಕೆಯಾಕೆ' ಎಂದು ಗೋಪಾಲನು ತಂದ ಕುಡಿಕೆಯನ್ನು ಕೊಟ್ಟು ಗುರುಗಳಿಂದ ಆಶೀರ್ವಾದ ಪಡೆಯುತ್ತಾನೆ. ಇಲ್ಲಿನ ಗುರುಗಳ ಮನೋಭಾವ ಉದಾತ್ತವಾದುದು. ಆದರ್ಶವನ್ನು ಬಿಂಬಿಸುತ್ತದೆ. ಗುರುಗಳು ಕುಡಿಕೆಯಲ್ಲಿದ್ದ ಮೊಸರನ್ನು ಸುರಿದುಕೊಂಡರೂ ಕುಡಿಕೆಯಲ್ಲಿಯ ಮೊಸರು ಅಕ್ಷಯವಾಗಿದ್ದುದನ್ನು ನೋಡಿ ಆಶ್ಚರ್ಯಪಡುತ್ತಾರೆ. 'ಇದಕ್ಕೆ ಕಾರಣವನ್ನರಿತ ಗುರುಗಳು, ತಾವೂ ಬನದ ಗೋಪಾಲನನ್ನು ನೋಡಲು ಬರುತ್ತಾರೆ. ಬಾಲಕ ಗೋಪಾಲ ಗುರುಗಳಿಗೆ ದರ್ಶನ ಮಾಡಲು ಬನದ ಗೋಪಾಲನಿಗೆ ಕೇಳಿಕೊಳ್ಳುವನು. ಈ ಸಮಯದಲ್ಲಿ ಬನದ ಗೋಪಾಲನು ಆಡುವ ಮಾತುಗಳು ಹೃದಯ ಸ್ಪರ್ಶಿಯಾಗಿ ಗುರುಗಳ ಕಣ್ಣು ತೆರೆಸುತ್ತವೆ. ಬನದ ಗೋಪಾಲ ತಮ್ಮನನ್ನು ಕುರಿತು; ತಮ್ಮಾ, ಗೋಪಾಲ, ನಿನ್ನ ತಾಯಿಯ ಭಕ್ತಿ, ನಿನ್ನೊಳ್ಮೆಗಳಿಗೆ ಮೆಚ್ಚಿ ನಿನಗೆ ಕಾಣಿಸಿಕೊಂಡು ನಿನ್ನೊಡನೆ

ಆಟವಾಡುತ್ತೇನೆ. ನಿಮ್ಮ ಗುರುಗಳಿಗೆ ಹೇಳು; ನನ್ನನ್ನು ನೋಡುವ ಕಾಲ ಅವರಿಗಿನ್ನು ಬಂದಿಲ್ಲ. ಅವರಿನ್ನೂ ಬಹುಕಾಲ ಕಾಯಬೇಕು ಎಂದು ಉತ್ತರ ಬಂದಾಗ ಗೋಪಾಲನು ದುಃಖದಿಂದ ಗುರುಗಳ ಕಡೆ ನೋಡುತ್ತಾನೆ. ಅದಕ್ಕೆ ಗುರುಗಳು ನಿನ್ನನ್ನು ಪಡೆದ ತಾಯಿ ಧನ್ಯಳು. ನಿನ್ನನ್ನು ನೋಡಿದರೆ ಆ ಗೋಪಾಲನೇ ಕಂಡಂತೆ ಎಂದು ಅಪ್ಪಿಕೊಂಡು ಆನಂದಿಸುವರು. ನಿರ್ಮಲವಾದ ಮನಸ್ಸು ಮತ್ತು ಭಕ್ತಿಗೆ ಭಗವಂತನು ಮೆಚ್ಚುವನು, ಎಂಬ ತತ್ವ ಪ್ರಧಾನವಾಗಿ ಮೂಡಿದೆ.

ಈ ನಾಟಕದ ಕೆಲವು ವಿಭಿನ್ನತೆಗಳು ಭಕ್ತಿಯಲ್ಲಿ ವ್ಯಕ್ತಗೊಂಡಿವೆ. ಗುರುಗಳಿಗೆ ಮೊಸರು ಅಕ್ಷಯವಾದಾಗ ಭಗವಂತ ಗೋಪಾಲನಿಗೆ ಕಾಣಿಸಿಕೊಂಡಿದ್ದಾನೆ ಎಂಬ ಅರಿವಿನಿಂದ ತಕ್ಷಣ ತಾನೂ ಅವನನ್ನು ನೋಡಬೇಕೆಂಬ ಆಶೆ ದೃಢಗೊಳ್ಳುತ್ತದೆ. ಆದರೆ ತನಗೆ ಭಗವಂತನನ್ನು ನೋಡುವ ಶಕ್ತಿ ಇದೆಯೇ, ಭಕ್ತಿಯಿದೆಯೇ, ತಾನು ಅವನ ಎತ್ತರಕ್ಕೆ ತಲುಪಲು ಸಾಧ್ಯವೆ ಎಂಬ ಸಹಜವಾದ ಅರಿವು ಗುರುಗಳಿಗೆ ಬರದಿರುವುದು ಒಂದು ದುರಂತ. ಮುಗ್ಧ ಶಿಶುವಿಗೆ ಒಲಿದ ಭಗವಂತ ತನಗೂ ಒಲಿದುಬಿಡುತ್ತಾನೆ ಎಂಬ ಭ್ರಮೆ ಅವರದು. ಬನದ ಗೋಪಾಲನೇ ವ್ಯಕ್ತಗೊಳಿಸಿದಾಗ ತನ್ನತನದ ಅರಿವು ಮೂಡುತ್ತದೆ. ಭಕ್ತಿಯ ಸಾಧಕಳಾದ ತಾಯಿ, ತನ್ನ ಮಗು ದೇವರನ್ನು ಕಂಡಾಗಲೂ ತಾನೂ ಭಗವಂತನನ್ನು ಕಾಣುವ ಹಂಬಲ ವ್ಯಕ್ತಪಡಿಸುವುದಿಲ್ಲ. ತನ್ನ ಮಗುವೇ ದೇವರೆಂದು ತಿಳಿದುಕೊಳ್ಳುವ ಭಕ್ತಿಯ ಪರಾಕಾಷ್ಠೆ, ಸೋಜಿಗ ಮೂಡುತ್ತದೆ.

ಈ ನಾಟಕದ ತುಂಬ ತಾಯಿ-ಮಕ್ಕಳ ಮಧುರ ಪ್ರೇಮ, ವಾತ್ಸಲ್ಯ; ಬನದ ಗೋಪಾಲ ಮತ್ತು ಮನೆಯ ಮುಗ್ಧ ಗೋಪಾಲ ಈ ಇಬ್ಬರ ಸಂಭಾಷಣೆ; ಪ್ರಕೃತಿ ಸೌಂದರ್ಯ, ಕೃಷ್ಣನ ಕೊಳಲಿನ ನಾದ ಮಾಧುರ್ಯ, ಕೃಷ್ಣಭಕ್ತಿ, ಉದಾತ್ತ ತಾಯಿಯ ಚಿತ್ರಣ, ಮುಗ್ಧ ಭಕ್ತಿ ಮೊದಲಾದ ವರ್ಣನೆಗಳು ದೇವತತ್ವದ ನೆಲೆಯಾಗಿ ಅಭಿವ್ಯಕ್ತಗೊಂಡು ಮಕ್ಕಳಿಗೆ ಹಿತವನ್ನು ನೀಡಿ ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಈ ಕೃತಿ ಶಿಶು ಸಾಹಿತ್ಯಕ್ಕೆ ಕುವೆಂಪು ಅವರು ಸಲ್ಲಿಸಿದ ಅಪೂರ್ವ ಕಾಣಿಕೆಯಾಗಿದೆ.

ಮಕ್ಕಳಿಗೆ ಅನುಕರಣ ಕಲೆ ಸಹಜವಾದುದು. ನಾಟಕಗಳು ಇವರಿಂದ ಹೊರತಾಗಿಲ್ಲ. ಇಲ್ಲಿಯೂ ಸಹ ಕುವೆಂಪುರವರು ನಿಸರ್ಗ ವರ್ಣನೆಯೊಂದಿಗೆ ಭಕ್ತಿಯ ರಸವನ್ನೇ ಹರಿಸಿದ್ದಾರೆ. 'ಮೋಡಣ್ಣನ ತಮ್ಮ' ಮಕ್ಕಳಿಗೆ ಸುಲಭವಾಗಿ ಅರ್ಥವಾಗುವ ರಂಜನೀಯ ನಾಟಕ. ಇಲ್ಲಿಯು ಕಲ್ಪನಾ ಪ್ರಧಾನತೆಯಿರುವುದು ಕಂಡುಬರುತ್ತದೆ. ಬಾಲ್ಯದಲ್ಲಿ ನಾವೂ ಸಹ ಮೋಡವನ್ನು ನೋಡಿ ನಾನಾ ರೀತಿಯ ಬಯಕೆಗಳನ್ನು ವ್ಯಕ್ತಪಡಿಸಿರುವುದು ಸತ್ಯ. ಮೋಡದ ರೂಪವನ್ನು ಕಂಡು ನಲಿದಾಡಿದ್ದು, ಕಲ್ಪನೆಯಿಂದ ಕಥೆ ಕಟ್ಟಿದ್ದು, ಮೋಡದ ಮೇಲೆ ಕುಳಿತು ತಿರುಗಬಯಸಿದ್ದು ಹೀಗೆ ಹಲವು ಆಶಯಗಳನ್ನು ಉದಾಹರಣೆಯಾಗಿ ಹೇಳಬಹುದು. ಕುವೆಂಪು ಅವರು ಆಗಸದ ವಿಭಿನ್ನ ಸನ್ನಿವೇಶಗಳನ್ನು

ವೈಜ್ಞಾನಿಕವಾಗಿ ಮಕ್ಕಳಿಗೆ ತಿಳಿಸಿರುವುದು ಸ್ವಾಗತಾರ್ಹವಾದುದು. ಕುತೂಹಲಭರಿತವಾಗಿ ಮಕ್ಕಳು ನೋಡುವ ರೀತಿ, ಮೋಡವನ್ನು 'ಅಣ್ಣ'ನೆಂದು ಭಾವಿಸುವ ಪರಿಕಲ್ಪನೆ ಮಕ್ಕಳ ಮನವನ್ನು ಅಭಿವ್ಯಕ್ತಗೊಳಿಸುತ್ತದೆ. ಮೋಡವನ್ನು ಏರಿ, ಅದರ ಮೇಲೆ ಕುಳಿತು ಸೃಷ್ಟಿಯ ವೈಚಿತ್ರ್ಯಗಳನ್ನು ನೋಡುವ ಆಶೆಯನ್ನು ವ್ಯಕ್ತಪಡಿಸುತ್ತಾನೆ.

'ಹರಿಯುವ ಹೊಳೆಗಳ ನೋಡಲು ಬೇಕೊ,
ಮೆರೆಯುವ ಪುರಗಳ ನೋಡಲು ಬೇಕೊ,
ಗಿರಿಯಾಚೆಯ ನಾ ನೋಡಲು ಬೇಕೊ,

ಎಂದು ಮೋಡಣ್ಣನ ತಮ್ಮನು,

'ಓ, ಮೋಡಣ್ಣಾ, ಓ, ಮೋಡಣ್ಣ
ನಾನು ಬರುವೆನು ಕೈ ನೀಡಣ್ಣಾ'

ಎಂದು ಆತ್ಮೀಯತೆಯಿಂದ ಬೇಡಿಕೊಳ್ಳುವನು. ಆದರೆ ಮೋಡಣ್ಣನು ವಿನಯದಿಂದಲೇ ಅವನ ಮಾತುಗಳನ್ನು ತಿರಸ್ಕರಿಸುವನು.

'ಬರಬೇಡಣ್ಣಾ! ಬರಬೇಡಣ್ಣಾ!
ಅವ್ವನು ಬೈವಳು ನೀ ನೋಡಣ್ಣಾ!'

ಈ ಮಾತುಗಳನ್ನು ಕೇಳಿದರೂ ಬಾಲಕ ಉತ್ಸಾಹವನ್ನು ಕಳೆದುಕೊಳ್ಳುವುದಿಲ್ಲ. ಏನಾದರೂ ಸರಿ ಅವನ ಜೊತೆ ಹೋಗುವ ಪ್ರಯತ್ನ ಮಾಡುವನು. ಅಲ್ಲಿಯೇ ಇರುವ ಗಿರಿಯಣ್ಣನನ್ನು ಸಹಾಯ ಮಾಡಲು ಕೇಳಿಕೊಳ್ಳುವನು. ಆಗ ಗಿರಿಯಣ್ಣ ಹೇಳುತ್ತಾನೆ.

'ಎಲೆ ಮೋಡಣ್ಣಾ ಬಾಲಕ ಸಣ್ಣ;
ಪಾಪಾ, ಹೋಗಲಿ ಕರೆದೊಯ್ಯಣ್ಣ
ಶರಧಿಯ ನೀರನು ಹೊರುವಾ ನಿನಗೆ
ಕರಿಯವನಿವನತಿ ಭಾರವೆ, ಅಣ್ಣಾ?
ಸಿಡಿಲನು ಮಿಂಚನು ಆಳುವೆ ನೀನು
ಹುಡುಗನ ಆಳುವುದಸದಳವೇನು?
ರೈತರ ನಿಂದೆಯ ಸೈರಿಪ ನೀನು
ತಾಯಿಯ ದೂರನು ಹೊಂದಿದರೇನು?
ಎಲೆ ಮೋಡಣ್ಣ; ಬಾಲಕ ಸಣ್ಣ;
ಪಾಪಾ, ಹೋಗಲಿ, ಕರೆದೊಯ್ಯಣ್ಣಾ!'

ಗಿರಿಯಣ್ಣನು ಬಾಲಕನ ಪರವಾಗಿ ಪರಿಪರಿಯಾಗಿ ಬೇಡಿಕೊಂಡರು ಮೋಡಣ್ಣ ಬೇಡವೆನ್ನುವನು.

'ಎಲೆ ಗಿರಿಯಣ್ಣಾ, ನಿನಗೇನಣ್ಣಾ?
ಕುಳಿತುಪದೇಶವ ಮಾಡುವೆಯಣ್ಣ!
ಅಣುಗನ ನುಡಿಗಳ ಆಲಿಸಿ ನೀನೂ

ಅಣುಗುವಚನಗಳ ಹೇಳುವಿಯೇನು?
ಹತ್ತು ಕಡಲುಗಳ ಹೊತ್ತರು ನಾನು
ಎತ್ತನೆ ಬಾಲಕನೋರ್ವನ, ಕೇಳು;
ಸಿಡಿಲು ಮಿಂಚುಗಳನಾಳಲು ಬಲ್ಲೆ;
ಹುಡುಗರನಾಳುವುದಾದರೆ ಒಲ್ಲೆ!
ರೈತರ ಗುಂಪೇ ಬೈದರು ಸೈರಿಪೆ,
ತಾಯಿಯ ಶಾಪವ ಸೈರಿಸೆ ನಾನು!
ಎಲೆ ಗಿರಿಯಣ್ಣಾ, ಎಲೆ ಗಿರಿಯಣ್ಣಾ,
ನಿನಗೇಕಣ್ಣಾ! ಸುಮ್ಮನಿರಣ್ಣಾ!'

ಗಿರಿಯಣ್ಣನ ಮತ್ತು ಮೋಡಣ್ಣನ ಸಂವಾದ ಬಲು ಸುಂದರವಾಗಿ ಮೂಡಿದೆ. ಮಕ್ಕಳು ತಿಳಿಯಬೇಕಾದ ಸಂಗತಿಯೆಂದರೆ, ಹೇಳುವುದು ಅತೀ ಸುಲಭ. ಅದನ್ನು ಅನುಸರಿಸುವುದು ಅಷ್ಟೇ ಕಷ್ಟದಾಯಕ ಎಂಬುದು ಬಿಂಬಿತವಾಗಿದೆ. ಗಿರಿಯಣ್ಣನ ಮಾತಿಗೂ ಬೆಲೆಕೊಡದೆ, ತಾಯಿಯ ಶಾಪಕ್ಕೆ ಗುರಿಯಾಗಬೇಕಾಗುವುದೆಂದು ಹೇಳಿ ಬಾಲಕನನ್ನು ಕರೆದೊಯ್ಯಲು ಸಾಧ್ಯವಿಲ್ಲವೆನ್ನುವನು. ಆದರೆ ಬಾಲಕನು ಅದಕ್ಕೂ ಸಮಾಧಾನ ಹೊಂದುವುದಿಲ್ಲ. ಅಲ್ಲಿರುವ ಕಾಡಣ್ಣನಿಗೆ ಬೇಡಿಕೊಳ್ಳುವನು. ಆಗ ಕಾಡಣ್ಣನು ಬಾಲಕನ ಮೇಲೆ ಕನಿಕರ ತೋರುವುದಿಲ್ಲ. ಮೋಡಕ್ಕೆ ಹೇಳುವನು ನಿನ್ನ ಜೊತೆಗೆ ಬಾಲಕನನ್ನು ಕರೆದೊಯ್ಯುಬೇಡವೆಂದು;

'ಬಿಡೊ ಬಿಡೊ ನಿನ್ನೀ ನುಣ್ಣನೆ ನುಡಿಗಳ,
ಕಡಿ ಕಡಿ ಎನ್ನುವೆ ತಂದೆಗೆ ಬುಡಗಳ,
ಬೆಂಕಿಯ ಬುಡಗಳಿಗಿಡಿಸುವನು,
ಧಗ ಧಗ ಉರಿಸುವನು,
ಅಂಕೆಯೆ ಇಲ್ಲದೆ ಕಡಿಸುವನು,
ಸೊಬಗನು ಕೆಡಿಸುವನು'

ಎಂದು ಮಾನವನು ಪರಿಸರ ನಾಶ ಮಾಡುವುದನ್ನು, ಕಾಡು ಹಾಳುಗೆಡುವುದನ್ನು ಮತ್ತು ಕಾಡಣ್ಣ ತನಗಾದ ನೋವನ್ನು ತೋಡಿಕೊಳ್ಳುತ್ತ ಹೇಳುವನು.

'ಮನುಜರು ಹೋದಡೆಯೆಲ್ಲ ಹಾಳು!
ನೀ ನವನೊಯ್ದರೆ ತಪ್ಪದೊ ಗೋಳು!
ಎಲೆ ಮೇಘಣ್ಣ, ನಡೆ ಬೇಗಣ್ಣಾ!
ಮಾತೇನಿವನೊಡನಿವ ಹುಡುಗಣ್ಣಾ!'

ಮಾನವರು ಹಾಳು ಮಾಡುವ ಗುಣ ಹೊಂದಿದವರು. ಅವರು ಹೋದಲ್ಲೆಲ್ಲಾ ಹಾಳುಗೆಡವಿ ಬಿಡುವರು ಪರಿಸರ. ಇಂಥವರ ಮಾತನ್ನು ಕೇಳಬೇಡ. ಈ ಹುಡುಗನ ಮಾತು ಕೇಳಬೇಡ; ಕೇಳಿದರೆ ಗೋಳು ತಪ್ಪದು ನಿನಗೆ. ನೀ, ಬೇಗನೆ ಹೋಗು ಎನ್ನುತ್ತದೆ ಕಾಡಣ್ಣ. ಇಷ್ಟೆಲ್ಲ ನಡೆದರೂ ಬಾಲಕ ತನ್ನ ಹಟವನ್ನು ಬಿಡುವುದಿಲ್ಲ. ಮೋಡಣ್ಣನಿಗೆ ಕಾಡಿ–ಬೇಡಿಕೊಳ್ಳುತ್ತಾನೆ.

ಮೋಡಣ್ಣ ಬಾಲಕನ ಗೋಳನ್ನು ನೋಡಲಾರದೆ ಅವನಿಗೆ ಬುದ್ಧಿಯ, ಹಿತನುಡಿಗಳನ್ನು ಹೇಳಿ ಮತ್ತೆ ಮರಳಿ ಬರುವೆನೆಂದು ಸಮಾಧಾನಗೊಳಿಸುತ್ತ;

'ಅಂತೂ ಮರೆಯನೊ ನಿನ್ನನು, ಅಣ್ಣಾ!
ಹಿಂತಿರುಗೈತರೆ ಕಾಣುವೆನಣ್ಣಾ!'

ಮೋಡಣ್ಣನ ಮಾತುಗಳನ್ನು ಕೇಳಿದ ಬಾಲಕ, ಕ್ಷಮೆಯನ್ನು ಬೇಡಿ ಆತನ ನೀತಿಯನ್ನು ಪಾಲಿಸುವೆನೆಂದು ಹೇಳುವನು ಬಾಲಕ.

'ಹಿರಿಯವ ನೀನೆಲೆ ಮೋಡಣ್ಣಾ,
ಅರಿಯದವನು ನಾ ಕಿಟ್ಟಣ್ಣ।
ಅನುಭವಶಾಲಿಯು ನೀ ಮೋಡಣ್ಣಾ,
ಅನುಭವವಿಲ್ಲದವನು ನಾನಣ್ಣಾ।
ಹೇಳ್ವೆ ಬುದ್ಧಿಯ ಮಾತುಗಳ
ಕೇಳುವೆ ನಾನು ನೀತಿಗಳ।
ಪಂಡಿತ ನೀನೈ, ಎಲೆ ಮೋಡಣ್ಣಾ,
ಪಾಮರ ನಾನೈ, ದಯೆ ತೋರಣ್ಣಾ'.

ಎನ್ನುವ ಕರುಣಾಪೂರಿತ ನುಡಿಗಳು ಮಕ್ಕಳಲ್ಲಿ ಗೌರವದ ಭಾವನೆಗಳು ಮೂಡಿಸಲು ಪೂರಕವಾಗಿವೆ. ಕುವೆಂಪು ಅವರ ಇಂಥಹ ಅನೇಕ ಅಭಿವ್ಯಕ್ತಿಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುವಲ್ಲಿ ಯಶಸ್ವಿಯಾಗಿವೆ. ಬಾಲಕನು ಮೋಡಣ್ಣನ ಜೊತೆ ಸಂಭಾಷಣೆಯಲ್ಲಿ ತೊಡಗಿದ್ದಾಗ ಅಮ್ಮನ ಕೂಗು ಕೇಳಿಸುತ್ತದೆ. ಹೊತ್ತು ಮುಳುಗುತಿದೆ ಬೆಟ್ಟದ ಕಡೆಗೆ ಏತಕೆ ಹೋಗಿರುವೆ. ಕತ್ತಲಾಗುತ್ತಿದೆ ಬಾ ಎನ್ನುವಳು, ಆಗ ಮೋಡಣ್ಣ ತಮ್ಮನಿಗೆ (ಬಾಲಕನಿಗೆ), ಅಮ್ಮ ಕರೆಯುತಿರುವಳು ಬೇಗನೆ ಹೋಗು. ಇಲ್ಲವಾದರೆ ತಾಯಿ ಬೈಯುವಳು ಎನ್ನುತ್ತ ತನ್ನ ಮಾತನ್ನು ಮರೆಯಬೇಡ ಎಂದು ಹೇಳುವನು.ಆಗ ಬಾಲಕ ಮೋಡಣ್ಣನಿಗೆ ವಂದಿಸಿ, ಅವನು ಆಗಸದಲ್ಲಿ ತೇಲಿ ಹೋಗುವುದನ್ನು ಕುವೆಂಪುರವರು ಮನಮಿಡಿಯುವಂತೆ ಅಭಿವ್ಯಕ್ತಗೊಳಿಸಿದ್ದಾರೆ.

'ಸುಖವಾಗಲ್ಲಿಗೆ ನೀ ಹೋಗಣ್ಣಾ,
ಮಂಗಳ ನಿನಗಾಗಲಿ ಮೇಘಣ್ಣಾ,
ಆದರೆ ತಮ್ಮನ ಮರೆಯದಿರಣ್ಣಾ,
ಆಡಿದ ಭಾಷೆಯ ತಪ್ಪದಿರಣ್ಣಾ,
ಕಾಯುವೆ ನಿನ್ನಾಗಮನವನಣ್ಣಾ,
ಆಯುವವರೆಗೂ, ಓ ಮೋಡಣ್ಣಾ,
ಹೋಗುವೆನಾ! ನೀ ಹೋಗಿ ಬಾರಣ್ಣಾ'.

ಈ ಮೇಲಿನ ಮಾತುಗಳು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರಿವೆ. 'ಆಡಿದ ಭಾಷೆಗೆ ತಪ್ಪದೆ' ಇರಬೇಕು ಎನ್ನುವುದು ಮಕ್ಕಳಲ್ಲಿ ನೈತಿಕ ಮೌಲ್ಯ ಬೆಳೆಸುವ ಕ್ರಮ

ಕುವೆಂಪು ಅವರಲ್ಲಿ ವ್ಯಕ್ತಗೊಳ್ಳುತ್ತದೆ. ಈ ನಾಟಕದ ಕೆಲವು ಪದ್ಯಗಳು ಮಕ್ಕಳಿಗೆ ಅರ್ಥವಾಗದೆ ಇರುವ ಸಾಧ್ಯತೆ ಹೆಚ್ಚು. ಕುವೆಂಪು ಅವರ ಶಿಶು ಸಾಹಿತ್ಯದ ಹಲವು ವಿಚಾರಗಳನ್ನು ಇಲ್ಲಿಯವರೆಗೆ ಗಮನಿಸಿದರೆ, ವೈವಿಧ್ಯಮಯ ಮತ್ತು ವಿಶಿಷ್ಟ ರೂಪವನ್ನು ಹೊಂದಿದೆ. ಮಕ್ಕಳ ಮನಸ್ಸನ್ನು ತಣಿಸುವುದರೊಂದಿಗೆ ಅವರು ಜೀವನವನ್ನು ಸುಂದರವಾಗಿ ಕಟ್ಟಿಕೊಳ್ಳುವದನ್ನು ತಿಳಿಸುತ್ತದೆ. ಮಕ್ಕಳ ಸಾಹಿತ್ಯದ ಪ್ರಧಾನ ಗುಣ ಸರಳತೆಯ, ಸುಲಭ ಭಾಷೆಯಿಂದ ಕೂಡಿ ನಿರ್ಮಾಣವಾಗಿರಬೇಕು. ಮಾತೃವಾತ್ಸಲ್ಯದ ಸಂಬಂಧಗಳು ಹೆಣೆದಿರಬೇಕು. ಪ್ರಕೃತಿ ವರ್ಣನೆ, ಭಕ್ತಿಯ ಹೃದಯ, ಕಲ್ಪನಾ ಲೋಕ ಇವು ಕುವೆಂಪು ಅವರ ಮಕ್ಕಳ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಪ್ರಪಂಚ.

೫.೪ ಪಳಕಳ ಸೀತಾರಾಮಭಟ್ಟ :

'ಮನೆಯೇ ಮೊದಲು ಪಾಠಶಾಲೆ ಜನನಿ ತಾನೇ ಮೊದಲ ಗುರುವು' ಎಂಬ ಸಾಲು ಎಂದೂ ಮರೆಯಲಾಗದು. ನಮ್ಮ ಭವ್ಯ ಭಾರತದ ಭವಿಷ್ಯ ಪಂಚಾಂಗಗಳ ಕಟ್ಟಡಗಳಲ್ಲಿ ಕಾಣುವುದಿಲ್ಲ ಎಂದು ಪಂಡಿತ ನೆಹರೂರವರು, 'ನಾನು ಭಾರತದ ಭವಿಷ್ಯವನ್ನು ನೋಡುವಾಗ ನಕ್ಷತ್ರ, ಗ್ರಹಗಳನ್ನು ನೋಡುವುದಿಲ್ಲ. ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇನೆ. ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಉಲ್ಲಾಸವಿದ್ದರೆ ನಮ್ಮ ದೇಶದ ಭವಿಷ್ಯ ಉಜ್ವಲವಾಗಿರುತ್ತದೆ. ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಶೆ ತುಂಬಿದ್ದರೆ ಭಾರತಕ್ಕೆ ಭವಿಷ್ಯವಿರುವುದಿಲ್ಲವೆಂದು' ಹೇಳುತ್ತಾರೆ. ನಿಜವಾಗಿಯೂ ಮಕ್ಕಳ ಭವಿಷ್ಯ ದೇಶದ ಉನ್ನತಿಯನ್ನು ತಿಳಿಸುತ್ತದೆ. ಮಕ್ಕಳ ಸಾಹಿತ್ಯ ಈ ನೆಲೆಯಲ್ಲಿ ರೂಪುಗೊಳ್ಳುವುದು ಅವಶ್ಯಕವಾಗಿದೆ. ಅಂಥ ಮಕ್ಕಳ ಸಾಹಿತ್ಯ ಲೋಕವನ್ನು ನಿರ್ಮಿಸಿದವರು ಪಳಕಳ ಸೀತಾರಾಮ ಭಟ್ಟರು. ಮಕ್ಕಳಲ್ಲಿ ಯೋಚನೆಗಳು ಯಾವಾಗಲೂ ಸ್ವೀಕಾರ ಭಾವನೆಗಳಿಂದ ಕೂಡಿರುತ್ತವೆ. ನಿರಾಸಕ್ತಿಯು ಅವರಲ್ಲಿ ಸುಳಿಯುವುದಿಲ್ಲ. ಮಕ್ಕಳಲ್ಲಿ ಸೃಜನಶೀಲ ಪ್ರತಿಭೆ ಇರುವುದರಿಂದ ಕ್ರಿಯಾಶೀಲತೆ ಹೆಚ್ಚುತ್ತ ಹೋಗುತ್ತದೆ. ಮಗು ಬೆಳೆಯುತ್ತಿದಂತೆ ಸಮಾಜ ಜೀವಿಯಾಗಲು ಪ್ರಯತ್ನಿಸುತ್ತದೆ. ಈ ಕ್ರಮದಿಂದಾಗಿ ಮಕ್ಕಳ ಸಾಹಿತ್ಯ ಮಗುವಿನಲ್ಲಿ ಮೌಲ್ಯವನ್ನು ತುಂಬಿಕೊಳ್ಳಲು ಸಹಕಾರಿಯಾಗಿದೆ. ಸಂಸ್ಕಾರವಂತನಾಗಲು ಪ್ರೇರಕವಾಗಿದೆ. ಮಕ್ಕಳ ಸಾಹಿತಿಗಳು ಅನುಸರಿಸಿದ್ದು ಪಂಜೆಮಂಗೇಶರಾಯರ ಬಾಲಸಾಹಿತ್ಯದ ನಿಯಮಗಳನ್ನು. 'ಮಕ್ಕಳ ಪ್ರಪಂಚಕ್ಕೊಳಪಟ್ಟ ವಸ್ತುಗಳನ್ನು, ಕಲ್ಪನಾಶಕ್ತಿಗೆ ಪ್ರಚೋದನೆ ನೀಡುವ ಅದ್ಭುತರಸವನ್ನು, ಮನೆಬಳಕೆಯ ಶಬ್ದಗಳನ್ನು, ಪುಟ್ಟ ಪುಟ್ಟ ಸಂಭಾಷಣೆಗೆ ಪ್ರಧಾನವಾದ ಪುನರುಕ್ತಿಯ ಭಾಲಭಾಷೆಯನ್ನು ಮಕ್ಕಳ ಕೃತಿಗಳು ಒಳಗೊಂಡಿರಬೇಕು. ಅಶ್ಲೀಲ. ಅಸಹ್ಯ ಎಲ್ಲೂ ಇರಬಾರದು. ದೊಡ್ಡ-ದೊಡ್ಡ, ಅಂದವಾದ ಅಕ್ಷರಗಳ ಅತ್ಯಂತ ಕಡಿಮೆ ಬೆಲೆಯ ಸಚಿತ್ರ ಪುಸ್ತಕಗಳನ್ನು ಮಕ್ಕಳಿಗೆ ನೀಡಬೇಕು'[೧೩೧] ಎಂಬುದು ೧೯೩೫ ರಲ್ಲಿ ಹೈದರಾಬಾದನಲ್ಲಿ ಹೇಳಿದ ಮಾತುಗಳು ಮಕ್ಕಳ ಸಾಹಿತ್ಯಕ್ಕೆ ಗಟ್ಟಿತನ ಒದಗಿಸಿವೆ. ಇದರಿಂದಾಗಿ ಮಕ್ಕಳ ಸಾಹಿತ್ಯ ನಿಂತ ನೀರಾಗದೆ, ಕೃತಿಗಳ ವಸ್ತು, ಛಂದಸ್ಸು, ಭಾಷೆ, ಭಾವ, ಸ್ವರೂಪದಲ್ಲಿ ಹೊಸತನ ಕಾಣಿಸಿಕೊಂಡಿತು.

ಪಳಕಳ ಸೀತಾರಾಮ ಭಟ್ಟರ ಒಟ್ಟು ಮಕ್ಕಳ ಕೃತಿಗಳ ಸಂಖ್ಯೆ (೧೩೦) ಒಂದು ನೂರಾ ಮೂವತ್ತು. ಮಕ್ಕಳ ಕವನ ಸಂಕಲನಗಳು – ೩೬, ಮಕ್ಕಳ ಕಥಾ ಸಂಕಲನಗಳು – ೬೧, ಮಕ್ಕಳ ನಾಟಕಗಳು – ೨೬, ಇತರ ಮಕ್ಕಳ ಕೃತಿಗಳು – ೭, ಪ್ರೌಢ ಸಾಹಿತ್ಯಕ್ಕೆ ಸಂಬಂಧಿಸಿದವು – ೧೫. ಇವರ ಮಕ್ಕಳ ಕೃತಿಗಳು ಮನೋರಂಜನೆಯ ಜೊತೆಗೆ ಮಕ್ಕಳಲ್ಲಿ ಸಂಸ್ಕಾರವನ್ನು ಮೂಡಿಸುತ್ತವೆ. 'ಮಕ್ಕಳ ಕವನ ಬರಿಬೇಕಾದರೆ ಮಕ್ಕಳ ಕವಿ ಆಗಬೇಕಾದರೆ ಮೊದಲನೆಯ ಅರ್ಹತೆ ಎಂದರೆ ಮಕ್ಕಳ ಬಗ್ಗೆ ಪ್ರೀತಿ ಇರಬೇಕು. ಮಕ್ಕಳನ್ನು ಆತ ತೀರಾ ಸರಿಯಾಗಿ ಗಮನಿಸುತ್ತ ಇರಬೇಕು. ಮಕ್ಕಳ ಆಟ ಓಟ ಪಾಠ ಚಟುವಟಿಕೆ, ಅವರ ಮಾತು, ವರ್ತನೆಗಳೆಲ್ಲ ಮೌನವಾಗಿಯಾದರೂ ಗಮನಿಸುತ್ತ ಇರಬೇಕು. ಮಕ್ಕಳ ಸಾಹಿತ್ಯಕ್ಕೆ ಮುಖ್ಯವಾಗಿ ಬೇಕಾಗಿರುವುದು ಮಕ್ಕಳ ಭಾಷೆ'[೧೨] ಎನ್ನುವ ಪಳಕಳ ಸೀತಾರಾಮ ಭಟ್ಟರಿಗೆ ಬಲು ಪ್ರಿಯವಾದವರು ಮಕ್ಕಳು. ಮೂವತ್ತಾರು ವರುಷಗಳಷ್ಟು ಸಮಯ ಶಿಕ್ಷಕರಾಗಿ, ಮಕ್ಕಳ ಒಡನಾಟದ ಸುದೀರ್ಘ ಅನುಭವದಿಂದ ಮಕ್ಕಳ ಮನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ ಎಂದರೆ ತಪ್ಪಾಗದು. 'ಅಧ್ಯಾಪಕ ವೃತ್ತಿಯಷ್ಟು ಸಂತೋಷ ಕೊಡುವ ವೃತ್ತಿ ಇನ್ನೊಂದಿಲ್ಲ. ನಾನು ರಿಟೈಯರ್ಡ ಆಗಿ ೨೩ ವರ್ಷಗಳೇ ಸಂದವು. ಆದರೂ ಈಗಲೂ ವರ್ಷದಲ್ಲಿ ಹತ್ತು ಸಲವಾದರೂ ಶಾಲೆಯದ್ದೇ ಕನಸುಗಳನ್ನು ಕಾಣುತ್ತೇನೆ. ಮಕ್ಕಳ ಜೊತೆಗಿರುತ್ತೇನೆ'[೧೩] ಎಂದು ಪಳಕಳರು ತಮ್ಮ ಇಳಿವಯಸ್ಸಿನಲ್ಲೂ ಮಕ್ಕಳ ಮೇಲಿನ ಹಂಬಲ ಕಡಿಮೆಯಾಗಿಲ್ಲ ಎನ್ನುತ್ತಾರೆ.

ಬದುಕಿಗೆ ಅನುಭವ ಮುಖ್ಯ. ಪ್ರಕೃತಿ, ಪರಿಸರ, ಸಮಾಜ ಸಂಬಂಧಗಳಿಂದ ಪಡೆಯುವ ಅನುಭವಗಳಿಂದ ವ್ಯಕ್ತಿಯ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಹೀಗೆ ಪಳಕಳರು ಮಕ್ಕಳ ಸಾಹಿತಿಯಾಗಿ ಹೊರಹೊಮ್ಮಲು ಕಾರಣ ಲೋಕಾನುಭವ. ಮಗುವಿನಲ್ಲಿರುವ ಪ್ರತಿಭೆ, ಆತ್ಮಗೌರವ, ಅವರ ವ್ಯಕ್ತಿತ್ವ ಬೆಳೆಯಲು ಮಕ್ಕಳ ಮನೋಭಾವದಿಂದ ನೋಡಿದಾಗ ಮಾತ್ರ. ಇದು ಪಳಕಳ ಸೀತಾರಾಮಭಟ್ಟರ ಕಾವ್ಯದ ಮೂಲ ಸೆಲೆಯಾಗಿದೆ. ಮಕ್ಕಳ ಮನಸ್ಸು ಎಷ್ಟು ಮೃದುವಾಗಿರುವುದೋ ಅಷ್ಟೇ ಸಂಕೀರ್ಣವಾದುದು. ಸುಲಭವಾಗಿ ಗ್ರಹಿಸಲು ಅಸಾಧ್ಯ. ಅಮೂರ್ತ ಲೋಕವಿದ್ದಂತೆ, ಅಂಥ ಬದುಕು ಪಳಕಳರದ್ದು, ಮಕ್ಕಳ ಮನಸ್ಸನ್ನು ಅರ್ಥಮಾಡಿಕೊಳ್ಳಲು ಮನೋವೈದ್ಯರೇ ಬೇಕಾಗಿಲ್ಲ. ಮಕ್ಕಳನ್ನು ಪ್ರೀತಿಸುವ ಹೃದಯ, ಸೂಕ್ಷ್ಮವಾಗಿ ಅವಲೋಕಿಸುವ ಒಳಗಣ್ಣು, ಅವರ ಭಾವನೆಗಳಿಗೆ ಸ್ಪಂದಿಸುವ ಮನ, ವಿಮರ್ಶಿಸುವ ಬುದ್ಧಿ ಇರುವ ವ್ಯಕ್ತಿ ಮಗುವಿನ ಮನೋಲೋಕದೊಳಗೆ ಸುಲಭವಾಗಿ ಪ್ರವೇಶಿಸಬಲ್ಲ ಎಂಬುದಕ್ಕೆ ಸೀತಾರಾಮಭಟ್ಟರು ಸೂಕ್ತ. ಇವರ ಕವಿತೆಗಳಲ್ಲಿ 'ಮಗು'ವಿನ ಲೋಕವೆ ಅಪಾರ. ಕವಿತೆಗಳಲ್ಲಿ ಮಕ್ಕಳೇ ಮಾತನಾಡುತ್ತಾರೆ. ಪರಿಣಾಮಗಳನ್ನು ಅಭಿವ್ಯಕ್ತಗೊಳಿಸುತ್ತಾರೆ. 'ಮಕ್ಕಳ ಮನಸ್ಸನ್ನು ಆಕರ್ಷಿಸುವ ಮೂರು ಅಂಶಗಳು ಲಯಬದ್ಧತೆ ನಾದಮಾಧುರ್ಯ ಹಾಗೂ ಪ್ರಾಸವೈಭವ. ಒಂದು ವೇಳೆ ಪ್ರಾಸ ತಪ್ಪಿದರೂ ಲಯಬದ್ಧವಾಗಿರಲೇಬೇಕು. ತಾಳ, ಲಯ ಇಲ್ಲದಿದ್ದರೆ ಮಕ್ಕಳ ಮನವನ್ನು ಸೂರೆಗೊಳ್ಳಲು ಸಾಧ್ಯವಿಲ್ಲ. ರಾಗಬದ್ಧವಾಗಿ ಹಾಡಲು ಆಗುವುದಿಲ್ಲ. ಹಾಡಲು ಬರುವಂಥವು ಮಾತ್ರ

ಮಕ್ಕಳ ಹೃದಯಗಳಲ್ಲಿ ಮನಸ್ಸುಗಳಲ್ಲಿ ಉಳಿಯುತ್ತವೆ. ಭಾಷೆಯೊಂದಿಗೆ ಬಾಯಿಪಾಠವು ಆಗುತ್ತವೆ. ಇಲ್ಲದಿದ್ದಲ್ಲಿ ಅವು ಮಕ್ಕಳ ಕವನಗಳಾಗುವುದಿಲ್ಲ' ಎಂದು ಪಳಕಳ ಸೀತಾರಾಮ ಭಟ್ಟರು ಮಕ್ಕಳ ಸಾಹಿತ್ಯದ ಕುರಿತು ಹೇಳುತ್ತಾರೆ. ಮೇಲೆ ಹೇಳಿದ ಸಂಗತಿಗಳು ಪಳಕಳರ ಕವಿತೆಗಳಲ್ಲಿ ಅಭಿವ್ಯಕ್ತಗೊಂಡಿವೆ. 'ಮಕ್ಕಳ ಪದ್ಯಗಳಲ್ಲಿ ಕಂಡುಬರುವ ಮೊದಲನೇ ಆಕರ್ಷಣೆ ಎಂದರೆ ಅದರ ಪಂಕ್ತಿಗಳ ನಡಿಗೆ..... ಪದ್ಯದಲ್ಲಿ ಬರುವ ಮಾತೆಲ್ಲವೂ ತಾಳಹಾಕಿಕೊಂಡು ಹೇಳುವ ಹಾಗಿರಬೇಕು. ಇದೊಂದು ಶ್ರವ್ಯಗುಣ ಪಳಕಳರ ಈ ಪದ್ಯಗಳಲ್ಲಿ ನಿರ್ದಿಷ್ಟವಾಗಿ ಬಂದಿದೆ'[೧೩೪] ಎಂಬುದು ಜಿ. ಪಿ. ರಾಜರತ್ನಂ ಅವರ ಅಭಿಪ್ರಾಯ.

ಪಳಕಳ ಸೀತಾರಾಮ ಭಟ್ಟರು ರಚಿಸಿದ 'ತಿಮ್ಮನ ತುತ್ತೂರಿ' ಕವನ ಸಂಕಲನದ ಮುನ್ನುಡಿಯಲ್ಲಿ ಕಾವ್ಯಾನಂದರು 'ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಬಹಳ ದೊಡ್ಡ ಹೆಸರು ಡಾ. ಜಿ. ಪಿ. ರಾಜರತ್ನಂ, ಅವರೇ ಪಳಕಳರ ಪದ್ಯಗಳನ್ನು ಮೆಚ್ಚಿರುವಾಗ ಬೇರೆ ಮೆಚ್ಚೋಲೆ ಬೇಕಿಲ್ಲ' ಎಂದಿರುವುದು ಪಳಕಳರ ಕವಿತೆಗಳ ಸ್ವಾರಸ್ಯವನ್ನು ಅಭಿವ್ಯಕ್ತಿಸುವ ಪ್ರಮುಖ ಗುಣವಾಗಿದೆ. ಹಾಗೆಯೇ ಇವರು ತಮ್ಮ ಕವನಗಳಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ಮರ, ಬಳ್ಳಿ, ಹೂ, ಹಣ್ಣು, ಚಿಟ್ಟೆ, ಹಕ್ಕಿ, ಪ್ರಾಣಿ ಮೊದಲಾದ ನಿಸರ್ಗದ ವಸ್ತುಗಳನ್ನು ಅಭಿವ್ಯಕ್ತಿಗೆ ಬಳಸಿಕೊಂಡಿರುವುದು ಕಾಣುತ್ತೇವೆ.

'ಸಿರಿಯ ಹೊತ್ತು ಪ್ರಕೃತಿನಿತ್ತು
ನಮಗೆ ಎಲ್ಲ ನೀಡಿದೆ
ಜಾಣ್ಮೆಯಿಂದೆ ಬಾಳಿರೆಂದೆ
ನೀತಿ ಬೋಧೆ ಮಾಡಿದೆ'[೧೩೫].

ಪ್ರಕೃತಿಯನ್ನು ಪ್ರೀತಿಯಿಂದ ಕಾಣಬೇಕು ಎನ್ನುವುದು ಪಳಕಳರ ಅಭಿಮತ. ನಮಗೆ ಬದುಕನ್ನು ಕೊಟ್ಟಿರುವುದು ಪ್ರಕೃತಿ. ನಿಸರ್ಗ ಸಹಜವಾದುದು. ಅಲ್ಲಿ ಪಕ್ಷಿ, ಪ್ರಾಣಿಗಳು ಆನಂದವಾಗಿ ವಿಹರಿಸುತ್ತವೆ. ಅವುಗಳಿಗೆಲ್ಲ ಉತ್ತಮ ಹವೆಯನ್ನು ಒದಗಿಸುತ್ತದೆ. ಅಂತಹ ಪ್ರಕೃತಿಯನ್ನು ರಕ್ಷಿಸುವ ಹೊಣೆ ನಮ್ಮದಾಗಬೇಕೆಂಬ ಕಳಕಳಿ ಇವರದು.

ಮುಗ್ಧತೆ ಮಗುವಿನ ಗುಣ. ತಾನು ಏನು ಮಾಡುತಿರುವೆ ಎಂಬುದು ಅರಿವು ಇಲ್ಲದ ಭಾವ. ಶಾಲೆಗೆ ಹೋಗುವ ಹುಮ್ಮಸ್ಸು, ತನ್ನ ಶಾಲೆಯ ಚೀಲದಲ್ಲಿ ಏನೆಲ್ಲ ತುಂಬಿಕೊಳ್ಳುವ ಹಂಬಲ. ಪುಸ್ತಕಕ್ಕೆ ಮಾತ್ರ ಚೀಲ ಎಂಬುದು ತಿಳಿಯದು.

"ಕಿಟ್ಟ ನಮ್ಮ ಪುಟ್ಟ ತಮ್ಮ
ಬಂದಿದಾನೆ ಮ-ಲ್ಲಿ
ತುಂಬಿ ತನ್ನ ಚೀಲವನ್ನು
ತಂದಿದಾನೆ ಇ-ಲ್ಲಿ ।
ಹಳೆಯ ಪೈಸೆ, ಹಾಳು ಸೀಸೆ

ರಿಬ್ಬನಿನದು ತುಂ–ಡು
ಒಡಕು ಬಳೆಯು ಮೊಟಕು ಮೊಳೆಯು
ರಬ್ಬರಿನದು ಚೆಂ–ಡು ।
ಏನು ಉಂಟು ಎಷ್ಟು ಉಂಟು
ಹೇಳಲಾರೆ ನಾ–ನು
ಒಮ್ಮೆ ಬಂದು ಬಳಿಯೆ ನಿಂದು
ನೋಡಬೇಕು ನೀ–ನು'[೧೩೬].

ಪಳಕಳ ಸೀತಾರಾಮ ಭಟ್ಟರು 'ಚೆಣ್ಣನ ಚೀಲ' ವಸ್ತು ಸಂಗ್ರಾಲಯ ಇದ್ದಂತೆ. ಚಣ್ಣ ಜೇಬಿಗಿಂತಲು ಹೆಚ್ಚಿನ ವಸ್ತುಗಳನ್ನು ಈ ಚೀಲದಲ್ಲಿ ತುಂಬಿಡಬಹುದು ಎಂದು ಹೇಳುವ ಅಭಿವ್ಯಕ್ತಿ ಬಲು ಸುಂದರ. 'ದುಂಡು ಕಲ್ಲು, ಗೊಂಡೆ, ಹುಲ್ಲು, ಹೂವು, ಕಾಯಿ, ಹಣ್ಣು, ಬಳಪ, ಚೆಂಡು, ಒಡಕು ಬಳೆಯು, ಮೊಳೆ, ಬೊಂಬೆ, ಗಾಲಿ, ಗೆಜ್ಜೆ, ಗೋಲಿ, ನವಿಲ ಗರಿ, ಮಿರುಗು ಜರಿ, ಕೋಲು ಮೊದಲಾದವುಗಳಿಂದ ತುಂಬಿದ ಚೀಲ ಬ್ರಹ್ಮಾಂಡದಂತಿದೆ. ಸವಕಲಾದ ಹಳೆಯ ವಸ್ತುಗಳನ್ನು ಹರವಿಕೊಂಡು ಅವುಗಳ ಜೊತೆಗೆ ಮಾತನಾಡುವ ತನ್ನ ಪುಟ್ಟನ ವರ್ಣನೆಯನ್ನು ಅಣ್ಣನು ತನ್ನ ಗೆಳೆಯನ ಮುಂದೆ ಹೇಳಿಕೊಳ್ಳುವುದು ವಿಶೇಷವಾಗಿದೆ. ಇಲ್ಲಿ ಸಂಗ್ರಹಿಸಿರುವ ವಸ್ತುಗಳಲ್ಲಿ ಬುಕ್ಕು, ಪೆನ್ನು, ರಬ್ಬರು, ಇಂಗ್ಲೀಷ ಭಾಷೆಯ ಪ್ರಭಾವ ಗೋಚರಿಸುತ್ತದೆ. ಮಕ್ಕಳು ಸಹಜವಾಗಿ ಎಲ್ಲ ಭಾಷೆಯ ಪದಗಳನ್ನು ಬಳಸುವರು. ಪಳಕಳರು ಇಂಥ ಅಭಿವ್ಯಕ್ತಿಯನ್ನು ಹೆಚ್ಚಾಗಿ ಬಳಸಿದ್ದಾರೆ. ಮಗುವಿನ ಶಬ್ದಭಂಡಾರ ಚೀಲದಲ್ಲಿ ತುಂಬುವ ಆಶೆ. ವ್ಯಕ್ತಗೊಂಡಿರುವುದು ಮುಗ್ಧತೆಯಲ್ಲಿ ಕವಿಯ ಅಭಿವ್ಯಕ್ತಿಯಲ್ಲಿ ಭಿನ್ನ–ಭಿನ್ನವಾಗಿ ತೋರುತ್ತದೆ. 'ಅಗತ್ಯಕ್ಕಿಂತ ಹೆಚ್ಚು ಮಗುವಿನ ತಂದೆ–ತಾಯಿ ಆಗಬೇಡಿ, ಅವನ ಏಕಾಂತದಲ್ಲಿ ತಲೆ ಹಾಕಬೇಡಿ' ಎನ್ನುವ ಮಾತು ಅರಿತುಕೊಳ್ಳಬೇಕಾಗಿದೆ.

ಪಳಕಳರ ಕವನದ ವಸ್ತು ಸಾಮಾನ್ಯ ಪ್ರಾಣಿಗಳ ಬದುಕು. ಯಾಕೆಂದರೆ ಮಕ್ಕಳು ಇಷ್ಟಪಡುವುದು ಮುದ್ದು ಮುದ್ದಾದ ಚಿಕ್ಕ ಪ್ರಾಣಿಗಳನ್ನು. ತಾವು ತಿನ್ನುವ ತಿಂಡಿಗಳನ್ನು ಅವುಗಳಿಗೆ ಕೊಟ್ಟು ತಾವು ಅವುಗಳ ಜೊತೆಗೆ ಆಡಲು ಬಯಸುತ್ತವೆ.

'ಮೊಲದ ಮರಿಯೆ ಮೊಲದ ಮರಿಯೆ
ಕರೆಯುತಿರುವೆ ಕೇ–ಳು
ಬಿಲವ ಬಿಟ್ಟು ನನ್ನ ಮನೆಗೆ
ಬರುವಿಯೇನು ಹೇ–ಳು?
ಮನೆಗೆ ನೀನು ಬರಲು ನಾನು
ನೀಡಿ ಹಾಲು ಅ–ನ್ನ
ಪ್ರೀತಿಯಿಂದ ಅಪ್ಪಿ ಹಿಡಿದು

ಮುದ್ದಿಸುವೆನು ನಿ–ನ್ನ
ದಿನವು ನಿನಗೆ ಕೊಡುವೆನಣ್ಣ
ಮೊಳಕೆ ಬರಿಸಿ ಕಾ–ಳು
ಚಿಗುರು ಹುಲ್ಲು, ಮತ್ತು ಪಲ್ಲೆ
ಕರಿದ ತಿಂಡಿ ಹಾ–ಳು'[೧೩೭].

ಮಕ್ಕಳಿಗೆ ಪ್ರಾಸಬದ್ಧವಾದ ಪದಗಳೆಂದರೆ ಬಲು ಪ್ರೀತಿ. ಇಲ್ಲಿ ತನ್ನ ಜೊತೆ ಮೊಲದ ಮರಿಯನ್ನು ಆಡಲು ಕರೆಯುವ ವಿಧಾನ, ಮಗು ಮತ್ತು ಮೊಲ ಇಬ್ಬರ ಆತ್ಮೀಯತೆ ಪ್ರಧಾನವಾದರೂ, ಎಲ್ಲವನ್ನು ಕೊಟ್ಟು ತನ್ನೊಡನೆ ಆಡಲು ಕರೆಯುವ ಮಗುವಿನ ಮುಗ್ಧತೆ ಕುತೂಹಲಕಾರಿಯಾದುದು. ಮಗುವಿಗೆ ಹಾಲು, ಅನ್ನ, ಕಾಳು, ಹುಲ್ಲು, ಪಲ್ಲೆ, ಮೊದಲಾದ ಪದಗಳನ್ನು ಪರಿಚಯಿಸುವ ಉದ್ದೇಶ ಪಳಕಳರದು. ಜೊತೆಗೆ ಕನ್ನಡದ ಅಭಿಮಾನವನ್ನು ವ್ಯಕ್ತಗೊಳಿಸುವ ಕ್ರಮ ಸುಂದರವಾಗಿ ಅಭಿವ್ಯಕ್ತಗೊಂಡಿದೆ.

'ಬಿಡುವಿನಲ್ಲಿ ತೊಡೆಯ ಮೇಲೆ
ಇರಿಸಿಕೊಂಡು ಕೂ–ತು
ಸವಿಯ ನಮ್ಮ ಕನ್ನಡದಲೆ
ಆಡುತಿರುವೆ ಮಾ–ತು'[೧೩೮].

ಮಗು ಶಾಲೆಯಲ್ಲಿ ಸವಿಯಾದ, ಸರಳವಾದ ಕನ್ನಡ ಪದಗಳನ್ನು ಕಲಿಯುವ ಬಯಕೆ ಪಳಕಳರದ್ದು. ಮೊಲದ ಮರಿಯೊಂದಿಗೆ ಶಾಲೆಗೆ ಕೂಡಿಕೊಂಡು ಹೋಗುವುದು, ಪಾಠ ಕಲಿಯುವುದು, ಹಾಡಿ ಕುಣಿಯತ್ತ ಆಟವಾಡುವುದು ವ್ಯಕ್ತಗೊಳಿಸಿದ್ದಾರೆ.

ಮಕ್ಕಳಲ್ಲಿ ಪರೋಪಕಾರಿ ಗುಣಗಳನ್ನು ಮೂಡಿಸಲು ಪಳಕಳರು 'ಎಂಥ ಗುಣ' ಕವನದಲ್ಲಿ;

'ಮಾವಿನ ಮರೆದೆಡೆ
ಪುಟ್ಟನು ಬಂದ
ಗೊಂಚಲು ಗೊಂಚಲು
ಹಣ್ಣನು ಕಂಡ
ನಿಲ್ಲದೆ ಓಡಿದ ಬುಡದತ್ತ
ಆ ಮರ ಪಡೆಯಿತು
ಕಲ್ಲಿನ ಪೆಟ್ಟು
ಆದರೂ ಮಾಡಲೆ
ಇಲ್ಲವು ಸಿಟ್ಟು
ಹಣ್ಣನು ಉದುರಿಸಿ ಕೆಳಗಡೆಗೆ
ತಿನ್ನಲು ಕೊಟ್ಟಿತು ಹುಡುಗನಿಗೆ'[೧೩೯].

ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗೆ ತಿಳಿಯಾದ ನೀತಿಯನ್ನು ಬೆಸೆಯುವ ಹಂಬಲ ಬಿತ್ತರಿಸುತ್ತಾರೆ. ಮಾವಿನ ಮರಕ್ಕೆ ಕಲ್ಲು ಎಸೆದು ಪುಟ್ಟು ಮಾವಿನ ಹಣ್ಣುಗಳನ್ನು ಉದುರಿಸುವನು. ಮರ ಪೆಟ್ಟು ತಿಂದರೂ ಸುಮ್ಮನಾಗಿರುವುದು. ಸಿಟ್ಟು ಮಾಡಿಕೊಳ್ಳದೆ ಹಣ್ಣನ್ನು ಕೊಡುವುದು. ಇದನ್ನು ಮಗು ಅರ್ಥೈಸುವ ರೀತಿ ವಿಭಿನ್ನವಾದುದು. ನೋವನ್ನು ನೀಡಿದರೂ ಮಂದಿಗೆ ಸಿಹಿ ಹಣ್ಣನ್ನೇ ನೀಡುವುದು. ಮರದ ಗುಣ ನಮಗೂ ಬರಲಿ ಎಂಬ ಆಶಯ ಅಭಿವ್ಯಕ್ತಗೊಂಡಿದೆ. ಪಳಕಳ ಸೀತಾರಾಮ ಭಟ್ಟರು ಪ್ರಾಕೃತಿಕ ವಸ್ತುಗಳಾದ ಕಾಡು, ಮರ, ಗಿಡ, ಬಳ್ಳಿ, ಹೂ, ಹಣ್ಣು, ಹಕ್ಕಿ ಮೊದಲಾದ ವಸ್ತುಗಳನ್ನು ಅಭಿವ್ಯಕ್ತಿಗೆ ಬಳಸಿಕೊಂಡಿದ್ದಾರೆ. ಈ ಕವನಗಳ ಉದ್ದೇಶ ಪ್ರಕೃತಿ ವ್ಯಾಪಾರದ ಕಡೆಗೆ ಗಮನ ಹರಿಯುವಂತೆ ಮಾಡುವುದು. ನಿಸರ್ಗದ ಸಹಜ ಸೌಂದರ್ಯವನ್ನು ಕಂಡು ಆಸ್ವಾದಿಸುವಂತೆ ಮಕ್ಕಳನ್ನು ರೂಪಿಸುವುದು. ಬದುಕಿನ ಸೌಂದರ್ಯವನ್ನು ಪ್ರೀತಿಯಿಂದ ಅನುಭವಿಸುವ ಕ್ರಮ ಕಂಡುಬರುತ್ತದೆ.

'ಮುದ್ದು ಪುಟ್ಟಿಗೆ' ಎನ್ನುವ ಕವನ ಮಕ್ಕಳಿಗೆ ಅಂಕಿಗಳ ಅರಿವನ್ನು ಮಾಡಿಕೊಡುವಂತಿದೆ. ದೇಹದ ಪ್ರತಿಯೊಂದು ಅಂಗಗಳನ್ನು ತಿಳಿಸಿಕೊಡುವ ಪ್ರಸಂಗ ಮಗುವಿಗೆ ಹಿತವೆನಿಸುತ್ತದೆ. 'ಎಡದ ಬಲದ ಕೈಗಳಲ್ಲಿ ಹತ್ತು ಬೆರಳು' ಅತ್ತ ಒಂದು ಇತ್ತ ಒಂದು ಕಂಗಳೆರಡು ಒಟ್ಟಿಗೆ' ಹೀಗೆ ಪಳಕಳರು ಮಕ್ಕಳ ಆಲೋಚನೆಯನ್ನು ಹೆಚ್ಚಿಸುತ್ತಾರೆ. ಮಕ್ಕಳ ಆಸೆಗೆ ಮಿತಿಯಿಲ್ಲ. ಅದು ಮಾಯಾಲೋಕ ಎಲ್ಲಿ ಬೇಕಾದಲ್ಲಿ ಹೋಗಬಹುದು, ಹಾರಬಹುದು. ಅಂಥ ಆಸೆ ಪಳಕಳರ ಮುಗ್ಧ ಮನದಲ್ಲಿ ಮೂಡುವುದು ಹೀಗೆ.

'ಹಕ್ಕಿಯಾಗಿ ಮೇಲೆ ಹಾರಿ
ನೀಲ ಬಾನ ಬಯಲ ಸೇರಿ
ನಾಡ ಚೆಲುವ ನೋಡುವಾಸೆ
ಹಿಗ್ಗಿ ಹಾಡು ಹಾಡುವಾಸೆ
ಹೂವಿನಂತೆ ನಗುತ ಇದ್ದು
ಸುತ್ತ ಗಂಧ ಸೂಸಿ ಖುದ್ದು
ಜನಕೆ ಹರುಷ ನೀಡುವಾಸೆ
ಜಗದ ಸೇವೆ ಮಾಡುವಾಸೆ'[೧೪೦].

ಮಗು ಹಕ್ಕಿಯನ್ನು ನೋಡಿ ಆಗಸದ ವಿಶಾಲ ಬಯಲಿನಲ್ಲಿ ತೇಲುವ ಆಸೆ ವ್ಯಕ್ತಪಡಿಸುತ್ತದೆ. ಆಗಸದಲ್ಲಿ ಹಾರುತ್ತ ನಾಡಿನ ಸುಂದರ ಸೊಬಗನ್ನು ಸವಿಯುವ ಆಸೆ; ಚಂದ್ರನಂತೆ ನಗುತ ಬೆಳಕು ಬೀರುವ ಬೆಳ್ದಿಂಗಳಂತೆ ಚೆಣ್ಣರನ್ನು ಕುಣಿಸುವ ಆಸೆ; ಮರದ ಹಸಿರು ವೈಭವ, ಹೂವು ಹಣ್ಣು ತುಂಬಿದ ತಂಪು ಕೊಡುವ ಮರವಾಗುವಾಸೆ, ಹೂವಿನಂತೆ ಸುಗಂಧವನ್ನು ಹರಡುವ, ಜನಕೆ ಮತ್ತು ಜಗಕೆ ಸಂತೋಷ ನೀಡುವ ಬಯಕೆಯನ್ನು ಮಗುವಿನ ಮೂಲಕ ಪಳಕಳರು ವ್ಯಕ್ತಪಡಿಸುತ್ತಾರೆ.

ಮಾನವನಲ್ಲಿ ಹಂಚಿತಿನ್ನುವ ಗುಣ ಕಡಿಮೆ. ಪಕ್ಷಿಗಳಲ್ಲಿ, ಪ್ರಾಣಿಗಳಲ್ಲಿಯ ಕೂಡಿತಿನ್ನುವ ಮನೋಧರ್ಮ ಮಕ್ಕಳಲ್ಲಿ ಬೆಳೆಯಲ್ಲಿ ಎನ್ನುವುದು ಪಳಕಳರ ಅಭಿಮತ. ಅದನ್ನು 'ಮುದ್ದು ಕಿಟ್ಟು'ವಿನ ಮೂಲಕ ವ್ಯಕ್ತಗೊಳಿಸುತ್ತಾರೆ.

'ನಡೆದು ಬಂದು ಮುದ್ದು ಕಿಟ್ಟು
ಕಡಲೆ ಕೊಂಡು ಕಾಸು ಕೊಟ್ಟು
ತಾನೆ ಎಲ್ಲ ತಿನಲು ಮೆಲ್ಲ ಮರೆಗೆ ಓಡಿದ
ಆಗ ಒಂದು ಕಾಗೆ ಬಂದು
ಬಿದ್ದ ತುಂಡು ರೊಟ್ಟಿ ಕಂಡು
ಗೆಲುವಿನಿಂದ ಹಂಚಿ ತಿಂದ ಕಡೆಗೆ ನೋಡಿದ
ಹಂಚಿ ತಿಂದು ಪಾಠವೊಂದು
ಕಲಿಸಿತೆಂದು ಕಿಟ್ಟು ಅಂದು ಮನದಿ ತಿಳಿದನು
ಬಳಿಕ ಚಿಣ್ಣ ಗೆಳೆಯರನ್ನ
ಕರೆದು ತನ್ನ ಕಡಲೆಯನ್ನು
ಹಂಚಿಕೊಟ್ಟು ತಿಂದು ಬಿಟ್ಟು ನಕ್ಕು ನಲಿದನು'[೧೪೧]

'ಕಾಗೆಯೊಂದು ಅಗುಳ ಕಂಡರೆ ಕರೆಯುವುದು ತನ್ನ ಬಳಗವನ್ನು' ಎಂಬ ಮಾತಿನಂತೆ ಪಳಕಳರು ಕಿಟ್ಟುವಿನ ಮೂಲಕ ಹೇಳುತ್ತಾರೆ. ಹಂಚಿತಿನ್ನುವ ಗುಣ ಮಕ್ಕಳಲ್ಲಿ ಮೂಡಲಿ ಎನ್ನುವುದೇ ಕವಿತೆಯ ಉದ್ದೇಶ. ಕಿಟ್ಟು ಕಾಗೆಯನ್ನು ನೋಡಿ ತನ್ನ ಗುಣವನ್ನು ಬದಲಾಯಿಸಿಕೊಳ್ಳುವ, ಕೂಡಿ ತಿನ್ನುವ ಪ್ರಸಂಗದ ಸಂತೋಷಕ್ಕೆ ಕೊನೆಯಿಲ್ಲ ಎಂಬುದು ಆತನ ನಲಿವಿನಲ್ಲಿ ವ್ಯಕ್ತವಾಗಿದೆ.

ನಿಸರ್ಗದ ವೈವಿಧ್ಯತೆಯನ್ನು ಕಂಡು ಮಗು ತಾಯಿಗೆ ಪ್ರಶ್ನೆ ಮಾಡುತ್ತದೆ. 'ಮುತ್ತಿನ ಮಣಿಗಳ ಮಾಲೆ ಈ ಮಳೆ ಏನಿದು ಹೇಳಮ್ಮ, ನೀಲಿಯ ಬಾನಲಿ ನೀರಿನ ರಾಶಿ, ಚಿಕ್ಕೆಯ ತೂತುಗಳೆಡೆಯಲಿ ಸೋರಿದ ನೀರೆ' ಮುಂತಾದ ರೀತಿಯಲ್ಲಿ ಮಗುವಿನ ಕಲ್ಪನೆ ಮೂಡುತ್ತವೆ.

'ಮೂಡಣ ದಿಕ್ಕಿನ ಬಣ್ಣದ ಬಿಲ್ಲಿನ
ಕಮಾನು ಕಟ್ಟಿದ ಯಾರಮ್ಮಾ?
ಭೂಮಿಗು ಬಾನಿಗು ಸೇತುವೆ ನಿರ್ಮಿಸಿ
ನಿಲ್ಲಿಸಿದವನನು ತೋರಮ್ಮಾ'[೧೪೨].

ಸೃಷ್ಟಿಯ ಸುಂದರ ಸನ್ನಿವೇಶ ಕವಿಗೆ ಮನಮೋಹಕವೆನಿಸಿದಂತಿದೆ. ಕಾಮನ ಬಿಲ್ಲು ಬಾನಿಗು-ಭುವಿಗು ಸೇತುವೆ ನಿರ್ಮಿಸಿದೆ ಎನ್ನುವಲ್ಲಿ ಪಳಕಳರು ಮಕ್ಕಳ ಮನಸ್ಸನ್ನು ಮೀರಿದ ಕಲ್ಪನೆ ಮೂಡಿಸಿದ್ದಾರೆ. ನಾನಾ ರೀತಿಯಲ್ಲಿ ಮಗು ತಾಯಿಗೆ ಕೇಳಿದರೂ ತಿಳಿಯದು ಎನ್ನುತ್ತದೆ. ಮೋಡ, ಗುಡುಗು, ಮಿಂಚು ಮಕ್ಕಳಲ್ಲಿ ಕುತೂಹಲ ಮೂಡಿಸಿವೆ. ಪಳಕಳ ಸೀತಾರಾಮ ಭಟ್ಟರು 'ಅಂಚೆಯಣ್ಣ'ನನ್ನು ನೋಡುವ ಬಗೆಯೇ ಸುಂದರ.

'ಖಾಕಿ ಅಂಗಿ ಪ್ಯಾಂಟು ತೊಟ್ಟು
ಹೆಗಲ ಚೀಲ ಇಳಿಯ ಬಿಟ್ಟು
ಅಂಚೆಯಣ್ಣ ಬರುವನು
ಅಂಚೆಯನ್ನ ತರುವನು
ಸುದ್ದಿ ಪತ್ರ ಹಲವು ಮತ್ತು
ಅಂಚೆ ಹಣದ ಆಜ್ಞೆ ಹೊತ್ತು
ಶುಭ ದಿನಗಳ ಆಶಯ
ತರುವ ನೀ ಮಹಾಶಯ'[೧೮೩].

ಕಾಯಕ ಜೀವಿ ಅಂಚೆಯಣ್ಣ. ಯಾವುದೇ ಭೇದವಿಲ್ಲದೆ ಎಲ್ಲರ ಶುಭ ಸಂದೇಶ ಹೊತ್ತು ತರುವ ನಯ-ವಿನಯದ ಮೂರುತಿ. ಹಿರಿಯರಿರಲಿ ಕಿರಿಯರಿರಲಿ ಎಲ್ಲರಿಗೂ ಅಂಚೆಯಣ್ಣ ಬಲು ಪ್ರೀತಿ. ಸೇವೆಯೇ ಇವನ ಕೀರುತಿ. ಇವನ ಆದರ್ಶ ಮಕ್ಕಳು ಬೆಳೆಸಿಕೊಳ್ಳಲು ಪಳಕಳರು ಕರೆ ನೀಡುತ್ತಾರೆ. ಮಗುವಿನ ಮನಸ್ಸು ಹುವಿನ ಹಾಗೆ ಮೃದುವಾದುದು. ತಾಯಿಯ ವಾತ್ಸಲ್ಯದ ನುಡಿಗಳಿಗೆ ಮನಸೋಲುವುದು.

ಜೋಗುಳ ಹಾಡಿಗೆ ತಲೆದೂಗುವುದು. ನಲಿಯುತ ತೊಟ್ಟಿಲಲಿ ಮಲಗುವುದು.

'ಬಿಗಿದಪ್ಪಿ ಮುದ್ದಿಸಿ ಕುರುಳು ನೇವರಿಸಿ
ಮಡಿಲಿನ ಮರೆಯಲಿ ಮೊಲೆಹಾಲು ಉಣಿಸಿ
ಮೆತ್ತನೆ ಹಾಸಿನ ತೊಟ್ಟಿಲೊಳಿರಿಸಿ
ತೂಗುವೆ ಬೆಚ್ಚನೆ ಹೊದಿಕೆಯ ಹೊದಿಸಿ ॥ ಜೋ ಜೋ ॥
ಉತ್ತಮ ನಡೆ ನುಡಿ ಪಡೆದವನಾಗು
ನಿತ್ಯವು ದೇವನ ನೆನೆಯುತ ಬಾಗು
ನಾಡಿನ ಒಳಿತಿಗೆ ನೀ ದುಡಿಯಣ್ಣಾ
ನಿನ್ನಯ ಜೀವನ ಬೆಳಗಲಿ ಚಿಣ್ಣಾ'[೧೮೪] **॥ ಜೋ ಜೋ ॥**

ತಾಯಿಯ ಮಡಿಲು ಅಂದರೆ ಮಗುವಿಗೆ ಬಲು ಖುಷಿ. ತಾಯಿಯೇ ಮಗುವಿನ ಸರ್ವಸ್ವ. ಪ್ರೀತಿಯಿಂದ ತಲೆಯನು ನೇವರಿಸಿ, ಸೆರಗಿನ ಮರೆಯಲಿ ಹಾಲು ಕುಡಿಸುವ ತಾಯಿ, ಯಾರ ದೃಷ್ಠಿಯು ಮಗುವಿಗೆ ತಾಗದಿರಲಿ ಎನ್ನುವುದೇ ಸೆರಗಿನ ಮರೆ. ಇಂಥ ಆಸರೆಯಲ್ಲಿ ಬೆಳೆಯಲು ಮಗು ಬಯಸುತ್ತದೆ. ಜೋಗುಳ ಹಾಡುತ್ತ ಅದರ ಆರೈಕೆ-ಹಾರೈಕೆಗಳನ್ನು ಅಭಿವ್ಯಕ್ತಗೊಳಿಸುತ್ತಾಳೆ. ನಿನ್ನ ನಗುವಿನ ಮೊಗ ನನ್ನ ಕಷ್ಟವನ್ನು ಮರೆಸುತ್ತದೆ. ನೀನೆ ನನ್ನ ಮನವನು, ಮನೆಯನು ಬೆಳಗುವ ವಂಶದ ಬಳ್ಳಿ ಎಂದು ಕೊಂಡಾಡುವಳು. ಮಗು ಬೆಳೆದು ದೊಡ್ಡವನಾಗಿ ನಾಡಿನ ಒಳಿತಿಗಾಗಿ ದುಡಿಯಬೇಕು. ಒಳ್ಳೆಯ ನಡೆ-ನುಡಿಯವನಾಗಿ, ಎಲ್ಲರಿಗೂ ಬೇಕಾಗಿ ಬಾಳಬೇಕು. ಸತ್ಯಕ್ಕಾಗಿ ಹೋರಾಡು, ನಿತ್ಯವೂ ದೇವನ ನೆನೆಯುತ ನೀನಿರು. ಅಂದಾಗ ಮಾತ್ರ ನಿನ್ನ ಶ್ರೇಯಸ್ಸು, ನಿನ್ನ

ಬದುಕು ಸುಂದರ-ಸಂತಸಮಯವಾಗಿರಲು ಸಾಧ್ಯವೆಂದು ತಾಯಿ ಮಗುವಿಗೆ ಜೋಗಳ ಹಾಡುತ್ತ ತೊಟ್ಟಿಲಲ್ಲಿ ಮಲಗಿಸುವ ಸನ್ನಿವೇಶ ಕಣ್ಣಿಗೆ ಕಟ್ಟುವಂತಿದೆ. ಪಳಕಳ ಸೀತಾರಾಮ ಭಟ್ಟರು ಇಂಥ ಹಲವು ಜೋಗುಳ ಗೀತೆಗಳನ್ನು ರಚಿಸಿದ್ದಾರೆ. ಕವನ ಪ್ರಾಸದೊಂದಿಗೆ ಇಂಪಾಗಿ ಮಾಡಿದೆ.

ಗ್ರಾಮ ಪರಿಸರದ ಕವಿ ಪಳಕಳರು ತಮ್ಮ ಕವನಗಳ ವಸ್ತುವಾಗಿ ಬಳಸಿರುವುದು ಸುತ್ತಲಿನ ಸಂಗತಿಗಳನ್ನು, ಮಾನವ ಬದುಕಿನಲ್ಲಿ ಮದುವೆ ನಡೆಯುತ್ತದೆ. ಆದರೆ ಇಲ್ಲಿ ಹೂಗಳ ಮದುವೆ ನೆರವೇರುತ್ತದೆ. ಅದನ್ನು ಪಳಕಳರು ಮಕ್ಕಳ ನೆಲೆಯಲ್ಲಿ ಕಟ್ಟಿಕೊಟ್ಟಿರುವುದು ಬಲು ಸುಂದರ.

'ಸಂಪಿಗೆ ಹುಡುಗುರು ಮಲ್ಲಿಗೆ ಹುಡುಗಿಗು
ನೋಡಲು ಜೋಡಿಯು ಸರಿಯುಂಟು
ಒಪ್ಪಿಗೆ ಪಡೆಯಲಿ ತಪ್ಪದೆ ನಡೆಯಲಿ
ಬೆಳಸಲಿ ಮದುವೆಯ ನಿಜ ನಂಟು'.
'ಎನ್ನುತ ಜಾಜಿಯು, ಲಲ್ಲಿ, ಗುಲಾಬಿಯು
ಗೋರಟೆ, ಸೇವಂತಿಗೆ ಕೂಡಿ
ಸಂಪಿಗೆ ಮಲ್ಲಿಗೆ ನಗುತಿರುವಲ್ಲಿಗೆ
ಬಂದವು ಬೇಗನೆ ಓಡೋಡಿ'
'ಮದುಮಗ ಸಂಪಿಗೆ ಮಗಳೇ ಮಲ್ಲಿಗೆ
ಮದುವೆಯು ನಡೆಯಿತು ಶುಭ ಘಳಿಗೆ
ಪಡೆಯಿತು 'ಹೂಜನ' ಗಂಧದ ಭೋಜನ
ಗಾಳಿಯೆ ಬಡಿಸಿತು ಎಲ್ಲರಿಗೆ'[೧೪೫].

ಮಕ್ಕಳಿಗೆ ವಿವಿಧ ಬಗೆಯ ಹೂವುಗಳನ್ನು ಪರಿಚಯ ಮಾಡುವುದು ಪಳಕಳರ ಉದ್ದೇಶವೆನಿಸುತ್ತದೆ. ಸಂಪಿಗೆ ಹೂವಿನ ಬಣ್ಣವನ್ನು, ಅದರ ಗಂಧವನ್ನು ವ್ಯಕ್ತಗೊಳಿಸುತ್ತ ಅವನೊಬ್ಬ ಮದುಮಗನೆಂಬ ಪರಿಕಲ್ಪನೆ ಮೂಡಿಸಿದ್ದಾರೆ. 'ಮಲ್ಲಿಗೆ ಎಂಬ ಮದುಮಗಳು ಸಣ್ಣನೆ ಗಾತ್ರದ ಹಾಲಿನ ಬಣ್ಣದ ಪರಿಮಳ ಚೆಲ್ಲುವ ಬಲು ಬೆಡಗಿ' ಎಂದು ಹೇಳುವ ಪಳಕಳರ ಅಭಿವ್ಯಕ್ತಿ ಮತ್ತಾರು ಹೇಳಲು ಅಸಾಧ್ಯವೆನ್ನಬಹುದು. ಇದು ಕವಿಯ ಅನುಭವದ ಕಲ್ಪನೆ ಅಗಾಧವಾದುದು. ಜಾಜಿ. ಲಲ್ಲಿ, ಗುಲಾಬಿ, ಗೋರಟೆ, ಸೇವಂತಿಗೆಗಳು ಕೂಡಿಕೊಂಡು ಮಲ್ಲಿಗೆ ಸಂಪಿಗೆ ಇರುವಲ್ಲಿಗೆ ಬರುವುದು, ಕೋಗಿಲೆ ಹಾಡುವುದು, ತುಂಬಿಗಳು ಪುರೋಹಿತರಾಗುವುದು, ಹೂಗಳ ತೋಟ ಬಳ್ಳಿಯ ಚಪ್ಪರ ಹಾಕಿ ಮದುವೆ ನೆರವೇರುವುದು. ಹೂಗಳ ಪರಿವಾರ ಗಂಧದ ಭೋಜನ ಸವಿಯುವುದು, ಗಾಳಿಯು ಎಲ್ಲರಿಗೂ ಔತಣ ಬಡಿಸುವುದು, ಈ ಎಲ್ಲ ಸಂಭ್ರಮ ಹೂಗಳ ಮದುವೆಯಲ್ಲಿ ನಡೆಯುವುದು. ಮಕ್ಕಳು ಇಂಥ ಕವನವನ್ನು ಆನಂದದಿಂದ ಸವಿದು, ರಂಜನೆಯ ಭಾವದಲ್ಲಿ ತೇಲಾಡಲು ಪಳಕಳರು ಕಟ್ಟಿಕೊಟ್ಟಿದ್ದಾರೆ.

ಮಕ್ಕಳು ಮುಗ್ಧ ಪ್ರಪಂಚವನ್ನು ಕಟ್ಟಿಕೊಂಡು ಆಟವಾಡುವುದು ನಮಗೆ ಗೊತ್ತು. ಇಲ್ಲಿ ಚಿಂತನೆಗಳಿಗೆ ಅವಕಾಶ ಕಡಿಮೆ ಎನ್ನುವುದು ಹಿರಿಯರ ನುಡಿ. ಆದರೆ ಮಗುವಿನ ಮನದಲ್ಲಿ ಹಲವಾರು ಆಲೋಚನೆಗಳು ಸೃಷ್ಟಿಯಾಗುತ್ತವೆ ಮತ್ತು ಮರೆಯಾಗುತ್ತವೆ. ಹುಟ್ಟಿದ ಮಗು ತನ್ನ ತಾಯಿಯಿಂದ ಹಿಡಿದು ಎಲ್ಲರನ್ನು ಗಮನಿಸುತ್ತದೆ. ಅರಿತುಕೊಳ್ಳಲು ಪ್ರಯತ್ನಿಸುತ್ತದೆ. ಮಗು ಬೆಳೆದಂತೆ ಅದರ ಬುದ್ಧಿಯು ಬೆಳೆಯುತ್ತದೆ. ಹಿರಿಯರು ಮಗುವಿನ ಯಾವುದೆ ಮಾತಿಗೆ ಸರಿಯಾಗಿ ಉತ್ತರಿಸಬೇಕು, ತಿರಸ್ಕಾರದ ಮನೋಭಾವ ಸಲ್ಲದು, ಅಂದಾಗ ಮಾತ್ರ ಮಗು ಸುಂದರವಾಗಿ, ಉಲ್ಲಾಸಭರಿತನಾಗಿ, ವಿಚಾರವಂತನಾಗಿ ಬೆಳೆಯಬಲ್ಲ. ವಾಸ್ತವದ ಸಂಗತಿಯೆಂದರೆ ಮಕ್ಕಳ ಮನಸ್ಸು ಕುತೂಹಲಗಳ ಆಗರ. ಅದು ಕಲ್ಪನೆಯ ಜಗತ್ತು. ಅಲ್ಲಿಂದಲೆ ಮಗು ಹೊರ ಜಗತ್ತನ್ನು ನೋಡುತ್ತದೆ. ತನಗೆ ಕಾಣುವ ಪ್ರತಿಯೊಂದು ವಸ್ತುವನ್ನು ಬೆರಗುಗಣ್ಣಿನಿಂದ ನೋಡಿ ಮಾತನಾಡಿಸುತ್ತದೆ. 'ಮಕ್ಕಳು ನಕ್ಷತ್ರ ಇದ್ದಂತೆ. ಭೂಮಿಯ ಮೇಲೆ ನಿಂತು ನೋಡಿದರೆ ಅವು ಮಿರುಗುವ ಕಿರುತಾರೆಯಾಗಿ ಕಾಣುತ್ತವೆ. ಮೇಲೆ ಏರಿ ನೋಡಲು ಹೋದರೆ ಅವು ಕಿರಿದೂ ಗುಂಡೂ ಆಗಿ ಕಾಣಲಿಕ್ಕಿಲ್ಲ. ಅಖಂಡ ಜ್ಯೋತಿಯಾಗಿ ಕಂಡಾವು. ನಮ್ಮ ಕಣ್ಣು ಆತ್ಮದ ದೃಷ್ಟಿಯಿಂದ ಬೆಳಗಿದರೆ ಮಕ್ಕಳ ಪರಿಶುದ್ಧಾತ್ಮದ ಪ್ರಕಾಶ ಕಂಡೀತು. ಇಲ್ಲದೆ ಇದ್ದರೆ ಬರೀ ಮಣ್ಣಿನ ಮುದ್ದೆಯಾಗಿ ಮೈ ಕಂಡೀತು. ಮಗುವಿನ ಬಾಯಲ್ಲಿ ವಿರಾಟ ಪ್ರಪಂಚವನ್ನೇ ನೋಡಿದ ಭಾಗ್ಯ ಯಶೋದಾ ತಾಯಿಯದಾದರೆ, ಶಿಶುಲೋಕದ ಅನಿರ್ವಚನೀಯ ಶಾಂತಿಯನ್ನು ಅಧ್ಯಾತ್ಮ ದೃಷ್ಟಿಯಿಂದ ಅರಿತುಕೊಳ್ಳುವ ದಿವ್ಯಕಲೆ ಗಾಂಧೀಜಿಯದು. ಅಂತೇ ಗಾಂಧೀಜಿಯ ನಗೆಯಲ್ಲಿ ಮಕ್ಕಳ ನಗುವಿನ ನಿರ್ಮಲ ಕಾಂತಿಯಿದೆ'[೧೪೭] ಎನ್ನುವ ಮಾತುಗಳು ಮಕ್ಕಳ ಪ್ರಪಂಚವನ್ನೇ ತೆರೆದು ನೋಡಿದಂತೆ ಭಾಸವಾಗುತ್ತದೆ. ಪಳಕಳ ಸೀತಾರಾಮ ಭಟ್ಟರು ಹೇಳುವ ಮಕ್ಕಳ ಲೋಕದ ವಸ್ತುಗಳು ನಾನಾ ಬಗೆಯಲ್ಲಿ ವ್ಯಕ್ತಗೊಂಡಿವೆ. 'ಅಲ್ಪ ಸುಖಕ್ಕೆ ಅಪಾರ ಕಷ್ಟ', 'ಹಾಡಿದ ಕತ್ತೆ', 'ಸಲ್ಲದ ಕೆಲಸಕೆ ಹೋದಾಗ', 'ಅವಸರದ ಅನರ್ಥ', 'ಕರಡಿ ಹೇಳಿದ ಗುಟ್ಟು', 'ಗುರುವಿನ ತೀರ್ಪು', 'ದೇವನ ಮಾತು', 'ದೇವನೊಬ್ಬ ನಾಮ ಹಲವು', 'ಜಾಣ ಮಂತ್ರಿ', 'ಜನ್ಮಭೂಮಿ', 'ನಾವೇ ಭಾಗ್ಯವಂತರು', 'ಕಟ್ಟೋಣ ನವ ಭಾರತ', 'ಚಿಣ್ಣನಿಗೆ', 'ಯಾರವನು', 'ಮೊಟ್ಟೆಯಿಂದ ಚಿಟ್ಟೆ', 'ಹಕ್ಕಿಯಾವುದು', 'ದೂರದರ್ಶನ', 'ಕತ್ತೆಯ ಗುಣ' ಹೀಗೆ ಹಲವು ಬಗೆಯ ಕವನಗಳನ್ನು ಪಳಕಳರು ಮಕ್ಕಳಿಗೆ ನೀಡಿರುವರು. ಮಗು ವಾತಾವರಣದ ಪ್ರತಿಯೊಂದು ವಸ್ತುವನ್ನು ತೀಕ್ಷ್ಣ ಭಾವದಿಂದ ಗಮನಿಸಿ ಪ್ರಶ್ನೆ ಮಾಡುತ್ತದೆ.

'ಮಣ್ಣಿನ ಎಡೆಯಲಿ ತಂಪಿನ ಕಡೆಯಲಿ
ವಾಸವ ಮಾಡುವ ಎರೆಹುಳವೆ
ನೀನೆ ವಿಚಿತ್ರನು ರೈತನ ಮಿತ್ರನು
ಗೊತ್ತಿದೆ ನನಗೆ ಎಲೆ ಹುಳವೆ.......
ನೇಗಿಲು ಇಲ್ಲದೆ ಭೂಮಿಯನುಳುವುದೆ

ಕೆಲಸವು ದೊಡ್ಡದು ನಿನ್ನದಿದೆ
ಬೆಳೆಸುವುದಕೆ ಬೆಳೆ ಹದವಾಗುವುದಿಳೆ
ನಿನಗಿದೊ ವಂದನೆ ನನ್ನದಿದೆ'[೧೪೮].

ಮಗುವಿಗೆ ಎರೆಹುಳು ಕೇವಲ ಒಂದು ಹುಳು. ಅದರ ಪ್ರಯೋಜನ ಅರಿಯದು. ಆದರೆ ಪಳಕಳರು ಇದನ್ನು ರೈತನ ಮಿತ್ರ ಎಂದು ವರ್ಣಿಸಿದ್ದಾರೆ. ಅದರ ಕಾರ್ಯಗಳನ್ನು ಮತ್ತು ಪ್ರಯೋಜನಗಳನ್ನು ಕುರಿತು ಹೇಳಿರುವುದು ಅಂದು, ಇಂದು ಎರೆಹುಳುವಿನ ಮಹತ್ವ ಕೃಷಿಯಲ್ಲಿ ಅಪಾರ. ಯಾವುದೇ ರಸಾಯನಿಕ ಗೊಬ್ಬರಗಳನ್ನು ಉಪಯೋಗಿಸದೇ ಎರೆಹುಳುಗಳಿಂದ ಗೊಬ್ಬರ ತಯಾರಿಸುವ ವಿಧಾನ ಪ್ರಸ್ತುತ ಬಳಕೆಯಲ್ಲಿದೆ. ಹೆಚ್ಚು ಹೆಚ್ಚು ಈ ಕ್ರಮವನ್ನು ಅನುಸರಿಸಿದರೆ ಭೂಮಿ ಫಲವತ್ತಾಗಿ ಬೆಳೆಯಲು ಸಾಧ್ಯ. ಹಿನ್ನೆಲೆಯಾಗಿ ಪಳಕಳರು ಆಧುನಿಕ ಗೊಬ್ಬರಗಳನ್ನು ತ್ಯಜಿಸಬೇಕೆಂದು ಕಿವಿ ಮಾತು ಹೇಳಿದಂತಿದೆ.

'ಮಣ್ಣ ಹೊನ್ನು ಹೂವು ಹಣ್ಣು
ಮತ್ತೆ ಗಂಧ ಚಂದನ
ಗೋಂದು ರಾಳ ಮೂಲಿಕೆಗಳ
ಅಡವಿ ನಮಗೆ ನಂದನ
ಸುತ್ತ ಸೊಂಪು ಸುಮದ ಕಂಪು
ನೆರಳ ತಂಪು ಕಾಡಲಿ
ನೆಲಕೆ ಮಳೆಯು ಹೊಲಕೆ ಬೆಳೆಯು
ಕಾಡು ಮೆರೆವ ನಾಡಲಿ
ಹಕ್ಕಿ ಹಿಂಡು ಪ್ರಾಣಿ ದಂಡು
ಕೋಟಿ ಜೀವ ಸಾಗರ
ಕೂಡಿ ಆಡಿ ಹಿಗ್ಗಿ ಹಾಡಿ
ನಲಿವ ಚೆಲವಿನಾಗರ'[೧೪೯].

ಕಾಡನ್ನು ಉಳಿಸುವ ಬೆಳೆಸುವ ಹೊಣೆ ನಮ್ಮದು. ಕಾಡನ್ನು ರಕ್ಷಣೆ ಮಾಡದಿದ್ದರೆ ಮಾನವ ಕುಲದ ಅಷ್ಟೇ ಅಲ್ಲ ಜೀವ ಸಂಕುಲದ ನಾಶ ಎಂಬ ಸತ್ಯವನ್ನು ಪಳಕಳರ ಕವನ ವ್ಯಕ್ತಗೊಳಿಸುತ್ತದೆ. ಕಾಡಿನಿಂದ ಬೆಳೆದ ಮರಗಳ ಉಪಯೋಗವನ್ನು ಗುರುತಿಸುತ್ತ ಹೋಗುತ್ತಾರೆ. ಹಾಗೆ ಮರಳ ನಾಶ. ಅದನ್ನು ಮುಂದುವರೆಸದೆ ಕಾಡು ಸಂರಕ್ಷಿಸಿ ಬೆಳೆಸಲು ಕರೆ ನೀಡುತ್ತಾರೆ. ಹಕ್ಕಿಗಳ ಕೋಟಿ ಸಾಗರ ಸಂತಸದಿಂದ ಹಾಡಿ ನಲಿವ ಚೆಲುವಿನ ಆಗರ, ಶಾಂತಿ–ಸುಖದ ಮಂದಿರ ಎಂದು ಕವಿ ಭಾವತುಂಬಿ ಬಿತ್ತರಿಸಿದ್ದಾರೆ. 'ಸೃಷ್ಟಿ ಸಮತೆ ನೆಲಸಿ ಜನಕೆ, ಬಾಳು ಸಹಜ ಸುಂದರ'ವಾಗಲು ಸಮತೆ ಇರಬೇಕು. ಜೀವರಾಶಿಯ ಉಳಿವಿಗೆ ಮರಗಳು ಅವಶ್ಯಕ. ಇಂಥ ಕಾರ್ಯವನ್ನು ನಾವೆಲ್ಲ ಮಾಡಬೇಕು ಎಂದು ಕವಿಯ ಆಶಯ.

'ಎಲ್ಲೇ ಇರ್‍ಲಿ ಯಾರೇ ಇರ್‍ಲಿ
ದೊಡ್ಡವರಾದೋರೆಲ್ಲ

ಆಡೋದ್ರಲ್ಲಿ ಮಾಡೋದ್ರಲ್ಲಿ
ನಮ್ಮ ಹಂಗತೂ ಅಲ್ಲ
ಬಣ್ಣದ ಹೂವೇ ನಗ್ತಾ ಇದ್ರೂ
ನೋಡೋದಿಲ್ಲ ನಿಂದು
ರಾಗದಿ ಹಕ್ಕೀ ಹಾಡ್ತಾ ಇದ್ರೂ
ಕೇಳೋದಿಲ್ಲ ಬಂದು
ಹೊಸ್ತೇನಾದ್ರೂ ಕಾಣಿಸ್ಕೋಂಡ್ರುs
ಏನದು, ಏಕೆ, ಹೇಗೆ?
ಏನ್ನೋದೇನೊ ಯೋಚ್ನೆ ಮಾಡ್ದೇ
ಇದ್ಬಿಡ್ತಾರೆ ಹಾಗೇ'[೧೫೦].

ಮಕ್ಕಳ ಈ ಮಾತುಗಳು ಬೆರಗು ಮೂಡಿಸುತ್ತವೆ. ಯಾರು ಮಗುವಿನ ಮನಸ್ಸು ಹೊಂದಿರುವರೋ ಅವರು ಇಂಥ ಸಾಲುಗಳನ್ನು ಅಭಿವ್ಯಕ್ತಿಸಲು ಸಾಧ್ಯ. ಅದು ಪಳಕಳರ ಮಕ್ಕಳ ಕವನಗಳಿಗೆ ಪೂರಕವೆಸುತ್ತದೆ. ಕವಿ ಪಳಕಳರ ಈ ಕವಿತೆ ಜಿ. ಪಿ. ರಾಜರತ್ನಂ ಅವರ ಪದ್ಯದಂತೆ ಧಾಟಿ ಮತ್ತು ಭಾಷೆಯನ್ನು ಹೋಲಿಕೆಯಾಗಿ ನೋಡಲು ಸಾಧ್ಯವಿದೆ. ದೊಡ್ಡವರು ಮಕ್ಕಳನ್ನು ಗಮನಿಸುವ ರೀತಿಯನ್ನು ಕಂಡು ವ್ಯಂಗ್ಯವಾಡಿದಂತಿದೆ. 'ಕೋಪs ಗೀಪs ದುಃಖs ಗಿಕ್ಕs ಮರೆಯೋರಲ್ಲ ಫಕ್ಕ' ಎಂದು ಮಕ್ಕಳು ಹಿರಿಯರ ಮನೋಧರ್ಮವನ್ನು ಗ್ರಹಿಸಿಯೇ ಹೇಳಿದಂತಿದೆ. 'ಆಡಿs ಹಾಡಿs ನಕ್ಕು ನಲಿಯುವ' ಮಕ್ಕಳು ತಮ್ಮ ಹಾಗೆ ಯಾರು ಇಲ್ಲ ಎಂದು ಹೇಳುವಲ್ಲಿ ಹಿರಿಯರನ್ನು ನಾಚಿಸುವಂತಿದೆ. ಮುಗ್ಧತೆಯ ಅನಾವರಣ, ಮಕ್ಕಳ ಮಾತಿನಲ್ಲಿ ಪಳಕಳರು ಮಧುರವಾಗಿ ವ್ಯಕ್ತಗೊಳಿಸಿದರೂ ಹೃದಯವನ್ನು ತಟ್ಟುತ್ತದೆ. ಇರುವೆ ಮಕ್ಕಳಿಗೆ ಬಲು ಇಷ್ಟವಾದ ಕ್ರಿಮಿ. ಅದರ ಸಾಲು ಮಗುವಿಗೆ ಆಕರ್ಷಣೆ. ಇರುವೆಯ ಬದುಕು ನಮಗೆ ಪೂರಕ ಎನ್ನುವ ನೀತಿಯನ್ನು 'ಇರುವೆಯ ನೀತಿ' ಎಂಬ ಪದ್ಯದಲ್ಲಿ ಪಳಕಳರು ಅಭಿವ್ಯಕ್ತಗೊಳಿಸಿದ ರೀತಿ ಸೊಗಸಾಗಿದೆ.

'ದಪ್ಪಗಿರಲಿ, ಕಪ್ಪಗಿರಲಿ
ತೆಳ್ಳಗಿರಲಿ, ಬೆಳ್ಳಗಿರಲಿ
ದೊಡ್ಡದಿರಲಿ, ಚಿಕ್ಕದಿರಲಿ
ಇರುವೆ ಜಾ–ತಿ
ನಡತೆಯಲ್ಲಿ ನೋಡಿದಲ್ಲಿ
ಒಂದೆ ರೀ–ತಿ'[೧೫೧].

ಇರುವೆಯು ನಮಗೆ ಮಾರ್ಗದರ್ಶಿ. ಅವುಗಳ ನಡೆಯೊಂದು. ಹಗಲು–ಇರುಳು ಮೌನದಲಿ ದುಡಿಯುವುದು ಅವುಗಳ ಧರ್ಮ. ಮೆಲ್ಲುವಾಗ ಸದ್ದು ಇಲ್ಲ. ಕೆಲಸದಲ್ಲಿ ನಿರಂತರ ತೊಡಗಬಲ್ಲ ಇರುವೆ ಜಾ–ತಿ ಮಾನವನನ್ನು ವ್ಯಂಗ್ಯವಾಡಿದಂತಿದೆ. ಪ್ರತಿಯೊಂದು ಗುಣದಲ್ಲಿ ಮನುಷ್ಯನನ್ನು ಇರುವೆ ನಾಚಿಸುವಂತಿದೆ.

‘ಈ ಪ್ರಪಂಚದಲ್ಲಿ ಮೊಟ್ಟಮೊದಲು ಸಂಪರ್ಕ ತಾಯಿಯೊಂದಿಗೆ. ಈ ಪ್ರಭಾವ ಜೀವನದುದ್ದಕ್ಕೂ ಇರುತ್ತದೆ. ಅನಂತರದ ಪ್ರಭಾವಗಳು ತಂದೆ, ಕುಟುಂಬದ ಇತರ ಸದಸ್ಯರುಗಳು, ಶಾಲೆ, ಗುರುಗಳು, ಸ್ನೇಹಿತರು ಇತ್ಯಾದಿ. ಸಾಮಾಜಿಕವಾಗಿ ಮುಖ್ಯ ಆದರ್ಶ ವ್ಯಕ್ತಿಗಳು ಮಕ್ಕಳ ಮೇಲೆ ಪ್ರಭಾವ ಬೀರುತ್ತಾರೆ’[೧೫೨] ಎಂಬ ಮಾತುಗಳು ಮಕ್ಕಳ ಬೆಳವಣಿಗೆಗೆ ಪೂರಕವೆನಿಸುತ್ತವೆ. ಪಳಕಳ ಸೀತಾರಾಮ ಭಟ್ಟರು ಹೆಚ್ಚಿನ ಪ್ರಮಾಣದ ಕವನಗಳನ್ನು ‘ಮಗು’ವನ್ನು ಕೇಂದ್ರವಾಗಿ ಅಭಿವ್ಯಕ್ತಗೊಳಿಸಿರುವುದು ಕಂಡುಬರುತ್ತದೆ. ತಾಯಿಗೆ ಎರಡನೆಯ ಮಗು ಜನಿಸಿದಾಗ ಮೊದಲ ಮಗುವಿನ ಮೇಲಿನ ಪ್ರೀತಿ ಕಡಿಮೆಯಾಗುವುದು ಸಹಜ. ಅಂತಹ ಸಂದರ್ಭದಲ್ಲಿ ಮೊದಲ ಮಗು ತಾಯಿಗೆ ಪ್ರಶ್ನೆ ಮಾಡುವ ವಿಧಾನ ಪಳಕಳರು ಸುಂದರವಾಗಿ ಸೆರೆಹಿಡಿದ್ದಾರೆ. ಅವುಗಳಲ್ಲಿ ‘ಕಿಟ್ಟಿನ ಪ್ರಶ್ನೆ’, ‘ಪುಟ್ಟಿಯ ಗುಟ್ಟು’, ‘ಪುಟ್ಟು ಎಲ್ಲಿ ಸಿಕ್ಕಿತು’ ಎಂಬ ಕವನಗಳಲ್ಲಿ ಸಮಾನ ಭಾವನೆಯ, ಸಮಾನ ದೃಷ್ಟಿಕೋನದ ವರ್ತನೆಗಳು ವ್ಯಕ್ತಗೊಳ್ಳುತ್ತವೆ. ತಾಯಿ ತಿಳಿದು ತಾರತಮ್ಯ ಮಾಡುವ ಸ್ವಭಾವದವಳಲ್ಲ. ಆದರೆ ಮಗು ಮಾತ್ರ ಅಂತಹ ಭಾವವನ್ನು ಹೊರಹಾಕುತ್ತದೆ. ತಾಯಿಯನ್ನು ಕಾಡುವುದು, ಬಯ್ಯುವುದು, ದ್ವೇಷಿಸುವುದು, ಕೋಪಿಸುವುದು, ಪ್ರೀತಿಸುವುದು ಹೀಗೆ ತನ್ನ ಅಂತರಗವನ್ನು ಬಿಚ್ಚಿಡುವುದು ತಾಯಿಯ ಮುಂದೆ. ‘ಮಗುವಿಗೆ ಮರವನ್ನು ತೋರಿಸಿ ‘ಇದು ಮರ’ ಎಂದು ಹೇಳಿ, ಎಲೆಯನ್ನು ತೋರಿಸಿ ‘ಇದು ಎಲೆ’ ಎನ್ನಿ, ಇದು ಜ್ಞಾನ ಮತ್ತು ಭಾಷಾಗ್ರಹಣ. ಹಾಗೆಯೇ ‘ಆ ಮರ ಎತ್ತರ ಈ ಮರ ಗಿಡ್ಡ, ಆ ಎಲೆ ಚಿಕ್ಕದು ಈ ಎಲೆ ದೊಡ್ಡದು’ ಎಂದಾಗ ಜ್ಞಾನ ಮತ್ತು ಭಾಷಾಗ್ರಹಣದಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಂತೆ. ಹೂವನ್ನು ತೋರಿಸಿ ‘ಈ ಹೂವು ಕೆಂಪು ಆ ಹೂವು ಬಿಳಿ’ ಎಂದರೆ ಮಗು ಬೇಗನೆ ಕೆಂಪು ಎಂದರೇನು? ಬಿಳಿ ಎಂದರೇನು? ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು. ಆದರೆ ಈ ಹೂವು ಚೆಂದ ಇದೆ ಎನ್ನುವುದನ್ನು ಮಗು ಅರ್ಥ ಮಾಡಿಕೊಳ್ಳುವುದು ನೀವು ಹೇಳುವ ರೀತಿಯಿಂದ, ನಿಮ್ಮ ಮುಖ ಭಾವದಿಂದ, ಆದ್ದರಿಂದ ಭಾಷೆ ಎಂಬುದು ಬರೇ ಅಕ್ಷರ ಮತ್ತು ಶಬ್ದಗಳಲ್ಲ, ಅವುಗಳ ಜೊತೆ ಭಾವಾಭಿವ್ಯಕ್ತಿಯೂ ಇರುತ್ತದೆ. ಆನಂತರ ಮನೆಯಲ್ಲಿ ಕುಳಿತು ಅದೇ ಮಾತುಗಳನ್ನು ಓದಿದಾಗ ಮತ್ತು ಬರೆದಾಗ ಅದು ಅತ್ಯಂತ ನೈಸರ್ಗಿಕವೂ, ವೈಜ್ಞಾನಿಕವೂ ಆದ, ಅತ್ಯಂತ ವೇಗದ ಭಾಷಾರ್ಜನೆಯಾಗುತ್ತದೆ’[೧೫೩]. ಈ ಮಾತುಗಳು ಮಕ್ಕಳ ಭಾಷೆ ಮತ್ತು ಕಲಿಕೆಯ ಅಭಿವ್ಯಕ್ತಿ ಮುಖ್ಯವೆನ್ನುವುದು ತಿಳಿಸುತ್ತವೆ. ಅಭಿನಯದೊಂದಿಗೆ ಹೇಳುವ ಗೀತೆಗಳು ಮಕ್ಕಳ ಭಾಷಾಕಲಿಕೆಗೆ ಅಡಿಪಾಯವಾಗುತ್ತವೆ. ಇದು ಪಳಕಳ ಸೀತಾರಾಮಭಟ್ಟರ ಕವನಗಳ ಮುಖ್ಯ ಗುರಿಯಾಗಿದೆ.

‘ಉದ್ದ ಬಾಲ ದನಕೆ ಉಂಟು
ಗಿಡ್ಡ ಬಾಲ ನಾಯಿಗುಂಟು
ನನಗೆ ಬಾಲ ಯಾಕೆ ಇಲ್ಲ?
ಕೇಳೆ ಅಮ್ಮಾ,

ಎಲ್ಲಿ ಉಂಟು ನನ್ನ ಬಾಲ?
ಹೇಳೆ ಅಮ್ಮಾ ।
ಮೊಲಕೆ ಉಂಟು ಮೊಂಡು ಬಾಲ
ಕುದುರೆಗುಂಟು ಗೊಂಡೆ ಬಾಲ
ನನಗೆ ಬಾಲ ಯಾಕೆ ಇಲ್ಲ?
ಕೇಳೆ ಅಮ್ಮಾ,
ಎಲ್ಲಿ ಉಂಟು ನನ್ನ ಬಾಲ?
ಹೇಳೆ ಅಮ್ಮಾ'[೧೫೪].

ಮಗುವಿನ ಪ್ರಶ್ನೆಗಳು ವಿಚಿತ್ರವಾದರೂ ಸತ್ಯವನ್ನು ಹೊರಹಾಕುತ್ತವೆ. ಕುತೂಹಲ ಕೆರಳಿಸುತ್ತವೆ. ಇಲ್ಲಿ ಪಕ್ಷಿಗಳ ಮತ್ತು ಪ್ರಾಣಿಗಳ ಬಾಲಗಳಿಗಿರುವ ಸಂಬಂಧವನ್ನು ಮಗುವಿನ ಕಲ್ಪನೆಯಲ್ಲಿ ತೆರೆದುಕೊಳ್ಳುತ್ತದೆ. ಈ ಕವಿತೆಯು ಮಗುವಿಗೆ ಪ್ರಶ್ನೆ ಮಾಡಲು ಕಲಿಸುತ್ತದೆ. ಪಕ್ಷಿ-ಪ್ರಾಣಿಗಳಿಗೆ ಬಾಲ ಇದೆ, ನನಗೇಕೆ ಇಲ್ಲ? ನನ್ನ ಬಾಲ ಎಲ್ಲಿದೆ? ಎನ್ನುವ ಪ್ರಶ್ನೆ ಮಗುವಿನದು. ದನ, ನಾಯಿ, ಮೊಲ, ಕುದುರೆ, ಕಾಗೆ, ಕೋಳಿ, ಹಾವು, ಹಲ್ಲಿಗಳ ಬಾಲಗಳ ನಡುವಿನ ವ್ಯತ್ಯಾಸವನ್ನು ಗಮನಿಸುತ್ತದೆ. ಮುಂದೆ ಮಾನವ ಪ್ರಪಂಚಕ್ಕೂ ಪ್ರಾಣಿ-ಪಕ್ಷಿಗಳ ಪ್ರಪಂಚಕ್ಕೂ ಇರುವ ವ್ಯತ್ಯಾಸ ಹುಡುಕುವ ತವಕ ಮಗುವಿನದು. ಮಕ್ಕಳ ಪ್ರಶಾಂತ ವಾತಾವರಣದಲ್ಲಿ ಹುಲ್ಲು, ಹೂವು, ಗಿಡ-ಮರಗಳ ಅಡಿಯಲ್ಲಿ ಉದ್ಯಾನದಲ್ಲಿ ಆಟವಾಡುತ್ತ ಕಲಿಯುವ ಹಂಬಲ ವ್ಯಕ್ತಪಡಿಸುವುದು. ಇದು ಪರಿಣಾಮಕಾರಿಯಾದ ವಿಧಾನ 'ರವೀಂದ್ರರು ಶಾಂತಿನಿಕೇತನ, ಶ್ರೀನಿಕೇತನಗಳನ್ನು ಸ್ಥಾಪಿಸಿದ ಉದ್ದೇಶವನ್ನು ಗಮನಿಸಿದರೆ ಕಲೆ ಮತ್ತು ಜೀವನಗಳಿಗಿರುವ, ಇರಬೇಕಾದ ನಿಕಟತೆಯು ನಮಗೆ ಅರ್ಥವಾಗುತ್ತದೆ. ಶಾಂತಿನಿಕೇತನದಲ್ಲಿ ಕಲಿಯುವ ಎಳೆಯರಿಗೆ ನಮ್ಮ ಶಾಲೆಗಳಲ್ಲಿರುವಂತೆ ಅಕ್ಷರ, ಕಾಗುಣಿತ, ಬಾಯಿ ಪಾಠಗಳ ಬರಡು ಗಾಣದ ಎಳೆತವಿಲ್ಲ. ನೆತ್ತಿಯ ಮೇಲೆ ಹಸಿರು ನೆರಳಿನ ಕಂಪು ಹೂಗಳ ರೆಂಬೆರೆಂಬೆಗಳ ಮರಗಳು, ಸುತ್ತಲೂ ನಕ್ಕುನಲಿಯುವ ಗಿಡಬಳ್ಳಿಗಳು, ಹಸಿರೆಲೆಗಳ ಸಂದಿಯಲ್ಲಿ ಇಣುಕುವ ನೀಲಾಕಾಶ, ಪಾದಕ್ಕೆ ರೇಶಿಮೆಯ ಮಿದುವಿನ ಹುಲ್ಲು. ಈ ವಾತಾವರಣದಲ್ಲಿ ಆಡಬೇಕು, ಹಾಡಬೇಕು, ಕುಣಿಯಬೇಕು, ನರ್ತಿಸಬೇಕು. ಇದನ್ನೇ ನರ್ತನವಾಗಿ, ವೃಂದ್ಯನಾಟ್ಯವಾಗಿ ಪರಿವರ್ತಿಸಿದರೆ ಮಕ್ಕಳ ಉತ್ಸಾಹ ಇನ್ನಷ್ಟು ಏರುತ್ತದೆ. ಹೆಜ್ಜೆಯ ಕುಣಿತಕ್ಕೆ ತಕ್ಕಂತೆ ಸರಳಲಯದ ತಾಳಮೇಳಗಳನ್ನು ಹಾಡುಗಳನ್ನು ಸೇರಿಸಿದರೆ, ಜೊತೆಯಲ್ಲಿ ಉಪಾಧ್ಯಾಯರೂ ಕುಣಿದರೆ ರಜೆ ಕೊಡುತ್ತೇವೆ ಎಂದರೂ ಬೇಡ. ಪದಗಳನ್ನು ಹಾಡಿ ಅವು ತಾವಾಗಿಯೇ ಕಲಿಯುತ್ತವೆ'[೧೫೫]. ಈ ಮಾತುಗಳಿಗೆ ಪೂರಕವಾಗಿ ಎನ್ನುವಂತೆ ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗಾಗಿ ಕವಿತೆಗಳನ್ನು ರಚಿಸಿದ್ದಾರೆ. ಮಕ್ಕಳು ನಾಲ್ಕು ಗೋಡೆಗಳ ಮಧ್ಯೆ ಕುಳಿತುಕೊಳ್ಳುವ ಪರಿಯನ್ನು ಹೀಗೆ ಅಭಿವ್ಯಕ್ತಿಸುತ್ತಾರೆ.

'ಶಾಲೆಗೆ ಹೋದರೆ ಕೋಣೆಯ ಒಳಗೆ
ಕೂಡಿಸಿ ಬಿಡುವರು ಸಂಜೆಯವರೆಗೆ

ಓದೂ ಬರಹವು ಗಣಿತವು ಮತ್ತು
ಪ್ರಶ್ನೆಯು-ಉತ್ತರ ಎರಡೂ ಹೊತ್ತು ।
ತಂಗಾಳಿಯ ಉಸಿರಾಡಲು ಇಲ್ಲ
ಬಣ್ಣದ ಹೂಗಳ ನೋಡಲು ಇಲ್ಲ
ಹಕ್ಕಿಯ ಹಾಡನು ಕೇಳಲು ಇಲ್ಲ
ಚಿಟ್ಟೆಯ ಜತೆ ನಲಿದಾಡಲು ಇಲ್ಲ'[೧೫೬].

ಮಗು ಹೊರ ಪ್ರಪಂಚದ – ಪರಿಸರದೊಂದಿಗೆ ಕಲಿಯು ಆಶಯ ವ್ಯಕ್ತಗೊಳಿಸುತ್ತದೆ. ಅದುವೇ ಪರಿಣಾಮಕಾರಿ ಪಾಠಶಾಲೆ ಎಂದರೆ ತಪ್ಪಲ್ಲ. ಮಗು ಎಲ್ಲ ಸೌಲಭ್ಯ ಹೊಂದಿರುವ ಪಂಜರದ ಶಾಲೆಯನ್ನು ತಿರಸ್ಕರಿಸುವ ವರ್ಷದುದ್ದಕ್ಕೂ ಗಿಳಿಪಾಠದ ಅಭ್ಯಾಸ ಮಾಡಿ ಮೂರು ಗಂಟೆಯೊಳಗೆ ಹೊರಹಾಕುವ–ಕಲಿಕೆಬೇಡ ಎನ್ನುತ್ತದೆ. ಮಗು ನಾಲ್ಕು ಗೋಡೆಯೊಳಗೆ, ದೇಹ–ಮನಸುಗಳಿಗೆ ಸಂತಸ ಸಿಗಲು ಸಾಧ್ಯವಿಲ್ಲ. ಪ್ರಕೃತಿಯಲ್ಲಿ ಆಡುತ್ತ–ಹಾಡುತ್ತ ಕಲಿಯುವ ಕಲಿಕೆ ಮಗುವಿನಲ್ಲಿ ಜ್ಞಾನವನ್ನು ಹೆಚ್ಚಿಸುತ್ತದೆ. ಅದಕ್ಕಾಗಿ ಮಗು ಪರಿಸರದ ಜೊತೆಯಲ್ಲಿ ಕಲಿಕೆ ಮಾಡುವ ಹಂಬಲ ವ್ಯಕ್ತಪಡಿಸುತ್ತದೆ.

'ಕಣ್ಣಲಿ ಕಾಣುತ ಕೈಯಲಿ ಮುಟ್ಟಿ
ಕೆಲಸದ ಅನುಭವ ಪಡೆದುದೆ ಗಟ್ಟಿ
ಅಂಥದು ಎಂದಿಗೆ ಬರುವುದೊ ಆಗ
ಶಾಲೆಗೆ ಖುಷಿಯಲೆ ಹೋಗುವೆ ಬೇಗ'[೧೫೭].

ಪಳಕಳರು ಮಕ್ಕಳ ಭಾವವನ್ನು ಅರಿತವರು. ಅರಿತು ಬೆರೆತವರು ಹಾಗೆ ಅಭಿವ್ಯಕ್ತಗೊಳಿಸಿದವರು. ಪ್ರಾಣಿಯ ಚಿತ್ರವನ್ನು ನೋಡಿ ಪ್ರಾಣಿಯೆಂದು, ಹೂವಿನ ಚಿತ್ರವನ್ನು ನೋಡಿ ಹೂವೆಂದು ಹೇಳುವುದರಿಂದ ಅದರ ನಿಜವಾದ ಅರಿವು ಮೂಡಲು ಸಾಧ್ಯವಿಲ್ಲ. ಕಣ್ಣು, ಮೂಗು, ತ್ವಚೆ, ನಾಲಗೆ, ಕಿವಿಗಳಿಂದ ಪಡೆಯುವ ಅನುಭವ ಪರಿಣಾಮಕಾರಿ. ಇಂದ್ರಿಯಗಳಿಂದ ದೊರೆಯುವ ಅನುಭವದ ಜ್ಞಾನವೇ ನೈಜವಾದ ಶಿಕ್ಷಣ. ಮಗು ಅಲ್ಲಿ ಪ್ರೀತಿಯ ಆಸಕ್ತಿಯನ್ನು ತೋರುತ್ತದೆ. ಮನಸ್ಸು ಅನುಭವಿಸುತ್ತದೆ. ಇದು ಮಕ್ಕಳು ಕಲಿಯು ವಿಧಾನವೆಂದು ಪಳಕಳ ಸೀತಾರಾಮ ಭಟ್ಟರು ವ್ಯಕ್ತಪಡಿಸುತ್ತಾರೆ. ಶಿಕ್ಷಣವು ಮಗುವಿಗೆ ಶಿಕ್ಷೆಯಾಗಬಾರದು. ಒತ್ತಾಯ ಪೂರ್ವಕವಾದುದು ಜಿಗುಪ್ಸೆ ಹುಟ್ಟಿಸುತ್ತದೆ. ಜ್ಞಾನದ ಹಂಬಲ ತಾನಾಗಿಯೇ ಮಗುವಿನಲ್ಲಿ ಹುಟ್ಟಬೇಕು. ಅಂದಾಗ ಕಲಿಕೆಗೆ ಹಾತೊರೆಯುತ್ತದೆ. ಮಗು ಆಟ, ಕಥೆ, ಹಾಡು, ಕುಣಿತ, ಅಭಿನಯಗಳ ಮೂಲಕ ಕಲಿಯಲು ಪಾಲಕರು ಕಾಳಜಿವಹಿಸಬೇಕು ಎಂಬುದನ್ನು ಪಳಕಳರು ತಮ್ಮ ಕವನ 'ನಮ್ಮ ಆಸೆ'ಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಹಾಗೆಯೇ ಕನ್ನಡದ ಅಭಿಮಾನ ಪಳಕಳರಲ್ಲಿ ಕಂಡುಬರುವುದು. 'ಪುಟ್ಟನ ಬಯಕೆ' ಕವನದಲ್ಲಿ ಒಳ್ಳೆಯ ಕನ್ನಡ ಶಾಲೆಗೆ ಸೇರಿಸು ಅದುವೆ ನನಗೆ ಸಾಕು. ಸಾವಿರಾರು ರೂಪಾಯಿ ಕೊಟ್ಟು ಇಂಗ್ಲೀಷ ಶಾಲೆಗೆ ಯಾಕೆ ಕಳಿಸುವೆ ಎಂದು ಮಗು ಪ್ರಶ್ನಿಸುತ್ತದೆ.

ಪಳಕಳ ಸೀತಾರಾಮ ಭಟ್ಟರಿಗೆ ಕನ್ನಡ ಭಾಷೆಯ ಬಗ್ಗೆ ಬಲು ಪ್ರೀತಿ. ಪ್ರಾಥಮಿಕ ಶಿಕ್ಷಣ ಕನ್ನಡ ಮಾಧ್ಯಮದಲ್ಲಿ ಕಡ್ಡಾಯವಾಗಿ ಮಾಡಬೇಕು. ಸರಕಾರ ಇಂಥ ಶಾಲೆಗಳ ಕಡೆಗೆ ಗಮನಹರಿಸಿ ಎಲ್ಲ ಸೌಲಭ್ಯವನ್ನು ಒದಗಿಸಬೇಕು ಎಂಬ ಅಭಿಪ್ರಾಯ ಇವರದು. ಕನ್ನಡ ಶಾಲೆಗಳ ದುಸ್ಥಿತಿಯನ್ನು ಕಂಡು,

'ಪೊದರಿನ ಮರೆಯೇ ಮೂತ್ರದ ದೊಡ್ಡಿಯು
ಕಕ್ಕಸು ಇನ್ನೂ ಕಟ್ಟಿಲ್ಲ
ಇರಬೇಕಾದುದೆ ಇಲ್ಲದ ಇಂತಹ
ಶಾಲೆಗಳೆಷ್ಟೋ ಗೊತ್ತಿಲ್ಲ.
ಒಳ್ಳೆಯ ಕನ್ನಡ ಶಾಲೆಯ ತೋರಿಸು
ಕಲಿಯಲು ಹೋಗುವೆ ನಾನಲ್ಲಿ
ತಕ್ಕದು ಏನೂ ಇಲ್ಲದ ಶಾಲೆಗೆ
ಹೋದರು ಕಲಿಯಲಿ ಏನಲ್ಲಿ'.

ಮಗುವಿನ ಮೂಲಕ ಹೇಳಿಸುವ ಪಳಕಳರಲ್ಲಿ ಕನ್ನಡದ ಮೇಲಿನ ಕಾಳಜಿಯನ್ನು ಅಭಿವ್ಯಕ್ತಿಸುವುದರೊಂದಿಗೆ, ಶಿಕ್ಷಣ ಇಲಾಖೆಯನ್ನು ಕುಟುಕುತ್ತಾರೆ. ತಮ್ಮ ಕಾಲದ ಕನ್ನಡ ಶಾಲೆಯ ಚಿತ್ರಣವನ್ನು ಕಂಡ ಕವಿ ಇಂದೂ ಸಹ ಅದರಿಂದ ಬೇರೆಯಾಗಿಲ್ಲ ಎಂಬ ಅಸಮಾಧಾನ ವ್ಯಕ್ತಪಡಿಸುವರು. ಮಗು ಆಟವಾಡುವ ಮನೋಭಾವ ಹೊಂದಿದೆ. ಸೋರುವ ಹರಕು ಮಾಳಿಗೆಯ ಕಟ್ಟಡವಾದರೂ ಸರಿ. ಆಡವಾಡಲು ಬಯಲು ಉದ್ಯಾನ ಶಾಲೆಯಲ್ಲಿರಲಿ ಎನ್ನುವ ಆಶೆ ಮಗುವಿನದು. ಶಾಲೆಯಲ್ಲಿ ಮೂಲ ಸೌಲಭ್ಯಗಳು ಇಲ್ಲದಿರುವುದು ಚಿಂತೆಗೀಡು ಮಾಡಿದೆ. ನೀರು, ಶೌಚಾಲಯ, ಗ್ರಂಥಾಲಯ, ಪ್ರಯೋಗ ಕೋಣೆ, ಪೀಠೋಪಕರಣ. ಹೀಗೆ ಹಲವಾರು ಕೊರತೆಗಳನ್ನು ಬಿತ್ತರಿಸುತ್ತದೆ. ಅದಕ್ಕಾಗಿ ಪಳಕಳರು 'ಹಳ್ಳಿಯ ಮೂಲೆಯ ಕನ್ನಡ ಶಾಲೆಗೆ ಕಳಿಸುವೆ ಯಾತಕೆ ಹೇಳಮ್ಮಾ? ದನಗಳ ದೊಡ್ಡಿಯ ಹೋಲುವ ಅಲ್ಲಿಯ ಸಂಗತಿ ಹೇಳುವೆ ಕೇಳಮ್ಮಾ' ಎಂದು ತಾಯಿಗೆ ಮಗು ಹೇಳುವಲ್ಲಿ ಅಭಿವ್ಯಕ್ತಿಸಿದ್ದಾರೆ.

ಪಳಕಳ ಸೀತಾರಾಮ ಭಟ್ಟರು ಬಹುಪಾಲು ಕವನಗಳನ್ನು ಪ್ರಕೃತಿಯ ಜೊತೆಗೆ ಮಗುವಿನ ಒಡನಾಟವನ್ನು ಚಿತ್ರಿಸಿದ್ದಾರೆ ಮತ್ತು ತಮ್ಮ ಬಾಲ್ಯದ ನೆನಪನ್ನು ಮರುಕಳಿಸುವ ಬಗೆಯನ್ನು ಅಭಿವ್ಯಕ್ತಿಸಿದಂತಿದೆ. ಆಗಿನ ಕಾಲದ ಮಕ್ಕಳು ಶಾಲೆಗೆ ಹೋಗುವ ಸಮಯದಿಂದ ಹಿಡಿದು ಮರಳಿ ಮನೆಗೆ ಬರುವವರೆಗೂ ಪರಿಸರದ ಜೊತೆಗೆ ಹೆಚ್ಚು ಸಮಯ ಕಳೆಯುತ್ತಿದ್ದರು. ಹೆಗಲಿಗೆ ಚೀಲ ಹಾಕಿಕೊಂಡು, ಬುತ್ತಿಯನ್ನು ಕಟ್ಟಿಕೊಂಡು ದೂರದ ಶಾಲೆಗೆ ಕಾಲುನಡಿಗೆಯಲ್ಲಿ ಹೋಗುವುದು. ದಾರಿಯಲ್ಲಿ ಹಕ್ಕಿ, ಹೂ, ಗಿಡ, ಬಳ್ಳಿ, ಗುಡ್ಡ ನೋಡುತ್ತ, ಬೇಲಿಯಲಿದ್ದ ಹಣ್ಣು ತಿನ್ನುತ್ತ, ಆಟವಾಡುತ್ತ ಆನಂದಿಸುತ್ತಿದ್ದರು. ಶಾಲೆಯಲ್ಲಿಯೂ ಬಹುಪಾಲು ಸಮಯ ಮರಗಳ ಕೆಳಗೆ ಕುಳಿತು ಪಾಠ ಕೇಳುವುದು,

ಹೂದೋಟದಲ್ಲಿ ಆಟವಾಡುತ್ತ, ಹಾಡುತ್ತ, ಕುಣಿಯುತ್ತ ಸಮಯ ಕಳೆದವರು ಪಳಕಳ ಸೀತಾರಾಮಭಟ್ಟರು. ಇಂಥ ಚಿತ್ರಣ 'ರಜೆಯ ಮಜ' ಕವನದಲ್ಲಿ ವ್ಯಕ್ತಗೊಂಡಿದೆ.

'ಗದ್ದೆಗೆ ತೋಟಕೆ ಹಾಕಿದೆ ಸುತ್ತು
ಹಕ್ಕಿಯ ಹಾಡನು ಕೇಳಿದೆ ಮತ್ತು
ಬಣ್ಣದ ಚಿಟ್ಟೆಯ ಹಿಡಿದಿದ್ದೆ
ಮಾವಿಗೆ ಕಲ್ಲನು ಹೊಡೆದಿದ್ದೆ
ಇರುವೆಯ ದಿಬ್ಬಣ ನೋಡಿದೆ ಇಲ್ಲಿ
ಬೀಳಲ ಉಯ್ಯಾಲೆ ಆಡಿದೆ ಅಲ್ಲಿ
ಗಿಡ ಮರ ಏರಿಯೆ ಕುಳಿತಿದ್ದೆ
ಕೊಳದಲಿ ಈಜಲು ಕಲಿತಿದ್ದೆ'[೧೫೮].

'ಪ್ರಕೃತಿಯೇ ಪಾಠಶಾಲೆ, ಪ್ರಕೃತಿಯೇ ಶಿಕ್ಷಕ' ಎನ್ನುವ ನಿಲುವು ಪಳಕಳರದ್ದು, ಮಗು ತನ್ನ ಸುತ್ತ-ಮುತ್ತಲಿನ ಪರಿಸರವನ್ನು ಆಸ್ವಾದಿಸುತ್ತ ಕಲಿಕೆ ಪಡೆಯಬೇಕು. ಈ ದೃಷ್ಟಿಕೋನ ಮಗುವಿನಲ್ಲಿ ನಿಸರ್ಗದ ಪ್ರೀತಿ ಮೂಡಲು ಮತ್ತು ಕಾಳಜಿ ಹೊಂದಲು ಸಹಾಯಕವಾಗುತ್ತವೆ ಎಂಬುದು ಪಳಕಳರ ಅಭಿಪ್ರಾಯ. ನಿಸರ್ಗದ ಮಡಿಲಲ್ಲಿ ಮಗು ಶಾಲೆ ಕಲಿಯಲು ಆಶೆ ಪಡುತ್ತದೆ. ಆದರೆ ಆಧುನಿಕ ಶಿಕ್ಷಣ ಪದ್ಧತಿಯಿಂದ ಮಗು ಹಲವು ಸೌಕರ್ಯಗಳಿಂದ ತುಂಬಿದ್ದರೂ ಹಲವು ಸಮಸ್ಯೆಗಳು ಗೋಚರಿಸುತ್ತವೆ. ಮಕ್ಕಳು ನಿಸರ್ಗದ ಮಡಲಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ ನಲಿಯುವ ಪ್ರಸಂಗದಿಂದ ವಂಚಿತರಾಗಿದ್ದಾರೆ ಎಂದು ಹೇಳಬಹುದು.

'ಮಕ್ಕಳಿಂದ ಅತ್ಯಧಿಕ ಅಂಕಗಳನ್ನು, ಅಚ್ಚರಿಯ ಫಲಿತಾಂಶಗಳನ್ನು ಆಶಿಸುವುದು, ಮೊದಲ ರ್‍ಯಾಂಕು ಬರುತ್ತದೆಂದು ತಿಳಿದುಕೊಳ್ಳುವುದರಿಂದ ಮಕ್ಕಳಲ್ಲೊಂದು ಅಪರಾಧಿ ಭಾವನೆ ಏರ್ಪಡುವ ಸಾಧ್ಯತೆಯಿದೆ. ತಾಯಿ-ತಂದೆಯರ ನಿರೀಕ್ಷಣೆಗೆ ತಕ್ಕ ಹಾಗೆ ತಾನು ಬರಲಾಗುತ್ತಿಲ್ಲವೆಂದು ಆತಂಕಗೊಳ್ಳುತ್ತಾರೆ'[೧೫೯]. ಇದು ಆಧುನಿಕ ಜಗತ್ತಿನ ಪ್ರತಿ ಮನೆಗಳಲ್ಲಿ ಕಂಡುಬರುವ ಸನ್ನಿವೇಶ. ತಂದೆ-ತಾಯಿಗಳಿಂದ ಹಿಡಿದು ಶಾಲೆಯ ಶಿಕ್ಷಕರು ಸಹ ಮಕ್ಕಳಿಗೆ ಓದುವುದು ಮಾತ್ರ ಅವರ ಕೆಲಸ. ಇದೊಂದು ಗೀಳು ಆಗಿದೆ. ಮಗು ನೂರಕ್ಕೆ ನೂರು ಅಂಕ ಪಡೆಯಬೇಕು ಎಂಬ ಆಶೆಯಿಂದ ಮನೆ ಪಾಠಕ್ಕೆ ಕಳಿಸುವರು. ಆಗ ಮಗು ಅಪ್ಪನನ್ನು ಪ್ರಶ್ನೆ ಮಾಡುತ್ತದೆ.

'ಅಪ್ಪಾ, ಅಪ್ಪಾ ನಂಗ್ಯಾಕಪ್ಪಾ
ಈ ಮನೆ ಪಾಠದ ಕಾಟ?
ಇನ್ನೆಂದಾದ್ರು ಸಿಕ್ಕೋದುಂಟೆ?
ಇಷ್ಟದ ಆಟಽ ಓಟ?
ನೂರಕ್ ನೂರು ಇಲ್ದೇ ಹೋದ್ರೂ

ಎಪ್ಪತ್ತಕ್ಕೂ ಹೆಚ್ಚು
ಅಂಕs ನಾನು ಪಡೆಯೋದಿಲ್ವೇ
ಮತ್ತೂ ಯಾಕೀ ಹುಚ್ಚು?'[೧೬೦].

ಪಳಕಳ ಸೀತಾರಾಮ ಭಟ್ಟರು ಮಕ್ಕಳಿಗೂ ಅವರದ್ದೇ ಆದ ಆಶೆ, ಆಲೋಚನೆ, ಉದ್ದೇಶವಿದೆ ಎಂಬುದನ್ನು ತಿಳಿಸುತ್ತಾರೆ. ಮಗುವಿಗೂ ಮನಸ್ಸು ಇದೆಯೆಂಬುದು ಅರಿಯಬೇಕು. ಅದನ್ನು ಪ್ರೀತಿಯಿಂದ ಆದರಿಸಿ, ಇಲ್ಲದಿದ್ದರೆ ಮಗು ಸಮಾಜಕ್ಕೆ ಬೇಡದ ವ್ಯಕ್ತಿಯಾಗುತ್ತಾನೆ. ಶಾಲೆಯಿಂದ ಬಂದ ಮಗುವಿಗೆ ಮನೆಯಲ್ಲಿ ಮತ್ತೆ ಓದು-ಬರಹಕ್ಕೆ ತೊಡಗಿಸುವುದು ಕಾಟಾಚಾರವಾಗುತ್ತದೆ. ಮಕ್ಕಳಿಗೆ ಆಟಕ್ಕೂ ಬಿಡದೆ ಓದುವ ಯಂತ್ರಗಳಂತೆ ನೋಡುವ ತಂದೆ-ತಾಯಿಗಳಿಗೆ ಪಳಕಳರು ಕಿವಿಮಾತನ್ನು ಹೇಳಿದಂತಿದೆ. ಪಳಕಳ ಸೀತಾರಾಮ ಭಟ್ಟರ ಪ್ರಕಾರ ಶಿಕ್ಷಣವೆಂದರೆ, 'ಮಗುವಿನಲ್ಲಿ ಆತ್ಮವಿಶ್ವಾಸ, ಆತ್ಮಗೌರವ ಅರಳಿಸಬೇಕು. ಶಿಸ್ತು, ಸಮಯಪ್ರಜ್ಞೆ, ತಾಳ್ಮೆ, ಏಕಾಗ್ರತೆಯನ್ನು ಬೆಳೆಸಬೇಕು. ಅದು ಮಕ್ಕಳನ್ನು ವಿಚಾರವಂತರನ್ನಾಗಿಸಬೇಕು. ಕ್ರಿಯಾಶಿಲರನ್ನಾಗಿಸಬೇಕು. ಮಕ್ಕಳಲ್ಲಿ ಸೃಜನಶೀಲ ವ್ಯಕ್ತಿತ್ವವನ್ನರಳಿಸಿ ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು' ಎಂಬುದು ಅವರ ಆಶಯ.

ಮಕ್ಕಳಿಗೆ ಮನರಂಜನೆಯ ಜೊತೆಗೆ ನೀತಿಯನ್ನು ತಿಳಿಸುವ ಕಲೆ ಪಳಕಳರ ಕಥನ ಕವನಗಳಲ್ಲಿ ಹೆಚ್ಚಾಗಿ ಅಭಿವ್ಯಕ್ತಿಗೊಂಡಿವೆ. ಇವರು ನೇರವಾಗಿ ಎಲ್ಲಿಯೂ ನೀತಿಯನ್ನು ತೋರಗೊಡುವುದಿಲ್ಲ. ಪರೋಕ್ಷವಾಗಿ ನೀತಿ ಹೇಳುವುದರಿಂದ ಬದುಕಿನಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯ ಎನ್ನುವುದು ಪಳಕಳರ ಅಭಿಮತ. 'ಕಥನ ಕವನ ಎಂಬ ಪದವೇ ಸೂಚಿಸುವಂತೆ 'ಕಥೆಯನ್ನು ಕವನ ರೂಪದಲ್ಲಿ, ಹಾಡಲು ಸಾಧ್ಯವಾಗುವಂತಹ ಗೇಯ ಚೌಕಟ್ಟಿನಲ್ಲಿ ಹೆಣೆದ ರಚನೆ; ಕಥನ ಕವನ ಎಂಬ ಸಾಹಿತ್ಯ ಪ್ರಕಾರವು ಹೊಸಗನ್ನಡ ನವೋದಯ ಕಾವ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ವಿಶಿಷ್ಟ ಕಾವ್ಯಪ್ರಕಾರ. ಕಥನ ಕಾವ್ಯಗಳ ಕುರಿತು ವಿಶೇಷವಾದ ಅಧ್ಯಯನ ಮಾಡಿರುವ ಎಚ್. ಎಸ್. ವೆಂಕಟೇಶಮೂರ್ತಿಯವರು ನವೋದಯಕ್ಕಿಂತಲೂ ಪೂರ್ವದ ಸಾಹಿತ್ಯ ಪರಂಪರೆಯಲ್ಲಿ ಗೋಚರಿಸಿರುವ ಕಥನ ಕವನಗಳ ಮಾದರಿಗಳನ್ನು ಗುರುತಿಸಿ ಉಲ್ಲೇಖಿಸಿದ್ದಾರೆ. ಮಾಸ್ತಿಗಲ್ಲು, ವೀರಗಲ್ಲು, ದಾನಶಾಸನಗಳ ಸ್ತುತಿ ಪದ್ಯಗಳಲ್ಲಿ; ಐತಿಹಾಸಿಕ ವ್ಯಕ್ತಿಗಳ ಕುರಿತು ಜನಪದರು ಹೆಣೆದಿರುವ ಲಾವಣಿಗಳಲ್ಲಿ, ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ವ್ಯಕ್ತಿಗಳಿಗೆ ಸಂಬಂಧಿಸಿರುವ ಜಾನಪದ ಗೀತೆಗಳಲ್ಲಿ; ದುರ್ಗಸಿಂಹನ ಪಂಚತಂತ್ರ, ನಯಸೇನನ ಧರ್ಮಾಮೃತದಂತಹ ಚಂಪೂ ಕೃತಿಗಳಲ್ಲಿ; ಹರಿಹರನ ಶಿವಶರಣರ ರಗಳೆಗಳಲ್ಲಿ, ಹೆಳವನಕಟ್ಟೆ ಗಿರಿಯಮ್ಮನ ಚಂದ್ರಹಾಸ ಕತೆಯಲ್ಲಿ; ಕನಕದಾಸರ ನಳಚರಿತ್ರೆ, ಲಕ್ಷ್ಮೀಶನ ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಹಾಗೂ ದಾಸಪರಂಪರೆಯ ಪ್ರಾಣೇಶವಿಠಲನ ಸೀತಾಸ್ವಯಂವರ, ಹನುಮದ್ವಿಲಾಸ, ಗೋಪಿಕಾವಿಳಾಸ, ಕಾಳಿಂಗಮರ್ದನ ಸರಳ ಸಂಕ್ಷಿಪ್ತ ಕಾವ್ಯಗಳಲ್ಲಿ, ಕಿಟೆಲ್‌ನ ಕಥಾಮಾಲಿಕೆಯಲ್ಲಿ ಕಥನ ಕವನದ ಲಕ್ಷಣಗಳನ್ನು ಇವರು ಗುರುತಿಸಿದ್ದಾರೆ'[೧೬೧]. ಸೀತಾರಾಮ ಭಟ್ಟರ ಕಥನ ಕವನಗಳು ವಿನೂತನವೂ ಮತ್ತು

ಆಕರ್ಷಕವೂ ಆಗಿವೆ. ಕಥೆಯನ್ನು ಹಾಡಿನ ಮೂಲಕ ಹೇಳುವುದು ಒಂದು ಕಲೆ. ಅವರ 'ನ್ಯಾಯ ನಿರ್ಣಯ' ಎಂಬ ಕಥನ ಕವನ ಮಕ್ಕಳಲ್ಲಿ ನೀತಿಯನ್ನು ತಿಳಿಸುತ್ತದೆ. ಸಮವಯಸ್ಸಿನ ಎರಡು ಮಕ್ಕಳು, ಅವುಗಳಲ್ಲಿ ಒಂದು ಬದುಕಿದೆ, ಇನ್ನೊಂದು ಮರಣ ಹೊಂದಿದೆ. ಆಗ ಇಬ್ಬರು ತಾಯಿಯರಲ್ಲಿ ಜಗಳ ನಡೆಯುತ್ತದೆ. 'ನನ್ನದು, ನನ್ನದು' ಎಂದು ಜಗಳ ವಿಕೋಪಕೇರುತ್ತದೆ. ಕೊನೆಗೆ ರಾಜನ ಹತ್ತಿರ ಈ ಸಮಸ್ಯೆ ಪರಿಹರಿಸಿಕೊಳ್ಳಲು ಬರುತ್ತಾರೆ. ರಾಜ ತನ್ನ ಬುದ್ಧಿಮತ್ತೆಯಿಂದ ವಿಚಾರಣೆ ನಡೆಸುತ್ತಾನೆ. ನಿಜವಾದ ತಾಯಿ ಯಾರೆಂದು ತಿಳಿದುಕೊಳ್ಳಲು ಕೆಲವು ಉಪಾಯಗಳನ್ನು ಹೂಡುತ್ತಾನೆ. ಆ ಇಬ್ಬರು ತಾಯಿಯರ ಸತ್ಯವನ್ನು ಕಂಡು ಹಿಡಿಯಲು ಸೇವಕರನ್ನು ಕರೆದು ಹೇಳುತ್ತಾನೆ. ಬದುಕಿದ ಮಗುವನ್ನು ಕಡಿದು ಪಾಲು ಮಾಡಿಕೊಡಲು ಆಜ್ಞೆ ಮಾಡುತ್ತಾನೆ. ಆಗ ಒಬ್ಬ ಮಹಿಳೆ 'ಒಡೆಯರೆಂದುದ ನಡೆಯಲಿ' ಎನ್ನುವಳು, ಇನ್ನೊಬ್ಬ ಮಹಿಳೆ ಮಾತ್ರ ಓಡಿಬಂದು ಬೇಡಿಕೊಂಡಳು. ದೊರೆಗಳೇ! ಕಂದ ಬದುಕಲಿ, ಅವಳೆ ಪಡೆಯಲಿ! ಎಂದು ಅತ್ತಳು ಗಳಗಳ! ಹೀಗೆ ನಿಜವಾದ ತಾಯಿಯ ಸತ್ಯ ತಿಳಿಯುತ್ತದೆ. ಇದು ಪಳಕಳ ಸೀತಾರಾಮ ಭಟ್ಟರ ಕಥನ ಕವನಗಳ ಅಭಿವ್ಯಕ್ತಿ. ಅಂತ್ಯ ಪ್ರಾಸಗಳು ಸಹೃದಯರಿಗೆ ಹಿತವನ್ನು ನೀಡುತ್ತವೆ. ಸರಳ ಪದಗಳನ್ನು ಬಳಸಿ ಕಥೆ ಹೆಣೆದಿರುವುದು ಇವರ ಕೌಶಲ. ಪಳಕಳರು ಹೇಳುವ ಘಟನೆ, ಪ್ರಸಂಗ, ಕಥೆಗಳಲ್ಲಿ ವಸ್ತುವಾಗಿ ಬಳಕೆಯಾಗಿವೆ. ಪಳಕಳ ಸೀತಾರಾಮ ಭಟ್ಟರು ತಮ್ಮ ಅನುಭವದ ನೆಲೆಯಲ್ಲಿ ಕಥನ ಕವನಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ. ಮಕ್ಕಳು ತಂದೆ-ತಾಯಿಗಳನ್ನು ನೋಡಿ ಅನುಕರಿಸುತ್ತಾರೆ. 'ತಾಯಿಯಂತೆ ಮಗಳು – ನೂಲಿನಂತೆ ಸೀರೆ' ಎಂಬ ಗಾದೆ ಮಾತಿನಂತೆ ಇವರ ಕಥನ ಕವನ 'ತಾಯಿಯಂತೆ ಮರಿ' ಸುಂದರವಾಗಿ ಮೂಡಿದೆ.

'ಏಡಿ ಒಂದು
ಹೇಳಿ ತಂದು
ನೋಡಿ ಮರಿಯ ಮೋ-ರೆ
ಅಟ್ಟೆ ಕಾಲ
ಇಟ್ಟು, ಬಾಲ
ನಡೆಯ ಬೇಡ ಓ-ರೆ'

> **'ಮರಿಯು ಬೇಗ**
> **ನುಡಿಯಿತಾಗ**
> **ಆಡುವುದಕೆ ಮು-ನ್ನ**
> **ಮಾಡಿ ನೀನು**
> **ತೋರೆ ನಾನು**
> **ಓಡಿಯೇನು ಚೆನ್ನ'**

ನೇರ ನಡಿಗೆ
ಬರದೆ ಕಡೆಗೆ

ತಾಯೆ ಸೋತು ನಿಂ-ತು
'ಅಮ್ಮ' ಎಂತು
ಮರಿಯು ಅಂತು
ಓರೆ ನಡೆದೆ ಬಂತು'[೧೬].

ಇಲ್ಲಿ ಏಡಿ ಮರಿ ಮತ್ತು ತಾಯಿಯ ನಡುವೆ ನಡೆದ ಸಂಭಾಷಣೆಯು ಮಕ್ಕಳಿಗೆ ನೀತಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಎರಡು ಏಡಿಗಳು ಮನುಷ್ಯ ಜಗತ್ತಿನ ಅಭಿನಯ ಮಾಡುತ್ತಿರುವಂತೆ, ನಾಟಕೀಯ ಸಂಭಾಷಣೆಯಲ್ಲಿ ನಿರತವಾಗಿವೆ. ಏಡಿಯ ಮರಿಯ ನಡಿಗೆ ಓರೆ – ಕೋರೆಯನ್ನು ತಿದ್ದಿಕೊಂಡು ನಡೆ ಎನ್ನುವ ತಾಯಿ ಏಡಿ, ಅದಕ್ಕೆ ಪ್ರತಿಯಾಗಿ ಮರಿ ಏಡಿ ಹೇಳುವುದು, ನೀನೇ ಸರಿಯಾಗಿ ನಡೆದು ತೋರು ಎಂದು. ಆದರೆ ಏಡಿಯು ಗುಣ ಬಿಡಬಹುದೇ? ಅಸಾಧ್ಯ. ಏಡಿಯಂತೆ ಮರಿ ಏಡಿ ಅನುಕರಿಸುವುದು ಸಹಜ. ಇಂಥ ನಾಟಕೀಯ ರೂಪದ ಕಥನ ಕವನಗಳು ಮಕ್ಕಳಿಗೆ ಬೋಧನೆ ಎನಿಸುವುದಿಲ್ಲ. ಮಕ್ಕಳಿಗೆ ಸಂಸ್ಕಾರ ನೀಡುತ್ತವೆ. ಪಳಕಳರ ಪ್ರತಿ ಕಥನ ಕವನ ನೀತಿಯುಕ್ತ ಸಂಬಂಧವನ್ನು ತಿಳಿಸುತ್ತವೆ.

ಪಳಕಳ ಸೀತಾರಾಮ ಭಟ್ಟರು 'ತ್ಯಾಗವೀರ' ಕಥನ ಕವನದಲ್ಲಿ ಸಾಹಸವನ್ನು ವ್ಯಕ್ತಗೊಳಿಸುವ, ನಿಷ್ಠೆಯನ್ನು ತೋರುವ ಗುಣಗಳು ಮಕ್ಕಳಲ್ಲಿ ಮೂಡಿಸುತ್ತವೆ. ವೀರತನ ಮತ್ತು ತ್ಯಾಗದ ಮೌಲ್ಯಗಳು ಮಕ್ಕಳು ಅಳವಡಿಸಿಕೊಳ್ಳಲು ಕವಿ ಕರೆ ನೀಡಿದಂತಿದೆ. ಶೂದ್ರಕ ರಾಜನಲ್ಲಿ ವೀರರವನೆಂಬ ಸುಂದರ ಯುವಕ ಕೆಲಸವನ್ನು ಬೇಡಿ ಬರುವನು. ಅದಕ್ಕೆ ರಾಜನು ಸಮ್ಮತಿಸಿ ಪುರದ ಕಾವಲುಗಾರನನ್ನಾಗಿ ನೇಮಿಸಿಕೊಳ್ಳುತ್ತಾನೆ. ಇರುಳಲ್ಲಿ ಪುರದ ಹೊರಗಡೆ ಆಳುವ ರಾಜ್ಯಲಕ್ಷ್ಮೀ ಕೇಳಿಕೊಳ್ಳುವ ಮಾತು ರೋಮಾಂಚನಕಾರಿ ಯಾದುದು. ಯಾರಾದರೂ ವೀರನಾದವನು ತನ್ನ ಮಗನನ್ನು ಬಲಿಕೊಟ್ಟರೆ ಶಾಶ್ವತವಾಗಿ ಇಲ್ಲೇ ಉಳಿಯುವೆ ಎನ್ನುತ್ತಾಳೆ. ಕಾವಲುಗಾರ ವೀರರವನು ಈ ಮಾತನ್ನು ಕೇಳಿ ರಾಜ್ಯಲಕ್ಷ್ಮೀಯನ್ನು ಒಲಿಸಿಕೊಳ್ಳಲು ತನ್ನ ಪತ್ನಿ, ಪುತ್ರರ ಅನುಮತಿ ಪಡೆದುಕೊಂಡು ತನ್ನ ಮಗನನ್ನು ಬಲಿಕೊಟ್ಟು ತಾನು ಇರಿದುಕೊಂಡು ಸಾಯುತ್ತಾನೆ. ಮಡದಿಯು ದುಃಖ ತಾಳಲಾರದೆ ಪ್ರಾಣತ್ಯಾಗ ಮಾಡಿಕೊಳ್ಳುವಳು. ಈ ಪ್ರಸಂಗವನ್ನು ಶೂದ್ರಕ ರಾಜನು ಮರೆಯಲ್ಲಿ ನಿಂತು ಗಮನಿಸುವನು. ತಾನೂ ಸಹ ಬಲಿಕೊಟ್ಟುಕೊಳ್ಳಲು ಪ್ರಯತ್ನಿಸುವನು. ರಾಜ್ಯಲಕ್ಷ್ಮೀಯು ತಡೆದು ಶೂದ್ರಕ ರಾಜನಿಗೆ ಮಾತು ಕೊಟ್ಟಂತೆ ವೀರರವನನ್ನು, ಮಗ ಮತ್ತು ಮಡದಿಯನ್ನು ಬದುಕಿಸುತ್ತಾಳೆ. ಶೂದ್ರಕ ರಾಜನು ಪ್ರಜೆಗಳ ಸಮ್ಮುಖದಲ್ಲಿ ವೀರರವನ ಗುಣಗಾನ ಮಾಡಿ, ಉನ್ನತ ಪದವಿಯನ್ನು ನೀಡಿ ಗೌರವಿಸುತ್ತಾನೆ. ಇದು ಕಥನ ಕವನದ ವಸ್ತು, ವೀರರವನ ಪಾತ್ರ ಮಕ್ಕಳಿಗೆ ಕರುಣರಸ ಹುಟ್ಟಿಸುತ್ತದೆ. ಆತನ ವೀರತನ, ತ್ಯಾಗ ಗುಣಗಳು ಮನದಲ್ಲಿ ಉಳಿಯುತ್ತವೆ. ಮಕ್ಕಳಲ್ಲಿ ಸಾಹಸ, ದೇಶಪ್ರೇಮ ಮೂಡಿಸುವಲ್ಲಿ ಯಶಸ್ವಿಯಾಗಿವೆ.

ಇಂಥಹ ಅನೇಕ ಕಥೆಗಳನ್ನು ಪಳಕಳರು ರಚಿಸಿದ್ದಾರೆ. ಅವುಗಳಲ್ಲಿ 'ಕಿತ್ತೂರು ಚೆನ್ನಮ್ಮ', 'ಸಿಂಹ ಮತ್ತು ನರಿ', 'ಕಿಟ್ಟ ಮತ್ತು ಕಾಗೆ', 'ಕಾಫಿ ಕುಡಿದ ಗೆಳೆಯರು', 'ಜಡೆಯ ಕಥೆ', 'ಜಾಣಮಂತ್ರಿ', 'ಹಕ್ಕಿಗಳು ಮತ್ತು ಹಾವು', 'ಬೆಕ್ಕಿಗೆ ಗಂಟೆಕಟ್ಟುವವರಾರು' ಮೊದಲಾದವು ಮಕ್ಕಳಲ್ಲಿ ನೀತಿಯನ್ನು ತುಂಬುತ್ತವೆ. ಮಕ್ಕಳಿಗೆ ಸೋಲುವವರನ್ನು ಕಂಡರೆ ಕನಿಕರ ಉಂಟಾಗುತ್ತದೆ. ಮೋಸ ಹೋಗುವ, ಅನ್ಯಾಯಕ್ಕೊಳಗಾದ ವ್ಯಕ್ತಿಗಳ ಬಗ್ಗೆ ಅನುಕಂಪ ಮೂಡಿಸುತ್ತವೆ. ಮಕ್ಕಳಲ್ಲಿ ಮಾನವೀಯ ಗುಣಗಳನ್ನು ಬೆಳೆಸುತ್ತವೆ. ಭಾರತೀಯ ಸಂಸ್ಕೃತಿಯನ್ನು, ಪರಂಪರೆಯನ್ನು ಉಳಿಸುವ ಬೆಳೆಸುವ ಆಶಯ ಪಳಕಳರಲ್ಲಿ ಹೆಚ್ಚು ತೋರುತ್ತದೆ. ಕೂಡಿಬಾಳಿದರೆ ಸ್ವರ್ಗದ ಸುಖ, ಹಂಚಿ ತಿನ್ನುವ ಪಕ್ಷಿ ಸಂಕುಲಗಳನ್ನು ಕವಿ ನಿದರ್ಶನವಾಗಿ ಬಳಸಿ ಮಕ್ಕಳ ಮನ ಸೂರೆಗೊಂಡಿದ್ದಾರೆ.

ಬದುಕಿನಲ್ಲಿ ಪರಂಪರೆಯಿಂದ ಹಲವಾರು ಆಚರಣೆಗಳು ಬೆಳೆದು ಬಂದಿವೆ. ಸಂಸ್ಕೃತಿಯನ್ನು ಬಿಂಬಿಸುವ ಚಿತ್ರಣಗಳು ಕಂಡುಬರುವುದು ಪಳಕಳರ ಮಕ್ಕಳ ಕವಿತೆಗಳಲ್ಲಿ, ಮದುವೆ, ಕುಟುಂಬ, ಹಬ್ಬಗಳು, ಆಟಗಳು, ಆಚಾರ-ವಿಚಾರಗಳು, ನಾಡು-ನುಡಿ, ದೇಶಾಭಿಮಾನ ಮೂಡಿಸುವ ಕವನಗಳು ಮಕ್ಕಳಿಗಾಗಿ ರಚಿಸಿದ್ದಾರೆ. ನಮ್ಮ ನಾಡಿನ ಬೆನ್ನೆಲುಬು ರೈತ, ಕೃಷಿ ಸಂಸ್ಕೃತಿ ಎಲ್ಲ ಜೀವರಾಶಿಗಳಿಗೆ ಬದುಕು ನೀಡುತ್ತದೆ. ಮಕ್ಕಳು ಇಂಥ ನೆಲೆಯಲ್ಲಿ ಆಡಿ-ಹಾಡಿ ಬೆಳೆದರೆ ಉತ್ತಮ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಪಳಕಳರ ಕವಿತೆಗಳು ಅಭಿವ್ಯಕ್ತಪಡಿಸುತ್ತವೆ.

'ಎತ್ತುಗಳಿಗೆ ನೊಗವ ಕಟ್ಟಿ
ನೇಗಿಲಿಟ್ಟು ಹಗ್ಗ ಸುತ್ತಿ
ಹಿಡಿಕೆ ಹಿಡಿದು ಮುಂದೆ ನಡೆದು
ಹೂಡುತಾನೆ
'ಹೈ!' ಯೆಂದು ಹೊಲವನಿಂದು
ಹೂಡುತಾನೆ,
ಬಲದ ಕೈಲಿ ಇರುವ ಬೆತ್ತ
ಹಿಡಿದು ಎತ್ತಿ ತೋರಿಸುತ್ತ
ರೈತನಿವನು ಹೊಲವ ತಾನು
ಹೂಡುತಾನೆ
ಹೂಡುವವನು ತನಗೆ ತಾನು
ಹಾಡುತಾನೆ'[೧೬೩].

ಗ್ರಾಮೀಣ ಭಾರತದ ಚಿತ್ರಣ ನಮ್ಮ ಮುಂದೆ ನಿಲ್ಲುತ್ತದೆ. ಉಳುವುದು, ಬಿತ್ತುವುದು, ಕೊಯ್ಯುವುದು, ಗಂಡಸರ ಕಾರ್ಯಗಳಾದರೆ ಹೆಂಗಸರು ಬೀಸುವುದು, ಕುಟ್ಟುವುದು, ಮೊಸರು ಕಡೆದು ಮಜ್ಜಿಗೆ ಮಾಡುವುದು, ಮನೆಯನ್ನು ಸಾರಿಸಿ ರಂಗವಲ್ಲಿ ಹಾಕುವುದು

ಮೊದಲಾದ ಚಟುವಟಿಕೆಗಳು ಮಕ್ಕಳಿಗೆ ಸ್ಫೂರ್ತಿಯಾಗಬಲ್ಲವು. ಅಜ್ಜಿಯು ಮಕ್ಕಳನ್ನು ಕೂಡಿಸಿಕೊಂಡು ಕಥೆ ಹೇಳುವುದು, ಹಾಡು ಹೇಳುವುದು ಒಂದು ಸೊಗಸು. ಇಂಥ ಪರಂಪರೆ ಇಂದು ಕಾಣುತ್ತಿಲ್ಲ ಎಂಬ ಕೊರಗು ಪಳಕಳರ ಕವನಗಳು ವ್ಯಕ್ತಗೊಳಿಸುತ್ತವೆ. ಮಗುವಿಗೆ ಕುಟುಂಬದ ಕಲ್ಪನೆ ಮಾಡಿಕೊಡುವ ಬಗೆ ಬಲು ಸುಂದರವಾಗಿ 'ನಮ್ಮ ಮನೆ', 'ಅಕ್ಕನ ಮದುವೆ', 'ಪುಟ್ಟನ ಗುಟ್ಟು', 'ಅಕ್ಕನ ಭಾವ', 'ಹೊಟ್ಟೆಯೊಳಗಿನ ಪುಟ್ಟು', 'ಅಮ್ಮನಲ್ಲಿ' ಮೊದಲಾದ ಕವನಗಳು ಚಿತ್ರಿಸುತ್ತವೆ. 'ನೋಡುತ್ತ ಕಲಿ ಆಡುತ್ತ ನಲಿ' ಎನ್ನುವ ಹಾಗೆ, ರೈತನ ಬದುಕಿನ ಜೊತೆಗಾರರಾದ ಎತ್ತುಗಳು, ನೊಗ, ನೇಗಿಲು, ಹಗ್ಗ, ಹಿಡಿಕೆ, ಬೆತ್ತ, ಹೊಲ ಮೊದಲಾದವುಗಳನ್ನು ಮಗುವಿಗೆ ಪರಿಚಯ ಮಾಡುವ ಉದ್ದೇಶ ಪಳಕಳರಲ್ಲಿ ಕಾಣುತ್ತೇವೆ. ಮಕ್ಕಳಲ್ಲಿ ಯಾವುದೇ ಕೆಲಸವಿರಲಿ ಅದರ ಬಗ್ಗೆ ಗೌರವ ಮೂಡಿಸುವ ಹಂಬಲ ಪಳಕಳರದ್ದು, ಅಂಚೆಯ ಅಣ್ಣ, ನಾಟಿಯ ಹಾಡು ಕವಿತೆಗಳು ಮಕ್ಕಳಿಗೆ ಕಾಯಕ ನಿಷ್ಠೆಯನ್ನು ತಿಳಿಸಿಕೊಡುತ್ತವೆ. ಕಾಯಕ ಯಾವುದಾದರೂ ಭಿನ್ನತೆಯನ್ನು ಕಾಣಬಾರದು. ದುಡಿಮೆಯ ನಿಷ್ಠೆಯನ್ನು ಬಿಡಬಾರದು ಎಂಬ ಅರಿವು ಕವಿಯದು. 'ಕನ್ನಡದ ತುತ್ತುರಿಯನ್ನು ಹಿಡಿಯೋಣ ಬನ್ನಿ, ಕನ್ನಡದ ಕತ್ತುರಿಯನ್ನು ಹರಡೋಣ ಬನ್ನಿ' ಎಂದು ಕನ್ನಡ ಭಾಷೆಯ ಪ್ರೀತಿಯನ್ನು ಅಭಿವ್ಯಕ್ತಗೊಳಿಸುತ್ತಾರೆ. ನಾಡಿನ ಹಲವು ವೈವಿಧ್ಯ ಸಂಗತಿಗಳನ್ನು ಮಕ್ಕಳಿಗೆ ಸುಂದರವಾಗಿ ಪರಿಚಯ ಮಾಡುವ ಕಲೆ ಪಳಕಳ ಸೀತಾರಾಮ ಭಟ್ಟರಿಗೆ ಒಲಿದಂತಿದೆ.

ಮಕ್ಕಳ ವ್ಯಕ್ತಿತ್ವ ವಿಕಾಸ ಮತ್ತು ಸಾಹಿತ್ಯವನ್ನು ಕುರಿತು ಚಿಂತನೆ ಮಾಡಿದಾಗ ಮೊದಲಿಗೆ ಗೋಚರವಾಗುವುದು ಕಥೆಗಳ ಪಾತ್ರ. ಕಥೆಗಳು ಸಾಹಿತ್ಯದ ಪ್ರಕಾರಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ಕಥೆ ಕೇಳುವ ಅಥವಾ ಹೇಳುವ ಉದ್ದೇಶ ಕೇವಲ ಮನರಂಜನೆಗೆ ಮಾತ್ರವಲ್ಲ. ಬಹುಕಾಲ ಹೇಳುವಂತಹ ವಿಷಯವನ್ನು ಜನಮನದಲ್ಲಿ ಕ್ರಿಯಾತ್ಮಕ ರೀತಿಯಲ್ಲಿ ಅಳಿಯದೆ ಉಳಿದಿರುವಂತೆ ಮಾಡುವುದಾಗಿದೆ. ಅದೂ ಮಕ್ಕಳ ಮನದಲಿ ಉಳಿಯುವಂತೆ ಮಾಡುವುದು ತುಂಬಾ ಕಷ್ಟ. ಯಾಕೆಂದರೆ ಮಕ್ಕಳ ಮನಸ್ಸು ಚಂಚಲತೆಯಿಂದ ಹರಿದಾಡುತ್ತಿರುತ್ತದೆ. ಆ ಚಂಚಲತೆಯನ್ನು ಸೀಮಿತಗೊಳಿಸುವುದೇ ಕಥೆ. ಮಕ್ಕಳಿಗೆ ಕಥೆ ಹೇಳುವ ಉದ್ದೇಶವೆಂದರೆ, ಮಕ್ಕಳ ಮನಸ್ಸು ವಿಕಾರಗೊಳ್ಳದೆ, ದುರ್ಮಾರ್ಗದಲ್ಲಿ ಹೋಗದಿರಲಿ ಎನ್ನುವುದು. ಅಲ್ಲದೆ ಅವರು ಸದ್ಗುಣಿಗಳು, ಸದಾಚಾರಿಗಳೂ ಆಗುವಂತೆ ಮಾಡುವುದು ಕೂಡಾ ಕಥೆಯ ಉದ್ದೇಶ. ಅದಕ್ಕನುಗುಣವಾದ ವಿಷಯಗಳನ್ನು ಮಕ್ಕಳ ಕಥೆಗಳಲ್ಲಿ ಕಟ್ಟಬೇಕಾಗಿದೆ.

ನಮ್ಮ ಅಜ್ಜ-ಅಜ್ಜಿಯರು ತಮ್ಮ ಮೊಮ್ಮಕ್ಕಳಿಗೆ ನಿತ್ಯವು ಕಥೆ ಹೇಳುವ ರೂಢಿಯಿತ್ತು. ಕಥೆಗಳನ್ನು ಕೇಳುತ್ತಿದ್ದಂತೆ ಮಕ್ಕಳ ಕಲ್ಪನಾ ಸಾಮ್ರಾಜ್ಯ ಗರಿಗೆದರಿ ವಿಹಾರ ಮಾಡುತ್ತದೆ.

ಕಥೆಗಳನ್ನು ಕೇಳಿದಂತೆಲ್ಲ ಮಕ್ಕಳ ಮನಸ್ಸಿನಲ್ಲಿ ತಾವೂ ಒಳ್ಳೆಯವರಾಗಬೇಕು, ನಾಯಕರಾಗಬೇಕು ಎಂಬ ಹಂಬಲ ಮೂಡುತ್ತಿತ್ತು. ಹಾಗೆ ವ್ಯಕ್ತಿತ್ವ ರೂಪಿಸಿಕೊಂಡಿರುವ ಉದಾಹರಣೆಗಳು ಸಾಕಷ್ಟು.

ಕಥೆಗಳು ಮಕ್ಕಳಲ್ಲಿ ವಿಷಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವನ್ನು, ಆಸಕ್ತಿಯನ್ನು ಮೂಡಿಸುತ್ತವೆ. ಕಥೆಗಳಿಗೆ ಸ್ಪಂದಿಸದ ಮಕ್ಕಳೇ ಇಲ್ಲ. ಅಂತಹ ಮಕ್ಕಳಿಗೆ ಪಳಕಳ ಸೀತಾರಾಮ ಭಟ್ಟರು ಸುಂದರ ಕಥೆಗಳನ್ನು ಮಕ್ಕಳಿಗೆ ಕಟ್ಟಿಕೊಟ್ಟಿದ್ದಾರೆ. ಅವರಿಗೆ ಪ್ರೇರಣೆ ನೀಡಿದ ಸನ್ನಿವೇಶಗಳನ್ನು ನೆನಪಿಸಿಕೊಳ್ಳುತ್ತ, 'ನಾನು ಕಡಲಕೆರೆ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಕ್ರಿಶ್ಚಿಯನ್ ಮೇಸ್ಟ್ರೊಬ್ಬರು ಪಂಜೆಯವರ 'ಕಾಗೆ ಸತ್ತು ಹೇನು ಬಡವಾಯಿತು', 'ಬಿಟ್ಟಿ ಬಸವಯ್ಯ', 'ಇಲಿಗಳ ಥಕಥೈ' ಮೊದಲಾದ ಕಥೆಗಳನ್ನು, 'ನಾಗರಹಾವು', 'ತೆಂಕಣಗಾಳಿ' ಮುಂತಾದ ಪದ್ಯಗಳನ್ನು ಅಭಿನಯಿಸುತ್ತ ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಬಾಲ್ಯದಲ್ಲೇ ನನ್ನ ಮೇಲೆ ಪ್ರಭಾವ ಬೀರಿದವರು ಪಂಜೆಯವರು. ಮಕ್ಕಳ ಭಾಷೆ, ಮಕ್ಕಳ ಪುಸ್ತಕ, ಮಕ್ಕಳ ಸಾಹಿತ್ಯ ಹೇಗಿರಬೇಕು ಎಂದು ಮಾದರಿ ಹಾಕಿಕೊಟ್ಟವರೇ ಪಂಜೆಮಂಗೇಶರಾಯರು, ಇನ್ನೊಬ್ಬರಿಲ್ಲ'[೧೬೪] ಎಂದು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಪಳಕಳ ಸೀತಾರಾಮ ಭಟ್ಟರು 'ಪುಟ್ಟಬಿಲ್ಲಿ ಪುಟ್ಟ ತಾಯಿಯಾದಳು'[೧೬೫] ಕಥೆಯಲ್ಲಿ ಮಕ್ಕಳ ಮುಗ್ಧ ಮನದ ಕಲ್ಪನೆಯನ್ನು ಅನಾವರಣಗೊಳಿಸುತ್ತಾರೆ. ಪುಟ್ಟಬಿಲ್ಲಿಯು ಪೇಟೆಗೆ ಹೋಗುವುದು. ಕಾಸುಕೊಟ್ಟು ಮಂಗಮಾಮನ ಅಂಗಡಿಯಲ್ಲಿ ಸುಂದರವಾದ ಅಂಗಿಯನ್ನು ಕೊಳ್ಳುವುದು. ಹಂದಿ ಅತ್ತೆಯ ಅಂಗಡಿಯಲ್ಲಿ ಪೆಪ್ಪರಮೆಂಟು ತೆಗೆದುಕೊಳ್ಳುವುದು, ಬೆಳ್ಳುಕಾಕನ ಅಂಗಡಿಯಲ್ಲಿ ಪುಸ್ತಕ, ಭಾವನಾದ ಮೊಲನ ಅಂಗಡಿಯಲ್ಲಿ ಪುಟ್ಟ ಮಗುವಿನಂತಿರುವ ಚಂದದ ಗೊಂಬೆ ಕೊಂಡುಕೊಳ್ಳುವುದು, ಹೀಗೆ ಎಲ್ಲವನ್ನು ಚೀಲದಲ್ಲಿ ಹಾಕಿಕೊಂಡು ಬರುವಾಗ ಚೀಲದಲ್ಲಿದ್ದ ಗೊಂಬೆ ಮಗುವಿನಂತೆ ಅಳತೊಡಗುತ್ತದೆ. ಅದನ್ನು ತಾಯಿಯಂತೆ ಎತ್ತಿ ಮುದ್ದಾಡಿ ರಮಿಸುವಳು ಪುಟ್ಟಬಿಲ್ಲಿ. ಇದನ್ನು ನೋಡಿದ ಗುಬ್ಬಚ್ಚಿಯು ಪುಟ್ಟಬಿಲ್ಲಿ ತಾಯಿಯಾದಳೆಂದು ತಿಳಿದು ಸುಂದರ ಪದಕಟ್ಟಿ ಹಾಡತೊಡಗುವಳು. ಇಲ್ಲಿಯ ಪ್ರಾಸ, ಲಯ, ಸಂಭಾಷಣೆಗಳು ಕಥೆಗೆ ಮೆರಗು ತಂದಿವೆ. ಹೆಣ್ಣು ಮಗು–ಗೊಂಬೆ ತೆಗೆದುಕೊಂಡು ಮುದ್ದುಮಾಡಿ ಹಾಲು ಕುಡಿಸುವುದು, ಜೋಗುಳ ಹಾಡುವುದು ಮೊದಲಾದ ಕ್ರಿಯೆಗಳು ತಾಯಿಯನ್ನು ಕಣ್ಣುಮುಂದೆ ತಂದು ನಿಲ್ಲಿಸುತ್ತವೆ. ಪಳಕಳ ಸೀತಾರಾಮ ಭಟ್ಟರು ಮಕ್ಕಳಲ್ಲಿಯ ಕಲ್ಪನೆಯ ಪ್ರತಿಭೆಯನ್ನು ಹೊರಹಾಕುತ್ತಾರೆ. ಮಗು ಎಂದರೆ ಅದ್ಭುತ ಸೃಜನಶೀಲತೆಯ ಪ್ರತೀಕವಾದುದು. ಕಂಡದ್ದನ್ನು, ಕೇಳಿರುವುದನ್ನು ಸತ್ಯವೆಂದು ನಂಬುತ್ತದೆ. ಮಕ್ಕಳಲ್ಲಿಯ ಅನುಕರಣ ಕಲೆ ಪಳಕಳರು ಅರಿತುಕೊಂಡವರು.

'ಸಾಮಾನ್ಯವಾಗಿ ಪಳಕಳರ ಕಥಾ ವಿಷಯಗಳೆಲ್ಲ ಮಕ್ಕಳನ್ನು ಎಳವೆಯಲ್ಲೆ ತಿದ್ದಿ

ತೀಡುವ ಉದ್ದೇಶದಿಂದ ಕೂಡಿರುವಂಥವು. ಹಾಗಾಗಿ ಆ ಮಿತಿಯೊಳಗೆ ಕಥೆಗಳು ಅರಳುವುದು ಸಹಜವಾಗಿದೆ. ಈ ಕಾರಣಕ್ಕೆ ಇಲ್ಲಿ ಫ್ಯಾಂಟಸಿ ಪ್ರಪಂಚವಿಲ್ಲ. ಫ್ಯಾಂಟಸಿ ಕಾಣಿಸಿಕೊಂಡಲ್ಲಿ ಇಲ್ಲಿ ತೆರೆದುಕೊಂಡ ಲೋಕ ಕೃತಕವಾಗುವ ಅಪಾಯವಿದೆ. ಅವರನ್ನು ಪ್ರಾಯಶಃ ಕೈಬಿಟ್ಟಿದ್ದಾರೆ'[೧೬೬] ಎಂಬ ಅಭಿಪ್ರಾಯ ವೈದೇಹಿಯವರದು.

'ಬೆಕ್ಕಿನ ಮರಿ ಹಕ್ಕಯಾಯಿತೆ?'[೧೬೭] ಕಥೆಯಲ್ಲಿ ಬೆಕ್ಕಿನ ಮರಿ ಹಕ್ಕಿಗಳನ್ನು ಕರೆದು ಹೇಳುತ್ತದೆ, ಗೆಳೆಯರೆ ನಾನು ನಿಮ್ಮಂತೆ ಹಕ್ಕಿಯಾಗಿದ್ದೇನೆ' ಎನ್ನುವುದು. ಇದನ್ನು ಕೇಳಿದ ಹಕ್ಕಿಗಳೆಲ್ಲ ನಗುತ್ತವೆ, 'ನಮಗೆ ಕೊಕ್ಕು ಇದೆ, ನಿನಗೆ ಕೊಕ್ಕು ಇಲ್ಲ, ನೀನು ಹಕ್ಕಿಯಲ್ಲ' ಎನ್ನುವವು, ಬೆಕ್ಕಿನ ಮರಿ ಅಲ್ಲಿಂದ ಓಡಿ ಹೋಗುವುದು. ಕೊಕ್ಕಿನಂತಹ ಮರದ ತುಂಡನ್ನು ಎಲ್ಲ ಕಡೆ ಹುಡುಕಾಡುವುದು. ಸಿಕ್ಕ ತುಂಡನ್ನು ಮೂಗಿನ ತುದಿಗೆ ಕಟ್ಟಿಕೊಂಡು ಹಕ್ಕಿಗಳಿರುವ ಮರದ ಬಳಿಬಂದು ಮತ್ತೆ ಹೇಳುತ್ತದೆ. 'ಗೆಳೆಯರೇ, ಈಗ ನೋಡಿರಿ. ನನಗೂ ಕೊಕ್ಕು ಇದೆ. ನಾನು ಹಕ್ಕಿ' ಎನ್ನುವುದು. ಹಕ್ಕಿಗಳು ಬೆಕ್ಕಿನ ಮರಿಯ ಮಾತು ಕೇಳಿ ಗೊಳ್ಳನೆ ನಗುತ್ತವೆ. ನಕ್ಕು ನುಡಿಯುತ್ತವೆ. 'ನಮ್ಮ ಮೈಮೇಲೆ ಗರಿಗಳಿವೆ, ನಿನ್ನ ಮೈಮೇಲೆ ಗರಿಗಳಿಲ್ಲ, ನೀನು ಹಕ್ಕಿಯಲ್ಲ' ಎನ್ನುತ್ತವೆ. ಮತ್ತೆ ಬೆಕ್ಕಿನ ಮರಿ ಓಡಿ ಹೋಗಿ ರೆಕ್ಕೆ ಪಡೆಯುವ ಕ್ರಿಯೆ ನಡೆಯುತ್ತದೆ. ಹೀಗೆ ಕಥೆ ಮುಂದುವರೆಯುತ್ತದೆ. ಇಲ್ಲಿಯ ನಾಟಕೀಯ ಸನ್ನಿವೇಶಗಳು ಮನಸೆಳೆಯುತ್ತವೆ. ಪಳಕಳರು ಚಿತ್ರಿಸಿರುವ ಪಾತ್ರಗಳಲ್ಲಿ ಮಗುವಿನ ಮುಗ್ಧ ಸ್ವಭಾವ ಮನ ಸೆಳೆಯುತ್ತವೆ. ಸರಳ ಭಾಷೆಯೊಂದಿಗೆ ಪುಟ್ಟ ಪುಟ್ಟ ವಾಕ್ಯಗಳು, ಸಂಭಾಷಣೆಗಳು ಎಲ್ಲ ವಯೋಮಾನದವರಿಗೂ ಖುಷಿ ನೀಡುತ್ತವೆ.

'ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತರಸವಿರಬೇಕು, ಮಕ್ಕಳಲ್ಲಿ ಕಲ್ಪನಾಶಕ್ತಿ ಹೆಚ್ಚು. ಅದನ್ನು ಹತೋಟಿಯಲ್ಲಿಡುವಷ್ಟು ಬುದ್ಧಿಯು ಬೆಳೆದಿರುವುದಿಲ್ಲ. ಕಥೆಗಳಲ್ಲಿ ಅದ್ಭುತವಿದ್ದರೆ ಅವರ ಕಲ್ಪನಾಶಕ್ತಿಯ ಓಲಾಟಕ್ಕೆ ಅವಕಾಶವಾಗುತ್ತದೆ. ಕಾಲು ತಾಗಿದರೆ ಬಾನಿಗೇರುವ ಜಮಖಾನ, ಕಿವಿ ತಿರುಗಿದರೆ ನೀರೊಳಗೆ ಹೋಗುವ ಮಾಟದ ಕುದುರೆ, ದೀಪ ಉಜ್ಜಿದರೆ ಕಣ್ಮುಂದೆ ಬರುವ ಭೂತ ಮುಂತಾದ ಕಥೆಗಳು ಅವುಗಳೊಳಗಿನ ಅದ್ಭುತರಸದಿಂದ ಮಕ್ಕಳಿಗೆ ಪ್ರಿಯವಾಗುತ್ತವೆ'[೧೬೮] ಎಂಬುದು ಪಂಜೆಮಂಗೇಶರಾಯರ ಅಭಿಪ್ರಾಯ ನೆನೆಯಬೇಕು.

ಪಳಕಳ ಸೀತಾರಾಮ ಭಟ್ಟರು ನಮ್ಮ ಸುತ್ತಲಿನ ಜಗತ್ತು ಹೇಗೆ ಕಾಣುತ್ತದೆಯೋ ಹಾಗೆಯೇ ಚಿತ್ರಿಸುವ ಭಾವದವರು. ಪ್ರಪಂಚದ ಸುಖ-ದುಃಖ, ನೋವು-ನಲಿವುಗಳನ್ನು ವ್ಯಾವಹಾರಿಕವಾಗಿ ಗಮನಿಸದೆ ಕಲಾತ್ಮಕ ಕಣ್ಣಿನಿಂದ ಆಸ್ವಾದಿಸಿ, ಅನುಭವಿಸಿ ಮಕ್ಕಳ ಕಥಾ ಸಾಹಿತ್ಯವನ್ನು ಅಭಿವ್ಯಕ್ತಗೊಳಿಸಿದವರು. ಇವರ ಕಥೆಗಳು ವಾಸ್ತವ ಜಗತ್ತಿನಲ್ಲಿ ಮೂಡಿದ ಘಟನೆಗಳು, ಪಾತ್ರಗಳು ಒಳಗೊಂಡಿವೆ. ಆಧುನಿಕ ಕಾಲದ ಪರಿಸರದಲ್ಲಿ

ಬೆಳೆಯುತ್ತಿರುವ ಮಕ್ಕಳಿಗಾಗಿ ವಾಸ್ತವತೆಯ ನೆಲೆಯಲ್ಲಿ ಬರೆಯುವುದು ಪಳಕಳರ ಕಥೆಗಳು ತೆರೆದಿಡುತ್ತವೆ. 'ವಾಸ್ತವವೇ ಆಗಲಿ ಅವಾಸ್ತವವೇ ಆಗಲಿ, ಕಥೆಗಳೆಲ್ಲ ನಮ್ಮ ವಾಸ್ತವ ಬದುಕಿಗೆ ಹೇಗೋ ಒಟ್ಟಿನಲ್ಲಿ ಬಂದು ತಾಗುವಂಥವೇ, ಕಾಗಕ್ಕ ಸೆಗಣಿಯ ಮನೆ ಮಾಡಿಕೊಂಡಿರಬೇಕು. ಗುಬ್ಬಕ್ಕ ಗಚ್ಚಿನ ಮನೆ ಮಾಡಿಕೊಂಡಿರಬೇಕು. ಆದರೆ ಆ ಕಾಗಕ್ಕ ಗುಬ್ಬಕ್ಕಗಳ ಕಥೆ ನಮ್ಮ ಸುತ್ತಲಿನದ್ದೇ ಆಗಿರುತ್ತದೆ. ಹೀಗಾಗಿ ಏನೇ ಆಗಲಿ, ಇವನ್ನೆಲ್ಲ ನಾವು ರಚಿಸುವುದು ನಮಗಾಗಿ, ನಮ್ಮ ಬದುಕಿಗಾಗಿ, ವಾಸ್ತವ, ಅವಾಸ್ತವ ಕಥೆಯು ಸಿದ್ಧಗೊಳಿಸುವ ಒಂದು ವಿಭಿನ್ನ ಪಾಕ ಎನ್ನುವ ಹಾಗೆ ಮಕ್ಕಳಿಗಷ್ಟೇ ಅಲ್ಲ. ಹಿರಿಯರಿಗೂ ಆ ವಾಸ್ತವ, ಅವಾಸ್ತವ ಮಾದರಿಗಳು ಬೇಕಾಗುತ್ತದೆ'[೧೧೯] ಎನ್ನುತ್ತಾರೆ ಆನಂದ ಪಾಟೀಲರು.

ಪಳಕಳರ ಕಥೆಗಳಲ್ಲಿ ನೀತಿ ಮತ್ತು ಉಪದೇಶಗಳನ್ನು ಮೀರಿದ ರಂಜನಾತ್ಮಕವಾದ ಗುಣಗಳಿವೆ. ಮಕ್ಕಳಲ್ಲಿ ಸಂತೋಷ ತುಂಬುತ್ತದೆ. ಮಕ್ಕಳ ಮನದಲ್ಲಿ ಬದುಕಿನ ರಸವನ್ನು ಗ್ರಹಿಸುವ, ಅವರನ್ನು ಅರಿವಿನೆಡೆಗೆ ಒಯ್ಯುವ ಮೌಲ್ಯಗಳು ಅಭಿವ್ಯಕ್ತಗೊಂಡಿವೆ. ಪಳಕಳ ಸೀತಾರಾಮ ಭಟ್ಟರ 'ಹಾಡಿತು ಓಡಿತು ರೊಟ್ಟಿ' ಕಥೆಯು 'ಕಾಗೆ ಮತ್ತು ಜಾಣ ನರಿ' ಕಥೆಯನ್ನು ನೆನಪಿಸುತ್ತದೆ. ಅದೇ ಮಾದರಿಯ ಕಥೆಯಾದರು ಅಭಿವ್ಯಕ್ತಿಯು ವಿಭಿನ್ನವಾಗಿ ತೋರುತ್ತದೆ.

'ಮನೆಯಲ್ಲಿದ್ದ ಗೋಧಿಹಿಟ್ಟು
ನೀರಿನೊಡನೆ ಬೆರೆತು ಒಟ್ಟು
ಒಲೆಯ ಬೆಂಕಿಯಲ್ಲಿ ಸುಟ್ಟು
ರೊಟ್ಟಿಯಾ–ದೆ.
ಈಗ ಅಜ್ಜನನ್ನು ಬಿಟ್ಟು
ಮುದುಕಿ ಅಜ್ಜಿಯನ್ನು ಬಿಟ್ಟು
ಎದುರು ಇರುವ ನಿನ್ನ ಬಿಟ್ಟು
ಓಡಿಹೋದೆ......'[೧೨೦].

ಪಳಕಳರ 'ಹಾಡಿತು ಓಡಿತು ರೊಟ್ಟಿ' ಸುಂದರವಾಗಿ ಮೂಡಿರುವ ಪ್ರಾಸಬದ್ಧವಾದ ಹಾಡುವ ಕಥೆ. ಮಕ್ಕಳಲ್ಲಿ ಹಾಸ್ಯ ಪ್ರಜ್ಞೆಯನ್ನು ಮೂಡಿಸುತ್ತದೆ. ಅಜ್ಜಿಯೊಬ್ಬಳು ಅಜ್ಜನಿಗೆ ರೊಟ್ಟಿ ಮಾಡಿ ಕೊಡುವ ಪ್ರಸಂಗ ಇಡಿಯಾಗಿ ವರ್ಣಿಸಲ್ಪಟ್ಟಿದೆ. ಹಿಟ್ಟು ಕಲಸುವುದು, ರೊಟ್ಟಿ ತಟ್ಟುವುದು, ತವೆಯಲ್ಲಿ ಇಟ್ಟು ಬೇಯಿಸುವುದು, ಬಿಸಿ ಆರಲು ಕಿಟಕಿ ಹತ್ತಿರ ಇಡುವುದು, ಆಗ ರೊಟ್ಟಿ ಅಲ್ಲಿಂದ ಮಾಯವಾಗುವುದು. ಅತ್ತ–ಇತ್ತ–ಸುತ್ತ–ಮುತ್ತ ನೋಡಿ, ಕಿಟಕಿಯಿಂದ ರೊಟ್ಟಿ ಅಂಗಳಕ್ಕೆ ಚಂಗನೆ ಜಿಗಿಯುವುದು. ಆಗ ತಿನ್ನಲು ಬಂದ ಮೊಲ ಮತ್ತು ಹುಲಿಯನ್ನು ಹಾಡಿನಿಂದ ಮೋಡಿ ಮಾಡಿ ಜಾಣರೊಟ್ಟಿ ತಪ್ಪಿಸಿಕೊಳ್ಳುತ್ತದೆ. ಮುಂದೆ ನರಿಯ ಜಾಣತನಕ್ಕೆ ಮಾರು ಹೋಗುವುದು. ಅದರ ಹೊಗಳಿಕೆಗೆ ಉಬ್ಬಿ ಹೋಗುವುದು. ತನ್ನ ಹಾಡಿಗೆ ತಾನೇ ಮೈಮರೆತು ರೊಟ್ಟಿಯು

ಮೋಸ ಹೋಗುವುದು. ಇದು ಕಥೆಯ ಹಂದರ. ಗದ್ಯ-ಪದ್ಯಗಳಿಂದ ಕೂಡಿದ ಕಥೆ. 'ಹೊಗಳಿಕೆಗೆ ಮರುಳಾಗಬಾರದು' ಎಂಬ ನೀತಿಯ ಮಾತು ವ್ಯಕ್ತಗೊಳಿಸುತ್ತದೆ.

ಪಳಕಳ ಸೀತಾರಾಮ ಭಟ್ಟರ 'ಹೂದೋಟದ ಹುಡುಗಿಯರು' ಕಥೆ ಹೆಣ್ಣುಮಕ್ಕಳು ಆಶೆಪಡುವ 'ಹೂವನ್ನು' ಕೇಂದ್ರೀಕರಿಸಿಕೊಂಡು ರಚಿಸಿದ ಸರಳ ಸುಂದರ ಸಂಭಾಷಣೆಗಳಿಂದ ಕೂಡಿದೆ. ವಸಂತಿ ಎಂಬ ಹುಡುಗಿ ಉಳಿದ ಹುಡುಗಿಯರಂತೆ ಮೈಗಳ್ಳಿಯಲ್ಲ. ಮಗು ವಸಂತಿ ಬೀಜವನ್ನು ತಾನೇ ನೆಟ್ಟು, ಗೊಬ್ಬರ ಹಾಕಿ, ನೀರು ಉಣಿಸಿ ಬೆಳೆಸಿದ ಬಳ್ಳಿ ಬಣ್ಣ 'ಬಣ್ಣದ ಹೂಗಳನ್ನು ಬೀಡುತ್ತವೆ, ಸೋಮಾರಿ ಗೆಳತಿಯರು ಆಸೆಯ ಕಣ್ಣುಗಳಿಂದ ನೋಡುವರು. ಅವರು ತಮ್ಮ ಸೋಮಾರಿತನದ ತಪ್ಪು ತಿಳಿದು ಕ್ಷಮೆಯಾಚಿಸುವರು. ಆಗ ವಸಂತಿ ಮನಕರಗಿ ಎಲ್ಲರಿಗೂ ತಾನು ಬೆಳೆದ ಹೂವುಗಳನ್ನು ಹಂಚುತ್ತಾಳೆ. ಮಕ್ಕಳು ಕಾಯಕದ ಮಹತ್ವ, ಸೋಮಾರಿತನದ ಗುಣವನ್ನು ಹೋಗಲಾಡಿಸಿಕೊಳ್ಳಬೇಕೆಂಬ ಅರಿವನ್ನು ಮೂಡಿಸುತ್ತದೆ. ಪಳಕಳರು 'ಹಾಲು ಯಾಕೆ ಉಕ್ಕಿತು?', 'ರಮೇಶಣ್ಣ ಮೇಸ್ತ್ರಿ ಆದಾಗ', 'ನೋವು ತಿಂದರೂ ಲಾಭವಾಯಿತು', 'ಒಂದು ಕಪ್ಪೆಯ ಕಥೆ-ವ್ಯಥೆ' ಮೊದಲಾದ ಕಥೆಗಳನ್ನು ರಚಿಸಿದ್ದಾರೆ. ಇವು ಮಕ್ಕಳಲ್ಲಿ ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ ಬೆಳೆಸುವಲ್ಲಿ ಸಫಲವಾಗಿವೆ. ತಮ್ಮ ಕಥೆಗಳಲ್ಲಿ ಮೂಢನಂಬಿಕೆ, ಹಿಂಸೆ, ಕ್ರೌರ್ಯ, ರಾಕ್ಷಸ ಪ್ರವೃತ್ತಿಗಳನ್ನು ವಿರೋಧಿಸುತ್ತಾರೆ. ಸಂಪ್ರದಾಯವನ್ನು ತೊಡೆದು ಬುದ್ಧಿವಂತರನ್ನಾಗಿ ಮಾಡುವ ಧೋರಣೆ ಪಳಕಳ ಸೀತಾರಾಮ ಭಟ್ಟರು ಅಭಿವ್ಯಕ್ತಗೊಳಿಸುತ್ತಾರೆ. 'ನಾವೆಲ್ಲರೂ ಒಂದೇ', 'ದೇವರೊಬ್ಬನೇ ನಾವು ಹಲವು' ಎಂಬ ಕಥೆಗಳು ಭಾವೈಕ್ಯತೆಯ, ವೈಚಾರಿಕತೆಯ, ಸಾಮಾಜಿಕ ಧೋರಣೆಯ ಮನೋಭಾವವನ್ನು ಮೂಡಿಸುತ್ತವೆ. ಪಳಕಳರು ತಮ್ಮ ಕಥೆಗಳಲ್ಲಿ ಮಕ್ಕಳ ಮನವನ್ನು ಆಕರ್ಷಿಸುವ ಸನ್ನಿವೇಶಗಳನ್ನು, ಸಾಹಸಗಳನ್ನು ವ್ಯಕ್ತಗೊಳಿಸುವ ಕಲೆ ಸಹಜವಾಗಿ ಮೂಡಿಬಂದಿದೆ.

ಪಳಕಳ ಸೀತಾರಾಮ ಭಟ್ಟರು ಮಕ್ಕಳ ಮನವನ್ನು ಅರಿತು-ಬೆರೆತು ಕಥೆಯನ್ನು ರಚಿಸಿದವರು. ಮಕ್ಕಳ ಮೂಲತಃ ಪ್ರಶ್ನೆ ಮಾಡುವ ಗುಣ ಹೊಂದಿದವರು. ಮನೆಯ ಹಿರಿಯರನ್ನು, ತಂದೆ-ತಾಯಿಗಳನ್ನು ಯಾಕೆ? ಹೇಗೆ? ಎಂದು ಯಾವುದಾದರೂ ವಿಷಯ-ವಸ್ತುಗಳಿಗಾಗಿ ಪ್ರಶ್ನೆ ಮಾಡುತ್ತಾರೆ. ಇಂಥ ಮಗುವಿನ ಪ್ರಶ್ನೆಗಳಿಗೆ ಉತ್ತರಿಸುವುದು ಹಿರಿಯರ ಕರ್ತವ್ಯವಾಗಿದೆ. ಇವುಗಳಲ್ಲಿ ಅವಲೋಕಿಸುವ, ಪರಿಶೀಲಿಸುವ, ಚಿಂತನಶೀಲ ಗುಣಗಳು ಪಳಕಳರ ಕಥೆಗಳಲ್ಲಿ ವ್ಯಕ್ತವಾಗುತ್ತವೆ.

'ಹಾಲು ಯಾಕೆ ಉಕ್ಕಿತು?' ಎಂಬ ಕಥೆಯಲ್ಲಿ ಮಗು ಮತ್ತು ತಾಯಿ ಮಧ್ಯೆ ಸಂವಾದ ನಡೆಯುವುದು. ಅಮ್ಮ ಹಾಲಿನ ಪಾತ್ರೆ ನೋಡು, ಹಾಲು ಉಕ್ಕುವಾಗ ಹೇಳು ಎನ್ನುವಳು. ಮಗು ವಿಚಾರಿಸಿ ಪ್ರಶ್ನೆಯನ್ನು ಮಾಡುತ್ತದೆ. ನೀರಿನ ಪಾತ್ರೆ ಯಾಕೆ ನೋಡು

ಎನ್ನಲಿಲ್ಲ? ಎಂಬ ಕುತೂಹಲ ಮೂಡುತ್ತದೆ. ಆಗ ಅಜ್ಜನು ವೈಜ್ಞಾನಿಕವಾಗಿ ತಿಳಿಸುತ್ತಾನೆ. 'ಪ್ರೋಟಿನ್ ಮತ್ತು ಕೊಬ್ಬು ನೀರಿನಲ್ಲಿ ಕಲಾಯ್ಡ ರೂಪದಲ್ಲಿರುವ ಮಿಶ್ರಣವೇ ಹಾಲು. ಅದನ್ನು ಕುದಿಸಿದಾಗ ಅದರಲ್ಲಿರುವ ಕೊಬ್ಬಿನ ಗುಳ್ಳೆಗಳು ಮೇಲೆರುತ್ತವೆ. ಹಾಗೆ ಮೇಲೇರಿದ ಅವು ಒಂದು ಗೂಡಿ, ಕೆನೆ ರೂಪುಗೊಳ್ಳುತ್ತದೆ. ಹಾಲಿನ ಮೇಲ್ಮೈಯಲ್ಲಿ ಹರಡಿಕೊಂಡಿರುವ ಕೆನೆಯ ಪದರು ನೀರು ಕುದಿದು ಹುಟ್ಟಿದ ಹಬೆಯು ಹೊರಹೋಗದಂತೆ ತಡೆಯುತ್ತದೆ. ಹೀಗೆ ಕೆಳಗೆ ತಡೆಹಿಡಿಯಲ್ಪಟ್ಟ ಹಬೆಯು ಒಟ್ಟುಗೂಡಿ ಒತ್ತುವುದರಿಂದ ಹಾಲು ಮೆಲಕ್ಕೆ ಉಕ್ಕಿ ಬರುತ್ತದೆ. ಜೊತೆಯಲ್ಲೇ ಕೆಳಗಡೆಯಿಂದ ಹುಟ್ಟಿ ಬರುವ ಹಬೆಯ ಗುಳ್ಳೆಗಳೂ ಮೇಲೇರಿ ಬಂದು, ಹಾಲು ಉಕ್ಕಿ ಹೊರಚೆಲ್ಲಲು ಕಾರಣವಾಗುತ್ತದೆ'[೧೭೧]. ಇಂತಹ ಉತ್ತರವನ್ನು ಆಲಿಸಿದ ಮಗು ಅರ್ಥಮಾಡಿಕೊಳ್ಳುತ್ತದೋ? ಇಲ್ಲವೋ? ತಿಳಿಯದು. ಆದರೆ ವೈಜ್ಞಾನಿಕವಾಗಿ ತಿಳಿಸುವ ಅಜ್ಜಂದಿರರು ಇರುವುದು ಒಳಿತು.

ಮಕ್ಕಳಲ್ಲಿ ಆದರ್ಶ ವ್ಯಕ್ತಿಗಳ ಗುಣಗಳು ಬೆಳೆಸುವ ಹಂಬಲ ಪಳಕಳ ಸೀತಾರಾಮ ಭಟ್ಟರದು. ಮಕ್ಕಳಿಗಾಗಿ ಅವರು 'ಲಾಲ್ ಬಹದ್ದೂರ ಶಾಸ್ತ್ರಿ', ಈಶ್ವರಚಂದ್ರ ವಿದ್ಯಾಸಾಗರ, ಸರ್, ಎಂ. ವಿಶ್ವೇಶ್ವರಯ್ಯನವರ ಬದುಕಿನ ಸವೆದ ಹಾದಿಯನ್ನು ಮಕ್ಕಳ ಮುಂದೆ ತೆರೆದಿಟ್ಟದ್ದಾರೆ. 'ಈಶ್ವರಚಂದ್ರ ವಿದ್ಯಾಸಾಗರ'ರ ಜೀವನ ಚರಿತ್ರೆಯನ್ನು ಮಕ್ಕಳ ಮನಮುಟ್ಟುವಂತೆ ಚಿತ್ರಿಸಿ ಕಣ್ಣೀರು ಹರಿಸಿದ್ದಾರೆ. 'ಈಶ್ವರಚಂದ್ರರ ಜಾಣತನ, ಪರೋಪಕಾರ, ಶಿಸ್ತು, ಸಾಹಸ, ಸ್ವಾಭಿಮಾನ, ಸ್ವಾವಲಂಬನೆ, ಸರಳ ಸ್ವಭಾವ, ಜನಸೇವೆ, ಸರಳತೆಯ ಶಿಕ್ಷಕ, ಸಮಾಜಸುಧಾರಕ, ಉದಾರ ಬುದ್ದಿಯ, ಉಪಕಾರಿ' ಮೊದಲಾದ ಮೌಲ್ಯಗಳು ಸುಂದರವಾಗಿ ಮೂಡಿವೆ. 'ಈಶ್ವರಚಂದ್ರ ವಿದ್ಯಾಸಾಗರ'ರು ಒಮ್ಮೆ ಭಾಷಣಕ್ಕಾಗಿ ಬರ್ದವಾನಿಗೆ ರೈಲಿನಲ್ಲಿ ಪ್ರಯಾಣ ಮಾಡಿ ನಿಲ್ದಾಣವನ್ನು ತಲುಪುವರು. ಆಗ ಇವರ ಭಾಷಣ ಕೇಳಲೆಂದು ಅದೇ ರೈಲು ನಿಲ್ದಾಣದಲ್ಲಿ ಸಿರಿವಂತ ಯುವಕ ಬಂದು ಇಳಿಯುತ್ತಾನೆ. ಸಾಮಾನ್ಯ ವ್ಯಕ್ತಿಯಂತಿರುವ ದಯಾಸಾಗರರನ್ನು ನೋಡಿ ಅವರಿಗೆ ತನ್ನ ಪೆಟ್ಟಿಗೆಯನ್ನು ಹೊರಿಸಿಕೊಂಡು ಹೋಗುವನು. ಮರು ದಿವಸ ಭವ್ಯ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ ದಯಾಸಾಗರರನ್ನು ಕಂಡು ತಮ್ಮ ತಪ್ಪನ್ನು ಕ್ಷಮಿಸಲು ಕೇಳಿಕೊಳ್ಳುವನು. ಇಲ್ಲಿ ಪಳಕಳರು ಸ್ವಾವಲಂಬಿ ಬದುಕಿನ ಮಹತ್ವ ಸಾರಿದ್ದಾರೆ. ಸಮಾಜದಲ್ಲಿ ಆ ಸಮಯದಲ್ಲಿ ತರತಮ ಭಾವನೆಗಳು ಸಹಜವಾಗಿದ್ದವು. ಅಂಥ ಮೇಲು-ಕೀಳು ಸನ್ನಿವೇಶಗಳನ್ನು ಖಂಡಿಸುತ್ತಾರೆ.

'ಆಗ ಸಹಾಯಕನು, ಸ್ವಾಮೀ, ಇವರು ಚಮ್ಮಾರರು, ಬ್ರಾಹ್ಮಣನಾದ ನಾನು ಇವರನ್ನು ಮುಟ್ಟುವುದೇ?' ಎಂದು ಅವರನ್ನೇ ಕೇಳಿದನು. ವಿದ್ಯಾಸಾಗರರಿಗೆ ಕೋಪ ಉಕ್ಕಿ ಬಂತು. ಬ್ರಾಹ್ಮಣ ಮೇಲು, ಉಳಿದವರು ಕೀಳು ಎಂದು ಯಾರು ಹೇಳಿದರು. ನಿನಗೆ? ಈ ಭೇದಬುದ್ಧಿಯಿಂದಲೇ ಹಾಳಾದವರು ನಾವು' ಎಂದು ಅವರು ಗುಡುಗಿದರು.

ಬಳಿಕ ತಮ್ಮ ಕೈಗೆ ಎಣ್ಣೆ ಸುರಿದುಕೊಂಡರು, ಅಲ್ಲಿದ್ದ ಅರೆಬತ್ತಲೆಯ ಮಕ್ಕಳ ಮೈಗೆ ತಾವೇ ಎಣ್ಣೆ ತಿಕ್ಕಿದರು, ತಲೆಗೂ ಎಣ್ಣೆ ಹಾಕಿ ಸಿಕ್ಕು ಬಿಡಿಸಿದರು, ಅಲ್ಲಿದ್ದವರು ಬೆಕ್ಕಸಬೆರಗಾಗಿ ನೋಡುತ್ತಲೇ ಇದ್ದರು'[೧೨].

ಲಾಲಬಹುದ್ದೂರ ಶಾಸ್ತ್ರಿಯವರು ಬದುಕಿನಲ್ಲಿ ಹಲವಾರು ಕಷ್ಟಗಳನ್ನು ಅನುಭವಿಸಿದವರು. ಗಾಂಧೀಜಿಯವರ ಆದರ್ಶದ ತತ್ವಗಳಿಗೆ ಮನಸೋತವರು. ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದವರು. ಬ್ರಿಟೀಷರ ವಿರುದ್ಧ ಹೋರಾಟ ಮಾಡಿದವರು. ದೇಶ ಸೇವೆಯೇ ಪರಮ ಗುರಿ ಎಂಬಂತೆ ನಡೆದುಕೊಂಡರು. ನಿಸ್ವಾರ್ಥ ಭಾವದಿಂದ ದುಡಿದ ಸಾಮಾನ್ಯ ಬಡಕುಟುಂಬದ ಬಾಲಕ ಶಾಸ್ತ್ರಿ ಕ್ರಮಿಸಿದ ಹಾದಿ ಕಠಿಣವಾದುದು. ನೆಹರು ಅವರ ನಂತರ ಭಾರತದ ಎರಡನೆಯ ಪ್ರಧಾನಮಂತ್ರಿಯಾದರು. ಮಕ್ಕಳು ಇವರ ಜೀವನ ಚರಿತ್ರೆಯನ್ನು ಓದುತ್ತ ಹೋದಂತೆ ರೋಮಾಂಚನ ಮೂಡಿಸುತ್ತದೆ. ಇವರ ಆದರ್ಶ, ಮಾನವೀಯ, ಸತ್ಯ ನಡತೆ, ಪ್ರಾಮಾಣಿಕತನ, ಸರಳ ಜೀವನ, ಇಂಥ ಹಲವು ಮೌಲ್ಯಗಳನ್ನು ಮಕ್ಕಳಿಗೆ ಮಾದರಿಯಾಗಿ ಅಭಿವ್ಯಕ್ತಗೊಂಡಿವೆ.

ಪಳಕಳರು ಮಕ್ಕಳಲ್ಲಿ ಪರಿಸರದ ಸಂರಕ್ಷಣೆಯ ಕುರಿತಾಗಿ, ಹಲವು ಕವಿತೆಗಳನ್ನು ರಚಿಸಿದ್ದಾರೆ. 'ಒಂದು ಗಿಡದ ಆತ್ಮಕಥೆ'ಯು ಹರೆಯದ ಯುವಕರಲ್ಲಿ ಕಂಡುಬರುವ ಚಟಗಳನ್ನು ಹೋಗಲಾಡಿಸುವ ಅರಿವಿನ ಜಾಗೃತಿ ಮೂಡಿಸುವ ಕಥೆಯಾಗಿದೆ. ಕಥೆಯು ತನ್ನ ಅಂತರಂಗವನ್ನು ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಮರವು ಹೇಳುವ ನುಡಿಗಳು ಸೊಗಸಾಗಿ ಸೆರೆಹಿಡಿಯುತ್ತವೆ. 'ನಾನೊಂದು ಹಸಿರುಸಸ್ಯ. ನನ್ನ ಎಲೆ ಅಥವಾ ಸೊಪ್ಪಿಗಾಗಿ ಜನರು ನನ್ನನ್ನು ಬೆಳೆಸುತ್ತಾರೆ. ಹೊಗೆಬತ್ತಿಗಳ ತಯಾರಿಕೆಯಲ್ಲಿ ನನ್ನ ಬಳಕೆಯಾಗುತ್ತದೆ. ಕೆಲವರು ನನ್ನನ್ನು ಜಗಿದು ತಿನ್ನುತ್ತಾರೆ. ಕೆಲವರು ಸುಣ್ಣ ಹಚ್ಚಿ ವೀಳ್ಯದೊಂದಿಗೆ ಸೇವಿಸುತ್ತಾರೆ. ಕೆಲವರು ನನ್ನ ಪುಡಿಯನ್ನು ಮೂಗಿಗೇರಿಸಿ ಖುಷಿಪಡುತ್ತಾರೆ. ಬಹುಮಂದಿ ಬೀಡಿ, ಸಿಗರೇಟು, ಚುಟ್ಟ, ಹುಕ್ಕಾ ಇತ್ಯಾದಿ ಹೊಗೆಬತ್ತಿಗಳ ಮೂಲಕ ಅಥವಾ ಚಿಲುಮೆಗಳ ಮೂಲಕ ನನ್ನ ಧೂಮಪಾನ ಮಾಡುತ್ತಾರೆ. ಇದು ನನ್ನ ಸೂಕ್ಷ್ಮ ಪರಿಚಯ'[೧೩]. ಹೀಗೆ ಹೊಗೆಸೊಪ್ಪು ತನ್ನ ದುಷ್ಪರಿಣಾಮವನ್ನು ವ್ಯಕ್ತಗೊಳಿಸುತ್ತ ಎಲ್ಲರನ್ನು ತನ್ನ ಸೆರೆಯಾಗಿಸಿಕೊಳ್ಳುತ್ತದೆ. ಇಡೀ ಯುವ ಸಮೂಹವನ್ನೇ ಆವರಿಸಿಬಿಟ್ಟಿದೆ ಎನ್ನುವುದು ಪಳಕಳರ ಅಂತರಾಳ.

ಎಚ್. ನಾಗವೇಣಿಯವರ 'ಧಣಿಗಳ ಬೆಳ್ಳಿ ಲೋಟ' ಕಥೆಯಲ್ಲಿ ಹೊಳೆ ಒಂದು ಪಾತ್ರವಾಗಿ ನಿರೂಪಿತವಾಗಿದೆ. ಹಾಗೆಯೇ ಇಲ್ಲಿಯೂ ಹೊಗೆಸೊಪ್ಪು ಕಥೆಗಾರನಾಗುತ್ತದೆ, ಕಥೆಯಾಗುತ್ತದೆ, ನಾಯಕ ಪಾತ್ರವಾಗುತ್ತದೆ, ಖಳನಾಯಕ ಪಾತ್ರವಾಗುತ್ತದೆ. ಹೀಗೆ ಹೊಗೆಸೊಪ್ಪಿನ ಅಂತರಾತ್ಮವನ್ನು ಅನಾವರಣಗೊಳಿಸುತ್ತ ಹೋಗುತ್ತಾರೆ ಪಳಕಳರ ಸೀತಾರಾಮ ಭಟ್ಟರು.

ಹೊಗೆಸೊಪ್ಪು ಹರೆಯದವರಲ್ಲಿ ರುಚಿಯನ್ನು ಹುಟ್ಟಿಸುತ್ತದೆ, ಮತ್ತನ್ನು ತರಿಸುತ್ತದೆ. ಜೊತೆಗೆ ತನ್ನ ತಾತ್ವಿಕ ನೆಲೆಗಳನ್ನು ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಪ್ರಾಕೃತಿಕವಾಗಿ, ವೈಚಾರಿಕವಾಗಿ, ಶೈಕ್ಷಣಿಕವಾಗಿ, ಐತಿಹಾಸಿಕವಾಗಿ, ನೈತಿಕವಾಗಿ ಗುರುತಿಸಿಕೊಳ್ಳುತ್ತ ಹೋಗುತ್ತದೆ. ಅಪಾಯಕರವಾದ ರಾಸಾಯನಿಕ ವಸ್ತುಗಳು ದೇಹಕ್ಕೆ ಹಾನಿಯನ್ನುಂಟು ಮಾಡುತ್ತವೆ ಎಂಬ ಜಾಗೃತಿಯನ್ನು ಮೂಡಿಸುವುದು ಕಥೆಯ ಉದ್ದೇಶವಾಗಿದೆ. ಆಧುನಿಕ ಜಗತ್ತಿಗೆ ಈ ಕಥೆ ಪೂರಕವೂ ಮಾರ್ಮಿಕವು ಎನಿಸುತ್ತದೆ. ಪಳಕಳ ಸೀತಾರಾಮ ಭಟ್ಟರು ಆಟದ ವಸ್ತುಗಳು ಮಕ್ಕಳಿಗೆ ಹೇಗೆ ಮಾರಕವಾಗಿವೆ ಎಂಬುದನ್ನು 'ಆಟಿಕೆಗಳ ಕೂಟದಲ್ಲಿ' ಕಥೆ ಹಿಡಿದಿಟ್ಟಿದೆ. ಇಂಥ ಆಟಿಕೆ ವಸ್ತುಗಳು ಮಕ್ಕಳಿಗೆ ಬಲು ಪ್ರೀತಿಯಿಂದ ತಂದೆ-ತಾಯಿಗಳು ಕೊಡಿಸಿ ಬಿಡುವರು. ಆದರೆ ಅವುಗಳು ಮಕ್ಕಳ ಮೇಲೆ ಹೇಗೆ ಕೆಟ್ಟ ಪರಿಣಾಮ ಬೀರುತ್ತವೆ ಎಂಬುದೇ ಕಥೆಯ ತಿರುಳು. ಮಕ್ಕಳು ಜಾತ್ರೆಯಲ್ಲಿ ನಾನಾ ರೀತಿಯ ಬೊಂಬೆಗಳನ್ನು ನೋಡುತ್ತಾರೆ. ಅದನ್ನು ಪಳಕಳರು, 'ಪ್ರದರ್ಶನಕ್ಕೆ ಬಂದಿದ್ದ ಆಟಿಕೆಗಳಲ್ಲಿ ಬೊಂಬೆಗಳ ಸಂಖ್ಯೆ ಬಲು ದೊಡ್ಡದಿತ್ತು. ಮನುಷ್ಯರ ಬೊಂಬೆಗಳು, ಪ್ರಾಣಿಗಳ ಬೊಂಬೆಗಳು, ಪಕ್ಷಿಗಳ ಬೊಂಬೆಗಳು ಎಲ್ಲವೂ ಅಲ್ಲಿದ್ದವು. ಅಜ್ಜಿ ಗೊಂಬೆ, ಅಜ್ಜ ಗೊಂಬೆ, ಅಪ್ಪ ಗೊಂಬೆ, ಅಮ್ಮ ಗೊಂಬೆ, ಹುಡುಗ ಗೊಂಬೆ, ಹುಡುಗಿ ಗೊಂಬೆ, ಪಾಪು ಗೊಂಬೆ, ಪೋಲಿಸು ಗೊಂಬೆ, ಮೊಲದ ಗೊಂಬೆ, ಕರಡಿ ಗೊಂಬೆ, ಮಂಗನ ಗೊಂಬೆ, ಗಿಣಿ ಗೊಂಬೆ, ಗುಬ್ಬಚ್ಚಿ ಗೊಂಬೆ ಇತ್ಯಾದಿ ಗೊಂಬೆಗಳ ದೊಡ್ಡ ಗುಂಪೇ ಅಲ್ಲಿ ಕಂಡುಬರುತ್ತಿತ್ತು'[೧೭೪]. ಹೀಗೆ ಗೊಂಬೆಗಳ ವೈವಿಧ್ಯತೆಯನ್ನು ಮಕ್ಕಳಿಗೆ ಪರಿಚಯಿಸುತ್ತಾರೆ. ಜಾತ್ರೆಯ ನಿಮಿತ್ತವಾಗಿ ಊರ ಹೊರಗೆ ವಿಶಾಲ ಬಯಲಿನಲ್ಲಿ ಗೊಂಬೆಗಳ ಪ್ರದರ್ಶನ ಏರ್ಪಡಿಸುವುದು, ರಾತ್ರಿಯ ಸಮಯದಲ್ಲಿ ಎಲ್ಲ ಗೊಂಬೆಗಳು ತಮ್ಮ-ತಮ್ಮ ವೈಯಕ್ತಿಕ ಹೊಗಳಿಕೆಯನ್ನು ಮಾಡಿಕೊಳ್ಳುತ್ತ, ಇನ್ನೊಬ್ಬರನ್ನು ಅವಹೇಳನ ಮಾಡುವುದು ನಡೆಯುತ್ತದೆ. ಆಗ ಒಬ್ಬರನೊಬ್ಬರು ತಮ್ಮ ಬಣ್ಣಗಳಲ್ಲಿರುವ ಅಪಾಯಕಾರಿಯಾದ ರಾಸಾಯನಿಕ ವಸ್ತುಗಳ ಬಗ್ಗೆ ಸಂಭಾಷಣೆ ಮಾಡುತ್ತವೆ. ಇದನ್ನು ಪಳಕಳರು ಮಕ್ಕಳಿಗೆ ಆಗುವ ಪರಿಣಾಮವನ್ನು, ಸ್ವಾರ್ಥಪರವಾದ ವ್ಯಾಪಾರ ಮನೋಧರ್ಮದವರನ್ನು ಖಂಡಿಸುತ್ತಾರೆ. ಮಕ್ಕಳಿಗೆ ಕಥೆ ಇಷ್ಟವಾದರೂ ಅದರ ಹಿನ್ನೆಲೆ ಅಪಾಯಕಾರಿ ಎಂಬುದು ಅಭಿವ್ಯಕ್ತವಾಗಿದೆ. ಅದೇ ರೀತಿಯಾಗಿ ಪಳಕಳರು ಪರಿಸರ ಕಾಳಜಿಯನ್ನು ಬಿಂಬಿಸುವ 'ಕಪ್ಪೆಯ ಸಂತತಿಯ ಅಳಿವು, ಮರಗಳ ನಾಶ, ಗುಬ್ಬಚ್ಚಿಗಳ ಅಳಿವು, ಎರೆಹುಳಗಳ ಮಹತ್ವ, ಪ್ಲಾಸ್ಟಿಕ ವಸ್ತುಗಳ ಕೆಡಕುಗಳು' ಮುಂತಾದ ಕಥೆಗಳನ್ನು ಮಕ್ಕಳಿಗೆ ರಚಿಸಿದ್ದಾರೆ.

ಹುಲಿಯು ರಾಷ್ಟ್ರೀಯ ಪ್ರಾಣಿ. ಅದರ ರಕ್ಷಣೆಯ ಹೊಣೆ ಎಲ್ಲರಲ್ಲಿ ಮೂಡಲಿ ಎನ್ನುವುದು ಪಳಕಳರ ಅಭಿಪ್ರಾಯ. ಮಕ್ಕಳು ಹುಲಿಯನ್ನು ನೋಡಿ ಭಯಪಡುವುದು ಸಹಜ. ಆದರೆ 'ಹುಲಿಯ ಗುಹೆಗೆ ಪುಟ್ಟಿಯ ಪಯಣ' ಎಂಬುದು ಮಕ್ಕಳಲ್ಲಿ ಹಾಸ್ಯದೊಂದಿಗೆ ರೋಮಾಂಚನ ಮೂಡಿಸುತ್ತದೆ. ಪಳಕಳ ಸೀತಾರಾಮ ಭಟ್ಟರು ಹುಲಿಯ ಸಂತತಿ

ನಶಿಸಿ ಹೋಗುವ ಸೂಚನೆಗಳನ್ನು ಕೊಡುತ್ತಾರೆ. ಮಗು ಪುಟ್ಟಿ ಅಜ್ಜಿಯ ಕಥೆ ಕೇಳುತ್ತ ಮಲಗುವಳು. ಕನಸಿನಲ್ಲಿಯೆ ಕಾಡಿನಲ್ಲಿ ತಿರುಗಾಡುತ್ತ ಹುಲಿಯ ಗುಹೆಯನ್ನು ಸೇರುತ್ತಾಳೆ. ಹುಲಿ ಮತ್ತು ಪುಟ್ಟಿಯ ಸಂಭಾಷಣೆ ಸುಂದರವಾಗಿ ಮೂಡಿದೆ. ಪಳಕಳರು ಮಾನವೀಯ ಸಂಬಂಧಗಳಂತೆ ಹುಲಿಯಜ್ಜಿಯ ಮಾತುಗಳನ್ನು ವ್ಯಕ್ತಗೊಳಿಸುತ್ತಾರೆ. ಗುಹೆಯಲ್ಲಿರುವ ಹುಲಿ ವಯಸ್ಸಾದುದರಿಂದ ಹುಲಿಯಜ್ಜಿ ಎನ್ನುವುದು, ಹುಲಿಯಜ್ಜಿ ತನ್ನ ಮೂಲ ಬದುಕಿನ ಕಥೆಯನ್ನು ತಿಳಿಸುತ್ತದೆ. ಪಳಕಳರಿಗೆ ಮುಖ್ಯವಾಗಿ ಹುಲಿಯ ಮೂಲ, ದೈಹಿಕ ರಚನೆ, ಜೀವನ ವಿಧಾನ, ಆಹಾರ ಕ್ರಮ, ಗುಣ ಸ್ವಭಾವವನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವ ಉದ್ದೇಶವಿರುವಂತೆ ತೋರುತ್ತದೆ. ಮಕ್ಕಳಿಗೆ ರಂಜನೆ ನೀಡುವ ಕಥೆ ಕೊನೆಗೆ 'ಪುಟ್ಟಿ ಒಂದೇ ಒಂದು ಬಾರಿ ನಿನ್ನನ್ನು ಅಪ್ಪಿಕೊಳ್ಳುತ್ತೇನೆ. ಹೆದರಬೇಡ ಹಾಂ! ಎಂದಳು ಹುಲಿಯಜ್ಜಿ. ಹಾಗೆ ಹೇಳುತ್ತಲೇ ಅವಳು ಹೆಜ್ಜೆ ಮುಂದಿಟ್ಟಳು. ಪುಟ್ಟಿಗೆ ಆವೇಶ ಬಂದಂತಾಯಿತು. ಅವಳು ಮೇಲೆದ್ದಳು. 'ನಿಲ್ಲು' ಎಂದು ಅಬ್ಬರಿಸುತ್ತ ಚಂಗನೆ ಗುಹೆಯಿಂದ ಹೊರಜಿಗಿದಳು. ಆಗಲೆ 'ಧಡ್' ಎಂದು ಸದ್ದು ಕೇಳಿಸಿತು. ಪುಟ್ಟಿ ತನ್ನ ಮಂಚದಿಂದ ಕೆಳಗೆ ಬಿದ್ದಿದ್ದಳು. ಆದರೆ ಹುಲಿಯ ಗವಿಯಲ್ಲಿ ಅಲ್ಲ. ತನ್ನ ಮನೆಯಲ್ಲಿ'[೧೭೫]. ಈ ಸನ್ನಿವೇಶ ಮಕ್ಕಳಿಗೆ ಬಲು ಬೇಗನೆ ಸ್ಪಂದಿಸುತ್ತದೆ. ಅಂಥ ಕಲೆಗಾರಿಕೆ ಪಳಕಳರ ಕಥೆಗಳಲ್ಲಿ ಕಂಡುಬರುತ್ತವೆ.

ಜನಪದ ಆಧಾರಿತ ಕಥೆಗಳನ್ನು ಪಳಕಳರು ವಿಭಿನ್ನವಾಗಿ ಹೆಣೆದು ಮಕ್ಕಳನ್ನು ತಮ್ಮತ್ತ ಸೆಳೆದಿದ್ದಾರೆ. ಇವರ ಕಥೆಗಳ ಘಟನೆಗಳು ವಾಸ್ತವತೆಯ ಹತ್ತಿರ ಸುಳಿಯುವುದಿಲ್ಲ. ಬುದ್ಧಿವಂತಿಕೆ, ಮೋಸ, ವಂಚನೆ, ಕಳ್ಳತನಗಳು ಕಥೆಗಳಲ್ಲಿ ಪ್ರಮುಖವಾಗಿ ಕಂಡುಬರುವ ಲಕ್ಷಣಗಳು. ಇವುಗಳಿಗೆ ಉದಾಹರಣೆಯಾಗಿ 'ಸಾಹಸಿ ಲಚ್ಚಿ', 'ದಿಟ್ಟೆ ದೀರಮ್ಮ', 'ಗಂಭೀರ ಕಥೆ', 'ಮಾದಿಗ', 'ಗೌಡನ ಮಕ್ಕಳು', 'ಹಾರುವ ಕುದುರೆ' ಮೊದಲಾದವುಗಳನ್ನು ಗುರುತಿಸಬಹುದು. ಮಕ್ಕಳಿಗಾಗಿ ಬರೆದ ಜನಪದ ಆಧಾರಿತ ಕಥೆಗಳು ಪ್ರಾದೇಶಿಕವಾಗಿ ಕೆಲವು ಕಡೆ ಪ್ರಚಲಿತದಲ್ಲಿವೆ. 'ಸಾಹಸಿ ಲಚ್ಚಿ' ಕಥೆಯಲ್ಲಿ ಅನಾಥೆಯಾದ ಲಚ್ಚಿ ಚೆಲುವೆಯು ಬುದ್ಧಿವಂತಳು. ಶ್ರೀಮಂತ ವ್ಯಕ್ತಿಯೊಬ್ಬ ಬಂದು ತಾನು ಲಚ್ಚಿಯ ಸಂಬಂಧಿಯೆಂದು ನಂಬಿಸಿ ಆಕೆಯನ್ನು ಒಯ್ದು ಗುಡ್ಡದ ಮನೆಯಲ್ಲಿ ಕೂಡಿಹಾಕುತ್ತಾನೆ. ಆತ ಮೂವರು ಕಳ್ಳ ಗೆಳೆಯರನ್ನು ಕರೆತಂದು ಮದುವೆ ಮಾಡಿಕೊಳ್ಳಲು ಪ್ರಯತ್ನಿಸುವನು. ಈ ಕಾರಣವಾಗಿ ಅವನು ಹೊರಹೋದಾಗ ಲಚ್ಚಿಯು ಸೀರೆಯನ್ನು ಮೇಲಿನ ಜಂತಿಗೆ ಸುತ್ತಿ ಅಟ್ಟವೇರುತ್ತಾಳೆ. ಅಲ್ಲಿಂದ ಅವಳು ಪಾರಾಗಿ ತನ್ನ ಮನೆಯನ್ನು ಸೇರುತ್ತಾಳೆ. ತನ್ನ ತಂದೆ ಸೈನಿಕನಾಗಿದ್ದ ಸಂದರ್ಭದಲ್ಲಿಯ ಖಡ್ಗವನ್ನು ಮಸೆದುಕೊಂಡು ತನ್ನ ಸೆರಗಿನ ಮರೆಯಲ್ಲಿಟ್ಟುಕೊಂಡು ಮಂಚದ ಮೇಲೆ ಮಲಗುವಳು. ಆಗ ಶ್ರೀಮಂತನು ತನ್ನ ಮೂವರು ಕಳ್ಳರೊಂದಿಗೆ ಬಂದು ಆಕೆಯನ್ನು ಮಂಚ ಸಮೇತವಾಗಿ ಹೊತ್ತುಕೊಂಡು ಹೋಗುತ್ತಿರುವ ಮೂವರು ಕಳ್ಳರ ರುಂಡವನ್ನು ಕತ್ತರಿಸುತ್ತಾಳೆ. ತಪ್ಪಿಸಿಕೊಂಡ ವಂಚಕ ಶ್ರೀಮಂತ ಮರವೇರಿ ಹತ್ತಿ

ಕುಳಿತುಕೊಳ್ಳುವನು. ಆಗ ಲಚ್ಚಿಯು ತರಗೆಲೆಗಳನ್ನು ಕೂಡಿಸಿ ಮರಕ್ಕೆ ಬೆಂಕಿ ಹಚ್ಚುವಳು. ಆಗ ಉಸಿರುಗಟ್ಟಿ ವಂಚಕ ಮರದ ಮೇಲಿಂದ ಬಿದ್ದು ಸಾಯುವನು. ಅವನ ಸಂಪತ್ತನ್ನು ಊರಿನ ಹಿರಿಯರಿಗೆ ಕೊಡುವಳು. ಉತ್ತಮ ಗುಣದ ಯುವಕನನ್ನು ನೋಡಿ ಮದುವೆ ಮಾಡಿಕೊಂಡು ಸಂತೋಷವಾಗಿರುವಳು. ಇದು ಕಥೆಯ ಹಂದರ. ಮಕ್ಕಳಲ್ಲಿಯು ಸಾಹಸ ಪ್ರವೃತ್ತಿ ಮೂಡಲು, ಪಳಕಳರು ಈ ಕಥೆಯ ಮೂಲಕ ಅಭಿವ್ಯಕ್ತಿಸುತ್ತಾರೆ. ತಂತ್ರಗಳನ್ನು ಬಳಸಿದ ಕಥೆ ಸುಂದರವಾಗಿ ಮೂಡಿದೆ.

ಪಳಕಳ ಸೀತಾರಾಮ ಭಟ್ಟರು ಮಕ್ಕಳ ಕಥೆಗಳಲ್ಲಿ ನಾಡು-ನುಡಿಯ ಅಭಿಮಾನ, ದೇಶಪ್ರೇಮ, ಆದರ್ಶಗಳು, ಜಾತಿ, ಮತ, ಧರ್ಮ, ವರ್ಗಸಮಾನತೆಯ, ಇಂದ್ರಜಾಲ, ಯುಕ್ತಿ, ಮನುಷ್ಯ ಶಕ್ತಿ, ಪ್ರಕೃತಿ ಮೊದಲಾದ ವಿಷಯಗಳನ್ನು ತೆರೆದುಕೊಳ್ಳುವಂತೆ ಅಭಿವ್ಯಕ್ತಗೊಳಿಸಿದ್ದಾರೆ. ಪಳಕಳರು ತಮ್ಮ ಕೃತಿಗಳಲ್ಲಿ ಸಾಮಾಜಿಕ ವ್ಯಕ್ತಿತ್ವವನ್ನು, ಸುಂದರವಾದ ಪ್ರಕೃತಿ ಚಿತ್ರಣ, ಕುಟುಂಬ, ಶಾಲೆ, ಶಿಕ್ಷಕರು, ಐತಿಹಾಸಿಕ ವ್ಯಕ್ತಿಗಳು, ಆದರ್ಶ ವ್ಯಕ್ತಿಗಳು, ಸಮಾಜ ಮೊದಲಾದವು ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತವೆ. ಮಕ್ಕಳ ಸಂತೋಷಕ್ಕಾಗಿ ಕೃತಿಗಳನ್ನು ರಚನೆ ಮಾಡಿದವರು. ಮಕ್ಕಳು ಯಾವುದೇ ತಪ್ಪನ್ನು ಎಸಗಿದರೂ ಪಾಲಕರು ಗಮನಿಸಿ ತಿಳಿಸಬೇಕು, ಬುದ್ಧಿ ಮಾತುಗಳಿಂದ ತಿದ್ದಬೇಕು. ಅಂಥ ಮಕ್ಕಳ ಸಾಹಿತ್ಯ ಪಳಕಳರದು. 'ಬಾಲ್ಯಾವಸ್ಥೆಯು ಶೀಲರಚನೆಗೆ ಬಹುಮುಖ್ಯವಾದ ಕಾಲವಾಗಿದ್ದು, ಈ ಕಾಲದಲ್ಲಿ ಮಗು ಏನನ್ನು ಅಭ್ಯಾಸ ಮಾಡುತ್ತದೆಯೋ ಅದು ಜೀವನಾಂತ್ಯದವರೆಗೂ ಅದರ ನಡತೆಯನ್ನು ನಿರ್ಧರಿಸುತ್ತದೆ. ಕೊಳಕುತನ, ಸುಳ್ಳು ಹೇಳುವುದು ಈಗ ಅಭ್ಯಾಸವಾದರೆ ಮುಂದೆ ತಿದ್ದುವುದು ಅಸಾಧ್ಯ. ಒಳ್ಳೆಯ ಗುಣಗಳು ಬಾಲ್ಯದಲ್ಲೇ ಮೊಳೆಯದಿದ್ದರೆ ಆಮೇಲೆ ವಿಕಾಸ ಹೊಂದಲಾರವು. ನಾವು ಸಣ್ಣ ಮಕ್ಕಳನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಮಕ್ಕಳ ಬೆಳವಣಿಗೆ, ಆರೋಗ್ಯ ಮತ್ತು ಶೀಲರಚನೆಯ ದೃಷ್ಟಿಯಿಂದ ಮಕ್ಕಳ ಭಾವನೆಗಳನ್ನು ಪರಿಶೀಲಿಸುವುದು ಅತ್ಯಾವಶ್ಯಕ'[೧೭೬] ಎಂಬ ಅಭಿಪ್ರಾಯವನ್ನು ಗಿರಿಜಮ್ಮನವರು ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಪಳಕಳರ ಕೃತಿಗಳು ಮಕ್ಕಳು ಸಮಾಜಮುಖಿಯಾಗಿ ಬೆಳೆಯಬೇಕು ಮತ್ತು ಬಾಳಬೇಕೆಂದು ಬರೆದವರು. ಬದುಕಿನ ನೀತಿಯನ್ನು ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

'ಕಾವ್ಯೇಷು ನಾಟಕಂ ರಮ್ಯಂ' ಎಂಬ ಮಾತು ಜನಜನಿತವಾದುದು. ಕಾವ್ಯ ಪ್ರಕಾರಗಳಲ್ಲಿ ನಾಟಕವು ಬಹು ರಮ್ಯವಾದುದು. ಪ್ರತಿಯೊಬ್ಬರಿಗೂ ನಾಟಕ ಸಂತೋಷವನ್ನುಂಟು ಮಾಡಿ ಉಲ್ಲಾಸಗೊಳಿಸುತ್ತದೆ. ಮಕ್ಕಳಲ್ಲಿ ಪ್ರಾಮಾಣಿಕತೆ, ದೇಶಾಭಿಮಾನ, ಉತ್ತಮ ನಡೆ-ನುಡಿ ಮುಂತಾದ ಮಾನವೀಯ ಮೌಲ್ಯಗಳು ಬಲುಬೇಗನೆ ತಲುಪುವ ಮಾಧ್ಯಮ ನಾಟಕ. ಇದು ಅಭಿನಯ ಮೂಲಕ ನಮ್ಮ ಆಶೆಗಳನ್ನು ಅಭಿವ್ಯಕ್ತಗೊಳಿಸುತ್ತದೆ. ಮಕ್ಕಳ ನಾಟಕದ ಬೆಳವಣಿಗೆ ಎಂ. ಎನ್. ಕಾಮತ್‌ರಿಂದ ಪ್ರಾರಂಭವಾದುದು ನಮಗೆಲ್ಲ ತಿಳಿದಿರುವ ಸಂಗತಿ. ಮಕ್ಕಳ ವಯಸ್ಸಿಗೆ, ಜ್ಞಾನಕ್ಕೆ, ಗ್ರಹಣ

ಶಕ್ತಿಗೆ, ಅಭಿರುಚಿಗೆ ತಕ್ಕಂತೆ ನಾಟಕಗಳನ್ನು ರಚಿಸುವುದು ಉತ್ತಮ. ಹೀಗೆ ಮಕ್ಕಳ ಮನಸ್ಸಿಗೆ ಸಂತೋಷವನ್ನು ನೀಡುವುದರೊಂದಿಗೆ ಅವರ ಮನೋವಿಕಾಸಕ್ಕೆ ಪೂರಕವಾಗಿವೆ. ಮಕ್ಕಳ ಮೃದು ಮನಸ್ಸಿಗೆ ನಾಟುವ ನಾಟಕ ರಚಿಸುವುದು ನಮ್ಮ ಕರ್ತವ್ಯ. ಮಕ್ಕಳ ಮಾನಸಿಕ, ದೈಹಿಕ ಮತ್ತು ಕಲೆಯ ಅಭಿವ್ಯಕ್ತಿಗೆ ನಾಟಕವು ಪೂರಕವಾಗಿ ಕೆಲಸ ಮಾಡುತ್ತದೆ. ಮುಗ್ಧ ಭಾವದ ಮಕ್ಕಳಲ್ಲಿ ವಿಚಾರ ಶಕ್ತಿ ಮತ್ತು ಅನುಕರಣೆ ಅಪಾರ. ಮಕ್ಕಳು ಮಾನಸಿಕ ಹಸಿವನ್ನು ಹೊಂದಿರುವವರು. ಆಲೋಚನೆಯ ಮನೋಭಾವವುಳ್ಳವರು, ಇವುಗಳನ್ನು ಪೂರೈಸುವ ಸಾಧನ ನಾಟಕ. ಈ ನೆಲೆಯಲ್ಲಿ ಮಕ್ಕಳ ನಾಟಕಗಳಲ್ಲಿ ಕೆಲವು ಪ್ರಮುಖ ಅಂಶಗಳು ಒಳಗೊಂಡಿರಬೇಕು. ನಾಟಕದ ವಿಷಯ ಯಾವುದೇ ಇರಲಿ, ಅದು ಮಕ್ಕಳ ಜ್ಞಾನಕ್ಕೆ ನಿಲುಕುವಂತಿರಬೇಕು, ಸುದೀರ್ಘವಾಗಿರದೆ ಸಂಕ್ಷಿಪ್ತವಾಗಿರಬೇಕು, ಮಕ್ಕಳಲ್ಲಿ ಸಂತೋಷ, ಉತ್ಸಾಹ ಮೂಡಿಸುವಂತಿರಬೇಕು. ಮಕ್ಕಳಿಗೆ ಖುಷಿ ನೀಡುವ ರೂಪ ಆಂಗಿಕ ಅಭಿನಯಗಳಿಂದ ಕೂಡಿರಬೇಕು.

ಅನುಕರಣೆಯನ್ನು ಒಳಗೊಂಡ ಯಾವುದೇ ಪ್ರದರ್ಶನವನ್ನು ನಾಟಕ ಎಂದು ವಿಶಾಲ ಅರ್ಥದಲ್ಲಿ ಕರೆಯಬಹುದು. ಘರ್ಷಣೆ (ಕಾನ್‌ಫ್ಲಿಕ್ಟ್)ಯನ್ನು ಪ್ರಚೋದಿಸುವ ಭಾವಗಳು ಅಭಿವ್ಯಕ್ತವಾಗುವ ಯಾವುದೇ ಸಂದರ್ಭವೂ ನಾಟಕೀಯವಾಗಬಹುದು. ರಂಗಭೂಮಿಗೆ ಮಿತಿಗೊಳಿಸಕೊಂಡು ವಿವರಿಸುವುದಾದರೆ, ಗದ್ಯ ಅಥವಾ ಪದ್ಯ ರೂಪದಲ್ಲಿ, ಸಂಭಾಷಣೆಗಳ ಮುಖಾಂತರ ಘಟನೆಗಳನ್ನು ನಿರೂಪಿಸುವ, ರಂಗಮಂಚದ ಮೇಲೆ ನಟರು ಅಭಿನಯಿಸಲೆಂದು ರಚಿತವಾಗುವ ಯಾವುದೇ ಕೃತಿ ನಾಟಕವಾಗುತ್ತದೆ. ಈ ನಾಟಕದ ಅಸ್ತಿತ್ವಕ್ಕೆ ನಟರು, ಪ್ರೇಕ್ಷಕರು ಮತ್ತು ರಂಗಮಂಚ ಅನಿವಾರ್ಯ. ಯಾಕೆಂದರೆ ನಾಟಕ ಹುಟ್ಟುವುದು ಮನುಷ್ಯನಲ್ಲಿರುವ ಅನುಕರಣೆಯ ಪ್ರವೃತ್ತಿಯಿಂದ. ಈ ಪ್ರವೃತ್ತಿಯಲ್ಲಿ ಸ್ವ-ಪ್ರದರ್ಶನ, ಸ್ವ-ಅನ್ವೇಷಣೆಗಳೂ ಬೆರೆತಿರುವುದರಿಂದ, ಅನುಕರಣೆ ಪೂರ್ಣವಾಗಲು ಪ್ರೇಕ್ಷಕರು ಅನಿವಾರ್ಯ. ಈ ಪ್ರೇಕ್ಷಕರು ನಿಜವಾದ ಜನ ಆಗಿರಬಹುದು ಅಥವಾ ಕಲ್ಪಿತವಾದ ಪ್ರೇಕ್ಷಕವೃಂದವೂ ಆಗಬಹುದು’[೧೭೭]. (ಉದಾ : ರೇಡಿಯೋ ನಾಟಕ).

ಪಳಕಳ ಸೀತಾರಾಮ ಭಟ್ಟರು ೨೪ ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ. ಎಲ್ಲ ನಾಟಕಗಳು ಸರಳವಾಗಿ ಅಭಿನಯಿಸಲು ಸಾಧ್ಯವಿದೆ. ಹಿರಿಯರ ಸಹಾಯವಿಲ್ಲದೆ ಮಕ್ಕಳೇ ರಂಗದ ಮೇಲೆ ಪ್ರದರ್ಶನ ಮಾಡಬಹುದು. ಪ್ರತಿಯೊಂದು ನಾಟಕದ ಕಥಾವಸ್ತುಗಳು ಪುರಾಣ, ಇತಿಹಾಸ, ಜನಪದಗಳಿಂದ ಆಯ್ದುಕೊಂಡರೂ ಪಳಕಳರು ಆಧುನಿಕ ಸ್ಪರ್ಷ ನೀಡಿದ್ದಾರೆ. ಪ್ರಸ್ತುತ ಸಮಾಜದ ಚಿತ್ರವನ್ನು ಮಕ್ಕಳಿಗೆ ತಿಳಿಸುವ ಗುಣ ಹೊಂದಿವೆ.

ಇವರ ‘ಏಕಲವ್ಯ’ ನಾಟಕ ಪೌರಾಣಿಕ ಕಥೆಯನ್ನು ಒಳಗೊಂಡ ಅಪ್ರತಿಮ ಬಾಲಕನ ಕಥೆ. ಪಳಕಳರ ಏಕಲವ್ಯನು ಆಧುನಿಕ ಸಮಾಜದ ಗುರು-ಶಿಷ್ಯರ ಸಂಬಂಧಗಳನ್ನು ಬೆಸೆಯುವ ಭಾವನಾತ್ಮಕ ಕೊಂಡಿಯಾಗಿ ನಿಲ್ಲುತ್ತಾನೆ. ಕಾಡಿನ ಕ್ರೂರ ಪ್ರಾಣಿಗಳಿಂದ

ಸಾಧು ಪ್ರಾಣಿಗಳನ್ನು ರಕ್ಷಿಸಲು ಬೇಕಾದ ಬಿಲ್ವಿದ್ಯೆಯನ್ನು ಕಲಿಯಲು ಬಾಲಕ ಏಕಲವ್ಯನು ತಾಯಿಯ ಅನುಮತಿಯನ್ನು ಪಡೆದುಕೊಂಡು ಹಸ್ತಿನಾವತಿಗೆ ಬರುತ್ತಾನೆ. ದ್ರೋಣಾಚಾರ್ಯರರನ್ನು ಬೇಡಿಕೊಳ್ಳುತ್ತಾನೆ. ಅದಕ್ಕೆ ಅವರು, 'ನಾನು ರಾಜರ ಆಶ್ರಯದಲ್ಲಿ ಇರುವವನು. ರಾಜಕುಮಾರರಿಗೆ ವಿದ್ಯೆ ಹೇಳಿಕೊಡುವವನು. ಅವರ ಜೊತೆ ನಿನಗೆ ವಿದ್ಯೆ ಹೇಳಿಕೊಡುವುದನ್ನು ರಾಜಕುಮಾರರೂ ಒಪ್ಪಲಾರರು. ಅವರ ಹಿರಿಯರಿಗೂ ಅದು ಸಮ್ಮತವಾಗದು' ಎಂದು ಹೇಳುತ್ತಾರೆ. ಏಕಲವ್ಯ ಕೈಮುಗಿದು ತಾವೇ ನನಗೆ ದಾರಿತೋರಬೇಕೆಂದು ಬೇಡಿಕೊಳ್ಳುತ್ತಾನೆ. ಆಗ ದ್ರೋಣರು ಹೇಳಿದ ಮಾತು ಮಾರ್ಮಿಕವಾದುದು; ಏಕಲವ್ಯನ ವಿದ್ಯೆಗೆ ಪೂರಕವಾದುದು. 'ಕಲಿವವನಿಗೆ ಮನಸ್ಸೇ ಮುಖ್ಯ ಹೊರತು ಗುರುವಲ್ಲ; ಕಲಿವ ಮನವುಳ್ಳವನಿಗೆ ಕಲ್ಲು ಕೂಡಾ ಕಲಿಸಬಲ್ಲುದು, ಕಲಿಯಬೇಕೆಂಬ ಆಸಕ್ತಿ ಮತ್ತು ಉದ್ದೇಶ ಸಾಧನೆಗಾಗಿ ಕಷ್ಟಪಟ್ಟು ದುಡಿಯುವ ದೃಢನಿರ್ಧಾರ ಇವು ವಿದ್ಯಾರ್ಥಿಯಲ್ಲಿ ಇರಲೇಬೇಕಾದ ಮುಖ್ಯಗುಣಗಳು. ಇವೆರಡೂ ನಿನ್ನಲ್ಲಿವೆ. ನಿನ್ನ ಉದ್ದೇಶ ನೀನು ಮರೆಯಬೇಡ, ಪ್ರಯತ್ನ ಬಿಡಬೇಡ, ದೇವರ ದಯೆ ನಿನಗಿರಲಿ, ನಿನ್ನ ಆಶೆ ಪೂರೈಸಲಿ, ಕೀರ್ತಿವಂತನಾಗಿ ಬಾಳು, ನಿನ್ನ ಇಷ್ಟಾರ್ಥ ಸಿದ್ಧಿಸಲಿ' ಎಂದು ಹಾರೈಸುವರು. ಕನಸಿನಲ್ಲಿ ಕಾಣಿಸಿಕೊಂಡ ದ್ರೋಣಾಚಾರ್ಯರು ಶಬ್ದವಿದ್ಯೆ ಹೇಳಿಕೊಟ್ಟಂತಾಗುವುದು. ಮುಂದೆ ಏಕಲವ್ಯ ಸ್ವಮನದಿಂದ ಅಭ್ಯಾಸ ಮಾಡಿ ಬಿಲ್ಲುವಿದ್ಯಾ ಪಾರಂಗತನಾಗುತ್ತಾನೆ. ದ್ರೋಣಾಚಾರ್ಯರೊಂದಿಗೆ ಅರ್ಜುನನು ಕಾಡಿನಲ್ಲಿ ಬೇಟೆಗೆಂದು ಬಂದಾಗ, ಏಕಲವ್ಯನು ಶಬ್ದವೇದಿ ವಿದ್ಯೆಯಿಂದ ನಾಯಿಯನ್ನು ಹೊಡೆಯುವುದು ಕಾಣುತ್ತಾನೆ. ಪಳಕಳರು ದ್ರೋಣರ ಪಾತ್ರವನ್ನು ವಿಭಿನ್ನವಾಗಿ ಚಿತ್ರಿಸಿದ್ದು ಕುತೂಹಲಕಾರಿ. ಅರ್ಜುನನನ್ನು ಜಗತ್ತಿನಲ್ಲಿ ಶ್ರೇಷ್ಠ ಬಿಲ್ಲುಗಾರರನ್ನಾಗಿಸುವ ಮಾತು ಕೊಟ್ಟವರು. ಕಾಡು ಪ್ರಾಣಿಗಳಿಂದ ಸಾಧು ಪ್ರಾಣಿಗಳ ರಕ್ಷಣೆಗಾಗಿ ಹಂಬಲಿಸುವ ಏಕಲವ್ಯನ ವಿದ್ಯೆಯನ್ನು ಕಲಿಯುವ ಅತಿಯಾಸೆಯನ್ನು ಕಂಡವರು. ಮುಂದೆ ಇವನ ಪ್ರತಿಭೆಯನ್ನು ಗುರುತಿಸಿ ಸಂತಸದಿಂದ ಹೊಗಳಿದ ನಿಜವಾದ ಗುರುವೇ ಹೊರತು ಅರ್ಜುನನಿಗಾಗಿ ಏಕಲವ್ಯನ ಹೆಬ್ಬೆರಳನ್ನು ಕೇಳಿದ ನೀಚ ವ್ಯಕ್ತಿತ್ವದವರಲ್ಲ. ಸ್ವತಃ ಏಕಲವ್ಯನು ಸ್ವ ಇಚ್ಛೆಯಿಂದ ತನ್ನ ಹೆಬ್ಬೆರಳನ್ನು ಕತ್ತರಿಸಿ ಕೊಡುವನೆಂಬ ಕಲ್ಪನೆಯೂ ಅವರಲ್ಲಿ ಇಲ್ಲ. ಏಕಲವ್ಯನು ಗುರುಗಳ ಮಾತು ಉಳಿಸಲು ಮತ್ತು ಮಾನವೂ ಉಳಿಸಲು ತಾನೇ ಬೆರಳು ಕತ್ತರಿಸಿ ಕೊಡುತ್ತಾನೆ. ಏಕಲವ್ಯನ ಮೂಲಕ ದ್ರೋಣರ ವ್ಯಕ್ತಿತ್ವ ಕಾಪಾಡುವುದು ಪಳಕಳರ ಮುಖ್ಯ ಗುರಿ ಎನಿಸುತ್ತದೆ. ಗುರುಭಕ್ತಿಯ ಶ್ರೇಷ್ಠತೆಯನ್ನು ವ್ಯಕ್ತಗೊಳಿಸುತ್ತಾರೆ. ದ್ರೋಣರ ಶಿಷ್ಯ ಎಂಬ ಮಾತನ್ನು ಏಕಲವ್ಯನ ಬಾಯಿಯಿಂದ ಕೇಳಿದ ಅರ್ಜುನ ಗುರುಗಳನ್ನು ವಚನ ಭ್ರಷ್ಟರೆಂದು ಹಿಯಾಳಿಸುತ್ತಾನೆ. ಪ್ರತಿಯಾಗಿ ಏಕಲವ್ಯ ತನ್ನ ಗುರುವಿನ ಮಾನರಕ್ಷಣೆಗಾಗಿ ತನ್ನ ಹೆಬ್ಬೆರಳನ್ನು ನೀಡಿ ತೃಪ್ತನಾಗುತ್ತಾನೆ. ಇದು ಪಳಕಳರು ಸೃಷ್ಟಿಸಿದ 'ಏಕಲವ್ಯ' ನಾಟಕದ ಕಥಾವಸ್ತು. 'ಮಕ್ಕಳ ನಾಟಕ ಹಿರಿಯರ ನಾಟಕಕ್ಕಿಂತ ಭಿನ್ನ. ಹೌದು, ಮಕ್ಕಳು ಏನು ಮಾಡಿದರೂ ಚಂದ. ಅವರು ಅವರಷ್ಟಕ್ಕೆ ನಾಟಕ ಮಾಡಿಕೊಂಡಿರಲಿ ಎನ್ನುವ ಕಾರಣಕ್ಕಾಗಿ ಅಲ್ಲ, ಮಕ್ಕಳ ನಾಟಕ ಹಗುರವಾದ ತೇಲಿಬಿಡುವ ವಿಷಯವಲ್ಲ, ಪ್ರಕ್ರಿಯೆ ಹಾಗೂ

ಪ್ರದರ್ಶನ ಎರಡರಲ್ಲೂ ಹಿರಿಯರ ನಾಟಕದ ನಕಲು ಅಲ್ಲ. ಮಾತುಗಳು, ಚಲನೆ, ದೃಶ್ಯ ಯಾವುದೇ ರೆಡಿಮೇಡ್ ಆಗಿರಬಾರದು. ಅದು 'ರಂಗನಾಟಕ' ರಂಗದಲ್ಲೇ ಹುಟ್ಟಿ ರಂಗದಲ್ಲೇ ಬೆಳೆಯಬೇಕು. ರಸಭಾವವನ್ನು ಉಂಟು ಮಾಡಬೇಕು. ಕುತೂಹಲ, ಬೆರಗು, ಮುಗ್ಧತೆ, ತುಂಟತನ, ಸಂಭ್ರಮಗಳೇ ಮಕ್ಕಳ ನಾಟಕಗಳ ಜೀವಾಳ'[೧೭೮] ಎನ್ನುವುದು ಮೂರ್ತಿ ದೇರಾಜೆ ಅವರ ಅಭಿಪ್ರಾಯ.

ಪಳಕಳ ಸೀತಾರಾಮ ಭಟ್ಟರು ಈ ಅಭಿಪ್ರಾಯಕ್ಕೆ ತಕ್ಕಂತೆ ಮಕ್ಕಳ ನಾಟಕಗಳನ್ನು ರಚಿಸಿರುವುದು ಕಂಡುಬರುತ್ತದೆ. ಮಕ್ಕಳ ನಾಟಕಗಳ ವೈವಿಧ್ಯತೆಯನ್ನು ಕುರಿತು ವೈದೇಹಿಯವರ ಅಭಿಪ್ರಾಯ ಹೀಗೆ ಗಮನಿಸಬಹುದು. 'ಮಕ್ಕಳ ನಾಟಕವೆಂದರೆ ಉಲ್ಲಾಸದ ಬುಗ್ಗೆಯ ಹಾಗೆ ಇರಬೇಕು. ಚಕಚಕಚಕ ಲವಲವಿಕೆ ಇರಬೇಕು. ಅದರೊಳಗೊಂದು ದುಃಖದ ಎಳೆ ಇದ್ರೂ ಅಲ್ಲೊಂದು ಚುರುಕು ಇರಬೇಕು. ಒಂದು ಮಗುವನ್ನು ಗಮನಿಸಿ ನೋಡು, ಅದು ಅಳ್ತಾ ಇರಲಿ, ಒಂದು ಹತ್ತು ನಿಮಿಷ ಅಳುತ್ತ, ಸುಮ್ಮನಾಗಿ ಸ್ವಲ್ಪ ಹೊತ್ತು ಆಚೆ ಈಚೆ ನೋಡುತ್ತೆ. ಮತ್ತೆ ಅಳು ನೆನಪಾಗಿ ಪುನಃ ಅಳಲಿಕ್ಕೆ ಶುರುಮಾಡುತ್ತೆ. ಅದು ಯಾವುದನ್ನೂ ತೀರ ಮುಂದುವರೆಸುವುದಿಲ್ಲ. ಮಗುವಿನ ಮನಸ್ಸು ಕೆಲಸ ಮಾಡುವುದೇ ಹಾಗೆ. ನಾಟಕದಲ್ಲೂ ಆ ಮನಸ್ಸು ಹಾಗೇ ಇರಬೇಕು. continue ಬೇಡ, cut and past. ಸಣ್ಣ-ಸಣ್ಣ ವಾಕ್ಯಗಳಲ್ಲಿ ಚುರುಕು ಚುರುಕಾದ ತುಂಬ ಸಂಭಾಷಣೆಗಳಿರಬೇಕು. ಆಗ ತುಂಬ ಮಕ್ಕಳನ್ನು ಸೇರಿಸಿಕೊಳ್ಳಬಹುದು. ಮಕ್ಕಳ ಮನಸ್ಸನ್ನು ಹಿಡಿದಿಡುವಂತಹ ದೃಶ್ಯಾವಳಿ ಇರ್ಬೇಕು. ಪ್ರತಿಯೊಂದು ನಾಟಕಕ್ಕೂ ಒಂದು massage ತೀರ ಪ್ರಕಟವಾಗಿರದೆ ಒಳಗೇ inbuilt ಆಗಿರ್ಬೇಕು. ನಾಟಕದ ನೆಯ್ಗೆಯಲ್ಲೇ ಅವಿತಿರಬೇಕು. ತಮಾಷೆ ಮಾಡಿದ್ರೆ ನಿಜವಾದ ತಮಾಷೆ ಆಗ್ಬೇಕು, ನಕ್ಕು-ನಕ್ಕು ಬಿಡ್ಬೇಕು ಮಕ್ಕಳು, ಮಗು ನಕ್ಕಷ್ಟು ರಂಗ ರಂಗೇರುತ್ತದೆ, ಆ ತರಹ ಆಗ್ಬೇಕು, ಮಗು ಅದರೊಳಗೆ ಸೇರಬೇಕು, ಕಥೆ reach ಆಗ್ಬೇಕು'[೧೭೯]. ಇದು ಮಕ್ಕಳ ಲೋಕವನ್ನು ಹೊಕ್ಕು ಅರಿತಾಗ ಮಾತ್ರ ವ್ಯಕ್ತವಾಗುವ ಸನ್ನಿವೇಶ. ಈ ನೆಲೆಯಲ್ಲಿ ಮಕ್ಕಳ ನಾಟಕಗಳನ್ನು ಪಳಕಳರು 'ಕಣ್ಣು ತೆರೆಯಿತು', 'ಭಕ್ತಧ್ರುವ', 'ಒಲವಿನ ಗೆಲುವು', 'ಮಾದನೂ ಹುಲಿಯೂ', 'ಕುಳ್ಳ ತಮ್ಮ', 'ಸಂಕಟದಲ್ಲೂ ಸಾಹಸ', 'ಶಕ್ತಿಗಿಂತ ಯುಕ್ತಿ ಮೇಲು' ಮೊದಲಾದ ನಾಟಕಗಳು ಮಕ್ಕಳ ಮನವನ್ನು ತಣಿಸಿವೆ.

ಪಳಕಳ ಸೀತಾರಾಮ ಭಟ್ಟರ 'ಕುಳ್ಳ ತಮ್ಮ' ನಾಟಕ ಪಂಚತಂತ್ರದ ಕಥೆಯಂತೆ ನಿರೂಪಿತವಾಗಿದೆ. ಇಲ್ಲಿ ಕುಳ್ಳ ತಮ್ಮನ ಜಾಣತನ ಮುಖ್ಯವಾಗಿ ವ್ಯಕ್ತಗೊಂಡಿದೆ. ಉಪಕಾರಕ್ಕೆ ಪ್ರತಿ ಉಪಕಾರ ಮಾಡುವ ಗುಣ ಮಕ್ಕಳಲ್ಲಿ ಬೆಳೆಯಲು ಈ ಕಥೆ ಸಹಕಾರಿಯಾಗಿದೆ. ಕುಳ್ಳನು ಗೆದ್ದಲು ಹುಳಗಳಿಗೆ, ಹಂಸಗಳಿಗೆ, ಜೇನುನೊಣಗಳಿಗೆ ಜೀವ ರಕ್ಷಿಸಿ ಸಹಾಯ ಮಾಡುವನು. ಹೀಗಾಗಿ ಕಷ್ಟದಲ್ಲಿರುವ ಕುಳ್ಳನನ್ನು ಕಾಪಾಡಿ, ಆಪತ್ತಿನಲ್ಲಿ ಸಿಲುಕಿರುವ ಕುಳ್ಳನನ್ನು ಪಾರು ಮಾಡುತ್ತವೆ. ಮಕ್ಕಳಿಗೆ ಈ ನಾಟಕ ಕುತೂಹಲ ಮೂಡಿಸುತ್ತದೆ.

ಮನುಷ್ಯರಲ್ಲಿ ಉಪಕಾರ ಗುಣ ವಿರಳ. ಪಕ್ಷಿ-ಪ್ರಾಣಿಗಳಲ್ಲಿ ಪರೋಪಕಾರ ಗುಣ ಹೆಚ್ಚಾಗಿ ಕಾಣುತ್ತೇವೆ.

ಗೆದ್ದಲು ಹುಳುಗಳು ಕುಳ್ಳ ತಮ್ಮನಿಗೆ ಸಹಾಯ ಮಾಡಿ ತಮ್ಮ ಋಣವನ್ನು ತೀರಿಸಿ ಹಾಡುತ್ತ ಹೋಗುತ್ತವೆ.

'ನಮ್ಮ ಪ್ರೀತಿ ಮಾಡಿದವನ ಪ್ರೀತಿಸಿದೇವು ನಾವು
ಕರುಣೆ ತೋರಿದವಗೆ ಕರುಣೆ ತೋರಿಸಿದೆವು ನಾವು
ನಮ್ಮ ಜೀವವುಳಿಸಿದವನ ಬದುಕಿಸಿದೆವು ನಾವು
ನೆರವು ನೀಡಿದವಗೆ ನೆರವು ಸಲ್ಲಿಸಿದೆವು ನಾವು'[೧೮೦].

ಹೀಗೆ ಕುಳ್ಳ ತಮ್ಮನನ್ನು ಕುರಿತು ಹಂಸಗಳು, ಜೇನುನೊಣಗಳು ಪ್ರೀತಿಯಿಂದ ಹೊಗಳಿ ಹಾಡಿ ಹೋಗುವವು. ಕುಳ್ಳ ತಮ್ಮ ರಾಜಕುಮಾರಿಯನ್ನು ಬದುಕಿಸಿ, ತನ್ನ ಇಬ್ಬರು ಸಹೋದರರ ಪ್ರಾಣವನ್ನು ಮರಳಿ ಬರುವಂತೆ ಮಾಡುತ್ತಾನೆ. ಕೊನೆಗೆ ರಾಜಕುಮಾರಿಯರು ಮೂವರು ಒಬ್ಬೊಬ್ಬರನ್ನು ಮದುವೆಯಾಗುವರು.

'ಕುಳ್ಳ ತಮ್ಮಣ್ಣನ ಒಳ್ಳೆಯ ಗುಣಗಳು
ಎಲ್ಲರ ಮನವನು ಸೆಳೆದಾವೊ । ಗೆಲಿದಾವೊ
ಕಲ್ಲಾದವರ ನೆದ್ದು ನಿಲಿಸ್ಯಾವೊ ॥
ಗುಣವೆ ಬಂಗಾರವು ಗುಣವೆ ಸಿಂಗಾರವು
ಗುಣಕಿಂತ ಮಿಗಿಲಾದುದಿಲ್ಲಣ್ಣ । ನಮಗಿಲ್ಲಿ
ಗುಣವೆ ಸರ್ವಸ್ವವು ಜಗದಲ್ಲಿ'[೧೮೧] ॥

ಹೀಗೆ ನಾಟಕದ ಕೊನೆಯಲ್ಲಿ ರೂಪಕ್ಕಿಂತ ಗುಣ ಮೇಲು ಎಂಬುದನ್ನು ಬಿತ್ತರಿಸುವ ಸನ್ನಿವೇಶ ಸುಂದರವಾಗಿ ಮೂಡಿದೆ. ಪಳಕಳರು ನಾಟಕದಲ್ಲಿ ಎಲ್ಲಿಯೂ ಅಸಹ್ಯ ಸಂಗತಿಗಳು ಮತ್ತು ಸಂಭಾಷಣೆಗಳನ್ನು ತರುವುದಿಲ್ಲ. ಕೇವಲ ಮಗುವಿನ ಮಧುರ ಮತ್ತು ಮುಗ್ಧ ಮನಸುಗಳ ಅಭಿನಯದ ಸಂಭಾಷಣೆಗಳು ಅಭಿವ್ಯಕ್ತಗೊಳ್ಳುತ್ತವೆ.

'ತಾಯಿ ನಾಟಕದಲ್ಲಿ ತಾಯಿ-ಮಗನ ಪ್ರೀತಿಯನ್ನು ತುಲನೆ ಮಾಡುವ ಪ್ರಸಂಗ ವ್ಯಕ್ತವಾಗುತ್ತದೆ. ಜೀವಕ್ಕೆ-ಜೀವ ಎನ್ನುವಂತಿದ್ದ ಮಗ ತನ್ನ ತಾಯಿ ತೀರಿಹೋದಾಗ ಭ್ರಮೆಗೆ ಒಳಗಾಗುತ್ತಾನೆ. ತಾನು ತಾಯಿಯನ್ನು ಎಷ್ಟು ಪ್ರೀತಿಸುತ್ತಿದ್ದೆ ಎಂದು ಅಹಂಕಾರದಿಂದ ಹೇಳುತ್ತಿದ್ದನು. ಗುರುಗಳು ಅದು ಹೇಗೆ ಎಂದು ಮತ್ತೆ ಪ್ರಶ್ನಿಸುವರು. ಆಗ, 'ಅವಳನ್ನು ಬಿಸಿಲು, ಚಳಿ, ಗಾಳಿ, ಮಳೆಯೆನ್ನದೆ ಬಿದಿರ ಬುಟ್ಟಿಯಲ್ಲಿಟ್ಟು ಹೊತ್ತು ಕಾಡ ದುರ್ಗಮ ಹಾದಿಯಲ್ಲಿ ತೀರ್ಥಯಾತ್ರೆ ಮಾಡಿಸಿದ್ದೆ; ಕಡೆಗಾಲದಲ್ಲಿ ಚಾಕರಿ ಮಾಡಿದ್ದೆ ಎಂಬುದನ್ನು 'ನಾನು' ಎಂಬ ಅಹಂಕಾರದಿಂದ ಬೀಗಿಕೊಳ್ಳುವನು. ಪ್ರತಿಯಾಗಿ ಗುರುಗಳು ಹೇಳುತ್ತಾರೆ. ಒಂಭತ್ತು ತಿಂಗಳು ಬಿಸಿಲು ಮಳೆ ಚಳಿ ಗಾಳಿಗೆ ಹೆದರದೆ, ಬಳಲಿದರೂ, ಅನಾರೋಗ್ಯವಿದ್ದರೂ

ನಿದ್ದೆಯಲ್ಲೂ ಒಂದು ಕ್ಷಣವೂ ಮಗುವಿನ ಭಾರವನ್ನು ಹೊತ್ತುಕೊಂಡು ತಿರುಗಿ, ಹೆರಿಗೆ ನೋವನ್ನು ಅನುಭವಿಸಿ, ಹೆತ್ತು ಯಾವುದೇ ಸ್ವಾರ್ಥವಿಲ್ಲದೆ ಸಾಕಿದ ತಾಯಿಯ ಮುಂದೆ ಮಗನ ಹತ್ತು ತಿಂಗಳ ಯಾತ್ರೆ ಯಾವ ಲೆಕ್ಕದ್ದು, ಆಕೆಯ ಋಣ ತೀರಿಸಲು ಅಸಾಧ್ಯ ಎನ್ನುವುದು ಅರಿತುಕೊ ಎನ್ನುವರು. ತಾಯಿಯನ್ನು ಕೊನೆಯುಸಿರಿರುವತನಕ ಪ್ರೀತಿ-ಗೌರವದಿಂದ ನೋಡಿಕೊಳ್ಳಬೇಕೆಂದು ನಾಟಕ ತಿಳಿಸುತ್ತದೆ. ಆಧುನಿಕ ಜಗತ್ತಿನಲ್ಲಿ ತಾಯಿಯನ್ನು ಅಗೌರವ ಮತ್ತು ಅಮಾನವೀಯ ದೃಷ್ಟಿಯಿಂದ ನೋಡುವ ಮಕ್ಕಳು ಇರುವುದರಿಂದ ಇಂಥ ನಾಟಕಗಳು ಅವಶ್ಯಕವಾಗಿ ಮಕ್ಕಳು ನೋಡಲೇಬೇಕು, ಓದಲೇಬೇಕು ಎಂಬ ಅಭಿಪ್ರಾಯ ಪಳಕಳರದು.

'ಮಾದನೂ ಹುಲಿಯೂ' ನಾಟಕದಲ್ಲಿ ಮಾದನು ಹುಲಿಯನ್ನು ಪಂಜರದಿಂದ ಬಿಡಿಸುವನು. ಆಗ ಹುಲಿಯು ಮಾದನನ್ನೇ ತಿನ್ನಲು ಬರುವುದು. ಆಗ ಹುಲಿ ಮತ್ತೆ ಹೇಳುತ್ತದೆ; 'ಮನುಷ್ಯನ ಉಪಕಾರದ ಕುರಿತು ಯಾರಾದರೊಬ್ಬರು ಹೊಗಳಿ ಸಾಕ್ಷಿ ನುಡಿದರೆ ನಿನ್ನನ್ನು ತಿನ್ನಲಾರೆ' ಎಂದು. ಮುಂದೆ ಹೋಗುತ್ತಿರುವಾಗ ದಾರಿಯಲ್ಲಿ ದನ, ಕೋಳಿ, ಮಾವಿನ ಮರ, ನದಿ ಸಿಗುತ್ತಾರೆ. ಅವರು ಮನುಷ್ಯನ ಉಪಕಾರ ಗುಣವನ್ನು ಹೇಳುವುದಿಲ್ಲ. ಹಾಗೆಯೇ ಮುಂದೆ ಬರುತ್ತಿರಲು ಮಂಗ ಭೆಟ್ಟಿಯಾಗುವುದು. ಅದರ ಮುಂದೆ ತಮ್ಮ ವಾದವನ್ನು ತಿಳಿಸುತ್ತವೆ. ಮಂಗ ಮಾನವನ ಮೂಲ. ಹೀಗಾಗಿ ಹುಲಿಯು ಮೊದಲು ಹೇಗಿತ್ತು ಬೋನಿನಲ್ಲಿ, ಬಾಗಿಲು ಹೇಗೆ ಮುಚ್ಚಿತ್ತು..... ಈ ಎಲ್ಲ ಪ್ರಸಂಗವನ್ನು ಮಾಡುತ್ತ ಕೊನೆಗೆ ಬೋನಿನ ಬಾಗಿಲು ಮುಚ್ಚಿ ಬಿಡುವುದು. ಹುಲಿಯು ಮೊದಲಿನಂತೆ ಬೋನಿನಲ್ಲಿ ಸಿಲುಕಿಕೊಳ್ಳುವುದು. ಪಳಕಳ ಸೀತಾರಾಮ ಭಟ್ಟರು ಕಾಡು ಪ್ರಾಣಿಯಾದ ಹುಲಿಯನ್ನು ನಂಬಬಾರದು. ಅಪಾಯ ತಪ್ಪಿದ್ದಲ್ಲ ಎಂಬ ತಾತ್ವಿಕತೆಯನ್ನು ಬಿತ್ತರಿಸುತ್ತಾರೆ. ಮನುಷ್ಯ ಉಪಕಾರ ಮಾಡದಿದ್ದರೂ ಅಪಚಾರ ಮಾಡುವುದಿಲ್ಲ. ಎನ್ನುವುದಾಗಲಿ ಇಲ್ಲಿ ಮುಖ್ಯವಲ್ಲ. ಕತ್ತಲಿಂದ ಬೆಳಕು ಬರುವಂತೆ, ತಪ್ಪಿತಸ್ಥರಿಗೆ ಶಿಕ್ಷೆ ಖಂಡಿತವಾಗಿ ಸಲ್ಲುತ್ತದೆ ಎಂಬ ಮಾತು. ಮಾದನು ಹುಲಿಯನ್ನು ರಕ್ಷಿಸಿದ್ದರೂ ಅವನಲ್ಲಿ ಒಳ್ಳೆಯ ಗುಣ-ಮೌಲ್ಯಗಳನು ಕಂಡುಬರುತ್ತವೆ.

'ಮಕ್ಕಳನ್ನು ಲವಲವಿಕೆಯಿಂದ ಕಲಿಯಲು ಉತ್ತೇಜಿಸುವ ಸೃಜನಶೀಲರನ್ನಾಗಿಸುವ ನಾಟಕಗಳು ಮಕ್ಕಳ ನಾಟಕಗಳು. ನಮ್ಮ ಪರಂಪರೆಯ ಯಾವುದೇ ಕಲೆಯಲ್ಲೂ ಮಕ್ಕಳಿಗಾಗಿ ಪ್ರತ್ಯೇಕ ವಿಭಾಗವಿಲ್ಲ. ಗಂಡಸರ ನಾಟಕ, ಹೆಂಗಸರ ನಾಟಕ, ಮಕ್ಕಳ ನಾಟಕ ಇಂತಹ ಪ್ರತ್ಯೇಕ ದೃಷ್ಟಿಕೋನ ಇತ್ತೀಚಿನದ್ದು. ನಮ್ಮ ಜನಸಮೂಹವೆ ದೊಡ್ಡ ವಿಶ್ವವಿದ್ಯಾನಿಲಯ. ನಾನು ರಾಮಾಯಣ, ಮಹಾಭಾರತ, ಪುರಾಣಗಳನ್ನು ಗ್ರಹಸಿದ್ದೆ, ಯಕ್ಷಗಾನದ ಮೂಲಕ ಮಕ್ಕಳು ಹೆಚ್ಚು ಕ್ರಿಯಾತ್ಮಕವಾಗಿರುತ್ತಾರೆ. ಅವರಲ್ಲಿ ಉಪಯೋಗಿ ದೃಷ್ಟಿಕೋನ ಬೆಳೆಸುವುದು ಬೇಡ, ಮೇಷ್ಟ್ರು ಕಲಿಸಿದ್ದನ್ನೆ, ಬರೆಸಿದ್ದನ್ನೆ ಉರು ಹೊಡೆಯುವುದು

ಸೃಜನಶೀಲತೆ ಅಲ್ಲ. ಉತ್ತರವನ್ನೂ ಅವರೇ ಸೃಷ್ಟಿಸಲಿ. ಅದು ಕಲಿಕೆ. ಇದು ರಂಗಭೂಮಿಯಿಂದ ಮಾತ್ರ ಸಾಧ್ಯ' ಎಂಬುದು ರಂಗತಜ್ಞರಾದ ಚಿದಂಬರ ರಾವ್ ಜಂಬೆ ಅವರ ಅಭಿಪ್ರಾಯ.

ಈ ಮೇಲಿನ ಹೇಳಿಕೆಗೆ ಪೂರಕವಾಗಿ ಪಳಕಳರು, ಮಕ್ಕಳಿಗಾಗಿ ನೀತಿಯ ನಾಟಕಗಳನ್ನು, ಜಾತಿ, ಧರ್ಮದ ಭೇದವಿಲ್ಲದ ಬದುಕು ಮಕ್ಕಳದು ಎಂಬ ಮೌಲ್ಯಗಳನ್ನು ಮಕ್ಕಳಲ್ಲಿ ಮೂಡಿಸುವುದು ಇವರ ಉದ್ದೇಶವೆನಿಸುತ್ತದೆ. 'ಪ್ರೀತಿಯ ಧರ್ಮ' ನಾಟಕವು ಮಕ್ಕಳ ಆಟದೊಂದಿಗೆ ಪ್ರಾರಂಭವಾಗುತ್ತದೆ. 'ಕಣ್ಣಾ ಮುಚ್ಚೆ ಕಾಡೇ ಗೂಡೆ' ಎಂದು ಆಟವಾಡುತ್ತ ಎಲ್ಲ ಮಕ್ಕಳು ಅವಿತುಕೊಳ್ಳಲು ಓಡಿ ಹೋಗುತ್ತಾರೆ. ಪೊದೆಯಲ್ಲಿ ಅಡಗಿ ಕೊಂಡಿರುವ ಬಾಲಕಿ ಜುಬೇದಾಳಿಗೆ ಹಾವು ಕಚ್ಚಿ ಬೀಳುತ್ತಾಳೆ. ಮನೆಯವರು ಮಗಳು ಸತ್ತಳೆಂದು ರೋದಿಸುತ್ತ ಶವ-ಸಂಸ್ಕಾರಕ್ಕೆ ಸಿದ್ಧತೆ ಮಾಡುವರು. ಮಠದ ಸ್ವಾಮಿಯೊಬ್ಬರು ಈ ವಿಷಯ ತಿಳಿದು ಊರಿನವರ ಮುಂದೆ, 'ವಿಷದ ಕಡಿತಕ್ಕೆ ಒಳಗಾದ ಕೆಲವರು ಸತ್ತಂತೆ ಕಾಣಿಸುತ್ತಾರೆ. ಆದರೆ ಸತ್ತಿರುವುದಿಲ್ಲ. ನಮ್ಮ ಮಂತ್ರಶಕ್ತಿಯಿಂದ ಪ್ರಾಣಾಪಾಯ ತಪ್ಪಿಸಲು ಸಾಧ್ಯ. ಆ ಮಗುವನ್ನೊಮ್ಮೆ ತೋರಿಸಲು ಹೇಳು' ಎನ್ನುತ್ತಾರೆ. ಬಾಲಕಿಯ ಬಾಂಧವರ ವಿರೋಧವಿದ್ದರೂ ಹುಡುಗಿಯನ್ನು ಮಠಕ್ಕೆ ಹೊತ್ತು ತರುತ್ತಾರೆ. ಸ್ವಾಮಿಗಳಿಂದ ಹುಡುಗಿಯು ಬದುಕುತ್ತಾಳೆ. 'ಸ್ವಾಮಿ ಸೇಟರೇ, ನಿಮ್ಮ ನಮ್ಮ ಧರ್ಮಗಳು ಬೇರೆ-ಬೇರೆ ಇರಬಹುದು. ಆದರೆ ಅವೆಲ್ಲವೂ ಪ್ರೀತಿ ಕರುಣೆಯನ್ನೇ ಸಾರುತ್ತವೆ. ಪ್ರೀತಿಯ ಧರ್ಮ ಎಲ್ಲಕ್ಕೂ ಮಿಗಿಲಾದುದು. ಇದುವೇ ಮಾನವಧರ್ಮ, ನಮ್ಮೆಲ್ಲರನ್ನೂ ಕಾಯಯುವ ಧರ್ಮ' ಎಂದು ಹೇಳುವ ಮಾತುಗಳು, ಪಳಕಳರು ಮಕ್ಕಳಲ್ಲಿ ಜಾತಿ ಭೇದವಿಲ್ಲದ ಸ್ವಭಾವವನ್ನು ಬಿತ್ತುವ ಪ್ರಸಂಗ ವ್ಯಕ್ತವಾಗುತ್ತದೆ. ಪ್ರೀತಿಯೇ ಬದುಕು. ಪ್ರೀತಿಯಿಂದಲೇ ಜಗತ್ತನ್ನು ನೋಡಬೇಕೆಂಬ ತಾತ್ವಿಕತೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ ಪಳಕಳರು.

ಮಕ್ಕಳ ನಾಟಕಗಳ ಕುರಿತಾಗಿ ಹಲವು ಅಭಿಪ್ರಾಯಗಳನ್ನು ಅನೇಕ ವಿದ್ವಾಂಸರು, ಮಕ್ಕಳ ಸಾಹಿತಿಗಳು ಅಭಿವ್ಯಕ್ತಗೊಳಿಸಿದ್ದಾರೆ. ಮಕ್ಕಳ ನಾಟಕಗಳ ನಿರ್ದೇಶಕರಾದ ಪ್ರಸಿದ್ಧ ರಂಗಕರ್ಮಿ ಜೀವನರಾಂ ಸುಳ್ಯರು (ದ.ಕ) ಹೀಗೆ ಹೇಳುತ್ತಾರೆ. 'ಬಣ್ಣ ಬಣ್ಣದ ಕನಸುಗಳಿಂದ ತುಂಬಿದ ಮತ್ತು ಅದು ನನಸಾಗಿಸುವ ಭರವಸೆ ಹುಟ್ಟಿಸುವ; ಎಂದೂ ನಿರಾಸೆ ನೋವುಗಳಿಲ್ಲದ, ಜಾತಿ ಮತ ಅಂತಸ್ತು ಎಂಬ ಭೇದಭಾವಗಳಿಲ್ಲದ, ರಾಜಕೀಯರಹಿತವಾದ, ಈ ಭೂಮಿ-ಗಾಳಿ-ನೀರು-ಪರಿಸರವನ್ನು ಪ್ರೀತಿಸಲು ಕಲಿಸುವ; ಹಾಡು-ಕುಣಿತ-ಆಟಗಳಿಂದ ಕೂಡಿದ; ಅಬಾಲರನ್ನೂ ಒಮ್ಮೆಗೆ ಬಾಲರನ್ನಾಗಿಸುವ, ಪ್ರತಿಕ್ಷಣವೂ ಕುತೂಹಲ ಹುಟ್ಟಿಸುವ; ರಮ್ಯ-ಅದ್ಭುತ-ಫ್ಯಾಂಟಸಿ ಲೋಕದ; ಮಕ್ಕಳ ಮನಸ್ಸಿಗೆ ಮುದನೀಡಿ ಅವರ ಕಲ್ಪನಾ ಶಕ್ತಿಯನ್ನು ಮತ್ತಷ್ಟು ಅರಳಿಸುವ ಶಕ್ತಿಯಿರುವ ಎಲ್ಲ ನಾಟಕಗಳೂ ಮಕ್ಕಳ ನಾಟಕಗಳು' ಎಂಬ ಅಭಿಪ್ರಾಯ ಈ ಹೊತ್ತಿನ ಮಕ್ಕಳ ನಾಟಕಗಳಲ್ಲಿ ಅವಶ್ಯಕ. ಅದೇ

ರೀತಿಯಾಗಿ ಪಳಕಳರ ಒಟ್ಟು ಮಕ್ಕಳ ನಾಟಕಗಳು ಮಾನವನ ವಿವಿಧ ಮುಖಗಳನ್ನು ವ್ಯಕ್ತಗೊಳಿಸುತ್ತವೆ. ಪ್ರಾಚೀನ ಮತ್ತು ಜನಪದ ಕಥಾವಸ್ತುವನ್ನು ಒಳಗೊಂಡಿದ್ದರೂ ಆಧುನಿಕ ಸ್ಪರ್ಷ ನೀಡಿ, ಸಮಕಾಲೀನ ವ್ಯವಸ್ಥೆಯನ್ನು ವಿಡಂಬಿಸುವುದು; ಸರಳವಾದ ಸಂಭಾಷಣೆ ಮಕ್ಕಳಿಗೆ ಖುಷಿಯನ್ನು ನೀಡುತ್ತವೆ. ಧರ್ಮ-ಅಧರ್ಮ, ನೀತಿ-ಅನೀತಿ, ಪಾಪ-ಪುಣ್ಯ, ಹುಟ್ಟು-ಸಾವು ಮೊದಲಾದ ಸಂಗತಿಗಳು ಮಕ್ಕಳಲ್ಲಿ ಮೌಲ್ಯಗಳನ್ನು ಮೂಡಿಸುತ್ತವೆ. ಇವು ಪಳಕಳ ಸೀತಾರಾಮ ಭಟ್ಟರ ಮಕ್ಕಳ ನಾಟಕಗಳ ಅಭಿವ್ಯಕ್ತಿಯಾಗಿ ತಮ್ಮ ಛಾಪನ್ನು ಮೂಡಿಸಿ ಅರಳಿಸಿವೆ.

೫.೫ ಕಂಚ್ಯಾಣಿ ಶರಣಪ್ಪ :

ಮುದ್ದು ಮುಖದ ಹಾಲುಗೆನ್ನೆಯ ತುಂಟ ಕಂಗಳ ಹವಳದಂತಹ ತುಟಿಯಲ್ಲಿ ಹೂನಗೆ ಹೊಮ್ಮುವ ಮುಗ್ಧ ಮಗುವನ್ನು ಕಂಡರೆ ಯಾರಿಗೆ ಸಂತೋಷವಾಗುವುದಿಲ್ಲ? ಪ್ರಪಂಚದಲ್ಲಿ ಮಗುವಿಗೆ ಮಹತ್ವದ ಸ್ಥಾನ ಕಲ್ಪಿಸಲಾಗಿದೆ. ಆ ಮಗುವೇ ಸಾಂಸ್ಕೃತಿಕವಾದ ಕೇಂದ್ರಬಿಂದು. ಮಗುವನ್ನು ಕುರಿತು ಹಾಡದ ಕವಿಗಳೇ ಇಲ್ಲ ಎನಿಸುತ್ತದೆ. ಎಲ್ಲರೂ ಮಗುವಿನ ನೋಟಕ್ಕೆ ಮನಸೋತವರೇ. ಆದ್ದರಿಂದಲೇ ಜನಪದರು ಮಗುವಿನ ಬಾಲ್ಯವನ್ನು ಕುರಿತು ಬಲು ಸುಂದರವಾಗಿ ಹಾಡಿ ಹರಿಸಿದ್ದಾರೆ. 'ಕೂಸಿದ್ದ ಮನೆಗೆ ಬೀಸಣಿಕೆ ಯಾತಕೆ ಕೂಸು ಕಂದಯ್ಯ ಒಳಹೊರಗೆ ಆಡಿದರೆ' ಎಂದು ಹೇಳಿದ್ದಾರೆ. ಮಕ್ಕಳೇ ನಾಡಿನ ಆಸ್ತಿ, ಅವರೇ ಭಾವೀ ಪ್ರಜೆಗಳು, ಅವರು ಸುಸಂಸ್ಕೃತರಾಗಬೇಕು, ವಿನಯವಂತರಾಗಬೇಕು, ಎಳೆಯತನದಲ್ಲಿ ಅವರಿಗೆ ಒಳ್ಳೆಯ ಶಿಕ್ಷಣ ದೊರಕಬೇಕು, ನೈತಿಕ ಸಂಪತ್ತು ಬೆಳೆಯುವಂತೆ ಮಾಡಬೇಕು. ಮಕ್ಕಳ ಸರ್ವಾಂಗೀಣ ಪ್ರಗತಿಯತ್ತ ಲಕ್ಷವಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕಾವ್ಯ ಬದುಕಿನ ಭಾವ ತರಂಗ. ಅದಕ್ಕೆ ಇಂತಹದ್ದೇ ವಸ್ತು ಇರಬೇಕೆಂಬ ಗೆರೆ ಕೊರೆಯಬಾರದು. ಕವಿ ತನ್ನ ಕಣ್ಣಿಗೆ ಕಂಡದ್ದು ಮನಸ್ಸಿಗೆ ಮೂಡಿದ್ದು. ಕೇಳಿಕೆಯ ಕಲ್ಪನೆಯಿಂದ ಚಿತ್ರಿತವಾದ ಹತ್ತಾರು ವಿಷಯಗಳನ್ನು ಕಾವ್ಯಕ್ಕೆ ವಸ್ತುವಾಗಿಸುತ್ತಾನೆ. ಸಾಮಾನ್ಯತೆಯಿಂದ ಅಸಾಮಾನ್ಯತೆಯವರೆಗಿನ ಸಂಗತಿಗಳನ್ನು ಕವಿತೆಗಳಲ್ಲಿ ಮೂಡಿಸುವ ವಿಶಿಷ್ಟವಾದ ಒಳಗಣ್ಣು ಈ ಕವಿಯದು. ಹೀಗಾಗಿಯೇ ಕಾವ್ಯ ಜಗತ್ತನ್ನು ವೈವಿಧ್ಯಮಯವಾದ ಹೂವುಗಳ ತೋಟವೆಂದೇ ಹೇಳಬೇಕು. ಹಲವು ಬಣ್ಣದ ಹೂವುಗಳು ಇರುವ ತೋಟದ ಹಾಗೆ ಕವಿ ಮನ. ಏಕರೂಪದ ಭಾವ-ಬಣ್ಣದ ಪರಿಮಳವಿರುವ ಕುಸುಮಗಳನ್ನು ಬೇರ್ಪಡಿಸಬಹುದು. ಆದರೆ ಕಂಚ್ಯಾಣಿಯವರ ವಸ್ತು-ವಿಷಯಗಳನ್ನು ವಿಂಗಡಿಸಿ ನೋಡುವದು ಸೂಕ್ತವಾದರೂ ಅದು ಸುಲಭದ ಕೆಲಸವಲ್ಲ.

ಶಿಶು ಕವಿತೆಗಳು ಕಂಚ್ಯಾಣಿಯವರ ಮನದ ಸಂವೇದನೆಗಳು. ಇವು ತುಡಿತ-ಮಿಡಿತಗಳ ಸಂಗಮ. ಇಂಥ ಕವಿಯ ಶಿಶು ಕವಿತೆಗಳು ವೈವಿಧ್ಯಮಯವಾದವುಗಳು.

ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ವಾತ್ಸಲ್ಯ ಭಾವದ ಕವಿತೆಗಳು, ನೀತಿಯ ಕವಿತೆಗಳು. ನಿಸರ್ಗದ ಕವಿತೆಗಳು, ದೇಶಭಕ್ತರ ಕವಿತೆಗಳು, ದೇಶಾಭಿಮಾನದ ಕವಿತೆಗಳು, ಪರಿಸರ ಗೀತೆಗಳು, ಸಾಮಾಜಿಕ ಕವಿತೆಗಳು, ಸಾಂಪ್ರದಾಯಿಕ ಕವಿತೆಗಳು, ವಿಡಂಭನಾತ್ಮಕ ಕವಿತೆಗಳು, ಪಶು–ಪಕ್ಷಿ–ಪ್ರಾಣಿಗಳಿಗೆ ಸಂಬಂಧಿಸಿದ ಕವಿತೆಗಳೆಂದು ಸಮಗ್ರವಾಗಿ ವ್ಯಕ್ತಗೊಂಡರೆ, ಅಧ್ಯಯನದ ವ್ಯಾಪ್ತಿಯಲ್ಲಿ ಕೆಲವು ಸೆಲೆಗಳಾಗಿ ವಿಂಗಡಿಸಿ ನೋಡುವುದು ಸೂಕ್ತವೂ ಅಗತ್ಯವೂ ಎನಿಸುತ್ತದೆ.

'ಕೃತಜ್ಞತೆಯು ಮನುಷ್ಯನ ನೈಸರ್ಗಿಕವಾದ ಗುಣವಾಗಿದೆ' ಎಂಬುದು ಹಿಟ್ಲರನ ಮಾತು. ಬಹುಶಃ ಮನುಷ್ಯರಲ್ಲಿ ಈ ಗುಣವಿರುವುದರಿಂದಲೇ 'ನನ್ನವರು' ಎಂಬ ಪರಿಕಲ್ಪನೆ ಮೂಡುತ್ತದೆ. ಇದೇ ನಾಗರಿಕ ಸ್ಥಿತಿಗೆ ಮುಟ್ಟಲು ದಾರಿಯಾಗಿ ಸಾಗುತ್ತದೆ. ತಂದೆ–ತಾಯಿ, ಗುರು–ಹಿರಿಯರನ್ನು, ನಾಡು–ನುಡಿಯ, ನೆಲ–ಜಲ, ಪಶು–ಪಕ್ಷಿಗಳು ಮೊದಲಾದವುಗಳನ್ನು ಪೂಜ್ಯನೀಯ ಭಾವನೆಯಿಂದ ಕಾಣಲು ಸಾಧ್ಯವಾಗುತ್ತದೆ. ಈ ರೀತಿಯ ನೈತಿಕ, ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಮನುಷ್ಯ ಸಮಾಜ ಸಂಹನದಲ್ಲಿ ಗೆಲುವಾಗಿ ತೋರುತ್ತಾನೆ. ಆ ಮೂಲಕ ನಾಡಿನ ಏಳ್ಗೆಗೆ ಕಾರಣೀಭೂತನಾಗುತ್ತಾನೆ.

ಕಂಚ್ಯಾಣಿಯವರು ತಮ್ಮ ಶಿಶು ಕವಿತೆಗಳಲ್ಲಿ ಈ ಎಲ್ಲ ಬಗೆಯ ಧೋರಣೆಗಳನ್ನು ಅನುಸರಿಸಿ, ಅಭಿವ್ಯಕ್ತಗೊಳಿಸಿ ಮಕ್ಕಳಿಗೆ ನೀಡಿ, ನಾಡಿನ ಯುವ ಜನರಲ್ಲಿ ಎಚ್ಚರದ ಗಂಟೆಯನ್ನು ಬಾರಿಸಿ ಜಾಗ್ರತಗೊಳ್ಳುವಂತೆ ಹುರಿದುಂಬಿಸಿದ್ದಾರೆ.

ಕಂಚ್ಯಾಣಿಯವರ ಶಿಶು ಕಾವ್ಯದ ಜೀವಾಳ ಅಜ್ಜ–ಅಜ್ಜಿ, ಅವ್ವ–ಅಪ್ಪ, ಪುಟ್ಟ–ಪುಟ್ಟಿ, ವಾತ್ಸಲ್ಯದ ಸಾಕಾರ ಮೂರ್ತಿಯಾದ ಕಂಚ್ಯಾಣಿಯವರ ಶಿಶು ಕವಿತೆಗಳೆಂದರೆ, ಬಾಲ್ಯದ ನೆನಪುಗಳು ಹುರಿಗೊಂಡ ಗಟ್ಟಿ ಹಗ್ಗ. ಹಿಗ್ಗದ–ಕುಗ್ಗದ ಬದುಕಿನ ಧಾರೆ.

ಮನೆಯವರೆಲ್ಲಾ ಉಂಡಾ ಮೇಲೆ
ಅವ್ವನ ಸರತಿ ಬರುತಿಹುದು ।
ಹರಕಾ ಮುರಕಾ ರೊಟ್ಟಿ ತುಣಕಾ
ಮಿಕ್ಕಿದ ಪಲ್ಲೆ ಹೊತ್ತಿದ ಅನ್ನ
ಅಮ್ಮನ ಪಾಲಿಗೆ ಬಂದಿಹುದು ।
ಇದ್ದುದನೆಲ್ಲ ದೊಡ್ಡದು ಮಾಡಿ
ಹರುಷದಿ ಊಟಕೆ ಕೊಡುವಳು[೧೮೨] ॥

ಅಕ್ಕರೆಯಿಂದ ಮಕ್ಕಳಿಗೆಲ್ಲ ತುತ್ತನು ಇಕ್ಕುತ ಉಣಿಸುವ ಉಣ್ಣುವ ಈ ನೋಟ ಬರಿ ಸೊಗಸಲ್ಲ! ಬಲು ಸೊಗಸು! ಇದು ಕಂಚ್ಯಾಣಿಯವರ ಸಂಸ್ಕೃತಿ. ಹರಿದು–ಹಂಚಿಕೊಂಡು ಬದುಕುವ ತಾಯಿಯ ವಾತ್ಸಲ್ಯದ ಪರಂಪರೆಯ ಸಂಸ್ಕೃತಿ. ಇಂಥ

ತಾಯಿಯ ಒಡಲಲ್ಲಿ ಬೆಳೆದ ಗೃಹ ಸಂಸ್ಕೃತಿಯ ಪ್ರತಿಬಿಂಬ ಕಂಚ್ಯಾಣಿಯವರು. ವಾತ್ಸಲ್ಯವು ಕಂಚ್ಯಾಣಿಯವರ ಶಿಶು ಕಾವ್ಯದ ಸ್ಥಾಯಿಭಾವವೆನಿಸಿದೆ.

ತಾಯಿ ತನ್ನ ಬದುಕನ್ನೆ ಮಕ್ಕಳಿಗಾಗಿ ಧಾರೆಯೆರೆಯುವಳು. ಬೆಳೆಯುವ ಮಗುವಿಗೆ ಜೀವವೇ ಸವೆಸುವಳು. ತನ್ನ ಹಸಿವೆಯ ಅರಿವು ತನಗಾಗದಂತೆ ತೊರ್ಪಡಿಸುವ, ಮಗುವಿನ ಆನಂದದಲ್ಲಿಯೇ ತನ್ನ ಶ್ರೇಯಸ್ಸು ಎನ್ನುವ ಭಾವದಿಂದ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ತಾಯಿ ನಿಂತಿದ್ದಾಳೆ. ಅವಳ ರೀತಿ–ನೀತಿ, ನಡೆ–ನುಡಿಗಳೇ ಜೀವನ ಮೌಲ್ಯಗಳು.

ಅಜ್ಜನು ಅಂದದ ಹಾಡನು ಬರೆದು
ಅಜ್ಜಿಯ ಮುಂದೆ ಓದುವನು
ಹಾಡನು ಹಾಡಿ ಮೋಜನು ಮಾಡಿ
ತಿಂಡಿಯ ಬೇಡಿ ಕಾಡುವನು[೧೮೩] **।**

ಅಜ್ಜನ ಹಾಡಿನ ಅಜ್ಜನಾದ ಕಂಚ್ಯಾಣಿಯವರು ರಸಸವಿಯುವ ಸರಸ–ಸಲ್ಲಾಪದ ರಸಿಕರು. ಅಜ್ಜ–ಅಜ್ಜಿಯರ ಮೋಜು, ತಿಂಡಿಯ ಬೇಡಿ ಕಾಡುವಲ್ಲಿ ಸ್ವತಃ ಕಂಚ್ಯಾಣಿಯವರು ಪುಟ್ಟ ಮಗುವಾಗಿ 'ದೂರ' ನಿಂತು ಹೇಳುವ ಶೈಲಿ ಗಮನಾರ್ಹವಾದುದು; ಮನಸೆಳೆಯುವಂತಹದು.

'ಮನೆಯಲಿ ಮಕ್ಕಳು ಕಿರಿಕಿರಿ ಮಾಡಲು
ಸುಮ್ಮನೆ ಲೊಚಲೊಚಗುಟ್ಟುವನು
ಕಿರಿಕಿರಿ ಮಾಡುವ ಕಂದರ ಮೇಲೆಯೇ
ಚಂದದ ಹಾಡನು ಬರೆಯುವನು'[೧೮೪]

ಮಕ್ಕಳು ಮನೆಯಲ್ಲಿ ಸದ್ದು–ಗದ್ದಲದಲ್ಲಿ ತೊಡಗಿದರೆ ಕೋಪ ಸಹಜ ಇದಕ್ಕೆ ಅಜ್ಜನ ಲೋಚಗುಟ್ಟುವಿಕೆಯಾದರೂ ಈ ಮಕ್ಕಳ ಹುಡುಗಾಟತನ ಕಂಚ್ಯಾಣಿಯವರ ಭಾವಕ್ಕೆ ಮುದ ನೀಡಿ ಕವಿತೆಯಾಗಿ ನಿಂತಿದೆ.

ಕಲ್ಲಿನ ತುಂಡನು ಕಂಕುಳಲಿಟ್ಟು
ಪುಟ್ಟಿಯು ಕುಣಿಯುವಳು ।
ಚಿಂದೀ ಅರಿವೆಯ ಚಂದದಿ ಹೊಂದಿಸಿ
ಬೆಚ್ಚಗೆ ಹೊದಿಸುವಳು ।
ಬರಿಗೈ ಬೊಗಸೆಯ ಬಾಯಿಗೆ ಸುರಿದು
ಹಾಲನು ಕುಡಿಸುವಳು[೧೮೫] **॥**

ಮುಗ್ಧ ಮಗುವಿನ ಆಟದ ರೀತಿ ಕಂಚ್ಯಾಣಿಯವರಿಗೆ ತಾಯಿ–ಮಗುವಿನ ಸಂಬಂಧವಾದರೆ ಮಗು ತಾಯಿಯಾಗಿ ಆಟವಾಡುವ ಪರಿಕಲ್ಪನೆ ಅದ್ಭುತ ಆಗಮ್ಯ.

ಮಗು ಕಲ್ಲಿನ ತುಂಡನ್ನು ತೆಗೆದುಕೊಂಡು ಅದಕ್ಕೆ ಅಲಂಕಾರಗೊಳಿಸಿ ‘ಲಾಲಿ ಹಾಡುತ ತೋಳಿನ ತೊಟ್ಟಿಲು ತೂಗುತ ನಿಂತು ಜೋಗುಳ ಹಾಡುವಳು’ ಇದು ಕಂಚ್ಯಾಣಿಯವರ ಕವಿ ಮನಸ್ಸು ವ್ಯಕ್ತವಾಗುವಲ್ಲಿ ಸಫಲವಾಗಿದೆ. ‘ಜಾರಿದ ಪಾಪ ಕಾಲನು ಜಜ್ಜಲು ಚಿಟ್ಟನೆ ಚೀರುವದು, ಪಾಪ ಕೆಟ್ಟದ್ದೆಂದು ದೂರಕೆ ಬಿಸುಟುವುದು’ ಹೀಗೆ ಮಗು ಭಾವ ಸಂಬಂಧದಿಂದ ದೂರ ಸರಿಯುವುದು ಕುತೂಹಲಕಾರಿ. ಇಂಥ ಸನ್ನಿವೇಶ ಹೆಣೆಯಲು ಕಂಚ್ಯಾಣಿಯವರು ಸಿದ್ಧ ಹಸ್ತರು.

‘ಪಾಪ ಅತ್ತರೊಂದು ಚಂದ
ಮುತ್ತು ಮಳೆಯ ಕರೆದಿದೆ
ಕೇಕೆ ಹಾಕಿ ನಕ್ಕರಂತು
ಮನೆಗೆ ಮನೆಯೆ ನಗುತಿದೆ’[೧೮೬] **।**

ಮಗುವಿನ ಹಾವ-ಭಾವ, ಅಳು-ನಗು, ಆಟ-ಪಾಟಗಳೆಲ್ಲ ಕಂಚ್ಯಾಣಿಯವರು ಶಿಶು ಮನದ ತಾಯಿಯಾಗಿ ನಿಂತು ಚಿತ್ರಿಸಿದ್ದು ಕವಿ ಕಣ್ಣಿನಿಂದ. ಮಗುವಿನ ಚಲುವಿನ ರೂಪ, ಮುಗ್ಧ ಮಾತು, ನಗೆಯ ಮೊಗ್ಗು, ಬಿರಿದ ಗಲ್ಲ, ನವಿಲ ನಾಟ್ಯದ ನಡೆ, ಅಂಬೆಗಾಲಿನ ಪುಟ್ಟ ಆನೆ ಸಾಗಿ ಬಂದಿತು ಎನ್ನುವಲ್ಲಿ ಮಗುವಿನ ಹಲವು ಛಾಯೆಗಳನ್ನು ಬಿತ್ತರಿಸಿದ್ದಾರೆ. ಕಂಚ್ಯಾಣಿಯವರ ಶಿಶು ಕವಿತೆಗಳು ಸರಳತೆಯಿಂದ ಸಾಗುವ ನಿಧಾನ ಹೊಳೆಯಂತೆ, ಮಕ್ಕಳಿಗೆ ಹಿತವಾಗುವ ಸೆಳೆತದಂತೆ ಹರಿದಿದೆ.

ಮಗು ತಂದೆ-ತಾಯಿಗಳ ಒಡನಾಟಗಳಿಗಿಂತ ಅಜ್ಜ-ಅಜ್ಜಿಯರ ಒಲವಿನ ಬಂಧನದ ಸೆಳೆತಕ್ಕೆ ಹೆಚ್ಚು ಸಿಲುಕಿಕೊಂಡವರು. ಇದು ಕಂಚ್ಯಾಣಿಯವರು ಶಿಶು ಕಾವ್ಯದ ಧ್ವನಿ.

ಕೊಕ್ಕೋ ಕೋಳಿ ಕೂಗಲು ಪುಟ್ಟು
ಮೈ ಮುರಿದೇಳುವನು ।
ಅಜ್ಜಗೆ-ಅಜ್ಜಿಗೆ ವಂದಿಸಿ ದೇವರ
ಹಾಡನು ಹೇಳುವನು[೧೮೭] **।**

ಮುಂಜಾವಿನಲಿ ಕೋಳಿಯ ಕೂಗು ನಿದ್ರೆಯಲ್ಲಿರುವ ಜೀವಿಗಳಿಗೆ ಎಚ್ಚರಿಸುವ ಗಂಟೆ. ಈ ಕವಿತೆ ಪುಟ್ಟುವಿನ ವ್ಯವಸ್ಥಿತವಾದ ಸಂಸ್ಕೃತಿಯನ್ನು ಚಿತ್ರಿಸುತ್ತದೆ. ಪುಟ್ಟನ ಗುಣ-ಸ್ವಭಾವ ಪ್ರತಿಯೊಂದು ಮಗುವಿನಲ್ಲಿರಲಿ ಎಂಬ ಸಂದೇಶ ಕಂಚ್ಯಾಣಿಯವರ ಕವಿತೆಯಲ್ಲಿಡಗಿದೆ.

ಮಗು ಬೆಳಗಿನ ಜಾವದಲ್ಲಿ ಏಳುವ, ಅಜ್ಜ-ಅಜ್ಜಿಗೆ ವಂದಿಸುವ, ಸೂರ್ಯನನ್ನು ಆನಂದ-ಆಶ್ಚರ್ಯದಿಂದ ನೋಡುವ, ಹಕ್ಕಿಗಳ ನಿನಾದ ಆಲಿಸುವ, ಅಪ್ಪ-ಅಮ್ಮಗೆ ಸಹಾಯ ಮಾಡುವ, ತನ್ನ ಇರುವಿಕೆಯಲ್ಲಿ ಸಿಸ್ತು ಮಕ್ಕಳನ್ನು ಆಡಿಸುವ-ನಡೆಸುವ

ಸಂದರ್ಭದ ಶೈಲಿ ಮೂಡಿದಂತಿದೆ. ಚಕ್ ಚಕ್ ಅಗ್ಗಿನ ಗಾಡಿ, ಪೌಂ ಪೌಂ. ಮೋಟರ ಗಾಡಿ, ಕುಣಿಯುತ ಬರುವ ಕುದುರೆಯ ಗಾಡಿ, ಗಿಲ್ ಗಿಲ್ ಗೆಜ್ಜೆಯ ಎತ್ತಿನ ಗಾಡಿ ಹೀಗೆ ಹಲವು ಗಾಡಿಗಳ ಸದ್ದಿನ ವರ್ಣನೆ ಮಾಡುವುದರೊಂದಿಗೆ ಮುಗ್ಧ ಮಗು ಅಂಬೇಗಾಲಿನಿಂದ (ಎರಡು ಕೈ-ಕಾಲು ನೆಲಕ್ಕೆ ಹಚ್ಚಿ ನಡೆಯುವ ರೀತಿ) ಮನೆಯಲ್ಲಿ ಓಡಾಡುವ ದೃಶ್ಯ ಕಂಚ್ಯಾಣಿಯವರ ಕಣ್ಣಿಗೆ ಹಬ್ಬವಾಗಿ ಕಂಡಿದೆ. ಪುಟ್ಟ ಮಗುವಿನ ದಟ್ಟ ಹೆಜ್ಜೆಗಳನ್ನು ಗುರುತಿಸುವಲ್ಲಿ ಕವಿ ಯಶಸ್ವಿಯಾಗಿದ್ದಾರೆ. ಇಲ್ಲಿ ತಮ್ಮನ್ನೆ ತಾವು ಮರೆತು ಹಾಡಿ ಹೇಳಿದ್ದಾರೆ ಎನ್ನುವಂತಿದೆ.

'ಕೂಸನು ಕೂಡ್ರಿಸಿ ಆಡಲು ಹೊರಟರೆ
ಚಿಟ್ಟನೆ ಚೀರುವುದು ।
ಕಣ್ಣಲಿ ನೀರು ಇಲ್ಲವೆ ಇಲ್ಲ
ಸುಳ್ಳೇ ಅಳುತಿಹುದು ।
ಕ್ಷಣದಲಿ ನಕ್ಕು ಕ್ಷಣದಲಿ ಅತ್ತು
ಜೋಕನು ಮಾಡುವುದು ।
ಕಿರಿ ಕಿರಿ ಮಾಡುವ ಕಾಡುವ ಕೂಸು
ಮೋಜೆ ಆಗಿಹುದು'[೧೮೮] ॥

ಮಕ್ಕಳ ಆಟ-ಪಾಠ-ಕಾಟ ಮನೆಮಂದಿಗೆಲ್ಲ ಮೋಜಿನದು. ಮಗು ಅತ್ತರೂ ಚಂದ ನಕ್ಕರೂ ಚಂದ, ಪೀಡಿಸಿದರೂ ಚಂದ. ಅಕ್ಕ-ಅಣ್ಣ ಯಾರಾದರೂ ಸರಿ ಅವರಿಗೂ ಕಿರಿ ಕಿರಿ ಕೊಡುವ ಮಗು ಮನೆಯ ವಸ್ತುಗಳನ್ನು ಹಾಳುಗೆಡವಿ ಕಣ್ಣಲ್ಲಿ ನೀರು ಇಲ್ಲದೆ ಸುಮ್ಮನೆ ಅಳುತಿರುವುದು' ಎಂದು ಕಂಚ್ಯಾಣಿಯವರು ಮಗುವಿನ ಬಂಡತನವನ್ನು ವ್ಯಕ್ತಪಡಿಸುತ್ತಾರೆ.

'ನನ್ನ ಹೆಸರಗೊಂಡು ಯಾರು ಕರೆಯಲೊಲ್ಲರು
ತೊಟ್ಟಿಲಲ್ಲಿ ಇಟ್ಟ ಹೆಸರು ಮರೆತು ಬಿಟ್ಟರು ।
ಶಾಲೆಯಲ್ಲಿ ನನ್ನ ಗುರುಗಳೆಂಥ ಜಾಣರು
ಬಾಯಿತುಂಬ ನನ್ನ ಹೆಸರು ಕೂಗಿ ಕರೆದರು'[೧೮೯] ।

ಮಕ್ಕಳಿಗೆ ಮುಜುಗರ ತರಿಸುವದು ತಮ್ಮ ಹೆಸರು. ಮನೆಯವರೆಲ್ಲ ಪ್ರೀತಿಯಿಂದ ಕರೆಯುವ ಹೆಸರೇ ಬೇರೆ-ಬೇರೆ. ಅಕ್ಕರೆಯಿಂದ ಕರೆಯುವ ಪುಟ್ಟ, ರಾಜ, ತುಂಟ, ಮರಿ, ಪೆದ್ದ ಮುಂತಾದವುಗಳಿಂದ ಕರೆದರೆ ಗುರುಗಳು ತನ್ನ ಹೆಸರನ್ನು ಕೂಗಿ ಕರೆದಾಗ ಮನಸಾಪೂರ್ವಕವಾಗಿ ವಂದಿಸಿ ಆನಂದಿಸುತ್ತದೆ. ಇದು ಕಂಚ್ಯಾಣಿಯವರ ಮಕ್ಕಳ ಮೇಲಿನ ಶಿಕ್ಷಕನ ಒಲುಮೆಯ ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಇಂಥ ಹಲವು ನೆಲೆಗಳಲ್ಲಿ ಕಂಚ್ಯಾಣಿಯವರ ಶಿಶು ಕವಿತೆಗಳು ಕೌಟುಂಬಿಕ ವಾತ್ಸಲ್ಯದ ಸೆಲೆಯಲ್ಲಿ ಹರಿದು-ಹಂಚಿ ಹೋಗಿರುವುದನ್ನು ಕಾಣುತ್ತೇವೆ.

ಕಂಚ್ಯಾಣಿಯವರ ಶಿಶು ಸಾಹಿತ್ಯದಲ್ಲಿ ವೈವಿಧ್ಯತೆ ಕಂಡುಬರುವುದಕ್ಕೆ ಕಾರಣ ಅವರ ವಿವಿಧತೆಯ ಹಲವು ತಾಣಗಳ ಬದುಕು. ಹುಟ್ಟಿನಿಂದ ನಿವೃತ್ತಿಯವರೆಗೆ ಹತ್ತಾರು ಊರುಗಳಲ್ಲಿ ವೃತ್ತಿ ನಿರತ ಅವಿರತ ಸೇವೆ. ಇದರಿಂದಾಗಿ ಅನೇಕ ಜನರ ಮತ್ತು ಸಾವಿರಾರು ಮಕ್ಕಳ ನಡುವಳಿಕೆಗಳನ್ನು ಅರಿತವರು ಪ್ರಾಣಿ-ಪಕ್ಷಗಳ, ಗಿಡ-ಮರಗಳ, ಹಳ್ಳ-ಕೊಳ್ಳಗಳ, ಮಳೆ-ಮೋಡಗಳ, ಸೂರ್ಯ-ಚಂದ್ರರ, ಸೂರ್ಯೋದಯ-ಸೂರ್ಯಾಸ್ತಗಳ ಮೊದಲಾದ ಸೃಷ್ಟಿಯ ವೈಚಿತ್ರಗಳನ್ನು ಕವಿತೆಗಳಲ್ಲಿ ಸೆರೆಹಿಡಿದವರು ಕಂಚ್ಯಾಣಿ ಶರಣಪ್ಪನವರು ಅವರವರ ಮನೋಭಾವನೆಗಳಿಗೆ ಸ್ಪಂದಿಸಿ ಸಾಹಿತ್ಯ ಸೃಷ್ಟಿಸಿದವರು. ಹೀಗಾಗಿ ಕಂಚ್ಯಾಣಿಯವರ ಸಾಹಿತ್ಯದಲ್ಲಿ ಮಕ್ಕಳ ಆಶಯ ಮತ್ತು ಆಲೋಚನೆಗಳಿಗೆ ದೊರೆತ ಶಿಶು ಕಾವ್ಯದ ಫಲಗಳನ್ನು ಕಾಣುತ್ತೇವೆ.

ಪ್ರಕೃತಿಯ ಮಡಿಲಲ್ಲಿ ಬದುಕು ಸವೆಸಿದ ಕಂಚ್ಯಾಣಿಯವರು ಸಹಜವಾಗಿಯೇ ನಿಸರ್ಗ ಗೀತೆಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ.

ಮನೆಯಂಗಳದಲಿ ಮರವೊಂದಿದ್ದರೆ
ಮನೆಯೇ ನಂದನವು ।
ಊರಿನ ಬದಿಯಲಿ ಬನವೊಂದಿದ್ದರೆ
ಊರೇ ಗೋಕುಲವು[೧೯೦] **॥**

ಪರಿಸರ ಪ್ರೇಮವನ್ನು ಮನಸಾರೆ ಹಾಡಿ-ಹೊಗಳಿ ಕೊಂಡಾಡಿದ ಕಂಚ್ಯಾಣಿಯವರು 'ಮರ ಬೆಳಸಿರಿ - ಕಾಡು ಉಳಿಸಿರಿ' ಎಂಬ ನುಡಿಯಂತೆ ನಡೆದವರು.

ಮೋಡಕೆ ತಂಪನು ತಗುಲಿಸಿ ಗಿಡಮರ
ಮಳೆಯನು ಬರಿಸುವವು ।
ಕ್ಷಣದಲಿ ಪರಿಸರ ಮಲಿನತೆ ಕಳೆಯುತೆ
ಶುಚಿಯಾಗಿರಿಸುವವು[೧೯೧] **॥**

ನಿಸರ್ಗದ ಪ್ರತೀಜೀವರಾಶಿಗಳಿಗೆ ಜಲವೇ ಜೀವನಾಧಾರ. ಜಲವಿಲ್ಲದೆ ಜೀವಿಗೆ ನೆಲೆಯಿಲ್ಲ. ಇದು ಕವಿತೆಯ ಪೂರ್ಣ ಭಾವ. ಮರಗಳಿಂದ ತುಂಬಿಕೊಂಡು ಕಾಡು ಸಮೃದ್ಧವಾಗಿದ್ದರೆ ಇಳೆಗೆ ಮಳೆ ಸುರಿಯಲು ಸಾಧ್ಯವೆನ್ನುವ ಅರಿವು ಕಂಚ್ಯಾಣಿಯವರದು. ಮಳೆಯಿಂದ ಪರಿಸರದ ಮಲಿನತೆ ಕಳೆಯುವ, ಬಣ್ಣ-ಬಣ್ಣದ ಹೂವುಗಳು ಅರಳುವ, ಪಶು-ಪಕ್ಷಿಗಳಿಗೆ ಆಸರೆ ನೀಡುವ, ಗಿಳಿ, ಕೋಗಿಲೆಗಳ ನಿನಾದ, ನವಿಲಿನ ನರ್ತನ, ತುಂಬಿಯ ಗಾಯನ ಮುಂತಾದ ಚೈತನ್ಯದ ಚಿಲುಮೆಯ ಹೊನಲು ಹೊಮ್ಮುವುದು ಸಹಜ. ಕಾಡಿನ ಸಂಪತ್ತನ್ನು ಉಳಿಸಲು-ಬೆಳೆಸಲು, ನಾಡು-ಕಾಡಿನ ಸಂಬಂಧವನ್ನು ಬೆಸೆಯುವ ಕೊಂಡಿ, ಈ ತರು-ಲತೆಗಳ ಸಮೂಹ ಎನ್ನುವ ಭಾವನೆ ಕಂಚ್ಯಾಣಿಯವರದು.

ಬೆಟ್ಟನೆತ್ತಿಗಿಳಿದು
ಕಾಡು ಮೇಡು ಸುಳಿದು
ಮಿಂಚಿ ಮಾಯವಾಗಿ
ಕರಗಿ ಹೋಗತಾವ । ಮಳೆಯ ಸುರಿಸತಾವ ।
ಸುತ್ತ ಮುತ್ತ ಸುರಿದು
ನೆಲದ ಮ್ಯಾಲೆ ಹರಿದು
ಮತ್ತೆ ಮೋಡಿ ಮಾಡಿ
ಮಳೆಯ ಬಿಲ್ಲು ಮೂಡಿ । ಮೋಡ ಬಂತು ಮೋಡ[೧೯೨] **॥**

ಮಳೆಯ ಮೋಡಿಯನ್ನು ನೋಡಿ ಮಗುವಾಗಿ ಆಡಿದ ಕಂಚ್ಯಾಣಿಯವರು ಮೋಡಗಳ ನಾನಾ ರೂಪಗಳನ್ನು ಕಂಡವರು. ಗಾಳಿಯಲ್ಲಿ ತೇಲಿಬರುವ, ಗಗನದಲ್ಲಿ ಫೇರಿ ಹಾಕುವ, ಸೂರ್ಯನಿಗೆ ಅಡ್ಡಲಾಗಿ ಮುಸುಕುವ ಗುಡುಗು-ಸಿಡಿಲಿನ ಜೋಡಿಯ ಆರ್ಭಟದ ಗತ್ತು ಮಕ್ಕಳ ಮನಸ್ಸಿಗೆ ಉಲ್ಲಾಸ ರೋಮಾಂಚನ ಮೂಡಿಸುತ್ತವೆ.

ಕಂಚ್ಯಾಣಿಯವರು ಕವಿತೆಗಳಲ್ಲಿ ನಿಸರ್ಗ ರಮಣೀಯ ದೃಶ್ಯಗಳನ್ನು ತಮ್ಮ ಬಾಲ್ಯದ ನೆನಪುಗಳಿಂದ, ಮಕ್ಕಳ ಒಡನಾಟದಿಂದ ಹಾಗೂ ಅವರ ಶಿಕ್ಷಕ ವೃತ್ತಿಯಿಂದ ಸಿದ್ಧಿಸಿಕೊಂಡವರು.

ರೊಯ್ಯನೆ ಗಾಳಿ ಬೀಸೇದ
ಕಪ್ಪನೆ ಮೋಡ ತೇಲೇದ
ಗಕ್ಕನೆ ಗಗನಕೆ ಹಾರೇದ
ಮೋಡಿ ಮಾಡುತ ನಡದಽದ[೧೯೩] **।**

ಆಗಸದಲ್ಲಿ ಮೋಡಗಳ ಚಲ್ಲಾಟದ ಹಲವು ಚಿತ್ತಾರಗಳನ್ನು ಕಂಡಂಥ ಕಂಚ್ಯಾಣಿಯವರು ಕಣ್ಣಿಗೆ ಕಟ್ಟುವಂತೆ ಹೇಳಿದ್ದಾರಲ್ಲದೆ, ಬಯಲು ಸೀಮೆಯ ಬದುಕಿಗೆ ಆಸರೆ ಈ ಮೋಡ-ಮಳೆ ಎಂದು ವರ್ಣಿಸುತ್ತಾ,

ಧೋ ಧೋ ಮಳೆಯನು ಸುರಿಸೇದ
ದಳ ದಳ ಮುತ್ತು ಉದುರೇದ
ಗಮ್ಮನೆ ಭೂಮಿ ಅರಳೇದ
....
ಜೀವಕೆ ಕಳೆಯು ಮೂಡೇದ
ಚೇತನ ಚಿಲುಮೆ ಚಿಮ್ಮೇದ[೧೯೪] **।**

ನಿಸರ್ಗದ ನೈಜತೆಯನ್ನು ಕಂಡು ಅನುಭವಿಸಿದ ಕಂಚ್ಯಾಣಿಯವರು ಮುಂಗಾರಿನ ಮಳೆಯನ್ನು ರಭಸದ-ರಸವಾಗಿ ಶಿಶು ಕವಿತೆಗಳಲ್ಲಿ ಸುರಿಸಿ ಹರಿಸಿದ್ದಾರೆ.

ಮಳೆ ಮಕ್ಕಳಿಗೆ ಮಾತ್ರ ಚಲ್ಲಾಟವಾಗದೆ, ಭೂತಾಯಿಯ ಮಡಿಲಲ್ಲಿ ದುಡಿಯುವ, ನಾಡಿಗೆ ಆಸರೆಯಾದ ಕೃಷಿಕರಿಗೆ ಸಂತಸ–ಸಂಭ್ರಮ ತರುವದು. ಅಲ್ಲದೆ ಭೂತಾಯಿಯೇ ಹಿರಿ ಹಿರಿ ಹಿಗ್ಗುವ, ಗಟ ಗಟ ಕುಡಿಯುವ ದೃಶ್ಯ ಮಾರ್ಮಿಕವಾದುದು. ಹಳ್ಳ–ಕೊಳ್ಳಗಳು ಮೈದುಂಬಿ ಹರಿಯುವ, ಪ್ರಾಣಿ–ಪಕ್ಷಿ, ಸಸ್ಯರಾಶಿಗೆ ಜೀವಕಳೆ ಮೂಡಿಸುವ ಚೇತನ ಚೆಲುಮೆ ಈ ಮುಂಗಾರು ಮಳೆ. 'ಬಗೆ ಬಗೆ ಬಣ್ಣದ ಕಾಮನ ಬಿಲ್ಲಿನ ಕಮಾನು ನವಿಲುಗಳ ನರ್ತನಕ್ಕೆ ಹಬ್ಬ' ಎನ್ನುವ ಕಂಚ್ಯಾಣಿಯವರು.

ಕಾಮನ ಬಿಲ್ಲನು ಕಟ್ಟಿದರಾರು?
ಬಗೆ ಬಗೆ ಬಣ್ಣದವ ಬಳಿದವರಾರು?
ಬಟ್ಟಂ ಬಯಲಲಿ ಇಟ್ಟವರಾರು?
ಬಾನಿಗೆ ಬೆಡಗನು ಇತ್ತವರಾರು?
ಅಂದದ ಚಂದದ ಗೋಳಾಕಾರ
ಅಳತೆಗೆ ಸಿಕ್ಕದ ಅಪರಂಪಾರ[೧೯೫] ॥

ಪ್ರಕೃತಿಯ ವಿಸ್ಮಯ ಈ ಕಾಮನ ಬಿಲ್ಲು. ಆಗಸದಲ್ಲಿ ಅಂದವಾಗಿ ಮೂಡಿದ, ಅಳತೆಗೆ ಸಿಗದ ಅಪರಂಪಾರ, ಮಳೆಯಲಿ ನೆನೆಯದ, ಗುಡುಗಿಗೆ ನಡುಗದ, ಗಾಳಿಗೆ ಹಾರದ, ಸಿಡಿಲಿಗೆ ಬಿರಿಯದ ಕಾಮನಬಿಲ್ಲು ಕಟ್ಟಿದವರಾರು ಎಂಬ ಪ್ರಶ್ನೆ ಮಗುವಿನ ಮನದ ಕಂಚ್ಯಾಣಿಯವರದು. ಬಾನಿಗೆ ಬೆಡಗು ನೀಡುವ, ಎಂದೂ ಮರೆಯಲಾರದ, ಕ್ಷಣದಲಿ ಕರಗುವ ಕಾಮನ ಬಿಲ್ಲು ಚಿಣ್ಣರ ತಣಿಸುವ ಬಣ್ಣದ ಕಣ್ಣು ಇದು ಕವಿಯ ಒಳಗಣ್ಣಿನ ನೋಟ.

'ಮೋಡ ಮಾತನಾಡುತಿವೆ ನೋಡ ಬನ್ನಿ ಗೆಳೆಯರೆ ।
ನಮಗೆ ಏನೋ ಹೇಳುತಿವೆ ಕೇಳ ಬನ್ನಿ ಮಿತ್ರರೇ ।
ಕೆಟ್ಟ ಕಾಡುಗಳ್ಳರು
ಕಾಡನೆಲ್ಲ ಕಡಿದರು' ॥
ದುಷ್ಟ ಲಾಭ ಬಡಕರು
ಬೆಟ್ಟ ಸವರಿ ಬಿಟ್ಟರು'[೧೯೬] ॥

ಪರಿಸರದ ಮೇಲೆ ಮಾನವನು ನಿರಂತರ ಶೋಷಣೆ ಮಾಡುತ್ತಿರುವುದು ಈ ಕವಿತೆಯ ಧ್ವನಿ. ಗುಡು ಗುಡು ವಟ ವಟ ಸಿಡುಕುತನದ ಮೋಡದ ನುಡಿಗಳು ಕೇಳ ಬನ್ನಿ; ಭಾಷೆ ತಿಳಿಯದಿದ್ದರೇನು ಮನದ ಆಶೆ ತಿಳಿಯದೇನು? ಎನ್ನುವ ಕಂಚ್ಯಾಣಿಯವರು, ಕಾಡನ್ನು ನಾಶಪಡಿಸುವ ದುಷ್ಟರನ್ನು, ಲಾಭತನದ ಕಳ್ಳರನ್ನು ವಿಡಂಭಿಸಿದ್ದಾರೆ. ನಿಸರ್ಗದ ಭಾಷೆಯನ್ನು ಅರಿತು–ಅನುಭವಿಸಿದ ಕಲ್ಪನೆ ವರ್ಣನಾತೀತವಾದುದು, ಕವಿಯ ಕಣ್ಣಿಗೆ ಒಲುಮೆಯ ಮನಸ್ಸಿಗೆ.

ಭೂಮಿ ತಾಪ ಹೆಚ್ಚಿದೆ, ವಿಷದ ಗಾಳಿ ತುಂಬಿದೆ
ನಮ್ಮ ಉಸಿರುಗಟ್ಟಿದೆ, ಹಸಿರು ಉಸಿರು ಎಲ್ಲಿದೆ?
ನೊಂದು ಮೋಡ ನುಡಿದಿದೆ, ನುಡಿದು ಮುಂದೆ ನಡೆದಿದೆ ।
ನಾಲ್ಕು ಹನಿಯ ಉದುರಿಸಿ ನಮ್ಮನೆಲ್ಲ ಅಣುಕಿಸಿ[೯೭] **॥**

ಮರಗಳಿಲ್ಲದ ಬರಡು ಭೂಮಿಗೆ ಮಳೆ ಸುರಿಯದು. ಇದರಿಂದ ಭೂಮಿಯ ತಾಪ ಹೆಚ್ಚಿ ಪರಿಸರ ವಿಷಕಾರಿಯಾಗಿ ಪರಿಣಮಿಸಿದೆ. 'ಹಸಿರೆ-ಉಸಿರು' ಎನ್ನುವುದು ಬಿಟ್ಟು, 'ವಿಷವೆ-ಹಸಿರು ಎನ್ನುವಂತಾಗಿದೆ ಬದುಕು' ಎಂದು ವಿಡಂಬಿಸುವ ನುಡಿಯ ಜೊತೆಗೆ ನಾಲ್ಕು ಹನಿ ಉದುರಿಸಿ ಅಣಕಿಸುವ ಮೋಡ ಮಾನವರನ್ನು ನಾಚಿಸುವಂತೆ ಮಾಡಿದೆ.

ದಡಬಡ ಬಾಗಿಲು ಬಡದಾನ
ಮೋಡದ ಮನೆಯ ಹೊಕ್ಕಾನ
ಸಿಡಿಲನು ಸಿಡಿಸುತ ನಿಂತಾನ
ಧೋ-ಧೋ ಮಳೆಯನು ಸುರಿಸ್ಯಾನ[೯೮] **॥**

ಮಳೆಗಾಲದ ದೃಶ್ಯ ಎಲ್ಲರಿಗೂ ಹಿತವನ್ನು ನೀಡುವದು ಗಡಗಡ ಸದ್ದಿನ ಗುಡು ಗುಡು ಮುತ್ಯಾ ಬಂದಾನ ಎನ್ನುವ ಪುಟ್ಟ ಮಕ್ಕಳ ಆಟ ನೋಡಲು ಬಲು ಸುಂದರ. ಆಕಾಶದಲ್ಲಿ ಕಾಮನ ಬಿಲ್ಲು ಬಣ್ಣಗಳ ವೈವಿಧ್ಯತೆಯನ್ನು ಮೂಡಿಸಿ ಆಲಿ ಕಲ್ಲಿನ ಮಳೆ ಸುರಿಸಿ 'ಹಳ್ಳಕೆ ಹರೆಯ ತಂದಾನ' ಎನ್ನುವ ಕಂಚ್ಯಾಣಿಯವರು ಶಿಶು ಕಾವ್ಯದಲ್ಲಿ ಅಲಂಕಾರವನ್ನು ಸೃಷ್ಟಿಸಿ ಕವಿತ್ವ ಮರೆದಿದ್ದಾರೆ. ಮುಂದುವರೆದು ಕವಿ ಕವಿತೆಯ ಧ್ವನಿಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. 'ಹೊಳೆಗಳ ಹಾಡಲು ಹಚ್ಯಾನ' ಎನ್ನುವ ಸಾಲುಗಳೇ ಅದಕ್ಕೆ ನಿದರ್ಶನ. ಮಕ್ಕಳಲ್ಲಿ ಮಗುವಾಗಿ ಆಡುವ ಕಂಚ್ಯಾಣಿಯವರು ರೈತಾಪಿ ಜನ-ಜೀವನದ ನಾಡಿಯ ಮಿಡಿತವನ್ನು 'ಬಿಸಿಲಿನ ಬೇಗೆ ತಣಿಸ್ಯಾವ' ಎನ್ನುವಲ್ಲಿ ಮನದುಂಬಿ ಅಭಿವ್ಯಕ್ತಪಡಿಸಿದ್ದಾರೆ.

ನವೋದಯ ಕವಿಗಳಲ್ಲಿ ಮುಖ್ಯವಾಗಿ ನಿಸರ್ಗದ ಚೆಲುವು, ಕಲೆ, ದೇಶಪ್ರೇಮ, ಸಮಕಾಲೀನ ಬದುಕಿನ ನೂರಾರು ಸಮಸ್ಯೆಗಳು, ಕೌಟುಂಬಿಕ ಜೀವನದ ಸುಖ-ದುಃಖ, ತಾತ್ವಿಕ ಅನುಭವಗಳು ಮುಂತಾದ ವಿಷಯಗಳು ಕವಿತೆಗಳಲ್ಲಿ ಎದ್ದು ಕಾಣುತ್ತವೆ. ಈ ಪರಂಪರೆಯಲ್ಲಿ ಮುಂದುವರೆದ ಸಮಕಾಲೀನ ಕವಿಗಳಲ್ಲಿ, ಮಕ್ಕಳ ಸಾಹಿತಿ ಕಂಚ್ಯಾಣಿಯವರು ಒಬ್ಬರು. ದೇಶಾಭಿಮಾನದ, ರಾಷ್ಟ್ರಪ್ರೇಮವನ್ನು ವ್ಯಕ್ತಗೊಳಿಸುವ, ದೇಶಭಕ್ತರ ಕುರಿತಾದ ಕವಿತೆಗಳನ್ನು ಮಕ್ಕಳಿಗೆ ರಚಿಸಿ ಕೊಟ್ಟಿರುವುದಲ್ಲದೆ ಅವರಲ್ಲಿ ಅಭಿಮಾನ ಮೂಡುವಂತೆ ಪ್ರೇರೇಪಿಸಿದ್ದು ಗಮನಾರ್ಹವಾದುದು.

ಹದಿಹರೆಯದ ಬಿಸಿ
ನೆತ್ತರದೆದೆಯೊಳು
ಕ್ರಾಂತಿಯ ಕಿಡಿಯನು ಬಿತ್ತೋಣ ।
ದೇಶ ಪ್ರೇಮದ
ಪೂರ್ಣ ಪ್ರಜ್ಞೆಯಲಿ
ಭಾವೈಕ್ಯದ ಬೆಳೆ ಬೆಳೆಯೋಣ[೧೯೯] ।

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಉದಯಿಸಿದ ಶಿಶು ಕವಿ ಕಂಚ್ಯಾಣಿಯವರಿಗೆ ದೇಶ ಪ್ರೇಮದ ಪ್ರಭಾವ ಅಚ್ಚೊತ್ತಿದೆ. ಇವರ ಕವಿತೆಗಳು ಮಕ್ಕಳಲ್ಲಿ ಕ್ರಾಂತಿಯ ಕಿಚ್ಚು ಹಚ್ಚಿ ಬಡಿದೆಬ್ಬಿಸಿವೆ. ಶೂರ ಸುಭಾಸರ ಜಾಗೃತ ಭಾರತ ಕಟ್ಟುವಲ್ಲಿ ಯುವ ಜನತೆಯಲ್ಲಿ ದೇಶಾಭಿಮಾನಿಗಳ ಬದುಕನ್ನು ಚಿತ್ರಿಸಿ ಅಭಿಮಾನವನ್ನು ಮೂಡಿಸಿದ್ದಾರೆ. ಭ್ರಷ್ಟಾಚಾರದ ಕಳೆಯನು ಕೀಳುವ ಬೆವರಿನ ಮಳೆಯನ್ನು ಸುರಿಸುವ ಜಾಗೃತ-ಭಾರತ ಕಟ್ಟೋಣವೆಂದು ಯುವಕರಿಗೆ ಕರೆ ನೀಡಿದ್ದಾರೆ.

ದುಷ್ಟ ಗೆಳೆಯರೊಡನೆ ಕೂಡಿ ಕೆಟ್ಟ ಚಟವ ಕಲಿತನು ।
ಮನೆಯಲೊಂದು ದಿವಸ ಕಳ್ಳತನವ ಮಾಡಿಬಿಟ್ಟನು ।
ತನ್ನ ತಂದೆ ನೊಂದನೆಂದು ಅವಗೆ ದುಃಖವಾಯಿತು ।
ತಪ್ಪನೆಂದು ಮಾಡನೆಂದು ಮನವು ಗಟ್ಟಿಗೊಂಡಿತು[೨೦೦] ॥

ಬಾಲಕನಾದ ಮೋಹನದಾಸ ಕರಮಚಂದ ಗಾಂಧಿ ಮಾಡಿದ ತಪ್ಪಿನ ಅರಿವಾಗಿ ಸಾಧನೆಯ ಗಿರಿಯನೇರಿ ಮಹಾತ್ಮನಾದುದು, ರಾಷ್ಟ್ರಪಿತನೆನಿಸಿಕೊಂಡುದು. ಅವರ ಆದರ್ಶದ ಬದುಕು ಮಕ್ಕಳಿಗೆ ಮಾರ್ಗದರ್ಶಿಯಾಗಿದೆ. ಮಾನವತಾವಾದಿ, ಶಿಕ್ಷಕ ಸಂಕುಲಕ್ಕೆ ಮುಕುಟ ಪ್ರಾಯವಾದವರು ರಾಧಾಕೃಷ್ಣ, ಅವರ ದಿವ್ಯ ದೃಷ್ಟಿ ನಿತ್ಯ ಸತ್ಯ ಗುಣಧರ್ಮಗಳು 'ಗುರುಕುಲ' ಸಂತತಿಗೆ ಮಾರ್ಗದರ್ಶಿಯಾದವುಗಳೆಂದು ಹೇಳುವ ಕಂಚ್ಯಾಣಿಯವರು ಸ್ವತಃ ಆ ಮಾರ್ಗವನ್ನು ಅನುಸರಿಸಿದ ಶಿಕ್ಷಣ ಪ್ರೇಮಿ, ಉತ್ತಮ ಶಿಕ್ಷಕರು ಹಾಗೂ ಹಿತ ಚಿಂತಕರು. ಭಾರತೀಯ ಸಂಸ್ಕೃತಿಯ ಪ್ರತಿಬಿಂಬವೇ ಶಿಕ್ಷಕ ಸಮೂಹ ಎಂದರೆ ತಪ್ಪಾಗಲಾರದು.

ಹರೆಯ ಉಕ್ಕಿ ಹರಿಯುವಾಗ
ಭೋಗ ಭಾಗ್ಯ ತೊರೆದನು
ರಾಜ್ಯ ಪದವಿ ಮುದ್ದು ಮಡದಿ
ಎಲ್ಲ ಬಿಟ್ಟು ನಡೆದನು[೨೦೧] ॥

ದಯಾಮೂರ್ತಿ ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ವಿಶಿಷ್ಟವಾದುದು 'ಬುದ್ಧ'. ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಿದ ಮಹಾನುಭಾವ. ಜಗತ್ತೆಲ್ಲ ಅಂಧಕಾರದಲ್ಲಿ

ಮುಳುಗಿದಾಗ ಇವನಿಗೆ ಎಚ್ಚರವಾಗುವುದು. ಘೋರ ತಪದ ಪರಿಣಾಮ ದಿವ್ಯ ಜ್ಞಾನ ಪಡೆಯುವ ಬುದ್ಧನು ಜಗದ ಜ್ಯೋತಿಯಾದನು. ಹಿಂಸೆ, ಮೂಢನಂಬಿಕೆ ಮತ್ತು ಆಶೆ ಮೊದಲಾದ ಜೀವನ ಮೌಲ್ಯಗಳನ್ನು ಜಗದ ಜೀವಿಗಳಿಗೆ ಕೊಟ್ಟ ಕರುಣಾಮೂರ್ತಿ. ದಯವೇ ಧರ್ಮದ ಮೂಲ ಎಂಬ ಮಂತ್ರವನ್ನು ಸಾರಿದ ಬಸವಣ್ಣನವರಂತೆ. ಕಂಚ್ಯಾಣಿಯವರು ಬದುಕಿನುದ್ದಕ್ಕೂ ಅನುಸರಿಸುತ್ತ ನಡೆದವರು.

ಕಂಚ್ಯಾಣಿ ಶರಣಪ್ಪನವರು ಬುದ್ಧನನ್ನು ಕಣ್ತುಂಬ ಕಟ್ಟುವಂತೆ ಚಿತ್ರಿಸಿ, ಮಕ್ಕಳಲ್ಲಿ ಜೀವನದ ಬಹುಮುಖ ಆದರ್ಶಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುವ ಸಂಗತಿ ಚೇತೋಹಾರಿಯಾದುದು.

'ಆನಂದಮಯ ಈ ಜಗ ಹೃದಯ
ಏತಕೆ ಭಯ ಮಾಣೋ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೋ'[೨೦೨] ॥

ಕುವೆಂಪುರವರದು ಆಧ್ಯಾತ್ಮಿಕ ಜೀವನ. ಗುರು ಕರುಣೆಯ ಮೂಲಕ ಸಾಧನೆ ಮಾಡಿದ ಸಾಧಕರು. 'ಅರಿವಾಸೆ ಬಿಡು ಇರುವಾಸೆ ತೊಡು' ಎಂಬ ಕವಿವಾಣಿ ಜೀವಂತವಾಗಿ ತೋರುತ್ತದೆ.

'ಈ ಲೋಕವೆಲ್ಲ ಸುಂದರ. ಕಾರಣ ತಾನು ದೇವರ ಅತಿಥಿ. ಈ ಲೋಕದ ಯಾವುದೂ ತನಗೆ ಅಡೆತಡೆಯಾಗದು. ಕಾರಣ ತಾನಿಲ್ಲಿ ಅಗಂತುಕನಷ್ಟೆ. ಈ ಮನಸಿದ್ಧಿಯು ಕವಿಗೆ ಲೋಕ ಬಂಧನವಲ್ಲ, ರಸಸ್ಪಂದನವಾಗುತ್ತದೆ. ಲೋಕ ವಿಮುಖತೆಯಿಂದ ಕವಿಗೆ ರಸಾನುಭವವಾಗದು. ಸೃಷ್ಟಿಯ ಎಲ್ಲ ಸಮಸ್ಯೆಗಳಿಗೆ ಸೌಂದರ್ಯ–ರಸ–ಆನಂದ ಉತ್ತರವಾಗಿ ಬರುತ್ತದೆ[೨೨].

ಕಂಚ್ಯಾಣಿಯವರು ಈ ಮೇಲಿನ ಸಾಲುಗಳಿಂದ ಹೊರತಾಗಿಲ್ಲ ಡಿ.ವಿ.ಜಿ., ಪ್ರ.ತಿ.ನ., ಕುವೆಂಪು, ಬೇಂದ್ರೆ, ಮದರಚೆನ್ನ, ಶಿವರುದ್ರಪ್ಪ, ಕಣವಿ ಮೊದಲಾದ ಅನುಭಾವಿ ಕವಿಗಳ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಕಂಚ್ಯಾಣಿಯವರದು. ಮಕ್ಕಳ ಮನಮುಟ್ಟುವ ಕವಿತೆಯ ರಚನೆಯೊಂದಿಗೆ ಅನುಭಾವ ದರ್ಶನ ಮಾಡುವದು ಕಷ್ಟದ ಕೆಲಸ. ಅರವಿಂದರ, ಸ್ವಾಮಿ ಶಿವಾನಂದರ ಅನುಭಾವ ದರ್ಶನದ, ಪ್ರತಿಮಾ ರೂಪದ ಕಾವ್ಯಕ್ಕೆ ಅನುಭಾವದ ಲೇಪನ ಮಾಡುವುದು ಸರಳವಲ್ಲ. ಇದು ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ಅಲ್ಲಲ್ಲಿ ದರ್ಶನವಾಗುತ್ತದೆ.

ಜಡವನು ಜಾಡಿಸಿ
ಚೇತನ ಚಿಮುಕಿಸಿ
ಕುಲುಕುಲು ನಗುತಿಹನು[೨೦೩] **।**

ಜಗತ್ತಿಗೆ ಬೆಳಕನು ನೀಡುವ ಸೂರ್ಯನು ಚೈತನ್ಯ ಸ್ವರೂಪಿ. ಜಡ ಭಾವದ ಜಗತ್ತಿಗೆ ಅರಿವನ್ನು ನೀಡುವ ಕಾಯಕ ಸೂರ್ಯನದು. ಬೆಳಗಿನ ಜಾವದಲ್ಲಿ ಚುಮುಚುಮು ಬೆಳಕನು ಚೆಲ್ಲಿ ಕುಲು ಕುಲು ನಗುತಿರುವುದು. ಮೂಡಲ ಮನೆಯಿಂದ ಮೆಲ್ಲನೆ ಮೇಲಕೇರುವ ಸೂರ್ಯನ ಬೆಳಕಿಗೆ ಅರಳುವ ಹೂವುಗಳು ಸೃಷ್ಟಿಯ ಸೊಬಗು. ಬೆಳಗಿನ ವರ್ಣನೆ ಮಾಡುವ ಕಂಚ್ಯಾಣಿಯವರು ಕಾಡಿಗೆ-ಬೀಡಿಗೆ, ಗುಡಿಸಲು-ಮಹಡಿಗೆ ಬೆಳಕನು ಬೀರುವ ಚೈತನ್ಯ ಸ್ವರೂಪಿಯಿಂದ. ಆಕಾಶವೆಲ್ಲ ಚಿನ್ನ ಲೇಪನದ ಹೊಂಬಣ್ಣದಂತೆ ಕಾಣುವ ಸ್ವರೂಪ ವಿಸ್ಮಯ. ಬದುಕಿನಲ್ಲಿ ಅಂಧಕಾರದ ಕತ್ತಲೆಯಲ್ಲಿ ಮುಳುಗಿದವರಿಗೆ ಇದು ಕಂಚ್ಯಾಣಿಯವರ ಸಂದೇಶ.

ಬಾಳಿನಲ್ಲಿ ಶುಭದ ಗಳಿಗೆ
ಒಮ್ಮೆ ಬರುವುದು
ಬಂದು ಸರಿದು ಹೋದ ಮೇಲೆ
ಮರಳಿ ಬಾರದು[೨೦೪] **॥**

'ಹೊತ್ತು ಹೋದರೆ ಬಾರದು ಮುತ್ತು ಒಡೆದರೆ ಮತ್ತೆ ಬಾರದು' ಎನ್ನುವ ಗಾದೆ ಬದುಕಿಗೆ ಪೂರಕ. ಕಂಚ್ಯಾಣಿಯವರ ಕವಿತೆಯಲ್ಲಿ ಇದು ಸಾರ್ಥಕವಾಗಿದೆ. ತಿರುಕನು ಕನಸಲ್ಲಿ ರಾಜನಾಗಿ ಮೆರೆಯುತ್ತಿದ್ದು, ವೈರಿ ಬಂದು ಅವನ ಮುತ್ತಿಕೊಳ್ಳಲು ಪ್ರಾಣ ಭಯದಿಂದ ಎಚ್ಚರಾಗಿ ಕನಸು ಒಡೆದು ಹೋಗುವುದು, ಮತ್ತೆ ಕನಸು ಕಾಣಲೆತ್ನಿಸುವ ತಿರುಕ ವ್ಯರ್ಥ ಪ್ರಯತ್ನ ಮಾಡುವನು.

ತಾತ್ವಿಕವಾಗಿ ಕಂಚ್ಯಾಣಿಯವರು ಅನುಭಾವದ ಮೂಸೆಯಲ್ಲಿ ಕವಿತೆ ಹೊಸೆದದ್ದು ಮಾರ್ಮಿಕ. ಬದುಕಿನಲ್ಲಿ ಸಂತಸದ-ಶುಭ ಸಮಯ ಒಂದೇ ಸಲ ಬರುವದು, ಮರಳಿ ಬರದು ಎಂಬ ಸತ್ಯ ವ್ಯಕ್ತಪಡಿಸಿದ್ದಾರೆ.

ಬೆಳದಿಂಗಳ ಸಿರಿಯು
ಕರಗಿಹುದು ನೋಡ ।
ಇದ್ದಾಗ ಬಂಧುಗಳು
ಬಂದು ಮುಕುರುವದ ।
ಬಡತನವು ಬಂದಾಗ
ದೂರ ಸರಿಯುವರು[೨೦೫] **॥**

ಕಂಚ್ಯಾಣಿಯವರ ಕವಿತೆಗಳು ಅನುಭಾಕ್ಕೆ ನಿದರ್ಶನವಾಗಿವೆ ಎಂಬುದು ಇಂಗಿತ. ಮಕ್ಕಳ ಮನಸಿನ ಕಂಚ್ಯಾಣಿಯವರು, ಮಗುವಿನ ಪ್ರಶ್ನೆಯನ್ನು ಚಿತ್ರಿಸುತ್ತ ಚಂದಿರನನ್ನು ಕಳೆಗೆಟ್ಟ ಮುಖದವನು, ಮನೆಯಿಂದ ಹೊರಗೆ ಹಾಕಿಸಿ ಕೊಂಡವನು, ಹಗಲಿನಲ್ಲಿ ಎತ್ತ ಹೊರಟಿಹನು ಎಂಬಲ್ಲಿ ಮಗುವಿನ ಮುಗ್ಧತೆಯನ್ನು ಕಂಡರೆ, 'ಸಿರಿ-ಸಂಪತ್ತು ಇದ್ದಾಗ ಎಲ್ಲ ಬಂಧುಗಳು, ಬಡತನ ಬಂದಾಗ ದೂರ ಸರಿಯುವರು' ಎನ್ನುವಲ್ಲಿ ಬೆಳದಿಂಗಳು ಚಂದಿರನಂತೆ ಕ್ಷಣಿಕವಾದುದೆಂದು ಕಂಚ್ಯಾಣಿಯವರು ಬದುಕಿನ ಸಮಯವನ್ನು ಚಿತ್ರಿಸಿದ್ದಾರೆ.

ಕಂಚ್ಯಾಣಿಯವರ ಸಾಹಿತ್ಯ ನೀರಿನಂತೆ ಪರಿಶುದ್ಧವಾದುದು. ಸಮುದ್ರದ ಅಲೆಗಳಂತೆ ಸಾಗುವ ಕವಿತೆಗಳು ಮಕ್ಕಳಿಗೆ ಮುದ ನೀಡುವಂಥವು. ಅನುಭಾವದ ಹೊಳೆಯಲ್ಲಿ ತೇಲುವ ಮನಸುಗಳಿಗೆ ನೆಮ್ಮದಿಯನ್ನು ನೀಡುವ ಸರಳ ವಿಧಾನದ ನುಡಿಗಳಾಗಿವೆ.

ಕಂಚ್ಯಾಣಿಯವರ ಸಾಹಿತ್ಯವೂ ಕೂಡ 'ನೀರಿನಂತೆ ನಿರ್ಮಲ ಪ್ರವಹನಶೀಲ. ಅದು ಆಶಯಕ್ಕೆ ತಕ್ಕ ಆಕೃತಿ ಪಡೆಯುತ್ತದೆ. ಸರಳ ವ್ಯಕ್ತಿತ್ವದ ಗಾಢ ಪ್ರಭಾವದಂತೆ ಅವರ ಸರಳ ಶೈಲಿ ಗಾಢವೆಂದರೂ ಜಟಿಲವಲ್ಲ. ಅಲ್ಲಿ ವಚನ ಸಾಹಿತ್ಯದ, ಗಾಂಧಿ ಸಾಹಿತ್ಯದ ಸಾತ್ವಿಕ ಶೈಲಿ ತುಂಬಿಕೊಂಡಿದೆ. ಅದು ಸಂಶೋಧನ ಸಾಹಿತ್ಯಕ್ಕೂ ಶ್ರಮಿಸಬಲ್ಲುದು, ವಿಚಾರ ಸಾಹಿತ್ಯಕ್ಕೂ ದುಡಿಯ-ಬಲ್ಲದು, ಮಕ್ಕಳ ಸಾಹಿತ್ಯಕ್ಕೂ ಮಣಿಯಬಲ್ಲುದು'[೨೦೬]. ಇಂತಹ ವಿಶೇಷವಾದ ಲಕ್ಷಣಗಳಿಂದ ಕೂಡಿದ ಕಂಚ್ಯಾಣಿಯವರ ಶಿಶು ಕವಿತೆಗಳು ಕಿರಿಯರನ್ನು, ಹಿರಿಯರನ್ನು ರಂಜಿಸುತ್ತವೆ, ಮನಸೆಳೆಯುತ್ತವೆ.

ಪ್ರಪಂಚದ ಅನೇಕ ರಾಷ್ಟ್ರಗಳಿಗಿಂತ ಭಾರತವು ವಿಶೇಷವಾದ ಪ್ರಾಕೃತಿಕ ಸುಖ, ಸೌಲಭ್ಯ, ಸಂಪತ್ತು, ಹವಾಮಾನದ ಏರಿಳಿತಗಳನ್ನು ಪಡೆದಿದೆ. ಇಲ್ಲಿಯ ಜನರು ಧಾರ್ಮಿಕ, ಸಾಮಾಜಿಕ, ನೈತಿಕ ಮತ್ತು ಸಾಂಸ್ಕೃತಿಕ ವಿಷಯಗಳಲ್ಲಿ ವೈಶಿಷ್ಟ್ಯವುಳ್ಳವರಾಗಿದ್ದಾರೆ. ವಿಭಿನ್ನ ಕಾಯಕಗಳಿಂದ ಜನ ಸಂಸ್ಕೃತಿಯಿಂದ ಇದು ವೈವಿಧ್ಯಪೂರ್ಣ ದೇಶವಾಗಿದೆ. ವಿವಿಧತೆಯಲ್ಲಿ ಏಕತೆ ಸಾಧಿಸಿದೆ. ಬಹುಶಃ ಜಗತ್ತಿನಲ್ಲಿಯ ಯಾವ ದೇಶದಲ್ಲಿ ಇರದಷ್ಟು ವಿಶೇಷತೆಗಳು ಇಲ್ಲಿವೆ. ಹೀಗಾಗಿ ಸಾಮಾಜಿಕ ಮತ್ತು ನೈತಿಕ ವೈಶಿಷ್ಟ್ಯಗಳು ಕಂಚ್ಯಾಣಿಯವರ ಕವಿತೆಗಳಲ್ಲಿ ಹಾಸು ಹೊಕ್ಕಾಗಿವೆ.

'ಬಡವನಾದರೇನು ಮಾದ
ಆಶೆ ಮೋಸವರಿಯನು
ಕನಸಿನಲ್ಲೂ ಸುಳ್ಳು ಹೇಳ
ದಂತ ಸತ್ಯವಂತನು'[೨೦೭] ।

'ಕಾಯಕದಲ್ಲಿ ನಿರತನಾದರೆ ಗುರುವಾದರೂ ಮರೆಯಬೇಕು' ಎನ್ನುವಂತೆ ನಿಷ್ಠೆಯಿಂದ ದುಡಿಯುವ ಮಾದ ಇದ್ದುದರಲ್ಲಿಯೇ ಸಂತಸ ಪಡುವನು. ತನ್ನದಲ್ಲದ

ವಸ್ತುವಿಗೆ ಆಶೆಯನ್ನು ಮಾಡದವನು. ಕೊಡಲಿ ಜಾರಿ ಬಾವಿಯಲ್ಲಿ ಬಿದ್ದಾಗ ಪರೀಕ್ಷೆಗೋಸ್ಕರ ದೇವ ಬೆಳ್ಳಿಯ-ಚಿನ್ನದ ಕೊಡಲಿಯನ್ನು ಕೊಟ್ಟರೂ ತೆಗೆದುಕೊಳ್ಳದ ತನ್ನ ಕಬ್ಬಿಣ ಕೊಡಲಿಯನ್ನು ತೆಗೆದುಕೊಳ್ಳುವ ಮಾದ ಆಶೆ-ಮೋಸದ ಭಾವದವನಲ್ಲ ಎಂಬ ಸತ್ಯದ ಅರಿಕೆ ಮಾಡುವದು ಕಂಚ್ಯಾಣಿಯವರ ವೈಶಿಷ್ಟ್ಯ.

ಆಶೆಬುರುಕ ಈರ ತನ್ನ
ದೆಂದು ಕೈಯ ಚಾಚಿದ
ಕೊಡಲಿಯನ್ನು ಕೊಡದೆ ದೇವ
ಸಿಟ್ಟುಗೊಂಡು ಹೇಳಿದ
'ಈರ ನೀನು ಮೋಸಗಾರ'[೨೦೮].

ದೇವನಿಂದ ದೂಸಿಸಿಕೊಂಡ ಈರ ಪಶ್ಚಾತಾಪ ಪಡುವುದು ಸುಳ್ಳಿನಿಂದ, ಅತೀ ಆಶೆಯಿಂದ ಎನ್ನುವ ಸಂಗತಿ ಮಕ್ಕಳ ಮೇಲೆ ಪರಿಣಾಮ ಬೀರಿ ಆದರ್ಶದ ಬದುಕು ಕಟ್ಟಿಕೊಳ್ಳಲು ನಿದರ್ಶನವಾಗಿದೆ.

ಕಂಚ್ಯಾಣಿಯವರು ಮಕ್ಕಳಲ್ಲಿ ಪರಿಸರ ಪ್ರೇಮ ಮತ್ತು ಪ್ರಜ್ಞೆಯನ್ನು ಬೆಳೆಸುವುದರೊಂದಿಗೆ ನೀತಿಯ ಮನೋಧರ್ಮವನ್ನು ಬಿತ್ತರಿಸುತ್ತಾರೆ.

'ನಾಡ ಜೀವ ನಾಡಿಯಾದ
ನದಿಗೆ ದ್ರೋಹ ಬಗೆವೆವು
ನಾವು ಕುಳಿತ ಟೊಂಗೆಯನ್ನೆ
ನಾವು ಕಡಿಯುತಿರುವೆವು'[೨೦೯] ।

ನಾಡಿನ ಜೀವನಾಡಿ ನದಿಗಳಾದ ಗಂಗೆ, ಯಮನೆ, ತುಂಗೆ, ಕೃಷ್ಣೆ, ಕಾವೇರಿಗಳಲ್ಲಿ ದಿನಾಲು ಸಾವಿರಾರು ಶವಗಳ ಬೂದಿ, ಹೆಣಗಳ ರಾಶಿ ತೇಲಿ ಬಿಡುವದು, ನಗರದ ಕೊಳಚೆ, ಹೇಸಿಗೆ ಬಂದು ಸೇರುವದು, ಹಲವು ಬಗೆಯ ರೋಗ-ರುಜಿನಗಳಿಂದ ಕೂಡಿ ನದಿಗಳು ನರಳುವಂತಾಗಿದೆ. ನದಿಗಳು ನಿರ್ಮಲವಾಗಿರಲು ಬಿಡದೆ ಹಗಲಿರುಳು ಕಲುಷಿತಗೊಳಿಸುತ್ತಿದ್ದೇವೆ, ಎನ್ನುವ ಕಂಚ್ಯಾಣಿಯವರು ನಮ್ಮ ಬದುಕನ್ನು ನಾವೇ ನಾಶಪಡಿಸಿಕೊಳ್ಳುತ್ತಿದ್ದೇವೆ ಎಂದು ನೋವಿನಿಂದ ಹೇಳಿದ್ದಾರೆ.

ಕಾಗೆಯಂತೆ ಕೂಗಿ ಬಳಗ ಕರೆಯಬೇಕು ।
ಕೋಳಿಯಂತೆ ಕರೆದು ಗುಟುಕು ಇಕ್ಕಬೇಕು ।
ನಂಬಿಗಿಟ್ಟು ನಾಯಿಯಂತೆ ನಡೆಯಬೇಕು ।
ಒಳ್ಳೆತನದಿ ಬಾಳಿ ಜಗದಿ ಬೆರೆಯಬೇಕು[೨೧೦] ॥

ಪ್ರಾಣಿ-ಪಕ್ಷಿಗಳಲ್ಲಿರುವ ಗುಣಗಳು ಮಾನವರಲ್ಲಿ ಇಲ್ಲ ಎಂಬ ಅಳಲು ಕಂಚ್ಯಾಣಿಯವರದು. ಸ್ವಾರ್ಥಿಗಳಿಂದ ತುಂಬಿರುವ ಸಮಾಜವನ್ನು ಕುರಿತು ವಚನಕಾರರು ಪ್ರಾಣಿ-ಪಕ್ಷಿಗಳಿಗಿಂತ ಕರಕಷ್ಟ ಮಾನವನ ಬದುಕು ಎಂದಿದ್ದಾರೆ. ಅದರಂತೆ ಕಂಚ್ಯಾಣಿಯವರು ಕಾಗೆ, ಕೋಳಿ, ನಾಯಿ, ಕತ್ತೆಯಂಥ ಪ್ರಾಣಿ-ಪಕ್ಷಿಗಳ ಗುಣ-ಲಕ್ಷಣಗಳನ್ನು ಅಳವಡಿಸಿಕೊಂಡು ನಿಸ್ವಾರ್ಥದಿಂದ ಬದುಕು ಸಾರ್ಥಕ ಮಾಡಿಕೊಳ್ಳಬೇಕೆಂದು ಮಕ್ಕಳಿಗೆ ಸಂದೇಶ ನೀಡಿದ್ದಾರೆ.

ಕಂಚ್ಯಾಣಿಯವರು ದೇಶದ ಅರ್ಥವ್ಯವಸ್ಥೆಯನ್ನು ಅರಿತವರು. ಸರ್ವರೂ ಕೂಡಿ ಚಿಕ್ಕ ಉಳಿಕೆ ಮಾಡಿದರೆ ಸುಂದರ-ಸಮೃದ್ಧಿಯ ಬದುಕು ಸವೆಸಲು ಸಾಧ್ಯವೆಂದು ತಮ್ಮ 'ಉಳಿತಾಯ' ಕವಿತೆಯಲ್ಲಿ ವ್ಯಕ್ತಪಡಿಸುತ್ತಾರೆ, ಹನಿಗೆ ಹನಿಯು ಕೂಡಿ ಹಳ್ಳ ಹರಿಯ ತೊಡಗಿತು, ತೆನೆಗೆ ತೆನೆಯು ಕೂಡಿ ದೊಡ್ಡ ರಾಶಿಯಾಯಿತು. ಎನ್ನುವ ಕಂಚ್ಯಾಣಿಯವರು ಗಳಿಕೆ, ಬಳಿಕೆ, ಉಳಿಕೆಗಳು ಮೂಲ ಮಂತ್ರಗಳೆಂದು ತಿಳಿದು ಬಾಳಬೇಕೆಂದು ಮಕ್ಕಳಿಗೆ ತಿಳಿಯಪಡಿಸುವ ನಿಲುವುಗಳು ಮಾರ್ಗದರ್ಶಕವಾಗಿದೆ.

'ಕುಡಿತದ ಕುತ್ತು' ಕವಿತೆಯು ಸಹ ಸಮಾಜಕ್ಕೆ ಹತ್ತಿದ ಪಿಡುಗನ್ನು ಬಿತ್ತರಿಸುತ್ತದೆ. ಮಡದಿ-ಮಕ್ಕಳ ಮೇಲೆ ಪರಿಣಾಮ ಬೀರುವುದಲ್ಲದೆ, ತನ್ನ ಆರೋಗ್ಯ ಹಾಳು ಮಾಡಿಕೊಂಡು ಸಮಾಜಕ್ಕೆ ಕಂಟಕ ಪ್ರಾಯರಾಗಿ ಕಾಣುವ ಕುಡುಕರು, ಮನೆಯನ್ನು ಮಸಣವಾಗಿಸುವ ದುರಂತವನ್ನು ಕಂಚ್ಯಾಣಿಯವರು ಕಣ್ಣಾರೆ ಕಂಡು ಚಿತ್ರಿಸಿದ್ದು ನೈತಿಕತೆಗೆ ಹಿಡಿದ ಕನ್ನಡಿಯಾಗಿದೆ.

'ನೀನೆನಗಾದರೆ
ನಾ ನಿನಗೆನ್ನುವ
ಮಾತಿನ ಮರ್ಮವನು
ತಿಳಿವುದು ನಡೆವುದು
ರೀತಿಯ ನೀತಿಯ
ಮರೆಯದೆ ನೀನಿನ್ನು'[೨೧೧].

ಸಮಾಜ ಜೀವಿಯಾದ ಮಾನವನು ಸಹಕಾರ ಮನೋಭಾವದಿಂದ ಬಾಳಲು ಕವಿ ಕಂಚ್ಯಾಣಿಯವರು ಕರೆ ನೀಡಿದ್ದಾರೆ. ನಾವು ಇನ್ನೊಬ್ಬರಿಗೆ ಸಹಾಯ-ಸಹಕಾರ ಮಾಡಿದರೆ ಅವರಿಂದ ನಮಗೂ ಸಹಾಯವಾಗುವುದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಕವಿತೆಯಲ್ಲಿ ಕುಂಬಳ ಬಳ್ಳಿ ನೀರು ಹನಿಸೆಂದು ತಿಪ್ಪನಿಗೆ ಕೇಳುವುದು, ಕಸವನ್ನು ಕೀಳೆಂದು ಸವತೆಯ ಬಳ್ಳಿ ಹೇಳುವದು, ಮಾವಿನ ಮರ-ಪೇರಲ ಮರಗಳು ಬೇಲಿಯನ್ನು ಹಾಕಲು ಕೇಳಿದಾಗ ತಿಪ್ಪ ತಿರಸ್ಕರಿಸಿ ಹೋಗುವನು. ತಿರುಗಾಡಿದತಿಪ್ಪ ಹಸಿವಾದಾಗ ಗಿಡ-ಮರ-ಬಳ್ಳಿಗಳಿಗೆ ತಿನ್ನಲು ಬೇಡಿದಾಗ 'ಛೀಛೀ ನಡೆ' ಎಂದಾಗ ಪೆಚ್ಚಾದ ತಿಪ್ಪನ

ದೃಷ್ಟಾಂತವನ್ನು ಅರಿತು ನಡೆಯಲು ಕಂಚ್ಯಾಣಿಯುವರು ಮಕ್ಕಳಲ್ಲಿ ನೈತಿಕ ಹೊಣೆಗಾರಿಕೆಯನ್ನು ಹೆಚ್ಚಿಸಲು ಪ್ರೇರಣೆ ನೀಡಿದ್ದಾರೆ.

'ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯು ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವದರಿಂದ ಮತ್ತು ತನ್ನ ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷೆಯ ಮೂಲಕವೇ ತನ್ನ ಸಮಾಜದೊಂದಿಗೆ ಕೃತಿ ಮುಖೇನ ವ್ಯವಹರಿಸುತ್ತಾನೆ'[೨೧೨] ಎಂಬ ಅಭಿಪ್ರಾಯಕ್ಕೆ ಅನುಸಾರವಾಗಿ ಸಾಹಿತ್ಯ ಹಾಗೂ ಸಮಾಜಗಳ ಸಂಬಂಧ ತೀವ್ರ ಸಂವೇದನಶೀಲವಾದುದೆಂದು ಕಂಡುಬರುತ್ತದೆ. ಇದಕ್ಕನುಗುಣವಾಗಿ ಕಂಚ್ಯಾಣಿಯವರು ಸಮಕಾಲೀನ ಸಮಾಜವನ್ನು ಸ್ಪಂದಿಸಿ ಅಲ್ಲಿರುವ ಆಗು-ಹೋಗುಗಳು, ಲೋಪ-ದೋಷಗಳು, ಹಿರಿಮೆ-ಗರಿಮೆ, ಧಾರ್ಮಿಕ ವಿಚಾರ ಮುಂತಾದವುಗಳನ್ನು ಅಳವಡಿಸಿಕೊಂಡು ಸಾಮಾಜಿಕ ಬದ್ಧತೆಯನ್ನು ತೋರಿಸುವ ಸಾಹಿತ್ಯ ಸೃಷ್ಟಿಸಿವದರು.

'ಹಳೆಯದರಲ್ಲಿಯೆ ಹೊಸತನ ತೋರುವ
ಕೌದಿಯ ಕಲೆಯನು ಮೆಚ್ಚುವರು
ಕಸದಲಿ ರಸವನು ತೆಗೆಯುವ ಅಜ್ಜಿಯ
ಬಿಜ್ಜಿಗೆ ತಲೆಯನು ತೂಗುವರು'[೨೧೩].

ಕಂಚ್ಯಾಣಿಯವರು ಮಕ್ಕಳಿಗಾಗಿ ಮಾತ್ರ ಕವಿತೆ ರಚಿಸಲಿಲ್ಲ, ಸಾಮಾಜಿಕ ದೃಷ್ಟಿಕೋನವಿಟ್ಟುಕೊಂಡು ಕವಿತೆಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಮಾಜದ ಆಗು-ಹೋಗುಗಳನ್ನು, ಕಾರ್ಯವಿಧಾನಗಳನ್ನು ಕಂಡು ಅನುಭವಿಸಿದ ಕಂಚ್ಯಾಣಿಯವರು ನಮ್ಮ ಹಳ್ಳಿಯ ಸಂಸ್ಕೃತಿಯನ್ನು ಚಿತ್ರಿಸುತ್ತಾರೆ. ಹಳ್ಳಿಯಲ್ಲಿ ಹುಟ್ಟ ಬೆಳೆದ ಕವಿ ಕೌದಿಯ ಕಲೆಯನ್ನು ಮೆಚ್ಚಿಕೊಂಡವರು. ಕೌದಿ ಹೊಲಿಯುವ ಅಜ್ಜಿ, ಸಂದಿ-ಗೊಂದಿಯ ಚಿಂದಿಯಿಂದ, ಬಾತಿಗೆ ಬಾರದ ಅರಿವೆಯಿಂದ ಚಂದದ ಚಿತ್ತಾರವಾಗಿ ಹೊಲಿಯುವ ಕೌದಿ ಹೆಣ್ಣು ಮಕ್ಕಳ ಕಲಾಕೌಶಲ್ಯವನ್ನು ಎತ್ತಿ ತೋರುವ ಕಂಚ್ಯಾಣಿಯವರು ಜೀವನ ಪರಂಪರೆಯನ್ನು ನೆನಪಿಸುತ್ತಾರೆ.

'ಹರಿದಂಥ ಸಾಣಿಗೆ ಮುರಿದಂಥ ಛತ್ತರಿ
ಜೋಗೇರು ಸರಿ ಪಡಿಸಿ ಕೊಟ್ಟಾರ
ಹಳೆಯ ಡಬ್ಬಿಯ ಮುರಿದು ಹೊಸದಾಗಿ ಮಾಡ್ಯಾರ
ಕಸದಲ್ಲಿ ರಸವನ್ನು ತೆಗೆದಾರ'[೨೧೪].

ಗ್ರಾಮೀಣ ಸಂಸ್ಕೃತಿಯಲ್ಲಿ ಕಂಡುಬರುವ ವೈವಿಧ್ಯಮಯ ಮುಖಗಳನ್ನು ಕಂಚ್ಯಾಣಿಯವರು ನೋಡಿ ನಲಿದವರು, ಹಾಡಿ ಆಡಿದವರು, ಇವರದು ಸಮಾಜಮುಖಿ ಬದುಕು. ಅಲೆಮಾರಿ ಜನಾಂಗವಾದ ಜೋಗೇರು ವ್ಯಾಪಾರಕ್ಕೆ ಊರೂರು ತಿರುಗುತ್ತ

ಕರಿಮಣಿ ಕಲ್ಮುತ್ತು, ಕನ್ನಡಿ-ಕೈಕಟ್ಟು, ಚಂಡು, ಗೋಲಿಗುಂಡು, ಗಿಲಿಗಿಂಚಿ, ಉಂಗುರು, ಮುತ್ತಿನ ಸರ, ಚಿಮಣಿ, ಲಾಳಿಕೆ, ಪಿನ್ನು, ಡಬ್ಬಣ, ಸೂಜಿ ಹಲವಾರು ವಸ್ತುಗಳನ್ನು ಮಾರುತ್ತ ಸಾಗುವರು. ಮಕ್ಕಳು-ಮಹಿಳೆಯರು ಇವರನ್ನು ಹಿಂಬಾಲಿಸಿ ಸುತ್ತುವರಿಯುವ ದೃಶ್ಯ ಮನಮೋಹಕವಾದುದು.

'ಉಪವಾಸ ವನವಾಸ ಅಜ್ಞಾತವಾಸವನು
ದೀರತನದಲಿ ಕಾದಿ ಗೆದ್ದಾರ
ನ್ಯಾಯ ತಕ್ಕಡಿಯಲ್ಲಿ ತೂಗಿ ಬಂದಾರಿವರು
ದೇವ ಮಾನವರಾಗಿ ನಿಂದಾರ'[೨೧೫]

ಮಕ್ಕಳಲ್ಲಿ ಪೌರಾಣಿಕ ಕಥೆಗಳ ಕಲ್ಪನೆ ಮಾಡಿಕೊಡುವ ಕೆಲಸವನ್ನು ಶಿಶು ಕವಿ ಕಂಚ್ಯಾಣಿಯವರು ಈ ಮೇಲಿನ ಸಾಲುಗಳಲ್ಲಿ ವ್ಯಕ್ತಪಡಿಸುತ್ತಾರೆ.

ಮಗು ಮಹಾಭಾರತದ ವೀರರಾದ ಪಾಂಡವರನ್ನು ಗುರುತಿಸಿಕೊಳ್ಳುವ ಬಗೆಯನ್ನು ಕವಿತೆಯುದ್ದಕ್ಕೂ ಮೂಡಿಬಂದಿದೆ. ದೀಪಾವಳಿಯ ಸಂದರ್ಭದಲ್ಲಿ ಹೆಂಡಿಯ ಪಾಂಡವರನ್ನು ನಿರ್ಮಿಸಿ, ಶೃಂಗರಿಸಿ ನೋಡುವ ಕುತೂಹಲ ಮಗುವಿನದು. ತಮ್ಮ ಆಸ್ತಿಗಳನ್ನು ಕಟ್ಟಿ ಮರದಲ್ಲಿ ಒಟ್ಟುವದು ಒಂದು ಅರ್ಥದಲ್ಲಿ ಪೌರುಷವನ್ನು ಕಳಚಿಕೊಂಡಂತೆ. ಇಂಥ ಪಾಂಡವರು ವಿರಾಟ ರಾಜನ ಆಸ್ಥಾನದಲ್ಲಿ ನಾನಾ ವಿಧದ ವೇಷ ಬದಲಿಸಿಕೊಂಡು ಬದುಕನ್ನು ಕಳೆಯುವುದರೊಂದಿಗೆ, ಹಲವಾರು ರಕ್ಕಸರನ್ನು ಸದೆಬಡಿದುದು, ಉತ್ತರನ ಪೌರುಷ, ಗೋವುಗಳನ್ನು ಸೆರೆಯಿಂದ ಬಿಡಿಸಿದುದು ಮಗುವಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಕಂಚ್ಯಾಣಿಯವರು ಮಕ್ಕಳ ಕವಿತೆಗಳಲ್ಲಿ ಚಿತ್ರಿಸಿದ್ದಾರೆ.

'ಇವನ ಕಂಡು ಹಕ್ಕಿಪಕ್ಕಿ
ಹಾರಿ ಹೋದವು
ತುಡುಗ ದನವು ಹೊಲದ ಸನಿಹ
ಸುಳಿಯಲಾರವು'[೨೧೬]

ಕೃಷಿಕ ಮನೆತನದ ಕಂಚ್ಯಾಣಿಯವರು 'ಬೆಳೆಯನ್ನು ಕಾಯುವ ಬೆಚ್ಚ' ನಿರ್ಮಿಸಿದ ರೀತಿ ಕುತೂಹಲಕಾರಿ. ಹಳೆಯ ಲುಂಗಿ ಸುತ್ತಿ, ಹರಿದ ಅಂಗಿ ತೊಟ್ಟು, ಸುಣ್ಣ ಬಳಿದ ಒಡಕು ಮಡಿಕೆ ತಲೆಗೆ ಇಟ್ಟುಕೊಂಡು, ಬಡಿಗೆ ಹಿಡಿದು ಬಯಲಿನಲ್ಲಿ ನಿಂತವನು, ಚಳಿ-ಮಳೆ-ಬಿಸಿಲಿಗೆ ಜಗ್ಗದವನು. ಪಕ್ಷಿಗಳು-ಪ್ರಾಣಿಗಳು ಇವನನ್ನು ಕಂಡು ಭಯದಿಂದ ಹೊಲದ ಸನಿಹ ಸುಳಿಯಲಾರವು ಕಳ್ಳಕಾಕರು ಹೆದರಿ ಓಡುವರು ಆದರೆ ಮಾತ್ರ ಈತ ಗಸ್ತು ತಿರುಗಲಾರನು, ಗಟ್ಟಿಗಾವಲಾಗಿ ನಿಂತ ಬೆದರು ಬೆಚ್ಚನು' ಎಂದು ರೈತರ ಒಡನಾಡಿ ಬೆಚ್ಚನನ್ನು ಚಿತ್ರಿಸಿದ್ದಾರೆ.

‘ಬಗೆ ಬಗೆ ಬೇನೆಯ ಬರಿಸಿದವು
ವಾಂತಿ ಭೇದಿಯ ಹರಡಿದವು
ಪರಿಸರ ಹಾಳು ಮಾಡಿದವು
ಎಲ್ಲೆಡೆ ಭೀತಿಯ ಬಿತ್ತಿದವು’[೨೧೬]

ಮಾನವನಲ್ಲಿ ಪರಿಸರ ಸಂರಕ್ಷಣೆಯನ್ನು ಮಾಡುವ ಗುಣ ಹಾಗೂ ರೋಗಗಳ ಬಗ್ಗೆ ತಿಳಿಯಪಡಿಸುವ ಕಂಚ್ಯಾಣಿಯವರು, ಜಡ್ಡು ಹರಡಲು ನೊರಜು-ನೊಣ ಕಾರಣ ಎನ್ನುವಲ್ಲಿ ಹಳಸಿದ ಬುತ್ತಿ, ಎಂಜಲು-ಮಂಜಲು ಮುಕ್ಕಿ, ಕೊಳೆತ ಹಣ್ಣಿಗೆ ಜೊಲ್ಲ ಸುರಿಸಿ ನೆಕ್ಕುವ, ಮಿಠಾಯಿ ಅಂಗಡಿ ತಿಂಡಿ-ತಿನಿಸು ಕೆಡಿಸುವ ಕ್ರಿಮಿಗಳು ಸಾಂಕ್ರಾಮಿಕ ರೋಗ ಹರಡಲು ಕಾರಣವಾಗಿವೆ ಎನ್ನುತ್ತಾರೆ.

‘ಮಕ್ಕಳ ಆಶಯ, ಅಭಿರುಚಿಗಳು ಮಾತೃ ಹೃದಯಕ್ಕೆ ಮಾತ್ರ ಗೊತ್ತಾಗುತ್ತದೆ. ತಾಯಿಯ ಅಂತಃಕರಣ, ವಾತ್ಸಲ್ಯ ಪೂರಕ ಒಡನಾಟ ಮಗುವಿನಲ್ಲಿ ಉತ್ಸಾಹದ ಝರಿಯನ್ನು ಚಿಮ್ಮಿಸುತ್ತದೆ ಮತ್ತು ಹೊಸ ಪ್ರಪಂಚವನ್ನು ನಿರ್ಮಿಸುತ್ತದೆ. ತಾಯಿಯು ಮಗುವಿನ ಪಾಲಿಗೆ ಕಾಮಧೇನುವಾಗಿ ಕಂಡುಬರುತ್ತಾಳೆ. ಅವಳೇ ಮೊದಲ ಗುರು, ಮಗು ಮೊದಲು ಮನೆಯ ವಾತಾವರಣದಿಂದ ಶಾಲೆಗೆ ಬರುತ್ತದೆ. ಇಲ್ಲಿಯ ಶಿಕ್ಷಕರು ತಾಯಿಯ ವಾತ್ಸಲ್ಯದಲ್ಲಿ ಮಿಂದು ಬಂದ ಮಕ್ಕಳಿಗೆ ಮಮತೆಯನ್ನು ನೀಡಬೇಕಾಗುತ್ತದೆ. ಅಂದಾಗ ಮಾತ್ರ ಮಕ್ಕಳು ಶಾಲೆಯ ಪರಿಸರಕ್ಕೆ ಹೊಂದಿಕೊಳ್ಳುತ್ತಾರೆ’ ಎನ್ನುವುದು ಕಂಚ್ಯಾಣಿಯವರ ಅಭಿಪ್ರಾಯ.

‘ಶಾಲೆಯಲ್ಲಿ ನನ್ನ ಗುರುಗಳೆಂಥ ಜಾಣರು ।
ಬಾಯಿತುಂಬ ನನ್ನ ಹೆಸರು ಕೂಗಿ ಕರೆವರು’[೨೨೧].

ಮನೆಯಿಂದ ಬಂದ ಮಗು ಶಾಲೆಯ ವಾತಾವರಣಕ್ಕೆ ಹೊಂದಿಕೊಂಡು ಗುರುಗಳಲ್ಲಿ ಪ್ರೀತಿಯನ್ನು ಕಾಣುತ್ತದೆ. ತನ್ನನ್ನು ಮುದ್ದಿನಿಂದ ಕರೆಯುವ, ಮನೆಯವರಿಗಿಂತ ಶಾಲೆಯ ಶಿಕ್ಷಕರು ತನ್ನ ಹೆಸರನ್ನು ಕೂಗಿ ಕರೆಯುವುದು ಮಗುವಿಗೆ ಸಂತಸ ನೀಡುತ್ತದೆ. ಇದು ಕಂಚ್ಯಾಣಿಯವರಲ್ಲಿ ಕಾಣುವ ಮುಗ್ಧ ಮಗುವಿನ ಭಾವ’.

‘ಅಪ್ಪ ಅಜ್ಜ ಕಲಿತ ಶಾಲೆ । ಅಣ್ಣ ಕಲಿತು ಮರೆತ ಶಾಲೆ ॥
ಅಕ್ಕ ಕಲಿತು ಹೋದ ಶಾಲೆ । ನಾನು ಕಲಿಯುತಿರುವ ಶಾಲೆ ॥
ಊರ ನಡುವೆ ಇರುವ ಶಾಲೆ । ಅದರ ಹೆಸರು ಧರ್ಮಶಾಲೆ ॥
ಬಣ್ಣ ಬಳಿಯದಂತ ಶಾಲೆ । ಸುಣ್ಣ ಕಾಣದಂತ ಶಾಲೆ ॥
ಸೋರುತಿಹುದು ತಲೆಯಮೇಲೆ । ಕೊಚ್ಚೆ ಕೊಳಚೆ ನೆಲದ ಮೇಲೆ ।
ಹೇಗೆ ಇದ್ದರೇನು ಶಾಲೆ । ಇದೇ ನಮ್ಮ ಪಾಠ ಶಾಲೆ’[೨೨೨] ॥

ಎನ್ನುವ ಕಂಚ್ಯಾಣಿಯವರು ಪರಂಪರೆಯನ್ನು ಚಿತ್ರಿಸುತ್ತಾರೆ. ತಮ್ಮ ಹಿರಿಯರೂ ಸಹ ಶಾಲೆಯನ್ನು ಕಲಿತು ಆನಂದಿಸಿದವರು. ಅಲ್ಲದೆ ಅಂದಿನ ಹಾಗೂ ಇಂದಿನ ಶಾಲೆಗಳ ಸ್ಥಿತಿ-ಗತಿಗಳನ್ನು ವ್ಯಕ್ತಪಡಿಸಿ ವ್ಯಂಗ್ಯ ಮಾಡಿದರೂ ಆ ಶಾಲೆಯ ಮೇಲಿನ ಪ್ರೀತಿ ಕಳೆದುಕೊಂಡಿಲ್ಲ. ಶಾಲೆಯ ಬಗ್ಗೆ ಕಾಳಜಿಯನ್ನು ವಹಿಸಲು ಹೇಳುವ ಮಾತುಗಳು ಸೂಚ್ಯವಾಗಿ ವ್ಯಕ್ತಗೊಂಡಿವೆ.

'ಸೊಂಡಿ ಗಣಪ ಬಂದಿದ್ದ ।
ಗಂಧದ ಬಟ್ಟು ಇಟ್ಟಿದ್ದ ।
ಮಂಟಪದಾಗ ಕುಂತಿದ್ದ ।
ಉಂಡಿ ಕಡಬು ತಿಂದಿದ್ದ ।
ಇಲಿಯ ಮೇಲೆ ಹತ್ತಿದ್ದ ।
ಸೊಂಡಿ ತಿರುವಿ ಹೊರಟಿದ್ದ'[೨೨೩] ॥

ಮಕ್ಕಳಿಗಾಗಿ ಬರೆಯುವುದು ನಾವಂದುಕೊಂಡಂತೆ ಸುಲಭದ ಮಾತಲ್ಲ. ಅವರ ಆಶೆ-ಆಕಾಂಕ್ಷೆ, ಬೇಕು-ಬೇಡ, ಕನಸು-ನನಸು ಮುಂತಾದ ಮಕ್ಕಳ ಮನೋಧರ್ಮದ ಪರಿಯನ್ನು ಅರಿತವರೇ ಮಕ್ಕಳ ಸಾಹಿತ್ಯ ರಚಿಸಬಹುದು.

'ಆಡುವ ಬನ್ನಿರಿ ಅಂದದ ಆಟ
ಅಂಗಳದಲ್ಲಿ ಆಡುವ ಆಟ
ಎಲ್ಲರು ಸೇರಿ ಆಡುವ ಆಟ
ಸಕ್ಕಾಸರಗಿ ಸುತ್ತುವ ಆಟ
ಕಳ್ಳೇ ಮುಳ್ಳೆ ತಿರುಗುವ ಆಟ
ಗೆಳತಿಯರೆಲ್ಲರು ಕುಣಿಯುವ ಆಟ'[೨೧೯].

ಎನ್ನುವಲ್ಲಿ ಪ್ರಾಸಬದ್ಧವಾದ ಲಯಗಾರಿಕೆ ಎದ್ದು ತೋರುತ್ತದೆ.

ಆಡುವ ಮಕ್ಕಳಿಂದ, ಹಾಡುವ ಹಿರಿಯರಿಂದ ಶಿಶು ಪ್ರಾಸಗಳು ರೂಪು ಪಡೆದುಕೊಂಡಿರಬೇಕು. ಬೆಳೆಯುವ ಮಕ್ಕಳಂತೂ ಶಿಶು ಪ್ರಾಸಗಳಿಗೆ ಮಾರು ಹೋಗುತ್ತವೆ.

ಕಂಚ್ಯಾಣಿಯವರು ಹೆಚ್ಚಿನ ಕವಿತೆಗಳನ್ನು ಪ್ರಾಸಬದ್ಧವಾಗಿ ರಚಿಸಿದರೂ ಅದು ಸಹಜವಾಗಿ ಮೂಡಿಬಂದಿದೆ. ಕೆಲವು ಪದ್ಯಗಳು ಅರ್ಥ ಒಳಗೊಂಡರೆ ಕೆಲವು ಅರ್ಥಗೌಣವಾಗಿವೆ. ಕಂಚ್ಯಾಣಿಯವರ 'ಗುಡು ಗುಡು ಗುಂಡ' ಸಂಕಲನ ಮುಖ್ಯವಾಗಿ ಶಿಶು ಪ್ರಾಸಗಳನ್ನು ಹೊಂದಿದೆ. ೧೯೯೮ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿ ೨೦೦೮ ರಲ್ಲಿ ದ್ವಿತೀಯ ಮುದ್ರಣಗೊಂಡಿದೆ. ಇಲ್ಲಿಯ ಪ್ರತಿಯೊಂದು ಪ್ರಾಸ ಗೀತೆಗಳು ಸಚಿತ್ರಗೊಂಡು ಆಕರ್ಷಣೀಯವಾಗಿ ಮೂಡಿ ಬಂದಿದೆ.

'ಹಬ್ಬ ಬಂತು ಹಬ್ಬ।
ಕಾಮನ ಸುಡುವ ಹಬ್ಬ।
ಲಬ್ಬೆ ಕುಟ್ಟೋ ಹಬ್ಬ।
ಬಣ್ಣ ಉಗ್ಗೋ ಹಬ್ಬ।
ಹೋಳಿ ಹುಣ್ಣಿಮೆ ಹಬ್ಬ।
ಹಬ್ಬ ಬಂತು ಹಬ್ಬ'[೨೨೦]।

ಇಲ್ಲಿ ಯಾವ ಅರ್ಥವನ್ನು ನೀಡದೆ ಕಂಚ್ಯಾಣಿಯವರು ಹೋಳಿಯ ಹಬ್ಬದ ಕಲ್ಪನೆಯನ್ನು ವ್ಯಕ್ತಪಡಿಸಿದ್ದಾರೆ. ಮಕ್ಕಳಲ್ಲಿ ಪರಂಪರೆಯ ಸೂಚನೆ ತಿಳಿಸುವಂತಿದೆ.

ಕಂಚ್ಯಾಣಿಯವರು ಮಕ್ಕಳಲ್ಲಿ ಗಣಪತಿಯ ಕಲ್ಪನೆಯನ್ನು ಈ ರೀತಿ ಮಾಡಿ ಭಕ್ತಿಯನ್ನು ಮೂಡಿಸಿದ್ದಾರೆ.

ಎಲ್ಲದಕ್ಕೂ ಮೊದಲು ವಿಘ್ನನಿವಾರಕನನ್ನು ನೆನೆಯುವಂತೆ ತಮ್ಮ ಸಂಕಲನದ ಮೊದಲನೆಯ ಶಿಶು ಪ್ರಾಸವಾಗಿ ವ್ಯಕ್ತಪಡಿಸಿದ್ದಾರೆ. ಗಣಪನ ಚಿತ್ರಣ ಮಗುವಿಗೆ ಮನದಟ್ಟು ಮಾಡುವ, ಸೊಂಡಿ ಗಣಪ, ಉಂಡಿ ಕಡಬು ತಿಂದಿದ್ದ, ಇಲಿಯ ಮೇಲೆ ಕುಂತಿದ್ದ ಎನ್ನುವಲ್ಲಿ ಸಾರ್ಥಕಗೊಂಡಿದೆ.

'ಅಜ್ಜನು ಬಂದನು ಮನೆಯೊಳಗೆ
ಗುನುಗುನು ಗುಟ್ಟುತ ಬಾಯೊಳಗೆ
ಪೆನ್ನನು ಹಿಡಿದನು ಕೈಯೊಳಗೆ
ಹಾಡನು ಬರೆದನು ಮಕ್ಕಳಿಗೆ'[೨೨೪].

ಕಂಚ್ಯಾಣಿಯವರು ಅನುಭವಿ ಶಿಕ್ಷಕರು, ಮಕ್ಕಳ ಒಡನಾಡಿಗಳು, ಅವರ ಕನಸುಗಳ ಆಳ-ಅಗಲಗಳನ್ನು ಅರಿತು ಬೆರೆತವರು. ಮಕ್ಕಳ ಬುದ್ಧಿ ಭಾವಗಳಿಗೆ ಸ್ಪಂದಿಸುವವರು. ಅದೇ ನಿಲುವಿನಲ್ಲಿ ನಡೆದವರು, ಮಕ್ಕಳ ಸರ್ವ ಮುಖಗಳ ಬೆಳವಣಿಗೆಗಾಗಿ ಕಾವ್ಯ ರಚಿಸಿದರು. ಸ್ವತಃ ಅಜ್ಜನಾದ ಕಂಚ್ಯಾಣಿಯವರು ಮಗುವಿಗೆ ತಾವು ಕಂಡ ಬಗೆಯನ್ನು ಹಾಗೂ ತಮ್ಮ ಕಾರ್ಯವೈಖರಿಯನ್ನು ಮೂಡಿಸಿದ್ದಾರೆ.

ಶಿಕ್ಷಕ-ಸಾಹಿತಿಗಳ ಜೊತೆಗೂಡಿ ವಿದ್ಯಾಭ್ಯಾಸ ಮಾಡುವ ಮಕ್ಕಳು ಸತ್ಪ್ರಜೆಯಾಗುವುದರಲ್ಲಿ ಸಂದೇಹವೇ ಇಲ್ಲ. ಇದರಿಂದ ಅವರಲ್ಲಿ ಪ್ರಾಮಾಣಿಕ ಹಾಗೂ ಸಂಸ್ಕಾರದ ಗುಣಗಳು ತುಂಬಿಕೊಳ್ಳಲು ಸಾಧ್ಯ. ಸಾಹಿತ್ಯ ಸಂಜೀವಿನಿ ಇದ್ದ ಹಾಗೆ. ಅದು ಉತ್ತಮವಾದುದನ್ನಲ್ಲದೆ ಕೆಟ್ಟದನ್ನು ಕೊಡುವುದಿಲ್ಲ. ಸಾಹಿತ್ಯ ಸಂಸ್ಕಾರದಿಂದ ಒಬ್ಬ ವ್ಯಕ್ತಿಯು ಮಾನವೀಯ ಮೌಲ್ಯಗಳುಳ್ಳ ಮಾನವನಾಗಿ ರೂಪುಗೊಳ್ಳುವಲ್ಲಿ ಫಲಕಾರಿಯಾಗಿದೆ. ಇದು ಕಂಚ್ಯಾಣಿಯವರ ಅಭಿಮತ.

ಕಂಚ್ಯಾಣಿಯವರು ಎಲ್ಲ ಪೀಳಿಗೆಗಳ ಜೊತೆಯಾಗಿ ಸಹಜೀವನ ಸಾಗಿಸಿದವರು. ಅಂಕುಡೊಂಕು ಕಾಣಿಸಿದಾಗ ತಿದ್ದಿ-ತೀಡಿ ಸರಳಗೊಳಿಸುತ್ತಾರೆ. ಹಳೆಯ ತಲೆಮಾರಿನ, ಹೊಸ ತಲೆಮಾರಿನ ಸಾಹಿತಿಗಳ ಜೊತೆಗೆ ಇವರ ಒಡನಾಟ. ಇವರ ಶಿಶು ಸಾಹಿತ್ಯದಲ್ಲಿ ಸಂಪ್ರದಾಯದ ಸತ್ವವಿದೆ. ನೈತಿಕ, ಆಧ್ಯಾತ್ಮಿಕ, ಮಾನವೀಯ ಮೌಲ್ಯವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶಬ್ದಗಳ ಸರಪಳಿಯಿದೆ. ಒಂದು ಶಬ್ದವನ್ನು ತೆಗೆಯಲೂ ಬರದು, ಸೇರಿಸಲು ಬರದು ಅಂಥ ಕಾವ್ಯ ರಚನಾ ಕೌಶಲ್ಯ ಕಂಚ್ಯಾಣಿಯವರದು.

'ಜೋಳ ಕುಟ್ಟೇನವ್ವ ಜೋಳ ಕುಟ್ಟೇನವ್ವ
ಜೋಳ ಕುಟ್ಟಿ ಕುಟ್ಟಿ ಕುಟ್ಟಿ
ಬಾನಾ ಮಾಡೇನವ್ವ ।
ಗೋಧಿ ಕುಟ್ಟೇನವ್ವ ಗೋಧಿ ಕುಟ್ಟೇನವ್ವ
ಗೋಧಿ ಕುಟ್ಟಿ ಕುಟ್ಟಿ ಕುಟ್ಟಿ
ಹುಗ್ಗಿ ಮಾಡೇನವ್ವ ।
ಭತ್ತ ಕುಟ್ಟೇನವ್ವ ಭತ್ತ ಕುಟ್ಟೇನವ್ವ
ಭತ್ತ ಕುಟ್ಟಿ ಕುಟ್ಟಿ ಕುಟ್ಟಿ
ಅನ್ನ ಮಾಡೇನವ್ವ'[೨೨೫] **॥**

ಕಂಚ್ಯಾಣಿಯವರ ಕಾವ್ಯ ಜನಪದ ಸಿರಿ ಸತ್ವದಿಂದ ತುಂಬಿಕೊಂಡಿದೆ. ಬಯಲು ಸೀಮೆಯ ರೈತ ಕುಟುಂಬದ ಇವರು ಪಡೆದ ಪ್ರಭಾವವೇ ಅಂಥಹದ್ದು. ಜನಪದ ಸಾಹಿತ್ಯ ಬೆಳೆಯಬೇಕು, ಬೆಳೆದದ್ದು ಬದುಕಿ ಉಳಿಯಬೇಕೆಂಬ ಕಾಳಜಿ ಕಂಚ್ಯಾಣಿಯವರದು.

ಇದಕ್ಕೆ ಪೂರಕವಾಗಿ ಬಿ.ಎಂ.ಶ್ರೀಯವರ ನುಡಿಯನ್ನು ಉದಾಹರಣೆಯಾಗಿ ಕೊಡಬಹುದು. 'ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢ ಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯ ಅಭಿಮಾನಿಗಳೂ, ನಾಡ ಪ್ರೇಮಿಗಳು ಶ್ರದ್ಧೆಯಿಂದ ಮೂಲೆ-ಮೂಲೆಗಳಿಂದಲೂ ತಮ್ಮ-ತಮ್ಮ ಕಡೆಗಳಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದು ಗೂಡಿ, ಒಂದು ದೊಡ್ಡ ಜಾನಪದ ಸಾಹಿತ್ಯ ಕೋಶವಾಗುವುದು......[೨೨೬]'. ಹೀಗೆ ಕಂಚ್ಯಾಣಿಯವರು ದೊಡ್ಡವರ ಮಾತಿನಿಂದ ಜನಪದ ಸಾಹಿತ್ಯದ ಆಶಯವನ್ನು ವ್ಯಕ್ತಪಡಿಸುತ್ತ ತಮ್ಮ ವಿನಯಪೂರ್ವಕವಾದ ಸೌಜನ್ಯತೆಯನ್ನು ಮಕ್ಕಳ ಸಾಹಿತ್ಯದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಬಾಳಿನಲ್ಲಿ ಬರುವ ಆಸರಿಕೆ-ಬೇಸರಿಕೆ, ತವರುಮನೆ, ತಂದೆ-ತಾಯಿಯರ ಮಾಸದ ನೆನಪು, ಗರತಿಯ ಗುಣ-ಸ್ವಭಾವ, ರೂಪ ವರ್ಣನೆಗಳು ಹಿತವಾಗಿ, ಮಿತವಾಗಿ,

ಸರಸವಾಗಿ ಬೀಸುವಾಗ, ಕುಟ್ಟುವಾಗ ಹಾಡಿನ ಮೂಲಕ ಮೂಡುವುದನ್ನು ವಿವರಿಸುವ ಧಾಟಿ, ಲಯ ಕಂಚ್ಯಾಣಿಯವರ ಮಕ್ಕಳ ಕವಿತೆಗಳ ಜೀವಾಳ.

‘ಅಜ್ಜಿಯು ಸರಭರ
ಮೊಸರನು ಕಡೆದು
ಮಜ್ಜಿಗೆ ಮಾಡುವಳು ।
ಉಪ್ಪು ಜೀರಿಗೆ
ಸಾಂಬರ ಸೊಪ್ಪು
ಅಮ್ಮನು ಬೆರೆಸುವಳು’[೨೨೭] ॥

ಗ್ರಾಮೀಣ ಪ್ರದೇಶದ ಸೊಗಡನ್ನು ಬಿಂಬಿಸುವ ಕಂಚ್ಯಾಣಿಯವರು, ಮುಂಜಾವಿನಲಿ ಎತ್ತು-ಎಮ್ಮೆಗಳನ್ನು ಹೊರಗೆ ಬಿಡುವುದು, ಕಸ ಹೊಡೆಯುವುದು, ಹಾಲು ಹಿಂಡುವುದು, ಮಜ್ಜಿಗೆ ಮಾಡುವುದು ಮುಂತಾದ ಕಾರ್ಯಗಳಲ್ಲಿ ತೊಡಗುವ ದೃಶ್ಯ ಮನಮೋಹಕ.

‘ಅಜ್ಜನು ರುಚಿರುಚಿ
ಮಜ್ಜಿಗೆಯನ್ನು
ಸುರುಸುರು ಸುರಿಯುವನು ।
ಅಮ್ಮನ ಜತೆಯಲಿ
ನುಚ್ಚು-ಮಜ್ಜಿಗೆ
ನಾನೂ ಉಣ್ಣುವೆನು’[೨೨೮] ॥

ಭೂದೇವಿಯ ಮಡಿಲಲ್ಲಿ ದುಡಿಯುವ ಒಕ್ಕಲು ಮಕ್ಕಳ ಆಹಾರದ ಕ್ರಮವನ್ನು ಚಿತ್ರಿಸುತ್ತ ಕಂಚ್ಯಾಣಿಯವರು, ‘ನುಚ್ಚು-ಮಜ್ಜಿಗೆ’ ದೇಹದ ಆರೋಗ್ಯಕ್ಕೆ ಉತ್ತಮವಾದುದೆಂದು ತಿಳಿಯಪಡಿಸುತ್ತಾರೆ. ಅಜ್ಜನು ಮಜ್ಜಿಗೆ ಸುರಿಯುವ ವಿಧಾನ ಇವರಿಗೆ ಬೆರಗು ಮೂಡಿಸಿದೆ.

ಕಂಚ್ಯಾಣಿಯವರ ಕಾವ್ಯದಲ್ಲಿ ಜನಪದ ಸಂಸ್ಕೃತಿಯು, ಆಕಳ ಹಿಂದೆ ಕರು ಹೇಗೆ ಬಳುವಳಿಯಾಗಿ ಬರುತ್ತದೆಯೋ ಹಾಗೆಯೇ ಮೂಡಿಬಂದಿದೆ. ಗ್ರಾಮೀಣರ ಧೈವ ಭಕ್ತಿ, ತವರುಮನೆ, ಸರಸ-ವಿರಸ, ಆಸರಿಕೆ-ಬೇಸರಿಕೆ, ಹೀಗೆ ಬದುಕಿನ ಸಮಗ್ರ ಭಾವಗಳ ಅಭಿವ್ಯಕ್ತಿಯನ್ನು ಕಾಣುತ್ತೇವೆ. ಕಂಚ್ಯಾಣಿಯವರ ಮುಖ್ಯ ಉದ್ದೇಶ, ಮುಂದಿನ ಪೀಳಿಗೆಯು ಜನಪದ ಸಾಹಿತ್ಯದ ಪ್ರಾಮುಖ್ಯತೆಯನ್ನು ತಿಳಿದುಕೊಂಡು, ಜೀವನ ಮೌಲ್ಯಗಳನ್ನು ಅನುಸರಿಸಲಿ ಎನ್ನುವದರೊಂದಿಗೆ ಕಂಚ್ಯಾಣಿಯವರ ಜನಪದ ಸಂಸ್ಕೃತಿಯ ಕಾಳಜಿ ಅಭಿವ್ಯಕ್ತಗೊಳ್ಳುತ್ತದೆ.

ಹೀಗೆ ಕಂಚ್ಯಾಣಿಯವರ ಮಕ್ಕಳ ಕಾವ್ಯ ಕೌಟುಂಬಿಕ, ವಾತ್ಸಲ್ಯ, ನಿಸರ್ಗ ಕವಿತೆಗಳು, ಅನುಭಾವ ದೇಶಾಭಿಮಾನ ನೀತಿಯ-ಸಾಮಾಜಿಕ ಕವಿತೆಗಳ ನೆಲೆಗಳಲ್ಲಿ ಮೂಡಿನಿಂತಿದೆ.

ಆಧುನಿಕ ಸಮಾಜ ವೇಗವಾಗಿ ಬೆಳೆಯುತ್ತಿರುವುದರಿಂದ ಅವಿಭಕ್ತ ಕುಟುಂಬಗಳು ಒಡೆದು ಚಿಕ್ಕ-ಚೊಕ್ಕ ಸಂಸಾರದ ಮಕ್ಕಳು ಅಜ್ಜಿಯ ಕಥೆಗಳಿಂದ ವಂಚಿತರಾಗಿದ್ದಾರೆ. ಇಂಥ ಪರಿಣಾಮದಿಂದ ಮುಕ್ತಗೊಳ್ಳಲು ಕಂಚ್ಯಾಣಿಯವರ ಮಕ್ಕಳ-ಮಕ್ಕಳಿಗಾಗಿ ಇರುವ ಕಥೆಗಳು ಸಾಮಾಜಿಕ ಸಮಸ್ಯೆಗಳನ್ನು ದೂರಗೊಳಿಸಿ ಮನಸೂರೆಗೊಂಡಿವೆ.

ಕಂಚ್ಯಾಣಿಯುವರ ಸಾಹಿತ್ಯವನ್ನು ಅವಲೋಕಿಸಿದಾಗ ಮುಖ್ಯವಾಗಿ ಕಂಡುಬರುವದು, ಹಳ್ಳಿಗರ ಬದುಕನ್ನು ಉದ್ಧರಿಸುವ, ಮಕ್ಕಳ ಮನವನ್ನು ತಿದ್ದುವ, ರಾಷ್ಟ್ರಭಕ್ತಿ ಬೆಳಗಿಸುವ ಆದರ್ಶಗಳಿಂದ ಇವರ ಬರವಣಿಗೆ ರೂಪುಗೊಂಡಿದೆ. ಗ್ರಾಮೀಣ ಪರಿಸರದಲ್ಲಿ ಸಾಮಾನ್ಯ ಕೃಷಿ ಕಾಯಕದ ಮನೆತನದಲ್ಲಿ ಹುಟ್ಟಿ-ಬೆಳೆದ ಕಂಚ್ಯಾಣಿಯವರದು ಸ್ವಯಂ ಪ್ರತಿಭೆ; ಕ್ರಿಯಾಶೀಲ ಮನೋಭಾವದ ಹಿನ್ನೆಲೆಯುವಳ್ಳ ಬದುಕು. ಸದಾ ಓದಿನಲ್ಲಿ ತಲ್ಲಿನರಾಗುವ, ಸಾಮಾಜಿಕ ಚಟುವಟಿಕೆಯ ವ್ಯಕ್ತಿತ್ವ ಇವರದು.

ಜೀವನದಲ್ಲಿ 'ಕಾಯಕ'ಕ್ಕೆ ಮಹತ್ವ ಕೊಟ್ಟ ಕಂಚ್ಯಾಣಿಯವರು, ಕಾಯಕವನ್ನು ಪವಿತ್ರ ದೃಷ್ಟಿಯಿಂದ ನೋಡಬೇಕು. ಯಾವ ಕಾಯಕವಾದರೇನು ಅದರಲ್ಲಿ, ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಬಾಳಿದರೆ ಯಶಸ್ಸು ಖಂಡಿತ. 'ಕ್ರೀಯಾಶೀಲ ಮನೋಭಾವ ಹೊಂದಿದ ಜನರಿಂದಲೇ ಸದೃಢ ಹಾಗೂ ಸಮೃದ್ಧ ಸಮಾಜ ನಿರ್ಮಾಣ ಸಾಧ್ಯ; 'ಯುವಕರಲ್ಲಿ ಈ ವಿಚಾರಗಳು ಬೆಳೆಯಬೇಕು, ಅರಳಬೇಕು' ಎಂಬ ಮೊದಲಾದ ಅಭಿಪ್ರಾಯಗಳನ್ನು ಅವರು ಹೊಂದಿದ್ದರು.

ಕಂಚ್ಯಾಣಿಯವರ ಕಥಾ ಸಾಹಿತ್ಯವು ಈ ಎಲ್ಲ ಧೋರಣೆಗಳನ್ನು ಅಳವಡಿಸಿಕೊಂಡು ಬೆಳೆದಿದೆ. ಮಕ್ಕಳ ಸಾಹಿತ್ಯದಲ್ಲಿ ಕಥೆ ಹಾಗೂ ಜೀವನ ಚರಿತ್ರೆಗಳು ಪ್ರಧಾನ ಪಾತ್ರವಹಿಸುತ್ತವೆ. ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಜೀವನ ಗಾಥೆಯನ್ನು ಚರಿತ್ರೆ ರೂಪದಲ್ಲಿ, ಕಥಾರೂಪದಲ್ಲಿ ಹೇಳುವದು ಮುಖ್ಯ. ಆದರೆ ಕಂಚ್ಯಾಣಿಯವರಲ್ಲಿ ಈ ರೂಪದ ಜೊತೆಯಲ್ಲಿಯೇ ಇನ್ನೊಂದು ಹೊಸತನವನ್ನು ಕಾಣುತ್ತೇವೆ. ಅದುವೇ 'ಕಥೆಗಳಲ್ಲಿ ಕಾವ್ಯ ನಿರೂಪಣಾ' ವಿಧಾನ.

ಮಕ್ಕಳಿಗೆ ಕಥೆಗಳೆಂದರೆ ತುಂಬಾ ಪ್ರೀತಿ. ಕಥೆ ಹೇಳುವ ಉದ್ದೇಶ ಕೇವಲ ಮನರಂಜನೆ ಮಾತ್ರವಲ್ಲ. ಮಕ್ಕಳು ಒಳ್ಳೆಯ ಮಾರ್ಗದಲ್ಲಿ ನಡೆಯಲು ಕಥೆಗಳು ಪ್ರೇರಣೆ ನೀಡುತ್ತವೆ. ಕಥೆಗಳಲ್ಲಿ ಕಂಚ್ಯಾಣಿಯವರು ಪ್ರಾಣಿ ಪಕ್ಷಿಗಳನ್ನು ಬಳಸಿ ಕಥೆಗಳನ್ನು ಚಿತ್ರಿಸಿದ್ದಾರೆ. ಗುಬ್ಬಿಯೊಂದು ಕಾಳು ತಿನ್ನುವಾಗ ಮುಳ್ಳು ಚುಚ್ಚಿಕೊಂಡು ಕಾಲಿನಿಂದ ರಕ್ತ ಸೋರುವಾಗ ಹೇಳುವ ನುಡಿ ರೋಮಾಂಚನಕಾರಿ. ಆಗ ಅದು ಕೆಂಪಾದ ರಕ್ತವನ್ನು ನೋಡಿ ತನಗಾದ ಗಾಯದ ನೋವನ್ನು ಮರೆತು.

ನನ್ನ ಕುಂಕುಮಾ ನೋಡು ।

ನನ್ನ ಕುಂಕುಮಾ ನೋಡು ।

ಎಂದು ದನಿ ತೆಗೆದು ಹಾಡತೊಡಗಿತು. ಕೆಲವು ದಿನಗಳ ನಂತರ ಮುಳ್ಳು ಚುಚ್ಚಿದ ಗಾಯದಲ್ಲಿ ಕೀವು ತುಂಬಿ ನೋವು ಹೆಚ್ಚಾಗಿ.

ನನ್ನ ಗಂಧಾ ನೋಡು ।

ನನ್ನ ಗಂಧಾ ನೋಡು ।

ಎಂದು ಹರುಷಗೊಂಡಿತು. ಪತಪತನೆ ಕೀವು ತುಂಬಿದ ಗಾಯದಲ್ಲಿ ಗುಬುಗುಬು ಹುಳುಗಳು ಕಾಣಿಸಿದವು. ಆ ಹುಳುಗಳು ಕಚಕಚನೆ ಕಚ್ಚ ತೊಡಗಿದರೂ ಗುಬ್ಬಿಗೆ ಹುಳಗಳನ್ನು ನೋಡಿ ಅಚ್ಚರಿಯಾಯಿತು. ಹುಳ ಕಚ್ಚುವ ಬಾಧೆಯನ್ನು ಮರೆತು,

ನನ್ನ ಮಕ್ಕಳ ನೋಡು ।

ನನ್ನ ಮಕ್ಕಳ ನೋಡು । ಎಂದು

ಹಿಗ್ಗಿನಿಂದ ಹಾಡತೊಡಗಿತು. ಈಗ ನೋವು ಹೆಚ್ಚಾಯಿತು. ನೋವಿನ ಸಂಕಟ ತಾಳಲಾರದೆ ಹಾಂ ಹಾಂ ಎಂದು ಒಂದೇ ಸಮನೆ ನರಳತೊಡಗಿತು. ತನ್ನ ನರಳುವ ದನಿ ಕೇಳಿ ತಾನೇ ಹರುಷಗೊಂಡು,

ನನ್ನ ಗಾನಾ ನೋಡು ।

ನನ್ನ ಗಾನಾ ನೋಡು ।

ಎಂದು ಬಿದ್ದುಕೊಂಡಲ್ಲೇ ಹಾಡತೊಡಗಿತು. ಬರಬರುತ್ತ ಗಾಯ ದೊಡ್ಡದಾಗಿ ಗುಬ್ಬಿ ಸತ್ತೇಬಿಟ್ಟಿತು. ತಾನು ಸತ್ತು ನೆಲಕ್ಕೆ ಬಿದ್ದರೂ ಗುಬ್ಬಚ್ಚಿ ಹಾಡುವುದನ್ನು ಬಿಡಲಿಲ್ಲ.

ನನ್ನ ನಿದ್ದಿ ನೋಡು ।

ನನ್ನ ನಿದ್ದಿ ನೋಡು ।

ಎಂದು ಸಣ್ಣ ದನಿಯಿಂದ ಹಾಡು ಹೇಳುತ್ತಿತ್ತು.

ಹಾಡಿನ ಜಾಡನ್ನು ಹಿಡಿದು ದನಕಾಯುವ ಮಕ್ಕಳು ಓಡಿ ಬಂದು ಗುಬ್ಬಿ ಸತ್ತದ್ದನ್ನು ಕಂಡು ಮರುಗಿದರು. ಅದರ ಹಾಡು ಕೇಳಿ ಖುಷಿಯಿಂದ ಚಪ್ಪಾಳೆ ತಟ್ಟಿ, ಕಾಲಿಗೆ ದಾರ ಕಟ್ಟಿ ರೆಂಬೆಗೆ ತೂಗು ಹಾಕಿದರು. ಗಾಳಿಗೆ ಅತ್ತಿತ್ತ ತೂಗಿ ಮೋಜೆನ್ನಿಸಿ ಮತ್ತೆ.

ನನ್ನ ಜೋಕಾಲಿ ನೋಡು ।

ನನ್ನ ಜೋಕಾಲಿ ನೋಡು ।

ಎಂದು ಹಿಗ್ಗಿನಿಂದ ಹಾಡುತಲಿತ್ತು. ಹೊಲಕ್ಕೆ ಬಂದ ರೈತ ಅದರ ಹಾಡನ್ನು ಕೇಳಿದ, ಅದನ್ನು ಹಾಗೆ ಬಿಡದೆ ನೆಲದಲ್ಲಿ ತಗ್ಗು ತೆಗೆದು ಮಣ್ಣು ಮಾಡಿದ. ಈಗ ಗುಬ್ಬಿಗೆ ಒಂದು ತರಹದ ಸಮಾಧಾನ, ಮತ್ತೆ ಹರುಷದಿಂದ ಶಾಂತ ಸ್ವರದಲ್ಲಿ,

ನನ್ನ ಗಚ್ಚಿನ ಮನಿ ನೋಡು ।

ನನ್ನ ಗಚ್ಚಿನ ಮನಿ ನೋಡು ।

ಹೀಗೆಂದು ಆ ಗುಬ್ಬಿ ಕುಣಿಯಲ್ಲಿಯೇ ಮಲಗಿ ಹಾಡು ಹೇಳುತ್ತಲೇ ಇದೆ. ಸತ್ತು ಮಣ್ಣು ಗೂಡಿದರೂ ಪುಟ್ಟ ಹಕ್ಕಿ ಹಾಡು-ಹೇಳುವುದನ್ನು ಬಿಟ್ಟಿಲ್ಲ. ಇಂದಿಗೂ ತೊಟ್ಟಿಲು ಪದಿ ಹೊಲಕ್ಕೆ ಹೋಗಿ ಹಾಡು ಕೇಳಿ ಎಲ್ಲರೂ ಖುಷಿಪಡುತ್ತಾರೆ. ಎನ್ನುವ ಕಂಚ್ಯಾಣಿಯವರು ಸ್ವತಃ ಕಂಡು-ಉಂಡ ಅನುಭವದ ದೃಶ್ಯ 'ಹಕ್ಕಿಯ ಹಾಡು' ಕಥೆಯಲ್ಲಿ ಮೂಡಿದೆ.

ಹಕ್ಕಿಯ ಬದುಕು ಮಾನವ ಕುಲಕ್ಕೆ ಮಾದರಿಯಾದುದು. ತನ್ನ ನೋವನ್ನು ಮರೆತು, ನೋವನ್ನೇ ಹಾಡಾಗಿ ಸ್ವೀಕರಿಸುವ ಹಕ್ಕಿಯ ಬದುಕು ಆದರ್ಶನೀಯ. ಕಂಚ್ಯಾಣಿಯವರ ಪರಿಸರದಲ್ಲಿ ಇಂತಹ ಹಲವಾರು; ಜನಪದ ನಂಬಿಕೆಯ ಕಥನ ಕವಿತೆಗಳು ಸಿಗುತ್ತವೆ.

ಉಪದೇಶ ಹಾಗೂ ಬೋಧನೆಗಳು ಬದುಕನ್ನು ರೂಪಿಸುತ್ತವೆ. ವ್ಯಕ್ತಿಯ ಕ್ರಿಯಾಶಕ್ತಿಗೆ, ಬುದ್ಧಿಗೆ ನೆರವು ನೀಡುತ್ತವೆ. ಇದರಿಂದ ಮನಸ್ಸು ಬೆಳೆಯುತ್ತದೆ. ಹೇಗೆ ಬದುಕಬೇಕೆಂಬ ತರಬೇತಿ ನೀಡುತ್ತವೆ. ಮನುಷ್ಯನ ಬುದ್ಧಿಶಕ್ತಿಯ ಬೆಳವಣಿಗೆಗೆ ಉಪದೇಶ ಮತ್ತು ಬೋಧನೆಗಳು ಪ್ರಮುಖ ಶಿಖರಗಳು, ಮಕ್ಕಳಲ್ಲಿ ಮತ್ತು ಯುವಕರಲ್ಲಿ ಇವುಗಳನ್ನು ತುಂಬುವುದು ಶ್ರೇಷ್ಠ ಕೆಲಸ.

'ಮಕ್ಕಳು ಎಲೆಯ ಗಿಡದಂತೆ, ಜೇನು ಮೇಣದಂತೆ, ಅವರನ್ನು ತಿದ್ದುವದು ಸುಲಭ. ಒಳ್ಳೆಯ ಮೇಲ್ಪಂಕ್ತಿ ಗುರುಮುಖೇನ ಬರಬಹುದಾದ ವಿದ್ಯಾಭ್ಯಾಸ, ಹಸನಾದ ಮನೆಯ ವಾತಾವರಣ, ಸ್ವಚ್ಛವಾದ ಸಮಾಜ ಜೀವನ ಇವು ದೊರೆತರೆ ಮಗುವಿನಲ್ಲಿ ಉದಯವಾಗುತ್ತಿರುವ ಶಕ್ತಿ-ಸಾಮರ್ಥ್ಯಗಳು ಸಜೀವವಾಗಿ, ಪರಿಪುಷ್ಪವಾಗಿ ಸನ್ಮಾರ್ಗದಲ್ಲಿ ವಿಕಾಸಗೊಂಡು ಬಲಿಯುತ್ತವೆ'[೨೧೮].

'ಆಚಾರಕ್ಕರಸನಾಗು ನೀತಿಗೆ ಪ್ರಭುವಾಗು
ಮಾತಿನೊಳು ಚೂಡಾಮಣಿಯಾಗು । ನನಕಂದ
ಜ್ಯೋತಿಯೇ ಆಗು ಜಗಕೆಲ್ಲ'. ॥

ಎನ್ನುವ ಜನಪದರ ಸಾಲುಗಳಿಗೆ ಬದ್ಧರಾಗಿ ಕಂಚ್ಯಾಣಿಯವರು ಮಕ್ಕಳಿಗೆ ಸಾಹಿತ್ಯ ಕೃಷಿ ಮಾಡಿಕೊಟ್ಟಿದ್ದಾರೆ.

'ಗಿಲ್ ಗಿಲ್ ಗಿಡ್ಡ' ಕಂಚ್ಯಾಣಿಯವರ ಕಥೆಗಳಲ್ಲಿ ವಿಶೇಷವಾದುದು. ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವುದರೊಂದಿಗೆ ಹಾಸ್ಯದ ಹೊನಲನ್ನು ಹರಿಸುತ್ತದೆ. ಇದೊಂದು ಗಂಡ-ಹೆಂಡತಿಯರ ಮಧ್ಯ ಹೆಣೆದ ಕಥೆ. ಗಂಡ ಸಿಟ್ಟಿನಿಂದ ಹೆಂಡತಿಯನ್ನು ಕೊಲ್ಲುತ್ತಾನೆ. ಆದರೂ ಅವಳು ಇವನ ಬೆಂಬಡದವಳು. ಕೊನೆಗೆ ತಾನೇ ನಾಶವಾಗುವ ಗಿಡ್ಡನ ಕಥೆ ಸ್ವಾರಸ್ಯಕರವಾದುದು – ಕಂಚ್ಯಾಣಿಯವರ ಕೈ ಚಳಕದಿಂದ.

'ಹಿಂದೆ ನಮ್ಮೂರಲ್ಲಿ ಒಬ್ಬ ಗಿಡ್ಡನಿದ್ದ. ಗಿಡ್ಡ ಎಂದರೆ ಕುಳ್ಳ. ಆತ ಅತೀ ಕುಳ್ಳನಾಗಿದ್ದ. ಎಲ್ಲರೂ ಅವನನ್ನು ಗಿಡ್ಡನೆಂದೇ ಕರೆಯುತ್ತಿದ್ದರು. ಇನ್ನೊಂದು ಸಂಗತಿ, ಅವನ ಹೆಂಡತಿಗೆ ಗಂಡನ ಹೆಸರು ಕೇಳಿದಾಗ ಗಿಡ್ಡ! ಎಂದು ಕಿಲಕಿಲ ನಗುತ್ತಿದ್ದಳು. ಗಿಡ್ಡ ಕೋಪಗೊಂಡು ಅವಳ ಕೆನ್ನೆಗೆ ಜಗಿದು ಜಗಿದು ಬಾರಿಸುತ್ತಿದ್ದ ಅವಳಿಗೆ ಅದು ಮೋಜು.

ಒಂದು ದಿನ ಮುಂಜಾನೆ ಗಿಡ್ಡ ಕೋಣದ ಮೇಲೆ ಕುಳಿತು ತೋಟದ ತುಂಬಾ ಓಡಾಡಿ ಬಿತ್ತತೊಡಗಿದ. ಹೊತ್ತು ನೆತ್ತಿಗೇರಿ ಬಾಯಾರಿ ಹಸಿವೆಯಿಂದ ಕಂಗಾಲಾದನು. ಹೆಂಡತಿ ಬುತ್ತಿ ನೀರು ತಾರದ್ದಕ್ಕೆ ಕೋಪಗೊಂಡನು. ಆಗ ಹೆಂಡತಿ ಗಿಡ್ಡಾ! ಗಿಡ್ಡಾ! ಎಂದು ಅರಚುತ್ತ ಬಂದಳು. ಕೈಯಲ್ಲಿ ಕೊಡಲಿ ಹಿಡಿದು ಶಕ್ತಿಯಿಂದ ಅವಳ ಶಿರ ಕತ್ತರಿಸಿದನು. ಕುತ್ತಿಗೆ ದೂರ ಬಿದ್ದುಕೊಂಡು,

ಕಿಲ್ ಕಿಲ್ ಗಿಡ್ಡ !

ಕಿಲ್ ಕಿಲ್ ಗಿಡ್ಡ !

ಎಂದು ನುಡಿಯುತ್ತ ಕಿಲಕಿಲನೆ ನಗತೊಡಗಿತು. ಇದರಿಂದ ಕೋಪಗೊಂಡ ಗಿಡ್ಡ ಅವಳನ್ನು ಕಡಿದು ಚೂರು ಮಾಡಿ ಹೊಲದ ತುಂಬಾ ಬಿತ್ತಿದನು. ಕೆಲವು ದಿನಗಳಲ್ಲಿ ತೊಗರಿಯ ಗಿಡಗಳು ಹೊಲದ ತುಂಬ ಅಬ್ಬರವಾಗಿ ಬೆಳೆದು, ಕಾಯಿಗಳಾಗಿ ಗಾಳಿ ಬಿಟ್ಟಾಗ,

ಗಿಲ್ ಗಿಲ್ ಗಿಡ್ಡಾ !

ಗಿಲ್ ಗಿಲ್ ಗಿಡ್ಡಾ !

ಎಂದು ಕಾಯಿಗಳಿಂದ ಸದ್ದು ಬರತೊಡಗಿತು.

ಹಠಮಾರಿ ಹೆಂಡತಿ ತೊಗರಿಯ ಗಿಡವಾಗಿ ಬೆಳೆದದ್ದು ತಿಳಿದು, ಹಂಚಿಕೆಯಿಂದ ಕೂಡಲೆ ಕಟ್ಟಿದ್ದ ಕೋಣ ಬಿಚ್ಚಿ ತೊಗರಿಯ ಕಾಯಿಗಳನ್ನು ತಿನ್ನಲು ಬಿಟ್ಟ. ಎಲ್ಲ ತಿಂದ ನಂತರ ಸದ್ದು ನಿಂತಿತು. ಗಿಡ್ಡನಿಗೆ ಸಮಾಧಾನವಾಯಿತು.

ಹುರುಪಿನಿಂದ ಕೋಣನ ಮೇಲೆ ಕುಳಿತು ರಭಸದಿಂದ ಮನೆಗೆ ಸಾಗಿದ. ಆದರೆ –

ಹಂಯಿಕ್ ಹುಂಯಿಕ್ ಗಿಡ್ಡಾ !

ಹಂಯಿಕ್ ಹುಂಯಿಕ್ ಗಿಡ್ಡಾ !

ಎಂದು ಕೋಣ ಒದರತೊಡಗಿತು. ಗಿಡ್ಡನಿಗೆ ಕೇಳುವದಾಗಲಿಲ್ಲ. ಮನೆಗೆ ಬಂದವನೇ ತಡ ಕೋಣವನ್ನು ಮಾದಿಗನಿಗೆ ಕೊಟ್ಟು, ಅದನ್ನು ಕಡಿದು ಕೆರವು ಮಾಡಲು ತಿಳಿಸಿದನು. ಮನೆಗೆ ಬಂದು ತಣ್ಣಗೆ ಕುಳಿತನು.

ಕೆಲವು ದಿನಗಳ ನಂತರ ಸುಂದರ ಕೆರವನ್ನು ಮಾಡಿ ತಂದು ಕೊಟ್ಟ ಮಾದಿಗ, ನೋಡಿ ಹಿಗ್ಗಿನಿಂದ ಹಾಕಿಕೊಂಡು ಹೊಲಕ್ಕೆ ಹೊರಟನು.

ಚರ್ರ್ ಪರ್ರ್ ಗಿಡ್ಡಾ !

ಚರ್ರ್ ಪರ್ರ್ ಗಿಡ್ಡಾ !

ಎಂಬ ಸದ್ದು ಹೆಜ್ಜೆ-ಹೆಜ್ಜೆಗೂ ಕಾಡಿತು. ಕೆರವಾಗಿ ಕಾಡುವ ಹೆಂಡತಿ ಮೇಲೆ ಕೋಪಗೊಂಡು ಹಾದಿಯ ಬದಿಯಲ್ಲಿ ಬೀಸಾಕಿದನು. ಹಿಂದೆ ಬರುವ ಅವನ ನಾಯಿ ಅವನ್ನು ಕಚ್ಚಿ ತಿಂದು,

ಕಂಯಿ ಕುಂಯಿ ಗಿಡ್ಡಾ !

ಕಂಯಿ ಕುಂಯಿ ಗಿಡ್ಡಾ !

ಎಂದು ಒಂದೇ ಸಮನೆ ಕಿರುಚತೊಡಗಿತು. ನಾಯಿಯ ಹೊಟ್ಟೆ ಹೊಕ್ಕ ಹೆಂಡತಿಯ ಸಿಟ್ಟಿನಿಂದ, ಗಪ್ಪನೆ ನಾಯಿಯನ್ನು ಹಿಡಿದು ಕಾಲುಗಳನ್ನು ಕಟ್ಟಿ ಬಾವಿಯಲ್ಲಿ ಎಸೆದನು. ನೀರು ಕುಡಿದು ನಾಯಿ ಸತ್ತು, ಮರುಗಳಿಗೆ,

ಟಮ್ ಟಮ್ ಗಿಡ್ಡ !

ಟಮ್ ಟಮ್ ಗಿಡ್ಡ !

ಎಂಬ ಸದ್ದು ಬಾವಿಯಿಂದ ಕೇಳತೊಡಗಿತು. ಆ ಸದ್ದು ಗಿಡ್ಡನನ್ನು ಅಣಕಿಸುವಂತಾಯಿತು. ಬಾವಿ ಸೇರಿದ ಹೆಂಡತಿಯನ್ನು ಅಲ್ಲಿಯೇ ಹಿಚಕಬೇಕೆಂದು ದಢಂನೆ ಬಾವಿಗೆ ಹಾರಿದ. ಈಸಲು ಬಾರದ ಗಿಡ್ಡ ಬಾವಿಯ ತಳ ಸೇರಿದ ಅವನೊಂದಿಗೆ ಆ ಸದ್ದು ಮುಳುಗಿ ಹೋಯಿತು.

ಕಂಚ್ಯಾಣಿಯವರ ಕಥೆಯಲ್ಲಿ ಕಾವ್ಯ ನಿರೂಪಣಾ ಶೈಲಿ ಮೆಚ್ಚುವಂತಹದ್ದು. ಕೋಪದಿಂದ ವ್ಯಕ್ತಿ ತನ್ನನ್ನು ತಾನೇ ನಾಶ ಮಾಡಿಕೊಳ್ಳುತ್ತಾನೆ. ಕೋಪದಿಂದ ಎಂತಹ ಅನಾಹುತ ಆಗುತ್ತವೆಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಕಂಚ್ಯಾಣಿಯವರ ಈ ಪ್ರಯೋಗ ಕನ್ನಡ ಕಥಾಲೋಕಕ್ಕೆ ಒಂದು ಮಾದರಿಯಾಗಿ ನಿಂತಿದೆಯಲ್ಲದೆ ಇದೊಂದು ವಿಶಿಷ್ಟ ಪ್ರಯೋಗವೆಂದೇ ಹೇಳಬೇಕು.

ತೌಲನಿಕ ವಿವೇಚನೆ :

ಮಕ್ಕಳ ಸಮಸ್ತ ರೂಪದ ಬೆಳವಣಿಗೆಗೆ ಸಾಹಿತ್ಯ ಅವಶ್ಯಕ. ಮಕ್ಕಳ ವಯಸ್ಸು, ಮನೋಭೂಮಿಕೆಗೆ ಅನುಗುಣವಾಗಿ ಪರಿಚಯವಾಗುವ ವಸ್ತು-ವಿಷಯಗಳನ್ನು ಸರಳ ಭಾಷೆಯಲ್ಲಿ ಅವರಿಗೆ ಆನಂದ ನೀಡುವ ಸಾಹಿತ್ಯವೇ ಮಕ್ಕಳ ಸಾಹಿತ್ಯ ಎನಿಸಿಕೊಳ್ಳುತ್ತದೆ. ಸರಳ ಸುಂದರ ಭಾಷೆ, ಚಿಕ್ಕ-ಚಿಕ್ಕ ವಾಕ್ಯಗಳು, ಪುನರುಕ್ತಿ ಪದಗಳು, ರೂಪಕಗಳಿಂದ ಕೂಡಿದ ಮಕ್ಕಳ ಸಾಹಿತ್ಯ ರಂಜನೀಯವಾಗಿ, ರೋಮಾಂಚನಕಾರಿಯಾಗಿ ಪರಿಣಮಿಸಲು ಸಾಧ್ಯವಿದೆ. ಮಕ್ಕಳ ಮಾನಸಿಕ ಬೆಳವಣಿಗೆ ಸರಿಯಾದ ರೀತಿಯಲ್ಲಿ ಆಗುವಂತೆ ಪ್ರೇರಣೆ, ಪೋಷಣೆ ನೀಡುವುದೇ ಇದರ ಮುಖ್ಯ ಗುಣ.ಕವಿತೆ, ಕಥೆ, ನಾಟಕ, ಚರಿತ್ರೆ ಮೊದಲಾದವು

ಮಕ್ಕಳ ಮುಗ್ಧ ಭಾವಕ್ಕೆ ಚೇತೋಹಾರಿಯಾಗಿ ಪರಿಣಮಿಸಬೇಕು. ಅವರ ಕುತೂಹಲ, ಸಂಶಯಗಳನ್ನು ಪರಿಹಾರಗೊಳಿಸುವ ರೀತಿಯಾಗಿರಬೇಕು. ಮಕ್ಕಳ ಸಾಹಿತ್ಯ ಎಂದ ತಕ್ಷಣ ಬರೆಯುವುದು ಸುಲಭವಾದುದು, ಹಗುರವಾದುದು ಎಂದು ಹೇಳುವುದು ಸರಿಯಲ್ಲ. ಇದು ಎಲ್ಲರಿಗೂ ಸಾಧಿಸುವುದಿಲ್ಲ. ಮಕ್ಕಳ ಒಡನಾಡಿಯಾಗಿದ್ದು ಅವರ ಬೇಕು-ಬೇಡಗಳನ್ನು, ಆಸಕ್ತಿಗಳನ್ನು ಅರಿತುಕೊಂಡವರು ಮಾತ್ರ ಉತ್ತಮ ಮಕ್ಕಳ ಸಾಹಿತ್ಯ ರಚಿಸಬಲ್ಲರು. ಮಕ್ಕಳ ಸಾಹಿತ್ಯದ ವಸ್ತು ಮಕ್ಕಳಿಗೆ ಪರಿಚಿತವಾದುದಾಗಿರಬೇಕು. ಗಹನವಾದ ವಸ್ತುವನ್ನು ಆಯ್ದುಕೊಂಡು ಕವಿತೆ, ಕಥೆಗಳನ್ನು ರಚಿಸುವುದು ಸೂಕ್ತವಲ್ಲ. ಮಕ್ಕಳ ಅಭಿರುಚಿಗಳನ್ನು ಆಧರಿಸಿ ರಚನೆ ಮಾಡಬೇಕು.

ಮಕ್ಕಳಿಗೆ ಸುತ್ತಮುತ್ತಲಿನ ಜನರ, ಪ್ರಾಣಿ-ಪಕ್ಷಿಗಳ ಬಗೆಗೆ ಪರಿಚಯವಿರಬೇಕು. ನನ್ನ ಮನೆ, ಜನ, ಶಾಲೆ, ಗುರುಗಳು, ತೋಟ, ನಾಯಿ, ಬೆಕ್ಕು, ಗಿಳಿ ಮೊದಲಾದವು ಕಾವ್ಯದ ವಸ್ತುಗಳಾಗಿ ಆಯ್ದುಕೊಳ್ಳಬೇಕು. ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಗಾಳಿ, ಮಳೆ, ನೀರು, ಸೂರ್ಯ, ಚಂದ್ರ ಮುಂತಾದ ಸಾಮಾನ್ಯ ಜ್ಞಾನ ನೀಡುವ ಸಂಗತಿಗಳಾಗಿರಬೇಕು. ಹನ್ನೆರಡು ವರುಷದೊಳಗಿನ ಮಕ್ಕಳು ಭಾವಕ್ಕಿಂತ ಬುದ್ಧಿಗೆ ಹೆಚ್ಚು ಒಲವನ್ನು ತೋರಿಸುತ್ತಾರೆ. ಅವರಲ್ಲಿ ನೀತಿಯ, ಚಿಂತನೆಯ, ಹೊಸ ಜಗತ್ತಿನ ಕಲ್ಪನೆ ಮಾಡಿಕೊಡಬೇಕು. ಹಾಗೆಯೇ ಜೀವನ ಮೌಲ್ಯಗಳ ಕುರಿತು ಅಭಿರುಚಿ, ಆದರ್ಶದ ಕನಸು, ಪ್ರೀತಿ-ವಾತ್ಸಲ್ಯ ಭಾವನೆಗಳು ಮೂಡಿಬರಬೇಕು. 'ನಾವು ಎಳೆಯರು ನಾವು ಗೆಳೆಯರು, ಹೃದಯ ಹೂವಿನ ಹಂದರ' ಎಂಬ ಸುಂದರ ಕನಸನ್ನು ಕಾಣುವ ದೃಷ್ಟಿ ಬೆಳೆಸುವ ಕವಿತೆಗಳು ಮೂಡಬೇಕು. ಗುರು-ಹಿರಿಯರಲ್ಲಿ ಭಕ್ತಿ, ಸ್ನೇಹಿತರಲ್ಲಿ ಪ್ರೀತಿ, ಪ್ರಾಣಿಗಳಲ್ಲಿ ದಯೆ, ಕೆಲಸದಲ್ಲಿ ಆಸಕ್ತಿ ಮೂಡುವ ಉದಾತ್ತ ಗುಣಗಳನ್ನು ಬೆಳೆಸಿಕೊಳ್ಳಬೇಕು. ಹದಿನೈದು ವರುಷದೊಳಗಿನ ಮಕ್ಕಳಿಗೆ ಸಾಮಾಜಿಕ ವಾತಾವರಣದ ರೀತಿ-ನೀತಿ, ಆದರ್ಶ ಬದುಕಿನ ಚಿಂತನೆ, ಮೂಡಿಸುವಂತಿರಬೇಕು. ಮೂಢನಂಬಿಕೆ, ಸಾಮಾಜಿಕ ಶೋಷಣೆ, ಮೇಲು-ಕೀಳು ಮೊದಲಾದ ದೃಷ್ಟಿಕೋನಗಳಿಂದ ಭಾವನೆಗಳನ್ನು ಅರಿತುಕೊಳ್ಳುವ ಕಾವ್ಯವಸ್ತು ಹೊಂದಿರಬೇಕು. ಒಳ್ಳೆಯ ಶಿಶುಗೀತೆ ಕವಿ ಹೃದಯದಿಂದ ಹೊರ ಬರಬೇಕಾದರೆ ಭಾಷೆ ಎಂಬ ಸಾಧನ ಸುಂದರವಾಗಿರಬೇಕು. 'ಇತ್ತಿತ್ತಲಾಗಿ ಬಹಳ ಜನ ಮಕ್ಕಳ ಸಾಹಿತ್ಯ ಬರೆಯುತ್ತಾರೆ. ಅವರಲ್ಲಿ ಮಕ್ಕಳಿಗಾಗಿ ಬರೆಯುವವರು ಬಹಳ. ಮಕ್ಕಳಾಗಿ ಬರೆಯುವವರು ತೀರ ವಿರಳ. ಮಕ್ಕಳ ಸಾಹಿತಿಯಾದವನು ಮತ್ತೊಮ್ಮೆ ಮಕ್ಕಳ ಮೃದುವಾದ ಪವಿತ್ರವಾದ ಮನೋಲೋಕದಲ್ಲಿ ವಿಹರಿಸಿ ಮಗುವಿಗೆ ಆಗುವ ಸುಖ-ದುಃಖ, ಸಂತೋಷ-ನೋವು-ನಲಿವುಗಳ ಅನುಭವಪಡೆದು ಸ್ಫೂರ್ತಿ ಉಕ್ಕಿ ಕವನ ಬರೆಯಬೇಕು. ಅಂದರೆ ಮಾತ್ರ ಅದು ನಿಜವಾದ ಮಕ್ಕಳ ಸಾಹಿತ್ಯವಾದೀತು'[೨೯].

ಮಕ್ಕಳ ಸಾಹಿತ್ಯದಲ್ಲಿ ಎಲ್ಲರೂ ಅನುಸರಿಸುವುದು ಒಂದೇ ವಿಧವಾದ ಸೂತ್ರ, ಆದರೆ ಪ್ರತಿಯೊಬ್ಬರೂ ಒಂದೊಂದು ವೈಶಿಷ್ಟ್ಯದಿಂದ ಬರೆವಣಿಗೆಯನ್ನು ಮಾಡಿರುವುದು

ಸಹಜ. ಮಕ್ಕಳ ಭಾವ-ಭಾಷೆಗಳನ್ನು ಗಮನಿಸುವುದು. ಮಕ್ಕಳಿಗೆ ರುಚಿಸುವಂತೆ ನೋಡಿಕೊಳ್ಳುವುದು. ಮಕ್ಕಳ ಉಚ್ಚಾರಕ್ಕೆ ತೊಂದರಯಾಗದಂತೆ ಸುಲಭವಾದ ಸರಳ ಶೈಲಿಯಲ್ಲಿ ಪ್ರಾಸಬದ್ಧವಾಗಿ ಪದಪ್ರಯೋಗ ಮಾಡುವುದೇ ತಂತ್ರಗಾರಿಕೆ. ಇದು ಮಕ್ಕಳ ಮನದ ಮೇಲೆ ಅಚ್ಚೊತ್ತಿದಂತೆ ನಿಲ್ಲಲು ಸಾಧ್ಯವಿದೆ. ಕವಿತೆ ಎನ್ನುವುದು ಭಾಷೆಯಲ್ಲಿ ಸಂಭವಿಸುವ ಒಂದು ಪವಾಡ ಎಂಬುದನ್ನು ಇವತ್ತು ಬಹಳ ಮಂದಿ ಮರೆತೇ ಬಿಟ್ಟಿದ್ದಾರೆ. ಇಂಥ ಭಾಷಾ ಪವಾಡ ಸಂಭವಿಸದೆ ಹೋದಲ್ಲಿ ಕವಿತೆ ಕೇವಲ 'ಕಟ್ಟಡ'ವಾಗುತ್ತದೆಯೇ ವಿನಾ 'ಮನೆ'ಯಾಗುವುದಿಲ್ಲ. ಒಂದು ಸಂಸಾರ ಬಾಳುವೆ ನಡೆಸುತ್ತಿರುವ ಅಂಗೈ ಅಗಲದ ಗುಡಿಸಿಲಿನ ಜೀವಕಳೆ, ಖಾಲಿಬಿದ್ದಿರುವ ಭವ್ಯಬಂಗಲೆಯುಲ್ಲಿ ಕಾಣಲಾರದು. ವಾಸಯೋಗ್ಯವಾದ ಕಟ್ಟಡದ ನಿರ್ಮಾಣವೆಂಬುದು ಕಲಾವಿದನ ಕಸಬುಗಾರಿಕೆಗೆ ಸಂಬಂಧಿಸಿದ ಸಂಗತಿ. 'ನೀನು ಮಾವಿನ ಮರವನ್ನು ಹಿತ್ತಲಲ್ಲಿ ಬೆಳೆಸು, ಕೋಗಿಲೆ ತಾನಾಗಿಯೇ ನಿನ್ನ ಬಳಿಗೆ ಬರುತ್ತದೆ' ಎಂದು ಎಚ್. ಎಸ್. ವೆಂಕಟೇಶ ಮೂರ್ತಿಯವರು ಹೇಳುವ ಮಾತುಗಳು ಮಕ್ಕಳ ಸಾಹಿತ್ಯದ ಮೂಲ ನೆಲೆಯನ್ನು ಅಭಿವ್ಯಕ್ತಗೊಳಿಸುತ್ತವೆ. ಮಕ್ಕಳ ಸಾಹಿತ್ಯ ಮಕ್ಕಳಿಗೆ ಅರ್ಥವಾಗುವುದರ ಜೊತೆಗೆ ಅವರ ಪರಿಸರವು ಪ್ರತಿಬಿಂಬಿತವಾಗುವಂತಿರಬೇಕು. ಯಾಕೆಂದರೆ ಮಕ್ಕಳು ಭಾವನಾ ಜೀವಿಗಳು, ಅವರ ಮನಸ್ಸು ಸಹ ಅಷ್ಟೇ ಮೃದುವಾಗಿರುತ್ತದೆ. ಅನುಕರಣೆಯಲ್ಲಿ ಆನಂದ ಪಡುವ ಆಶೆ ಮಕ್ಕಳಲ್ಲಿರುತ್ತದೆ.

ಮಕ್ಕಳು ಲವಲವಿಕೆಯಿಂದ ಕೂಡಿರಲು, ಉತ್ಸಾಹವೊಂದಿದ್ದರೆ ಎಲ್ಲವುಗಳನ್ನು ಸಾಧಿಸಬಹುದು. ಮಕ್ಕಳ ಕವಿತೆ ಕಥೆಗಳಲ್ಲಿ ನೀತಿ, ಪ್ರಾಮಾಣಿಕತೆ,ಛಲ, ದೇಶಾಭಿಮಾನ, ಸಮಾಜ ಸೇವೆ, ಮನೋಬಲ ಹೆಚ್ಚಿಸುವ ತಂತ್ರಗಳಿರಬೇಕು. ಮಕ್ಕಳಿಗೆ ಪ್ರಿಯವಾದ ಪಕ್ಷಿ-ಪ್ರಾಣಿಗಳ, ಗಿಡಮರಗಳ, ಬೆಟ್ಟ ನದಿಗಳ ಪಾತ್ರಗಳು ತಂತ್ರಗಳಾಗಿ ಬಳಕೆಯಾಗಬೇಕು. ಮಾನವ ಸ್ವಭಾವದ ಸಮಸ್ತ, ರೀತಿ-ನೀತಿಗಳು, ಆಚಾರ-ವಿಚಾರಗಳು, ಆದರ್ಶ ಗುಣಗಳು ಹೊಂದಿರಬೇಕು. ಒಂದು ವಸ್ತುವಿನ ವರ್ಣನೆ ಮಾಡುತ್ತಿರುವಾಗ ಆ ವಸ್ತುವನ್ನು ಮಕ್ಕಳ ಕಣ್ಮುಂದೆ ತಂದು ನಿಲ್ಲಿಸುವ ತಂತ್ರಗಾರಿಕೆಯಿರಬೇಕು. ಮಕ್ಕಳು ಮಾತನಾಡದ ವಸ್ತುಗಳೊಂದಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಮನೋಧರ್ಮದವರಾಗಿರುತ್ತಾರೆ. ಅವರಿಗೆ ಯಂತ್ರ-ತಂತ್ರಗಳ ವೈಜ್ಞಾನಿಕ ವಸ್ತುಗಳು ಕುತೂಹಲ ಮೂಡಿಸುತ್ತವೆ. ಮಕ್ಕಳ ಬುದ್ಧಿ ಕ್ರಿಯಾಶೀಲವಾಗುವ ತಂತ್ರಗಾರಿಕೆ ಇರಬೇಕು. ಇಂದಿನ ಮಕ್ಕಳಿಗೆ ಭವಿಷ್ಯದ ಜೀವನದಲ್ಲಿ ಒಳ್ಳೆಯ ನಾಗರಿಕರಾಗುವ, ದೇಶಭಕ್ತಿ, ಸ್ನೇಹ ಜೀವನ, ಭಾವೈಕ್ಯತೆ ಬೆಳೆಸುವ, ಸಂಸ್ಕೃತಿ ಉಳಿಸುವ ವೈಜ್ಞಾನಿಕ ವಸ್ತುಗಳನ್ನು ಮಕ್ಕಳ ಸಾಹಿತ್ಯ ರಚನೆಯಲ್ಲಿ ಒಳಗೊಂಡಿರಬೇಕು. ಸಾಹಿತ್ಯದ ವಸ್ತು ಮಗುವಿನ ಪರಿಸರದಲ್ಲಿದ್ದರೆ ಸುಂದರ. ಅದು ಮಗುವಿನ ಭಾವ, ಕಲ್ಪನೆ ಮತ್ತು ಕನಸುಗಳಿಗೆ ನಿಲುಕುವಂತಿರಬೇಕು. ಭೌತಿಕ ವಸ್ತುಗಳು, ಭಾವನೆಗಳನ್ನು ಅರಳಿಸುವ ಸೂರ್ಯ, ಚಂದ್ರ, ನಕ್ಷತ್ರಗಳು, ಹೂ, ಹಣ್ಣು, ಪಶು-ಪಕ್ಷಿ ಮುಂತಾದ ವಸ್ತುವಾಗಿರಿಸಿಕೊಂಡು ಸಾಹಿತ್ಯ ನಿರ್ಮಿಸಬಹುದು. ವಿಜ್ಞಾನಕ್ಕೆ ಸಂಬಂಧಪಟ್ಟಂತೆ ಮೊಬೈಲ್,

ಟಿವಿ, ಕಂಪ್ಯೂಟರ್, ವಿಮಾನ ಮೊದಲಾದ ಯಂತ್ರಗಳ ಬಗೆಗಿನ ಮಾಹಿತಿ ನೀಡುವ ಕವನ-ಕಥೆಗಳು ಮಗುವಿನ ಜ್ಞಾನವನ್ನು ಹೆಚ್ಚಿಸುತ್ತವೆ. ಇಂದಿನ ಸಂಕೀರ್ಣ ಬದುಕಿಗೆ ಕಾರಣವಾದ ಜಾತೀಯತೆ, ಮೋಸ, ವಂಚನೆ, ಭ್ರಷ್ಟಾಚಾರ, ಮೂಢನಂಬಿಕೆಗಳನ್ನು ಹೋಗಲಾಡಿಸುವ ಸಾಹಿತ್ಯ ರಚಿಸಬೇಕಿದೆ.

ಮಕ್ಕಳ ಸಾಹಿತ್ಯದ ವಿಷಯ ವಸ್ತು ಮುಖ್ಯವಾಗಿ ಮನೋರಂಜನೆಯನ್ನು ನೀಡುವುದರೊಂದಿಗೆ, ಚಮತ್ಕಾರಿಕವಾಗಿರಬೇಕು. ಜೊತೆಗೆ ಮಗುವಿನ ವಿಚಾರ ಪ್ರಚೋದನೆಗೆ ಪೂರಕವಾಗಿರಬೇಕು. ಸರಳ ಭಾಷೆಯೊಂದಿಗೆ ಚಿಕ್ಕ ಪದಗಳ ವಾಕ್ಯಗಳು ಹೊಂದಿರಬೇಕು. ಮಗುವಿನ ತೊದಲು ಭಾಷೆ ಇದ್ದರೆ ಮತ್ತಷ್ಟು ಸುಂದರ, ತಿಳಿ ಹಾಸ್ಯ ಮಕ್ಕಳು ಬಯಸುವುದು ಸಹಜ. ಪುನರಾವರ್ತನ ಪದಗಳು, ಪ್ರಾಸಪದಗಳು ಮಗುವನ್ನು ಸೆಳೆಯುತ್ತವೆ. ಮಕ್ಕಳ ಪದ್ಯಗಳು ಗೇಯ ಗುಣ ಹೊಂದಿದ್ದರೆ ಮಕ್ಕಳು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾರೆ. ಲಯಕ್ಕೆ ತಕ್ಕಂತೆ ಹಾವ-ಭಾವ ವ್ಯಕ್ತಪಡಿಸುವರು. ಮಕ್ಕಳ ಸಾಹಿತ್ಯ ಆಡಂಬರದ ಅಭಿವ್ಯಕ್ತಿಯನ್ನು ಹೊಂದಿರದೆ ಸ್ಪಷ್ಟತೆ, ರಮ್ಯತೆ, ಸಹಜತೆ, ಸರಳತೆ ಮತ್ತು ಆಡು ಮಾತುಗಳಿಂದ ಕೂಡಿರುವುದೇ ಅದರ ಜೀವಾಳ. 'ಲೇಖಕರು ಬರೆದಿದ್ದನ್ನೆಲ್ಲ ಮಕ್ಕಳು ಸ್ವೀಕರಿಸುವುದಿಲ್ಲ. ಬರೆದದ್ದೆಲ್ಲ ಮಕ್ಕಳ ಸಾಹಿತ್ಯ ಆಗುವುದಿಲ್ಲ' ಬರೆದದ್ದೆಲ್ಲಾ ಮಕ್ಕಳು ಆಸ್ವಾದಿಸುತ್ತಾರೆಂಬುದು ಬರಿ ಭ್ರಮೆಯಾದೀತು' ಎಂದು ಜೆ. ಬ್ರಿಗೆಲ್ ಎಂಬ ವಿದ್ವಾಂಸ ಮಕ್ಕಳ ಸಾಹಿತ್ಯದ ಕುರಿತು ಬರವಣಿಗೆಯಲ್ಲಿ ತೊಡಗಿದವರಿಗೆ ಎಚ್ಚರಿಕೆ ನುಡಿಗಳು ನಿದರ್ಶನವಾಗಿ ಹೇಳಿರುವುದು ಗಮನಿಸಬೇಕು. ಮಕ್ಕಳು ಬಹುಬೇಗನೆ ಸಂತಸಗೊಳ್ಳಲು ಕವಿಯ ಪ್ರತಿಭೆಯನ್ನು ಅವಲಂಬಿಸಿರುತ್ತದೆ. ಮಕ್ಕಳನ್ನು ಆಶ್ಚರ್ಯಗೊಳಿಸುವ ಕಲೆ ಕವಿಗಿರಬೇಕು. ಗಾದೆ ಮಾತುಗಳು, ದ್ವಿರುಕ್ತಿಗಳ ಬಳಕೆ, ಪರೋಕ್ಷ ನೀತಿಬೋಧೆ, ಅಲಂಕಾರ, ಸಂಭಾಷಣೆಯ ತಂತ್ರಗಾರಿಕೆ ಮಕ್ಕಳ ಕವಿಯಾದವನಿಗೆ ಅವಶ್ಯಕವಾಗಿ ಬೇಕು.

ಮಕ್ಕಳ ಸಾಹಿತಿಯಾದವನಿಗೆ ವ್ಯಕ್ತಿಗತವಾದ ಶೈಲಿ ಇರುವುದು ಸಹಜ. ಮಕ್ಕಳನ್ನು ಸಮ್ಮೋಹನಗೊಳಿಸುವ ಶೈಲಿ ಅವಶ್ಯಕವಾಗಿರಬೇಕು. ಸಂಕೀರ್ಣತೆ ಇರುವ ಪದಪ್ರಯೋಗ ಮಕ್ಕಳಿಗೆ ಅರ್ಥವಾಗುವುದಿಲ್ಲ. 'ಕಾಣದ ದೇವರನ್ನು ನಾವು ಮುಗ್ಧ ಮಕ್ಕಳಲ್ಲಿ ಕಾಣಬೇಕು. ಯಾಕೆಂದರೆ ಮಕ್ಕಳು ಕೊಡುವ ಖುಷಿ, ಪ್ರೀತಿ, ವಾತ್ಸಲ್ಯ ಪ್ರಸನ್ನತೆ ದೇವರಿಂದಲೂ ಸಾಧ್ಯವಿಲ್ಲ' ಎಂದು ಖಲೀಲ ಗಿಬ್ರಾನ್ ಎಂಬ ವಿದ್ವಾಂಸನು ಮಕ್ಕಳ ಬಗ್ಗೆ ಹೇಳಿರುವ ಮಾತುಗಳು ನಮಗೆ ಮಾದರಿಯಾಗಿವೆ. ಮಕ್ಕಳಲ್ಲಿ ಆಂತರಿಕವಾಗಿ ಅಡಗಿರುವ ಆನಂದ, ಕಲ್ಪನೆ, ಸಾಹಸ ಪ್ರವೃತ್ತಿ, ಕುತೂಹಲ ಮೊದಲಾದ ಸಂಗತಿಗಳು ವೈಯಕ್ತಿಕವಾಗಿ ವಿಭಿನ್ನವಾಗಿರುತ್ತವೆ. ಮಕ್ಕಳ ಇಂಥ ಒಳನೋಟವನ್ನು ಅರಿತುಕೊಳ್ಳುವುದು ಹಿರಿಯರ, ತಂದೆ-ತಾಯಿ, ಗುರುಗಳ ಮುಖ್ಯ ಕರ್ತವ್ಯವಾಗಿದೆ. 'ಪ್ರೌಢ ಸಾಹಿತ್ಯದ ವಸ್ತುವಿಗೂ ಮಕ್ಕಳ ಸಾಹಿತ್ಯದ ವಸ್ತುವಿಗೂ ಬಹು ವ್ಯತ್ಯಾಸಗಳಿವೆ. ಪ್ರೌಢ ಸಾಹಿತ್ಯವು ತನ್ನ ರಚನಾ ವಿಧಾನಗಳಿಂದ ಒಂದು ಬಗೆಯಾದರೆ, ಮಕ್ಕಳ ಸಾಹಿತ್ಯ ಅದೇ ರಚನಾ ವಿಧಾನಗಳಿಂದ

ಅದರ ಅಂತರಂಗದ ಆಶಯಗಳು ಮತ್ತು ವಿಷಯ ವಸ್ತುಗಳು ಎಲ್ಲವೂ ಬೇರೆ-ಬೇರೆ ಬಗೆಯದಾಗಿರುತ್ತದೆ. ಹೀಗಾಗಿಯೇ ಮಕ್ಕಳ ಸಾಹಿತ್ಯ ನಮಗೆ ಹೆಚ್ಚು ಪ್ರಿಯವಾಗುವುದು. ಸಾಹಿತ್ಯ ಸೃಷ್ಟಿಗೆ ಒಂದು ಪ್ರತಿಭೆ ಸಾಕಾದೀತು. ಆದರೆ ಮಕ್ಕಳ ಸಾಹಿತ್ಯ ಸೃಷ್ಟಿಗೆ ಇಮ್ಮಡಿ ಪ್ರತಿಭೆಯ ಅವಶ್ಯಕತೆ ಇದೆ'[೨೩೦].

ಇಂಗ್ಲೀಷಿನ style ಎಂಬ ಪದವನ್ನು ಕನ್ನಡದಲ್ಲಿ 'ಶೈಲಿ' ಎಂದು ಬಳಸಲಾಗುತ್ತದೆ. 'ಶೈಲಿ ಅಭಿವ್ಯಕ್ತಿಯ ಒಂದು ವಿಧಾನ. ಭಾಷೆಯ ಒಂದು ಮುಖ, ಇದಕ್ಕೆ ಮಹತ್ವ ಬರುವುದು ವೈಯಕ್ತಿಕ ಮತ್ತು ಸಾಂಸ್ಕೃತಿಕ ಅಂಶಗಳಿಂದಲೇ ಹೊರತು ಶಾಬ್ದಿಕ ಅಂಶಗಳಿಂದಲ್ಲ'[೨೩೧]. ಮಾನವನಿಗೆ ವ್ಯಕ್ತಿತ್ವ ಇರುವಂತೆ ಸಾಹಿತ್ಯಕ್ಕೆ ಶೈಲಿ ಅವಶ್ಯಕ. ಶೈಲಿ ಎಂಬ ಪದದ ಬಳಕೆಯಾಗಿರುವುದು ಬರಹಗಾರನ ಬರವಣಿಗೆ ಹಿತವಾಗಿರುವಂತೆ ಮಾಡುವುದು. ಓದುಗನನ್ನು ಮನ ಸೆಳೆಯುತ್ತದೆ. ಮಕ್ಕಳ ಸಾಹಿತ್ಯವೇ ಇರಲಿ ಪ್ರೌಢ ಸಾಹಿತ್ಯವೇ ಇರಲಿ ಶೈಲಿ, ಭಾವನೆ, ಕಲ್ಪನೆಗಳನ್ನು ಅಭಿವ್ಯಕ್ತಿಸುವ ಸಾಧನ ಅಥವಾ ಉಪಕರಣವೆನಿಸಿದೆ. ಈ ಸಾಧನೆಯನ್ನು ಭಾಷೆಯ ಮಾಧ್ಯಮದಿಂದ ಅಭಿವ್ಯಕ್ತಗೊಳಿಸಿದಾಗ ಆ ಮಾಧ್ಯಮವನ್ನು ಕಟ್ಟಿದ ಬಗೆ, ಬಳಸಿದ ರೀತಿಯನ್ನು ವ್ಯಕ್ತಪಡಿಸುತ್ತದೆ. 'ಅರಳುವುದೇ ಜೀವನದ ಪರಮ ಗುರಿ' ಎನ್ನುವ ಮಧುರಚನ್ನರ ಅಮೃತವಾಣಿಯಂತೆ ಮಕ್ಕಳ ಮನಸ್ಸು ಅರಳುವಂತಹ ಸಾಹಿತ್ಯ ರಚನೆಯಾಗಬೇಕು.

ತಂತ್ರ ಎಂಬುದಕ್ಕೆ ತತ್ವ, ಯುಕ್ತಿ, ಉಪಾಯ, ಪದ್ಧತಿ, ನೇಯುವಿಕೆ, ತಕ್ಕ ವಿಧಾನ, ಕೌಶಲ ಮುಂತಾದ ಅರ್ಥಗಳಿವೆ. ಅವು ಸಂದರ್ಭಕ್ಕೆ ತಕ್ಕಂತೆ ಬಳಕೆಯಾಗುತ್ತವೆ. ಸಾಹಿತ್ಯ, ಸಂಗೀತ, ರಾಜಕೀಯ, ಕ್ರೀಡೆ ಯಾವುದೇ ಕಾರ್ಯ ಸಾಧನೆಗೆ ತಂತ್ರಗಳು ಅವಶ್ಯಕವಾಗಿ ಬೇಕು. ಕವಿತೆಗೆ, ಕಥೆಗಳ ರಚನೆಗೆ ಹೊಸ-ಹೊಸ ತಂತ್ರಗಳು ಬೇಕು. 'ಬರಹಗಾರನು ತನ್ನ ಮನಸ್ಸಿಗೆ ಹೊಳೆದ ಭಾವವನ್ನು ಕವನ, ಕಥೆ, ನಾಟಕ ರೂಪದಲ್ಲಿ ಎರಕ ಹೊಯ್ದು ಒಂದು ಮಾತು, ಸ್ವರೂಪ ಕೊಡುವಾಗ ಆತ ಆಲೋಚಿಸುತ್ತಾನೆ. ಕಥನ ರೂಪದಲ್ಲಿ ಹೇಳಬೇಕೋ, ಭಾವಗೀತೆಯಾಗಿ ಹೇಳಬೇಕೋ, ಯಾವ ಲಯವನ್ನು ಆಯ್ದುಕೊಳ್ಳಬೇಕು ಎಂಬುದನ್ನು ನಿರ್ಧರಿಸಿದ ಮೇಲೆ ಆ ಭಾವದ ಸುತ್ತ ಮುತ್ತಲಿನ ವಿಷಯಗಳನ್ನು ಸಂಗ್ರಹಿಸಿ, ಆ ಮೇಲೆ ಯಾವುದು ಹೇಳಬೇಕು, ಯಾವುದು ಬಿಡಬೇಕು, ಎಷ್ಟರ ಮಟ್ಟಿಗೆ ಬೆಳೆಸಬೇಕು, ಎಷ್ಟರ ಮಟ್ಟಿಗೆ ಸಂಕ್ಷಿಪ್ತಗೊಳಿಸಬೇಕೆಂದು ಗೊತ್ತು ಮಾಡಿಕೊಂಡ ಮೇಲೆ ಆದಿ, ಮಧ್ಯ, ವಿಸ್ತಾರ, ಬೆಳವಣಿಗೆ, ಅಂತ್ಯ ಇತ್ಯಾದಿಗಳನ್ನು ಒಂದು ತಂತ್ರ ಬದ್ಧವಾಗಿ ಸಮನ್ವಯಗೊಳಿಸಿ ಮುಂದುವರೆಯುವುದು, ಇದೇ ತಂತ್ರ'[೨೩೨].

ಮಕ್ಕಳ ಅನುಭವಗಳು ಮತ್ತು ಅವರನ್ನು ಕುರಿತಾಗಿರುವ ಸಾಹಿತ್ಯ ರಚಿಸುವವರ ಅನುಭವಗಳು ಹಾಗೂ ಅಭಿವ್ಯಕ್ತಗೊಳಿಸುವ ಕ್ರಮ ಬಹು ಸಂಕೀರ್ಣವಾದುದು. ಆದ್ದರಿಂದ

ಮಕ್ಕಳ ಸಾಹಿತ್ಯದಲ್ಲಿ ಪ್ರತಿಮೆ, ರೂಪಕಗಳು ಮತ್ತು ನುಡಿಗಟ್ಟುಗಳು ಪರಿಭಾಷೆಯ ಮೂಲಕ ರಚಿಸುವುದು ಅವಶ್ಯಕ.

ಕವಿತೆ, ಕಥೆ, ನಾಟಕ, ಕಾದಂಬರಿ, ಪ್ರಬಂಧ, ಜೀವನ ಚರಿತ್ರೆಗಳ ಶೈಲಿಯಿಂದ ಮತ್ತು ಬರವಣಿಗೆಯಲ್ಲಿ ಉಪಯೋಗಿಸಿದ ತಂತ್ರದಿಂದ ಇವನು ಕವಿ ಎಂದೋ ಲೇಖನೆಂದೋ, ಸಾಹಿತಿಯೆಂದೋ ಗುರುತಿಸಬಹುದು. ಒಂದು ಸನ್ನಿವೇಶವನ್ನು ಒಬ್ಬ ಸಾಹಿತಿಗೂ ಹಾಗೂ ಸಾಮಾನ್ಯ ಮನುಷ್ಯ ನೋಡುವ ರೀತಿ ಭಿನ್ನವಾಗಿರುತ್ತದೆ. ಒಂದು ಕವನ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆಗಳ ವಸ್ತುವನ್ನು ಕವಿ ಹೇಳುವ ಅಥವಾ ವ್ಯಕ್ತಗೊಳಿಸುವ ವಿಧಾನವನ್ನು ಶೈಲಿಯೆಂದು ಹೇಳಬಹುದು. ಮಗುವಿಗೆ ಯಾವುದೇ ವಿಷಯವನ್ನು ಆಕರ್ಷಕವಾಗಿ ಹೇಳಿದರೆ ಅದು ಮಗುವಿನ ಮನಸ್ಸಿನಲ್ಲಿ ಗಟ್ಟಿಯಾಗಿ ಉಳಿಯುತ್ತದೆ. ಅಂತಹ ಶೈಲಿಯನ್ನು ಮಕ್ಕಳ ಸಾಹಿತಿಗಳಾದವರು ಅಥವಾ ಬರಹಗಾರರು ತಮ್ಮ ಕೃತಿಗಳಲ್ಲಿ ಅಳವಡಿಸಿಕೊಳ್ಳಬೇಕು. ಆದರೆ ಇದು ಎಲ್ಲರಿಗೂ ಸಾಧ್ಯವಾಗದ ಮಾತು. ಅದಕ್ಕೆ ಅನುಭವ, ಸ್ವಂತ ಪ್ರತಿಭೆ ಮತ್ತು ಮಕ್ಕಳ ಒಡನಾಡಿಗಳಾದವರಿಗೆ ಕರಗತವಾಗುವುದು. ಆಗ ಕೃತಿಗಳಲ್ಲಿ ನೈಜತೆ ಮೂಡಲು ಸಾಧ್ಯವಿದೆ.

ಮಕ್ಕಳಿಗಾಗಿ ಬರೆಯುವ ಕವಿತೆ, ಕಥೆ, ಕಾದಂಬರಿ, ನಾಟಕಗಳನ್ನು ಗೂಡಾರ್ಥವಿಲ್ಲದೆ ಅಭಿವ್ಯಕ್ತಗೊಳಿಸಬೇಕು. ಸರಳವಾದ ಕಠಿಣವಿಲ್ಲದ ಶಬ್ದಗಳ ಭಾಷೆ ಇರಬೇಕು. ಕಲ್ಪನೆಗೆ ಹೆಚ್ಚು ಅವಕಾಶ ನೀಡಿರಬೇಕು. ಅಲಂಕಾರ, ಛಂದಸ್ಸುಗಳ ಬಳಕೆ ಕಡಿಮೆ ಇದ್ದರೆ ಒಳಿತು. ಕನ್ನಡದ ಮಕ್ಕಳ ಸಾಹಿತಿಗಳು ಬರೆದಂತಹ ಕವನ, ಕಥೆ, ನಾಟಕ, ಕಾದಂಬರಿಗಳ ಶೈಲಿ ಬಲು ಸರಳವಾದುದು. ಮಕ್ಕಳ ಮುಗ್ಧ ಮನಸ್ಸನ್ನು ಮುಟ್ಟಿ ಆನಂದದಲ್ಲಿ ತೇಲಾಡಿಸುತ್ತವೆ. ಹೆಚ್ಚಿನ ಪ್ರಮಾಣದ ಸಾಹಿತಿಗಳು ಶಿಕ್ಷಕರಾಗಿದ್ದು ಮಕ್ಕಳ ಮನಸ್ಸನ್ನು ಅರಿತವರಾಗಿದ್ದಾರೆ. ಮಕ್ಕಳನ್ನು ಅತೀ ಹತ್ತಿರದಿಂದ ಕಂಡವರಾಗಿದ್ದಾರೆ.

ಮಗು ಸಹಜವಾಗಿ ತಾಳ, ಲಯಗಳಿಗೆ ಹೊಂದಿಕೊಂಡು ಕುಣಿಯುವಂತೆ ಮಾಡುವ, ಚಿಕ್ಕ-ಚಿಕ್ಕ ಪದ್ಯಗಳು ಬಲು ಇಷ್ಟಪಡುವರು.

'ನಾಗರ ಹಾವೆ ಹಾವೊಳು ಹೂವೆ
ಬಾಗಿಲ ಬಿಲದಲಿ ನಿನ್ನಯ ಠಾವೆ
ಕೈಗಳ ಮುಗಿವೆ ಹಾಲನೀವೆ
ಬಾ ಬಾ ಬಾ ಬಾ ಬಾ ಬಾ ಬಾ ಬಾ'[೨೩೩].

ಈ ಮೋಡಿಯ ಹಾಡನ್ನು ಬಹುಶಃ ಕೇಳದವರು ಇರಲಿಕ್ಕಿಲ್ಲ. ಇಲ್ಲಿಯ ಪ್ರಾಸ, ಲಯಗತಿ, ಗೇಯತೆ, ಪುಂಗಿಯ ನಾದಕ್ಕೆ ಮಣಿಯುವ ಹಾವಿನಂತೆ, ಹಾಡನ್ನು ಆಲಿಸಿ ತಲೆದೂಗದವರಿಲ್ಲ.

ಪಂಜೆಯವರ 'ಉದಯರಾಗ' ಬಹು ಮೌಲಿಕವಾದ ಮಕ್ಕಳ ಪದ್ಯ, ಇಲ್ಲಿಯ ಹೋಲಿಕೆಗಳು, ಉಪಮೆಗಳು ಮಕ್ಕಳನ್ನು ಸೆಳೆಯಲು ಸರಳವಾಗಿವೆ.

'ಮೂಡುವನು ರವಿ ಮೂಡುವನು
ಕತ್ತಲೊಳಗೆ ಜಗಳಾಡುವನು
ಮೂಡಣರಂಗಸ್ಥಳದಲಿ ನೆತ್ತರು ಮಾಡುವನು,
ಕುಣಿದಾಡುವನು'[೨೩೪].

ಮಕ್ಕಳಿಗೆ ಜಗಳಾಡುವುದು, ಕುಣಿದಾಡುವುದು ಇಷ್ಟವಾದ ಸಂಗತಿ. ಮಕ್ಕಳ ಕಲ್ಪನೆಯ, ಅನುಭವದ ಮಿತಿಯೊಳಗೆ ಹೋಲಿಕೆ ಸಹಜವಾಗಿ ಮೂಡಿದೆ. ಈ ಕವಿತೆಗೆ ಆದಿ, ಮಧ್ಯ, ಅಂತ್ಯ ಪ್ರಾಸಗಳು, ಪುನರುಕ್ತಿ, ಗೇಯತೆ ಎಲ್ಲವೂ ಕವಿತೆಯ ಮೆರುಗನ್ನು ಹೆಚ್ಚಿಸಿವೆ. ಮಕ್ಕಳನ್ನು ಮೋಡಿಮಾಡುವ ತಂತ್ರವನ್ನು ಇಲ್ಲಿ ಬಳಸಿದ್ದಾರೆ.

ಮಕ್ಕಳ ಲೋಕದಲ್ಲಿ ಪ್ರಸಿದ್ಧವಾದ ಮತ್ತು ಮಕ್ಕಳಿಗೆ ಆತ್ಮೀಯವಾದ ಪದ್ಯ 'ನಕ್ಷತ್ರ'. ಮಕ್ಕಳನ್ನು ಅದ್ಭುತ ಲೋಕಕ್ಕೆ ಕೆರೆದೊಯ್ಯುವ ತಂತ್ರಗಾರಿಕೆ ಕವನದಲ್ಲಿದೆ.

'ಮಿನುಗೆಲೆ ಮಿನುಗೆಲೆ ನಕ್ಷತ್ರ
ನನಗಿದು ಚೋದ್ಯವು ಬಲುಚಿತ್ರ
ಘನ ಗಗನದಿ ಬಲು ದೂರದಲಿ
ಮಿನುಗುವೆ ವಜ್ರಾಕಾರದಲಿ'[೨೩೫].

ಕುಣಿದು ಕುಪ್ಪಳಿಸುವ ನಡಿಗೆ, ಧಾಟಿ, ಲಯ, ಪ್ರಾಸಗಳು ಕವಿತೆಯಲ್ಲಿ ಮೇಳೈಸಿರುವುದು ಒಂದು ವೈಶಿಷ್ಟ್ಯ. ಶಬ್ದತರಂಗಗಳಲ್ಲಿ ಮಕ್ಕಳು ಮುಳುಗಿ ಏಳುತ್ತ ನಾದ ಮಾಧುರ್ಯಕ್ಕೆ ತಕ್ಕಂತೆ ನರ್ತಿಸುತ್ತ, ಪ್ರಾಸ-ಅನುಪ್ರಾಸಗಳ ಮೆಟ್ಟಿಲುಗಳನ್ನು ಹತ್ತಿ ಇಳಿಯುತ್ತ ಕುಣಿಯುವ ಮಕ್ಕಳ ಚಿತ್ರ ಅಚ್ಚಳಿಯದೆ ಉಳಿಯುವಂತೆ ಮಾಡುತ್ತದೆ. ಇವರ 'ತೆಂಕಣಗಾಳಿಯಾಟ' ದಕ್ಷಿಣ ಕನ್ನಡದ ಮಳೆಯ ಅಬ್ಬರವನ್ನು ನೆನಪಿಸುತ್ತದೆ. ತೆಂಕಣಗಾಳಿಯ ಅಬ್ಬರವನ್ನು ಶಬ್ದಗಳ ಆಟಗಳಿಂದ ಕೂಡಿದ ಗಾರುಡಿಗತನ, ಸ್ವಾರಸ್ಯಪೂರ್ಣವಾದ ಪ್ರಾಸಾನುಪ್ರಾಸಗಳ ಮೂಲಕ ರಮಣೀಯವಾಗಿ ಅಭಿವ್ಯಕ್ತಗೊಳಿಸಿದ್ದಾರೆ ಪಂಜೆಯವರು. ಪಂಜೆಯವರ ಕೈಗೆ ಪದಗಳು ಸಿಕ್ಕರೆ ಸಾಕು, ಸಾಮಾನ್ಯ ಪದಗಳಲ್ಲೂ ಅರ್ಥ ಧ್ವನಿ ಮೈತುಂಬಿ ಬರುತ್ತವೆ. ಪುನರುಕ್ತಿ, ಪ್ರಾಸ, ಎಲ್ಲವೂ ಸೊಗಸಾಗಿ ಮಕ್ಕಳನ್ನು ಮನತಟ್ಟುವ ಮಾರ್ದನಿಗೊಳ್ಳುವ ಸಮ್ಮೋಹನ ಶೈಲಿ ಅನನ್ಯವಾದ ತಂತ್ರಗಾರಿಕೆಯನ್ನು ಹೊಂದಿವೆ.

ಪಳಕಳ ಸೀತಾರಾಮ ಭಟ್ಟರ ಕವಿತೆಗಳು ಮಕ್ಕಳ ಮೇಲೆ ಮೋಡಿ ಮಾಡುವ ಶೈಲಿಯಲ್ಲಿದ್ದು, ಭಾಷೆ ಹಾಗೂ ತಂತ್ರಗಾರಿಕೆಯಲ್ಲಿ ಹೊಸತನ ತುಂಬಿದೆ.

'ದಪ್ಪಗಿರಲಿ ಕಪ್ಪಗಿರಲಿ
ತೆಳ್ಳಗಿರಲಿ ಬೆಳ್ಳಗಿರಲಿ
ದೊಡ್ಡದಿರಲಿ ಚಿಕ್ಕದಿರಲಿ

ಇರುವೆ ಜಾತಿ
ನಡತೆಯಲ್ಲಿ ನೋಡಿದಲ್ಲಿ
ಒಂದೇ ರೀತಿ'[೨೩೬].

ಇಲ್ಲಿ ನವೀನವಾಗಿ ಮೂಡಿ ಬಂದ ಪ್ರಾಸಗಳು ಶಬ್ದ ಜೋಡಣೆ, ಧ್ವನಿ ಪೂರ್ಣವಾದ ವರ್ಣನೆ ಮಕ್ಕಳ ಮನಸ್ಸನ್ನು ಆಕರ್ಷಿಸಿ, ರಂಜಿಸಬಲ್ಲ ಕಲಾತ್ಮಕವಾದ ತಂತ್ರಗಾರಿಕೆ, ನಾಟಕೀಯವಾದ ಶೈಲಿ ಇವರ ಕವಿತೆಗಳಲ್ಲಿ ಕಂಡುಬರುತ್ತವೆ.

'ದೇಶ ದೇಶಗಳನು ಸುತ್ತಿ
ಸ್ನೇಹ ಭಾವಗಳನ್ನು ಬಿತ್ತಿ
ಬೆಳೆಸಬಲ್ಲ ಶಕ್ತಿಯುಳ್ಳ
ಹಕ್ಕಿ ಯಾವುದು?'[೨೩೭].

ಮಕ್ಕಳ ಮನಸ್ಸನ್ನು ಕ್ರಿಯಾಶೀಲಗೊಳಿಸುವ, ಆಸಕ್ತಿ ತುಂಬುವ ಕವಿತೆಗಳು ಸರಳತೆಯಿಂದ ಕೂಡಿವೆ. ಮಕ್ಕಳ ಅನುಭವ ಪ್ರಪಂಚಕ್ಕೆ ನಿಲುಕುವ ವಸ್ತುಗಳನ್ನು ಆರಿಸಿ ಬರೆದಿರುವ ಇವರ ಕವನಗಳ ಶೈಲಿ, ತಂತ್ರ ಮೆಚ್ಚುವಂತಹದ್ದು.

ಮಕ್ಕಳ ಕವನಗಳಲ್ಲಿಯ ಶೈಲಿ, ತಂತ್ರ, ಭಾಷೆ, ರಚನೆಯಲ್ಲಿ ಹೊಸ ವಿಧಾನ ಅಳವಡಿಸಿದ್ದನ್ನು ಕಾಣಬಹುದು. ಕವನಗಳು ಮಕ್ಕಳ ಮನವನ್ನು ಸೆಳೆಯುವ ಹೊಸ ಹೊಸ ತಂತ್ರಗಳನ್ನು ಉಪಯೋಗಿಸಬೇಕು. ವಸ್ತು ಮತ್ತು ತಂತ್ರ ವಿಧಾನಗಳ ದೃಷ್ಟಿಯಿಂದ ಎಷ್ಟು ಮುಖ್ಯವೋ ಅಷ್ಟೇ ಭಾಷೆ ಮತ್ತು ಶೈಲಿ ಸರಳ-ಸುಲಲಿತವಾಗಿರಬೇಕು. ಕವನಗಳ ವಸ್ತು ಯಾವುದೇ ಇರಲಿ ಅದನ್ನು ಹೇಳುವ ರೀತಿ, ಶೈಲಿ, ತಂತ್ರ, ವಿಧಾನಗಳ ಮೇಲೆ ಆ ಕವಿತೆಯ ಯಶಸ್ಸು ಅವಲಂಬಿಸಿರುತ್ತದೆ. ವೈವಿಧ್ಯಮಯವಾದ ವಸ್ತುವಿನ ಆಯ್ಕೆ ಮಕ್ಕಳ ಮನಸ್ಸನ್ನು ಸೆಳೆಯಲು ಸಹಕಾರಿಯಾದರೆ, ವಿಭಿನ್ನವಾದ ತಂತ್ರಗಳ ವಿಧಾನಗಳು ಕವನದ ಮೆರಗನ್ನು ಹೆಚ್ಚಿಸುತ್ತವೆ.

'ವರುಷದುದ್ದ ದುಡಿವ ಜನಕೆ
ಬಿಡುವು ದೊರೆಯುವಂ-ತೆ
ಹಬ್ಬ ಜಗಕೆ ಬರುವುದಂತೆ
ಮರೆಸಲೆಂದು ಚಿಂ-ತೆ,
ಯಾವ ಕಾಲದಲ್ಲೆ ಬರಲಿ
ಯಾವುದಿರಲಿ ಹ-ಬ್ಬ
ಜನವು ನಕ್ಕು ನಲಿಯುತಿರಲಿ
ಹಾಡಿ ಖುಶಿಯ ಕಬ್ಬ,
ಚೆಲುವು ಗೆಲುವು ಚಿಮ್ಮುತಿರಲಿ
ಬರಲಿ ಸುಖದ ಸುಗ್ಗಿ

ಬಾಳ ಕಹಿಯ ನೀಗಿ ಸಿಹಿಯ
ಸವಿಯಲಿ ಮನ ಹಿಗ್ಗಿ'[೨೩೮].

ಪ್ರಾಸದೊಂದಿಗೆ ಸರಳತೆಯು ಕವಿತೆಯಲ್ಲಿ ಮೇಳೈಸಿದೆ. ಸಹಜವಾದ ಸಂವಹನ. ನವೋದಯದ ಮಾದರಿಯ ತಂತ್ರವಾದರೂ ಹೊಸ ವಸ್ತುವಿನ ವಿಧಾನ ಅಭಿವ್ಯಕ್ತಗೊಂಡಿದೆ. ಪಳಕಳರ ಅನೇಕ ಕವನಗಳಲ್ಲಿ ಸಂಭಾಷಣೆಯ ಶೈಲಿ ಮಕ್ಕಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಉದಾಹರಣೆಯಾಗಿ 'ಪುಟ್ಟ ಮತ್ತು ಅಳಿಲು' ಕವನ ನೋಡಬಹುದು. ನಾಟಕೀಯ ತಂತ್ರವನ್ನು ಅಳವಡಿಸಿಕೊಂಡು ತನ್ನ ತನವನ್ನು ಬಿಡದ ಅಳಿಲು ಉತ್ತರಿಸುವ ತಂತ್ರ ಮೆಚ್ಚಲೇಬೇಕು.

ಮಕ್ಕಳ ಗದ್ಯ ಸಾಹಿತ್ಯದಲ್ಲಿ ಶೈಲಿ–ತಂತ್ರ :

ಒಂದು ಕಥೆ, ಕಾದಂಬರಿ ಯಶಸ್ವಿಯಾಗಬೇಕಾದರೆ ಆ ಕಥೆ ಕಾದಂಬರಿಯಲ್ಲಿ ವಸ್ತು–ವಿಷಯ ಮಹತ್ವದ್ದಾಗಿರಬೇಕು. ಈ ಹೊತ್ತಿನ ಮಕ್ಕಳಿಗೆ ವೈಜ್ಞಾನಿಕ ಮತ್ತು ವೈಚಾರಿಕ ವಿಷಯಗಳನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಇಲ್ಲಿ ಕವಿಯ ಅಥವಾ ಕತೆಗಾರನ ವೈಯಕ್ತಿಕತೆಗೆ ಬಿಟ್ಟಿದ್ದು, ಅದು ಪ್ರತಿಯೊಬ್ಬರೂ ವಿಭಿನ್ನವಾಗಿ ಅಭಿವ್ಯಕ್ತಗೊಳಿಸುವ ರೀತಿಯಾಗಿರುತ್ತದೆ. ಓದುತ್ತ ಹೋದಂತೆ ಕುತೂಹಲ ಮೂಡಿಸಬೇಕು. ಆಗ ಮಾತ್ರ ಕಥೆ, ಕಾದಂಬರಿ ಯಶಸ್ವಿಯಾಗುತ್ತದೆ. ಕಥೆಯು ತಲ್ಲೀನಗೊಳಿಸುವ ರೀತಿ ರಸಾನಂದಕ್ಕೆ ಕಾರಣವಾಗುತ್ತದೆ. ಇಂತಹ ಸರಳ ಸುಂದರ ಶೈಲಿ, ಕಥಾವಸ್ತು, ತಂತ್ರಗಳ ದುರ್ಬಲತೆಗಳನ್ನು ಮರೆಸುತ್ತವೆ. ಕಥೆಗಳಲ್ಲಿ ಮತ್ತು ಕಾದಂಬರಿಗಳಲ್ಲಿ ಕುತೂಹಲ ಮೂಡಿಸುವುದೇ ತಂತ್ರಗಾರಿಕೆ.

ಕಥೆಗಳಲ್ಲಿ ನಾಟಕೀಯ ಸಂಭಾಷಣೆಗಳಿದ್ದರೆ ಮಕ್ಕಳಿಗೆ ಮನರಂಜನೆ ಜೊತೆಗೆ ಕುತೂಹಲ ಹೆಚ್ಚಿಸುತ್ತವೆ. ಭಾಷೆಯು ಅತ್ಯಂತ ಸರಳವಾಗಿರಬೇಕು. ಅರ್ಥಗರ್ಭಿತವಾದುದು, ಮನಸ್ಸನ್ನು ಸೆರೆಹಿಡಿಯುವ, ಮತ್ತೆ–ಮತ್ತೆ ಮೆಲುಕು ಹಾಕುವಂತಹ ಭಾಷೆ ಬಳಸಿರಬೇಕು. 'ಕಥೆಗೆ ಇಂಥದೇ ವಸ್ತುವನ್ನು ಆರಿಸಿಕೊಳ್ಳಬೇಕೆಂಬ ನಿರ್ಬಂಧವಿಲ್ಲ. ನೋಡಿದ ಒಂದು ನೋಟ, ಕಂಡ ಒಂದು ಕನಸು, ಪಡೆದ ಒಂದು ಅನುಭವ, ಕೇಳಿದ ಒಂದು ವಿಷಯ– ಕತೆಯ ವಸ್ತು ಆಗಬಹುದು. ಕೇವಲ ವರ್ಣನೆಯ ಮೂಲಕ ಅಥವಾ ಸಂಭಾಷಣೆಯ ಮೂಲಕ ಹೇಗೆ ಬೇಕೋ ಹಾಗೆ ಕತೆ ಹೇಳಬಹುದು. ಒಟ್ಟಿನಲ್ಲಿ ತನ್ನ ಉದ್ದೇಶವನ್ನು ಪ್ರತಿಪಾದಿಸುವಲ್ಲಿ ಕತೆಗಾರ ಸಫಲನಾದರೆ ಆತ ಬರೆದ ಕತೆ ಸಾರ್ಥಕ'[೨೩೯].

ಪಂಜೆಯವರು ಕಥೆಗಳಲ್ಲಿ ಪಾತ್ರಗಳಾಗಿ ತಾವೇ ನಿಲ್ಲುವುದು ಒಂದು ವೈಶಿಷ್ಟ್ಯ. ಅವರ 'ನನ್ನ ಚಿಕ್ಕತಾಯಿ' ಉತ್ತಮ ನಿದರ್ಶನ. 'ವಿವಾಹವಾಗಿದ್ದರೂ ವೈವಾಹಿಕ ಸುಖದಿಂದ ವಂಚಿತೆಯಾದ ಕಥೆಗಾರರ ಚಿಕ್ಕತಾಯಿ ಜಿಪುಣಿ. ಆಕೆಯ ಸರ್ವಸ್ವ ಎಂದರೆ ಆಕೆಯ ಬಳಿಯಿರುವ ಆಭರಣದ ಗಂಟು ಹಾಗೂ ಸ್ವಂತ ಮನೆ. ಅವುಗಳ ಉತ್ತರಾಧಿಕಾರಿಯಾಗುವ

ಆಸೆ ಕಥೆಗಾರರಿಗೆ. ಪ್ರವಾಸವೊಂದರಲ್ಲಿ ಚಿಕ್ಕತಾಯಿಯ ಆಭರಣದ ಗಂಟು ಕಳವಾಗುತ್ತದೆ. ಕಥೆಗಾರರು ಆ ಆಭರಣದ ಗಂಟನ್ನು ಪತ್ತೆ ಹಚ್ಚುವ ಸಂದರ್ಭ, ಅವರ ಒಡನಾಟ, ಹುಡುಕಾಟ, ಕೊನೆಯಲ್ಲಿ ಪೇಜಾಟ, ಜೈಲಿಗೆ ಹೋಗುವ ಪರಿಸ್ಥಿತಿ ಇವು ನನ್ನ ಚಿಕ್ಕತಾಯಿ ಕಥೆಯ ವಸ್ತು. ಕಥೆ ಮುಗಿಯುವವರೆಗೂ ಓದಿಸಿಕೊಂಡು ಹೋಗುವ ಸುಂದರ ಶೈಲಿ ಮಕ್ಕಳ ಮನಸನ್ನು ಸೂರೆಗೊಳ್ಳುವ ಸುಂದರ ತಂತ್ರವಾಗಿದೆ.

ಕಥೆಯ ರಚನೆಯಲ್ಲಿ ಭಾಷೆಗೆ ಪ್ರಾಧಾನ್ಯತೆ, ಭಾಷೆಯಲ್ಲಿ ಹಿಡಿತ ಇದ್ದರೇನೇ ಸಹೃದಯರನ್ನು ಅದು ಸೆಳೆಯಬಲ್ಲುದು. ಸರಳವಾಗಿ ಹೇಳಿದರೆ ಕಥೆ ನೀರಸವಾಗುತ್ತದೆ. ಆದರೆ ಸರಳತೆ ಅನಿವಾರ್ಯವಾದುದು. ಕಥೆ ತನ್ನ ಉದ್ದೇಶವನ್ನು ಸಾರ್ಥಕಪಡಿಸಲು ತನ್ನ ಭಾವ'ವನ್ನು, ದರ್ಶನವನ್ನು ಅಭಿವ್ಯಕ್ತಗೊಳಿಸಲು ಸರಳವಾದ ಭಾಷೆಗಿಂತ ಭಿನ್ನವಾದ ಭಾಷೆ ಬೇಕಾಗುತ್ತದೆ. ಭಾಷಿಕ-ರಚನೆ ಕಥೆಯ ಸಾರ್ಥಕತೆಗೆ ಸಹಾಯ ಮಾಡುತ್ತದೆ. ಸಂದರ್ಭಕ್ಕೆ ತಕ್ಕಂತೆ ಹಾಸ್ಯ ಸಂಭಾಷಣೆಗಳಿರುವುದು ಒಳಿತು.

ಕುವೆಂಪು ಅವರ 'ನರಿಗಳಿಗೇಕೆ ಕೋಡಿಲ್ಲ' ಎಂಬ ಕಥೆಯು ಮಕ್ಕಳಲ್ಲಿ ನೈತಿಕತೆಯನ್ನು ಬೆಳೆಸಲು ಸಹಾಯಕಾರಿಯಾಗಿದೆ. ನಾಟಕೀಯ ಶೈಲಿಯಲ್ಲಿ ಕಥೆ ಓದಿಸಿಕೊಂಡು ಹೋಗುತ್ತದೆ. ಮುಂದೇನಾಯ್ತು ಎಂಬ ಕುತೂಹಲದ ತಂತ್ರಗಾರಿಕೆಯಿದೆ. ಮೂಲತಃ ಇದೊಂದು ಜನಪದ ಕಥೆಯಂತೆ ತೋರುತ್ತದೆ. ಇಲ್ಲಿ ಗುಬ್ಬಕ್ಕನ ಸುಂದರ ಸುಖಮಯ ಕುಟುಂಬ ಮಕ್ಕಳೊಂದಿಗೆ ವಾಸವಾಗಿರುವುದು. ದುಷ್ಟ ಮನಸುಗಳು ಸುಲಭವಾಗಿ ತಮ್ಮ ತನವನ್ನು ಬಿಟ್ಟುಕೊಡುವುದಿಲ್ಲ ಎಂಬುದಕ್ಕೆ ಈ ಕತೆಯಲ್ಲಿ ನರಿಯಣ್ಣ ಗುಬ್ಬಕ್ಕನ ಆತಿಥ್ಯವನ್ನು ಸ್ವೀಕರಿಸಿದರೂ ಅದರ ಮೂರು ಮರಿಗಳನ್ನು ತಿಂದು ಹಾಕುತ್ತದೆ. ಗುಬ್ಬಕ್ಕ ಗಟ್ಟಿ ಮನಸ್ಸಿನಿಂದ ತನಗಾದ ಅನ್ಯಾಯವನ್ನು ಕರಡೈಣ್ಣ ಮತ್ತು ಹುಲಿಯಣ್ಣರ ಮುಂದೆ ಹೇಳುತ್ತಾಳೆ. ಈ ಇಬ್ಬರೂ ಗುಬ್ಬಕ್ಕಳಿಗೆ ಸಹಾಯ ಮಾಡುತ್ತಾರೆ. ಕೊನೆಗೂ ಸಿಕ್ಕಿಬಿದ್ದ ಠಕ್ಕ ನರಿ ಮೊದಲಿಗೆ ಸುಳ್ಳು ಹೇಳಿದರೂ, ಹುಲಿಯಣ್ಣನ ಸುಳಿವಿನಿಂದ ಮರಿಗಳು ನರಿಯ ಹೊಟ್ಟೆಯಲ್ಲಿರುವುದು ಕಂಡುಬರುತ್ತದೆ. ಈ ಸಮಯದಲ್ಲಿ ಹುಲಿಯು ನರಿಯ ಹೊಟ್ಟೆಯನ್ನು ಸೀಳಿ ಮರಿಗಳನ್ನು ಹೊರಗೆ ತೆಗೆಯಬೇಕು ಎಂಬ ತೀರ್ಮಾನಕ್ಕೆ ಬಂದಾಗ ನರಿ ದೀನವಾಗಿ ಗುಬ್ಬಕ್ಕನನ್ನು ಬೇಡಿಕೊಳ್ಳುತ್ತದೆ. ಹೆಂಗರುಳಿನ ಗುಬ್ಬಕ್ಕ ನರಿಯನ್ನು ಉಳಿಸಿ ತನ್ನ ಮಕ್ಕಳು ಬದುಕಿ ಬರುವಂತೆ ಉಪಾಯ ಹೇಳುತ್ತದೆ. ನರಿಯಣ್ಣನಿಗೆ ಬೆನ್ನ ಮೇಲೆ ಒಂದು ಗುದ್ದು ಹೇರುವ ಮೂಲಕ ಮರಿಗಳು ಬಾಯಿಯಿಂದ ಹೊರಗೆ ಬೀಳುತ್ತವೆ. ನರಿಯ ಎರಡು ಕೋಡುಗಳನ್ನು ಮುರಿಯುವ ಮೂಲಕ ಕರಡೈಣ್ಣ ನರಿಗೆ ಶಿಕ್ಷೆಯನ್ನು ನೀಡುತ್ತಾನೆ. ಈ ಕಥೆ ಮಕ್ಕಳಲ್ಲಿ ಅಹಿಂಸಾ ಮಾರ್ಗ, ಸಜ್ಜನ ಸಂಗ, ಜೀವನದಲ್ಲಿ ಸುಖ, ಸಂತೋಷ, ನೆಮ್ಮದಿಯನ್ನು ಉಂಟು ಮಾಡುವುದಲ್ಲದೆ ಮಹಾತ್ಮರ ಮಹದಾಸೆಯನ್ನು ಅಭಿವ್ಯಕ್ತಗೊಳಿಸುತ್ತದೆ. ಕಥೆ ಭಾವಪೂರ್ಣವಾಗಿದ್ದು, ಇಂಥ ತಂತ್ರಗಾರಿಕೆಯಿಂದ ಕಥೆ ಯಶಸ್ವಿಯಾಗುತ್ತದೆ.

ಒಂದು ಕಾದಂಬರಿ ಯಶಸ್ಸನ್ನು ಗಳಿಸಬೇಕಾದರೆ ಅದರ ಶೈಲಿ ಸರಳ-ಸುಂದರವಾಗಿರುವುದು ಅವಶ್ಯಕ. ನಾಟಕೀಯ ಸಂಭಾಷಣೆ ಕಾದಂಬರಿಯ ಸೊಬಗನ್ನು ಹೆಚ್ಚಿಸುತ್ತವೆ. ಪಳಕಳ ಸೀತಾರಾಮ ಭಟ್ಟರ 'ಆನೆ ಅಣ್ಣಿ' ಕಿರು ಕಾದಂಬರಿ ಘಟನೆಗಳ ಮೂಲಕ ಮೌಲ್ಯಗಳನ್ನು ತಿಳಿಸುವ ಕ್ರಮ ಆಕರ್ಷಕವಾಗಿದೆ. ಇಡೀ ಕಾದಂಬರಿ ಚಿಕ್ಕ-ಚಿಕ್ಕ ಕಥೆಗಳನ್ನಾಗಿ ವಿಂಗಡಿಸಿದ ಇವರ ತಂತ್ರ ಸರಳ ಭಾಷೆಯ ಮೂಲಕ ಕಥನ ಸಾಗುವುದು ಮಕ್ಕಳಲ್ಲಿ ಕುತೂಹಲ ಮೂಡಿಸುತ್ತದೆ. ಕಾದಂಬರಿ ಮುಖ್ಯವಾಗಿ ವೈಚಾರಿಕ, ನೈತಿಕ, ಪೌರಾಣಿಕ, ವೈಜ್ಞಾನಿಕ ವಿಷಯಗಳನ್ನು ಒಳಗೊಂಡು ಮಕ್ಕಳು ವ್ಯಕ್ತಿತ್ವ ನಿರ್ಮಿಸಿಕೊಳ್ಳುವ ತಂತ್ರಗಾರಿಕೆ, ಶೈಲಿಯನ್ನು ಹೊಂದಿರುವುದು ಹೆಚ್ಚು ಕಂಡು ಬರದಿದ್ದರೂ ಇತ್ತೀಚಿನ ಲೇಖಕರು ಮಕ್ಕಳ ಕಾದಂಬರಿ ರಚನೆಯಲ್ಲಿ ತೊಡಗಿದ್ದಾರೆ.

ಮಕ್ಕಳ ನಾಟಕಗಳೂ ಸಹ ಸುಲಭ ಭಾಷೆಯಿಂದ ಕೂಡಿದ್ದು, ಸಣ್ಣ-ಸಣ್ಣ ವಾಕ್ಯಗಳ ಸಂಭಾಷಣೆ ಇದ್ದರೆ ಮಕ್ಕಳಿಗೆ ಇಷ್ಟವಾಗುತ್ತವೆ. ನಾಟಕಗಳಲ್ಲಿ ಕಥಾವಸ್ತುವಿನ ಶೈಲಿ, ನಾಟಕದ ಭಾಷೆ, ರಂಗಮಂಟಪ, ಸಂಗೀತ, ನೃತ್ಯ, ವೇಶಭೂಷಣ ಮುಂತಾದವು ತಂತ್ರವಾಗಿ ಬಳಸಲ್ಪಡುತ್ತವೆ. ಮಕ್ಕಳ ನಾಟಕದ ವಸ್ತು ಮಕ್ಕಳ ಮನೋವಿಕಾಸಕ್ಕೆ ಪೂರಕವಾಗಿರಬೇಕು. ಮಕ್ಕಳಿಗೆ ನೀತಿಪಾಠ ಹೇಳುವಂತಹ, ಮೂಢನಂಬಿಕೆಗಳ ವಿರುದ್ಧ ವೈಚಾರಿಕ ಚಿಂತನೆಗಳಿರುವ, ಅದ್ಭುತ-ರಮ್ಯ-ಫ್ಯಾಂಟಸಿ ಲೋಕದ ವಸ್ತುಗಳನ್ನು ಹೊಂದಿರುವ, ಸರಳ ಭಾಷೆಯ ಸಂಭಾಷಣೆಗಳಿರುವ ನಾಟಕಗಳು ಮಕ್ಕಳಿಗೆ ಸೂಕ್ತ.

ಪಳಕಳ ಸೀತಾರಾಮ ಭಟ್ಟರ 'ಕಿಟ್ಟಾಯಣ' ನಾಟಕವು ಮಕ್ಕಳಲ್ಲಿ ಜಾತಿ, ಮತ, ವರ್ಗ, ಅಂತಸ್ತು ರಹಿತವಾದ ಮಾನವೀಯ ಅಂತಃಕರಣವನ್ನು ಬೆಳೆಸಬಲ್ಲ ಸಶಕ್ತ ನಾಟಕವಾಗಿದೆ. ಅದೇ ರೀತಿ 'ಕುಳ್ಳ ತಮ್ಮ' ನಾಟಕವು ಅದ್ಭುತ, ರಮ್ಯ, ಫ್ಯಾಂಟಸಿ ಲೋಕವನ್ನು ಒಳಗೊಂಡಿರುವುದನ್ನು ಗಮನಿಸಬಹುದು. ಇವರ ನಾಟಕಗಳಲ್ಲಿ ಒಳ್ಳೆಯ ಗುಣದವರಿಗೆ ನೋವು, ನಿರಾಸೆಗಳು ಎಂದೂ ಕಾಡುವುದೇ ಇಲ್ಲ. ಅಶ್ಲೀಲ, ಅಸಹ್ಯ, ಅಸಂಬದ್ಧ ವಸ್ತುಗಳು, ಸಂಗತಿಗಳು, ಸಂಭಾಷಣೆಗಳು ಪಳಕಳರ ನಾಟಕಗಳಲ್ಲಿ ಇಲ್ಲದಿರುವುದು ಅವರ ಆದರ್ಶ ಶಿಕ್ಷಕ ಬದುಕನ್ನು ಅಭಿವ್ಯಕ್ತಗೊಳಿಸುತ್ತವೆ. ಮಗುವಿನ ಮುಗ್ಧತೆ ಉಳಿಸುವಂತಹ ನಾಟಕಗಳು ಈ ದೃಷ್ಟಿಯಿಂದ ರಚನೆಗೊಳ್ಳುವುದು ಇಂದಿನ ಅಗತ್ಯವಾಗಿದೆ.

ಕುವೆಂಪುರವರ ಮಕ್ಕಳ ನಾಟಕಗಳಾದ 'ಮೋಡಣ್ಣನ ತಮ್ಮ' ಮತ್ತು 'ನನ್ನ ಗೋಪಾಲ' ಸುಂದರವಾದ ಸರಳ ಭಾಷೆಯಲ್ಲಿ ರಚನೆಗೊಂಡಿದೆ. 'ನನ್ನ ಗೋಪಾಲ' ನಾಟಕ ನಿಷ್ಕಲ್ಮಷ ಮನಸ್ಸು, ನಿರ್ಮಲವಾದ ಭಕ್ತಿಗೆ ದೇವರು ಮೆಚ್ಚಿ ಕಾಣಿಸಿಕೊಳ್ಳುತ್ತಾನೆ. ಭಕ್ತಿ ಪ್ರಧಾನವಾದ ಈ ನಾಟಕ ಮಕ್ಕಳ ಮನಸ್ಸಿಗೆ ಹಿತವೆನಿಸುವಂತೆ ಸುಂದರ-ಸುಲಭ ಭಾಷೆಯಲ್ಲಿ ರಚಿಸಿರುವುದು ಕಂಡುಬರುತ್ತದೆ. ನಾಟಕವು ಹಳ್ಳಿಯ ಮಲೆನಾಡಿನ

ಚಿತ್ರಣಗಳನ್ನೊಳಗೊಂಡಿರುವುದು ನಾಟಕಕ್ಕೆ ಸೊಬಗನ್ನು ತಂದಿದೆ. 'ಮೋಡಣ್ಣನ ತಮ್ಮ' ನಾಟಕವು ಪದ್ಯ ರೂಪದಲ್ಲಿ ಇದ್ದು ಲಯಬದ್ಧವಾಗಿ ಹಾಡಲು ಬರುವಂತೆ ರಚಿಸಿದ್ದಾರೆ ಕುವೆಂಪು. ಪ್ರಕೃತಿ ಪ್ರಧಾನವಾದ ನಾಟಕ ಸುಲಭ ಭಾಷೆ ಹಾಗೂ ಸುಂದರ ಕಲ್ಪನೆಗಳಿಂದ ಒಳಗೊಂಡಿದೆ. ಕುವೆಂಪು ಅವರು ವಿಜ್ಞಾನವನ್ನು ಸೂಕ್ಷ್ಮ ರೀತಿಯಲ್ಲಿ ಮಕ್ಕಳಿಗೆ ತಿಳಿಸಿಕೊಟ್ಟಿರುವುದು ನಾಟಕದ ಶೈಲಿಯನ್ನು ತಿಳಿಸುತ್ತದೆ. ಮಕ್ಕಳು ಇಂಥ ತಂತ್ರಗಳಿಗೆ ಮನಸೋಲದೇ ಇರುವುದಿಲ್ಲ. ಮಕ್ಕಳಿಗೆ ಕುತೂಹಲ ಕೆರಳಿಸುವ ಶೈಲಿ ಎಂದರೂ ತಪ್ಪಾಗದು. ಮಕ್ಕಳ ಬುದ್ಧಿವಿಕಾಸವನ್ನು ನಿರ್ಮಿಸುವ ಜೊತೆಗೆ 'ಪರಿಸರ ಸಂರಕ್ಷಣೆ'ಯ ಸಂದೇಶವನ್ನು ನಾಟಕ ಬಿಂಬಿಸುತ್ತದೆ.

ಪ್ರವಾಸ, ಪ್ರಬಂಧ ಹಾಗೂ ಜೀವನ ಚರಿತ್ರೆಗಳಲ್ಲಿಯೂ ಸರಳವಾದ ನಿರೂಪಣೆ ಹೊಂದಿರಬೇಕು. ವಿಷಯವನ್ನು ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಮೂಡಿರಬೇಕು. ಇಂಥವು ಮಕ್ಕಳು ಬೇಗನೆ ಗ್ರಹಿಸಲು ಸಾಧ್ಯ. ಪ್ರವಾಸ ಸಾಹಿತ್ಯ ಮತ್ತು ಜೀವನ ಚರಿತ್ರೆಗಳಲ್ಲಿ ಕಲ್ಪನೆಗೆ ಅವಕಾಶವಿರಕೂಡದು, ವಿಷಯಗಳು ಖಚಿತವಾಗಿರುತ್ತವೆ. ಇದು ಮಗುವಿನ ಬೆಳವಣಿಗೆಗೆ ಪೂರಕವಾದುದು. ಪಳಕಳ ಸೀತಾರಾಮ ಭಟ್ಟರ 'ಈಶ್ವರಚಂದ್ರ ವಿದ್ಯಾಸಾಗರ, 'ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು', 'ಭಾರತರತ್ನ' ಇವು ಉತ್ತಮ ಜೀವನ ಚರಿತ್ರೆಗಳಾಗಿವೆ. ಇವು ಕುತೂಹಲವನ್ನು ಕೆರಳಿಸುವ ಶೈಲಿಯನ್ನು ಹೊಂದಿವೆ. ಎಲ್ಲಿಯೂ ನೀರಸತನ, ಬೇಸರ ತರಿಸದೇ ಓದಿಸಿಕೊಂಡು ಹೋಗುವ ತಂತ್ರಗಾರಿಕೆಯನ್ನು ಹೊಂದಿವೆ.

ಯಾವುದೇ ಲೇಖಕನ ಅಭಿವ್ಯಕ್ತಿಯಲ್ಲಿ ಸ್ಪಷ್ಟವಾಗಿ ವ್ಯಕ್ತವಾದ ಸ್ವಭಾವ, ಲಕ್ಷಣ, ವೈಚಿತ್ರ್ಯಗಳನ್ನು ಇಡಿಯಾಗಿ ಅವನ ಶೈಲಿ ಎಂದು ಕರೆಯಬಹುದು. ಇಲ್ಲಿ ಲೇಖಕನು ತನ್ನ ವಿಚಾರಕ್ಕನುಗುಣವಾಗಿ ವಸ್ತು–ವಿಷಯವನ್ನು ಅಭಿವ್ಯಕ್ತಗೊಳಿಸುವಾಗ ಅದು ತನ್ನಷ್ಟಕ್ಕೆ ತಾನೇ ರೂಪ ಪಡೆಯುತ್ತದೆ. ಹೀಗಾಗಿ ಅನುಭವದ ಸಮಗ್ರವಾದ ಅಭಿವ್ಯಕ್ತ ರೀತಿಯೇ ಶೈಲಿ ಎಂದು ಹೇಳಬಹುದು. 'ಶೈಲಿ ಪ್ರಧಾನವಾಗಿ ವ್ಯಕ್ತಿ ನಿಷ್ಠ ನಿಜ. ಆದರೆ ಅದು ಸಮಷ್ಠಿಯ ಮೇಲೆ ಪ್ರಭಾವ ಬೀರುವುದಲ್ಲದೆ ಅದರಿಂದ ಪ್ರಭಾವಿತನಾಗುವುದು ಉಂಟು. ಆದ್ದರಿಂದ ಅದು ಸಾಹಿತಿಯ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವ ಸಾಧನವೂ ಅಹುದು'[೨೪೦] ಎನ್ನುವ ನುಡಿಗಳು ವ್ಯಷ್ಟಿಗೆ ಸಮಷ್ಟಿಯು ಮೂಲ ಎಂಬುದು ತೋರಿಸಿಕೊಡುತ್ತದೆ. ಒಬ್ಬ ಲೇಖಕನ ಬರವಣಿಗೆಯಲ್ಲಿ ಭಾವನೆಗಳು, ವಸ್ತು, ಸನ್ನಿವೇಶ, ಪಾತ್ರಗಳು, ಮನೋಭಾವ ಮುಂತಾದವು ಆತನ ಶೈಲಿಯೊಂದಿಗೆ ಸಹಜವಾಗಿ ಮೂಡಿಬಂದಿರುತ್ತವೆ. ಜೊತೆಗೆ ಶಬ್ದ, ವಾಕ್ಯ, ಆಲೋಚನಾಕ್ರಮ, ನಿರೂಪಣಾ ವಿಧಾನಗಳ ಸಾಮರಸ್ಯ ಕಂಡುಬರುತ್ತದೆ.

'ನಿಜವಾದ ಲೇಖಕರಿಗೆ ಶೈಲಿ ಒಂದು ಸಮಸ್ಯೆಯೇ ಆಗಿರದೆ ಆತನ ಪ್ರತಿಭೆಗೆ, ಅನುಭವಕ್ಕೆ ಹೊಳೆದ ಕಥಾವಸ್ತು, ತಕ್ಕರೂಪ ಪರಿಕರಗಳೊಂದಿಗೆ ಅವನಿಗೆ ಹೊಳೆದಿರುತ್ತದೆ. ಉತ್ತಮವಾಗಿ ಯೋಚಿಸುವುದು, ಭಾವಿಸುವುದು ಅಷ್ಟೇ ಉತ್ತಮವಾಗಿ ನಿರೂಪಿತವಾಗಿರುತ್ತದೆ. ಈ ನಿರೂಪಣಾ ಶೈಲಿ ಸನ್ನಿವೇಶಕ್ಕೆ ತಕ್ಕಂತೆ ಭಿನ್ನ-ಭಿನ್ನವೂ ಆಗಿರುತ್ತದೆ. ಅದುವೇ ಸಹಜ ಶೈಲಿ'[೨೪೧].

'ತಂತ್ರವೆಂದರೆ ಸಾಮಾನ್ಯವಾಗಿ ವಸ್ತುವನ್ನು ಸಂಘಟಿಸುವ ವಿಧಾನ, ಕುತೂಹಲ ಕೆರಳುವಂತೆ ಕತೆ ಹೇಳುವ ರೀತಿ, ಘಟನೆಗಳನ್ನು ಆಕರ್ಷಕವಾಗಿ ನಿರೂಪಿಸುವ ಬುದ್ಧಿವಂತಿಕೆ ಎಂಬ ಭಾವನೆ, ಲೇಖಕನಿಗೆ ತನ್ನ ವಸ್ತುವನ್ನು ಅನಾವರಣಗೊಳಿಸಲು, ಅದರ ಅರ್ಥವನ್ನು ಸೂಚಿಸಲು ಅಥವಾ ಕೊನೆಯದಾಗಿ ವಸ್ತುವನ್ನು ಬೆಲೆಗಟ್ಟಲು ಇರುವ ಏಕಮಾತ್ರ ಸಾಧನ[೨೪೨].

ಮಕ್ಕಳ ಸಾಹಿತ್ಯ ಇತರ ಸಾಹಿತ್ಯಗಳಿಗಿಂತ ಆಶಯ ಮತ್ತು ಅಭಿವ್ಯಕ್ತಿಯ ದೃಷ್ಟಿಯಿಂದ ತುಂಬಾ ಭಿನ್ನವಾದುದು. ಅದರ ಇರುವಿಕೆಯೇ ಭಾಷೆಯ ರಚನೆಯ ನೆಲೆಯಲ್ಲಿ. ಮಕ್ಕಳ ಸಾಹಿತ್ಯ ಒಳಗೊಂಡಿರುವ ವಸ್ತು-ವಿಷಯಗಳು ಸುಲಭವಾಗಿ ಸಂವಹನಗೊಳ್ಳದಿದ್ದರೆ ಅದರ ಉದ್ದೇಶ ಸಫಲಗೊಳ್ಳುವುದಿಲ್ಲ. ಇದರಿಂದಾಗಿ ಅದು ನಿರ್ದಿಷ್ಟ ಚೌಕಟ್ಟುಗಳೊಂದಿಗೆ ರೂಪುಗೊಳ್ಳಬೇಕಾಗುತ್ತದೆ. ಮಕ್ಕಳ ವಯಸ್ಸು, ಗ್ರಹಿಕೆಯ ಸಾಮರ್ಥ್ಯ, ಕಲ್ಪನಾ ಶಕ್ತಿ, ಕುತೂಹಲ ಇವುಗಳನ್ನು ಗಮನಿಸಿ ಮಕ್ಕಳ ಸಾಹಿತ್ಯ ರಚಿಸುವ ಹೊಣೆಗಾರಿಕೆ ಸಾಹಿತಿಗೆ ಇರಬೇಕು. ಮಕ್ಕಳ ಮನಸ್ಸು ಸ್ಥಿರವಾದುದಲ್ಲ. ಪ್ರತಿ ಕ್ಷಣವೂ ಬದಲಾಗುವಂತಹದು. ಹೊರ ಪ್ರಪಂಚವನ್ನು ತಿಳಿದುಕೊಳ್ಳುವ ಪ್ರಯತ್ನದಲ್ಲಿ ತಮ್ಮ ಬೆಳವಣಿಗೆಯನ್ನು ಕಂಡುಕೊಳ್ಳುವಾಗ ಆಯಾ ಪರಿಸರಕ್ಕೆ ಅನುಗುಣವಾಗಿ ಅವರ ಅಭಿರುಚಿಗಳು ಬದಲಾಗುತ್ತ ಸಾಗುತ್ತವೆ. ಆದ್ದರಿಂದ ಮಕ್ಕಳ ಆಶೆ-ಆಕಾಂಕ್ಷೆಗಳನ್ನು ಪೂರೈಸುವುದು ಸುಲಭವಾದುದಲ್ಲ. ಇದನ್ನು ಸಾಧಿಸಬೇಕಾದರೆ ಮಕ್ಕಳ ಸಾಹಿತ್ಯ ಸೃಷ್ಟಿಸುವ ಸಾಹಿತಿಯು ತನ್ನ ಅನುಭವದ ಮಿತಿಯನ್ನು ಬಿಡಿಸಿಕೊಂಡು ಯಾರಿಗಾಗಿ ಬರೆಯುತ್ತಿರುವನೋ ಅವರ ಮನೋಧರ್ಮ, ವರ್ತನೆಗಳನ್ನು ಮುಖ್ಯವಾಗಿ ಗಮನಿಸುವುದು ಅಗತ್ಯ. ಮಕ್ಕಳ ವಯಸ್ಸಿಗೆ ಮೀರಿದ, ಬುದ್ಧಿಗೆ ನಿಲುಕದ ವಿಷಯಗಳನ್ನು ಬಿಟ್ಟು ಕೋಮಲ ಭಾವಗಳನ್ನು ಅರಳಿಸುವ, ಮನೋವಿಕಾಸಕ್ಕೆ ದಾರಿ ನೀಡುವ ಸಂಗತಿಗಳಿರುವುದು ಸೂಕ್ತ. ಮಕ್ಕಳಲ್ಲಿ ಕುತೂಹಲ ಮೂಡಿಸಿ ವಿಷಯದ ಕಡೆಗೆ ಮನಸ್ಸು ಹೊರಳುವಂತೆ ಹೇಳುವುದೇ ಮಕ್ಕಳ ಸಾಹಿತ್ಯದ ಮುಖ್ಯ ಗುಣ. ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಹೇಳುವ ಕ್ರಮ ಮತ್ತು ಬಳಸುವ ಭಾಷೆಯ ಕಡೆಗೆ ತಿಳುವಳಿಕೆಯನ್ನು ಲೇಖಕ ಅವಶ್ಯಕವಾಗಿ ಹೊಂದಿರಬೇಕು.

ಅಡಿಟಿಪ್ಪಣಿ :

೧) ಓ. ಎಲ್. ನಾಗಭೂಷಣಸ್ವಾಮಿ : ವಿಮರ್ಶೆಯ ಪರಿಭಾಷೆ : ಪು.೧೬

೨) ಅಭಿನವಗುಪ್ತ : ಅಭಿನವ ಭಾರತಿ : ಪು.೩೬

೩) ಯಶವಂತ ಚಿತ್ತಾಲ : ಸಾಹಿತ್ಯ ಸೃಜನಶೀಲತೆ ಮತ್ತು ನಾನು : ಪು.೮೩

೪) ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಮತ್ತು ಸಾಹಿತ್ಯ ದರ್ಶನ : ಪು.೫೫

೫) ಎಸ್. ಅನಂತರಂಗಾಚಾರ : ಸಾಹಿತ್ಯ ಭಾರತ : ಪು.೩೮೪

೬) ಪಂಜೆರಾಮರಾಯರು (ಸಂ.) : ಪಂಜೆಯವರ ಪದ್ಯಗಳು : ಪು.೯

೭) ಪಂಜೆರಾಮರಾಯರು (ಸಂ.) : ಪಂಜೆಯವರ ಪದ್ಯಗಳು : ಕನ್ನಡ ಎರಡನೆಯ ಪಠ್ಯಪುಸ್ತಕ : ಪು.೫

೮) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೫೪

೯) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೬೩

೧೦) ಅದೇ : ಪು.೫೫

೧೧) ಅದೇ : ಪು.೧೫೫

೧೨) ಕೆ. ಎಸ್. ನಿಸಾರ್‌ಅಹಮ್ಮದ : ಪಂಜೆಯವರ ಕವಿತೆಗಳು : ಪ್ರಬುದ್ಧ ಕರ್ನಾಟಕ : ಸಂಪುಟ–೫೫, ಸಂಚಿಕೆ–೩ : ಪು.೨೪

೧೩) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೬೫

೧೪) ಅದೇ : ಪು.೬೮

೧೫) ಅದೇ : ಪು.೭೧

೧೬) ಪ್ರಭುಶಂಕರ : ಕನ್ನಡದಲ್ಲಿ ಭಾವಗೀತೆ : ಪು.೨೭

೧೭) ಎಲ್. ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ : ಪು.೨೮

೧೮) ಎಂ. ಗೋವಿಂದ ಪೈ : ಕನಸಾದ ನನಸು : ಪಂಜೆಯವರ ನೆನಪಿಗಾಗಿ : ಪು.೧೦೨

೧೯) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೭೮

೨೦) ಡಾ. ಎಸ್. ಅನಂತನಾರಾಯಣ : ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ ಕಾವ್ಯದ ಪ್ರಭಾವ : ಪು.೬೩

೨೧) ಪಂಜೆರಾಮರಾಯರು (ಸಂ.) : ಕೊಡಗಿನ ಚಿರಸ್ಮರಣೀಯ ಕವಿಗಳು : ಪಂಜೆಯವರ ನೆನಪಿಗಾಗಿ : ಪು.೧೩

೨೨) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೭೬
೨೩) ವಿ. ಸೀತಾರಾಮ : ಪಂಜೆಮಂಗೇಶರಾಯರು : ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಣೆ : ಪು.೬೬
೨೪) ಅದೇ : ಪು.೬೬
೨೫) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧ : ಪು.೭೯
೨೬) ಅದೇ : ಪು.೭೭
೨೭) ಡಾ. ಪ್ರಭುಶಂಕರ : ಭಾವಗೀತೆ : ಪು.೫೬–೫೭
೨೮) ಬಿ. ಶಂಕರಭಟ್ಟ, ಬಿ. ಎಂ. ಶರ್ಮಾ : ನನ್ನ ತಂದೆ : ಪಂಜೆಯವರ ನೆನಪಿಗಾಗಿ : ಪು.೭೨–೭೩
೨೯) ಬಿ. ಶಂಕರಭಟ್ಟ, ಬಿ. ಎಂ. ಶರ್ಮಾ : ಕವಿಶಿಷ್ಯರ ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ : ಪು.೨೧೮
೩೦) ಪಂಜೆರಾಮರಾವ್ (ಸಂ.) : ಪಂಜೆಯವರ ಪದ್ಯಗಳು : ಪು.೧೭
೩೧) ಅದೇ : ಪು.೧೮
೩೨) ಡಾ. ಬಿ. ವರದರಾಜರಾವ್ : ಶ್ರೀ ಪಂಜೆಯವರ ನೀಳ್ಗವಿತೆಗಳು : ತೆಂಕಣಗಾಳಿ ಶತಮಾನೋತ್ಸವ ಸಂಚಿಕೆ, : ಪು.೫೧
೩೩) ಪಂಜೆರಾಮರಾಯರು (ಸಂ.) : ಪಂಜೆಯವರ ಕೃತಿಗಳು : ಸಂಪುಟ–೧, ಪು.೭೯
೩೪) ಅದೇ : ಪು.೮೦
೩೫) ತಿ.ನಂ.ಶ್ರೀ. : ಸಮಾಲೋಚನ : ಮಕ್ಕಳಿಗೆ ಹೇಳುವ ಕಥೆಗಳು : ಪು.೧೨೪
೩೬) ಎಂ.ವಿ.ಸೀ. ಮಕ್ಕಳ ಸಾಹಿತ್ಯ : ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ ಪೀಠಿಕೆ : ಪು.೬
೩೭) ಬಿ. ಶಂಕರಭಟ್ & ಬಿ. ಎಸ್. ಶರ್ಮ : ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ : ಪು.೬೦
೩೮) ಶ್ರೀ ಬಿ. ಎಸ್. ಶರ್ಮ : ಕವಿಶಿಷ್ಯರ ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ: ಪು.೭೧
೩೯) ಶ್ರೀ ಹರಿಶಣ್ಯೆ : ಪಂಜೆಯವರ ನೆನವರಿಕೆಗಳು : ಪಂಜೆಯವರ ನೆನಪಿಗಾಗಿ : ಪು.೩೮
೪೦) ಶ್ರೀ ಎಂ. ಗೋವಿಂದ ಪೈ : ಕನಸಾದ ನನಸು : ಪಂಜೆಯವರ ನೆನಪಿಗಾಗಿ : ಪು.೧೦೫
೪೧) ಬಿ. ಶಂಕರಭಟ್ಟ & ಬಿ. ಎಸ್. ಶರ್ಮ : ಬಾಲಸಾಹಿತ್ಯ ಮತ್ತು ಪಂಜೆ : ಪಂಜೆಯವರ ನೆನಪಿಗಾಗಿ : ಪು.೬೧

೪೨) ಪಂಜೆಮಂಗೇಶರಾಯ : ಸಚಿತ್ರಬಾಲ ಕಥಾವಳಿ : ಮುನ್ನಡಿ : ಪು.೩
೪೩) ಪಂಜೆಮಂಗೇಶರಾಯ : ಪಂಜೆಯವರ ಕೃತಿಗಳು : ಸಂಪುಟ-೨, ಪು.೧೭
೪೪) ಅದೇ : ಪು.೩೪
೪೫) ಶ್ರೀ ಬಿ. ಶಂಕರಭಟ್ಟ : ಕವಿಶಿಷ್ಯರ ಬಾಲಸಾಹಿತ್ಯ : ಪು.೧೦೫
೪೬) ಎಂ.ವಿ.ಸೀ. : ಮಕ್ಕಳ ಸಾಹಿತ್ಯ : ವಿಶ್ವಕನ್ನಡ ಸಮ್ಮೇಳನ ಪೀಠಿಕೆ, ಪು.೬
೪೭) ಬಿ. ಶಂಕರಭಟ್ & ಬಿ. ಎಸ್. ಶರ್ಮ. : ಕವಿಶಿಷ್ಯರ ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ : ಪು.೨೧೪
೪೮) ಬಿ. ಎಸ್. ಶರ್ಮ : ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ : ಪು.೨೨೦
೪೯) ಬಿ. ಶಂಕರಭಟ್ & ಬಿ. ಎಸ್. ಶರ್ಮ. : ಕವಿಶಷ್ಯರ ಬಾಲಸಾಹಿತ್ಯ : ಪಂಜೆಯವರ ನೆನಪಿಗಾಗಿ : ಪು.೨೧೪
೫೦) ಹಾಮಾನಾಯಕ : ವಿಶ್ವಕೋಶ ಸಂಪುಟ ೩: ಪು.೭೪೮
೫೧) ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ : ಜೂನ-ಡಿಸೆಂಬರ್, ೧೯೮೦. ಪು.೧೧
೫೨) ದಿನಕರ ದೇಸಾಯಿ : ಮಕ್ಕಳ ಗೀತೆಗಳು : ಪು.೪
೫೩) ದಿನಕರ ದೇಸಾಯಿ : ಮಕ್ಕಳ ಪದ್ಯ : ಪು.೨
೫೪) ಅದೇ : ಪು.೫
೫೫) ಅದೇ : ಪು.೬೩
೫೬) ಅದೇ : ಪು.೬೫
೫೭) ಅದೇ : ಪು.೬೮
೫೮) ಅದೇ : ಪು.೨೯
೫೯) ಪ್ರೊ. ಎಂ. ಎನ್. ಪ್ರಭು : ಗ್ರಂಥಮಂಥನ : ಪು.೩೮
೬೦) ದಿನಕರ ದೇಸಾಯಿ : ಮಕ್ಕಳ ಪದ್ಯ : ಪು.೨೨
೬೧) ಅದೇ : ಪು.೩೯
೬೨) ಅದೇ : ಪು.೪೩
೬೩) ಅದೇ : ಪು.೪೨
೬೪) ಅದೇ : ಪು.೪೮
೬೫) ಅದೇ : ಪು.೩೫
೬೬) ಡಾ. ಶ್ರೀಪಾದಶೆಟ್ಟಿ : ದಿನಕರ ದೇಸಾಯಿ ಬದುಕು-ಬರಹ : ಪು.೧೭೨
೬೭) ದಿನಕರ ದೇಸಾಯಿ : ಮಕ್ಕಳ ಪದ್ಯ : ಪು.೧೩
೬೮) ಅದೇ : ಪು.೨೦
೬೯) ಅದೇ : ಪು.೪೬
೭೦) ದಿನಕರ ದೇಸಾಯಿ : ಮಕ್ಕಳ ಗೀತೆಗಳು : ಪು.೩
೭೧) ದಿನಕರ ದೇಸಾಯಿ : ಕವನ ಸಂಗ್ರಹ : ಪು.೭

೭೨) ಅದೇ : ಪು.೩೩
೭೩) ಅದೇ : ಪು.೩೪
೭೪) ಜಿ. ಬಿ. ಜೋಶಿ (ಸಂ.) : ಪುಟ ಬಂಗಾರ : ಪು.೨೧
೭೫) ಅದೇ : ಪು.೨೨
೭೬) ದಿನಕರ ದೇಸಾಯಿ : ಕವನ ಸಂಗ್ರಹ : ಪು.೧೧೬
೭೭) ಜಿ. ಬಿ. ಜೋಶಿ (ಸಂ.) : ಪುಟ ಬಂಗಾರ : ಪು.೨೩
೭೮) ದಿನಕರ ದೇಸಾಯಿ : ಕವನ ಸಂಗ್ರಹ : ಪು.೧೧೬
೭೯) ಅದೇ : ಪು.೧೭೪
೮೦) ದಿನಕರ ದೇಸಾಯಿ : ದಾಸವಾಳ : ಪು.೫
೮೧) ಚಂದ್ರಶೇಖರ ನಂಗಲಿ : 'ಆಲಿಸಯ್ಯ ಮಲೆಯಕವಿ' : ಮುಖಾಮುಖಿ : ಪು.೪೮
೮೨) ಕಾಳೇಗೌಡ ನಾಗವಾರ (ಲೇ) : ಕುವೆಂಪು ಕೃತಿ ವಿಮರ್ಶೆ : ಕುವೆಂಪು ಕೆಲವು ಅಭಿಪ್ರಾಯಗಳು : ಪು.೫೧
೮೩) ಸಿ. ಪಿ. ಕೆ. : ಕುವೆಂಪು ಸಾಹಿತ್ಯ : ಕೆಲವು ಮುಖಗಳು : ಪು.೧೩೦
೮೪) ಡಾ. ವೀರಣ್ಣ ರಾಜೂರ : ಕರ್ನಾಟಕ ಭಾರತಿ : ಕನ್ನಡ ಕಾವ್ಯದಲ್ಲಿ ನವ್ಯತೆ : ಪು.೯೭
೮೫) ಎಸ್. ಜಿ. ನರಸಿಂಹಚಾರ್ : ಒಂದನೆಯ ತರಗತಿ ಪಠ್ಯಪುಸ್ತಕ : ಪು.೧೩
೮೬) ತೋನ್ಸೆ ಮಂಗೇಶರಾಯರು : ಒಂದನೆಯ ತರಗತಿ ಪಠ್ಯಪುಸ್ತಕ : ಪು.೯
೮೭) ಜಯರಾಜಾಚಾರ್ಯ : ನವಿಲು : ಒಂದನೆಯ ತರಗತಿ ಪಠ್ಯಪುಸ್ತಕ : ಪು.೨೧
೮೮) ಶಿಶು ಸಾಹಿತ್ಯ : ರಾಗೌ : ಗಂಗೋತ್ರಿ (ಕುವೆಂಪು ಅಭಿನಂದನ ಗ್ರಂಥ) : ಪು.೮೦೭
೮೯) ಚಂದ್ರಗೌಡ ಕುಲಕರ್ಣಿ : ಬೆಳಗಲಿ ಅವರ ಮಕ್ಕಳ ಸಾಹಿತ್ಯ : 'ಬೆಳಗಲಿ' ಅಭಿನಂದನ ಗ್ರಂಥ : ಪು.೧೮೭
೯೦) ಕುವೆಂಪು : ಮಲೆನಾಡಿನ ಚಿತ್ರಗಳು : 'ಮಲೆನಾಡಿಗೆ ಬಾ' ಪದ್ಯದಿಂದ : ಪು.೩೬
೯೧) ಡಾ. ಎಂ. ಎಂ. ಕಲಬುರ್ಗಿ : ಕುವೆಂಪು ಸಮಗ್ರ ಕಾವ್ಯ ಸಂಪುಟ : ಮುನ್ನುಡಿ : ಪು.XIX
೯೨) ಜಿ. ಎಸ್. ಶಿವರುದ್ರಪ್ಪ : ಉದಯವಾಣಿ ಪತ್ರಿಕೆ, ಸಂದರ್ಶನ ೧೯೯೧
೯೩) ದೇಜಗೌ : 'ರಾಷ್ಟ್ರಕವಿ ಕುವೆಂಪು : ಪು.೧೮
೯೪) ಅದೇ : ಪು.೩
೯೫) ಕುವೆಂಪು : 'ವಿಭೂತಿ ಪೂಜೆ' : ಪು.೩೩
೯೬) ದೇಜಗೌ : ರಾಷ್ಟ್ರಕವಿಯ ಸಂದರ್ಶನ : ಪು.೧೯
೯೭) ಕುವೆಂಪು : 'ಕಲಾಸುಂದರಿ' : ಮುನ್ನುಡಿ : ಪು.V

೯೮) ಕುವೆಂಪು : 'ಪಕ್ಷಿಕಾಶಿ' : ಉಭಯಸಂಕಟ : ಪು.೬೨೯

೯೯) ಜಿ. ಎಸ್. ಶಿವರುದ್ರಪ್ಪ : ಟಿ. ಎಸ್. ಎಲಿಯಟ್ ಮತ್ತು ಕನ್ನಡ ನವ್ಯ ಕಾವ್ಯ ಸಂದರ್ಭ : ಪು.೩

೧೦೦) ಕುವೆಂಪು : ನನ್ನ ಮನೆ : ಪು.೪

೧೦೧) ಅದೇ : ಪು.೫

೧೦೨) ಅದೇ : ಪು.೬

೧೦೩) ಕುವೆಂಪು : ಬಣ್ಣದ ಹಕ್ಕಿ : ಪು.೯

೧೦೪) ಕುವೆಂಪು ಸಮಗ್ರ ಕಾವ್ಯ : ಸಂಪುಟ ಭಾಗ-೨ : 'ಪೊದೆಯ ಹಕ್ಕಿ ಎದೆಯ ಹಕ್ಕಿ' : ಪು.೭೫೫

೧೦೫) ಅದೇ : ಪು.೭೫೫

೧೦೬) ಕುವೆಂಪು : ನನ್ನ ಮನೆ : ಅರ್ಧಚಂದ್ರ : ಪು.೨

೧೦೭) ಅದೇ : ಪು.೨

೧೦೮) ಅದೇ : ಪು.೨

೧೦೯) ಅದೇ : ಪು.೨

೧೧೦) ಅದೇ : ಪು.೨

೧೧೧) ಕುವೆಂಪು : ನನ್ನ ಮನೆ : ಒಡವೆಗಳು : ಪು.೧೦

೧೧೨) ಕುವೆಂಪು : ನನ್ನ ಮನೆ : ಮೂರ್ತಿಯ ಬೆಳ್ಮುಗಿಲು : ಪು.೧೭

೧೧೩) ಅದೇ : ಪು.೧೭

೧೧೪) ಅದೇ : ಪು.೧೭

೧೧೫) ಅದೇ : ಪು.೧೭

೧೧೬) ಕುವೆಂಪು : ಮರಿವಿಜ್ಞಾನಿ : ತಿಂಡಿ : ಪು.೧

೧೧೭) ಕುವೆಂಪು : ಮರಿವಿಜ್ಞಾನಿ : ಆಟ ಮುಗಿಯುವ ಮುನ್ನ : ಪು.೮

೧೧೮) ಕುವೆಂಪು : ಮರಿವಿಜ್ಞಾನಿ : ಸೋತೆನೀನ್ । ಗೆದ್ದೆನಾನ್ : ಪು.೯

೧೧೯) ಅದೇ : ಪು.೯

೧೨೦) ಕುವೆಂಪು : ಮರಿವಿಜ್ಞಾನಿ : ಮಲ್ಲಿಗೆ ಹೂಗಳು : ಪು.೧೦

೧೨೧) ಕುವೆಂಪು : ಮರಿವಿಜ್ಞಾನಿ : ಮೂರ್ತಿಯ ವಿಜ್ಞಾನ : ಪು.೧೧

೧೨೨) ಅದೇ : ಪು.೧೧

೧೨೩) ಕುವೆಂಪು : ಮರಿವಿಜ್ಞಾನಿ : ಹೂವಿನ ಬೇಲಿ : ಪು.೧೪

೧೨೪) ಕುವೆಂಪು : ಮೇಘಪುರ : ತೊರೆಯ ಬಳಿ : ಪು.೫

೧೨೫) ಕುವೆಂಪು : ಮೇಘಪುರ : ಪು.೧೫

೧೨೬) ಕುವೆಂಪು : ಮೇಘಪುರ : ಏಳಿರೈ ಬಾಲರೇ : ಪು.೭

೧೨೭) ಕುವೆಂಪು : ಮೇಘಪುರ : ಎದ್ದೇಳು : ಪು.೧೨

೧೨೮) ಡಾ. ಗುರುಪಾದ ಮರಿಗುದ್ದಿ : ಶ್ರೀ ಕುವೆಂಪು ಬದುಕು ಮತ್ತು ಸಾಹಿತ್ಯ : ಪು.೭೮

೧೨೯) ಅದೇ : ಪು.೮೧

೧೩೦) ರಾಗೌ. : ಕುವೆಂಪು ಅವರ ಶಿಶು ಸಾಹಿತ್ಯ : 'ಕಾವ್ಯಾನುಶೀಲನ' : ಪು.೮೬

೧೩೧) ಆನಂದ ವಿ. ಪಾಟೀಲ ಹಾಗೂ ನ. ರವಿಕುಮಾರ್ (ಸಂ.) : ಮಕ್ಕಳ ಸಾಹಿತ್ಯ ಶತಮಾನ : ನವೋದಯ ನೆರಳಿನಲ್ಲಿ ಮಕ್ಕಳ ಸಾಹಿತ್ಯ : ಪು.೪

೧೩೨) ಪಳಕಳರ ಸಂದರ್ಶನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ : ೦೮-೦೩-೨೦೧೧

೧೩೩) ಅದೇ :

೧೩೪) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಪು.೫

೧೩೫) ಪಳಕಳ ಸೀತಾರಾಮ ಭಟ್ಟ : ಪ್ರಕೃತಿ ಸಂಪತ್ತು : ಮಕ್ಕಳ ಮೆಚ್ಚು : ಪು.೩೧

೧೩೬) ಪಳಕಳ ಸೀತಾರಾಮ ಭಟ್ಟ : ಚಿಣ್ಣನ ಚೀಲ : ಪು.೩೩

೧೩೭) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಮೊಲದ ಪರಿಯೆ : ಪು.೨೩

೧೩೮) ಅದೇ : ಪು.೨೬

೧೩೯) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಎಂಥಗುಣ : ಪು.೪೦

೧೪೦) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಮನದ ಆಸೆ : ಪು.೫೭

೧೪೧) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಮುದ್ದು ಕಿಟ್ಟು : ಪು.೬೦

೧೪೨) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಏನಿದು ಈ ಮಳೆ : ಪು.೮೦

೧೪೩) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಅಂಚೆಯಣ್ಣ : ಪು.೯೧

೧೪೪) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಜೋಗುಳ : ಪು.೯೫

೧೪೫) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಹೂಗಳ ಮದುವೆ : ಪು.೯೬

೧೪೬) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಶಕ್ತಿಗಿಂತ ಯುಕ್ತಿ ಮೇಲು : ಪು.೧೦೨

೧೪೭) ಸಿದ್ಧನವಹಳ್ಳಿ ಕೃಷ್ಣ ಶರ್ಮ : ಮಕ್ಕಳ ಸಾಹಿತ್ಯ ಚಿಂತನ : ಮಕ್ಕಳ ಕಾವ್ಯ : ಪು.೧೯೭

೧೪೮) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಎರೆಹುಳ : ಪು.೧೯೦

೧೪೯) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಕಾಡನುಳಿಸಿ ಬೆಳೆಸುವ : ಪು.೨೦೨

೧೫೦) ಪಳಕಳ ಸೀತಾರಾಮ ಭಟ್ಟ : ಪಳಕಳರ ಆಯ್ದ ಕವನಗಳು : ಮಕ್ಕಳ ಮಾತು : ಪು.೨೫೨

೧೫೧) ಪಳಕಳ ಸೀತಾರಾಮಭಟ್ಟ : ಇರುವೆಯ ನೀತಿ : ಚಿಣ್ಣನ ಚೀಲ : ಪು.೫

೧೫೨) ಟಿ. ವೀಣಾ : ಮಗು ನಿಮ್ಮ ಮನೆಯ ಬೆಳಕು : ಪು.೭ :

೧೫೩) ಕೆ. ಟಿ. ಗಟ್ಟಿ : ಉತ್ಕೃಷ್ಟತೆಗಾಗಿ ತಾಯಿ–ತಂದೆ : ಪು.೨೩

೧೫೪) ಪಳಕಳ ಸೀತಾರಾಮ ಭಟ್ಟ : ಬಾಲ ಎಲ್ಲಿ : ಪುಟ್ಟಿಯ ಗುಟ್ಟು : ಪು.೭

೧೫೫) ಎಸ್. ಎಲ್. ಭೈರಪ್ಪ : ವಿ. ಕೃ. ಗೋಕಾಕ ಹಾಗೂ ಆರ್. ಜಿ. ಕುಲಕರ್ಣಿ (ಸಂ.) : ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ : ಪು.೧೨

೧೫೬) ಪಳಕಳ ಸೀತಾರಾಮ ಭಟ್ಟ : ಹಸಿರು ಹಾಡು : ಕಲಿತರೆ ಆಗದೆ ಮನೆಯಲ್ಲೇ? : ಪು.೬೦

೧೫೭) ಪಳಕಳ ಸೀತಾರಾಮ ಭಟ್ಟ : ಕಲಿತರೆ ಆಗದೆ ಮನೆಯಲ್ಲೆ : (ಹಸಿರು ಹಾಡು) : ಪು.೬೦

೧೫೮) ಪಳಕಳ ಸೀತಾರಾಮ ಭಟ್ಟ : ರಜೆಯ ಮಜ : ಶಿಶು ಸಾಹಿತ್ಯ ಮಾಲೆ : ಪು.೩೦

೧೫೯) ಬಿ. ವಿ. ಪಟ್ಟಾಭಿರಾಮ : ಗುಡ್‌ಪೇರೆಂಟ್ : ಪು.೨೫

೧೬೦) ಪಳಕಳ ಸೀತಾರಾಮ ಭಟ್ಟ : ಪುಟ್ಟಿಯ ಗುಟ್ಟು : ಅಪ್ಪನೊಡನೆ : ಪು.೧೭

೧೬೧) ಎಚ್. ಎಸ್. ವೆಂಕಟೇಶಮೂರ್ತಿ : ಕನ್ನಡದಲ್ಲಿ ಕಥನ ಕವನಗಳು : ಪು.೧೩

೧೬೨) ಪಳಕಳ ಸೀತಾರಾಮ ಭಟ್ಟ : ತಾಯಿಯಂತೆ ಮರಿ : ಹಣ್ಣಿನ ಬುಟ್ಟಿ : ಪು.೯

೧೬೩) ಪಳಕಳ ಸೀತಾರಾಮ ಭಟ್ಟ : ರೈತ–ಚಿಣ್ಣನ ಚೀಲ : ಪು.೧೧

೧೬೪) ಪಳಕಳರ ಸಂವಾದದ ಅಭಿವ್ಯಕ್ತಿ ನುಡಿಗಳು : ೨೦೦೫ ಆಳ್ವಾಸ ನುಡಿಸಿರಿ

೧೬೫) ಪಳಕಳ ಸೀತಾರಾಮ ಭಟ್ಟ : ಪಳಕಳರ ಕಥಾ ಸಂಪುಟ : ಪು.೨೨

೧೬೬) ಪಳಕಳ ಸೀತಾರಾಮ ಭಟ್ಟ : 'ಅವನ ಕಣ್ಣುಗಳಿಂದ ನೋಡುತ್ತಿದ್ದಾಳೆ' : ಮುನ್ನುಡಿ : ಪು.೪

೧೬೭) ಪಳಕಳ ಸೀತಾರಾಮ ಭಟ್ಟ : ಪಳಕಳರ ಕಥಾ ಸಂಪುಟ : ಪು.೧೬

೧೬೮) ಎಂ. ರಾಮಚಂದ್ರ : 'ಪಂಜೆ ಮಂಗೇಶರಾಯರು' : ಪು.೩೧

೧೬೯) ಆನಂದ ವಿ. ಪಾಟೀಲ : 'ಅಲರು' : ಪು.೨೪

೧೭೦) ಪಳಕಳ ಸೀತಾರಾಮ ಭಟ್ಟ : 'ಪಳಕಳರ ಕಥಾ ಸಂಪುಟ' : ಪು.೮

೧೭೧) ಪಳಕಳ ಸೀತಾರಾಮ ಭಟ್ಟ : 'ಹಾಲು ಯಾಕೆ ಉಕ್ಕಿತು?' : ಪು.೫೭

೧೭೨) ಈಶ್ವರಚಂದ್ರ ವಿದ್ಯಾಸಾಗರ : ಪಳಕಳ ಸೀತಾರಾಮ ಭಟ್ಟ : ಪು.೩

೧೭೩) ಪಳಕಳ ಸೀತಾರಾಮ ಭಟ್ಟ : ಒಂದು ಗಿಡದ ಆತ್ಮಕಥೆ : ಪು.೩೬

೧೭೪) ಪಳಕಳ ಸೀತಾರಾಮ ಭಟ್ಟ : ಆಟಿಕೆಗಳ ಕೂಟದಲ್ಲಿ : ಪು.೭

೧೭೫) ಪಳಕಳ ಸೀತಾರಾಮ ಭಟ್ಟ : 'ಹುಲಿಯ ಗುಹೆಗೆ ಪುಟ್ಟಿಯ ಪಯಣ' : ಪು.೪೧

೧೭೬) ಗಿರಿಜಮ್ಮ : 'ಮಕ್ಕಳ ಮಾನಸಲೋಕ' : ಪು.೫೪

೧೭೭) ಓ. ಎಲ್. ನಾಗಭೂಷಣ ಸ್ವಾಮಿ : ವಿಮರ್ಶೆಯ ಪರಿಭಾಷೆ : ಪು.೧೨೭

೧೭೮) 'ಈ ಮಾಸ' ಪತ್ರಿಕೆ : ಮೂರ್ತಿದೇರಾಜೆಯವರು ವ್ಯಕ್ತಪಡಿಸಿದ ಅಭಿಪ್ರಾಯ, ೨೦೧೨

೧೭೯) ಮಕ್ಕಳ ನಾಟಕಗಳ ಬಗ್ಗೆ ವ್ಯಕ್ತಪಡಿಸಿದ ಸಂದರ್ಶನ : ವೈದೇಹಿ ೨೦೦೨

೧೮೦) ಪಳಕಳ ಸೀತಾರಾಮಭಟ್ಟ : ಪಳಕಳರ ಆಯ್ದ ನಾಟಕಗಳು : ಕುಳ್ಳ ತಮ್ಮ : ಪು.೨೧೫

೧೮೧) ಅದೇ : ಪು.೨೨೧

೧೮೨) ಕಂಚ್ಯಾಣಿ ಶರಣಪ್ಪ : ಸೊಗಸು : ನೂರೊಂದು ಕವಿತೆಗಳು : ಪು.೧೧೬

೧೮೩) ಕಂಚ್ಯಾಣಿ ಶರಣಪ್ಪ : ಅಜ್ಜನ ಹಾಡು : ನೂರೊಂದು ಕವಿತೆಗಳು : ಪು.೪೯

೧೮೪) ಅದೇ : ಪು.೪೯

೧೮೫) ಕಂಚ್ಯಾಣಿ ಶರಣಪ್ಪ : ಪುಟ್ಟಿಯ ಪಾಪ : ನೂರೊಂದು ಕವಿತೆಗಳು : ಪು.೧೩

೧೮೬) ಕಂಚ್ಯಾಣಿ ಶರಣಪ್ಪ : ನವೀನ ಲೀಲೆ : ನೂರೊಂದು ಕವಿತೆಗಳು : ಪು.೧೨

೧೮೭) ಕಂಚ್ಯಾಣಿ ಶರಣಪ್ಪ : ಜಾಣ ಪುಟ್ಟು : ನೂರೊಂದು ಕವಿತೆಗಳು : ಪು.೫೧

೧೮೮) ಕಂಚ್ಯಾಣಿ ಶರಣಪ್ಪ : ಕಾಡುವ ಕೂಸು : ನೂರೊಂದು ಕವಿತೆಗಳು : ಪು.೭೯

೧೮೯) ಕಂಚ್ಯಾಣಿ ಶರಣಪ್ಪ : ಗುರುಗಳೆಂಥ ಜಾಣರು : ನೂರೊಂದು ಕವಿತೆಗಳು : ಪು.೧೦೭

೧೯೦) ಕಂಚ್ಯಾಣಿ ಶರಣಪ್ಪ :ಚಲುವಿನ ಚೇತನ : ನೂರೊಂದು ಕವಿತೆಗಳು : ಪು.೩೦

೧೯೧) ಕಂಚ್ಯಾಣಿ ಶರಣಪ್ಪ : ಚಲುವಿನ ಚೇತನ ನೂರೊಂದು ಕವಿತೆಗಳು : ಪು.೩೦

೧೯೨) ಕಂಚ್ಯಾಣಿ ಶರಣಪ್ಪ : ಮೋಡ ಬಂತು ನೋಡ : ಬೆದರು ಬೆಚ್ಚ : ಪು.೨೭

೧೯೩) ಕಂಚ್ಯಾಣಿ ಶರಣಪ್ಪ : ಮುಂಗಾರಿ : ಬೆದರು ಬೆಚ್ಚ : ಪು.೩೬

೧೯೪) ಕಂಚ್ಯಾಣಿ ಶರಣಪ್ಪ : ಮುಂಗಾರಿ : ಬೆದರು ಬೆಚ್ಚ : ತೊಟ್ಟಿಲು ಗುಬ್ಬಿ : ಪು.೧೪

೧೯೫) ಕಂಚ್ಯಾಣಿ ಶರಣಪ್ಪ : ಕಾಮನ ಬಿಲ್ಲು : ತೊಟ್ಟಿಲು ಗುಬ್ಬಿ : ಪು.೧೪

೧೯೬) ಕಂಚ್ಯಾಣಿ ಶರಣಪ್ಪ : ಮೋಡ ಮಾತನಾಡುತಿವೆ : ತೊಟ್ಟಿಲುಗುಬ್ಬಿ : ಪು.೧೮

೧೯೭) ಕಂಚ್ಯಾಣಿ ಶರಣಪ್ಪ : ಮೋಡ ಮಾತನಾಡುತಿವೆ : ತೊಟ್ಟಿಲುಗುಬ್ಬಿ : ಪು.೧೯

೧೯೮) ಕಂಚ್ಯಾಣಿ ಶರಣಪ್ಪ : ಗುಡು ಗುಡು ಮುತ್ಯಾ ಬಂದಾನ : ತೊಟ್ಟಿಲುಗುಬ್ಬಿ : ಪು.೩೧
೧೯೯) ಕಂಚ್ಯಾಣಿ ಶರಣಪ್ಪ : ಜಾಗೃತ ಭಾರತ : ನೂರೊಂದು ಕವಿತೆಗಳು : ಪು.೫೦
೨೦೦) ಕಂಚ್ಯಾಣಿ ಶರಣಪ್ಪ : ಗಾಂಧಿ ತಾತನು : ನೂರೊಂದು ಕವಿತೆಗಳು : ಪು.೯೪
೨೦೧) ಕಂಚ್ಯಾಣಿ ಶರಣಪ್ಪ : ದಯಾಮೂರ್ತಿ ಬುದ್ಧ : ನೂರೊಂದು ಕವಿತೆಗಳು : ಪು.೧೩೯
೨೦೨) ಕುವೆಂಪು : ಪಕ್ಷಿಕಾಶಿ : ಆನಂದಮಯ ಈ ಜಗ ಹೃದಯ : ಪು.೪
೨೦೩) ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು : ಬೆಂ.ವಿ.ವಿ. ೧೯೮೧ : ಸುಜನಾ : ಪು.೩೯
೨೦೪) ಕಂಚ್ಯಾಣಿ ಶರಣಪ್ಪ : ಬಣ್ಣದ ಬೆಳಗು : ತೊಟ್ಟಿಲು ಗುಬ್ಬಿ : ಪು.೧೧
೨೦೫) ಕಂಚ್ಯಾಣಿ ಶರಣಪ್ಪ : ಕನಸು : ತಮ್ಮನ ಶಾಲೆ : ಪು.೨೯
೨೦೬) ಕಂಚ್ಯಾಣಿ ಶರಣಪ್ಪ : ಹಗಲಿನ ಚಂದಿರ : ಬೆದರು ಬೆಚ್ಚ : ಪು.೧೧
೨೦೭) ಡಾ. ಮಲ್ಲಿಕಾರ್ಜುನ ಮೇತ್ರಿ : ಕರ್ನಾಟಕ ಗಾಂಧಿ : ಪು.೫೮
೨೦೮) ಕಂಚ್ಯಾಣಿ ಶರಣಪ್ಪ : ಸತ್ಯಂಸದ ಮಾದ : ನೂರೊಂದು ಕವಿತೆಗಳು : ಪು.೭೬
೨೦೯) ಅದೇ : ಪು.೭೭
೨೧೦) ಕಂಚ್ಯಾಣಿ ಶರಣಪ್ಪ : ನರಳುತಿಹವು ನದಿಗಳು : ತಮ್ಮನ ಶಾಲೆ : ಪು.೩೯
೨೧೧) ಕಂಚ್ಯಾಣಿ ಶರಣಪ್ಪ : ಕಲಿಯಬೇಕು : ತೊಟ್ಟಿಲು ಗುಬ್ಬಿ : ಪು.೭
೨೧೨) ಕಂಚ್ಯಾಣಿ ಶರಣಪ್ಪ : ನೀನೆನಗಾದರೆ ನಾ ನಿನಗೆ : ತಮ್ಮನ ಶಾಲೆ : ಪು.೧೬
೨೧೩) ಜಿ.ಎಸ್. ಶಿವರುದ್ರಪ್ಪ (ಸಂ.) : ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ : ಪು.೧೦೬
೨೧೪) ಕಂಚ್ಯಾಣಿ ಶರಣಪ್ಪ : ಕೌದಿ : ನೂರೊಂದು ಕವಿತೆಗಳು : ಪು.೨೫
೨೧೫) ಕಂಚ್ಯಾಣಿ ಶರಣಪ್ಪ : ಊರಿಗೆ ಜೋಗೇರು ಬಂದಾರ : ನೂರೊಂದು ಕವಿತೆಗಳು : ಪು.೨೯
೨೧೬) ಕಂಚ್ಯಾಣಿ ಶರಣಪ್ಪ : ಹೆಂಡಿಯ ಪಾಂಡವರು : ನೂರೊಂದು ಕವಿತೆಗಳು : ಪು.೩೫
೨೧೭) ಕಂಚ್ಯಾಣಿ ಶರಣಪ್ಪ : ಬೆದರು ಬೆಚ್ಚ : ಬೆದರು ಬೆಚ್ಚ : ಪು.೨೧
೨೧೮) ಕಂಚ್ಯಾಣಿ ಶರಣಪ್ಪ : ಜಡ್ಡಿನ ಜಾತ್ರೆ : ನೂರೊಂದು ಕವಿತೆಗಳು : ಪು.೧೪೬
೨೧೯) ಎನ್. ಪ್ರಲ್ಹಾದರಾವ್ : ಲೇಖನ ಕಲೆ : ಪು.೮೨
೨೨೦) ಕಂಚ್ಯಾಣಿ ಶರಣಪ್ಪ : ಅಂದದ ಆಟ : ಗುಡು ಗುಡು ಗುಂಡ : ಪು.೧೧
೨೨೧) ಕಂಚ್ಯಾಣಿ ಶರಣಪ್ಪ : ಹೋಳಿ ಹಬ್ಬ : ಗುಡು ಗುಡು ಗುಂಡ : ಪು.೨೬
೨೨೨) ಕಂಚ್ಯಾಣಿ ಶರಣಪ್ಪ : ಗುರುಗಳೆಂಥ ಜಾಣರು : ನೂರೊಂದು ಕವಿತೆಗಳು : ಪು.೧೦೭
೨೨೩) ಕಂಚ್ಯಾಣಿ ಶರಣಪ್ಪ : ನಮ್ಮ ಶಾಲೆ : ತೊಟ್ಟಿಲು ಗುಬ್ಬಿ : ಪು.೧೨

೨೨೪) ಕಂಚ್ಯಾಣಿ ಶರಣಪ್ಪ : ಸೊಂಡಿ ಗಣಪ : ಗುಡು ಗುಡು ಗುಂಡ : ಪು.೭
೨೨೫) ಕಂಚ್ಯಾಣಿ ಶರಣಪ್ಪ : ಅಜ್ಜನ ಹಾಡು : ಗುಡು ಗುಡು ಗುಂಡ : ಪು.೧೯
೨೨೬) ಕಂಚ್ಯಾಣಿ ಶರಣಪ್ಪ : ಕುಟ್ಟುವ ಹಾಡು : ಗುಡು ಗುಡು ಗುಂಡ : ಪು.೨೩
೨೨೭) ಗುರುಲಿಂಗ ಕಾಪಸೆ (ಸಂ.) : ಮಕ್ಕಳ ಸಾಹಿತ್ಯ ಚಿಂತನೆ : ಪು.೧೮
೨೨೮) ಕಂಚ್ಯಾಣಿ ಶರಣಪ್ಪ : ಮಜ್ಜಿಗೆ : ಗುಡು ಗುಡು ಗುಂಡ : ಪು.೨೩
೨೨೯) ಶಿವಶಂಕರ ಹಿರೇಮಠ & ಈಶ್ವರ ಕಮ್ಮಾರ (ಸಂ.) : ಮಕ್ಕಳ ಸಾಹಿತ್ಯ ಚಿಂತನ : ಪು.೧೮೭
೨೩೦) ವಿವಿಧ ಲೇಖಕರು : ಮಕ್ಕಳ ಸಾಹಿತ್ಯ ಸ್ವರೂಪ : ಪು.೬೦
೨೩೧) ಓ. ಎಲ್. ನಾಗಭೂಷಣಸ್ವಾಮಿ : ವಿಮರ್ಶೆಯ ಪರಿಭಾಷೆ : ಪು.೨೬೧
೨೩೨) ಈಶ್ವರ ಕಮ್ಮಾರ : ಮಕ್ಕಳ ಕವನ ಸಾಹಿತ್ಯ : ಪು.೧೫೨
೨೩೩) ಪಂಜೆರಾಮರಾಯರು : ಹಾವಿನ ಹಾಡು : ಪಂಜೆಯವರ ಕೃತಿಗಳು, ಸಂಪುಟ–೧ : ಪು.೧೬೦
೨೩೪) ಪಂಜೆರಾಮರಾಯರು : ಉದಯರಾಗ : ಪಂಜೆಯವರ ಕೃತಿಗಳು, ಸಂಪುಟ–೧ : ಪು.೧೬೪
೨೩೫) ಪಂಜೆರಾಮರಾಯರು : ತೆಂಕಣಗಾಳಿಯಾಟ : ಪಂಜೆಯವರ ಕೃತಿಗಳು, ಸಂಪುಟ–೧ : ಪು.೧೫೨
೨೩೬) ಪಳಕಳ ಸೀತಾರಾಮಭಟ್ಟ : ಇರುವೆ ನೀತಿ : ಪಳಕಳರ ಆಯ್ದು ಕವನಗಳು : ಪು.೮೬
೨೩೭) ಪಳಕಳ ಸೀತಾರಾಮಭಟ್ಟ : ಹಕ್ಕಿ ಯಾವುದು? : ಪಳಕಳರ ಆಯ್ದ ಕವನಗಳು: ಪು.೧೭೮
೨೩೮) ಪಳಕಳ ಸೀತಾರಾಮಭಟ್ಟ : ಬರಲಿ ಹಬ್ಬ : ಪಳಕಳರ ಆಯ್ದ ಕವನಗಳು : ಪು.೨೫೧
೨೩೯) ಡಾ. ವರದಾ ಶ್ರೀನಿವಾಸ : ಪಂಜೆಮಂಗೇಶರಾಯರ ಕೃತಿಗಳು : ಪು.೨೫೩
೨೪೦) ದೇ.ಜ.ಗೌ : ಗದ್ಯಶೈಲಿ : ಪು.೧೭೦
೨೪೧) ಡಾ. ಕೃಷ್ಣಮೂರ್ತಿ ಕಿತ್ತೂರ : ಗಳಗನಾಥರ ಮತ್ತು ಅವರ ಕಾದಂಬರಿ : ಪು.೩೩೪
೨೪೨) ಗಿರಡ್ಡಿ ಗೋವಿಂದರಾಜ : ಕಾದಂಬರಿ ವಸ್ತು ಮತ್ತು ತಂತ್ರ : ಪು.೩

❑❑❑❑❑

ಅಧ್ಯಾಯ – ೬
ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯ ಹೊಸ ಸಾಧ್ಯತೆಗಳು

ಜನಜೀವನದ ಪ್ರತಿರೂಪವೇ ಸಾಹಿತ್ಯ. ಜನಜೀವನ ಸುಂದರವಾಗಬೇಕಾದರೆ, ಬದುಕಿನಲ್ಲಿ ಬದಲಾವಣೆ ಹೊಂದಬೇಕಾದರೆ ಅದಕ್ಕೆ ಹಿನ್ನೆಲೆಯಾಗಿ ಸಾಹಿತ್ಯ ಇರುವುದು ಸಹಜ. ಸಾಹಿತ್ಯದ ಉದ್ದೇಶ ಆನಂದ, ಸಂತೋಷವನ್ನು ನೀಡುವುದು. ಸತ್ಯ-ನಿಷ್ಠೆ-ಸಹಬಾಳುವೆ ನೆರೆಹೊರೆಯವರಲ್ಲಿ ಮೂಡಿಸುವ ವಿದ್ಯೆ. ಹೀಗಾಗಿ ಸಾಹಿತ್ಯ ಜೀವನದ ಅವಿಭಾಜ್ಯ ಅಂಗವಾಗಿದೆ. ಇಂಥ ಸಾಹಿತ್ಯ ಮಕ್ಕಳಿಗೆ ಅರ್ಥವಾಗುವ, ತಿಳುವಳಿಕೆಗೆ ನಿಲುಕುವ ರೀತಿಯಲ್ಲಿ ಇರುವುದು ಅಗತ್ಯ. ಮಕ್ಕಳು ಸುತ್ತಮುತ್ತ ಇರುವ ಪರಿಸರ, ತಂದೆ, ತಾಯಿ, ಬಂಧುಗಳು, ಸಮಾಜ ಮುಂತಾದವುಗಳನ್ನು ಸಹಜವಾಗಿ ಅನುಕರಿಸುತ್ತವೆ. ಮಗು ಹಲವು ಅನುಕರಣೆಗಳನ್ನು ಗಮನಿಸುತ್ತದೆ. ಅವು ಎಷ್ಟು ಪೂರಕವೆಂಬುದನ್ನು ಅರಿತುಕೊಂಡು ಮಕ್ಕಳಿಗೆ ಯೋಗ್ಯವಾಗದ ಸಾಹಿತ್ಯವನ್ನು ಒದಗಿಸಬೇಕಾಗುತ್ತದೆ. ಮಕ್ಕಳಿಗೆ ಸಹಜ ಜ್ಞಾನ ಮೂಡಿಸುವ ಅಭಿವ್ಯಕ್ತಿ ಅಗತ್ಯವಾಗಿ ಬೇಕು. ಈ ಹೊತ್ತಿನ ಹಲವಾರು ದುಗುಡು, ಭಯ, ಒತ್ತಡ, ತುಮುಲ, ತಲ್ಲಣಗಳು ಮಕ್ಕಳ ಮೇಲೆ ಪ್ರಭಾವಿಸುತ್ತವೆ. ಇವುಗಳ ಜೊತೆಯಲ್ಲಿ ಮಕ್ಕಳು ಬದುಕನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಮಕ್ಕಳ ಸಾಹಿತ್ಯ ಕ್ರಿಯಾಶೀಲಗೊಳ್ಳುತ್ತ ಹೋದಂತೆ ಮಕ್ಕಳ ದುಗುಡ, ಒತ್ತಡ, ತಲ್ಲಣಗಳು ದೂರಾಗಲು ಸಾಧ್ಯವಾಗುತ್ತದೆ.

'ಮಕ್ಕಳ ಸಾಹಿತ್ಯ ಮತ್ತು ಸಾಹಿತ್ಯಕ ಯೋಜನೆ' ಒಂದು ಟಿಪ್ಪಣಿಯಲ್ಲಿ ಡಾ. ಜಿ. ಎಸ್. ಕಾಪಸೆಯವರು ಹೀಗೆ ಅಭಿಪ್ರಾಯಪಡುತ್ತಾರೆ. 'ಜೀವನ ಮೌಲ್ಯಗಳು ಕುಸಿಯುತ್ತಿರುವ ಇಂದಿನ ಸಂದರ್ಭದಲ್ಲಿ ಮಾನವ-ಮಾನವರಲ್ಲಿ ಬಾಂಧವ್ಯ ಬೆಸೆಯುವ ಕಾರ್ಯ ತೀವ್ರವಾಗಿ ನಡೆಯಬೇಕಾಗಿದೆ. ಪ್ರಾಮಾಣಿಕತೆ ಮತ್ತು ಸತ್ಯ ಜೀವನದಲ್ಲಿ ಗಟ್ಟಿಯಾಗಿ ನೆಲೆಯಾಗಿ ನಿಲ್ಲಬೇಕಾಗಿದೆ. ಆದ್ದರಿಂದ ಮಕ್ಕಳ ಶಿಕ್ಷಣವು ತರಗತಿಯಿಂದ ತರಗತಿಗೆ ಮುಂದು ಹೋಗುವುದಷ್ಟೇ ಅಲ್ಲ. ಬರೀ ಶ್ರೇಣಿಗಳ ಮೇಲೆ, ನೌಕರಿಯ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸುವದಲ್ಲ. ಬದುಕನ್ನು ಹಸನುಗೊಳಿಸುವ, ಕರ್ತವ್ಯ ದಕ್ಷತೆಯನ್ನು ಹೆಚ್ಚಿಸುವ, ಶಿಸ್ತು ಸಂಯಮಗಳನ್ನು ರೂಢಿಸಿಕೊಳ್ಳುವ ವ್ಯಕ್ತಿತ್ವ ನಿರ್ಮಾಣ ಮಾಡುವ ಗುರಿಯನ್ನು

ಹೊಂದಬೇಕಾಗಿದೆ. ಇದೆಲ್ಲ ಚಿಕ್ಕಂದಿನಲ್ಲಿಯೇ ಮೈಗೂಡಿಸಿಕೊಳ್ಳುವುದು. ಇದು ಸಾಹಿತ್ಯದಿಂದಲೇ ಸಾಧ್ಯವೆಂಬುದು ಅರಿತ ಸಂಗತಿಯಾಗಿದೆ.

ಕನ್ನಡ ಸಾಹಿತ್ಯದ ಆರಂಭಕಾಲದಿಂದಲೂ ಕಂಡುಬರುವ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮೊದಲಾದ ಕಾವ್ಯ ಪ್ರಕಾರಗಳನ್ನು ಬಿಟ್ಟು ಹೊಸ ದಾರಿಯನ್ನು ಕಂಡುಕೊಂಡಿರುವುದು. ಆಧುನಿಕ ಕನ್ನಡ ಸಾಹಿತ್ಯ ಅಥವಾ ಹೊಸಗನ್ನಡ ಸಾಹಿತ್ಯ ಅದರಲ್ಲೂ ನವೋದಯದ ಸಂದರ್ಭ ಬಹುಮುಖ್ಯ ತಿರುವನ್ನು ಪಡೆದುಕೊಂಡ ಕಾಲವಾಗಿದೆ. ಕನ್ನಡ ಸಾಹಿತ್ಯ ಕಾಲದಿಂದ ಕಾಲಕ್ಕೆ, ಹೊಸ-ಹೊಸ ಪ್ರಯೋಗಗಳಿಂದ ತನ್ನದೇ ವೈವಿಧ್ಯತೆಯೊಂದಿಗೆ ನೀಡಿದ ಕೊಡುಗೆ ಅಪಾರ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ದೇಶಿಯ ಮೂಲದೊಂದಿಗೆ ನೂತನ ಸಾಹಿತ್ಯ ಮೂಡಲು ಸಾಧ್ಯವಾಗಿದೆ. ಪ್ರಾಚೀನ ಸಾಹಿತ್ಯ ಕೇವಲ ಕಾವ್ಯಕ್ಕೆ ಸೀಮಿತವಾಗಿದ್ದರೆ, ಹೊಸಗನ್ನಡ ಸಾಹಿತ್ಯ ಭಾವಗೀತೆ, ಕಥೆ, ಕಾದಂಬರಿ, ಪ್ರಬಂಧ, ನಾಟಕ, ಚುಟುಕು, ಮಕ್ಕಳ ಸಾಹಿತ್ಯ, ಪ್ರವಾಸ ಸಾಹಿತ್ಯ, ಪತ್ರಿಕಾ ಸಾಹಿತ್ಯ, ಮಹಿಳಾ ಸಾಹಿತ್ಯ ಹೀಗೆ ಹಲವು ಬಗೆಯಾಗಿ ಬೆಳೆದಿದೆ. ವಸಾಹತುಶಾಹಿ ಸಂಪರ್ಕದಿಂದ, ಹೊಸ ಶಿಕ್ಷಣ ನೀತಿಯಿಂದ 'ಮಕ್ಕಳ ಸಾಹಿತ್ಯ' ರೂಪುತಾಳಿರುವುದು ವಿಶೇಷ. ಮಕ್ಕಳ ಸಾಹಿತ್ಯ ಸ್ವರೂಪವೂ ಹೊಸ ಆಯಾಮವನ್ನು ಪಡೆದುಕೊಂಡಿತು.

ಮಕ್ಕಳ ಸಾಹಿತ್ಯದ ಪ್ರಾಚೀನತೆಯನ್ನು ಖಚಿತವಾಗಿ ಹೇಳುವುದು ಅಸಾಧ್ಯ. ಗುಣಾಢ್ಯನ 'ಬ್ರಹತ್ಕಥೆ' ವಸುಭಾಗಭಟ್ಟನ 'ಪಂಚತಂತ್ರ' ಕ್ಷೇಮೇಂದ್ರನ 'ಬ್ರಹತ್ಕಥಾ ಮಂಜರಿ' ಮೊದಲಾದ ಕೃತಿಗಳು ನೀತಿ ಬೋಧನೆ ಹಾಗೂ ಮನರಂಜನೆಯೇ ಮೂಲ ಉದ್ದೇಶವೆಂದು ತಿಳಿಯುತ್ತದೆ. ಮಕ್ಕಳು ಇವುಗಳನ್ನು ಬಲು ಆಸಕ್ತಿಯಿಂದ, ಕುತೂಹಲದಿಂದ ನೋಡುವ ಪ್ರವೃತ್ತಿ ಬೆಳೆಸಿಕೊಳ್ಳಲು ಸಾಧ್ಯವಾಯಿತು. ಮುಂದೆ ಜಾನಪದ ಮೂಲವಾಗಿ ಬಂದ ಜೋಗುಳ ಹಾಡುಗಳು, ಆಟದ ಹಾಡುಗಳು, ಕೋಲಾಟದ ಪದಗಳು, ಒಗಟುಗಳು, ಅಜ್ಜ-ಅಜ್ಜಿಯರ ಕಥೆಗಳು ಮೌಖಿಕವಾಗಿ ಮೂಡಿದವು. ನಂತರದ ಸಮಯದಲ್ಲಿ ವಾಸುದೇವಯ್ಯನವರ 'ಬಾಲಬೋಧೆ' ಮಕ್ಕಳ ಸಾಹಿತ್ಯಕ್ಕೆ ನಾಂದಿಯಾಗಿ ಹೊರಹೊಮ್ಮಿದ ಕೃತಿ. ಎಂ. ಎಸ್. ಪುಟ್ಟಣ್ಣನವರ 'ನೀತಿ ಚಿಂತಾಮಣಿ', ಪಂಜೆಮಂಗೇಶರಾಯರ 'ಹಾವಿನ ಹಾಡು' ಮೊದಲಾಗಿ ಸಮೃದ್ಧ ಬೆಳೆ ಮಕ್ಕಳಿಗೆ ದೊರೆಯಲಾರಂಭಿಸಿತು. ಎಂ. ಎಸ್. ಕಾಮತ್, ಹೊಯ್ಸಳ, ಶ್ರೀಮತಿ ಆರ್. ಕಲ್ಯಾಣಮ್ಮ, ಜಿ. ಪಿ. ರಾಜರತ್ನಂ, ಕುವೆಂಪು, ಶಿವರಾಮ ಕಾರಂತ, ಬಿ. ಎ. ಸನದಿ, ಸಿಸು ಸಂಗಮೇಶ, ಶರಣಪ್ಪ ಕಂಚ್ಯಾಣಿ, ನಾ. ಡಿಸೋಜಾ, ಎಚ್. ಎಸ್. ವೆಂಕಟೇಶಮೂರ್ತಿ, ಎಂ. ಡಿ. ಗೋಗೇರಿ, ದು. ನಿಂ. ಬೆಳಗಲಿ, ಎಸ್. ಡಿ. ಇಂಚಲ ಮೊದಲಾದವರು ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಮಕ್ಕಳ ಸಾಹಿತ್ಯ ಇಷ್ಟೆಲ್ಲಾ ಇತಿಹಾಸ ಪರಂಪರೆ ಹೊಂದಿದ್ದರೂ ಇಂದಿನ ವಾಸ್ತವಿಕತೆಯನ್ನು ನೋಡಿದಾಗ ಮಗು ಸ್ಪರ್ಧಾತ್ಮಕವಾದ ಜಗತ್ತಿನಲ್ಲಿರುವುದರಿಂದ ಅದಕ್ಕೆ ಅನುಗುಣವಾದ ಸಾಹಿತ್ಯ ರಚನೆ ಅವಶ್ಯಕವಾಗಿ ಬೇಕು. ಇಂದು ಮಕ್ಕಳ ಸಾಹಿತ್ಯ ಅಲಕ್ಷಿತವಾಗುತ್ತಿದೆ. ಮಕ್ಕಳ ಅಭಿರುಚಿಗೆ ತಕ್ಕಂತೆ ಸಾಹಿತ್ಯ ಸಿಗದಿರುವುದೇ ಮುಖ್ಯ ಕಾರಣ. ಇಂದಿನ ಮಕ್ಕಳು ಹಿಂದಿನಂತಿಲ್ಲ. ಇಂದಿನ ವೈಜ್ಞಾನಿಕ ಯುಗಕ್ಕೆ ಹೊಂದಿಕೊಳ್ಳುವ ವಿದ್ಯೆಯ ಸ್ವರೂಪ ನಿರ್ಮಾಣವಾಗಬೇಕಾಗಿದೆ. ಇಂದು ಮಕ್ಕಳು ವಿಶ್ವದ ಮೂಲೆ–ಮೂಲೆಯಿಂದ ಅಚ್ಚರಿಪಡುವಂತಹ ಅಪೂರ್ವ ಮಾಹಿತಿಯನ್ನು ಪಡೆದಿರುತ್ತವೆ. ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಂಡಿರುತ್ತದೆ. ಹೀಗಾಗಿ ಪರಂಪರೆಯಿಂದ ಬಂದ ಕಥೆಗಳು ಮಕ್ಕಳಿಗೆ ರುಚಿಸದೆ ಹೋಗಬಹುದು.

ಮಕ್ಕಳ ಸಾಹಿತ್ಯವನ್ನು ಗಮನಿಸಿದರೆ ಸಾಹಿತ್ಯ ರಚನೆಯ ಮೂಲಕ ಕೊಡುವ ಶಿಕ್ಷಣ ಅವರ ಮುಂದಿನ ಭವಿಷ್ಯವನ್ನು ರೂಪಿಸುತ್ತದೆ. ಮಕ್ಕಳ ಮುಗ್ಧ, ಮೃದು ಮನಸ್ಸಿನ ಮೇಲೆ ಉತ್ತಮ ಪರಿಣಾಮ ಬೀರಬಹುದು. ಮಕ್ಕಳಿಗಾಗಿ ದೂರದೃಷ್ಟಿಯನ್ನಿಟ್ಟುಕೊಂಡು ಸಾಹಿತ್ಯ ರಚನೆ ಮಾಡಬೇಕು. ಮೂಢನಂಬಿಕೆಗಳ ಕಥೆಗಳನ್ನು ಮಕ್ಕಳಿಗೆ ಬರೆಯುವುದನ್ನು ನಿಲ್ಲಿಸಬೇಕು. ಈ ಬಗ್ಗೆ ಮಕ್ಕಳ ಸಾಹಿತಿಗಳು ಲಕ್ಷ್ಯವಹಿಸಬೇಕು. ಭವಿಷ್ಯದಲ್ಲಿ ನಾಡು ಕಟ್ಟುವ ದಿಸೆಯಲ್ಲಿ ಮಕ್ಕಳ ಸಾಹಿತ್ಯ ನಿರ್ಮಿಸುವ ಕೆಲಸ ನಡೆಯಬೇಕು. ಮಕ್ಕಳ ಸಾಹಿತ್ಯ ನಿರ್ಮಾಪಕರು ಹೆಚ್ಚು ಸಮಯ ಮಕ್ಕಳ ಜೊತೆಯಾಗಿರುವುದರಿಂದ ಅವರ ಒಲವು–ನಿಲುವುಗಳನ್ನು ಅರಿತುಕೊಂಡು ಮಕ್ಕಳಿಗೆ ಬೇಕಾದ ಸುಲಭವಾದ ಸುಂದರವಾದ ಭಾಷೆಯಲ್ಲಿ ಮಕ್ಕಳ ಸಾಹಿತ್ಯ ರಚಿಸಬೇಕಾಗುವುದು. 'ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಬಾಲಸಾಹಿತ್ಯವಾಗಲಿ, ಇನ್ನಷ್ಟು ದುರ್ಲಭದ ಶಿಶುಸಾಹಿತ್ಯವಾಗಲಿ ಪುಷ್ಟಿಗೊಂಡಿದ್ದು ಉಪಾಧ್ಯಾಯ ವರ್ಗದವರಿಂದ, ಮೇಕ್ಮಿಲನ್ ಸಂಸ್ಥೆ, ಬಾಸೆಲ್ ಮಿಶನ್ ಸಂಸ್ಥೆಗಳ ಸ್ನೇಹ, ಸಂಪರ್ಕದಿಂದ ಪಠ್ಯಪುಸ್ತಕಗಳಲ್ಲಿ ನಮ್ಮ ಹಿರಿಯರ ಕೃತಿಗಳು ಬಂದವು. ಶಾಲಾ ಚಟುವಟಿಕೆಗಳ ನೆಪದಿಂದ ಕತೆ, ಕವನ, ನಾಟಕಗಳನ್ನು ಬರೆಯುತ್ತ, ಪತ್ರಿಕೋದ್ಯಮದ ನೆರವಿನಿಂದ ಮಕ್ಕಳ ಕೃಷಿಯನ್ನು ವಿಸ್ತರಿಸುತ್ತ ಪಂಜೆಯವರು, ಎಂ. ಎನ್. ಕಾಮತ್‌ರು, ಕೊರಡ್ಕರ್ ಶ್ರೀನಿವಾಸರಾಯರು, ತಮ್ಮ ಕೈಗಳನ್ನು ಇನ್ನಷ್ಟು ವಿಸ್ತಾರಕ್ಕೆ ಚಾಚಿದರು'[೧] ಎಂದು ಶಿವರಾಮ ಕಾರಂತರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಹೊರ ನೋಟದಿಂದ ಮಕ್ಕಳ ಸಾಹಿತ್ಯ ಸರಳವೆನಿಸಿದರೂ ಸಹ ಇದು ಕಠಿಣವಾದುದು. ಈ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಾಥಮಿಕ ಶಾಲೆಯ ಶಿಕ್ಷಕರು ಹೆಚ್ಚು ಸಾಧನೆ ಮಾಡಿರುವರು. ಯಾಕೆಂದರೆ ಕಲಿಸುವ ಪಠ್ಯ, ಅವರ ಹಾವಭಾವಗಳು, ಚಲನವಲನಗಳು ಮಕ್ಕಳನ್ನು ಅರಿತುಕೊಳ್ಳಲು ಸಹಕಾರಿಯಾಗಿವೆ. ಮಕ್ಕಳ ಮನಸ್ಸುಗಳೊಂದಿಗೆ ಒಡನಾಟವಿರುವದರಿಂದ ಮುಗ್ಧತೆಯು ಪ್ರಧಾನವಾಗಿ ಒಳಗೊಂಡಿರುವುದು.

ಅಭಿರುಚಿ ಎನ್ನುವುದು ಪ್ರತಿಯೊಬ್ಬರಲ್ಲಿ ಇರುವಂತಹದ್ದು, ಅಭಿವ್ಯಕ್ತಿ ರೂಪ ಭಿನ್ನವಾಗಿರುತ್ತದೆ. ಕೆಲವರು ಅದನ್ನು ಯಾವ ರೀತಿಯಾಗಿ ಗ್ರಹಿಸಬೇಕೆಂಬುದು ತಿಳಿದಿರುವುದಿಲ್ಲ. ಈ ಕಾರಣದಿಂದಾಗಿ ಮಕ್ಕಳ ಸಾಹಿತ್ಯ ಕಾಲ ಮತ್ತು ಸಂದರ್ಭಕ್ಕೆ ತಕ್ಕಂತೆ ವಯೋಮಾನಕ್ಕೆ ಅನುಗುಣವಾಗಿ ರಚನೆಯಾಗಿರಬೇಕು. ಪರಿಸರ ಮತ್ತು ಪರಿಸ್ಥಿತಿಗೆ ಹೊಂದಿಕೆಯಾಗುವ ಆಯಾಮದೊಂದಿಗೆ, ಮಕ್ಕಳ ಮನಸ್ಸಿನ ವಾತ್ಸಲ್ಯ, ಪ್ರೀತಿ, ಸ್ವಾಭಿಮಾನ, ಗೌರವ ಮೊದಲಾದವುಗಳನ್ನು ಅರಿತುಕೊಂಡು ಕಲ್ಪನೆಯ ಹೊಸ ಲೋಕದ ಅರಿವನ್ನು ಮಾಡುವುದು, ಮಾನವೀಯ ಮೌಲ್ಯಗಳನ್ನು ಬಿತ್ತುವ, ನೈತಿಕ ಅರಿವು ಮೂಡುವಂತಿರಬೇಕು. ಇವುಗಳಿಂದ ಮಕ್ಕಳ ಚಿಂತನೆಯ ವಿಧಾನ ಅವರ ಆಲೋಚನಾ ಕ್ರಮಗಳು ಹೊಸದೊಂದು ಲೋಕವನ್ನು ಪ್ರವೇಶಿಸಲು ಸಾಧ್ಯವಿದೆ.

ಮಕ್ಕಳ ಸಾಹಿತ್ಯಕ್ಕೆ ಸ್ಪಂದಿಸುವಲ್ಲಿ ಪರಿಸರ ಮಹತ್ವದ ಪಾತ್ರವಹಿಸುವುದರಿಂದ ಸಾಹಿತ್ಯವನ್ನು ರಚಿಸುವಾಗ, ಏತಕ್ಕಾಗಿ, ಯಾವ ಮಕ್ಕಳಿಗಾಗಿ ರಚಿಸುತ್ತಿದ್ದೇವೆಂಬುದನ್ನು ಕುರಿತು ವಿಚಾರ ಮಾಡಬೇಕಾಗುತ್ತದೆ. ಗ್ರಾಮೀಣ ಮಕ್ಕಳಿಗೆ ಹೊಂದುವ ಸಾಹಿತ್ಯ ನಗರ ಮಕ್ಕಳಿಗೆ ರುಚಿಸದಿರಬಹುದು. ನಗರ ಮಕ್ಕಳಿಗಾಗಿ ಬರೆದ ಸಾಹಿತ್ಯ ಗ್ರಾಮೀಣ ಪರಿಸರದ ಮಕ್ಕಳಿಗೆ ರುಚಿಸದಿರಬಹುದು. ಶ್ರೀ ಎಚ್. ಬಿ. ತಲ್ಲೂರರು ರಚಿಸಿದ ಕವನ,

'ಮಣ್ಣಿನ ಮಗ ನಾನಾಗುವೆನು
ಮಣ್ಣಲಿ ಚಿನ್ನವ ಕಾಣುವೆನು
ಉತ್ತಮ ಜಾತಿಯ ಆಕಳ ಸಾಕಿ
ಉತ್ಯುತ್ತಮ ಹೋರಿಗಳೇ ದೊರಕಿ
ಉತ್ತಲು, ಬಿತ್ತಲು ಉಪಯೋಗಿಸುವೆನು'

ಎಂಬ ಕೃಷಿ ಪ್ರಧಾನದ ಕುರಿತು ವ್ಯಕ್ತಪಡಿಸುವ ಮಾತುಗಳು ಗ್ರಾಮ ಪರಿಸರದ ಮಕ್ಕಳು ಖುಷಿ ಪಡುವುದರಲ್ಲಿ ಸಂದೇಹವಿಲ್ಲ. ನಗರ ಮಕ್ಕಳ ಆಶೆ-ಆಕಾಂಕ್ಷೆಗಳು ಭಿನ್ನವಾಗಿದ್ದು ಇವುಗಳನ್ನು ಆದರಿಸುವುದಿಲ್ಲ. ಬರಹಗಾರರೂ ಸಹ ಇದಕ್ಕೆ ಹೊರತಾಗಿಲ್ಲ. ತಾನಿರುವ ಪರಿಸರದಿಂದಲೇ ಸ್ಫೂರ್ತಿ ಪಡೆಯುತ್ತಾನೆ. ಆ ಪ್ರೇರಣೆಯಿಂದಲೇ ಸಾಹಿತ್ಯ ರಚಿಸುತ್ತಾನೆ. ಉದಾಹರಣೆಯಾಗಿ ಕುವೆಂಪು ಅವರನ್ನು ತೆಗೆದುಕೊಂಡರೆ ಸ್ಪಷ್ಟವಾಗಿ ಗೋಚರಿಸುತ್ತದೆ. ಮಲೆನಾಡಿನ ಚಿತ್ರಗಳು ಅವರು ಬೆಳೆದು ಬಂದ ಪರಿಸರಕ್ಕೆ ಸ್ಪಂದಿಸಿ ಬರೆದ ಕೃತಿಗಳೇ ಹೆಚ್ಚು, ಪ್ರಾರಂಭದಲ್ಲಿ ಮಲೆನಾಡ ಜೀವನಕ್ಕೆ ಸೀಮಿತವಾದ ಕಥೆಗಳನ್ನು ರಚಿಸಿದರು. ಅವರ ಅನುಭವ, ಜ್ಞಾನ ವಿಶಾಲವಾಗಿ ಬೆಳೆದಂತೆ ಅವರ ದೃಷ್ಟಿಕೋನವು ವಿಶಾಲವಾಗಿ ಕಾವ್ಯಗಳನ್ನು, ಸಾಹಿತ್ಯದ ವಿವಿಧ ಪ್ರಕಾರಗಳನ್ನು ರಚಿಸುವಂತೆ ಮಾಡಿತು. ವೈಯಕ್ತಿಕ ಜೀವನ ಮೌಲ್ಯಗಳಿಂದ ಆರಂಭವಾದ ಸಾಹಿತ್ಯ ರಚನೆ ಮುಂದೆ ಸರ್ವಕಾಲಿಕ ಮೌಲ್ಯವಾಗಿ ರೂಪುಗೊಂಡಿತು.

‘ತಾಯಿಯ ವಾತ್ಸಲ್ಯದ ಮಡಿಲು ಮಗುವಿನ ಜ್ಞಾನ ಮಂದಿರ ಇದ್ದಂತೆ’. ಆದರೆ ಇಂದು ವಿಜ್ಞಾನ ಯುಗ, ತಂತ್ರಜ್ಞಾನದ ಯುಗ. ಈ ಜ್ಞಾನಗಳ ನಾಗಾಲೋಟದಲ್ಲಿ ಮಾತಾಪಿತರು ಗಳಿಕೆಯ ಕಾರ್ಯದಲ್ಲಿ ಮಗ್ನರು. ಮಗು ಅನ್ಯರ ಮನೆಯಲ್ಲಿ ಬೆಳೆಯುವ ಸ್ಥಿತಿ. ಇದನ್ನೆದುರಿಸಿ ರಾಕೆಟ್ ವೇಗದಲ್ಲಿ ಬದಲಾಗುತ್ತಿರುವ ಸಮಾಜದೊಂದಿಗೆ ಹೆಜ್ಜೆ ಹಾಕುವುದು ಪ್ರತಿಯೊಬ್ಬರ ಕರ್ತವ್ಯ. ಪ್ರಗತಿಯ ನಾಗಾಲೋಟಕ್ಕೆ ಹೊಂದಿಕೊಳ್ಳಲು ಅಣಿಯಾಗುವುದು ಅವಶ್ಯವೆಂದು ವರದರಾಜ ಹುಯಿಲಗೋಳ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇಂದು ಜಾಗತೀಕರಣ, ಖಾಸಗೀಕರಣ, ಔದ್ಯೋಗಿಕರಣ, ಉದಾರೀಕರಣ, ನಗರೀಕರಣ, ಕಂಪ್ಯೂಟರೀಕರಣಗಳಂತಹ ವಿಷಕಾರಿಯಾದ ಸನ್ನಿವೇಶದಲ್ಲಿ ಸಿಲುಕಿದ ಮಾನವ ಶಾಂತಿ ಹುಡುಕುತ್ತ ಬೇರೆ–ಬೇರೆ ಚಟಗಳಿಗೆ ಅಂಟಿಕೊಳ್ಳುತ್ತಿದ್ದಾನೆ. ಅದರಿಂದ ಹೊರಬರದೇ ಸಿಕ್ಕ ಒದ್ದಾಡುತ್ತಿದ್ದಾನೆ. ಇದರಿಂದ ಮುಕ್ತನಾಗಿ ಶಾಂತಿ–ಸಮೃದ್ಧಿಯಿಂದ ಬಾಳಬೇಕಾದರೆ ಮಕ್ಕಳ ಸಾಹಿತ್ಯ ಚೆನ್ನಾಗಿ ಮೂಡಿಬರಬೇಕಿದೆ. ಹಿರಿಯರು ಮಕ್ಕಳಿಗಾಗಿ ಒಳ್ಳೆಯ ಮಾನವರಾಗಿ, ನಾಗರಿಕರಾಗಿ, ನಾಯಕರಾಗಿ ನಿರ್ಮಿಸುವ ಕಾರ್ಯದಲ್ಲಿ ತೊಡಗಬೇಕಿದೆ. ಸಾಮಾಜಿಕ, ಸಾಂಸ್ಕೃತಿಕ ಬದುಕಿನ ಪರಿಸರವನ್ನು ನೀರು, ಗೊಬ್ಬರಗಳಿಂದ ಪೋಷಿಸಬೇಕಿದೆ. ಇಂದಿನ ಸಮೂಹ ಮಾಧ್ಯಮಗಳ ಹಾವಳಿಯಿಂದಾಗಿ ಮಾನವೀಯ ಮೌಲ್ಯಗಳು ಅಪಮೌಲ್ಯಗೊಂಡು ಸಾಮಾಜಿಕ ವ್ಯವಸ್ಥೆ ಹಾಳಾಗುತ್ತಲಿದೆ. ಇದರಿಂದ ಮಕ್ಕಳಲ್ಲಿ ಸತ್ಯ, ಅಹಿಂಸೆ, ಕರ್ತವ್ಯ ಪ್ರಜ್ಞೆ, ಸಮಯದ ಅರಿವು, ಪರಿಸರ ಪ್ರೇಮ, ಸ್ವಾಭಿಮಾನ, ದೇಶಾಭಿಮಾನ ಮುಂತಾದ ಮಾನವೀಯ ಮೌಲ್ಯಗಳನ್ನು ಬೆಳೆಸುವಂತಹ ಸಾಹಿತ್ಯ ನಿರ್ಮಾಣವಾಗಬೇಕು. ಮಕ್ಕಳು ಇದರಿಂದ ಭಾವನಾತ್ಮಕವಾಗಿ, ಸೇವಾ ಮನೋಭಾವನೆಯನ್ನು ಬೆಳೆಸಿಕೊಳ್ಳಲು ಸಾಧ್ಯವಿದೆ.

‘ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಇವೆಲ್ಲವುಗಳಿಂದ ಪಾರಾಗಿ ಅವನನ್ನು ಬದ್ಧನನ್ನಾಗಿ ಪರಿವರ್ತಿಸುವುದೇ ನಮ್ಮ ಶಿಕ್ಷಣದ ಗುರಿಯಾಗಬೇಕು’[೨] ಎಂಬ ಕುವೆಂಪು ಅವರ ಮಾತುಗಳು ಕಟು ಸತ್ಯವೆನಿಸುತ್ತವೆ. ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಾಗುವಂತೆ ಮಾಡಿ, ಮಕ್ಕಳು ತಮ್ಮ ದಾರಿಯನ್ನು ಸರಿಯಾದ ರೀತಿಯಲ್ಲಿ ರೂಪಿಸಿಕೊಳ್ಳಲು ಪ್ರಯತ್ನಿಸಬೇಕಾಗಿದೆ.

ಮಕ್ಕಳ ಅಭಿವೃದ್ಧಿ ಎಂದರೆ ಒಂದು ಜನಾಂಗದ ಅಭಿವೃದ್ಧಿಯೇ ಎಂದರೂ ತಪ್ಪಾಗಲಾರದು. ಅವು ಹಿರಿ–ಕಿರಿಯರಿಗೆ ವಿಭಿನ್ನವಾಗಿ ಗೋಚರಿಸುತ್ತವೆ. ಮಕ್ಕಳ ಬೆಳವಣಿಗೆ ದೈಹಿಕವಾಗಿ ಸದೃಢವಾದರೆ ಮುಗಿಯದು. ಅವರ ದೈಹಿಕ ಬೆಳವಣಿಗೆಯೊಂದಿಗೆ ಅರಿವಿನ ಮತ್ತು ತನ್ನ ನಡೆಯ ನಿರ್ಧಾರಿಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕಾಗುತ್ತದೆ. ಮಕ್ಕಳ ಸಾಹಿತ್ಯ ಬಾಲರಿಗಷ್ಟೇ ಎನ್ನುವ ಸಂಕೋಚ ಮನೋಭಾವ ಬಿಡಬೇಕು. ಮಕ್ಕಳ

ಸಾಹಿತ್ಯದ ಬಗ್ಗೆ ಗಂಭೀರವಾಗಿ ಆಲೋಚಿಸಿ, ಮಕ್ಕಳಿಗೆ ಜಗತ್ತಿನ ಜನಜೀವನ ಪರಿಚಯಿಸುವ ಸಾಹಿತ್ಯವು ಮಕ್ಕಳ ನಿತ್ಯ ಬದುಕಿನೊಂದಿಗೆ ಸಮನ್ವಯತೆಯಿಂದ ಕೂಡಿರಬೇಕು ಎನ್ನುವ ಅಗತ್ಯವಿದೆ. ಮಕ್ಕಳ ಸಾಹಿತ್ಯದಲ್ಲಿ ಏನಿರಬೇಕು? ಯಾವ-ಯಾವ ವಸ್ತು ವಿಷಯಗಳತ್ತ ಗಮನಹರಿಸಬೇಕು? ಯಾವ ಮೌಲ್ಯಗಳು ಪ್ರಮುಖವಾಗಿರಬೇಕು ಎಂಬ ರೂಪುರೇಷೆ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ರೂಪಿತಗೊಳ್ಳುವ ಅಗತ್ಯವಿದೆ. ಮಕ್ಕಳು ಮೂಢನಂಬಿಕೆಯ ಪರಿಸರದಲ್ಲಿ ಬೆಳೆದರೆ ಅವರಲ್ಲಿ ಅಪಾಯದ ಸೂಚನೆಗಳು ಕಂಡುಬರುತ್ತದೆ. ವಿಜ್ಞಾನದ ಮೂಲಭೂತ ಅಂಶಗಳನ್ನು ಮಕ್ಕಳು ಗ್ರಹಿಸುವಂತೆ ಮತ್ತು ನಡುವಳಿಕೆಯಲ್ಲಿ ಅಳವಡಿಸಿಕೊಳ್ಳುವಂತೆ ಮಕ್ಕಳ ಸಾಹಿತ್ಯ ನಿರ್ಮಾಣಗೊಳ್ಳಬೇಕಾಗಿದೆ. ಸಮಾಜದ ಗೊಡ್ಡು ಸಂಪ್ರದಾಯಗಳು, ರೀತಿ-ನೀತಿಗಳು ತುಂಬಿಕೊಂಡು ಪ್ರಶ್ನೆ ಮಾಡದೆ ಇರುವ ವಾತಾವರಣ ಎಲ್ಲೆಡೆ ನಿರ್ಮಾಣವಾಗಿದೆ. ಅಸತ್ಯ, ಅನಾಚಾರ, ಶೋಷಣೆ, ದಬ್ಬಾಳಿಕೆ, ಭ್ರಷ್ಟಾಚಾರ ಮೊದಲಾದ ಕೃತ್ಯಗಳನ್ನು ವಿರೋಧಿಸಿ ಹೋರಾಡುವ ಮನೋಭಾವ ಮಕ್ಕಳ ಸಾಹಿತ್ಯಕ್ಕೆ ಲಭಿಸಬೇಕಿದೆ.

ಮಕ್ಕಳ ಬಹುಮುಖ ಪ್ರತಿಭೆಯನ್ನು ಹೊರಹಾಕಲು ವೈವಿಧ್ಯಮಯವಾದ ಸಾಹಿತ್ಯದ ಅವಶ್ಯಕತೆಯಿದೆ. ಇಂದಿನ ಮೌಲ್ಯಗಳು, ಜೀವನ ಕ್ರಮಗಳು, ಉದ್ದೇಶಗಳು, ಸಾಧನ-ಸಲಕರಣೆಗಳಿಗೆ ಪೂರಕವಾಗಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ವಿಜ್ಞಾನದ, ಕೃಷಿ, ಕೈಗಾರಿಕೆ, ಆಟೋಟ, ಮನರಂಜನೆ, ಆಚಾರ-ವಿಚರಗಳು ಮೂಡಿ ಮಕ್ಕಳ ಜ್ಞಾನಪ್ರಭೆ ಬೆಳೆಯಲು ಸಾಧ್ಯವಿದೆ. ಈ ಹೊತ್ತು ಮಕ್ಕಳು ಹಲವಾರು ಸಮಸ್ಯೆಗಳೊಂದಿಗೆ ಸ್ಪರ್ಧೆಯನ್ನು ಎದುರಿಸುತ್ತಿದ್ದಾರೆ. ಬದುಕಿನ ತಾಕಲಾಟಗಳು, ವೈರುಧ್ಯಗಳು, ಹಗರಣಗಳು, ವಂಚನೆಗಳು, ಅನಾನುಕೂಲತೆಗಳು, ತಿರಸ್ಕಾರಗಳು, ತಲ್ಲಣಗಳು, ಮುಖಂಡರ ಆವಾಂತರಗಳು, ಭೇದಭಾವಗಳು ಮುಂತಾದ ವಿಕಾರಗಳು ಮಕ್ಕಳಲ್ಲಿ ಮತ್ಸರದ ಮನೋಭಾವಗಳನ್ನು ಹುಟ್ಟು ಹಾಕುತ್ತಲಿವೆ. ಈ ರೀತಿಯ ಅಸಮಾನತೆಗಳನ್ನು, ವಿಷಮತೆಯನ್ನು ನಿವಾರಿಸಿ ವಿಶ್ವಶಾಂತಿ, ಭಾವೈಕ್ಯತೆಯ ಮನೋಭಾವ ಮಕ್ಕಳಿಗೆ ಕೊಡುವ ವಿದ್ಯೆಯು ಅವಶ್ಯಕ. ಮಕ್ಕಳಲ್ಲಿ ಸಮಾನತೆಯನ್ನು ಬಿಂಬಿಸುವ ಸಾಹಿತ್ಯ ರೂಪುಗೊಳ್ಳಬೇಕಿದೆ. ಮಾನವೀಯ ಸಂಬಂಧಗಳು ಗಟ್ಟಿಗೊಳ್ಳಲು ಮನುಷ್ಯ-ಮನುಷ್ಯರಲ್ಲಿ ಪ್ರೀತಿ, ವಿಶ್ವಾಸ, ಸತ್ಯ, ಶಾಂತಿ ತತ್ವಗಳು ಮಕ್ಕಳಲ್ಲಿ ಅಗತ್ಯವಾಗಿಬೇಕು.

ಮಕ್ಕಳ ಸಾಹಿತ್ಯ ಮಾನವನ ಬದುಕಿನ ಮಹತ್ವದ ಅಭಿವ್ಯಕ್ತಿ. ಮಕ್ಕಳ ಭಾವನೆಗಳ ವಿವಿಧ ಘಟ್ಟಗಳನ್ನು ಸರಿಯಾದ ಮಾರ್ಗದಲ್ಲಿ ಶಿಕ್ಷಕರು, ಪಾಲಕರು, ಗೆಳೆಯರು ಅರಿತುಕೊಳ್ಳುವುದು ಅಗತ್ಯ. ಈ ನೆಲೆಯಲ್ಲಿ ಮಕ್ಕಳ ಸಾಹಿತ್ಯ ಅಧ್ಯಯನ ಪ್ರಮುಖವೆನಿಸುತ್ತದೆ. ಮಕ್ಕಳಲ್ಲಿ ಚಲನಶೀಲಗುಣ ಬೆಳೆಸುವ, ಅವರಲ್ಲಿ ಸುಪ್ತವಾಗಿರುವ ಪ್ರತಿಭೆಗೆ ಮುಕ್ತ ಅವಕಾಶ ನೀಡಿ ಪ್ರೋತ್ಸಾಹಿಸಬೇಕು. ಮಕ್ಕಳ ಸಾಹಿತ್ಯ ಹಲವು ಸವಾಲುಗಳನ್ನು

ಎದುರಿಸಿಬೇಕಾದ ಸಾಧ್ಯತೆಯನ್ನು ಪಡೆಯುತ್ತ ಹೊಸರೂಪ ವಸ್ತು ವಿಷಯಕ್ಕೆ ಸ್ಪಂದಿಸುವ ಅನಿವಾರ್ಯತೆ ಇರುವುದನ್ನು ಗಮನಿಸಬೇಕು. ಅಂದರೆ ಮಕ್ಕಳ ಸಾಹಿತ್ಯ ಸಮಯಕ್ಕೆ ಹೊಂದಿಕೊಂಡು ಹೋಗುವಂತೆ ನಿರ್ಮಾಣವಾಗಬೇಕು. ಈ ಸಾಹಿತ್ಯ ಕೃಷಿಯಲ್ಲಿ ತೊಡಗಿದವರು ಸಮಕಾಲೀನ ಮಕ್ಕಳ ಸ್ಥಿತಿಗತಿಗಳೊಂದಿಗೆ ಅಭಿವ್ಯಕ್ತಿಯನ್ನು ಬೆಳೆಸಿಕೊಳ್ಳಬೇಕು. ಸಮೂಹ ಮಾಧ್ಯಮಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಮನದಟ್ಟು ಮಾಡಿಕೊಳ್ಳುವುದರ ಜೊತೆಗೆ ಮಾನವೀಯ ಗುಣಗಳನ್ನು ಹೆಚ್ಚು ಬದ್ಧತೆಯಿಂದ ರೂಪಿಸುವುದು ಒಳಿತು.

'ಮಕ್ಕಳ ಸಾಹಿತ್ಯದಲ್ಲಿ ಮಕ್ಕಳ ಭಾಷೆ, ಮಕ್ಕಳ ಕಲ್ಪನೆ, ಮಕ್ಕಳ ಮುಗ್ಧತೆ ಇವೆಲ್ಲಾ ಇರಲೇಬೇಕು. ಅವುಗಳ ಹಿಂದೆ ಶ್ರೇಷ್ಠಮಟ್ಟದ ಸಾಹಿತ್ಯಕ ಕಸಬುಗಾರಿಕೆ ಮತ್ತು ಮನಸ್ಸಿನ ಪಕ್ವತೆ ಇಲ್ಲದೆ ಮಕ್ಕಳ ಸಾಹಿತ್ಯ ಉನ್ನತಿ ಸಾಧಿಸಲಾರದು. ಅದಕ್ಕಾಗಿಯೇ ನಾನು ಹೇಳುವುದು. ಪ್ರೌಢತೆಯ ಹೆಗಲೇರಿ ಕುಳಿತ ಮುಗ್ಧತೆಯಿಂದ ಮಾತ್ರ ಅತ್ಯುನ್ನತ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯ. ಸಾಹಿತ್ಯ ಅಂದ ಮೇಲೆ ಅನುಭವದ ಆಯ್ಕೆ, ಅದರ ನಿರ್ಮಿತಿಗೆ ತಕ್ಕ ರೂಪದ ಆಯ್ಕೆ, ರೂಪವನ್ನು ಯುಕ್ತವಾಗಿ ಧರಿಸಬಲ್ಲ ಭಾಷೆಯ ಆಯ್ಕೆ, ಆ ಭಾಷೆಯೊಂದಿಗೆ ಭಾವಕ್ಕೆ ಸಾಥಿಯಾಗಿ ನಿಲ್ಲುವ ಉಚಿತ ಲಯದ ಆಯ್ಕೆ ಇವೆಲ್ಲಾ ಇರಲಿಕ್ಕೇ ಬೇಕು. ಅವು ಇಲ್ಲವಾದಲ್ಲಿ ಅತ್ಯುತ್ತಮ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯವೇ ಇಲ್ಲ'[೩].

ಮಕ್ಕಳ ಸಾಹಿತ್ಯ ಅಭಿವ್ಯಕ್ತಿ ದೃಷ್ಟಿಯಿಂದ ಬಲು ವಿಭಿನ್ನವಾದುದು. ಅದರ ಮೂಲ ಇರುವಿಕೆಯು ಭಾಷೆಯ ರಚನೆಯಲ್ಲಿ. ಮಕ್ಕಳ ಸಾಹಿತ್ಯ ಒಳಗೊಂಡಿರುವ ವಿಷಯಗಳು ಸುಲಭವಾಗಿ ಅರ್ಥವಾಗದಿದ್ದರೆ ಅದರ ಉದ್ದೇಶ ಸಫಲವಾಗದು. ಹೀಗಾಗಿ ಕೆಲವು ಮಿತಿಗಳಲ್ಲಿ ಅದು ರೂಪುಗೊಳ್ಳಬೇಕಾಗುತ್ತದೆ. ಮಕ್ಕಳ ವಯೋಮಾನ, ಗ್ರಹಿಕೆಯ ಸಾಮರ್ಥ್ಯ, ಕಲ್ಪನಾ ಶಕ್ತಿ, ಕುತೂಹಲ, ಇವುಗಳನ್ನು ಗಮನಿಸಿ ಮಕ್ಕಳನ್ನು ಒಳ್ಳೆಯ ವ್ಯಕ್ತಿತ್ವ ನಿರ್ಮಿಸುವ ಹೊಣೆಗಾರಿಕೆ ಬರಹಗಾರನಿಗೆ ಇರಬೇಕು. ಮಕ್ಕಳ ಮನಸ್ಸು ಚಂಚಲವಾದದ್ದು. ಪ್ರತಿಕ್ಷಣವು ಬದಲಾವಣೆಯಾಗುವಂತಹದ್ದು. ಹೊರ ಪ್ರಪಂಚದ ಪರಿಸರವನ್ನು ಅರ್ಥೈಸುವ ಮತ್ತು ತಮ್ಮ ಬೆಳವಣಿಗೆಯನ್ನು ಕಂಡುಕೊಳ್ಳುವ ಅಭಿರುಚಿಗಳು ಬದಲಾಗುತ್ತಿರುತ್ತವೆ. ಆದ್ದರಿಂದ ಮಕ್ಕಳ ಆಶಯ ಅಪೇಕ್ಷೆಗಳನ್ನು ಈಡೇರಿಸುವುದು ಸುಲಭವಾದ ಕೆಲಸವಲ್ಲ. ಇದನ್ನು ಪೂರೈಸಬೇಕಾದರೆ ಮಕ್ಕಳ ಸಾಹಿತ್ಯ ಸೃಷ್ಟಿ ಮಾಡುವ ಬರಹಗಾರ ತನ್ನ ಅನುಭವದ ಮಿತಿಯಿಂದ ಹೊರಬಂದು ತಾನು ಯಾರಿಗಾಗಿ ಬರೆಯುತ್ತಿರುವೆನು ಅವರ ಮನೋಭಾವವನ್ನು, ವರ್ತನೆಗಳನ್ನು ಗಮನಿಸುವುದು ಮುಖ್ಯವೆನಿಸುತ್ತದೆ. ಈ ಸಂದರ್ಭದಲ್ಲಿ ವ್ಯಕ್ತಗೊಳ್ಳುವ ಅನುಭವ, ಆಶೆ-ಆಕಾಂಕ್ಷೆಗಳು ಮಕ್ಕಳ ಪ್ರಪಂಚಕ್ಕೆ ಸಂಬಂಧಪಟ್ಟಿರುವುದರಿಂದ ಬಾಲ್ಯದ ಅನುಭವ ಮತ್ತು ಸಂಗತಿಗಳು ಮೂಡುವುದು ಸಹಜ. ಮಕ್ಕಳ ವಯೋಮಾನಕ್ಕೆ ಮೀರಿದ, ಅವರ ಬುದ್ಧಿಗೆ ನಿಲುಕದ

ವಿಷಯಗಳನ್ನು ದೂರವಿಟ್ಟು, ಮಕ್ಕಳ ಕೋಮಲ-ಭಾವನೆಗಳನ್ನು ಅರಳಿಸುವ, ಅವರ ಸಾಮರ್ಥ್ಯಕ್ಕೆ ತೋರುವ ಮಾರ್ಗ ತಿಳಿಸುವ ಆರೋಗ್ಯಕರ ಬೆಳವಣಿಗೆಯಂತಿರಬೇಕು.

'ಶಿಶು ಸಾಹಿತ್ಯ ರಚನೆ ಮಾಡುವವರಿಗೆ ಪಾಂಡಿತ್ಯದ ಅಗತ್ಯವೇನಿಲ್ಲ. ಮಕ್ಕಳ ಮನೋಧರ್ಮವನ್ನು ಅರಿಯಬಲ್ಲ, ಶಕ್ತಿಬೇಕು; ಅಷ್ಟೇ. ಮಕ್ಕಳಿಗಾಗಿ ಬರೆದ ಕೃತಿ ಅವರಿಗೆ ಸುಲಭವಾಗಿ ತಿಳಿಯುವಂತಿರಬೇಕು. ಅವರ ನಿತ್ಯ ಜೀವನದಿಂದ ಮೂಡಿ ಬಂದುದಾಗಿರಬೇಕು'[೪]. ಹಾಮಾನಾ ಅವರ ಮಾತಿನಂತೆ ಮಕ್ಕಳಲ್ಲಿ ಕುತೂಹಲವನ್ನು ಮೂಡಿಸಿ, ಉತ್ತಮ ವಿಷಯದ ಕಡೆಗೆ ಮನಸ್ಸು ಹರಿಯುವಂತೆ ಮಾಡಿ, ಅದನ್ನು ಸಹಜವಾಗಿ ಅರ್ಥ ಮಾಡಿಕೊಡುವುದು ಮಕ್ಕಳ ಸಾಹಿತ್ಯದ ಮಹತ್ವದ ಗುಣವಾಗಬೇಕು. ಮಕ್ಕಳ ಸಾಹಿತ್ಯ ರಚನೆಯು ಸುಲಭ, ಸ್ವಾರಸ್ಯದಿಂದ ಕೂಡಿದಾಗ ಮಾತ್ರ ಅದು ಮಕ್ಕಳಿಗಾಗಿ ಬರೆದ ಸಾಹಿತ್ಯವೆನಿಸಿಕೊಳ್ಳುತ್ತದೆ. ಮಕ್ಕಳಲ್ಲಿ ಒಳ್ಳೆಯ ಉದ್ದೇಶ, ಗುರಿಗಳನ್ನು ಅನುಸರಿಸಲು ಪ್ರೇರಣೆ ನೀಡುವ ಮೌಲ್ಯಗಳು ಅಭಿವ್ಯಕ್ತಗೊಳ್ಳಬೇಕು.

ನೀತಿಯ, ಆದರ್ಶ ಗುಣದ, ಮೌಲ್ಯಗಳನ್ನು ಹೊಂದಿದ ಸಂಗತಿಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಮಕ್ಕಳಲ್ಲಿರುವುದು ಕಡಿಮೆ ಎಂದು ಹೇಳಬಹುದು. ಸುಮಾರು ಒಂಭತ್ತರಿಂದ ಹದಿನಾಲ್ಕನೆಯ ವಯಸ್ಸಿನ ಮಕ್ಕಳಿಗೆ ಸ್ವಲ್ಪ ಮಟ್ಟಿನ ತಿಳುವಳಿಕೆ, ವಿಚಾರ ಬೆಳೆದಿರುತ್ತದೆ. ಮಾನವನಿಂದ ಬೇರೆಯಾದ ಪ್ರಾಣಿ, ಪಕ್ಷಿ, ರಾಕ್ಷಸರು, ಕಿನ್ನರರು, ಗಂಧರ್ವರು ಮುಂತಾದ ಅದ್ಭುತ ಲೋಕದ ಚಿತ್ರಣ ನಿಜವಾಗಿ ಇಲ್ಲವೆಂಬ ಭಾವನೆ ಮಕ್ಕಳಲ್ಲಿ ಬೆಳೆದಿರುತ್ತದೆ. ಈ ವಯಸ್ಸಿನ ಮಕ್ಕಳು ಕಲ್ಪನಾ ಪ್ರಪಂಚಕ್ಕಿಂತ ವಾಸ್ತವಿಕ ಜಗತ್ತಿಗೆ ಹತ್ತಿರವಾಗಿರುವರು. ಸುತ್ತಲಿನ ಪರಿಸರವನ್ನು ನೋಡಿ ತಿಳಿಯುವ ಕುತೂಹಲ ಅವರಲ್ಲಿ ಬೆಳೆದಿರುತ್ತದೆ. ವೈಜ್ಞಾನಿಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವರು. ಆದ್ದರಿಂದ ಮಕ್ಕಳ ಸಾಹಿತ್ಯ ರಚನೆ ಕೇವಲ ವಯಸ್ಸಿಗೆ ಸೀಮಿತವಾಗಿರಬಾರದು. ಅದು ಅವರ ಬುದ್ಧಿಶಕ್ತಿಯನ್ನು ಅಧರಿಸಿ ಅಭಿವ್ಯಕ್ತಗೊಂಡಿರಬೇಕು.

ಕುವೆಂಪು ಅವರು ಹೇಳುವಂತೆ 'ಮಕ್ಕಳ ಸಾಹಿತ್ಯದಲ್ಲಿ ಮೂರು ವಿಧವಿದೆ. ಶೈಶವ ಸಾಹಿತ್ಯ, ಬಾಲ ಸಾಹಿತ್ಯ, ಕೌಮಾರ ಸಾಹಿತ್ಯ ಅಂತ. ಇವೆಲ್ಲವೂ ಒಂದೇ ರೀತಿಯದಲ್ಲ, ಒಂದೇ ವರ್ಗದವಲ್ಲ, ಶೈಶವ ಸಾಹಿತ್ಯದಲ್ಲಿ ನಾವು ಮಕ್ಕಳಿಗೆ ವೈಜ್ಞಾನಿಕವಾದ ಅಥವಾ ವೈಚಾರಿಕವಾದಂತಹ ವಿಷಯಗಳನ್ನು ಕೊಡಬೇಕು ಅಂತ ಏನಿಲ್ಲ. ಶೈಶವ ಸಾಹಿತ್ಯದಲ್ಲಿ ಹಕ್ಕಿ ಮಾತನಾಡುತ್ತದೆ. ಸಿಂಹ ಹಾಡ್ತದೆ, ಏನು ಬೇಕಾದರೂ ಆಗಬಹುದು. ಇಲ್ಲಿ ಯಾವುದೂ ವೈಜ್ಞಾನಿಕವಾಗಿ, ಇಲ್ಲ ವೈಚಾರಿಕವಾಗಿಯೇ ಇರಬೇಕು ಅಂತ ಇಲ್ಲ. ಆದರೆ ಬಾಲ ಸಾಹಿತ್ಯ ಮತ್ತು ಕೌಮಾರ ಸಾಹಿತ್ಯಕ್ಕೆ ಬಂದಾಗ ನಾವು ಆ ಮಕ್ಕಳಿಗೆ ಕೊಡಬೇಕಾಗುವ ಸಂಗತಿಗಳು, ಬೆಳೆಸಬೇಕಾದ ದೃಷ್ಟಿ ಇವುಗಳನ್ನು ಚೆನ್ನಾಗಿ ಯೋಚಿಸಬೇಕು.

ಕ್ರಮೇಣ ಅವರಿಗೆ ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಗಳು ಬರುವಂತೆ ಮಾಡಬೇಕು. ಮಕ್ಕಳಿಗೋಸ್ಕರವಾಗಿ ಅನೇಕ ಹೊಸ ಹೊಸದಾದ ವಿಜ್ಞಾನ ವಿಚಾರಗಳನ್ನು ಕೂಡ ಸುಲಭವಾದ ರೀತಿಯಲ್ಲಿ ಬರೆದು ಕೊಡಬೇಕಾಗುತ್ತದೆ. ಈ ವರ್ಗದಲ್ಲಿ ಬಾಲ ಸಾಹಿತ್ಯವಿದೆ, ಭಾವ ಸಾಹಿತ್ಯವಿದೆ; ಬುದ್ಧಿ ಸಾಹಿತ್ಯ ಇದೆ. ಬುದ್ಧಿ ಸಾಹಿತ್ಯದಲ್ಲಿ ಪೂರ್ತಿ ವಿಜ್ಞಾನ ವಿಚಾರವಾದ ಸಾಹಿತ್ಯವಿದೆ. ಅಷ್ಟೇ ಅಲ್ಲ ವೈಚಾರಿಕವಾದ ಸಾಹಿತ್ಯವೂ ಇದೆ'[೫]. ಕುವೆಂಪು ಅವರ ಈ ಮಾತುಗಳಲ್ಲಿ ಮಕ್ಕಳ ಭಾವ ಸಾಹಿತ್ಯ ಮತ್ತು ಬುದ್ಧಿ ಸಾಹಿತ್ಯಗಳ ಪರಿಕಲ್ಪನೆ ಅಭಿವ್ಯಕ್ತಗೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಮಕ್ಕಳಿಗೆ ಮನರಂಜನೆ ನೀಡುವ ಕಥೆ, ಕವನಗಳು ಒಂದೆಡೆಯಾದರೆ, ಇನ್ನೊಂದು ಮಗ್ಗಲು ವೈಚಾರಿಕತೆ ಮೂಡಿಸುವ ಪರಿಕಲ್ಪನೆ ವ್ಯಕ್ತವಾಗುತ್ತವೆ. ಮಕ್ಕಳ ಸಾಹಿತ್ಯ ತನ್ನದೇ ನೆಲೆಯಲ್ಲಿ ಅಭಿವ್ಯಕ್ತಿ ಸಾಧ್ಯತೆಗಳನ್ನು ಹೊಂದಿರುವುದು ಹೀಗೆ,

* ಮಕ್ಕಳನ್ನು ಒಳ್ಳೆಯ ಮಾರ್ಗದಕಡೆ ಸಾಗುವಂತೆ ಮಾಡುತ್ತದೆ.
* ಗಂಭೀರವಾದ ವಿಚಾರ, ಪಾಂಡಿತ್ಯದ ಚರ್ಚೆಯ ಅಗತ್ಯವಿಲ್ಲ.
* ವಿಷಯ ವಸ್ತು ಮಕ್ಕಳ ಆಸಕ್ತಿಯನ್ನು ಕೆರಳಿಸುವಂತಿದ್ದು, ಅದು ಕೊನೆಯ ತನಕವೂ ಉಳಿಯುವಂತಿರಬೇಕು.
* ನೀತಿಬೋಧನೆ ಬಹುಮಟ್ಟಿಗೆ ಇರಬೇಕು, ಆದರೆ ಅದೇ ಪ್ರಧಾನವಾಗಿರಬಾರದು, ಮಕ್ಕಳಲ್ಲಿ ಕಲ್ಪನಾಶಕ್ತಿ, ಚಿಂತನೆಯ ಮನೋಭಾವ ಮೂಡಿಸುವಂತಿರಬೇಕು.
* ಕಥನಾತ್ಮಕ ಮತ್ತು ವರ್ಣನಾತ್ಮಕ ನಿರೂಪಣೆ ಹೊಂದಿರಬೇಕು.
* ಕವನಗಳು ಪ್ರಾಸದಿಂದ ಕೂಡಿದ್ದು, ಪುನರಾವರ್ತನೆಯ ವಾಕ್ಯಗಳು ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಇರಬೇಕು.
* ಕಥೆಗಳು ಚಿತ್ರಗಳಿಂದ ಕೂಡಿದ್ದರೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರಲು ಸಾಧ್ಯವಿದೆ.
* ಮಕ್ಕಳು ಪ್ರಶ್ನೆ ಮಾಡುವ ಗುಣ ಹೊಂದುವಂತಿರಬೇಕು.

'ಮಕ್ಕಳ ಸಾಹಿತ್ಯವೆಂದರೆ ಅದೇನು ರಾಜಕೀಯ, ಸಾಮಾಜಿಕ, ಧಾರ್ಮಿಕ ಸಂಘ–ಸಂಸ್ಥೆ ಪ್ರಚಾರ ಸಾಹಿತ್ಯವಲ್ಲ. ಇಲ್ಲವೆ ಕಲ್ಪನಾ ಲೋಕದಲ್ಲಿ ವಿಹಾರ ಮಾಡುವ ಪತ್ತೇದಾರಿ ರೂಪದ ಅಸತ್ಯ ಘಟನೆಗಳ ಮಾಲಿಕೆಯಲ್ಲ. ಯಾರಲ್ಲಿ ತಮ್ಮ ಶಕ್ತಿಯಿಲ್ಲವೋ ಅವರಿಗೆ ಅವರ ಅನುಭವಗಳಿಗೆ, ಕಲ್ಪನೆಗಳಿಗೆ ಜ್ಞಾನಾಮೃತಗಳಿಗೆ ತಟ್ಟಿ ಚೇತನ ಕೊಡುವ ಎಚ್ಚರಗೊಳಿಸುವ ಶಬ್ದರೂಪದ ವಾಕ್ಯಗಳೇ ಮಕ್ಕಳ ಸಾಹಿತ್ಯ'[೬] ಎಂಬ ಅಭಿಪ್ರಾಯವನ್ನು ವಿದ್ವಾಂಸರು, ಮಕ್ಕಳ ಸಾಹಿತಿಗಳು ಅನುಸರಿಸಲು ಸಾಧ್ಯವಿದೆ. ನಮ್ಮ ಮಕ್ಕಳು ಎಂಥ ಪರಿಸರದಲ್ಲಿ ಬೆಳೆಯುತ್ತಿದ್ದಾರೆ ಎಂಬುದನ್ನು ಮೊದಲು ತಿಳಿದುಕೊಳ್ಳಬೇಕು. ಸಮಾಜ, ಪರಿಸರ, ಶೈಕ್ಷಣಿಕ ಗುಣಮಟ್ಟ, ನಮ್ಮ ಪರಂಪರೆ, ಮೂಢನಂಬಿಕೆಗಳು ಮೊದಲಾದವು ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಅರಿತುಕೊಳ್ಳಬೇಕಿದೆ.

ಮಕ್ಕಳ ಹಾಗೂ ಸಾಹಿತಿಗಳ ಸಂಬಂಧದ ಪರಿಕಲ್ಪನೆ ಒಂದಕ್ಕೊಂದು ಪೂರಕವಾಗಿರಬೇಕು. ಅಭಿವ್ಯಕ್ತಿಯಲ್ಲಿ ಉನ್ನತ ದರ್ಶನ ಮಾಡುವಂತಿರಬೇಕು. ಪ್ರೀತಿಯಿಂದ ಒಳ್ಳೆಯ ಮಾತುಗಳಿಂದ ಮಾರ್ಗದರ್ಶನ ಮಾಡುವಂತೆ ಆಗಿರಬೇಕು.

ಇಂದಿನ ಜಾಗತೀಕರಣ, ನಗರೀಕರಣ, ಕಂಪ್ಯೂಟರೀಕರಣಗಳ ಆರ್ಭಟದಲ್ಲಿ ಮಕ್ಕಳ ಮಮತೆ, ವಾತ್ಸಲ್ಯ, ಭಾವನೆಗಳು, ಗ್ರಾಮೀಣ ಸಂಬಂಧಗಳು ಸೊರಗುತ್ತಲಿವೆ. ಆಧುನಿಕ ಜಗತ್ತಿನ ಪ್ರಭಾವ ಮಕ್ಕಳ ಮೇಲೆ ದಟ್ಟವಾಗಿ ಆವರಿಸಿದೆ. ಮಕ್ಕಳ ಸಾಹಿತ್ಯ ಬರಹಗಾರರು ಇಂದಿನ ಮಕ್ಕಳ ಮನವನ್ನರಿತು, ಅವರ ಬೇಕು-ಬೇಡಗಳ ಕುರಿತು ಮನಗಂಡು ಸಾಹಿತ್ಯ ರಚನೆಗೆ ತೊಡಗಿಸಿಕೊಳ್ಳಬೇಕು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ 'ಸರ್ವಜನಾಂಗದ ಶಾಂತಿಯ ತೋಟ!' ಆಗಿರುವ ಕನ್ನಡ ನಾಡು, ನುಡಿಯ ಸುಂದರಗೊಳಿಸಲು, ನಾಡಿನ ಸೇವೆಗಾಗಿ ಎಲ್ಲರೂ ಶ್ರಮಿಸಬೇಕು. ಇಂಥ ಕಲಿಕೆ ಇಂದಿನ ಅಗತ್ಯಗಳಲ್ಲಿ ಒಂದಾಗಿದೆ. ಮಕ್ಕಳನ್ನು ಚನ್ನಾಗಿ ಅರಿಯಬೇಕಾದರೆ ಮಕ್ಕಳ ಸಾಹಿತ್ಯ ಕೃತಿಗಳನ್ನು ಹೆಚ್ಚು ಹೆಚ್ಚಿನ ಓದು ಅವಶ್ಯಕವಾಗಿದೆ. ಮಕ್ಕಳ ಸಾಹಿತ್ಯದಲ್ಲಿ ಇಂದು ಅನೇಕ ವಿಧದ ನವೀನ ಪ್ರಯೋಗಗಳು ನಡೆಯುತ್ತಲಿವೆ. ಮಕ್ಕಳ ಮನದಲ್ಲಿ ವಿಶ್ವಾಸ, ನಂಬಿಕೆ, ಗೌರವ, ಉದಾತ್ತ ಭಾವನೆಗಳನ್ನು ತುಂಬುವ ಕವನ, ಕಥೆ, ನಾಟಕ, ಕಾದಂಬರಿ, ಪ್ರವಾಸ ಸಾಹಿತ್ಯ, ಪರಿಸರ ಜ್ಞಾನ ನೀಡುವ ಮಹತ್ವದ ಮಾಧ್ಯಮಗಳಾಗಿ ಕಂಡುಬರುತ್ತಲಿವೆ. ಈ ಎಲ್ಲ ಪ್ರಕಾರಗಳು ಮಕ್ಕಳಲ್ಲಿ ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳುವುದನ್ನು ಕಲಿಸಿಕೊಡುವಲ್ಲಿ ಪ್ರಮುಖ ಪಾತ್ರವಹಿಸಿದೆ.

ಮಕ್ಕಳ ಸಾಹಿತ್ಯದ ಅಭಿವ್ಯಕ್ತಿ ಸಾಧ್ಯತೆಗಳಲ್ಲಿ ಹೊಸತನದ ಪರಿಕಲ್ಪನೆ ಮುಖ್ಯವಾದುದು. ಈ ಹೊತ್ತು ವಸ್ತು, ವಿಷಯಕ್ಕೆ ಸಂಬಂಧಿಸಿದ ಮತ್ತು ಸ್ಪಂದಿಸುವ ಅನಿವಾರ್ಯತೆಯಿದೆ. ಮಕ್ಕಳ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡವರು ಸಮಕಾಲೀನ ಮಕ್ಕಳ ಸ್ಥಿತಿ-ಗತಿಗಳಿಗೆ ಹೊಂದುವ ಅಭಿವ್ಯಕ್ತಿಯನ್ನು ಮಾಡಬೇಕು. ಸಮೂಹ ಮಾಧ್ಯಮಗಳಲ್ಲಿ ಕಂಡುಬರುವ ಬದಲಾವಣೆಗಳನ್ನು ಆಧರಿಸಿ ಮಾನವೀಯ ಗುಣಗಳನ್ನು ಬೆಳೆಸುವ, ಮಕ್ಕಳ ಮನಸ್ಸುಗಳನ್ನು ಗಟ್ಟಿಗೊಳಿಸುವ ಸಾಹಿತ್ಯ ರಚಕರು ಹೆಚ್ಚು ಬದ್ಧತೆಯನ್ನು ಹೊಂದುವುದು ಅವಶ್ಯಕವಾಗಿದೆ. ಮಕ್ಕಳ ಸಾಹಿತ್ಯ ಮಕ್ಕಳ ಆಶೆಗಳನ್ನು ಅಭಿರುಚಿಗಳನ್ನು ವ್ಯಕ್ತಗೊಳಿಸುವದಷ್ಟೇ ಮುಖ್ಯವಾಗಿದೆ. ಮಾನವನ ಬದುಕಿನ ಎಲ್ಲ ಆಯಾಮಗಳನ್ನು ಪರಿಚಯಿಸುವ ಉತ್ಸಾಹ ಅಗತ್ಯವಾಗಿದ್ದರೂ, ಮಕ್ಕಳಿಗೆ ನಿಲುಕುವ, ಅವರಿಗೆ ಉತ್ಸಾಹ ತುಂಬುವ ವಸ್ತು ವಿಷಯಗಳ ಆಶಯಗಳನ್ನು ಪರಿಚಯ ಮಾಡಿಸುವುದು, ಅಂಥ ಸಾಹಿತ್ಯ ಮಾತ್ರ ಮಕ್ಕಳ ಬದುಕಿಗೆ ಪೂರಕವಾಗಬಲ್ಲುದು. ಮಕ್ಕಳು ತಮ್ಮ ಬಾಲ್ಯವನ್ನು ಅತ್ಯಂತ ಶಿಸ್ತು-ಸಮೃದ್ಧಿಯಿಂದ ಬೆಳೆಸಿಕೊಂಡರೆ ಮಾತ್ರ ಸಮಾಜದಲ್ಲಿ ಸುಖ-ಶಾಂತಿ ನಿರ್ಮಾಣವಾಗುವುದು. ಇದು ಮಕ್ಕಳ ಸಾಹಿತ್ಯದಲ್ಲಿ ಹೊರಹೊಮ್ಮಬೇಕಿದೆ. ಇಂದಿನ ಶಿಕ್ಷಣ ಪದ್ಧತಿ ಮತ್ತು ಉದ್ಯೋಗದ ಮಹತ್ವ ಇವುಗಳು

ಅಂಕಗಳ ಸ್ಪರ್ಧೆಯನ್ನು ನಿರ್ಮಿಸಿವೆ. ನಮ್ಮ ಆಚಾರ-ವಿಚಾರ, ಆಧುನಿಕತೆ ಎಲ್ಲವೂ ಸೋಗಿನ ಸಂತೆಯಾಗಿದೆ. ಶಾಲೆಯಲ್ಲಿ ಮಗು ಕಲಿಯುವುದೊಂದು ಹೊರಗೆ ನಡೆಯುತ್ತಿರುವುದು ಇನ್ನೊಂದು. ಇದರಿಂದ ಮಕ್ಕಳ ಮನಸ್ಸು ಗೊಂದಲದ ಗೂಡಾಗಿದೆ. ಸಮೂಹ ಮಾಧ್ಯಮಗಳಲ್ಲಿಯ ಸುದ್ದಿಗಳು ಮಕ್ಕಳ ಭಾವನೆಗಳನ್ನು ಕೆರಳಿಸುತ್ತಿವೆ.

ಮಕ್ಕಳ ಬೇಕು-ಬೇಡಗಳನ್ನು ಅರ್ಥ ಮಾಡಿಕೊಳ್ಳದ ಪಾಲಕರು, ಆಧುನಿಕ ಆಡಂಬರದಲ್ಲಿ ಮುಳುಗಿ ಸಕಲರ ಅಭಿರುಚಿಗಳು ಕೆಡಲು ಕಾರಣೀಭೂತವಾಗಿದೆ. ದೂರದರ್ಶನ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಆಧುನಿಕ ಶಿಕ್ಷಣ ಮಕ್ಕಳ ಬೆನ್ನಿಗೆ ಹೊರೆಯಾಗಿದೆ. ಮಕ್ಕಳು ಅಂಕಗಳಿಸುವ ಯಂತ್ರಗಳಾಗಿದ್ದಾರೆ. ಸಾಮಾನ್ಯ ಜ್ಞಾನ ಸ್ವಲ್ಪವೂ ಸಹ ಸಿಗುತ್ತಿಲ್ಲ. ಸಾಮಾಜಿಕ ಪರಿಸರವು ಅಧಃಪತನದತ್ತ ಸಾಗುತ್ತಿದೆ. ಎಲ್ಲೆಡೆ ಹಿಂಸೆ, ಅಸೂಯೆ, ಮೋಸ, ಆರೋಪ-ಪ್ರತ್ಯಾರೋಪಗಳು ತಾಂಡವವಾಡುತ್ತಿವೆ. ಮಕ್ಕಳಿಗೆ ಒಳ್ಳೆಯ ದೃಷ್ಟಾಂತಗಳು ಪೂರಕವಾಗಿ ಸಿಗುತ್ತಿಲ್ಲ. ಉಲ್ಲಾಸಮಯವಾದ ಸಾಮಾಜಿಕ ಪರಿಸರ ಮತ್ತು ಮೌಲ್ಯಗಳು ವಿರಳವಾಗಿವೆ. ಮಕ್ಕಳ ಬದುಕು ಒತ್ತಡಗಳಿಂದ ಕೂಡಿದೆ. ತಂದೆ-ತಾಯಿಗಳು ತಮ್ಮ ಆಶೆ-ಅಭಿರುಚಿಗಳಿಗೆ ಮಗ್ನರಾಗಿದ್ದಾರೆ. ಮಕ್ಕಳ ಕಡೆಗೆ ಗಮನಕೊಡದೆ ನಿರ್ಲಕ್ಷಿತರನ್ನಾಗಿ ಮಾಡಿರುವುದು ಕಂಡುಬರುತ್ತಿದೆ. ಇಂದಿನ ಮಕ್ಕಳ ಸಂವೇದನೆ ಬದಲಾಗುತ್ತಿದೆ. ದೂರದರ್ಶನ ಹಾಗೂ ಕಾಮಿಕ್ಸಗಳು, ಪೋಗೋ, ಚಿಂಟು, ಡಿಸ್ಕವರಿ ಕಿಡ್ಸ ಮುಂತಾದವುಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಮಕ್ಕಳ ಅಭಿರುಚಿ ಬದಲಾಗುತ್ತಿವೆ. ಸಮೂಹ ಮಾಧ್ಯಮಗಳ ಈ ವಾಹಿನಿಗಳು ಮಕ್ಕಳಲ್ಲಿ ಹಿಂಸೆ, ದ್ವೇಷ, ಅಸೂಯೆ ಮುಂತಾದ ಭಾವನೆಗಳನ್ನು ಬಿತ್ತಲು ಸಾಧ್ಯವಾಗಿದೆ. ಇವು ಮಕ್ಕಳ ಮನ ಕಲುಷಿತಗೊಳ್ಳುವಂತೆ ಮಾಡುತ್ತವೆ. ಹೀಗಾಗಿ ಮಕ್ಕಳ ಬೌದ್ಧಿಕ ಮಟ್ಟವನ್ನು ಆಧರಿಸಿ ಸಾಹಿತ್ಯ ರಚಿಸುವುದು ಸೂಕ್ತ. ಮಕ್ಕಳಿಗೆ ಕಲೆ, ಸಾಹಿತ್ಯ, ಸಂಸ್ಕೃತಿ, ಮಹಾಪುರುಷರ ಜೀವನ ಚರಿತ್ರೆ ಮೊದಲಾದ ಪುಸ್ತಕಗಳು ಪ್ರಸರಣಗೊಳ್ಳಬೇಕು. ಆಗ ಮಾತ್ರ ಮಕ್ಕಳ ಬೌದ್ಧಿಕ ಮಟ್ಟವನ್ನು ಸುಧಾರಿಸಲು ಸಾಧ್ಯವಾಗುತ್ತದೆ.

ಮಕ್ಕಳ ಸಾಹಿತ್ಯ ರೋಮಾಂಚನಗೊಳಿಸುವುದರೊಂದಿಗೆ ಜೀವನ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸುವಂತಿರಬೇಕು. ಮಕ್ಕಳಲ್ಲಿ ಇಂದು ಅವಶ್ಯಕವಾಗಿರುವ ಸಹಬಾಳುವೆಯ ಮಹತ್ವ, ಮಕ್ಕಳ ಭಾವನೆಗಳನ್ನು ಚಂದಿರ, ಸೂರ್ಯ, ಭೂಮಿ, ಮಳೆ, ಹಕ್ಕಿ, ಮರ, ಬಳ್ಳಿ ಇಂಥ ಹಲವಾರು ವಸ್ತುಗಳ ಮುಖಾಂತರ ವಿಕಾಸವಾಗುವಂತೆ ಮಾಡಬೇಕು. ಪ್ರಕೃತಿಯ ಮಡಿಲಲ್ಲಿರುವ ಮಗು ಹಲವು ಸಂಗತಿಗಳನ್ನು ಸಹಜವಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಮಕ್ಕಳ ಸಾಹಿತ್ಯ ತನ್ನದೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ವಿಭಿನ್ನವಾಗಿ

ಬೆಳೆದುನಿಂತಿದೆ. ಕಥೆಗಳನ್ನು ಕೇಳದವರು ನಮ್ಮ ಸಮಕಾಲೀನರು ಯಾರು ಇರಲಿಕ್ಕಿಲ್ಲ. ಕಥೆಗಳು ಕೌತುಕ ಮತ್ತು ರೋಚಕ ಗುಣಗಳನ್ನು ಹೊಂದಿ ಆಕರ್ಷಣೀಯವಾಗಿವೆ. ಕಥೆಗಳಲ್ಲಿ ಪ್ರಾಣಿಗಳು ಮಾತನಾಡುತ್ತವೆ. ಪಕ್ಷಿಗಳೂ ಮಾತನಾಡುತ್ತವೆ. ಬುದ್ಧಿ ಕಲಿಸುತ್ತ ಸಭೆ ನಡೆಸುತ್ತವೆ. ನಡತೆಯನ್ನು ಕಲಿಸಿಕೊಡುತ್ತವೆ. ಇಂಥ ಹಲವು ರೋಚಕಗಳ ಆಗರ ಮಗುವಿನ ಮನಸ್ಸು, ನಮ್ಮನ್ನು ಮಾಯಾಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಮಕ್ಕಳಲ್ಲಿ ಮೌಲ್ಯಯುತ ವ್ಯಕ್ತಿತ್ವ ರೂಪಿಸಲು, ಕಥೆಗಳು ಬಹು ಸಹಕಾರಿಯಾಗಿವೆ. ಮಕ್ಕಳ ಮನ ಮುದಗೊಳ್ಳಬೇಕಾದರೆ ಕಥೆಗಳು ಅದ್ಭುತವಾಗಿರಬೇಕು, ವಿನೋದಮಯವಾಗಿರಬೇಕು. ಕುಟುಂಬದ ಸಂಬಂಧಗಳ ಸ್ನೇಹ, ವಾತ್ಸಲ್ಯ, ಸಹಕಾರ ತತ್ವ ಒಳಗೊಂಡಿರಬೇಕು. ಪ್ರಾಣಿ-ಪಕ್ಷಿಗಳ ಕಲ್ಪನಾ ಸಾಮ್ರಾಜ್ಯ ಅನಾವರಣಗೊಳ್ಳಬೇಕು. ಆಗ ಮಾತ್ರ ಕಥೆ ಮಕ್ಕಳಿಗೆ ಪ್ರಿಯವಾಗುತ್ತದೆ. ಮಕ್ಕಳ ಮನಸ್ಸನ್ನು ಅರಳಿಸುವಲ್ಲಿ ಕಥೆಗಳು ಹೆಚ್ಚಾಗಿ ಪ್ರಭಾವಬೀರುತ್ತವೆ. ಅವರಲ್ಲಿ ಲವಲವಿಕೆ ಮೂಡಲು, ಅಸಾಧ್ಯವಾದುದನ್ನು ಸಾಧಿಸಲು ಪ್ರಯೋಜನಕಾರಿಯಾಗಿವೆ. ಕಾಮಿಕ್ಸ ಕಥೆಗಳು ಮಕ್ಕಳಲ್ಲಿ ಹಾಸ್ಯ ಪ್ರಜ್ಞೆಯನ್ನು ಮೂಡಿಸುತ್ತವೆ. ಮಕ್ಕಳಿಗೆ ಕಥೆ ಹೇಳುವುದರ ಮೂಲಕ ಅವರ ಮನಸ್ಸನ್ನು ಪರಿವರ್ತಿಸಬಹುದು. ಇವುಗಳ ಪ್ರಭಾವದಿಂದ ಜ್ಞಾನ ಸಂಪಾದನೆ ಸಾಧ್ಯವಾಗುತ್ತದೆ. ಮಕ್ಕಳಿಗೆ ಕೇವಲ ಮನರಂಜನೆ ನೀಡುವ ಮೋಜಿನ ಕಥೆಗಳು ಬಲು ಇಷ್ಟವಾಗುತ್ತವೆ. ಮನಸ್ಸಿನ ಬೇಸರ ಕಳೆಯಲು ನೆರವಾಗುತ್ತವೆ.

ಅಣ್ಣಾಜಿ ಫಡತಾರೆಯವರು 'ಮಕ್ಕಳ ಸಾಹಿತಿಗಳ ಕಥಾ ಸಂಕಲನಗಳನ್ನು ಓದುವ ಆಸಕ್ತಿ ಹೊಂದಬೇಕು. ಈ ರೀತಿಯ ಓದಿನಿಂದ ಮಕ್ಕಳ ಕಥೆ ಬರೆಯುವ ರಚನಾ ತಂತ್ರವನ್ನು ಕೈವಶ ಮಾಡಿಕೊಳ್ಳಬಹುದು. ಕಥಾ ರಚನಾಕಾರರು ಯಾವುದೇ ಕಥೆಯನ್ನು ಓದಿ ಪ್ರೇರಣೆ ಪಡೆದು ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ಹೊಸ ರೂಪಕೊಟ್ಟು ಬರೆದರೆ ತಪ್ಪಲ್ಲ. ಅದೊಂದು ರಚನಾತ್ಮಕವಾದ ಹೊಸ ಕಥೆಯೇ ಆದರೆ ಒಳಿತು. ಇಂಥ ಕಥೆಗಳಲ್ಲಿ ಹೊಸ ಕಲ್ಪನೆ ಅವಶ್ಯ'[೭] ಹೊಸ ಬಗೆಯ ಹೊಸ ಸಂವೇದನೆಗಳು ಕಂಡುಕೊಳ್ಳಲು ಹೀಗೆ ಹೇಳುತ್ತಾರೆ. ಅವರ ಒಂದು ಕಥೆಯನ್ನು ನಿದರ್ಶನವಾಗಿ ಸಾಧರಪಡಿಸುತ್ತೇನೆ.

'ಜಾಣ ನರಿ' ಕಥೆ ಎಲ್ಲರಿಗೂ ಪರಿಚಿತವಾದುದು. ಕಾಗೆಯೊಂದು ಮಾಂಸದ ತುಂಡನ್ನು ಕೊಕ್ಕಿನಲ್ಲಿ ಹಿಡಿದು ತಂದು ಗಿಡದಲ್ಲಿ ಕುಳಿತಿತು. ನರಿ ಉಪಾಯ ಮಾಡಿ ಅದನ್ನು ಪಡೆಯಲು ಬಯಸಿತು. ಜಾಣ ನರಿ ಕಾಗೆಯನ್ನು ಕುರಿತು 'ಕಾಗವ್ವ, ನಿನ್ನ ಧ್ವನಿ ಎಷ್ಟು ಚಂದ, ನಿನ್ನ ಹಾಡು ಕೇಳಬೇಕೆಂಬ ಆಸೆಯಾಗಿದೆ. ಹಾಡವ್ವ' ಎಂದು ಬೇಡಿಕೊಂಡಿತು. ಮಳ್ಳ ಕಾಗೆ ಹಾಡು ಹಾಡಿದಾಗ ಬಾಯೊಳಗಿನ ಮಾಂಸದ ತುಂಡು ಜಾರಿ ಬಿತ್ತು. ಜಾಣ ನರಿ ಅದನ್ನು ಕಚ್ಚಿಕೊಂಡು ಓಡಿ ಹೋಯಿತು. ಇದು ಮೂಲ ಕಥೆ ಫಡತಾರೆ ಅಣ್ಣಾಜಿಯವರು 'ಜಾಣ ಕಾಗೆ' ಎಂದು ರೂಪಾಂತರಗೊಳಿಸಿದ್ದು ಹೀಗೆ.

'ಜಾಣನೆಂದು ತಿಳಿದ ಠಕ್ಕನರಿ ಇನ್ನೊಮ್ಮೆ ಮೋಸಗೊಳಿಸಲು ಉಪಾಯ ಮಾಡಿತು. ಕಾಗೆಯನ್ನು ಕುರಿತು, 'ಕಾಗವ್ವ ನಿನ್ನ ಹಾಡು ಕೇಳಿ ಬಹಳ ದಿನವಾಯಿತು. ಕೇಳಬೇಕೆಂಬ ಆಸೆಯಾಗಿದೆ. ಹಾಡವ್ವ ಕೇಳಿ ಆನಂದಿಸುವೆ' ಎಂದಿತು. ಜಾಣ ಕಾಗೆ 'ಆಗಲಿ ನರಿಯಣ್ಣ ನಿನ್ನನ್ನೇಕೆ ನಿರಾಶೆಗೊಳಸಲಿ' ಎಂದು ಹೇಳಿತು. ಕೊಕ್ಕಿನಲ್ಲಿರುವ ಮಾಂಸದ ತುಂಡನ್ನು ಕಾಲುಗಳಲ್ಲಿ ಹಿಡಿದು ಕಾಽ ಕಾಽ ಎಂದು ಹಾಡಿತು. ಮಾಂಸದ ತುಂಡು ನರಿಗೆ ಸಿಗಲಿಲ್ಲ. ಮತ್ತೆ ಉಪಾಯದ ಹೊಂಚು ಹಾಕುತ್ತದೆ. 'ಕಾಗವ್ವ ನಿನ್ನ ಹಾಡು ಕೇಳಿ ಆನಂದಿಸಿದೆ. ನಿನ್ನ ಕುಣಿತ ನೋಡಬೇಕೆಂಬ ಆಸೆಯಾಗಿದೆ. ನನಗಾಗಿ ಕುಣಿದು ಸಂತೋಷ ಪಡಿಸು' ಎಂದಿತು. ಜಾಣ ಕಾಗೆ, ಕಾಲಲ್ಲಿದ್ದ ಮಾಂಸದ ತುಂಡನ್ನು ಕೊಕ್ಕಿನಲ್ಲಿ ಕಚ್ಚಿ ಹಿಡಿದು ಥಕ್ ಥೈಯೆಂದು ಕುಣಿಯಿತು. ನಿರಾಸೆಗೊಂಡ ನರಿ ಬೇರೊಂದು ಉಪಾಯ ಮಾಡಿತು. ನರಿ ಮತ್ತೆ ಕಾಗೆಯನ್ನು ಕುರಿತು, 'ಕಾಗವ್ವ ನಿನ್ನ ಹಾಡು ಕೇಳಿದೆ. ನಿನ್ನ ಕುಣಿತ ನೋಡಿದೆ, ಸಂತೋಷವಾಯಿತು. ಈಗ ನನಗಾಗಿ ಹಾಡುತ್ತ ಕುಣಿದು ತೋರಿಸುವೆಯಾ? ಎಂದಿತು. ಜಾಣ ಕಾಗೆ ಮಾಂಸದ ತುಂಡನ್ನು ಮರದ ಪೊಟರೆಯಲ್ಲಿ ಇಟ್ಟು ಬಂದು ಕಾಽ ಕಾಽ ಎಂದು ಹಾಡುತ್ತ ಥಕ ಥೈ ಎಂದು ಕುಣಿದು ತೋರಿಸಿತು. ಈ ಕಥೆಯಿಂದ ತಿಳಿದು ಬರುವುದೇನೆಂದರೆ ಯಾರನ್ನಾದರೂ ಮತ್ತೆ-ಮತ್ತೆ ಮೋಸಗೊಳಿಸುವುದು ಅಸಾಧ್ಯ ಎಂಬ ನೀತಿ ಅಭಿವ್ಯಕ್ತಗೊಳ್ಳುತ್ತದೆ. ಹೀಗೆ ಆಧುನಿಕ ಜಗತ್ತಿನ ಮಕ್ಕಳಿಗೆ ಇಂಥ ಹೊಸ ಪ್ರಯೋಗಗಳು ಚಿಂತನಕ್ಕೆ ಎಡೆಮಾಡಿಕೊಟ್ಟು ಅವರಲ್ಲಿ ಕುತೂಹಲ ಮೂಡಿಸುತ್ತವೆ. ಹೀಗೆ ಮಕ್ಕಳ ಸಾಹಿತ್ಯ ಬರಹಗಾರರು ಹೊಸ ರೀತಿಯಲ್ಲಿ ವಸ್ತು-ವಿಷಯಗಳನ್ನು ತೆರೆದುಕೊಳ್ಳುತ್ತ ಹೋಗುವುದು ಸೂಕ್ತವಾದುದು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವ ಅನುಭವದ ನುಡಿಗಳು ಮಗುವಿನ ವ್ಯಕ್ತಿತ್ವ ನಿರ್ಮಾಣದಲ್ಲಿ ತಂದೆ-ತಾಯಿಗಳ ಮತ್ತು ಪರಿಸರದ ಮಹತ್ವ ತಿಳಿಸುತ್ತದೆ. ಮಕ್ಕಳ ಭವಿಷ್ಯ ಭವ್ಯವಾಗಿರಬೇಕೆಂಬುದು ಎಲ್ಲರ ಆಶೆಯಾಗಿರುತ್ತದೆ. ಆದರೆ ಮಕ್ಕಳ ಮನೆಯ ಪರಿಸರ ಹೇಗಿದೆ? ಹೀಗಿರುವಲ್ಲಿ ಅವರು ಎಂಥ ವಿದ್ಯೆಯನ್ನು ಪಡೆದುಕೊಳ್ಳುವರು? ಒಳ್ಳೆಯ ಹವ್ಯಾಸ, ಅಭಿರುಚಿಗಳನ್ನು ಬೆಳೆಸಿಕೊಳ್ಳಲು ಸಾಧ್ಯವೆ? ಮಕ್ಕಳ ಆಟ, ಪಾಠಗಳ, ಸಹಪಾಟಿಗಳು ಸ್ನೇಹ ಹೇಗಿದೆ? ಇಂಥ ಹಲವಾರು ಸಂಗತಿಗಳ ಬಗ್ಗೆ ಹಿರಿಯರು, ಪಾಲಕರು ಜಾಗರೂಕರಾಗಿದ್ದು, ಅವರಿಗೆ ಮಾರ್ಗದರ್ಶನ ಮಾಡುವುದು ಅತೀ ಜರೂರವಾಗಿದೆ. ಒಳ್ಳೆಯ ಮಾತು, ನಿರ್ಮಲ ಮನಸ್ಸು ಮತ್ತು ಆರೋಗ್ಯಕರವಾದ ದೇಹ, ಹೊಂದುವುದು ಹಿರಿಯರು ಮೊದಲು ಅಳವಡಿಸಿಕೊಳ್ಳಬೇಕು. ಮಗು ದೊಡ್ಡವರನ್ನು ಅನುಕರಿಸುತ್ತಿರುತ್ತದೆ. ಆದ್ದರಿಂದ ಅಕ್ಷರ ಜ್ಞಾನಕ್ಕಿಂತ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವ ಸಂಸ್ಕಾರದ ಕಡೆಗೆ ಹೆಚ್ಚು ಗಮನಕೊಡುವುದು ಪಾಲಕರ ಕರ್ತವ್ಯವಾಗಿದೆ. ಮಕ್ಕಳಲ್ಲಿ ಹೊಸ-ಹೊಸ ವಿಷಯಗಳ ಕುರಿತು ಜಿಜ್ಞಾಸೆಯನ್ನು ಹುಟ್ಟುವಂತೆ ಮಾಡಬೇಕು. ಅವರಲ್ಲಿರುವ ಯಾವುದೇ ಜ್ಞಾನದ ಹಂಬಲವನ್ನು ಮೊಟಕುಗೊಳಿಸಬಾರದು. ಕಲಿಕೆಯಲ್ಲಿ

ಅಭಿರುಚಿ ಮೂಡುವಂತೆ ಮಾಡಬೇಕು. ಆಲಸ್ಯದಿಂದ ಮಗುವನ್ನು ಮುಕ್ತಗೊಳಿಸಬೇಕು. ಪ್ರತಿ ವಿಷಯದಲ್ಲಿ ಮಗುವಿಗೆ ಆತ್ಮವಿಶ್ವಾಸದ, ಧೈರ್ಯ ತುಂಬಬೇಕು. ಮಕ್ಕಳಲ್ಲಿ ಅನವಶ್ಯಕ ಭೀತಿಯನ್ನು ಹುಟ್ಟಿಸಬಾರದು.

'ಭವಿಷ್ಯದ ಜಗತ್ತು ರೂಪುಗೊಳ್ಳುವುದು ಇಂದಿನ ಮಕ್ಕಳ ಕೈಗಳಿಂದ, ಮನಸ್ಸುಗಳಿಂದ. ಆದಕಾರಣ ಮಾನವ ಜನಾಂಗದ ಸಾಧನೆ ಸಿದ್ಧಿಗಳ ದಾಖಲೆಗಳನ್ನು ಮಕ್ಕಳು ಪಡೆಯುವುದು ಪುಸ್ತಕಗಳ ಮೂಲಕ. ಹಾಗೆಯೇ ಜನಾಂಗದ ಭವಿಷ್ಯತ್ತಿನ ಆಶೆ-ಆಕಾಂಕ್ಷೆಗಳ ಪೂರೈಕೆಗಾಗಿ ಪುಸ್ತಕಗಳೇ ಅವರಿಗೆ ಉಪಕರಣಗಳು. ಆದ್ದರಿಂದ ನಾಳೆಯ ಉತ್ತಮತರ ಜಗತ್ತಿಗಾಗಿ ಇಂದು ಅಗತ್ಯವಾಗಿರುವ ಸಾಹಿತ್ಯವನ್ನು ಅವರಿಗೆ ಕೊಡಿ'. (ಸಿಸು ಸಂಗಮೇಶ ಅಖಿಲ ಭಾರತ ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನ ಸ್ಮರಣ ಸಂಚಿಕೆ) ಎನ್ನುವ ನುಡಿಗಳು ಈ ಹೊತ್ತಿನ ಮಕ್ಕಳಿಗೆ ಅತೀ ಜರೂರವೆನಿಸುತ್ತವೆ. ಮಕ್ಕಳ ಸಾಹಿತ್ಯ ಕಥೆ, ಕವನ, ನಾಟಕ, ಪ್ರವಾಸ ಸಾಹಿತ್ಯ ಮುಂತಾದ ಪ್ರಕಾರಗಳಲ್ಲಿ ಹೊರಹೊಮ್ಮಿದರೂ ಅದು ಕೆಲವು ಮುಖ್ಯ ಅಂಶಗಳನ್ನು ಒಳಗೊಂಡಿರಬೇಕಾಗುತ್ತದೆ. ವಸ್ತು, ಭಾಷೆ, ತಂತ್ರ, ಶೈಲಿ, ಪಾತ್ರಗಳ ನಿರೂಪಣೆ ಮೊದಲಾದ ಸಂಗತಿಗಳನ್ನು ಸೂಕ್ತವಾಗಿ ವ್ಯಕ್ತಗೊಳಿಸಿದರೆ ಅದು ಉತ್ತಮ ಬರವಣಿಗೆ ಎನಿಸುತ್ತದೆ. ರಚನೆಗೊಳ್ಳುವ ವಸ್ತು-ವಿಷಯ ಮಗುವಿಗೆ ನಿಲುಕುವಂತಿರಬೇಕು. ಇಂದಿನ ಪರಿಸ್ಥಿತಿಗೆ ಹೊಂದುವ ಮೊಬೈಲ್, ಟಿವಿ, ಕಂಪ್ಯೂಟರ ಇತ್ಯಾದಿ ಯಂತ್ರಗಳ ಕುರಿತು ಇರುವ ಕವನಗಳು, ಕಥೆಗಳು ಮಕ್ಕಳ ಜ್ಞಾನವನ್ನು ವೃದ್ಧಿಗೊಳಿಸುವುದರೊಂದಿಗೆ ವೈಜ್ಞಾನಿಕ ಮನೋಧರ್ಮ ವಿಸ್ತರಿಸಿಕೊಳ್ಳಲು ಸಹಕಾರಿಯಾಗುತ್ತವೆ. ಇಂದಿನ ಸಂಕೀರ್ಣ ಬದುಕಿಗೆ ಕಾರಣವಾದ ಜಾತಿಯತೆ, ಭ್ರಷ್ಟಾಚಾರ, ಅಜ್ಞಾನ, ಮೋಸ ಮುಂತಾದ ಜ್ವಲಂತ ಸಮಸ್ಯೆಗಳನ್ನು ಹೋಗಲಾಡಿಸುವ ಕೃತಿಗಳು ಬರಬೇಕಿದೆ. ವಿಷಯ-ವಸ್ತು ಮನೋರಂಜಕ ಚಮತ್ಕಾರಿಕ, ವಿಚಾರ ಪ್ರಚೋದಕವಾಗಿರಬೇಕು. ಹಿಂದಿನ ಬರಹಗಾರರು ನಿರೂಪಿಸಿದ ವಿಷಯ ವಸ್ತುಗಳನ್ನು ಬಿಟ್ಟು ಮಗುವಿನ ಬುದ್ಧಿ-ಭಾವಗಳನ್ನು ಅರಳಿಸುವಂತಹದಾಗಿರಬೇಕು. 'ಬರಹಗಾರರು ಬರೆದದ್ದೆಲ್ಲ ಮಕ್ಕಳು ಸ್ವೀಕರಿಸುವುದಿಲ್ಲ. ಬರೆದದ್ದೆಲ್ಲ ಮಕ್ಕಳ ಸಾಹಿತ್ಯ ಆಗುವುದಿಲ್ಲ. ಬರೆದಿರುವುದೆಲ್ಲ ಆಸ್ವಾದಿಸುತ್ತಾರೆ ಎಂಬುದು ಬರೀ ಭ್ರಮೆಯಾದೀತು' ಎಂಬ ಎಚ್ಚರಿಕೆಯ ಮಾತುಗಳನ್ನು ಜೆ. ಬ್ರಿಗೆಲ್ ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮಕ್ಕಳ ಸಾಹಿತ್ಯ ಶಬ್ದ ಆಡಂಬರದ, ಸಾಂಪ್ರದಾಯಕ ಅಭಿವ್ಯಕ್ತಿಯ ಅನುಕರಣದಿಂದ ಮುಕ್ತವಾಗಿರಬೇಕು. ಉತ್ತಮವಾದ ಪದವಿನ್ಯಾಸ ಮೋಜು ತರುವಂತಿರಬೇಕು. ಸರಳತೆಯೇ ಅದರ ಗುರಿಯಾಗಿರಬೇಕು. ಮಕ್ಕಳು ತಕ್ಷಣ ಸಂತಸಗೊಳ್ಳಬೇಕಾದರೆ ಅದು ಕವಿಯ ಪ್ರತಿಭೆಯನ್ನು ಆಧರಿಸಿರುತ್ತದೆ. ಬರಹಗಾರನ ಚಮತ್ಕಾರಿಕ ಕಲೆಯನ್ನು ಪ್ರತಿಭೆ ಎಂದು ಕರೆಯಬಹುದು. ಗಾದೆಮಾತುಗಳು, ದ್ವಿರುಕ್ತಿಗಳ ಬಳಕೆ, ಅಲಂಕಾರಿಕ ನುಡಿಗಳು, ಸಂಭಾಷಣೆಯ ಪ್ರಯೋಗ, ಪರೋಕ್ಷವಾಗಿ ನೀತಿಬೋಧನೆ ಮೊದಲಾದ ಅಂಶಗಳಿಂದ

ಕೂಡಿರುವುದು ಬರಹಗಾರನ ತಂತ್ರಗಾರಿಕೆ ಎನಿಸುತ್ತವೆ. ಆದ್ದರಿಂದ ಬರಹಗಾರನು ಪ್ರಯೋಗಶೀಲನಾಗಿರುವುದರೊಂದಿಗೆ ತಂತ್ರಗಾರನಾಗಿರುವುದು ಅವಶ್ಯಕ. ಮಗುವಿನ ಭಾಷೆ, ಆಸೆಗಳೇ ಅವರ ಪರಿಭಾಷೆ ಎನ್ನಬಹುದು. ಇದರ ಹರವು ವಿಶಾಲವಾದುದು. ಇಂದು ಮಕ್ಕಳ ಅನುಭವಗಳು, ಮಕ್ಕಳನ್ನು ಕುರಿತು ಬರೆಯುವ ಅನುಭವಗಳು ಮತ್ತು ಅವುಗಳನ್ನು ಅಭಿವ್ಯಕ್ತಿಸುವ ಕ್ರಮ ಅತ್ಯಂತ ಸಂಕೀರ್ಣವಾಗಿದೆ. ಈ ಕಾರಣದಿಂದಾಗಿ ಮಕ್ಕಳ ಸಾಹಿತ್ಯದಲ್ಲಿ ಪ್ರತಿಮೆ, ರೂಪಕಗಳ ಮೂಲಕ ನುಡಿಗಟ್ಟು ಮಕ್ಕಳ ಪರಿಭಾಷೆಯ ಮೂಲಕ ಅಭಿವ್ಯಕ್ತಗೊಳಿಸುವುದು ಅಗತ್ಯ ಮತ್ತು ಅನಿವಾರ್ಯವಾಗಿದೆ. 'ಮಕ್ಕಳಿಗಾಗಿ ಬರೆದ, ಮಕ್ಕಳಿಗೆ ಇಷ್ಟವಾಗುವ ಸಾಹಿತ್ಯವೇ ಮಕ್ಕಳ ಸಾಹಿತ್ಯ, ಪುಸ್ತಕದ ಮೊದಲ ಪುಟವೇ ಅರ್ಥವಾಗದಿದ್ದರೆ, ಎರಡನೆಯ ಪುಟವನ್ನು ಖಂಡಿತ ಮಕ್ಕಳು ಓದುವುದಿಲ್ಲ. ನಿಮ್ಮ ಪ್ರಕ್ರಿಯೆಗಳು, ಘನ ಉದ್ದೇಶಗಳನ್ನು ಕಟ್ಟಿಕೊಂಡು ಮಗುವಿಗೆ ಏನಾಗಬೇಕು? ದೊಡ್ಡವರು ಶಾಸ್ತ್ರೋಕ್ತವಾಗಿ, ತಿದ್ದಿ-ತಿದ್ದಿ ಬರೆದಿದ್ದು ಮಕ್ಕಳಿಗೆ ಹಿಡಿಸಬೇಕೆಂದೇನೂ ಇಲ್ಲ' ಎನ್ನುವ ರಾಜರತ್ನಂ ಅವರ ನುಡಿಗಳು, ಮಕ್ಕಳ ಸಾಹಿತ್ಯದ ಸಾಧ್ಯತೆಗಳ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಗೊಳಿಸುತ್ತವೆ.

'ಅರಳುವುದೇ ಜೀವನದ ಪರಮ ಗುರಿ' ಎನ್ನುವ ಮಧುರ ಚನ್ನರ ಅಮೃತವಾಣಿಯಂತೆ ಮಕ್ಕಳ ಮನಸ್ಸು ಅರಳುವಂತಹ ಸಾಹಿತ್ಯ ರಚನೆಯಾಗಬೇಕು. 'ಮಕ್ಕಳು ಮಾನವ ಲೋಕದ ಸುಂದರ ಪುಷ್ಪಗಳು. ಅವು ಅರಳಿ ಸುಗಂಧ ಬೀರುವ ಮೊದಲೆ ಕಮರಿ ಹೋಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ' ಎಂದು ಪರ್ಷಿಯಾದ ದೊರೆ, ಸಂತ, ಕವಿಯೂ ಆದ ಖಲೀಲ ಗಿಬ್ರಾನ್ ಹೇಳುವ ಮಾತುಗಳು ಇಂದು ಪೂರಕವಾಗಿವೆ. ಸಮೂಹ ಮಾಧ್ಯಮಗಳ ಹಾವಳಿಯಿಂದ ಮಾನವೀಯ ಮೌಲ್ಯಗಳು ಅಪಮೌಲ್ಯಗೊಂಡು ಸಾಮಾಜಿಕ ವ್ಯವಸ್ಥೆ ಮಲೀನಗೊಳ್ಳುತ್ತಿದೆ. ಮಾನವೀಯ ಮೌಲ್ಯಗಳಾದ ಸತ್ಯ, ಅಹಿಂಸೆ, ಪರಿಸರ ಕಾಳಜಿ, ಸ್ವಾಭಿಮಾನ, ದೇಶಾಭಿಮಾನ ಮೊದಲಾದ ಗುಣಗಳನ್ನು ಅಳವಡಿಸುವ ಸಾಹಿತ್ಯ ನಿರ್ಮಾಣವಾಗಬೇಕಾಗಿದೆ. ಕುವೆಂಪು ಅವರು, 'ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು ಬುದ್ಧನನ್ನಾಗಿ ಪರಿವರ್ತಿಸುವುದೇ ನಮ್ಮ ಶಿಕ್ಷಣದ ಗುರಿಯಾಗಬೇಕು' ಎಂದು ಹೇಳುವ ಮಾತುಗಳು ಕಟು ಸತ್ಯವೆನಿಸುತ್ತವೆ.

ದೂರದರ್ಶನ ಅತಿ ವೇಗವಾಗಿ ಮಕ್ಕಳನ್ನು ಆಕರ್ಷಿಸುತ್ತಿದೆ. ಈಗ ಅನೇಕ ಚಾನಲ್ಲುಗಳು ವಿವಿಧ ಕಾರ್ಯಕ್ರಮಗಳನ್ನು ನೀಡುತ್ತಿವೆ. ಮಕ್ಕಳ ಮನರಂಜನೆಯ ದೃಷ್ಟಿಯಿಂದ ಹಲವು ಕಾರ್ಯಕ್ರಮಗಳು ಬಿತ್ತರಗೊಳ್ಳುತ್ತಲಿವೆ. ಸಣ್ಣ-ಸಣ್ಣ ಮಕ್ಕಳಿಂದ ಪ್ರೀತಿ-ಪ್ರೇಮದ ಹಾಡುಗಳಿರುವ ಸನ್ನಿವೇಶಗಳು, ಅಶ್ಲೀಲ ಸಂಭಾಷಣೆಗಳನ್ನು

ಅಭಿನಯಿಸಿ ತೋರಿಸುವುದು ಅತಿ ಹೆಚ್ಚಾಗಿದೆ. ಇದು ಮನಸ್ಸನ್ನು ವಿಕಾಸಮಾಡದೆ ವಿಕಾರಗೊಳಿಸುತ್ತಿದೆ. ಪೋಷಕರು ಇದಕ್ಕೆ ಪ್ರೋತ್ಸಾಹ ಕೊಡುತ್ತಿರುವುದು ದುರಂತದ ಸಂಗತಿ. ಸಿನೇಮಾ ನಟ-ನಟಿಯರು ಮಕ್ಕಳಿಗೆ ಬಲು ಆದರ್ಶಪ್ರಾಯರಾಗಿದ್ದಾರೆ. ಈಗಿನ ಸಿನೇಮಾಗಳಲ್ಲಿ ಒಳತಿಗಿಂತ ಕೆಡುಕು ಹೆಚ್ಚಾಗಿದೆ. ಸಮೂಹ ಮಾಧ್ಯಮಗಳಲ್ಲಿ ಅತೀ ಪ್ರಭಾವಿಯಾದುದು ಸಿನೇಮಾಗಳು. ಮಕ್ಕಳ ಭವಿಷ್ಯದ ಜೊತೆಗೆ ಚಲ್ಲಾಟ ಆಡುತ್ತಿದೆ. ಅಶ್ಲೀಲ ಚಿತ್ರಗಳು ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತಲಿವೆ. ನಿರ್ಮಾಪಕರು, ನಿರ್ದೇಶಕರು ಇದರ ಕುರಿತಾಗಿ ಹೆಚ್ಚು ಲಕ್ಷ್ಯವಹಿಸಿದಂತೆ ಕಾಣುವುದಿಲ್ಲ. ಕೆಲವು ಕಾರ್ಯಕ್ರಮಗಳು ಉತ್ತಮವಾಗಿ ಬಿತ್ತರಗೊಂಡಿದ್ದರೂ ವಿರಳವೆನ್ನಬೇಕು. ಮಕ್ಕಳ ಬೌದ್ಧಿಕ, ದೈಹಿಕ, ಶೈಕ್ಷಣಿಕ, ನೈತಿಕ, ಸಾಮಾಜಿಕ, ಧಾರ್ಮಿಕ ಮುಂತಾದವುಗಳ ಬಗ್ಗೆ ಒಳ್ಳೆಯ ವಿಚಾರಗಳನ್ನು ಮೂಡಿಸಿದರೆ ಮಕ್ಕಳನ್ನು ನಾಳಿನ ಉತ್ತಮ ನಾಗರಿಕರಾಗಲು ಸಾಧ್ಯವಾಗುತ್ತದೆ. ಈ ಹೊತ್ತು ಪ್ರಸಾರವಾಗುವ ಕಾರ್ಯಕ್ರಮಗಳು ತಂದೆ-ತಾಯಿಯರ, ಬಂಧುಗಳ, ದೇಶಭಕ್ತರ, ಸಂತರ, ಶರಣರ ಬಗ್ಗೆ ಗೌರವಿಸುವ, ಭಕ್ತಿ-ಭಾವವನ್ನು ತೋರಿಸದೆ ಕೇವಲ ಹೆಣ್ಣು-ಗಂಡುಗಳ ಸರಸ ಸಲ್ಲಾಪಗಳನ್ನು, ರಾಜಕೀಯ ಭ್ರಷ್ಟರನ್ನು, ಅನೀತಿವಂತರನ್ನು, ದರೋಡೆಕೋರರನ್ನು, ವಂಚಕರನ್ನು, ವರ್ಣರಂಜಿತವಾಗಿ ತೋರಿಸಿ ಮನಸ್ಸನ್ನು ಮಲೀನಗೊಳಿಸಿ ವಿಕಾರ ರೂಪಹೊಂದಲು ಪ್ರೇರಣೆ ನೀಡುತ್ತಲಿವೆ.

ಮಕ್ಕಳಿಗಾಗಿ ಮೂಡಿ ಬರುವ ಸ್ಪೈಡರ್ ಮ್ಯಾನ್, ಸೂಪರ್ ಮ್ಯಾನ್, ಮೋಟು-ಪತಲು, ಮಿಕಿಮೌಸ್, ಪೋಗೋ, ಡಿಸ್ನಿವಲ್ಡ್, ಕಾರ್ಟೂನ ನೆಟವರ್ಕಗಳು ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತಲಿವೆ. ಈ ಎಲ್ಲ ಚನಲ್ಲುಗಳ ಉದ್ದೇಶ ಹಣಗಳಿಕೆ ಮಾತ್ರ. ಮೊಬೈಲ್ ಮತ್ತು ಕಂಪ್ಯೂಟರ್‌ಗಳು ಮಕ್ಕಳ ಜ್ಞಾನ ಸಂಪತ್ತನ್ನು ಹಾಳು ಮಾಡಿ ನಮ್ಮ ಸಂಸ್ಕೃತಿಯ ಬುಡವನ್ನೇ ಒಡೆಯುತ್ತಲಿವೆ. ಬುದ್ಧಿಗೆ ಬೆಲೆಕೊಡದೆ ನಿರ್ಜಿವ ವಸ್ತುಗಳಿಗೆ ಬೆಲೆ ಕೊಡುವಂತಾಗಿದೆ. ಹೊಸತನವನ್ನು ಕಲಿಯುವುದಕ್ಕಿಂತ, ಸಮಯ ಕಳೆಯಲು ಉಪಯೋಗಿಸಿ ಮಕ್ಕಳು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

'ಬಾಲ್ಯಾವಸ್ಥೆಯು ಶೀಲರಚನೆಗೆ ಬಹುಮುಖ್ಯವಾದ ಕಾಲವಾಗಿದ್ದು, ಈ ಕಾಲದಲ್ಲಿ ಮಗು ಏನನ್ನು ಅಭ್ಯಾಸ ಮಾಡುತ್ತದೆಯೋ ಅದು ಜೀವನಾಂತ್ಯದವರೆಗೂ ಅದರ ನಡತೆಯನ್ನು ನಿರ್ಧರಿಸುತ್ತದೆ. ಕೊಳಕುತನ, ಸುಳ್ಳು ಹೇಳುವುದು ಈಗ ಅಭ್ಯಾಸವಾದರೆ ಮುಂದೆ ತಿದ್ದುವುದು ಅಸಾಧ್ಯ. ಒಳ್ಳೆಯ ಗುಣಗಳು ಬಾಲ್ಯದಲ್ಲೇ ಮೊಳೆಯದಿದ್ದರೆ ಆ ಮೇಲೆ ವಿಕಾಸ ಹೊಂದಲಾರವು. ನಾವು ಸಣ್ಣ ಮಕ್ಕಳನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಮಕ್ಕಳ ಬೆಳವಣಿಗೆ, ಆರೋಗ್ಯ ಮತ್ತು ಶೀಲರನಚೆಯ ದೃಷ್ಟಿಯಿಂದ ಮಕ್ಕಳ ಭಾವನೆಗಳನ್ನು ಪರಿಶೀಲಿಸುವುದು ಅತ್ಯಾವಶ್ಯಕ'[೮] ಎಂಬ ಅಭಿಪ್ರಾಯವನ್ನು ಮಕ್ಕಳ ಮನೋವಿಜ್ಞಾನದ ಹಿನ್ನೆಲೆಯಲ್ಲಿ ಅಭಿವ್ಯಕ್ತಗೊಳಿಸುತ್ತಾರೆ. ಮಗು ಬೌದ್ಧಿಕವಾಗಿ

ಜಾಣನಾದರೆ ಸಾಲದು. ಅದು ಮಾನಸಿಕವಾಗಿ ಅರಳಬೇಕು. ವ್ಯವಹಾರಿಕ ದೃಷ್ಟಿ ಬೆಳೆದರೆ ಸಾಲದು. ಅದು ಮಗುವಿನಲ್ಲಿ ಕಲಾತ್ಮಕವಾಗಿ ಬೆಳೆಯಬೇಕು.

'ಕನ್ನಡದಲ್ಲಿ ಶಿಶುಪ್ರಾಸ' ಎನ್ನುವ ಪದ ಪುಟಾಣಿಗಳಿಗಿರುವ ಪದ್ಯಗಳಿಗೆ ಸಾಮಾನ್ಯವಾಗಿ ಬಳಕೆಯಾಗುತ್ತಾ ಬಂದಿದೆ. ಇದು ಯಾವಾಗಿನಿಂದ ಪ್ರಾರಂಭವಾಯಿತು. ಯಾರು ಮೊದಲು ಬಳಸಿದರು ತಿಳಿಯದು. ಒಂದು ಅಂದಾಜಿನಲ್ಲಿ ಶಾಲಾಪೂರ್ವದ, ಶಾಲೆಯ ಅದೇ ಪ್ರಾರಂಭದ ದಿನಗಳಲ್ಲಿ ಮಕ್ಕಳು ಅಂದುಕೊಳ್ಳಬಹುದಾದ, ಸವಿಯಬಹುದಾದ ರಚನೆಗಳನ್ನು ಹೀಗೆ ಗುರುತಿಸಲಾಗಿದೆ. ಪ್ರಾಸಮಯವಾದ ಶಬ್ದಗಳನ್ನು ವಿಶೇಷವಾಗಿ ಗಮನಿಸಿದ ಹಾಗಿದೆ. ಈ ಪದದ ಬಳಕೆಯಲ್ಲಿ ಪುಟಾಣಿಗಳಿಗಾಗಿರುವ ಇಂಥ ಪದ್ಯಗಳನ್ನು ಯಶಸ್ವಿಯಾಗಿ ಪ್ರಾರಂಭದ ದಿನಗಳಲ್ಲಿ ರಚಿಸಿದ್ದು ಜಿ. ಪಿ. ರಾಜರತ್ನಂ ಅವರು. ಅನಂತರ ಹಲವರು ಇಂಥ ರಚನೆಗಳಿಗೆ ಕೈ ಹಾಕಿದರಾದರೂ ಅಷ್ಟು ಯಶಸ್ವಿಯಾದ ಉದಾಹರಣೆಗಳಿಲ್ಲ. ಈಚಿನ ದಿನಗಳಲ್ಲಿ ಎಚ್. ಎಸ್. ವೆಂಕಟೇಶಮೂರ್ತಿ, ಎನ್. ಶ್ರೀನಿವಾಸ ಉಡುಪಿ ಮೊದಲಾದವರು ಇದಕ್ಕೆ ಚಾಲನೆ ನೀಡಿದ್ದಾರೆ. ಚಿಂತಾಮಣಿ ಕೊಡ್ಲೆಕೆರೆ ಅವರ ಸೊಗಸಾದ ಸಂಕಲನ ಬಂದಿದೆ. ಸುಮತೀಂದ್ರ ನಾಡಿಗರು ವಿಶೇಷವಾಗಿ ಇಂಥವುಗಳ ರಚನೆಯಲ್ಲಿ ಕಾಣಸಿಗುತ್ತಾರೆ'[೬] ಆನಂದ ಪಾಟೀಲರು ಹೇಳಿರುವ ಈ ನುಡಿಗಳು, ಒಟ್ಟಾರೆಯಾಗಿ ಇದುವರೆಗೆ ಕನ್ನಡ ಬಾಲಸಾಹಿತ್ಯದಲ್ಲಿ ನಡೆದಿರುವ ಕಾರ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸುವಂತಿದೆ.

'ಶಿಶು' ಸಾಹಿತ್ಯದ ಅರ್ಥ ನೀತಿಗಿಂತ ಪದಲಾಲಿತ್ಯಕ್ಕೆ ಹೆಚ್ಚು ಮಹತ್ವ ನೀಡಿದೆ. ಹೀಗಾಗಿ ಪ್ರಾಸದ ಮೋಡಿಯಿಂದ ಮಕ್ಕಳನ್ನು ಉಲ್ಲಾಸದ ಲಯಕ್ಕೆ ತರುವುದೇ ಈ ಸಾಹಿತ್ಯದ ಮುಖ್ಯ ಉದ್ದೇಶ. ಸಹಜವಾಗಿ ನೀತಿಯು ಮಕ್ಕಳ ಪದ್ಯಗಳಲ್ಲಿ ಕಾಣಿಸಿಕೊಳ್ಳಲೂಬಹುದು. ಕೃತಕವಾಗಿ ನೀತಿಬೋಧನೆ ಮಾಡುವ ರಚನೆಗಳು ಮಕ್ಕಳನ್ನು ಎಂದೂ ರುಚಿಸುವುದಿಲ್ಲ.

'ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು ।

ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತುರಿ ನಡೆದನು ಬೀದಿಯಲಿ
ಜಂಬದ ಕೋಳಿಯ ರೀತಿಯಲಿ ।

ತುತ್ತುರಿಯೂದುತ ಕೊಳದ ಬಳಿ
ನಡೆದನು ಕಸ್ತುರಿ ಸಂಜೆಯಲಿ

ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ ।
ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತುರಿ ಬೋಳಾಯ್ತು ।
ಬಣ್ಣದ ತುತ್ತುರಿ ಹಾಳಾಯ್ತು
ಜಂಬದ ಕೋಳಿಗೆ ಗೋಳಾಯ್ತು'[೧೦] ।

ಮಕ್ಕಳಿಗೆ ಈ ಪದ್ಯ ಮೆಚ್ಚುಗೆಯಾಗುವುದು ರಸಮಯ ಸನ್ನಿವೇಶದಿಂದ ಮತ್ತು ಪ್ರಾಸಬದ್ಧ ನಡಿಗೆಯಿಂದ ಮಾತ್ರ. ಮಕ್ಕಳು ಅದರ ಹಿನ್ನೆಲೆಯ ನೀತಿಯ ಅರ್ಥಪಡೆದುಕೊಳ್ಳುವುದು ಅಪರೂಪ. ನೋವಿನ ಅನುಭವವನ್ನು ಮಕ್ಕಳಿಗೆ ಕವಿತೆ ನೀಡುತ್ತದೆ. ಮಕ್ಕಳು ತಮ್ಮ ಆಟಿಕೆ ವಸ್ತುಗಳನ್ನು ಇತರ ಮಕ್ಕಳ ಜೊತೆ ಹಂಚಿಕೊಂಡು ಸಂತೋಷಪಡಬೇಕೆಂಬ ನಿಲುವು ಇಲ್ಲಿದೆ. ಇಂಥ ಅರ್ಥ ಗ್ರಹಿಸುವುದು, ನೀತಿಯನ್ನು ತಿಳಿದುಕೊಳ್ಳುವುದು ಮರು ಓದುಗಳ ನಂತರವೇ ಎನ್ನಬಹುದು.

ಮಕ್ಕಳಲ್ಲಿ ವೈಚಾರಿಕ ನಿಲುವುಗಳನ್ನು ಬೆಳೆಸುವಲ್ಲಿ ತುಂಬಾ ಎಚರಿಕೆವಹಿಸುವುದು ಸೂಕ್ತ. ಮೂಢನಂಬಿಕೆಗಳ ಕುರಿತಾದ, ಅಂಧಶ್ರದ್ಧೆಯ ಬಗೆಗಿನ, ತಪ್ಪು ತಿಳುವಳಿಕೆಯನ್ನು ಹುಟ್ಟಿಸುವ ಯಾವುದೇ ಕವಿತೆ, ಕಥೆ, ಬಲು ಅಪಾಯಕಾರಿಯಾದುದು. ಈ ಸಮಯದಲ್ಲಿ ಮಕ್ಕಳ ಕಲ್ಪನಾಶಕ್ತಿಯನ್ನು ಬೆಳೆಸುವ, ಕ್ರಿಯಾಶೀಲಗೊಳಿಸುವ ಅಗತ್ಯವನ್ನು ನಾವು ಅರಿತುಕೊಳ್ಳಲೇಬೇಕು. ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇಂಥ ಕೃತಿಗಳು ಹೆಚ್ಚು-ಹೆಚ್ಚು ಬರಬೇಕಾಗಿದೆ. ಹಾಗೆಯೇ ಮಕ್ಕಳಿಗೆ ಫ್ಯಾಂಟಸಿ ಕಥೆಗಳ ಅದ್ಭುತ ರಮ್ಯಲೋಕವೂ ಬೇಕು. ವಿಜ್ಞಾನ ಕುರಿತಾದ ಮತ್ತು ಕಲ್ಪನಾಲೋಕದ ಕಥೆಗಳು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಲು ಸಹಾಯಕಾರಿಯಾಗಬಲ್ಲವು. ಗಣನೀಯ ಸಾಧನೆ ಮಾಡಿದವರ ಚರಿತ್ರೆಗಳನ್ನು ಮಕ್ಕಳಿಗೆ ತಿಳಿಸಿದರೆ ಅವರು ತಮ್ಮ ಬದುಕಿನಲ್ಲಿ ಅವರ ಆದರ್ಶಗಳನ್ನು, ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ದೊರೆಯಬಹುದು. ಪ್ರಾಣಿದಯೆ, ಪ್ರೀತಿ, ನಾಡು-ನುಡಿಗಳ ಕುರಿತು ಆದರ, ಆತ್ಮೀಯತೆ, ಜಾಣ್ಮೆ, ಚತುರೋಪಾಯ, ಯುಕ್ತಿ, ಹಿಂಸೆ, ಮೋಸ, ಸುಂದರ ಬದುಕು, ನಾಳಿನ ಕನಸುಗಳು ಇವೆಲ್ಲವೂ ಮಕ್ಕಳಿಗೆ ನಾವು ಕೊಡಬೇಕಾದ ಸಾಹಿತ್ಯದಲ್ಲಿ ಅವಶ್ಯಕವಾಗಿ ಇರಬೇಕಾದ ವಸ್ತುವಿಷಯಗಳಾಗಿವೆ.

ಎಚ್. ಎಸ್. ವೆಂಕಟೇಶಮೂರ್ತಿಯವರ 'ಗುಬ್ಬಿ ಮರಿಯ ಹೊಸತರ್ಕ' ಪದ್ಯ ಮಕ್ಕಳ ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿದವರಿಗೆ ಹೊಸ ಸಾಧ್ಯತೆಗಳನ್ನು ಮಕ್ಕಳಿಗೆ ಕಟ್ಟಿಕೊಡುವ ರೀತಿಯನ್ನು ಅಭಿವ್ಯಕ್ತಿಗೊಳಿಸುತ್ತದೆ. ಕವಿತೆಯ ನೀತಿ, ಮಕ್ಕಳು ಸುಂಧರ ಬದುಕನ್ನು ನಿರ್ಮಿಸಿಕೊಳ್ಳುವ ತಾತ್ವಿಕ ದೃಷ್ಟಿಯನ್ನು ತಿಳಿಸುತ್ತದೆ.

'ಇಂದಿನ ಮಕ್ಕಳ ಸಾಹಿತ್ಯದ ಸ್ವರೂಪ ತೀರಾ ಹೊಸದು. ಅದು ಮನೋವಿಜ್ಞಾನವನ್ನಾಧರಿಸಿ ವಾಸ್ತವದ ಅರಿವಿನಲ್ಲಿ ಸೃಷ್ಟಿಯಾಗುವ ಬರಹ. ಅಲ್ಲಿ ನೀತಿ, ಉಪದೇಶಗಳಿಗೆ ಪ್ರತ್ಯಕ್ಷವಾಗಿ ಯಾವುದೇ ಉಪಸ್ಥಿತಿ ಇಲ್ಲ. ಇಂದಿನ ಮಕ್ಕಳು ತಮ್ಮ ಸುತ್ತಲಿನ ಬಣ್ಣ, ಬಣ್ಣದ ಜಗತ್ತನ್ನು ನೋಡಿಯೇ ಸಂತುಷ್ಟರಾಗುವುದಿಲ್ಲ. ಅವರು ಅದರ ವಿಶ್ಲೇಷಣಾತ್ಮಕ ತಿಳುವಳಿಕೆಯನ್ನು ಅಪೇಕ್ಷಿಸುತ್ತಾರೆ.

ನಾವಿನ್ನೂ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದಲ್ಲಿಯೇ ಉಳಿದಿದ್ದೇವೆ. ಆದರೆ ನಮ್ಮ ಮುಂದಿರುವ ಪೀಳಿಗೆ ವೇಗದಿಂದ ಮುಂದೆ ಸಾಗುತ್ತಿದೆ. ನಾವು ಅವರಿಗಾಗಿ ನಮ್ಮ ಚಿಂತನೆಯ ದಿಕ್ಕನ್ನು ಇನ್ನೂ ನಿರ್ದಿಷ್ಟಗೊಳಿಸುತ್ತಿಲ್ಲ. ಮಕ್ಕಳ ಆಸಕ್ತಿಗಳು, ಆಕಾಂಕ್ಷೆಗಳು, ತಿಳುವಳಿಕೆಯ ಹಂಬಲಗಳು ಹಿಂದೆಂದಿಗಿಂತ ಇಂದು ಹೆಚ್ಚು ತೀವ್ರವಾಗಿ ಬದಲಾವಣೆಯನ್ನು ಅನುಭವಿಸುತ್ತಿವೆ.....ಅವೇ ಪುರಾಣದ ಕತೆಗಳು, ಜನಪದ ಕತೆಗಳು, ನೀತಿ ಕತೆಗಳು ಮುದ್ರಣಗೊಂಡು ಬರುತ್ತಲೇ ಇವೆ..... ಮೂಢನಂಬಿಕೆ, ಪರಂಪರಾಗತ ವಿಚಾರಧಾರೆಯಲ್ಲಿ ಮಕ್ಕಳಿಗೆ ಈಗ ಎಳ್ಳಷ್ಟೂ ವಿಶ್ವಾಸವಿಲ್ಲ.....ಇಂದಿನ ವಾತಾವರಣ, ಇಂದಿನ ಜೀವನ ಮೌಲ್ಯಗಳನ್ನು ಹರುಹುವ ಸಾಹಿತ್ಯ ಬೇಕಾಗಿದೆ.

'ಮಕ್ಕಳು ತಮ್ಮ ಮನಸ್ಸಿನ ಅಭಿವ್ಯಕ್ತಿಯನ್ನು ಕಾಣುವಂಥ ತಮ್ಮದೇ ಆದ ಭಾಷೆಯಲ್ಲಿ ಸ್ವೀಕರಿಸುವಂತೆ, ತಾವು ಅನುಭವಿಸುವ ಸಮಸ್ಯೆಗಳು ಉಪಾಯ ಹುಡುಕಿಕೊಳ್ಳುವಂತೆ, ಪಾತ್ರಗಳೊಡನೆ ತಾದಾತ್ಮ್ಯ ಹೊಂದುವಂತೆ ಸೃಷ್ಟಿಯಾದಾಗ ಮಾತ್ರ ಅದನ್ನು ಮಕ್ಕಳ ಸಾಹಿತ್ಯ ಎಂದು ಗುರುತಿಸಬಹುದು'[೧೧].

ಮನುಷ್ಯನಿಗೆ ಬಾಲ್ಯದಲ್ಲಿ ಮಾತ್ರ ಅಡೆತಡೆಯಿಲ್ಲದ, ನಿರ್ಬಂಧವಿಲ್ಲದ ಬದುಕು ಇರುವುದು ಸತ್ಯ. ಮಗು ಯಾವುದೇ ಭಯವಿಲ್ಲದ ಸಂಗತಿಯನ್ನು, ಸಮಯವನ್ನು ಎದುರಿಸಬಲ್ಲದು. ಮನೆಯಲ್ಲಿಯ ತಾಯಿ, ತಂದೆ, ಅಕ್ಕ, ಅಣ್ಣ, ತಂಗಿ ಮುಂತಾದ ಎಲ್ಲರಲ್ಲಿಯೂ ಅಚ್ಚರಿಯನ್ನು ಕಾಣುತ್ತಲೆ ಈ ಜಗತ್ತಿಗೆ ಪ್ರವೇಶಮಾಡುತ್ತದೆ. ತಾನು ಕಂಡು ಅನುಭವಿಸಿದ ಪರಿಧಿಯಲ್ಲಿ ಅದಕ್ಕೊಂದು ಅರ್ಥವನ್ನು ಕಲ್ಪಿಸಿ ಸ್ವರೂಪವನ್ನು ತಿಳಿಯಲು ಬಯಸುತ್ತದೆ. ಇದನ್ನು ನಾವು ಬಾಲ ಜಗತ್ತು ಎಂದು ಕರೆಯುತ್ತೇವೆ. ಇಂಥ ಕುತೂಹಲವನ್ನು ಪೂರೈಸಬೇಕಾದರೆ ಮಕ್ಕಳ ಮನೋಲೋಕಕ್ಕೆ ಇಳಿಯಬೇಕಾಗುತ್ತದೆ. ಮಕ್ಕಳ ಮನಸ್ಸಿನ ವಿಕಾಸದಲ್ಲಿ, ವ್ಯಕ್ತಿತ್ವ ವಿಕಾಸದ ಸಮಯದಲ್ಲಿ ಸುತ್ತಲಿನ ಪರಿಸರದ ಬಗ್ಗೆ ಆಸಕ್ತಿ ಮೂಡಿಸುವುದರಲ್ಲಿ ಮಕ್ಕಳ ಸಾಹಿತ್ಯ ಮಹತ್ವದ್ದಾಗಿ ಕಂಡುಬರುತ್ತದೆ. ಮಕ್ಕಳಿಗೆ ತಮ್ಮ ಜಗತ್ತಿನ ಅನಾವರಣ ತಮ್ಮ ಭಾಷೆ, ಅರಿವಿನ ಮಿತಿ ಬಲುಪ್ರಿಯ, ಹಿರಿಯರಿಗೆ ಬಾಲ್ಯವನ್ನು ಕಲ್ಪಿಸಿಕೊಂಡು ಮಕ್ಕಳಿಗಾಗಿ ಬರೆಯುವುದು ಒಂದು ರೀತಿಯ ಸವಾಲಿನ ಕೆಲಸವಾಗಿದೆ.

'ಮಕ್ಕಳ ಸಾಹಿತ್ಯದ ಕಡೆಗೂ ತಮ್ಮ ಪ್ರತಿಭೆಯ ಒಂದಂಶವನ್ನು ಹರಿಯತೊಡಗಿದ; ವಸ್ತುವಿನ ಆಯ್ಕೆಯಲ್ಲಿ ನಾವೀನ್ಯತೆ, ಭಾಷೆ, ಲಯ, ಬಂಧಗಳಲ್ಲಿ ಹೊಸ-ಹೊಸ ಸಾಧ್ಯತೆಗಳನ್ನು ಕಂಡುಕೊಂಡ; ಮಕ್ಕಳ ಸಾಹಿತ್ಯ ಕೇವಲ ನೀತಿಬೋಧೆಗಾಗಿ, ಶಿಕ್ಷಣಕ್ಕಾಗಿ ಅಲ್ಲ, ಎಂಬುದನ್ನು ಗ್ರಹಿಸಿದ; ಮಕ್ಕಳ ಸಾಹಿತ್ಯವನ್ನು ಶ್ರಾವ್ಯ ಮತ್ತು ದೃಶ್ಯ ಮಾಧ್ಯಮಗಳನ್ನು ಸೂಕ್ತವಾಗಿ ಬಳಸಿಕೊಂಡು ಮಕ್ಕಳಿಗೆ ತಲುಪಿಸುವಲ್ಲಿ ಸಫಲವಾದ ಮಕ್ಕಳ ಸಾಹಿತ್ಯದ ಹೊಸ ಕಾಲದ ಉದಯಕ್ಕೆ ಕಾರಣವಾದ ಪ್ರಾತಿನಿಧಿಕ ಕವಿಗಳು ಸಾಹಿತಿಗಳೂ ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಡಾ. ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ, ಎನ್. ಶ್ರೀನಿವಾಸ ಉಡುಪಿ, ಸುಮತೀಂದ್ರ ನಾಡಿಗ ಮತ್ತು ನಾ. ಡಿಸೋಜರವರು ಎಂದರೆ ಅತಿಶಯೋಕ್ತಿಯಾಗಲಾರದು'[೧೨].

ಮಕ್ಕಳ ಸಾಹಿತ್ಯದ ಭಾಷೆ ಸಹಜವಾಗಿ ಮನೆಯಲ್ಲಿ ಬಳಕೆಮಾಡುವ ಶಬ್ದಗಳನ್ನು ಒಳಗೊಂಡಿರಬೇಕು. ಕವಿತೆ ಸಂಭಾಷಣೆ ರೂಪದಲ್ಲಿದ್ದರೆ ಪರಿಣಾಮಕಾರಿಯಾಗಿ ಮಗುವಿಗೆ ಮುಟ್ಟಬಲ್ಲುದು. ಅಸಹ್ಯವಾದ ಪದಗಳು ಮಗುವಿನ ಮನಸ್ಸಿನ ಭಾವನೆಗಳನ್ನು ಕೆಡಿಸುವ ರೀತಿಯಲ್ಲಿರಬಾರದು. ಪದಗಳು ಪುನರಾವರ್ತನೆ ಆಗುವಂತಿದ್ದರೆ ಉತ್ತಮ. ಕನ್ನಡ ಭಾಷೆಯು ಪ್ರಾದೇಶಿಕವಾಗಿ ಭಿನ್ನವಾಗಿದೆ. ವೈವಿಧ್ಯತೆಗಳನ್ನು ಹೊಂದಿದೆ. ಮಂಗಳೂರು, ಮೈಸೂರು, ಧಾರವಾಡ ಮತ್ತು ಕಲಬುರಗಿ ಹೀಗೆ ಪ್ರಾದೇಶಿಕವಾಗಿ ವಿಭಾಗಿಸಲ್ಪಟ್ಟರೂ ಅದರೊಳಗೆ ಹಲವು ವ್ಯತ್ಯಾಸಗಳೊಂದಿಗೆ ಉಚ್ಚಾರಣೆಗೊಳ್ಳುತ್ತಲಿವೆ. ಈ ಪ್ರಾದೇಶಿಕ ವೈವಿಧ್ಯತೆಯನ್ನು ಇಟ್ಟುಕೊಂಡು ಇಡೀ ಕನ್ನಡ ನಾಡಿನ ಮಕ್ಕಳ ಮನವನ್ನು ಗೆಲ್ಲುವುದು ಅಸಾಧ್ಯವಾದ ಮಾತು. ಆದರೂ ಭಾಷೆಯ ಬಳಕೆಯಲ್ಲಿ ಆಡುಮಾತಿಗೊಂದು ಶೈಲಿ, ಬರವಣಿಗೆಗೆ ಮತ್ತೊಂದು ಶೈಲಿ ಎಂಬ ವರ್ಗೀಕರಣ ಇರುವುದು ಸಹಜ. ಆದ್ದರಿಂದ ಮಕ್ಕಳ ಸಾಹಿತ್ಯ ಕೇವಲ ಶಿಕ್ಷಣ ಹೊಂದಿರುವ ಮಕ್ಕಳಿಗೆ ಮಾತ್ರವಲ್ಲ ಪ್ರತಿಯೊಬ್ಬ ಮಗುವಿಗೂ ಹಿರಿಯರು ಅದನ್ನು ಗದ್ಯ ಪದ್ಯಗಳಲ್ಲಿ, ಓದಿ ಹೇಳುವ ಮತ್ತು ಹಾಡುವ ರೀತಿಯಲ್ಲಿ ಮೂಡಿಬರುವ ಸಾಧ್ಯತೆಗಳೂ ಇವೆ. ಹೀಗಿರುವಾಗ ಮಕ್ಕಳ ಸಾಹಿತ್ಯ ಸಹೃದಯರು ಅರ್ಥ ಮಾಡುವ ಒಂದೇ ಸ್ವರೂಪದ ಭಾಷೆಯ ಬಳಕೆ ಸಾಧ್ಯ ಎನ್ನುವುದು ನಮ್ಮ ಮುಂದಿರುವ ಮುಖ್ಯ ಸವಾಲಾಗಿದೆ. ಸಂಸ್ಕೃತಿಯನ್ನು ಬಿಂಬಿಸುವ, ಪ್ರಸ್ತುತವಾದ ವರ್ತಮಾನದ ವಿಷಯಗಳನ್ನು ಮೂಡಿಸುವ ಮಕ್ಕಳ ಕುತೂಹಲ ತಣಿಸುವ ಸಾಹಿತ್ಯ ಬೆಳೆದು ಬಂದಾಗಲೇ ಮಕ್ಕಳ ಸಾಹಿತ್ಯದ ಮೌಲ್ಯ ಹೆಚ್ಚುತ್ತದೆ. ಹಿಂದಿನ ರಚನೆಗಳು ದೂರವಾಗುತ್ತ ನಡೆದಿವೆ.

'ಮನೆ, ಮಾಧ್ಯಮ, ಶಾಲೆ, ಸ್ನೇಹ, ಕ್ರೀಡೆ, ಜಾಹಿರಾತು ಎಲ್ಲವೂ ಪಾಶ್ಚಾತ್ಯ ಅನುಕರಣೆಯೇ ಆಗಿರುವಾಗ ಕನ್ನಡದ ಪರಂಪರೆ, ಸೊಬಗು, ಸೌಂದರ್ಯ, ಮಹತ್ವ, ಇತಿಹಾಸ ಮಿಗಿಲಾಗಿ ಅದರ ಅಂತರಂಗದ ಸ್ವಾರಸ್ಯ ಹೇಗೆ ಅರ್ಥವಾಗಬೇಕು? ದೈನಂದಿನ

ಸಾಮಾನ್ಯ ವಿಷಯಗಳನ್ನೂ ಇಂದಿನ ಮಕ್ಕಳಿಗೆ ಇಂಗ್ಲೀಷಿನಲ್ಲಿ ಅನುವಾದಿಸಿ ಹೇಳಬೇಕಾದ ಪರಿಸ್ಥಿತಿ ಒದಗಿದೆ. ಓದುವ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಿದ್ದು ಅದರಲ್ಲಿ ಕನ್ನಡ ಕೃತಿಗಳೇ ಹೆಚ್ಚು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿವೆ. ಹಲವರಿಗೆ ಕನ್ನಡದಲ್ಲಿರುವ ಮಕ್ಕಳ ಸಾಹಿತ್ಯ ಭಂಡಾರದ ಅರಿವಿಲ್ಲ. ಅಂಥವರು ಸತ್ವಪೂರ್ಣ ರಚನೆಗಳೇ ಇಲ್ಲ – ಎಂದೋ, ಪಠ್ಯಪುಸ್ತಕಗಳನ್ನಾದರೂ ನೋಡದೆ ಹಿಂದಿದ್ದ ಮಾದರಿಯ ಕಥೆ, ಕವಿತೆಗಳಿಲ್ಲ ಎನ್ನುತ್ತಲೇ ಇತರರನ್ನು ದೂರುತ್ತಾ ಕಾಲ ಕಳೆಯುತ್ತಾರೆ. ದೂರದರ್ಶನದ ಮುಂದೆ ಪ್ರತಿಷ್ಠಾಪನೆಯಾಗುವ ಪರಿಸರದಲ್ಲಿ ಓದುಗರನ್ನು ನಿರೀಕ್ಷಿಸುವಿಕೆ ನಿರೀಕ್ಷಣೆಯಾಗಿಯೇ ಉಳಿದಿದೆ. ಸರ್ಕಾರದ ಅಂಕಿ–ಅಂಶಗಳಲ್ಲಿ ಸಾಕ್ಷರರ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ ಬಾಲ್ಯದ ರೋಮಾಂಚನವನ್ನಾಗಲಿ, ಸವಿಬದುಕಿನ ಆಶಯವನ್ನಾಗಲೀ ಹಿಡಿದಿರಿಸಿ ಹೇಳುವ ತಾಳ್ಮೆ, ವಿವೇಕ ಎಷ್ಟು ಮಂದಿ ಹಿರಿಯರಲ್ಲಿ ಉಳಿದಿದೆ? ಮಕ್ಕಳಿಗೂ ಅದನ್ನೆಲ್ಲಾ ಕಲಿಯುವ ವ್ಯವಧಾನ ಇಲ್ಲವಾಗಿದೆ..... ಆದರೂ ಮಕ್ಕಳ ಅಭಿರುಚಿ, ಸಾಮರ್ಥ್ಯವನ್ನಾಧರಿಸಿದ ಪುಸ್ತಕಗಳ ಸಂಖ್ಯೆ ಹೆಚ್ಚಿಲ್ಲ. ನಿರ್ದಿಷ್ಟ ವಯೋಮಾನದ ಮಕ್ಕಳ ಭಾವಗ್ರಹಣ, ಸಾಮರ್ಥ್ಯವನ್ನು ಹಿಡಿದು ಅವರಲ್ಲಿ ಭಾಷೆ, ಮಾನವೀಯ ಮೌಲ್ಯ, ಸಾಹಿತ್ಯಾಭಿರುಚಿಯನ್ನು ಬೆಳೆಸಲೆಂದೇ ಬರೆದ ಪುಸ್ತಕಗಳು ತೀರಾ ಕಡಿಮೆ. ಆದರ್ಶ ಮತ್ತು ಮಾರ್ಗದರ್ಶನ ಮಾಡುವ ಹಿನ್ನೆಲೆಯಲ್ಲಿ ಸಾಹಿತ್ಯದ ಪಾತ್ರ ದೊಡ್ಡದು'[೧೩].

ಮಕ್ಕಳ ಸಾಹಿತ್ಯ ಒಂದು ಅರ್ಥದಲ್ಲಿ ಮಾನವನ ಬದುಕಿನ ಪ್ರಮುಖ ಕಾಲಘಟ್ಟದ ಅಭಿವ್ಯಕ್ತಿಯಾಗಿದೆ. ಮಾನವೀಯ ಗುಣ ವಿಶೇಷತೆಗಳನ್ನು ಕಟ್ಟಿಕೊಡುವ ಪ್ರಚಲ ಸೂತ್ರವಾಗಿದೆ. ಇಂದಿನ ಮಕ್ಕಳ ಆಶೋತ್ತರಗಳನ್ನು ವ್ಯಕ್ತಗೊಳಿಸುವ ಮತ್ತು ಭವಿಷ್ಯದ ಬದುಕಿನೊಳಗೆ ಮಾನವ ಸಂಬಂಧಗಳನ್ನು ಸ್ವಲ್ಪವೂ ಬದಲಾಯಿಸದೆ ಪಾಲಿಸಿಕೊಂಡು ಹೋಗುವ ವಸ್ತು ವಿಷಯದ ಆಯ್ಕೆ ಮಹತ್ವಪೂರ್ಣವಾದುದು. ಆಧುನಿಕ ಯುಗವಾದ ಇಂದು ತಂತ್ರಜ್ಞಾನದ ಭರಾಟೆಯೊಳಗೆ ಕೃತಕತೆ, ಯಾಂತ್ರಿಕತೆಯೇ ಮುಖ್ಯವಾಗದಂತೆ ಎಚ್ಚರಿಕೆಯನ್ನು ವಹಿಸುವ ಅಗತ್ಯವಿದೆ. ಮಕ್ಕಳು ತೋರಿಸುವ ಸಾಹಸ ಕಾರ್ಯಗಳು, ದಯೆ, ಸಹಪಾಠಗಳಿಗೆ ಸಮಯಕ್ಕೆ ಸರಿಯಾಗಿ ಸಹಕರಿಸಿ ಸಹಾಯ ಮಾಡಿದ್ದು, ಮಾನವೀಯ ಗುಣ ಮೆರೆದಿದ್ದು, ಸಮಾಜ ಸೇವೆ ಸಲ್ಲಿಸಿದ್ದು ಗಣನೆಗೆಬಾರದೇ ಹೋಗುತ್ತಿವೆ. ಮಕ್ಕಳು ಚಿಕ್ಕಂದಿನಲಿ ತಮ್ಮ ವಯಸ್ಸಿಗೆ ಮೀರಿದ ಕಾರ್ಯ ಮಾಡಿರುವುದು ವಿರಳವಾಗಿ ಕಂಡುಬರುತ್ತಿದೆ. ಇತಿಹಾಸ ಪುಟದ ಮಹಾನ್ ನಾಯಕರು, ವಿಜ್ಞಾನಿಗಳು, ಸಮಾಜ ಸುಧಾರಕರು, ದಾರ್ಶನಿಕರು, ಶಿಕ್ಷಕರು ಚಿಕ್ಕಂದಿನಲ್ಲಿ ಮಾಡಿರುವ ಸಾಧನೆಗಳನ್ನು ಮಕ್ಕಳ ಸಾಹಿತ್ಯದ ಮೂಲಕ ಪರಿಚಯಿಸುವುದು ಇಂದಿನ ಅಗತ್ಯವಾಗಿದೆ.

ಇಂದಿನ ಮಕ್ಕಳ ಹಿತವನ್ನು ಸಾಧಿಸುವಲ್ಲಿ ಸಾಕಷ್ಟು ಲೋಪದೋಷಗಳು ಕಂಡುಬರುತ್ತಲಿವೆ. ಮಕ್ಕಳನ್ನು ಕಡೆಗಣಿಸಿದ ದೃಶ್ಯ ಮಾಧ್ಯಮ ಕಾರ್ಯಕ್ರಮಗಳೇ ಪ್ರಮುಖವಾಗಿ ಅಭಿವ್ಯಕ್ತಗೊಳ್ಳುತ್ತಿವೆ. ಮಕ್ಕಳು ಸಾಹಸ ಪ್ರಿಯರು, ಹೊಸತನ ಬಯಸುವವರು ಎಂಬುದನ್ನು ಕಂಡುಕೊಳ್ಳಬೇಕಿದೆ.

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯ ತಾತ್ವಿಕತೆಯನ್ನು ಸಂಶೋಧನೆಗೆ ಒಳಪಡಿಸಿ ಮುನ್ನಡೆದಾಗ ಹೊಸ ಸಾಧ್ಯತೆಗಳು ಅನಾವರಣಗೊಳ್ಳುತ್ತ ಹೋಗುವುದನ್ನು ಒಪ್ಪಿಕೊಳ್ಳಲೇಬೇಕು. ಸಂಶೋಧನೆ ನಿರಂತರ ಪ್ರಕ್ರಿಯೆ ಆಗಿರುವುದರಿಂದ ಪ್ರಸ್ತುತ ವಿಷಯದಲ್ಲಿ ಇನ್ನೂ ಹೊಸತನದ ಹೊಳಹುಗಳನ್ನು ಅಭಿವ್ಯಕ್ತಿಯಲ್ಲಿ ಕಾಣಬಹುದು.

ಕನ್ನಡದ ಹಲವಾರು ಮಕ್ಕಳ ಸಾಹಿತಿಗಳ ಮಕ್ಕಳ ಸಾಹಿತ್ಯ ಕೃತಿಗಳನ್ನು ಸಂಶೋಧನೆಗೆ ಒಳಪಡಿಸಬಹುದು. ಭಾರತೀಯ ಇತರ ಭಾಷೆಯ ಮಕ್ಕಳ ಸಾಹಿತ್ಯದೊಂದಿಗೆ ಕನ್ನಡ ಮಕ್ಕಳ ಸಾಹಿತ್ಯ ಕೃತಿಗಳನ್ನು ತೌಲನಿಕವಾಗಿ ಅಧ್ಯನ ಕೈಗೊಳ್ಳಬಹುದು.

ಅಡಿಟಿಪ್ಪಣಿ :

೧) ಸಂತೋಷ ಕುಮಾರ ಗುಲ್ವಾಡಿ (ಸಂ) : ದ. ಕ. ಜಿಲ್ಲೆಯ ಬಾಲಸಾಹಿತ್ಯದ ಮೊದಲಿಗರು : ಮುನ್ನುಡಿ, ಪು.xi

೨) ಈಶ್ವರ ಕಮ್ಮಾರ : ಮಕ್ಕಳ ಸಾಹಿತ್ಯ ಸಂಪದ : ಪು.೪೫

೩) ಡಾ. ಎಚ್. ಎಸ್. ವೆಂಕಟೇಶ ಮೂರ್ತಿ : ಮಕ್ಕಳ ಸಾಹಿತ್ಯ : ಪು.೪೫೧

೪) ಹಾ. ಮಾ. ನಾಯಕ : ಸಂಕೀರ್ಣ : ಪು.೧೧೨

೫) ಕುವೆಂಪು : ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗ್ರತಿ : ಪು.೪೧

೬) ಸಿಸು ಸಂಗಮೇಶ : ದವನ ಸಿರಿ–ಸ್ಮರಣ ಸಂಚಿಕೆ : ಪು.೧೧೦

೭) ಮಕ್ಕಳ ಸಾಹಿತಿ ಅಣ್ಣಾಜಿ ಫಡತಾರೆ ಸಂದರ್ಶನದ ಸಮಯ ೨೦೧೫

೮) ಗಿರಿಜಮ್ಮ : ಮಕ್ಕಳ ಮಾನಸಲೋಕ : ಪು.೬೩

೯) ಆನಂದ ವಿ. ಪಾಟೀಲ : ಆಲರು : ಪು.೮೦

೧೦) ಜಿ. ಪಿ. ರಾಜರತ್ನಂ : ಕಂದನ ಕಾವ್ಯಮಾಲೆ : ಪು.೪–೫

೧೧) ಆನಂದ ಪಾಟೀಲ : ಹೀಗೆ ಒಂದಿಷ್ಟು ಖುಷಿ ಕೊಟ್ಟವು : ಪು.೧೧೯–೧೩೩

೧೨) ಡಾ. ಪ್ರಜ್ಞಾ ಮಾರ್ಪಳ್ಳಿ : ನಿನ್ನೆಗೆ ನನ್ನ ಮಾತು : ಪು.೧೫೧

೧೩) ಡಾ. ಬೆಳವಾಡಿ ಮಂಜುನಾಥ : ಕನ್ನಡದಲ್ಲಿ ಮಕ್ಕಳ ಸಾಹಿತ್ಯ : ಪು.೨೫

❑❑❑❑❑

ಅಧ್ಯಾಯ : ೭

ಸಮಾರೋಪ

ಅಧ್ಯಾಯ – ೭
ಸಮಾರೋಪ

ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯ ತಾತ್ವಿಕ ಸ್ವರೂಪ :

ಕನ್ನಡ ಮಕ್ಕಳ ಸಾಹಿತ್ಯದ ಇತಿಹಾಸವನ್ನು ನೋಡಿದಾಗ ಹಿಂದಿನಿಂದಲೂ ಪ್ರಯೋಗಶೀಲತೆಯಿಂದ ಒಳಗೊಂಡಿರುವುದು ಕಂಡುಬರುತ್ತದೆ. ಸಾಹಿತ್ಯದ ಹೊಸ-ಹೊಸ ಪ್ರಕಾರಗಳು ಬೆಳೆದು ಆಯಾ ಪ್ರದೇಶಕ್ಕೆ ಅನುಗುಣವಾಗಿ ಭಿನ್ನ-ಭಿನ್ನವಾಗಿ ಅಭಿವ್ಯಕ್ತಗೊಂಡಿದೆ. ಇಡಿಯಾದ ಮಕ್ಕಳ ಸಾಹಿತ್ಯವನ್ನು ಗಮನಿಸಿದಾಗ ಸಾಮಾಜಿಕ ಬದಲಾವಣೆಗಳು, ಸಮಕಾಲೀನ ಮಕ್ಕಳ ಮನೋಧರ್ಮಗಳು, ನಿಸರ್ಗದ ಪ್ರಭಾವ, ರಾಜಕೀಯ, ಆರ್ಥಿಕ ಬದಲಾವಣೆ, ಸಮೂಹ ಮಾಧ್ಯಮಗಳ ಅತಿಯಾದ ಭರಾಟೆ ಮೊದಲಾದ ಅಂಶಗಳು ಮಕ್ಕಳ ಸಾಹಿತ್ಯವನ್ನು ರೂಪಿಸುವುದರಲ್ಲಿ, ಸ್ವರೂಪವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನುವಹಿಸಿವೆ.

ಮಕ್ಕಳ ಸಾಹಿತ್ಯದ ಶೈಲಿ, ಭಾವನೆಗಳ ಅಭಿವ್ಯಕ್ತಿ, ಕವಿಗಳ ಸ್ಪಂದನೆ-ಸಂವೇದನೆಗಳು ವಿಶಿಷ್ಟವೂ ವಿಭಿನ್ನವೂ ಆಗಿ ಅಭಿವ್ಯಕ್ತಗೊಳ್ಳಲು ಹಲವು ಕಾರಣಗಳು ನಮ್ಮೆದುರು ನಿಲ್ಲುತ್ತವೆ.

ನಾಡಿನ ಭೌಗೋಳಿಕ ವಿಭಾಗ ಕ್ರಮದಿಂದ ಮಕ್ಕಳ ಸಾಹಿತ್ಯದಲ್ಲಿಯೂ ವೈವಿಧ್ಯತೆ ಸೃಷ್ಟಿಯಾಗಿದೆ. ಕಾಡು, ರಮಣೀಯ ಬೆಟ್ಟಗಳ ಸಾಲುಗಳು, ಸುಂದರ ಪ್ರಕೃತಿಯ ತಾಣಗಳು ಮಕ್ಕಳ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿವೆ. ಕವಿತೆಗಳಲ್ಲಿ ಪ್ರಾಣಿ, ಪಕ್ಷಿ, ಬಯಲು, ಹೂ, ನದಿ, ಹೊಳೆ, ಸೂರ್ಯ, ಚಂದ್ರ, ಗಿರಿ, ವನ, ಮರ, ಬಳ್ಳಿ, ನೆಲ, ಮುಗಿಲು, ಮಳೆ, ಗಾಳಿ, ನೆರಳು, ಬೈಗು, ಬೆಳಗುಗಳು ಅಭಿವ್ಯಕ್ತಿಯ ಮಾಧ್ಯಮಗಳಾಗಿ ಸ್ವೀಕರಿಸುವುದು ಕಂಡುಬರುತ್ತದೆ.

ಪ್ರಾದೇಶಿಕತೆಯ ಹಿನ್ನೆಲೆಯನ್ನು ಆಧರಿಸಿ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿ ಮತ್ತು ತಾತ್ವಿಕ ಸ್ವರೂಪವನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಪ್ರಾದೇಶಿಕವಾದ ಮತ್ತು ಪ್ರಾತಿನಿಧಿಕ ಕವಿಗಳ ಮಕ್ಕಳ ಕೃತಿಗಳು ಮತ್ತು ಪೂರಕವಾಗಿ ಆಯ್ದುಕೊಂಡ ಕವಿಗಳ ಮಕ್ಕಳ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನ ಕವನ ಸಂಕಲನಗಳಿಗೆ ಸೀಮಿತವಾಗದೆ ಕಥೆ, ಕಥನ ಕವನ, ನಾಟಕ, ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ ಮೊದಲಾದವುಗಳನ್ನು ವೈಚಾರಿಕ ನಿಲುವುಗಳಿಂದ ಮಕ್ಕಳ ಕೃತಿಗಳನ್ನು ಅಭ್ಯಾಸ ಮಾಡಲಾಯಿತು. ವಿವಿಧ ವಿಮರ್ಶನ ಕೃತಿಗಳನ್ನು ಮತ್ತು ಲೇಖನಗಳನ್ನು ಓದಿ, ಸ್ಪಷ್ಟವಾದ ನಿಲುವುಗಳ ನೆಲೆಯಲ್ಲಿ ಗ್ರಹಿಸಿ, ಕವಿಗಳ ಕೃತಿಗಳಲ್ಲಿಯ ವಿಷಯವನ್ನು ಮೌಲ್ಯಯುತವಾಗಿ, ಸ್ಪಷ್ಟ ಅಭಿಪ್ರಾಯಗಳೊಂದಿಗೆ ವ್ಯಕ್ತಗೊಳಿಸಲು ಸಾಧ್ಯವಾಗಿದೆ.

ಈ ಅಧ್ಯಯನದ ಸಂದರ್ಭದಲ್ಲಿ ಅನೇಕ ಸಾಹಿತ್ಯಕ ಕೃತಿಗಳು, ಸ್ಮರಣ ಸಂಚಿಕೆಗಳು, ಸಂಶೋಧನ ಪ್ರಬಂಧಗಳು, ನಾಡಿನ ವಿವಿಧ ದಿನಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸಿಕ ಪತ್ರಿಕೆಗಳು ಮತ್ತು ವಿಶ್ವವಿದ್ಯಾಲಗಳ ವಾರ್ಷಿಕ ಪತ್ರಿಕೆಗಳನ್ನು ಗಮನಿಸಲಾಗಿದೆ.

ಮಕ್ಕಳ ಸಾಹಿತ್ಯದ ಕವಿಗಳು, ಸಾಹಿತಿಗಳು, ಬರಹಗಾರರು ಮತ್ತು ಪ್ರಮುಖ ವಿಮರ್ಶಕರನ್ನು ಭೇಟಿಯಾಗಿ ಅವರಿಂದ ಮಾಹಿತಿ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಕೆಲವು ಕವಿಗಳ ಸಂದರ್ಶನದಿಂದ ಅವರ ಮಕ್ಕಳ ಸಾಹಿತ್ಯದ ವೈಯಕ್ತಿಕ ಧೋರಣೆ, ಪ್ರೇರಣೆಗಳ ನೆಲೆಗಳನ್ನು ಅರಿತುಕೊಂಡು ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯನ್ನು ವಿಶ್ಲೇಷಣೆ ಮಾಡಲು ಸಾಧ್ಯವಾಯಿತು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯವೂ ಪ್ರಮುಖ ಸ್ಥಾನವನ್ನು ಪಡೆದು, ತನ್ನದೇ ಆದ ವೈಶಿಷ್ಟ್ಯಗಳನ್ನು ರೂಢಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಮಕ್ಕಳಲ್ಲಿ ಹೊಸ–ಹೊಸ ಚಿಂತನೆಯ ಹೊಳಹುಗಳನ್ನು ಕಟ್ಟಿಕೊಟ್ಟಿದೆ. ಪ್ರಾದಶಿಕವಾಗಿ ಆಯ್ಕೆ ಮಾಡಿಕೊಳ್ಳಲಾದ ಕವಿಗಳ ಮಕ್ಕಳ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಭಾಷೆ ಮತ್ತು ಶೈಲಿಯ ದೃಷ್ಟಿಯಿಂದ ಭಿನ್ನತೆಯನ್ನು ಹೊಂದಿದೆ. ಪರಂಪರಾಗತವಾಗಿ ಬೆಳೆದು ಬಂದ ಭಾಷೆಯನ್ನು ಅಭಿವ್ಯಕ್ತಿಗೆ ಅನುಕೂಲವಾಗುವಂತೆ ಪ್ರಾದೇಶಿಕ ಮತ್ತು ಗ್ರಾಮೀಣ ಜನಜೀನವದ ಭಾಷೆಯನ್ನು ಬಳಸಿರುವುದು, ನುಡಿಗಟ್ಟುಗಳು ಹಾಗೂ ಗಾದೆಮಾತುಗಳ ಬಳಕೆ ಇವು ಕನ್ನಡ ಮಕ್ಕಳ ಸಾಹಿತ್ಯದ ಮೇಲೆ ಹೆಚ್ಚು ಪ್ರಭಾವಿಸಿರುವುದು ಕಂಡುಬರುತ್ತದೆ.

ಪ್ರಾತಿನಿಧಿಕವಾಗಿ ಆಯ್ಕೆ ಮಾಡಿದ ಕವಿಗಳ ಮಕ್ಕಳ ಸಾಹಿತ್ಯ ಹಲವು ಸಂವೇದನೆಗಳನ್ನು ತೆರೆದಿಡುತ್ತವೆ. ಆಧುನಿಕ ಜಗತ್ತಿನ ಒತ್ತಡದಲ್ಲಿ ಮಕ್ಕಳಿರುವುದರಿಂದ ಅವರಲ್ಲಿ ತಿಳಿವಳಿಕೆ, ಸಹನೆ, ಸತ್ಯತೆಯ ಗುಣಗಳನ್ನು ಬಿತ್ತರಿಸುವ ಅಭಿವ್ಯಕ್ತಿ, ಬದುಕಿನ

ತಲ್ಲಣಗಳು ಇವರ ಸಾಹಿತ್ಯ ಕೃತಿಗಳ ಹಿಂದಿನ ಪ್ರೇರಣೆಯಾಗಿದೆ. ಮಕ್ಕಳ ಮನಮುಟ್ಟುವ ಶೈಲಿ, ವಸ್ತು, ವಿನ್ಯಾಸಗಳ ಹೋಲಿಕೆಯಿದ್ದರೂ ಒಂದೇ ರೀತಿಯಾಗಿಲ್ಲ. ಪ್ರತಿಯೊಂದು ಮಕ್ಕಳ ಕೃತಿಗಳು ಬೇರೆ-ಬೇರೆ ಪ್ರಸಂಗಗಳನ್ನು, ಭಿನ್ನವಾದ ಆಯಾಮಗಳನ್ನು ಚಿತ್ರಿಸುತ್ತವೆ. ಮಕ್ಕಳ ಕವಿಗಳ ಅನುಭವದ ಅಭಿವ್ಯಕ್ತಿಯಿಂದ ಮಕ್ಕಳ ಸಾಹಿತ್ಯ ಕೃತಿಗಳು ಪ್ರಮುಖವೆನಿಸುತ್ತವೆ.

ಪಂಜೆಮಂಗೇಶರಾಯರಾಗಲಿ, ದಿನಕರ ದೇಸಾಯಿಯವರಾಗಲಿ, ಕುವೆಂಪುರವರಾಗಲಿ, ಪಳಕಳ ಸೀತಾರಾಮಭಟ್ಟರವರಾಗಲಿ ಮತ್ತು ಕಂಚ್ಯಾಣಿ ಶರಣಪ್ಪನವರಾಗಲಿ ಪ್ರತಿಯೊಬ್ಬರೂ ಪ್ರಾಮಾಣಿಕತೆ, ಮುಗ್ಧತೆಗಳನ್ನು ಸಂವಾದ ರೂಪದಲ್ಲಿ ಅಭಿವ್ಯಕ್ತಗೊಳಿಸಿರುವುದು ಕಾಣುತ್ತೇವೆ. ಇದು ಮಕ್ಕಳಲ್ಲಿ ಒಂದು ರೀತಿಯ ಆನಂದ ಮತ್ತು ರೋಮಾಂಚನ ನೀಡುತ್ತವೆ. ಪ್ರೌಢ ಸಾಹಿತ್ಯದೊಂದಿಗೆ ಮಕ್ಕಳ ಸಾಹಿತ್ಯದಲ್ಲಿ ಅಚ್ಚರಿ ಮೂಡಿಸುವಂತಹ ಕೃತಿಗಳನ್ನು ಬರೆದು ಅದಕ್ಕೊಂದು ನವೀನತೆಯ ಮೆರುಗನ್ನು ನೀಡಿ ಅನನ್ಯತೆಯನ್ನು ಮೆರೆದಿದ್ದಾರೆ.

ನವೋದಯದ ಭಾವುಕತೆ, ರಾಷ್ಟ್ರ ಅಭಿಮಾನ, ವಾತ್ಸಲ್ಯ, ಭಾವೈಕ್ಯತೆ, ನಿಸರ್ಗ ಪ್ರೀತಿ, ವೈಚಾರಿಕ ಮನೋಭಾವ, ಸಾಮಾಜಿಕ ಕಳಕಳಿ, ಮಾನವೀಯತೆಯ ತುಡಿತ ಮೊದಲಾದ ಸಂಗತಿಗಳು ಅಧ್ಯಯನಕ್ಕೆ ಬಳಸಿಕೊಳ್ಳಲಾದ ಕವಿಗಳ ಮಕ್ಕಳ ಕೃತಿಗಳಲ್ಲಿ ಅನಾವರಣಗೊಂಡಿವೆ.

ಮಕ್ಕಳ ಸಾಹಿತ್ಯ ಸಾಮಾಜಿಕ ನೆಲೆಯಲ್ಲಿ ಬಹುಮುಖವಾಗಿ ಅರಳಿದೆ. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಧಾನ ಪಾತ್ರವಹಿಸಿದೆ. ಮಕ್ಕಳ ಸಾಹಿತ್ಯದ ಪ್ರಮುಖ ಹೆಜ್ಜೆ ಗುರುತುಗಳನ್ನು ಗುರುತಿಸಿಕೊಂಡು ಕುತೂಹಲಕಾರಿಯಾದ ಮಕ್ಕಳ ಮನಸ್ಸುಗಳನ್ನು ಕೆಲವು ಮಿತಿಗಳೊಂದಿಗೆ ಚರ್ಚೆಗೆ ಒಳಪಡಿಸಲಾಗಿದೆ. ಮಕ್ಕಳ ಭಾವನೆಗಳನ್ನು ಅರಳಿಸುವ, ಬೆರಗನ್ನು ಮೂಡಿಸುವ, ಅವರು ತಮ್ಮದೇ ಆದ ಬುದ್ಧಿ ಮಟ್ಟದಲ್ಲಿ ವಿಚಾರ ಮಾಡುವಂತಹ ಹಾಗೂ ಸುತ್ತಲಿನ ಪರಿಸರದ ಅಂದ-ಚಂದವನ್ನು ತಿಳಿದುಕೊಳ್ಳುವ, ಮಕ್ಕಳನ್ನು ಆನಂದದಲ್ಲಿ ಮುಳುಗಿಸುವ ಕೆಲಸವನ್ನು ಮಕ್ಕಳ ಸಾಹಿತ್ಯ ಮಾಡುತ್ತದೆ. ಕಲ್ಪನೆಯ ಮತ್ತು ಸೃಜನಶೀಲತೆಯ ಮೂಲಕ ಮಕ್ಕಳ ವ್ಯಕ್ತಿತ್ವ ರೂಪಿಸುವ ಸಾಧನವಾಗಿ ಮಕ್ಕಳ ಸಾಹಿತ್ಯ ಮೂಡಿದೆ.

ಈ ಹೊತ್ತಿನಲ್ಲಿ ಮಕ್ಕಳ ಸಾಹಿತ್ಯದ ಅವಶ್ಯಕತೆ ಏನು? ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿಂದು ಮಕ್ಕಳ ಸಂವೇದನೆಗಳು ಹಿಂದಿಗಿಂತಲೂ ಇಂದು ಹೇಗೆ ಭಿನ್ನವಾಗಿವೆ? ಸಾಮಾಜಿಕ ಮತ್ತು ಬೌದ್ಧಿಕ ಸಂಗತಿಗಳು ವೇಗವಾಗಿ ಪರಿಣಾಮ ಬೀರುತ್ತ ಬದಲಾಗುವ ಸನ್ನಿವೇಶಗಳು ಮಕ್ಕಳ ಅವಶ್ಯಕತೆಗೆ ತಕ್ಕಂತೆ ಪೂರೈಕೆಯಾಗುತ್ತಿವೆಯೆ? ಬದಲಾಗುತ್ತಿರುವ ಈ ಹೊತ್ತು ಮಕ್ಕಳ ಪರಿಸರ, ಶಿಕ್ಷಣ, ಕುಟುಂಬಗಳ ಚಿತ್ರಣ, ಒತ್ತಡದ ಬದುಕಿನ

ಜಂಜಾಟಗಳಿಂದ ಹೊರಬರಲು ಸಹಾಯವಾಗುವುದೆ? ಹೀಗೆ ಮಕ್ಕಳ ಸಾಹಿತ್ಯವನ್ನು ಹಲವು ಬಗೆಯ ನೆಲೆಯಿಂದ ಗಮನಿಸಿ ವಿಶ್ಲೇಷಣೆಯೊಂದಿಗೆ ಪ್ರಾತಿನಿಧಿಕ ಕವಿಗಳ ಮಕ್ಕಳ ಆಶಯ ಮತ್ತು ಅಭಿವ್ಯಕ್ತಿಯ ಸ್ವರೂಪದ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯದ ಮಹತ್ವವನ್ನು ಕಂಡುಕೊಳ್ಳಲಾಗಿದೆ.

ಹೀಗೆ ಬೆಳೆದು ಬಂದ ಮಕ್ಕಳ ಸಾಹಿತ್ಯದ ಉದ್ದೇಶ, ಮಹತ್ವವನ್ನು ಕಂಡುಕೊಳ್ಳಬೇಕಾದರೆ, ಸಮಗ್ರ ಮಕ್ಕಳ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿ ಸಂಕ್ಷಿಪ್ತವಾಗಿ ವಿವರಣೆ ಮಾಡಲಾಗಿದೆ. ಪ್ರಾಚೀನ ಸಾಹಿತ್ಯ ಸಂದರ್ಭದಲ್ಲಿ ಹೆಚ್ಚಾಗಿ ನೀತಿಬೋಧನೆಯೇ ಪ್ರಧಾನವಾಗಿ ಮೂಡಿಬಂದಿದೆ. ಅದರ ಜೊತೆ ಮಕ್ಕಳಿಗೆ ಮಾರ್ಗದರ್ಶನ ಮಾಡುವಂತಹ ಸಾಹಿತ್ಯವೂ ನೆಲೆ ನಿಂತಿದೆ. ಹೀಗೆ ನೀತಿ ಬೋಧನೆಯೇ ಪ್ರಧಾನವಾಗಿಟ್ಟುಕೊಂಡು ಮೂಡಿಬಂದ ಮಕ್ಕಳ ಸಾಹಿತ್ಯದ ಇನ್ನೊಂದು ಬದಿಯಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಧ್ಯೇಯವನ್ನು ಹೊಂದಿದೆ.

ಕನ್ನಡ ಮಕ್ಕಳ ಸಾಹಿತ್ಯ ಅಧ್ಯಯನಕ್ಕೆ ಬಳಸಿಕೊಂಡ ವಸ್ತು–ವಿಷಯಗಳು ಹಲವು. ಆದರೂ ಅದನ್ನು ಒಂದು ಕ್ರಮಬದ್ಧತೆಯಿಂದ ನೋಡುವುದು ಅವಶ್ಯಕ. ಈ ಕ್ರಮಕ್ಕೆ ಬದ್ಧವಾದ ಮಾರ್ಗದ ತಳಹದಿಯೂ ಬೇಕು, ತತ್ವವೂ ಬೇಕು. ಈ ರೀತಿಯ ಅಭಿವ್ಯಕ್ತಿಯ ಸ್ವರೂಪದ ಹಿನ್ನೆಲೆಯಲ್ಲಿ ಅಧ್ಯಯನ ನಡೆದಿದೆ. ಮಕ್ಕಳ ಸಾಹಿತ್ಯದ ಸ್ವರೂಪ, ಲಕ್ಷಣ, ಶೈಲಿ, ತಂತ್ರಗಳಲ್ಲಿ ವೈವಿಧ್ಯತೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಸಂಗತಿಗಳನ್ನು ಪ್ರಾಸಂಗಿಕವಾಗಿ ವಿವೇಚನೆಗೆ ತರುವುದು ಅನಿವಾರ್ಯವಾಗಿದೆ. ಮಕ್ಕಳ ಅರಿವಿಗೆ ನಿಲುಕದ ವಿಷಯಗಳನ್ನು ಕವಿತೆ–ಕಥೆಗಳಲ್ಲಿ ತುರುಕಿ ಹೇಳಿದರೆ ಅಪ್ರಯೋಜನ. ಆದುದರಿಂದ ಮಕ್ಕಳಿಗೆ ದಿನನಿತ್ಯದಲ್ಲಿ ಪರಿಚಿತವಾದ ವಸ್ತುಗಳು, ಪಕ್ಷಿ, ಪ್ರಾಣಿಗಳು, ನಿಸರ್ಗದ ಸನ್ನಿವೇಶ, ಸಂಗತಿಗಳು ಪೂರಕವಾಗಿರುವುದು ಅವಶ್ಯಕ.

ಮಕ್ಕಳಲ್ಲಿ ನಾಡು–ನುಡಿ, ಭಾವೈಕ್ಯತೆ, ರಾಷ್ಟ್ರೀಯ ಅಭಿಮಾನ, ಸಹಕಾರ ಭಾವನೆ, ವೈಜ್ಞಾನಿಕ ಮನೋವೃತ್ತಿ, ಸತ್ಯ, ಪ್ರಾಮಾಣಿಕತೆ, ಸೇವಾ ಮನೋಧರ್ಮ ಮುಂತಾದ ಆದರ್ಶ ಪ್ರಾಯವಾದ ಮೌಲ್ಯಗಳು ಮಕ್ಕಳಲ್ಲಿ ಬೆಳೆದುಬರಬೇಕು ಎಂಬುದು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಮಕ್ಕಳ ಸಾಹಿತ್ಯ ಪ್ರೌಢ ಸಾಹಿತ್ಯದಂತೆ ವಿವಿಧ ಪ್ರಕಾರಗಳಲ್ಲಿ ಹೆಚ್ಚು ಪ್ರಗತಿಯನ್ನು ಕಾಣಲು ಸಾಧ್ಯವಾಗಿಲ್ಲ. ಕವಿತೆ, ಕಥೆ, ನಾಟಕ ಪ್ರಕಾರಗಳಲ್ಲಿ ಹೆಚ್ಚಿನ ಒಲವು ಗಳಿಸಿಕೊಂಡು ಬೆಳವಣಿಗೆಯನ್ನು ಕಂಡರೆ ಕಾದಂಬರಿ, ಚರಿತ್ರೆ, ಪ್ರವಾಸ, ಪ್ರಬಂಧ, ವಿಜ್ಞಾನದಲ್ಲಿ

ಅಷ್ಟೊಂದು ಬೆಳವಣಿಗೆ ಆಗಿಲ್ಲವೆನ್ನಬಹುದು. ಈ ದೃಷ್ಟಿಯನ್ನಿಟ್ಟುಕೊಂಡು ಪ್ರಾತಿನಿಧಿಕ ಕವಿಗಳ ಮಕ್ಕಳ ಕೃತಿಗಳ ವಿಶ್ಲೇಷಣೆ-ವಿಮರ್ಶೆಯನ್ನು ಕುರಿತು ಚರ್ಚಿಸಲಾಗಿದೆ.

ಪಂಜೆಮಂಗೇಶರಾಯ :

ಹೊಸಗನ್ನಡದ ಆರಂಭ ಕಾಲದಲ್ಲಿ ಇಂಗ್ಲೀಷ ಭಾಷೆಯ ಪ್ರಭಾವದಲ್ಲಿ ಸಿಲುಕಿಕೊಂಡು, ಕನ್ನಡ ನುಡಿಯ ಸೊಗಸನ್ನು ಕನ್ನಡಿಗರು ಮರೆಯುವ ಸಂದಿಗ್ಧ ಸಮಯದಲ್ಲಿ ಕಟ್ಟಾ ಕನ್ನಡಾಭಿಮಾನಿಯಾಗಿ ಕನ್ನಡ ತಾಯಿಯ ಸೇವೆ ಮಾಡುವ ಕೆಲಸ ಆರಂಭಿಸಿದವರು ಪಂಜೆಮಂಗೇಶರಾಯರು.

ಅಧ್ಯಾಪಕರಾಗಿ, ಮುಖ್ಯೋಪಾಧ್ಯಾಯರಾಗಿ, ಪರೀಕ್ಷಾಧಿಕಾರಿಯಾಗಿ ಸೇವೆ ಮಾಡುವ ಸಂದರ್ಭದಲ್ಲಿ ಎಳೆಯ ಮಕ್ಕಳಿಗಾಗಿ ಮಕ್ಕಳ ಸಾಹಿತ್ಯ ರಚಿಸಿ ಮಕ್ಕಳಲ್ಲಿ ಕನ್ನಡದ ಬಗ್ಗೆ ಅಭಿಮಾನ ಮೂಡಿಸಿರುವರು. ಮಕ್ಕಳ ಶಿಕ್ಷಣ ಕ್ರಮದಲ್ಲಿ ಸುಧಾರಣೆಯನ್ನು ತಂದರು. ಗ್ರಾಮೀಣ ಉಪಾಧ್ಯಾಯರ ಬಗ್ಗೆ ಬಲು ಕಾಳಜಿಯನ್ನು ಪಂಜೆಯವರು ಹೊಂದಿದ್ದರು.

ಪಂಜೆಯವರ ಕವಿತೆಗಳು ತಮ್ಮ ಕುಣಿತದಿಂದ, ಮಣಿತದಿಂದ ಮತ್ತು ಗೇಯತೆಯಿಂದ ಮಕ್ಕಳ ಮನಗೆಲ್ಲುತ್ತವೆ. ಆದರೆ ಕವಿತೆಯ ಭಾವ, ವಿಷಯ, ಛಂದಸ್ಸು ಹಿರಿಯರ ಮನಕ್ಕೆ ತಟ್ಟದೆ ಬಿಡುವುದಿಲ್ಲ.

ಕಥನ ಕವನಗಳಲ್ಲಿ ಪ್ರಾಸಾನುಪ್ರಾಸಗಳ ಚಮತ್ಕಾರದ ಪದಗಳ ಬಳಕೆಯಲ್ಲಿ ತಮ್ಮತನವನ್ನು ಮೆರೆದಿದ್ದಾರೆ. ಶಬ್ದಗಳ ಸರಳತೆ, ಭಾಷೆಯ ಬಿಗುವು, ಬಳಕುಗಳು, ರಮಣೀಯ ಸನ್ನಿವೇಶಗಳು, ನಾಟಕೀಯತೆಗಳು ಅಭಿವ್ಯಕ್ತಗೊಂಡಿವೆ. ಆಧುನಿಕ ಛಂದೋಲಯಗಳನ್ನು ಬಳಸಿದವರಲ್ಲಿ ಪಂಜೆಯವರು ಮೊದಲಿಗರು. 'ಅಣ್ಣನ ವಿಲಾಪ' ಕರುಣ ರಸದ ಧಾರೆಯಾದ ಶೋಕಗೀತೆಯಾದರೆ, 'ತೂಕಡಿಕೆಯನ್ನು ಕಳೆ' ಒಂದು ಕ್ರಾಂತಿಗೀತೆಯಾಗಿ ಮೂಡಿದೆ. 'ಹುತ್ತರಿ ಹಾಡು' ಕೊಡವ ನಾಡಿಗರ ಬದುಕಿನ ಮೂಲ ಸೆಲೆಯಾದ ನಾಡು-ನುಡಿಯ ನಾಡಗೀತೆಯಾಗಿದೆ.

ಪಂಜೆಮಂಗೇಶರಾಯರು ಯಾವುದೇ ವಾದದ ಪ್ರಭಾವಕ್ಕೆ ಒಳಗಾಗಿ ಬರೆದವರಲ್ಲ. ಸ್ವಯಂ ಸ್ಫೂರ್ತಿಯಿಂದ ಮಕ್ಕಳಿಗೋಸ್ಕರ ಬರೆದವರು. ಪಂಜೆಯವರ ಮಕ್ಕಳ ಕವಿತೆಗಳ ಆಶಯಗಳನ್ನು ನಂತರ ಬಂದ ಬರಹಗಾರರು ಹೆಚ್ಚಾಗಿ ಗಮನಿಸದಿರುವುದು ವಿಶಾದದ ಸಂಗತಿ.

ಪಂಜೆಯುವರ ಅನುವಾದ ಕವನಗಳಾಗಲಿ, ಸ್ವತಂತ್ರ ಕವನಗಳಾಗಲಿ ಅವಲೋಕಿಸಿದಾಗ ಎಲ್ಲಿಯೂ ಅಡೆತಡೆಯ ತಾಕಲಾಟ ಕಂಡುಬರುವುದಿಲ್ಲ. ಸರಾಗವಾಗಿ

ಹರಿಯುವ ಹೊಳೆಯಂತೆ ಹರಿದಿದೆ. ಇಲ್ಲಿ ಅವರ ಪ್ರತಿಭೆ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿದೆ.

ಪ್ರಾದೇಶಿಕ ಸಂಸ್ಕೃತಿಯನ್ನು ಮೂಲವಾಗಿಸಿಕೊಂಡು ತಮ್ಮ ಬರವಣಿಗೆಯನ್ನು ಸಮೃದ್ಧಗೊಳಿಸಿದವರು. ಪ್ರಾದೇಶಿಕ ಭಾಷೆಯ ಸೊಗಸು, ಆಡುನುಡಿಯ ಸರಳತೆ ಪಂಜೆಮಂಗೇಶರಾಯರ ಮಕ್ಕಳ ಸಾಹಿತ್ಯದ ಸಾರ್ಥಕತೆಗೆ ಪೂರಕವಾದ ಸಂಕೇತದಂತಿದೆ. ಎಳೆಯ ಮಕ್ಕಳ ಬಗೆಗಿರುವ ಪ್ರೀತಿ, ಆಸಕ್ತಿಯ ಪರಿಣಾಮದಿಂದ ಅವರ ಎಲ್ಲ ಕಾರ್ಯಗಳು ಯಶಸ್ವಿಯಾಗಲು ಸಾಧ್ಯವಾಗಿವೆ.

ಪಂಜೆಯವರ ಮಕ್ಕಳ ಕೃತಿಗಳಲ್ಲಿ ಕನ್ನಡದ ಬಗ್ಗೆ ಅಪಾರ ಕಾಳಜಿ, ಪ್ರೇಮ, ಪ್ರಾಮಾಣಿಕತೆ, ಸತ್ಯ, ನಿಷ್ಠೆ, ನ್ಯಾಯಗಳಿಗೆ ಪ್ರಾಮುಖ್ಯತೆ ನೀಡಿರುವುದು ಕಂಡುಬರುತ್ತದೆ. ಅವರ ಬದುಕಿನಲ್ಲಿಯೂ ರಸಿಕತನದ, ಧಾರಾಳತನದ, ನಿಖರವಾದ ವಿಚಾರಧಾರೆಗಳು ಪ್ರಮುಖ ಅಂಶಗಳಾಗಿ ಅಭಿವ್ಯಕ್ತಗೊಂಡಿವೆ.

ಪಂಜೆಮಂಗೇಶರಾಯರ ಮಕ್ಕಳ ಸಾಹಿತ್ಯದಲ್ಲಿ ಸುಕುಮಾರತೆ, ರಮ್ಯತೆ, ಕೋಮಲ ಭಾವ ಪ್ರಪಂಚ, ಕಲ್ಪನಾ ಜಗತ್ತು ತುಂಬಿಕೊಂಡಿದೆ. ಹಾಸ್ಯದ ಮನೋಭಾವ, ಬದುಕಿನ ಗಂಭೀರ ಸಂಗತಿಗಳು ಹೆಚ್ಚು. ಒಳ್ಳೆಯ ಬದುಕು, ಸಮೃದ್ಧವಾದ ಭವಿಷ್ಯ, ಸಾತ್ವಿಕತೆ ಇವುಗಳೆಲ್ಲ ಬಾಲ್ಯದಲ್ಲಿ ಮಕ್ಕಳಿಗೆ ಕಟ್ಟಿಕೊಡುವ ಹಂಬಲವಿರುವುದು ಕಾಣುತ್ತೇವೆ.

ನವೋದಯ ಪೂರ್ವದ ಕನ್ನಡ ಭಾಷೆಯ ಬಳಕೆ ಬಿಗಿತದಿಂದ ಸರಳತೆಯೆಡೆಗೆ ಸಾಗುವ ಆಡುಭಾಷೆಯ ತುಡಿತ ಹೆಚ್ಚಾಗಿ ಅಭಿವ್ಯಕ್ತವಾಗಿದೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿದವರು ಮಕ್ಕಳ ನಡುವೆಯೇ ತಮ್ಮ ಪ್ರಯೋಗಗಳನ್ನು ನಡೆಸಿರುವುದರಿಂದ ಪಂಜೆಯವರಿಗೆ ಸರಳತೆ ಬಲು ಅಗತ್ಯವಾಗಿ ಕಂಡಂತಿದೆ. ಮಕ್ಕಳಿಗಾಗಿ ಅವರ ವಯೋಮಾನಕ್ಕೆ ತಕ್ಕಂತೆ ಗ್ರಹಿಕೆ ಇರುವುದನ್ನು ಭಾಷೆಯಲ್ಲಿ ಕಾಣುತ್ತೇವೆ.

ದಿನಕರ ದೇಸಾಯಿ :

ದಿನಕರ ದೇಸಾಯಿಯವರು ದಣಿವರಿಯದ ಭಾವ ಜೀವಿ. ಸಾಮಾಜಿಕ ಸಮಸ್ಯೆಗಳ ಬಗ್ಗೆ ಸದಾ ಜಾಗೃತರಾಗಿದ್ದವರು. ಮಕ್ಕಳ ಮುಗ್ಧ ಪ್ರಪಂಚಕ್ಕೆ ತೀವ್ರವಾಗಿ ಸ್ಪಂದಿಸಿದ್ದರಿಂದ ಮಕ್ಕಳ ಗೀತೆಗಳು, ಮಕ್ಕಳ ಪದ್ಯಗಳು ಸಂಕಲನಗಳನ್ನು ರಚಿಸಲು ಸಾಧ್ಯವಾಗಿದೆ. ಪ್ರಾಸದಿಂದ ಕೂಡಿರುವ, ಮಕ್ಕಳ ಬಾಯಲ್ಲಿ ನಲಿಯುವ, ಅವರ ಮನೋಧರ್ಮಕ್ಕೆ ನಿಲುಕುವ ಮಧುರವಾದ ಕನವಗಳು ಅಭಿವ್ಯಕ್ತಗೊಂಡಿವೆ.

'ನನ್ನ ದೇಹದ ಬೂದಿ', 'ದೀನಗಿಂತ ದೇವ ಬಡವ' ಕವಿತೆಗಳು ಬಡವರ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. 'ಕೆಂಪು ಬಾವುಟ', 'ನಾಡವರೆ ನಿಜ ನಾಡಿಗರು' ಕವಿತೆಗಳಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುತ್ತವೆ. ದಿನಕರರು ತುಂಬಾ ಭಾವುಕರು, ಸತತ ಸೇವಾ ಮನೋಭಾವದವರು. ಇವರ ಮಕ್ಕಳ ಕೃತಿಗಳಲ್ಲಿ ನಾಡು ನುಡಿಯ ಅಭಿಮಾನ, ಭಕ್ತಿ ಮತ್ತು ಸಾಮಾಜಿಕ ಕಳಕಳಿ ವ್ಯಕ್ತಗೊಂಡಿವೆ. ದೇಸಾಯಿಯವರು ಆಡಂಬರ, ಡಾಂಬಿಕತೆ, ವಿರೋಧಿಗಳೆನಿಸುವ ರೀತಿಯಲ್ಲಿ ಕಾಣಬಹುದಾಗಿದೆ. ವಿಷಯಗಳನ್ನು ಸಹಜವಾಗಿ, ಸರಳವಾಗಿ, ಪ್ರಾಸಬದ್ಧವಾಗಿ ಮಂಡಿಸುವುದು ದಿನಕರ ದೇಸಾಯಿಯವರ ಶೈಲಿಯಾಗಿದೆ. ಪ್ರಕೃತಿ ವರ್ಣನೆ ದಿನಕರರಲ್ಲಿ ಬಲು ವಿರಳ. ಕನ್ನಡಮ್ಮನ ಕುರಿತ ಕವಿತೆಗಳನ್ನು ಹಲವು ಬಗೆಯಲ್ಲಿ ವ್ಯಕ್ತಗೊಳಿಸಿದ್ದಾರೆ.

ಪ್ರಾದೇಶಿಕತೆಯ ಸೊಗಡನ್ನು ಬಳಸಲು ಕವನಗಳಲ್ಲಿ ಹೆಚ್ಚು ಅವಕಾಶವಿರುವುದು ಸಹಜವಾಗಿದೆ. ಅಂಥ ಸಂದರ್ಭಗಳಲ್ಲಿ ಕವಿ ಹಳ್ಳಿಯ ನುಡಿ ಸಾಲುಗಳನ್ನು ಬಳಸುತ್ತಾರೆ. ಕಲ್ಪನೆಗಳಿಂದ ಕೂಡಿದ ಶಿಶು ಗೀತೆಗಳು ಮಕ್ಕಳನ್ನು ಬಲು ಬೇಗನೆ ಆಕರ್ಷಿಸಿವೆ. ಪ್ರಾದೇಶಿಕ ಭಾಷೆಯ ಸೊಗಸಾದ ನುಡಿಗಟ್ಟುಗಳು, ಗಾದೆ ಮಾತುಗಳ ಬಳಕೆಯಿಂದ ಮಕ್ಕಳ ಕವನಗಳು ಸೌಂದರ್ಯವನ್ನು ಪಡೆದುಕೊಂಡಿವೆ.

ಭವಿಷ್ಯದ ಪ್ರಜೆಗಳಾದ ಮಕ್ಕಳ ಶ್ರೇಯಸ್ಸಿಗಾಗಿ ದುಡಿದವರು ದಿನಕರರು. 'ಬೆಳೆಯ ಸಿರಿ ಮೊಳಕೆಯಲ್ಲಿ ನೋಡು' ಎಂಬ ಗಾದೆ ಮಾತಿನಂತೆ ಮಕ್ಕಳ ಮನಸ್ಸು ಸಜ್ಜನಿಕೆಯಿಂದ, ಸಮೃದ್ಧಿಯಿಂದ ಕೂಡಿರಲು ಬಾಲ್ಯದಲ್ಲಿ ಒಳ್ಳೆಯ ಸಂಸ್ಕಾರ ಅಗತ್ಯ. ಈ ಸಂಸ್ಕಾರವನ್ನು ಒದಗಿಸುವುದು ಮಕ್ಕಳ ಸಾಹಿತ್ಯ. ಇಂಥಹ ಆಶಯ ದಿನಕರ ದೇಸಾಯಿಯವರ ಮಕ್ಕಳ ಕೃತಿಗಳಲ್ಲಿ ಮೂಡಿವೆ.

ಸ್ವಂತ ನೆಲದ ಮೇಲೆ ಅಭಿಮಾನ ಬೆಳೆಸಿಕೊಳ್ಳಲು, ಗುರು-ಹಿರಿಯರನ್ನು ಗೌರವದಿಂದ ನೋಡಲು, ಆದರ್ಶ ವ್ಯಕ್ತಿಗಳ ವ್ಯಕ್ತಿತ್ವ ಅನುಸರಿಸಿಕೊಳ್ಳಲು ಕವಿತೆಗಳು ಮಕ್ಕಳಿಗೆ ಮಾರ್ಗದರ್ಶಿಯಾಗಿವೆ. ದಿನಕರರ ಮಕ್ಕಳ ಕವಿತೆಗಳು ಭಾರವೆನಿಸದೆ, ಉಪದೇಶ ನೀಡದೆ ಅತ್ಯಂತ ಸರಳವಾಗಿ ಪರಿಣಾಮಕಾರಿಯಾಗಿ ಅವರನ್ನು ತಟ್ಟುತ್ತವೆ.

ದಿನಕರ ದೇಸಾಯಿಯವರ ಮಕ್ಕಳ ಕೃತಿಗಳಲ್ಲಿ ಸಾಮಾಜಿಕ ಮತ್ತು ವಾಸ್ತವಿಕ ವೈವಿಧ್ಯತೆಯನ್ನು ಮಕ್ಕಳ ನಡುವೆ ನಿಂತು ನೋಡುವ, ಮಕ್ಕಳು ಸಂತಸದಿಂದ ನಕ್ಕು ನಲಿಯುವ ಮತ್ತು ಉಲ್ಲಾಸದಿಂದ ಮೈಮರೆಯುವಂತೆ ಮಾಡುತ್ತವೆ.

ದಿನಕರರು ಮಕ್ಕಳಿಗಾಗಿ ಬರೆದ ರಚನೆಗಳಲ್ಲಿ ಹಾಸ್ಯ ಸಹಜವಾಗಿ ಹಬ್ಬಿಕೊಂಡಿದೆ.

ಸಾಮಾಜಿಕ ಪ್ರಜ್ಞೆ ಮಕ್ಕಳ ಸಾಹಿತ್ಯದ ಸರಕಾಗಿ ಕೆಲಸ ಮಾಡಿದೆ. ಅವರ ಮಕ್ಕಳ ಪದ್ಯಗಳಲ್ಲಿ ತಿಪ್ಪಾಭಟ್ಟರನ್ನು ವಸ್ತುವನ್ನಾಗಿಟ್ಟುಕೊಂಡು ಹಲವು ಹಾಸ್ಯ ಪ್ರಸಂಗಗಳನ್ನು ಬಿಚ್ಚಿಟ್ಟಿದ್ದಾರೆ.

'ತಿಪ್ಪಾಭಟ್ಟರು ನೇಗಿಲ ಹಿಡಿದರು
ಗದ್ದೆಯ ಹೂಡಲಿಕೆ
ಊರಿನ ರೈತರು ಸೇರಿದರೆಲ್ಲರು
ಸೋಜಿಗ ನೋಡಲಿಕೆ
ಕಟ್ಟಿದ ಎತ್ತುಗಳೆರಡೂ ಹೆದರಲು
ವೇಗದೊಳೋಡಿದವು
ತಿಪ್ಪಾಭಟ್ಟರ ಧೋತ್ರವು ಹರಿಯಲು
ಮತ್ತೂ ಓಡಿದವು,
ನೇಗಿಲು ಮುಂದಕೆ, ಭಟ್ಟರು ಹಿಂದಕೆ
ಬಲು ಪೇಚಾಡಿದರು,
ಗೊಬ್ಬರ ಕುಣಿಯಲಿ ಭಟ್ಟರು ಬೀಳಲು
ರೈತರು ಹಾಡಿದರು,
ತೊಗರಿಯ ಸಾರದು ಭಟ್ಟರಿಗೆ
ನೇಗಿಲ ಭಾರವೆ ದಿಟ್ಟರಿಗೆ'.

ಮೇಲಿನ ಪದ್ಯದಲ್ಲಿ ದಿನಕರ ದೇಸಾಯಿಯವರು ಒಬ್ಬ ಸಮಾಜವಾದಿ ಕವಿಯಾಗಿ, ಹೋರಾಟದ ಒಡಲಿನಿಂದ ಬೆಳೆದು ಬಂದವರೆಂಬುದು ವ್ಯಕ್ತವಾಗುತ್ತದೆ.

ದಿನಕರರ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ತಾವು ಅಭಿವ್ಯಕ್ತಗೊಳಿಸಿದ ವಸ್ತು–ವಿಷಯದ ಕುರಿತಾದ ಉದ್ದೇಶ ಮತ್ತು ಪರಿಣಾಮಗಳನ್ನು ಗುರುತಿಸಿದ್ದಾರೆ. ತಿಳಿಯ ಹೇಳುವ, ಮನವರಿಕೆ ಮಾಡಿಕೊಡುವ, ಸರಳ ಹಾಗೂ ನೇರವಾಗಿ ಹೇಳುವ ಗುಣಗಳನ್ನು ಅವರ ಕವಿತೆಗಳಲ್ಲಿ ಕಾಣಬಹುದು. ಸುತ್ತುಬಳಸು ಇಲ್ಲದೆ, ಸಹಜತೆಯ ಮನೋಭಾವ ಮಕ್ಕಳ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಕುವೆಂಪು :

ನವೋದಯದ ಹಿರಿಯ ಬರಹಗಾರರು ಮಕ್ಕಳ ಪ್ರಪಂಚವನ್ನು ಹಲವು ಬಗೆಯಿಂದ ಶ್ರೀಮಂತಗೊಳಿಸಿರುವುದನ್ನು ಕಾಣುತ್ತೇವೆ. ಪ್ರತಿಯೊಬ್ಬರೂ ಒಂದೊಂದು ಬಗೆಯಿಂದ ವಿಶಿಷ್ಟವಾಗಿ ಗಮನ ಸೆಳೆಯುತ್ತಾರೆ. ಎಲ್ಲರ ಕೃತಿಗಳು ಅವರವರದೇ ಆದ ಮನೋಭಾವದಿಂದ ಅಭಿವ್ಯಕ್ತಗೊಂಡಿರುವುದು ಕಂಡುಬರುತ್ತದೆ. ಕುವೆಂಪು ಅವರ ಮಕ್ಕಳ ಸಾಹಿತ್ಯವೂ ಇದರಿಂದ ಹೊರತಾಗಿಲ್ಲವೆಂದು ಹೇಳಬಹುದು.

ಕಳೆದುಹೋದ ಬಾಲ್ಯದ ಕುರಿತು, ತಮಗೆ ಅತೀ ಸಂತಸ ತರುವ ಸುಮಧುರ ಸಂಗತಿಗಳನ್ನು ಪ್ರಕೃತಿಯಲ್ಲಿ ಕಂಡುಕೊಂಡು ಅಭಿವ್ಯಕ್ತಗೊಳಿಸಿದ್ದಾರೆ. ಬಾಲ್ಯ ಒಂದು ಅಪರೂಪದ ಕ್ಷಣ. ಅದು ಮತ್ತೆಂದು ಸಿಗಲಾರದ ಸಂಗತಿ. ಬಾಲ್ಯವನ್ನು ದೈವತ್ವಕ್ಕೆ ಎಳಸುವ ಬಗೆ ಕುವೆಂಪುರವರ ಮಕ್ಕಳ ಸಾಹಿತ್ಯದಲ್ಲಿ ಕಾಣುತ್ತೇವೆ.

ಬಾಲ್ಯವು ಬದುಕನ್ನು ಕಟ್ಟಿಕೊಡುವ ಒಂದು ಹಂತ. ಅಲ್ಲಿ ಜೀವನದ ಪೂರ್ಣತೆಯನ್ನು ಸಾಕಾರಗೊಳಿಸುವ ದೃಷ್ಟಿಕೋನ ಅವರ ಮಕ್ಕಳ ಕೃತಿಗಳಲ್ಲಿ ಗೋಚರಿಸುತ್ತವೆ. ತಾಯಿ ಮತ್ತು ಮಗು ಇವರಿಬ್ಬರ ನಡುವಿನ ಸಂಬಂಧದ ಗಾಢತೆ, ಒಂದು ರೀತಿಯ ನಿಗೂಢಭಾವ ಅಭಿವ್ಯಕ್ತಗೊಂಡಿದೆ. ಕುವೆಂಪು ಅವರ ಬಹುಪಾಲು ಮಕ್ಕಳ ಸಾಹಿತ್ಯ ಕೃತಿಗಳು ಈ ಹಿನ್ನೆಲೆಯಲ್ಲಿ ರೂಪತಾಳಿವೆ. ಮಕ್ಕಳ ಮನೋಭೂಮಿಕೆಯಲ್ಲಿ ನಿಂತು ವ್ಯಕ್ತಗೊಳಿಸಿರುವುದರಿಂದ ಆಡುಮಾತಿನ, ಸರಳ ಭಾಷೆಯ ಅಭಿವ್ಯಕ್ತಿಯನ್ನು ಹೆಚ್ಚಾಗಿ ಕಾಣುತ್ತೇವೆ.

'ಅರ್ಧಚಂದ್ರ' ಕವಿತೆಯಲ್ಲಿ ಚಂದಿರನನ್ನು ದೇವರ ಪೆಪ್ಪರಮೆಂಟು ಎಂದು ಕರೆದಿರುವುದು ಔಚಿತ್ಯಪೂರ್ಣವಾದುದು. ಇಲ್ಲಿ ಮಗು ತಾಯಿಯ ಬಗೆಗೆ ತಾಳಿರುವ ಅದ್ಭುತ ಕಲ್ಪನಾಲೋಕವನ್ನು ತೆರೆದಿಡುತ್ತದೆ. ಪೆಪ್ಪರಮೆಂಟು ಮಕ್ಕಳ ಬಾಯಿ ಚಪಲದ ಬಲು ಪ್ರೀತಿಯ ವಸ್ತು. ಅದು ಬಾಯಿ ಚಪ್ಪರಿಸುವ ಸಿಹಿ ತಿಂಡಿಯ ಪ್ರತಿನಿಧಿಯಾಗಿ ಬಾಲ್ಯವನ್ನು ಮರುಕಳಿಸುತ್ತದೆ. ಅದನ್ನು ದೇವರ ಪೆಪ್ಪರಮೆಂಟು ಎಂದಿರುವುದು ಕುವೆಂಪುರವರ ಕಲ್ಪನಾಲೋಕವನ್ನು ಅನಾವರಣಗೊಳಿಸುತ್ತದೆ. 'ಎಷ್ಟೆ ತಿಂದರು ಖರ್ಚೇ ಆಗದ ಬೆಳೆಯುವ ದಿವ್ಯಗುಣ ಅದಕ್ಕಿದೆ' ಇಂಥ ಸುಂದರವಾದ ಕರಗದಂತಹ ಪೆಪ್ಪರಮೆಂಟನ್ನು ಪಡೆಯಲು ದೇವರ ಬಾಲಕನಾಗಲು ತಾಯಿ ಮಗುವಿಗೆ ಹೇಳುತ್ತಾಳೆ. 'ದೇವರ ಬಾಲಕನಾಗಲು ಒಲ್ಲೆ; ಆತನ ಮೀರಿಹೆ ನೀನಮ್ಮ' ಎನ್ನುವ ಮಗುವಿನ ಭಾವ ವಿಸ್ಮಯಕಾರಿ.

'ಮೇಘಪುರ' ಕವಿತೆಯು ಆಗಸದ ವಿಭಿನ್ನವಾದ ಚಿತ್ರಣಗಳನ್ನು ತೆರೆದಿಡುತ್ತದೆ. ಮಳೆಯ ಸಂಭ್ರಮ, ಅಲ್ಲಿ ಆಟ ಆಡುವ ಆಶೆ, ತಾಯಿ ಇದಕ್ಕೆ ಅಡ್ಡಿಪಡಿಸುವ ಸನ್ನಿವೇಶ. ಮಳೆ ದೇವಲೋಕದ ಮಕ್ಕಳು ಎಂದು ಕರೆದುದು ಒಂದು ಅದ್ಭುತ ಕಲ್ಪನೆ. ಅಡೆತಡೆಯಿಲ್ಲದೆ ಸುರಿಯುವ ದೇವಲೋಕದ ಮಕ್ಕಳ (ಮಳೆ) ರೀತಿಯಲ್ಲಿ ತನ್ನನ್ನು ನಿರ್ಭಂಧಿಸದೇ ಬಿಡು ಎನ್ನುವ ಆಶಯ ಮಗುವಿನದು. ಸ್ವಾತಂತ್ರ್ಯವಿಲ್ಲದೆ ಮಗು ಕೊರಗುವ ಭಾವ ತೋರುತ್ತದೆ. ಮಳೆ ಎಂಬ ಮಕ್ಕಳೊಡನೆ ಬೆರೆತು ಆಡಲು ಮಗ ಹವಣಿಸುತ್ತದೆ. 'ಅವರ ದನಿ ಇಂಪು, ಮೈ ಬಲು ತಂಪು, ಅವರ ಒಡನಾಟ ಸೊಂಪು' ಎಂದು ಹೇಳುತ್ತ 'ಮೇಘಪುರವದು ನಮ್ಮ ಊರಮ್ಮಾ; ಆಗಸದ ಮಕ್ಕಳಾನಂದ ಹೃದಯರಮ್ಮಾ',

'ಏನಗೇಕೆ ಇಹದ ಸೆರೆ?', 'ಲೋಕವಿದು ಸಾಕು, ಆ ನಾಕ ಬೇಕು' ಎಂಬ ಮಕ್ಕಳ ಆಶಯದ ಅಭಿವ್ಯಕ್ತಿ ತೆರೆದಿಡುತ್ತದೆ.

'ನನ್ನ ಮನೆ' ಕವನ ಬಾಲ್ಯದ ನೆನಪಿನ ಬುತ್ತಿ ಬಿಚ್ಚಿಡುವ ವಾತ್ಸಲ್ಯದ ತಾಣ, ಬಾಲಭಾವದ ಅಭಿವ್ಯಕ್ತಿಯಾಗಿದೆ.

'ತನ್ನ ತಾಯಿಯೊಲಿದ ಮನೆ
ನನ್ನ ತಂದೆ ಬೆಳೆದ ಮನೆ
ನನ್ನ ಗೆಳೆಯರೊಡನೆ ಕೂಡಿ
ಮುದ್ದು ಮಾತುಗಳನು ಆಡಿ
ಮಕ್ಕಳಾಟಗಳನು ಹೂಡಿ
ನಾನು ನಲಿದ ನನ್ನ ಮನೆ'.

ಎಂಬ ನೆನಪುಗಳ ಸಾಲುಗಳು ಮಗುವಿನ ಮನದಲ್ಲಿ ನೆಲೆಗೊಳ್ಳುತ್ತವೆ. ಬದುಕನ್ನು ಕಟ್ಟಿಕೊಟ್ಟ ಮನೆ ರಮಣೀಯತೆಯಿಂದ ಬದುಕಿನ ಭವ್ಯತೆಯನ್ನು ಅನಾವರಣಗೊಳಿಸುತ್ತದೆ. ಇದು ಕುವೆಂಪುರವರ ಮಕ್ಕಳ ಸಾಹಿತ್ಯದ ಗುಣಧರ್ಮವೆಂದರೆ ತಪ್ಪಾಗದು.

'ಕಾಮನ ಬಿಲ್ಲನ್ನು' ಕವಿ ನೋಡುವ ದೃಷ್ಟಿಕೋನದ ಕಲ್ಪನೆ ವಿಸ್ಮಯಕಾರಿ. ಈ ಭೂಮಿಯು ಆಗಸದ ಮೋಡವೆಂಬ ನಾಡಿನ ಜೊತೆಗೆ ಸಂಬಂಧ ಬೆಸೆಯುವ ಸೇತುವೆಯಾಗಿ ಕಾಣುತ್ತದೆ.

'ಪೊದೆಯ ಹಕ್ಕಿ ಎದೆಯ ಹಕ್ಕಿ' ಕವಿತೆಯಲ್ಲಿ ಕವಿ ಕುವೆಂಪುರವರು ಪೊದೆಯಲ್ಲಿನ ಹಕ್ಕಿ ಕೂಗಿದಾಗ ಎದೆಯೊಳಗಿನ ಹಕ್ಕಿ ಮರುದನಿ ಮಾಡುತ್ತದೆ. ಎದೆಯ ಹಕ್ಕಿಯ ದನಿಯನ್ನು ಕೇಳಿ ಪೊದೆಯ ಹಕ್ಕಿ ಮೋಹಗೊಂಡು ಮತ್ತೆ ದನಿ ಮಾಡುತ್ತ ಸ್ಪಂದಿಸುವುದು. ಅದಕ್ಕಾಗಿ ಕುವೆಂಪು ಅವರು ಹೀಗೆ ಹೇಳುತ್ತಾರೆ.

'ಎದೆಯ ಹಕ್ಕಿಗಾಗಿ ಪೊದೆಯ
ಹಕ್ಕಿಯನ್ನು ಒಲಿದೆನು'.

'ಪ್ರಕೃತಿ ಆರಾಧನೆ ಪರಮನ ಆರಾಧನೆ' ಎನ್ನುವಂತೆ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ತುಂಬಿ ತುಳುಕುವಂತೆ ಮಾಡಿದ್ದಾರೆ ಕುವೆಂಪುರವರು.

'ಕಿಂದರಿ ಜೋಗಿ' ದೀರ್ಘವಾದ ಸುಂದರ ಕವಿತೆ. ಮೂಲ ಇಂಗ್ಲೀಷಿನದಾದರೂ ಕುವೆಂಪು ಅವರು ತಮಗೆ ಬೇಕಾದಂತೆ ನಮ್ಮ ಪರಿಸರದ ಸಾಮಾಜಿಕ ನೆಲೆಯಲ್ಲಿ ಸಂಭವಿಸಿದಂತೆ ಕಟ್ಟಿಕೊಟ್ಟಿದ್ದಾರೆ. ಮಕ್ಕಳು ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು, ಸತ್ಯ, ನಿಷ್ಠೆಗಳನ್ನು ಅಳವಡಿಸಿಕೊಳ್ಳುವ ಗುರಿ ಇಲ್ಲಿ ಮುಖ್ಯವಾಗಿದೆ. ಅದಕ್ಕೆ ಕುವೆಂಪುರವರು

ಕಥನ ಕವನದ ಕೊನೆಯಲ್ಲಿ, 'ಭಾಷೆಯ ಕೊಟ್ಟರೆ ನಾವು ಮೋಸವ ಮಾಡದೆ ಸಲ್ಲಿಸಬೇಕು'.... ಸತ್ಯವನೆಂದೂ ತ್ಯಜಿಸದೆ ಬಾಳುವ ನೀತಿಯನ್ನು ಅಭಿವ್ಯಕ್ತಗೊಳಿಸುತ್ತಾರೆ.

'ಕಿಂದರಿ ಜೋಗಿ'ಯ ರೂಪ ಮಕ್ಕಳಿಗೆ ಮನಮೋಹಕವಾದರೂ ಹಿರಿಯರಿಗೆ ಭಯಾನಕವಾಗಿ ಕಾಣುತ್ತದೆ. ಶಿವನೇ ಕಳಿಸಿದ ಪ್ರತಿನಿಧಿ ಜೋಗಿ. ಕುದುರೆಯ ಗೊರಸಿನ ಅಡಿಗಳು, ಕಡವೆಯ ಕೊಂಬು ಹೊಂದಿದ ತಲೆ, ಆನೆಯ ಕಿವಿಯಂತಹ ಕಿವಿಗಳು, ಕೋರೆ ದಾಡಿಯು ಹಂದಿಯಂತೆ ಮೊದಲಾದ ಆಕಾರದ ಹಾವ-ಭಾವ ಹೊಂದಿರುವುದು ಒಂದು ವಿಶೇಷ ಕಲ್ಪನೆ. ಜೋಗಿಯ ಕಿಂದರಿ ನಾದದ ಪ್ರಭಾವವಾದುದು ಇಲಿಗಳು ಮತ್ತು ಮಕ್ಕಳ ಮೇಲೆ. ಇಲಿಗಳು ತೊಂದರೆ ಕೊಟ್ಟಿರುವ ಕಾರಣದಿಂದ ಅವುಗಳಿಗೆ ಶಿಕ್ಷೆಯಾದರೆ, ಮಕ್ಕಳಿಗೆ ಯಾಕೆ ಇಂಥ ಶಿಕ್ಷೆ ಎಂಬ ಪ್ರಶ್ನೆ ಮೂಡುವುದು ಸಹಜವಾಗಿದೆ.

'ಬೊಮ್ಮನಹಳ್ಳಿ ಕಿಂದರಿ ಜೋಗಿ' ಮಕ್ಕಳ ಸಾಹಿತ್ಯದಲ್ಲಿ ಹೊಸ ಸಂಚಲನೆಯನ್ನು ಮೂಡಿಸಿದೆ. ಬ್ರೌನಿಂಗ ಕವಿಯ ಅನುವಾದ ಕೃತಿಯಾದರೂ ಮಕ್ಕಳಲ್ಲಿ ಕುತೂಹಲ ಮೂಡಿಸುತ್ತದೆ. ಪ್ರಾಣಿ ರೂಪಕದ ಮೂಲಕವಾಗಿ ಮನುಷ್ಯನ ನಡುವಳಿಕೆಗಳಲ್ಲಿ ಬದಲಾವಣೆಗಳನ್ನು ತರುವ ತಾತ್ವಿಕ ನೆಲೆಯಲ್ಲಿ ಅಭಿವ್ಯಕ್ತಗೊಂಡಿದೆ.

ಮಕ್ಕಳು ಬೆಟ್ಟದಲ್ಲಿ ಮರೆಯಾದುದು ತಮಗೆ ಸ್ವಚ್ಛಂದವಾಗಿ ಬೇಕಾದುದನೆಲ್ಲ ಪಡೆಯುವ ಸಲುವಾಗಿ, ಬಹುಶಃ ಮಕ್ಕಳಿಗೆ ಬೇಕಾದುದೆಲ್ಲ ಈ ಜನಗಳ ನಡುವೆ ಸಿಗುವುದಿಲ್ಲ ಎಂಬ ಕಲ್ಪನೆ ಕುವೆಂಪು ಅವರದು. ಮಕ್ಕಳ ಬಾಲ್ಯ ದೈವೀಮಯವಾದುದು ಎನ್ನಲು ಇದುವೆ ಕಾರಣವಿರಬಹುದು.

ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವುದು ಊರಿನ ಗೌಡನ ಜವಾಬ್ದಾರಿ. ತನ್ನ ದುರಾಸೆಗಳಿಂದ ವ್ಯಕ್ತಿತ್ವವನ್ನು ಹಾಳು ಮಾಡಿಕೊಳ್ಳುತ್ತಾನೆ. ಇಲಿಗಳ ಕಾಟದಿಂದ ಬೇಸತ್ತ ಜನರು ಗೌಡನ ಮೇಲೆ ಕೋಪಗೊಳ್ಳುವುದು, ಬೈಯುವುದು ಮುಗಿದರೂ, ಮಕ್ಕಳನ್ನು ಕಳೆದುಕೊಂಡ ಮೇಲೆ ದುಃಖದಲ್ಲಿ ಮುಳುಗಿದರೂ ಗೌಡನ ಮೇಲೆ ಸೇಡು ತೀರಿಸಿಕೊಳ್ಳದಿರುವುದು ಒಂದು ವಿಪರ್ಯಾಸ. ಜೋಗಿಯು ಗೌಡನಿಗೆ ವೈಯಕ್ತಿಕ ಶಿಕ್ಷೆ ನೀಡಬಹುದಿತ್ತು. ಮಕ್ಕಳನ್ನು ಕಳೆದುಕೊಂಡವರಿಗೆ ಮತ್ತಷ್ಟು ದುಃಖದಲ್ಲಿ ಮುಳುಗಿಸಿದ ಸನ್ನಿವೇಶ ಕವಿತೆಯಲ್ಲಿ ಮಸುಕಾಗಿದೆ.

ಕುವೆಂಪು ಅವರ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಅವರ ಇಡೀ ವ್ಯಕ್ತಿತ್ವದ ವೈಚಾರಿಕ ನಿಲುವಿನ ಹೆಜ್ಜೆಗಳು ಬರವಣಿಗೆಯಲ್ಲಿ ರೂಪುಗೊಂಡಿರುವುದನ್ನು ನೋಡುತ್ತೇವೆ. ದೇವರು, ಸತ್ಯ, ಮಾನವೀಯ ಹಂಬಲ, ಸಾತ್ವಿಕ ಜೀವನ, ರಾಷ್ಟ್ರೀಯ ಭಾವನೆಗಳು, ಪ್ರಕೃತಿ ಸೌಂದರ್ಯದ ಆರಾಧನೆ ಮೊದಲಾದವುಗಳು ಹೆಚ್ಚು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ.

ಪಳಕಳ ಸೀತಾರಾಮಭಟ್ಟ :

ಪಳಕಳ ಸೀತಾರಾಮ ಭಟ್ಟರ ಮಕ್ಕಳ ಕೃತಿಗಳು ಮಕ್ಕಳಿಗೆ ಆಳವಾದ ಪರಿಸರದ ಅನುಭವವನ್ನು ನೀಡುತ್ತವೆ. ಮಕ್ಕಳಲ್ಲಿ ನೀತಿಯನ್ನು ಮೂಡಿಸುವುದು ಮುಖ್ಯ ಉದ್ದೇಶವಾದರೂ ನೈತಿಕ ಪ್ರಜ್ಞೆ ನೇರವಾಗಿ ಅಭಿವ್ಯಕ್ತಗೊಳ್ಳುವುದಿಲ್ಲ. ಮಕ್ಕಳಿಗೆ ಸಂಸ್ಕಾರದೊಂದಿಗೆ ಸಂತಸ ಮೂಡಿಸುತ್ತವೆ.

ಮಕ್ಕಳು ಮಾನವೀಯ ಮೌಲ್ಯಗಳನ್ನು ಅರಿತುಕೊಳ್ಳಲು ಪೂರಕವಾಗಿವೆ. ಪಳಕಳರ ಕೃತಿಗಳಲ್ಲಿ ಮುಖ್ಯವಾಗಿ ಆದರ್ಶ ವ್ಯಕ್ತಿಗಳನ್ನು ಅನಾವರಣಗೊಳಿಸುತ್ತ, ಮಕ್ಕಳಿಗೆ ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕವಾಗುತ್ತವೆ. ಇದರಿಂದ ಮಕ್ಕಳಿಗೆ ಆದರ್ಶ ವ್ಯಕ್ತಿಗಳ ಮೇಲೆ ಗೌರವಭಾವ ಮೂಡಲು ಸಾಧ್ಯವಾಗುತ್ತದೆ.

ಪಳಕಳರ ಮಕ್ಕಳ ಕೃತಿಗಳು ಮಕ್ಕಳ ಕಲ್ಪನಾಲೋಕವನ್ನು ತೆರೆದಿಡುವುದರೊಂದಿಗೆ ಪ್ರಚೋದನೆ ಮೂಡಿಸುತ್ತವೆ. ವೈಜ್ಞಾನಿಕ ವಿಚಾರಗಳನ್ನು ಮಕ್ಕಳಿಗೆ ತಿಳಿಯುವಂತಹ ಸುಲಭದ, ಸರಳವಾದ ಭಾಷೆಯಲ್ಲಿ ಮೂಡಿಸಿ ಮಕ್ಕಳ ಮನವನ್ನು ತಣಿಸಿವೆ. ಅನುಭವದ ಕಥೆಗಳು, ವೈಜ್ಞಾನಿಕ ಕಥೆಗಳು, ಜೀವನ ಚರಿತ್ರೆಗಳು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಪಳಕಳ ಸೀತಾರಾಮ ಭಟ್ಟರ ಮಕ್ಕಳ ಕೃತಿಗಳು ಮಕ್ಕಳಲ್ಲಿ ಸೃಜನಶೀಲ ಗುಣಗಳನ್ನು ಬೆಳೆಸುತ್ತವೆ. ವ್ಯವಹಾರಿಕ ದೃಷ್ಟಿಯಿಂದ ಕಲಾತ್ಮಕ ದೃಷ್ಟಿಯನ್ನು ಬೆಳೆಸಿ ಮಕ್ಕಳ ಭಾವ-ಬುದ್ಧಿಗೆ ಚೈತನ್ಯ ನೀಡಿ ಅರಳುವಂತೆ ಮಾಡುತ್ತವೆ. ಇದರಿಂದ ಮಗು ಹೊಸ ಲೋಕದ ಪ್ರವೇಶಕ್ಕೆ ಸಹಾಯಕವಾಗುತ್ತವೆ.

ಬಾಲ್ಯದ ನೆನಪುಗಳು, ಪ್ರಭಾವಗಳು, ಪ್ರಚೋದನೆಗಳು ಪಳಕಳರ ಬದುಕನ್ನು ರೂಪಿಸಿದಂತಿವೆ. ಜೀವನ ಮೌಲ್ಯಗಳನ್ನು ಕಥೆಗಳ ಮೂಲಕ ಮಕ್ಕಳಿಗೆ ಹೇಳಿದರೆ ಬಹುಬೇಗನೆ ಅರ್ಥವಾಗುತ್ತದೆ ಎಂಬುದು ಇವರು ಅನುಸರಿಸಿದ ತಂತ್ರವಾಗಿದೆ. ಕಲ್ಪನೆ, ಭಾಷೆಯ ಅಭಿವ್ಯಕ್ತಿ, ನಿರೂಪಣೆ, ಶೈಲಿ ಮೊದಲಾದ ಅಭಿವ್ಯಕ್ತಿಯಲ್ಲಿ ಹೊಸತನವಿದೆ. ಇಲ್ಲಿ ಸಹಜತೆಯೊಂದಿಗೆ ಸ್ವಂತಿಕೆಯನ್ನು ಮೆರೆದಿರುವುದು ಕಂಡುಬರುತ್ತದೆ. ಐತಿಹಾಸಿಕ, ಪೌರಾಣಿಕ, ಜಾನಪದ ಮತ್ತು ಸಾಮಾಜಿಕ ಕಥೆಗಳನ್ನು ಆಯ್ದುಕೊಂಡು ಎಲ್ಲ ಕಾಲಕ್ಕೂ ಅನ್ವಯವಾಗುವ ಮೌಲ್ಯಗಳನ್ನು ತಮ್ಮ ಅನುಭವದ ನೆಲೆಯಲ್ಲಿ ಸೃಜನಾತ್ಮಕವಾಗಿ ಹೇಗೆ ಪರಿಣಾಮ ಬೀರಿದ್ದಾರೆ, ಎಂಬ ದೃಷ್ಟಿಯಿಂದ ಪಳಕಳರು ಅನ್ಯ ಮಕ್ಕಳ ಸಾಹಿತಿಗಳಿಗಿಂತ ಭಿನ್ನವಾಗಿ ಕಂಡುಬರುತ್ತಾರೆ.

ಪಳಕಳ ಸೀತಾರಾಮಭಟ್ಟರ ಮಕ್ಕಳ ಸಾಹಿತ್ಯ ಕೃತಿಗಳ ಮುಖ್ಯ ಕೇಂದ್ರಬಿಂದು 'ಮಗುವಿನ ಮನಸ್ಸನ್ನು' ಕುರಿತಾಗಿದೆ. ಮಕ್ಕಳ ಮನಸ್ಸಿನಲ್ಲಿ ಏನು ನಡೆಯುತ್ತದೆ? ಅವರ ಸ್ವಭಾವಗಳು ಯಾವುವು? ಅವರ ಆಸಕ್ತಿಯ ಕೇಂದ್ರಗಳಾವುವು? ಅವರ ಭಾವನೆಗಳ ಉದ್ವೇಗಕ್ಕೆ ಕಾರಣಗಳೇನು? ಇವುಗಳ ಪರಿಹಾರದ ಬಗೆ ಹೇಗೆ? ಎಂಬ ಹಲವಾರು ವೈಜ್ಞಾನಿಕ ಸಂಗತಿಗಳನ್ನು ಅನಾವರಣಗೊಳಿಸುವ ಅಭಿವ್ಯಕ್ತಿ ಪಳಕಳರ ಮಕ್ಕಳ ಸಾಹಿತ್ಯದಲ್ಲಿ ಕಂಡುಬರುತ್ತವೆ.

ಪಳಕಳರು ಅನ್ವೇಷಣಾ ಮನೋಭಾವನೆಯುಳ್ಳವರು. ಇವರದು ಸತ್ಯದ ಹುಡುಕಾಟ, ಸೌಂದರ್ಯದ ಹುಟುಕಾಟ. ಹೀಗಾಗಿ ಹಳೆಯದಕ್ಕೆ ಜೋತುಬೀಳದೆ ಹೊಸತನವನ್ನು ಹುಡುಕುತ್ತ ನಿರ್ದಿಷ್ಟ ದಾರಿಯನ್ನು ಕಂಡು ಮುಂದಿನ ಪೀಳಿಗೆಯ ಏಳ್ಗೆಯನ್ನು ಮಕ್ಕಳ ಕೃತಿಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

ಇವರ ಕನ್ನಡ ಪರವಾದ ನೆಲೆಯಿಂದ ಕೂಡಿದ ನಾಡು-ನುಡಿಯ ಅಭಿಮಾನದ ಮಕ್ಕಳ ಕೃತಿಗಳು ಕರ್ನಾಟಕ ಏಕೀಕರಣ ಚಳುವಳಿಯ ಸಂದರ್ಭಕ್ಕೆ ಪೂರಕವಾಗಿ ರಚನೆಗೊಂಡಿವೆ ಎಂದರೆ ತಪ್ಪಾಗದು. ಪ್ರೌಢ ಸಾಹಿತ್ಯದ ಅಬ್ಬರದಲ್ಲಿ ಮಕ್ಕಳ ಸಾಹಿತ್ಯ ಕಡೆಗಣಿಸಲ್ಪಟ್ಟ ಸಮಯದಲ್ಲಿ ಪಳಕಳ ಸೀತಾರಾಮಭಟ್ಟರು ತಮ್ಮ ಕಾವ್ಯ ಶಕ್ತಿಯನ್ನು ಮಕ್ಕಳ ಸಾಹಿತ್ಯಕ್ಕೆ ನೀಡಿರುವುದು ಗಮನಿಸಿದರೆ, ಇವರು ಮಕ್ಕಳ ಸಾಹಿತ್ಯದ ಕುರಿತಾದ ಕಾಳಜಿಯನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಗೊಳಿಸಿದ್ದಾರೆ.

ಕಂಚ್ಯಾಣಿ ಶರಣಪ್ಪ :

ಬಯಲು ಸೀಮೆಯ ಬತ್ತದ ಸೆಲೆ, ಮಕ್ಕಳ ಸಾಹಿತ್ಯದ ಅಪ್ಪಟ ದೇಶಿಯ ಕಾಳು ಕಂಚ್ಯಾಣಿ ಶರಣಪ್ಪರವರು ಎಲ್ಲರಿಗೂ ಪರಿಚಿತ. 'ಕೂಸಿದ್ದ ಮನೆಗೆ ಬೀಸಣಿಕೆ ಯಾತಕ್ಕೆ' ಎಂದು ಜನಪದರು ಮನಮೋಹಕವಾಗಿ ಮಗುವಿನ ಬದುಕನ್ನು ಕುರಿತು ಕೊಂಡಾಡಿದ್ದಾರೆ. ಮಕ್ಕಳಿಂದ ಬದುಕು, ಮಕ್ಕಳಿಂದ ನೆರೆ-ಹೊರೆ, ಸಕಲ ಸಂಪತ್ತು. ಮಕ್ಕಳಿಲ್ಲದ ಮನೆ ಮಸಣದ ಹಾಗೆ ಎಂದರಿತ ಕಂಚ್ಯಾಣಿ ಶರಣಪ್ಪರವರ ಮಕ್ಕಳ ಕುರಿತಾದ ಅಭಿವ್ಯಕ್ತಿಯನ್ನು ತಮ್ಮ ಮಕ್ಕಳ ಕೃತಿಗಳಲ್ಲಿ ಮೂಡಿಸಿದ್ದಾರೆ.

ಮಕ್ಕಳು ನಾಡಿನ ಆಸ್ತಿ, ಭಾವೀ ಭಾರತದ ರೂವಾರಿಗಳು. ಅವರು ವಿನಯವಂತರು, ಸುಗುಣ ಸಂಪನ್ನರು, ಆಗಿರಬೇಕು. ಎಳವಯದಲ್ಲಿ ಅವರಿಗೆ ಉತ್ತಮ ಶಿಕ್ಷಣ ದೊರೆಯಬೇಕೆಂಬ ನೈತಿಕ ಮೌಲ್ಯಗಳು ಕಂಚ್ಯಾಣಿ ಶರಣಪ್ಪರವರ ಮಕ್ಕಳ ಕೃತಿಗಳಲ್ಲಿ ಕಂಡುಬರುತ್ತವೆ.

ಇಂದು ಮಕ್ಕಳು ಪಡೆಯುವ ಶಿಕ್ಷಣ ಕೇವಲ ಅಕ್ಷರ ಬಲವನ್ನು ನೀಡುವುದು. ಆದರೆ ನೈತಿಕ ಸಂಪತ್ತು, ವೈಚಾರಿಕ ದೃಷ್ಟಿ, ನಾಗರಿಕತೆಯ ಅರಿವು ಇಲ್ಲದಿರುವುದನ್ನು ಕಂಡು ಕವಿ ವಿಷಾದವ್ಯಕ್ತಪಡಿಸುತ್ತಾರೆ. ಸ್ವಾವಲಂಬನೆ, ಸ್ವಾಭಿಮಾನ ಬೆಳೆಸಿಕೊಳ್ಳಬೇಕಾದ ಮಕ್ಕಳು ದೇಶಕ್ಕೆ, ಸಮಾಜಕ್ಕೆ ಆಸರೆಯಾಗಬೇಕಾದ ಮಕ್ಕಳು ಕಂಟಕದಾಯಕವಾಗುತ್ತಿರುವುದು ದುರದೃಷ್ಟಕರ ಎಂದಿರುವರು.

ಮಕ್ಕಳನ್ನು ನಿಸರ್ಗದ ಮಡಿಲೊಳಗೆ ಕರೆತಂದು ಗಿಡ, ಮರ, ಬಾನು, ಹಕ್ಕಿ, ಚಂದ್ರ, ತಾರೆ ಮೊದಲಾದ ಸನ್ನಿವೇಶಗಳನ್ನು ಸುಲಭವಾಗಿ ಮಗು ತಿಳಿಯುವಂತೆ ಎಳೆ-ಎಳೆಯಾಗಿ ಬಿಡಿಸಿಕೊಳ್ಳುವ ಕವನಗಳನ್ನು ಕಂಚ್ಯಾಣಿ ಶರಣಪ್ಪರವರು ಅಭಿವ್ಯಕ್ತಗೊಳಿಸುತ್ತಾರೆ. ಮಕ್ಕಳೊಂದಿಗೆ ಹಾಡುತ್ತ-ಕುಣಿಯುತ್ತ ಸಾಗುವ ಕವಿತೆಗಳು ಮಕ್ಕಳ ಮನಗೆಲ್ಲಲು ಯಶಸ್ವಿಯಾಗಿದೆ.

ದೇಶಿಯ, ಆಡುಮಾತಿನ ಸೊಗಡು, ಪ್ರಾಸಬದ್ಧ ನುಡಿಗಳು, ನುಡಿಗಟ್ಟುಗಳ ಬಳಕೆ ಕಂಚ್ಯಾಣಿಯವರ ಶಿಶು ಗೀತೆಗಳಲ್ಲಿ ವ್ಯಕ್ತಗೊಂಡಿವೆ. ದೇಶಭಕ್ತಿ, ಗುರು-ಹಿರಿಯರಿಗೆ ಗೌರವ, ಪ್ರಕೃತಿ ಪ್ರೇಮ ಇವರ ಮಕ್ಕಳ ಕೃತಿಗಳಲ್ಲಿ ವಿಭಿನ್ನವಾಗಿ ಕಂಡುಬರುತ್ತವೆ. ಕಂಚ್ಯಾಣಿ ಶರಣಪ್ಪರವರು ಪ್ರಾಸಬದ್ಧವಾದ ಶೈಲಿ, ಗ್ರಾಮೀಣ ಬದುಕಿನ ಚಿತ್ರಣದ ಕಳಕಳಿ, ಜಾನಪದ ಹಾಡುಗಳಿಗೆ ಜೀವ ತುಂಬುವ ತಂತ್ರಗಾರಿಕೆ ಇವರ ಕೃತಿಗಳಲ್ಲಿ ಮೂಡಿವೆ. ಪರಸ್ಪರ ಪ್ರೀತಿ, ವಿಶ್ವಾಸ, ಪರಿಶ್ರಮ, ಸಹಕಾರ ಮನೋಭಾವ, ನಿರಹಂಕಾರ, ನಿರಾಡಂಬರ ಮೊದಲಾದ ಮೌಲ್ಯಗಳು ಅವಶ್ಯಕವೆಂಬುದು ಕವಿತೆಗಳಲ್ಲಿ ಕಂಡುಬರುತ್ತವೆ.

ನಮ್ಮಲ್ಲಿ ಅಕ್ಷರ ಜ್ಞಾನ ನೀಗಿಸಲು ಅಗತ್ಯವಾದ ಆಕರ್ಷಕ ಸಾಧನೆಯಾಗಿ ಮಕ್ಕಳ ಸಾಹಿತ್ಯ ಬರುತ್ತಿಲ್ಲ ಎಂಬ ವಿಷಾದ ಕಂಚ್ಯಾಣಿಯವರಲ್ಲಿ ಕಾಣುತ್ತೇವೆ. ವಿಜ್ಞಾನದ, ಕರಕುಶಲತೆಗಳ, ಆಟಗಳ, ದಿನನಿತ್ಯದ ಸಾಮಗ್ರಿಗಳ ಬಗ್ಗೆ, ಜನಜೀವನದ ಬಗ್ಗೆ ಮೊದಲಾದ ಆಸಕ್ತಿ ಹುಟ್ಟಿಸುವ ವಿಷಯಗಳು ಮಗುವಿಗೆ ಅವಶ್ಯಕ ಎನ್ನುವುದು ಇವರ ಅಭಿಪ್ರಾಯವಾಗಿದೆ.

ಕಂಚ್ಯಾಣಿಯವರು ತಮ್ಮ ಜೀವನದ ಅರ್ಧಭಾಗವನ್ನು ಮಕ್ಕಳ ಶ್ರೇಯಸ್ಸಿಗಾಗಿ ದುಡಿದವರು. ಅಂಥ ಮಕ್ಕಳ ಸಾಹಿತ್ಯ ಸೃಷ್ಟಿ ಮತ್ತು ಅವರ ಶೈಕ್ಷಣಿಕ ದೃಷ್ಟಿ ಕುರಿತು ಆಳವಾದ ಅನುಭವವನ್ನು ಹೊಂದಿರುವ, ಮಕ್ಕಳ ಕಲಿಕೆಯ ಕ್ರಮದ ಕುರಿತು, ಕನ್ನಡ ನಾಡು-ನುಡಿಯ ಬೆಳವಣಿಗೆಯ ಕುರಿತು ಇವರ ಮಕ್ಕಳ ಕೃತಿಗಳು ಅಭಿವ್ಯಕ್ತಗೊಳಿಸುತ್ತವೆ.

ದೇಸೀ ಸಂಸ್ಕೃತಿಯನ್ನು ಬಿಂಬಿಸುವ ಪದ್ಯಗಳು ಹೆಚ್ಚಾಗಿ ಕಂಡುಬರುವುದರೊಂದಿಗೆ, ತಾಯಿಯ ಕುರಿತು, 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರು'

ಎಂಬ ಆಶಯ ಕಂಚ್ಯಾಣಿ ಶರಣಪ್ಪರವರ ಮಕ್ಕಳ ಕವಿತೆಗಳಲ್ಲ ವ್ಯಕ್ತವಾಗಿವೆ. ಪ್ರತಿಯೊಂದು ಕವಿತೆಯಲ್ಲೂ ಅನುಭವದ ಹರವು, ಸಾಂಸ್ಕೃತಿಕ ಮನಸ್ಸಿನ ವೈಭವ ಮಕ್ಕಳಲ್ಲಿ ಮೂಡಿಸುವ ಹಂಬಲವಿದೆ. ಮುಗ್ಧತೆಯ ಅನಾವರಣದೊಂದಿಗೆ ಭಾಷೆ, ಲಯ, ಪ್ರಾಸಗಳನ್ನು ಸಮರ್ಥವಾಗಿ ಬಳಸಿ ಮಕ್ಕಳ ನಾಲಗೆಯ ಮೇಲೆ ನಲಿಯುವಂತಹ, ಅವರಿಗೆ ಗುಂಗುಹಿಡಿಸುವಂತಹ, ಕಲ್ಪನೆಯನ್ನು ಕೆರಳಿಸುವಂತಹ ಬುದ್ಧಿಶಕ್ತಿಯನ್ನು ಬೆಳೆಸುವಂತಹ ಹಲವಾರು ಕವಿತೆಗಳನ್ನು ಬರೆದು ತಾವು ಒಬ್ಬ ಅನನ್ಯ ಮಕ್ಕಳ ಕವಿ ಎಂಬುದನ್ನು ಸಾಬೀತು ಪಡಿಸಿದ್ದಾರೆ ಕಂಚ್ಯಾಣಿ ಶರಣಪ್ಪರವರು.

ನಮ್ಮ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿಯನ್ನು ಅವಲೋಕಿಸಿದಾಗ ತಿಳಿದುಬರುವುದೇನೆಂದರೆ, ಪ್ರತಿಯೊಂದು ಸಾಹಿತ್ಯ ಪ್ರಕಾರಗಳು ಒಂದಲ್ಲ ಒಂದು ರೀತಿಯಲ್ಲಿ ಅನ್ಯ ಭಾಷೆಯ ಸಾಹಿತ್ಯದಿಂದ ಪ್ರಭಾವಗೊಂಡವು. 'ಅನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ' ಎಂಬ ಮಾತೊಂದಿದೆ. ಇಂತಹ ಅನುಭವ ದೊರೆಯುವುದು ಸಮಾಜದಲ್ಲಿ. ಸಮಾಜ ವಿಕಾಸಗೊಂಡಂತೆ ವ್ಯಕ್ತಿಯ ಅನುಭವವು ವಿಕಾಸವಾಗುತ್ತ ಹೋಗುತ್ತದೆ. ಹಾಗೆ ಭಾಷೆಯ ಜೊತೆಗೆ ಸಾಹಿತ್ಯವೂ ಸಹ ವಿಕಾಸ ಹೊಂದುತ್ತದೆ. ಸಮಾಜದ ಸ್ಥಿತಿಗತಿಗೆ ಅನುಗುಣವಾಗಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದೇ ಸಾಹಿತ್ಯದ ನಿಯಮ. ಈ ರೀತಿಯಲ್ಲಿ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮಕ್ಕಳ ಸಾಹಿತ್ಯ ಅಥವಾ ಶಿಶು ಸಾಹಿತ್ಯ ಬೆಳೆದು ಬಂದಿದೆ.

'ಅಜ್ಜನ ಹಾಡಿನ' ಅಜ್ಜನೆಂದೇ ಪ್ರಸಿದ್ಧರಾದ ಕಂಚ್ಯಾಣಿಯವರು ಮಕ್ಕಳ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರವಾದುದು.

'ಅಜ್ಜನು ಅಂದದ ಹಾಡನು ಬರೆದು
ಅಜ್ಜಿಯ ಮುಂದೆ ಓದುವನು
ಹಾಡನು ಹಾಡಿ ಮೋಜನು ಮಾಡಿ
ತಿಂಡಿಯ ಬೇಡಿ ಕಾಡುವನು'.

ಎನ್ನುವಲ್ಲಿ ರಸಿಕತೆಯ ಕವಿ ಮಗುವಾಗಿ ಕಾಡುವ ನಿಲುವುಗಳು ವಿಸ್ಮಯ.

ಕಂಚ್ಯಾಣಿಯವರು ಗ್ರಾಮೀಣ ಪ್ರದೇಶದ ರೈತ ಕುಟುಂಬದಲ್ಲಿ ಜನಿಸಿದವರು. ಈ ಕಾರಣದಿಂದಲೇ ಅವರಲ್ಲಿ ಜಾನಪದದ ಪ್ರಭಾವ ಇರುವುದನ್ನು ಕಾಣುತ್ತೇವೆ. ತಮ್ಮ ಮನೆಯಲ್ಲಿ ತಾಯಿಯು ಹಾಡುವ, ಬೀಸುವ ಹಾಡುಗಳು, ಕುಟ್ಟುವ ಹಾಡುಗಳು ಅವರ ಮನಸ್ಸಿನ ಮೇಲೆ ಆಗಾಧ ಪರಿಣಾಮ ಮೂಡಿಸಿದಂತವುಗಳು. ಹೀಗಾಗಿ ಅವರಲ್ಲಿ ಸಹಜವಾಗಿ ಮಗುವಿನ ಮುಗ್ಧತೆಯ ಕವಿತೆಗಳು ರಚಿಸಲು ಸಾಧ್ಯವಾಗಿದೆ.

ಕಂಚ್ಯಾಣಿಯವರು ಬಡತನದ ಬೇಗೆಯಲ್ಲಿ ಬೆಳೆದು, ಹಳ್ಳಿಯ ಪರಿಸರದಲ್ಲಿ ಶಿಕ್ಷಣ ಪಡೆದು ಅವಿರತ ಪ್ರಯತ್ನದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಂಚ್ಯಾಣಿಯವರದು ಸರಳ-ಸಾದಾ ಜೀವನ, ಆಡಂಬರವಿಲ್ಲದ ಬದುಕು. ಎಂಭತ್ತರ ಇಳಿ ವಯಸ್ಸಿನಲ್ಲೂ ಎಳೆಯ ಹುಮ್ಮಸ್ಸು. ಮಕ್ಕಳ ಸಾಹಿತ್ಯಕ್ಕೆ ಮುಡುಪಿಟ್ಟ ಕಾಯಕ ನಿರತ ಜೀವನ. ಮಗುವಿನೊಂದಿಗೆ ಮಗುವಾಗಿ ಹಾಡುತ್ತ, ಕುಣಿಯುತ್ತಾ, ನಗುತ್ತ ಕಾಲಕಳೆಯುವ ಮನಸ್ಸು. ೩೯ ವರ್ಷಗಳ ದೀರ್ಘ ಅವಧಿಯ ಶಿಕ್ಷಕ ವೃತ್ತಿಯುದ್ದಕ್ಕೂ ಮಕ್ಕಳ ಮನಸ್ಸನ್ನು ಅರಿತು-ಬೆರೆತು ಶಿಶು ಕಾವ್ಯ ರಚಿಸುವಲ್ಲಿ ಯಶಸ್ವಿಯಾದವರು. ಹಳ್ಳಿಯ ಜನರೊಂದಿಗೆ ಬೆರೆತು ಬದುಕು ಕಟ್ಟಿಕೊಂಡ ಕಂಚ್ಯಾಣಿಯವರು, ಜಾನಪದ ಜೀವನದ ಸೊಗಡು, ಭಾವ-ಭಾಷೆಗಳನ್ನು ತಮ್ಮ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಜೇನಿನ ರುಚಿಯನು ನೋಡೋಣ
ಚಂದದಿ ಆಟ ಆಡೋಣss ॥

ಇಂಥ ಹಲವಾರು ಶಿಶು ಪ್ರಾಸಗಳು ಕಂಚ್ಯಾಣಿಯವರ ಕೃತಿಗಳಲ್ಲಿ ತುಂಬಿಕೊಂಡಿವೆ.

ಕಂಚ್ಯಾಣಿಯವರು ರಂಜಕತೆಯೊಂದಿಗೆ ನೈತಿಕತೆಯನ್ನು ತಮ್ಮ ಶಿಶು ಕವಿತೆಗಳಲ್ಲಿ ವ್ಯಕ್ತಪಡಿಸಿದ್ದು ಮಹತ್ವದ ಸಂಗತಿ. ಬದುಕಿಗೆ ಅವಶ್ಯಕವಾಗಿ ಬೇಕಾದುದು ಬುದ್ಧಿಯ ಹಿತನುಡಿಗಳು. ಆರೋಗ್ಯವನ್ನು ಕಾಪಾಡಿಕೊಳ್ಳುವ ಸಲಹೆ, ಮಹಾತ್ಮರ ಉಪದೇಶ, ಕಾಯಕವೇ ಕೈಲಾಸವೆಂಬ ಬೋಧನೆಗಳು ಹೀಗೆ ಹಲವಾರು ಮಕ್ಕಳ ಸಾಹಿತ್ಯದ ಗುಣ ವಿಶೇಷತೆಗಳು ಕಂಚ್ಯಾಣಿಯವರ ಕಾವ್ಯದಲ್ಲಿ ತುಂಬಿಕೊಂಡಿವೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಬೇಕಾಗುವ ಪೂರಕ ವಿಚಾರಗಳನ್ನು ನಿದರ್ಶನಗಳ ಮೂಲಕ ತಿಳಿಸಿದ್ದಾರೆ.

'ಹೊನ್ನ ಹಣತೆ ಮಣ್ಣು ಹಣತೆ
ಮೇಲು-ಕೀಳು ಎನ್ನದೆ ।
ಬಯಸಿ ಬಂದ ಹಣತೆಗಳಿಗೆ
ದೀಪದಾನ ಮಾಡಿದೆ' ॥

ಮಕ್ಕಳು ಮೌಲ್ಯ ಪ್ರತಿಪಾದಕರಾಗಿ ಬೆಳೆಯಬೇಕೆಂಬ ಹಂಬಲದಿಂದ ಗುರು-ಹಿರಿಯರ ಉತ್ತಮ ವಿಚಾರಗಳನ್ನು, ಉಪದೇಶಗಳನ್ನು ತಮ್ಮ ಕೃತಿಗಳ ಮೂಲಕವಾಗಿ ಬಿತ್ತರಿಸಿದವರು ಕಂಚ್ಯಾಣಿ ಶರಣಪ್ಪನವರು.

ಮಕ್ಕಳ ಸಾಹಿತ್ಯದ ಅಭಿವ್ಯಕ್ತಿ ಮತ್ತು ತಾತ್ವಿಕತೆಯನ್ನು ವಿವಿಧ ಪರಿಕಲ್ಪನೆಗಳ ಮೂಲಕ ಶೋಧಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಂದು ಪ್ರಬಂಧದ ರಚನೆಯಲ್ಲಿ

ಅನೇಕ ಸಮಸ್ಯೆಗಳು ಎದುರಾಗುತ್ತವೆ. ಅಂತಹ ಸಮಸ್ಯೆಯಿಂದ ಈ ಅಧ್ಯಯನ ಹೊರತಾಗಿಲ್ಲ. ಮಕ್ಕಳ ಸಾಹಿತ್ಯವನ್ನು ಕ್ರೋಢಿಕರಿಸಿ ಪ್ರಾದೇಶಿಕ ನೆಲೆಯಲ್ಲಿ ಶೋಧನೆಗೆ ಒಳಪಡಿಸುವುದರಿಂದ ಹಲವು ಹೊಸ ಸಾಧ್ಯತೆಗಳು ವ್ಯಕ್ತವಾಗುತ್ತವೆ. ಅಭಿವ್ಯಕ್ತಿಯನ್ನು ವಿಷಯ, ವಸ್ತು, ಭಾಷೆ, ಶೈಲಿ, ತಂತ್ರಗಾರಿಕೆ, ನಿರೂಪಣಾ ವಿಧಾನಗಳಿಂದ ಗಮನಿಸಿದರೆ ಮಕ್ಕಳ ಸಾಹಿತ್ಯಕ್ಕೆ ಇನ್ನೂ ಗಂಭೀರ ಚಿಂತನೆ ಅವಶ್ಯಕವೆನಿಸುತ್ತದೆ. ಅಧ್ಯಯನಕ್ಕೆ ಬಳಸಿಕೊಳ್ಳಲಾದ ಕವಿಗಳನ್ನು ಹೊರತುಪಡಿಸಿ ಇನ್ನೂ ಅನೇಕ ಸಾಹಿತಿಗಳು ಮಕ್ಕಳ ಕೃತಿಗಳನ್ನು ರಚಿಸಿರುವುದು ಕಂಡು ಬರುತ್ತದೆ. ಅಂಥವರ ಕೃತಿಗಳನ್ನು ಹೊಸ ಸಾಧ್ಯತೆಗಳೊಂದಿಗೆ, ಹಲವು ಆಯಾಮಗಳಲ್ಲಿ ಅಧ್ಯಯನ ಕೈಗೊಳ್ಳಲು ಈ ಪ್ರಬಂಧ ಸಹಾಯಕವಾಗಬಹುದು. ಪ್ರೌಢ ಸಾಹಿತ್ಯದಂತೆ ಮಕ್ಕಳ ಸಾಹಿತ್ಯದಲ್ಲಿಯೂ ಹಲವು ಆಸೆಗಳಿಂದ ಹೆಚ್ಚಿನ ಅಧ್ಯಯನ ಮುಂದುವರಿಸಬಹುದು.

❑❑❑❑❑

ಅನುಬಂಧ

ಅನುಬಂಧ

: ಮೂಲ ಆಕರ ಗ್ರಂಥಗಳು :

ಪಂಜೆಮಂಗೇಶರಾಯರ ಮಕ್ಕಳ ಸಾಹಿತ್ಯ ಕೃತಿಗಳು :

(ಪಂಜೆಮಂಗೇಶರಾಯರ ಎಲ್ಲ ಮಕ್ಕಳ ಸಾಹಿತ್ಯ ಕೃತಿಗಳು ದಕ್ಷಿಣ ಕನ್ನಡ ಬಾಲ ಸಾಹಿತ್ಯ ಅಕಾಡೆಮಿ ಮತ್ತು ಬಾಸೆಲ್ ಮಿಶನ್ ಬುಕ್ ಡಿಪೋ ಮಂಗಳೂರು ಇವರಿಂದ ಪ್ರಕಟಗೊಂಡಿವೆ)

ಕಾವ್ಯ :

೧) ನನ್ನ ಚಿಕ್ಕ ತಾಯಿ – ೧೯೦೦
೨) ನನ್ನ ಚಿಕ್ಕ ತಂದೆ – ೧೯೦೨
೩) ನಾಗಣ್ಣನ ಕನ್ನಡಕ – ೧೯೧೨
೪) ಹಾವಿನ ಹಾಡು – ೧೯೧೨
೫) ಆಡಿನಾ ಮರಿ – ೧೯೧೨
೬) ತೂಗುವೆ ತೊಟ್ಟಿಲು – ೧೯೧೨
೭) ಎಂಟು ಬೇಡರು – ೧೯೧೨
೮) ಉದಯರಾಗ – ೧೯೧೯
೯) ಚಂದ್ರನನ್ನು ತಾ – ೧೯೧೯
೧೦) ಜೋಗುಳ – ೧೯೧೯
೧೧) ಡೊಂಬರ ಚೆನ್ನಿ – ೧೯೧೯
೧೨) ಹುತ್ತರಿ ಹಾಡು – ೧೯೨೭
೧೩) ತೂಕಡಿಕೆಯನು ಕಳೆಯದೇತಕೆ – ೧೯೫೨
೧೪) ತೆಂಕಣ ಗಾಳಿಯಾಟ – ೧೯೭೪
೧೫) ಅಣ್ಣನ ವಿಲಾಪ – ೧೯೯೦

ಕಥೆ :

೧) ಕಾಗೆ ಮತ್ತು ಗುಬ್ಬಚ್ಚಿ – ೧೯೧೬
೨) ಬಾ ಮರಲೆ ಬಾ – ೧೯೧೬
೩) ಗೋವಿಂದಾ ಗೋವಿಂದಾ – ೧೯೨೮
೪) ಸೋಮಾರಿ ಮಲ್ಲ – ೧೯೪೬
೫) ಬೆಕ್ಕಿನ ಬಿಡಾರ ಬೇರೆ – ೧೯೫೬
೬) ಜೋಡು ನಕ್ಷತ್ರ – ೧೯೫೯
೭) ಅಜ್ಜಿ ಸಾಕಿದ ಮಗು – ೧೯೬೨
೮) ತಟಪಟ ಹನಿಯಪ್ಪ – ೧೯೭೩
೯) ಹುಲಿಯೋ ಇಲಿಯೋ – ೧೯೭೩

೧೦) ಹೆಡ್ಡ ಧೂಮನ ಕಥೆ – ೧೯೭೩
೧೧) ಅಂಗಳ ದುಗ್ಗು – ೧೯೭೪
೧೨) ಇಲಿಗಳ ಥಕಥೈ – ೧೯೭೪
೧೩) ಮೂರು ಕರಡಿಗಳು – ೧೯೭೪
೧೪) ಗೋಣಿ ತಟ್ಟಿನ ಪಟ್ಟೆ ಹುಲಿ – ೧೯೯೨

ದಿನಕರ ದೇಸಾಯಿಯವರ ಮಕ್ಕಳ ಸಾಹಿತ್ಯ ಕೃತಿಗಳು :

೧) ಪ್ರಪಂಚದ ಕೆಲಸಗಾರ : ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ, ಅಂಕೋಲಾ – ೧೯೩೬
೨) ರೈತರ ಹಾಡುಗಳು : ಉತ್ತರ ಕನ್ನಡ ಜಿಲ್ಲಾ ರೈತಕೂಟ – ೧೯೪೯
೩) ಕವನ ಸಂಗ್ರಹ : ಸಾಧನ ಮುದ್ರಣಾಲಯ, ಧಾರವಾಡ – ೧೯೫೦
೪) ಮಕ್ಕಳ ಗೀತಗಳು : ಸಾಧನ ಮುದ್ರಣಾಲಯ, ಧಾರವಾಡ – ೧೯೫೧
೫) ಮಕ್ಕಳ ಪದ್ಯಗಳು : ಜನತಾ ಪ್ರಕಾಶನ, ಅಂಕೋಲಾ – ೧೯೫೬
೬) ಹೂಗೊಂಚಲು : ಜನತಾ ಪ್ರಕಾಶನ, ಅಂಕೋಲಾ – ೧೯೫೮
೭) ನಾ ಕಂಡ ಪಡುವಣ : ಮನೋಹರ ಗ್ರಂಥಮಾಲೆ, ಧಾರವಾಡ – ೧೯೬೧
೮) ಮಕ್ಕಳ ಪದ್ಯ : ಜನತಾ ಪ್ರಕಾಶನ, ಅಂಕೋಲಾ – ೧೯೭೬
೯) ದಿನಕರನ ಚೌಪದಿ : ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ – ೧೯೭೮
೧೦) ದಾಸವಾಳ : ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ – ೧೯೮೩

ಕುವೆಂಪು ಅವರ ಮಕ್ಕಳ ಸಾಹಿತ್ಯ ಕೃತಿಗಳು :
(ಕುವೆಂಪುರವರ ಎಲ್ಲ ಮಕ್ಕಳ ಸಾಹಿತ್ಯ ಕೃತಿಗಳು ಉದಯರವಿ ಪ್ರಕಾಶನ ಮೈಸೂರು ಇವರಿಂದ ಪ್ರಕಟಗೊಂಡಿವೆ)

ಕಾವ್ಯ :

೧) ನನ್ನ ಮನೆ – ೧೯೪೬
೨) ಮರಿ ವಿಜ್ಞಾನಿ – ೧೯೪೭
೩) ಮೇಘಪುರ – ೧೯೪೭

ಕಥನ ಕಾವ್ಯ :

೧) ಅಮಲನ ಕಥೆ – ೧೯೨೪
೨) ಹಾಳೂರು – ೧೯೨೬
೩) ಬೊಮ್ಮನ ಹಳ್ಳಿಯ ಕಿಂದರಿ ಜೋಗಿ – ೧೯೨೮

ಕಥೆ :

೧) ನರಿಗಳಿಗೇಕೆ ಕೋಡಿಲ್ಲ – ೧೯೭೭

ನಾಟಕ :

೧) ಮೋಡಣ್ಣನ ತಮ್ಮ – ೧೯೨೬

೨) ನನ್ನ ಗೋಪಾಲ – ೧೯೩೦

ಪಳಕಳ ಸೀತಾರಾಮಭಟ್ಟರ ಮಕ್ಕಳ ಸಾಹಿತ್ಯ ಕೃತಿಗಳು :

ಕಾವ್ಯ :

೧) ಕಿರಿಯರ ಕಿನ್ನರಿ : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೫೪
೨) ಚಿಣ್ಣರ ಹಾಡುಗಳು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೫೪
೩) ಮಕ್ಕಳ ಮುದ್ದು : ಎಂ. ದಾಮೋದರ ಪ್ರಭು ಪ್ರಕಾಶನ, ಮೂಡಬಿದರೆ – ೧೯೫೪
೪) ಕಂದನ ಕೊಳಲು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೫೫
೫) ಪುಟ್ಟನ ಪೀಪಿ : ಎಂ. ದಾಮೋದರ ಪ್ರಭು ಪ್ರಕಾಶನ, ಮೂಡಬಿದರೆ – ೧೯೬೦
೬) ಡೊಂಬನ ಡೋಲು : ಎಂ. ದಾಮೋದರ ಪ್ರಭು ಪ್ರಕಾಶನ, ಮೂಡಬಿದರೆ – ೧೯೬೨
೭) ಬಾಲರ ಬಾವುಟ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೬೬
೮) ಗುಲಾಬಿ ಗೊಂಚಲು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೮೧
೯) ಎಳೆಯರ ಗೆಳೆಯ : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೮೧
೧೦) ಹಣ್ಣಿನ ಬುಟ್ಟಿ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೬
೧೧) ಮಕ್ಕಳ ಮಾಣಿಕ್ಯ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೯
೧೨) ಪಟಾಕಿ : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೮೯
೧೩) ಬಣ್ಣದ ಬೊಂಬೆ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೯
೧೪) ಚಿಣ್ಣನ ಚೀಲ : ಭಾರತೀ ಸಾಹಿತ್ಯ ಭಂಡಾರ, ವಿಜಾಪುರ – ೧೯೯೦
೧೫) ಮಕ್ಕಳ ಮೆಚ್ಚು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೯೦
೧೬) ಬಣ್ಣದ ಚಿಲುಮೆ : ನವಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೯೫
೧೭) ಗಾಳಿ ಪಟ : ಶ್ರೀದೇವಿ ಪ್ರಕಾಶನ, ಮೈಸೂರು – ೧೯೯೮
೧೮) ಪುಟ್ಟಿಯ ಗುಟ್ಟು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೨೦೦೧
೧೯) ಪಳಕಳರ ಆಯ್ದ ಕವನಗಳು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೭
೨೦) ದೀಪಾವಳಿ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೯
೨೧) ಚಿಕಣಿ ಪದ್ಯಗಳು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೧೪

ಕಥೆ :

೧) ಗಡಿಬಿಡಿ ಗುಂಡ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೬೦

೨) ಪುಟಾಣಿ ಕತೆಗಳು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೧೯೬೧

೩) ಪುಟ್ಟ ಬಿಲ್ಲಿ : ಸಾಹಿತ್ಯ ರಚನಾಲಯ, ಬೆಂಗಳೂರು – ೧೯೬೨

೪) ಕಿಟ್ಟನ ಕಥೆ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೮೦

೫) ಬಡವಿಯ ಒಡವೆಗಳು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೦

೬) ಪುಟ್ಟಿಯ ಸಾಹಸ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೩

೭) ಕಿಟ್ಟನ ಸಾಹಸ : ನವಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೯೫

೮) ಮುದ್ದು ಮಲ್ಲಿ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೫

೯) ಪರಿಸರ ಕಥೆಗಳು : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೨೦೦೦

೧೦) ಆಸೆಗೆ ಅಂತ್ಯವಿಲ್ಲ : ಮಾರ್ಗದರ್ಶಿ ಪ್ರಕಾಶನ, ಮಂಗಳೂರು – ೨೦೦೧

೧೧) ಹಾರುವ ಕುದುರೆ : ಕನ್ನಡ ಸಂಘ ವಿಜಯನಗರ, ಮೂಡಬಿದರೆ – ೨೦೦೧

೧೨) ಬಣ್ಣದ ಮೀನು : ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೦೨

೧೩) ಸೋದರರ ಸಾಹಸ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೨

೧೪) ದಾರಿದೀಪ : ಶಿಶು ಸಾಹಿತ್ಯಮಾಲೆ, ಮಿತ್ತಬೈಲು ಪ್ರಕಾಶನ – ೨೦೦೩

೧೫) ಸಜ್ಜನಿಕೆ ಗೆದ್ದಿತು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೪

೧೬) ಪಳಕಳರ ಆಯ್ದ ಕಥೆಗಳು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ–೨೦೦೭

೧೭) ಕಾಡಿನ ಕಣ್ಮಣಿ : : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೧೧

೧೮) ಆಟಿಕೆಗಳ ಕೂಟದಲ್ಲಿ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೧೨

ನಾಟಕ :

೧) ಏಕಲವ್ಯ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೭೯

೪೩) ಕಿಟ್ಟಾಯಣ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೨

೪೪) ನಚಿಕೇತ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೨

೪೫) ಬೆಳಕಿನ ಹಬ್ಬ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೩

೪೬) ಮಾದನೂ ಹುಲಿಯೂ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೮

೪೨) ಒಲವಿನ ಗೆಲವು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೯

೪೧) ಒಗ್ಗಟ್ಟಿನ ಬಲ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೦

೨) ಅವಸರದ ಅನರ್ಥ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೦

೩) ಉಪಾಯದಿಂದ ಅಪಾಯ ದೂರ : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೯೦

೪) ಪಳಕಳರ ಆಯ್ದ ನಾಟಕಗಳು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೮

ಜೀವನ ಚರಿತ್ರೆ :

೪೭) ಈಶ್ವರಚಂದ್ರ ವಿದ್ಯಾಸಾಗರ : : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೧೯೮೮

೪೮) ಮೂರ್ತಿ ಚಿಕ್ಕದು ಕೀರ್ತಿ ದೊಡ್ಡದು : ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ – ೨೦೦೯

ಕಂಚ್ಯಾಣಿ ಶರಣಪ್ಪನವರ ಮಕ್ಕಳ ಸಾಹಿತ್ಯ ಕೃತಿಗಳು :

(ಕಂಚ್ಯಾಣಿ ಶರಣಪ್ಪನವರ ಎಲ್ಲ ಮಕ್ಕಳ ಸಾಹಿತ್ಯ ಕೃತಿಗಳು 'ಗ್ರಾಮೀಣ ಪ್ರತಿಭಾ ಪ್ರಕಾಶನ' ವಿಜಯಪುರ ಇವರಿಂದ ಪ್ರಕಟಗೊಂಡಿವೆ)

ಕಾವ್ಯ :

೧) ಅಜ್ಜನ ಹಾಡು – ೧೯೮೭
೨) ಜಾಗ್ರತ ಭಾರತ – ೧೯೮೮
೩) ಮಕ್ಕಳ ಮನೆ – ೧೯೮೮
೪) ಹುಟ್ಟು ಹಬ್ಬ – ೧೯೯೦
೫) ತಮ್ಮನ ಶಾಲೆ – ೧೯೯೧
೬) ತೊಟ್ಟಿಲು ಗುಬ್ಬಿ – ೧೯೯೨
೭) ಪುಟ್ಟಿಯ ತೋಟ – ೧೯೯೩
೮) ತೋಟದ ಆಟ – ೧೯೯೩
೯) ಆಯ್ದ ನೂರೊಂದು ಕವಿತೆಗಳು – ೧೯೯೪
೧೦) ಚೆಲುವಿನ ಚಿಟ್ಟೆ – ೧೯೯೫
೧೧) ಬೆದರು ಬೆಚ್ಚು – ೨೦೦೫
೧೨) ಗುಡು ಗುಡು ಗುಂಡ – ೨೦೧೦

ಕಥೆ :

೧) ಗಿಲ್ ಗಿಲ್ ಗಿಡ್ಡ – ೧೯೯೦
೨) ತಿಪ್ಪನ ಕಥೆಗಳು – ೨೦೦೩
೩) ತಿಪ್ಪನ ಮತ್ತಷ್ಟು ಕಥೆಗಳು – ೨೦೦೫
೪) ಚತುರ ಚಿಣ್ಣರು – ೨೦೦೭
೫) ಹಾಡುವ ಹಕ್ಕಿ – ೨೦೦೮

: ಪರಾಮರ್ಶನ ಗ್ರಂಥಗಳು :

೧) ಅನುಪಮಾ ನಿರಂಜನ : 'ತಾಯಿ–ಮಗು' : ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ೨೦೧೦

೨) ಆನಂದ ವಿ. ಪಾಟೀಲ : 'ಅಲರು' : ಅಭಿನವ ಪ್ರಕಾಶನ, ಬೆಂಗಳೂರು. ೨೦೧೦

೩) ಆನಂದ ಪಾಟೀಲ : 'ಮುಗುಳು' : ಅಭಿನವ ಪ್ರಕಾಶನ, ಬೆಂಗಳೂರು. ೨೦೧೨

೪) ಆನಂದ ವಿ. ಪಾಟೀಲ, ನ. ರವಿಕುಮಾರ (ಸಂ.) : 'ಮಕ್ಕಳ ಸಾಹಿತ್ಯ ಶತಮಾನ' : ಅಭಿನವ ಪ್ರಕಾಶನ, ಬೆಂಗಳೂರು. ೨೦೦೧

೫) ಈಶ್ವರ ಕಮ್ಮಾರ : 'ಮಕ್ಕಳ ಸಾಹಿತ್ಯ ಸಂಪದ' : ಆದಿತ್ಯ ಪಬ್ಲಿಕೇಷನ, ಬೆಳಗಾವಿ. ೨೦೧೧

೬) ಈಶ್ವರ ಕಮ್ಮಾರ : 'ಮಕ್ಕಳ ಕವನಸಾಹಿತ್ಯ' : ಮಕ್ಕಳ ಮನೆ, ಧಾರವಾಡ. ೧೯೯೦

೭) ಎ. ಕೆ. ರಾಮೇಶ್ವರ : 'ನನ್ನ ಪುಸ್ತಕ' : ಕವಿರಾಜ ಮಾರ್ಗ ಪ್ರಕಾಶನ, ಗುಲಬರ್ಗಾ. ೧೯೯೯

೮) ಎ. ಕೆ. ರಾಮೇಶ್ವರ : 'ಎ. ಕೆ. ರಾಮೇಶ್ವರ ಸಮಗ್ರ ಕಾವ್ಯ' : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ. ೨೦೦೬

೯) ಎ. ಕೆ. ರಾಮೇಶ್ವರ : 'ಚಿಂತನೆಯ ಹಾದಿಯಲ್ಲಿ' : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ. ೨೦೦೮

೧೦) ಎ. ವೀಣಾ : 'ಮಗು ನಿಮ್ಮ ಮನೆಯ ಬೆಳಕು' : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೧೦

೧೧) ಎಂ. ಎಚ್. ಕೃಷ್ಣಯ್ಯ : 'ಕಾವ್ಯ ಭಾಷೆ' : ಅಂಕಿತ ಪ್ರಕಾಶನ, ಬೆಂಗಳೂರು ೧೯೯೩

೧೨) ಎಂ. ರಾಮಚಂದ್ರರಾಯರು : 'ಪಂಜೆಮಂಗೇಶರಾಯರು' : ಪ್ರಸಾರಾಂಗ ಮಂಗಳೂರು ವಿಶ್ವವಿದ್ಯಾಲಯ, ೧೯೯೯

೧೩) ಎಂ. ಚಂದ್ರಪೂಜಾರಿ : 'ಪರ್ಯಾಯ ಸಮಾಜ ವಿಜ್ಞಾನ' :ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೨

೧೪) ಎಂ. ಚಿದಾನಂದಮೂರ್ತಿ : 'ಸಂಶೋಧನೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೯೪

೧೫) ಎಂ. ಎಂ. ಕಲಬುರ್ಗಿ : 'ಮಾರ್ಗ–೧' : ಕರ್ನಾಟಕ ಬುಕ್ ಏಜನ್ಸಿ, ಬೆಂಗಳೂರು. ೧೯೯೫

೧೬) ಎಚ್. ಎಸ್. ವೆಂಕಟೇಶಮೂರ್ತಿ : 'ಬಾರೋ ಬಾರೋ ಮಳೆರಾಯ' : ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು. ೨೦೧೦
೧೭) ಎಚ್. ಎಸ್. ವೆಂಕಟೇಶಮೂರ್ತಿ : 'ಶತಮಾನದ ಕಾವ್ಯ' : ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೧
೧೮) ಎನ್. ಎಸ್. ರಘುನಾಥ : 'ಶತಮಾನದ ಮಕ್ಕಳ ಸಾಹಿತ್ಯ' : ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೧
೧೯) ಎಸ್. ಎಂ. ವೃಷಬೇಂದ್ರಸ್ವಾಮಿ (ಸಂ.) : 'ಮಿಡಿಮಾವು' : ರಾಜ್ಯಮಟ್ಟದ ೨ನೇ ಮಕ್ಕಳ ಸಾಹಿತ್ಯ ಸಮ್ಮೇಳನ, ಸ್ಮರಣ ಸಂಚಿಕೆ, ಧಾರವಾಡ. ೧೯೯೫
೨೦) ಎಲ್. ಶೇಷಗಿರಿರಾವ್ : 'ಸಮಗ್ರ ವಿಮರ್ಶಾ ಸಾಹಿತ್ಯ ಸಂಪುಟ-೧' : ಅಭಿನವ ಪ್ರಕಾಶನ, ಬೆಂಗಳೂರು. ೨೦೦೧
೨೧) ಓ. ಎಲ್. ನಾಗಭೂಷಣ ಸ್ವಾಮಿ : 'ವಿಮರ್ಶೆಯ ಪರಿಭಾಷೆ' : ಅಂಕಿತ ಪುಸ್ತಕ, ಬೆಂಗಳೂರು. ೧೯೯೮
೨೨) ಕಂಚ್ಯಾಣಿ ಶರಣಪ್ಪ : 'ಆಯ್ದ ನೂರೊಂದು ಕವಿತೆಗಳು' : ಗ್ರಾಮೀಣ ಪ್ರತಿಭಾ ಪ್ರಕಾಶನ, ವಿಜಯಪುರ. ೧೯೯೪
೨೩) ಕಂಚ್ಯಾಣಿ ಶರಣಪ್ಪ (ಸಂ.) :'ಹೂವಿನ ಹಂದರ' : ಶಂ. ಗು. ಬಿರಾದಾರ ಸನ್ಮಾನ ಸಮಿತಿ, ವಿಜಾಪುರ. (೧೯೬೮)
೨೪) ಕೀರ್ತಿನಾಥ ಕುರ್ತಕೋಟಿ : 'ಯುಗಧರ್ಮ ಮತ್ತು ಸಾಹಿತ್ಯದರ್ಶನ' : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೯೧
೨೫) ಕುವೆಂಪು : 'ಪಾಂಚಜನ್ಯ' : ಉದಯರವಿ ಪ್ರಕಾಶನ, ಮೈಸೂರು. ೧೯೯೪
೨೬) ಕುವೆಂಪು : 'ಬೊಮ್ಮನ ಹಳ್ಳಿಯ ಕಿಂದರಿ ಜೋಗಿ' : ಕರ್ನಾಟಕ ಸರ್ಕಾರ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ೧೯೨೬
೨೭) ಕುವೆಂಪು : 'ಮರಿವಿಜ್ಞಾನಿ' : ಉದಯರವಿ ಪ್ರಕಾಶನ, ಮೈಸೂರು. ೨೦೦೭
೨೮) ಕೃಷ್ಣಾನಂದ ಗಾರ್ಡಾಡಿ : 'ಪ. ರಾಮಕೃಷ್ಣ ಶಾಸ್ತ್ರಿಯವರ ಮಕ್ಕಳ ಸಾಹಿತ್ಯ' : ೨೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ. ೨೦೦೭
೨೯) ಕೆ. ಪಿ. ಪೂರ್ಣಚಂದ್ರ ತಜಸ್ವಿ : 'ಅಣ್ಣನ ನೆನಪು' : ಪುಸ್ತಕ ಪ್ರಕಾಶನ, ಮೈಸೂರು
೩೦) ಕೆ. ವಿ. ನಾರಾಯಣ (ಸಂ.) : 'ಕನ್ನಡ ಶೈಲಿ ಕೈಪಿಡಿ' : ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೬
೩೧) ಕೆ. ವಿ. ನಾರಾಯಣ : 'ಬೇರು ಕಾಂಡ ಚಿಗುರು' : ವಿವೇಕ ಪ್ರಕಾಶನ, ಬೆಂಗಳೂರು. ೧೯೯೭
೩೨) ಕೆ. ಸಿ. ಶಿವಾರೆಡ್ಡಿ : 'ಯುಗದ ಕವಿ ಕುವೆಂಪು ಜೀವನ & ಸಾಹಿತ್ಯ ಸಾಧನೆ': ಪುಸ್ತಕ ಪ್ರಕಾಶನ, ಮೈಸೂರು. ೨೦೦೨

೩೩) ಕೆ. ವಿ. ನಾರಾಯಣ : 'ಶೈಲಿಶಾಸ್ತ್ರ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೮

೩೪) ಗಿರಡ್ಡಿ ಗೋವಿಂದರಾಜ (ಸಂ.) : 'ಓದುವ ದಾರಿಗಳು' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೨

೩೫) ಗಿರಿಜಮ್ಮ ಎಚ್.: 'ಮಕ್ಕಳ ಮಾನಸಲೋಕ' : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ೨೦೦೬

೩೬) ಗಿರಿಮನೆ ಶಾಮರಾವ್ : 'ಮಕ್ಕಳನ್ನು ಬೆಳೆಸುವುದು ಹೇಗೆ?' : ಗಿರಿಮನೆ ಪ್ರಕಾಶನ, ಸಕಲೇಶಪುರ. ೨೦೦೯

೩೭) ಗುರುರಾಜ ಮೇಡಿದಾರ : 'ಕಂಚ್ಯಾಣಿಯವರ ಶಿಶು ಕಾವ್ಯ' : ಸಂಕ್ರಾಂತಿ ಪ್ರಕಾಶನ, ವಿಜಯಪುರ. ೨೦೧೦

೩೮) ಗುರುಲಿಂಗ ಕಾಪಸೆ ಜಿ. ಎಂ. ಹೆಗಡೆ (ಸಂ.) : 'ಕಣವಿಯವರ ಕವಿತೆ; ಒಂದು ಹೊಸ ಓದು' : ಸಮುಖ ಪ್ರಕಾಶನ, ಬೆಂಗಳೂರು. ೨೦೦೮

೩೯) ಗುರುಲಿಂಗ ಕಾಪಸೆ : 'ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಸಿಸು ಸಂಗಮೇಶ': ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೨

೪೦) ಜಿ. ಪಿ. ರಾಜರತ್ನಂ : 'ಕಂದನ ಕಾವ್ಯಮಾಲೆ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೧೫

೪೧) ಜಿ. ಎಸ್. ಆಮೂರ : 'ಕನ್ನಡ ಕಥನ ಸಾಹಿತ್ಯ ಸಣ್ಣ ಕಥೆ' : ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ೨೦೦೩

೪೨) ಜಿ. ಎಸ್. ಶಿವರುದ್ರಪ್ಪ : 'ಕಾವ್ಯಾರ್ಥ ಚಿಂತನ' : ಶಾರದಾ ಪ್ರಕಾಶನ, ಬೆಂಗಳೂರು. ೧೯೮೩

೪೩) ಜಿ. ಎಸ್. ಶಿವರುದ್ರಪ್ಪ : 'ಸೌಂದರ್ಯ ಸಮೀಕ್ಷೆ' : ಕಾಮಧೇನು ಪ್ರಕಾಶನ, ಬೆಂಗಳೂರು. ೧೯೯೯

೪೪) ಜಿ. ಎಸ್. ಶಿವರುದ್ರಪ್ಪ (ಸಂ.) : 'ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ' : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೮೯

೪೫) ಜಿ. ಎಸ್. ಶಿವರುದ್ರಪ್ಪ (ಸಂ.) : 'ವಿಚಾರ ಸಾಹಿತ್ಯ ಭಾಗ-೧' : ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. (೧೯೮೬)

೪೬) ಜಿ. ಶಂ. ಪ. : 'ಕನ್ನಡ ಜನಪದ ಕಥೆಗಳು' : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೫

೪೭) ಟಿ. ಎಂ. ಉಷಾರಾಣಿ : 'ಮಹಿಳಾ ಸಾಹಿತ್ಯ ಅಭಿವ್ಯಕ್ತಿ ಕ್ರಮದ ತಾತ್ವಿಕ ಸ್ವರೂಪ' : ಪಲ್ಲವ ಪ್ರಕಾಶನ, ಚನ್ನಪಟ್ಟಣ (ಬಳ್ಳಾರಿ ಜಿಲ್ಲೆ). ೨೦೧೬

೪೮) ಡಿ. ಕೆ. ಜೋಶಿ (ಸಂ.) : 'ದುರ್ಗಸಿಂಹನ ಪಂಚತಂತ್ರ ಕಥೆಗಳು' : ಪ್ರಕಾಶ ಕೃಷ್ಣ ಜೋಶಿ ಪ್ರಕಾಶನಾಲಯ, ಧಾರವಾಡ. ೧೯೯೪

೪೯) ದಿನಕರ ದೇಸಾಯಿ : 'ದಿನಕರನ ಚೌಪದಿಗಳು' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೧೦
೫೦) ದೇ. ಜರೇಗೌಡ : 'ಗದ್ಯಶೈಲಿ' : ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು. ೧೯೭೮
೫೧) ದೇ. ಜರೇಗೌಡ (ಸಂ.): 'ಕನ್ನಡ ವಿಶ್ವಕೋಶ ಸಂಪುಟ–೧' : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೬೯
೫೨) ದೊಡ್ಡ ರಂಗೇಗೌಡ : 'ಕರಾವಳಿ ಕವಿಗಳು' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೧೪
೫೩) ಧರ್ಮಸ್ಥಳ ಸಾಹಿತ್ಯ ಸಮ್ಮೇಳನ–೧೯೭೯ : ಕನ್ನಡ ಸಾಹಿತ್ಯ ಪರಷತ್ತು, ಬೆಂಗಳೂರು. ೧೯೭೯
೫೪) ನಿಂಗಪ್ಪ ಮಟ್ಟಿಹಾಳ : 'ವಿಜಾಪೂರ ಜಿಲ್ಲೆಯ ಲಾವಣಿ ಮೇಳಗಳು' : ಬೆಳಗು ಪ್ರಕಾಶನ, ನಾಗರದಿನ್ನಿ. ೨೦೦೧
೫೫) ನಿರೂಪಮಾ : 'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೦೪
೫೬) ನೆಂಪು ನರಸಿಂಹ ಭಟ್ : 'ಮಕ್ಕಳ ಸಾಹಿತ್ಯದ ಹಿರಿಯ ಪಳಕಳ ಸೀತಾರಾಮಭಟ್' ಕಾಂತಾವರ ಕನ್ನಡ ಸಂಘ, ೨೦೦೮
೫೭) ಪಂಜೆಮಂಗೇಶ ರಾವ್ : 'ಪಂಜೆಮಂಗೇಶರಾಯ ಮಕ್ಕಳ ಸಾಹಿತ್ಯ' : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೨೦೦೬
೫೮) ಪ್ರಭುಶಂಕರ : 'ಖಲೀಲಿ ಗಿಬ್ರಾನ್' : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೭೦
೫೯) ಪ್ರಭುಶಂಕರ : 'ಕನ್ನಡದಲ್ಲಿ ಭಾವಗೀತೆ' : ನಿವೇದಿತಾ ಪ್ರಕಾಶನ, ಮೈಸೂರು. ೧೯೮೧
೬೦) ಬ. ಗಿ. ಯಲ್ಲಟ್ಟಿ : 'ಸಮಗ್ರ ಕಾವ್ಯ' : ವಾತ್ಸಲ್ಯ ಪ್ರಕಾಶನ, ಬನಹಟ್ಟಿ
೬೧) ಬರಗೂರು ರಾಮಚಂದ್ರಪ್ಪ : 'ಸಂಸ್ಕೃತಿ–ಶ್ರಮ ಮತ್ತು ಸೃಜನಶೀಲತೆ' : ಅಂಕಿತ ಪ್ರಕಾಶನ, ಬೆಂಗಳೂರು. ೨೦೦೧
೬೨) ಬಸವರಾಜ ಸಬರದ : 'ಸಾಹಿತ್ಯ ವಿಮರ್ಶೆ' : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ. ೨೦೧೨
೬೩) ಬಿ. ಜನಾರ್ಧನ ಭಟ್ : 'ಜಗತ್ ಪ್ರಸಿದ್ಧ ಮಕ್ಕಳ ಕಥೆಗಳು' : ಸೀತಾ ಬುಕ್ ಸೆಂಟರ್, ಉಡುಪಿ. ೨೦೦೯
೬೪) ಬಿ. ವಿ. ರಾಜಾರಾಮ : 'ಮಕ್ಕಳ ರಂಗಭೂಮಿ' : ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು. ೨೦೧೧
೬೫) ಬೊಳುವಾರು ಮಹಮ್ಮದ್ ಕುಂಞ (ಸಂ.) : 'ತಟ್ಟು ಚಪ್ಪಾಳೆ ಪುಟ್ಟ ಮಗು' ದಿವ್ಯಾ ಪ್ರಕಾಶನ, ಬೆಂಗಳೂರು. ೧೯೯೧

೬೬) ಬೋರೇಗೌಡ ಚಿಕ್ಕಮರಳಿ, ಡಾ. ಮ. ರಾಮಕೃಷ್ಣ : 'ಡಾ. ರಾಗೌ ವ್ಯಕ್ತಿ ಮತ್ತು ಸಾಹಿತ್ಯ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೨೦೧೨

೬೭) ಮಂಜುನಾಥ ಬೆಳವಾಡಿ : 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ' : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೬೮) ಮಧುವನ ಶಂಕರ : 'ರೂಪ–ನಿರೂಪ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೧೫

೬೯) ಮಲ್ಲಿಕಾರ್ಜುನ ಮೇತ್ರಿ : 'ಕರ್ನಾಟಕ ಗಾಂಧಿ' : ಸಂಗಮ ಪ್ರಕಾಶನ, ವಿಜಯಪುರ. ೨೦೦೧

೭೦) ಮಲ್ಲಿಕಾ ಘಂಟಿ : 'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ' : ಯುವಲೋಕ ಪ್ರಕಾಶನ, ಧಾರವಾಡ. ೧೯೯೪

೭೧) ಮಹಾಬಲೇಶ್ವರರಾವ್ : 'ಮಕ್ಕಳ ಮಾತು' : ಸಾಧನ ಪ್ರಕಾಶನ, ಬೆಂಗಳೂರು ೨೦೧೦

೭೨) ಮಹೇಶ ತಿಪ್ಪಶೆಟ್ಟಿ : 'ಪುಣ್ಯಕೋಟಿ; ಒಂದು ಸಾಂಸ್ಕೃತಿಕ ಅಧ್ಯಯನ' : ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ. ೧೯೮೯

೭೩) ಮಳಲಿ ವಸಂತ ಕುಮಾರ (ಸಂ.). : 'ಹೊಯ್ಸಳ ಸಂಪದ' : ೬೫ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಕ್ಷಿ ಸಂಪುಟ. ೧೯೯೬

೭೪) ರವಿ ನಾಯಕ : 'ಬಿ. ಟಿ. ಲಲಿತಾ ನಾಯಕ್‌ರವರ ಕಾವ್ಯದ ವೈಶಿಷ್ಟ್ಯಗಳು' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೯

೭೫) ರಹಮತ್ ತರಿಕೇರಿ (ಸಂ.) : 'ಕನ್ನಡ ಸಾಹಿತ್ಯ ಮೀಮಾಂಸೆ' : ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೧

೭೬) ರಹಮತ್ ತರಿಕೇರಿ (ಸಂ.) : 'ಸಾಹಿತ್ಯ ವಿಮರ್ಶೆ' : ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು. ೧೯೯೩

೭೭) ರಾ. ಯ. ಧಾರವಾಡಕರ : 'ಹೊಸಗನ್ನಡ ಸಾಹಿತ್ಯದ ಉದಯ' : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೪

೭೮) ರಾಜೇಂದ್ರ ಎಸ್. ಗಡಾದ : 'ಮಕ್ಕಳ ಸಾಹಿತ್ಯ ಹಾಗೂ 'ಸಿಸು' ಸಂಗಮೇಶ' : ಸಂಗಮ ಪ್ರಕಾಶನ, ಗದಗ. ೨೦೦೯

೭೯) ರಾಮೇಶ್ವರ ಡಾಣೆ : 'ಸೃಜನ' : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೧೧

೮೦) ವರದಾ ಶ್ರೀನಿವಾಸ : 'ಪಂಜೆಮಂಗೇಶರಾಯರ ಬದುಕು ಬರಹ' : ಕರ್ನಾಟಕ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೪

೮೧) ವಿ. ಕೃ. ಗೋಕಾಕ, ಆರ್. ಜಿ. ಕುಲಕರ್ಣಿ (ಸಂ.) : 'ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ' : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೮೦

೮೨) ವಿ. ಸೀತಾರಾಮಯ್ಯ : 'ಪಂಜೆಮಂಗೇಶರಾವ್' : ಸಾಹಿತ್ಯ ಅಕಾಡೆಮಿ, ದೆಹಲಿ. ೧೯೮೫

೮೩) ವೈ. ಎಂ. ಯಾಕೊಳ್ಳಿ : 'ದೇಸಿ ಪ್ರಜ್ಞೆ : ಶ್ರೀ ಶ್ರೀರಾಮ ಇಟ್ಟಣ್ಣವರ' ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು. ೨೦೧೭

೮೪) ವೈ. ಎಸ್. ಕೃಷ್ಣಮೂರ್ತಿ : 'ಜನಪ್ರಿಯ ಶಿಶು ಗೀತೆಗಳು' : ಪದ್ಮಶ್ರೀ ಪ್ರಕಾಶನ, ಬೆಂಗಳೂರು. ೨೦೦೭

೮೫) ಶಂ. ಗು. ಬಿರಾದಾರ (ಸಂ.) : 'ಬೆಳ್ಳಿ ಬೆಳಕು' : ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘ, ವಿಜಾಪುರ. ೧೯೯೨

೮೬) ಶಾಂತಿನಾಥ ದೇಸಾಯಿ : 'ಸಾಹಿತ್ಯ ಮತ್ತು ಭಾಷೆ' : ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೮೦

೮೭) ಶಿವಶಂಕರ ಹಿರೇಮಠ : 'ಮಕ್ಕಳ ಸಾಹಿತ್ಯ ಚಿಂತನೆ' : ಮಕ್ಕಳ ಮನೆ, ಧಾರವಾಡ. ೧೯೮೯

೮೮) ಶಿವರಾಜ ಪಾಟೀಲ : 'ಮಕ್ಕಳ ಕವಿ; ಎ. ಕೆ. ರಾಮೇಶ್ವರ' : ಬಸವ ಪ್ರಕಾಶನ, ಗುಲಬರ್ಗಾ. ೨೦೦೯

೮೯) ಸಂತೋಷಕುಮಾರ ಗುಲ್ವಾಡಿ : 'ದಕ್ಷಿಣ ಕನ್ನಡ ಜಿಲ್ಲೆಯ ಬಾಲಸಾಹಿತ್ಯ ಮೊದಲಿಗರು' : ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜ, ಉಜರೆ

೯೦) ಸಬಿಹಾ ಭೂಮಿಗೌಡ : 'ದಕ್ಷಿಣ ಕನ್ನಡ ಮಕ್ಕಳ ಸಾಹಿತ್ಯ' : ಡಾ. ಕೆ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾಲಯ. ೨೦೦೯

೯೧) ಸ್ವಾಮಿರಾವ್ ಕುಲಕರ್ಣಿ (ಸಂ.) : 'ಸಂತೃಪ್ತಿ-ಅಭಿನಂದನ ಗ್ರಂಥ' ಕವಿರಾಜ ಮಾರ್ಗ ಪ್ರಕಾಶನ, ಕಲಬುರಗಿ. ೨೦೦೮

೯೨) ಸಿಸು ಸಂಗಮೇಶ : 'ಮಕ್ಕಳ ಸಾಹಿತ್ಯ ನಾನು ಕಂಡಂತೆ' : ಭಾರತೀ ಸಾಹಿತ್ಯ ಭಂಡಾರ, ವಿಜಯಪುರ. ೧೯೯೬

೯೩) ಸಿಸು ಸಂಗಮೇಶ : 'ಶಾಲೆಗಿಂತ ಚೀಲ ಭಾರ' : ಭಾರತೀ ಸಾಹಿತ್ಯ ಭಂಡಾರ, ವಿಜಯಪುರ. ೧೯೯೭

೯೪) ಹನುಮಕ್ಕ ರಾ. ಕಂಬಳಿ : 'ಶಿಶು ಪ್ರಾಸಗಳು ಮತ್ತು ಶಿಶು ಗೀತೆಗಳು' : ಡಾ. ಜ.ಚ.ನಿ. ಬುಕ್ ಬ್ಯಾಂಕ್, ಮುಳಸಾವಳಗಿ, ಸಿಂದಗಿ ತಾಲೂಕ

೯೫) ಹಾ. ಮಾ. ನಾಯಕ (ಸಂ.) : 'ಕನ್ನಡ ವಿಶ್ವಕೋಶ ಸಂಪುಟ-೩' : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೭೧

❑❑❑❑❑